

ಕರ್ಮವೀರ

ದೀಪಾವಳಿ ಸಂಚಿಕೆ ೧೯೫೫



ಕರ್ನಾಟಕದ ಔದ್ಯೋಗಿಕ ಕ್ಷೇತ್ರದಲ್ಲಿ ಪ್ರಗತಿಯ ಮುನ್ನಡೆ !
ಕನ್ನಡಿಗರಿಗೆ ಹೆಮ್ಮೆಯ ವಿಷಯ !!
ಕರ್ನಾಟಕದಲ್ಲಿ ಕನ್ನಡಿಗರಿಂದಲೇ ತಯಾರಿಸಲ್ಪಟ್ಟ

ಸಾಬೂನುಗಳು » » » »



ನಿಮ್ಮ ಬಟ್ಟೆಗಳ ಸ್ವಚ್ಛತೆ, ಶುಭ್ರತೆ ಹಾಗೂ ತಾಳಿಕೆಗೆ **ಯಾವಾಗಲೂ**

★ **ಕರ್ನಾಟಕ ಬಾರಸೋಪ**

★ **ಕರ್ನಾಟಕ ಸ್ಪೇಶಲ್ ವಡಿಗಳು**

★ **ವ್ಹೀನಸ್ ಲಾಂಡ್ರೀ ಚಿಪ್ಸುಗಳನ್ನೇ**

. • **ಉಪಯೋಗಿಸಿರಿ** • .

ದಿ ಹುಬ್ಬಳ್ಳಿ ಇಂಡಸ್ಟ್ರೀಜ ಲಿ., ಹುಬ್ಬಳ್ಳಿ

ದೀಪಾವಳಿಯು ನಮ್ಮ ಎಲ್ಲ ಗ್ರಾಹಕರಿಗೆ ಸುಖದಾಯಕವಾಗಲಿ

ದೀಪಾವಳಿಯು ನಮ್ಮ ಪೋಷಕರಿಗೂ ಪಾಲುಗಾರರಿಗೂ ಹಾಗೂ ಗ್ರಾಹಕರರಿಗೂ ಸುಖಪ್ರದವಾಗಲಿ !!

ದಿ ಬ್ಯಾಂಕ ಆಫ್ ಕರ್ನಾಟಕ ಲಿ.,

ಹೆಡ್ ಆಫೀಸ: **ಹುಬ್ಬಳ್ಳಿ**

ಅಧಿಕೃತ ಬಂಡವಲು :	ರೂ. ೧೦,೦೦,೦೦೦
ತೆತ್ತ ಬಂಡವಲು :	ರೂ. ೫,೦೪,೯೨೫

ಶಾಖೆಗಳು: **ಬೆಳಗಾವಿ, ಬನ್ಹಟ್ಟಿ, ಧಾರವಾಡ, ಗದಗ, ಜಮಖಂಡಿ, ಕುಂದಗೋಳ, ಸವಣೂರ**

★

ಎಲ್ಲ ತರಹದ ಬ್ಯಾಂಕಿಂಗ ವ್ಯವಹಾರಗಳನ್ನು ಕೈಕೊಳ್ಳಲಾಗುವದು.

ವಿವರಗಳಿಗಾಗಿ ಹೆಡ್‌ಆಫೀಸ ಇಲ್ಲವೆ ಶಾಖೆಗಳಿಗೆ ಬರೆಯಿರಿ.

ಡಾಯರೆಕ್ಟರರ ಮಂಡಳ:—.

ಶ್ರೀ. ಎಚ್. ಆರ್. ಮೊಹರೆ,
ವ್ಯವಸ್ಥಾಪಕ ಸಂಪಾದಕರು: ಸಂಯುಕ್ತ-ಕರ್ನಾಟಕ, ಹುಬ್ಬಳ್ಳಿ, —ಚೇಅರಮನ್.

ಶ್ರೀ. ಎಸ್. ವಾಯ್. ಮಿರ್ಜಿ,
ಮರ್ಚಂಟ, ಚಿಕ್ಕೋಡಿ —ವ್ಹಾಯಿಸ್-ಚೇಅರಮನ್.

ಶ್ರೀ. ಎಮ್. ಜಿ. ಕೋಟಭಾಸ್ಕರ,
M.A., M.Sc. (Tech) (Vict.) A.M.I. Chem. E. (Lond.), ಮುಂಬಯಿ.

ಶ್ರೀ. ಕೆ. ಎ. ಕೊಡಕಣಿ,
ಫಾರೆಸ್ಟ ಕಂಟ್ರಾಕ್ಟರ, ದಾಂಡೇಲಿ.

ಶ್ರೀ. ಬಿ. ವ್ಹಿ. ಮಾಧವರಾವ್,
ಲ್ಯಾಂಡಲಾರ್ಡ, ಬ್ರಹ್ಮಾವರ (ದ. ಕನ್ನಡ)

ಶ್ರೀ. ಆರ್. ಜಿ. ದೇಶಪಾಂಡೆ,
ದಾದರ, ಮುಂಬಯಿ.

ಶ್ರೀ. ಎಮ್. ಬಿ. ದೇಸಾಯಿ,
ಲ್ಯಾಂಡಲಾರ್ಡ, ಹಳೇಹುಬ್ಬಳ್ಳಿ.

ಶ್ರೀ. ಮೋಹನಲಾಲ ಸಿ. ಚವ್ಹಾಣ,
ಯಾರ್ನ ಮರ್ಚಂಟ್, ಗದಗ.

ಶ್ರೀ. ಎಲ್. ಡಿ. ನಾಡಗೀರ, ಹುಬ್ಬಳ್ಳಿ, — ಮ್ಯಾನೇಜಿಂಗ ಡಾಯರೆಕ್ಟರ

ಖಾತೆಕಿರ್ದಿ ಮದ್ರಾಸು ಲೆಡ್ಜರುಗಳು

- ಸ್ಟೂಡೆಂಟು ನೋಟ್ ಬುಕ್ಸ್
- ಯಕ್ಸರಸೈಜು ಮತ್ತು ಗ್ರಾಫ್ ಬುಕ್ಸ್
- ಶಾಲೆ ಕಾಲೇಜಿನ ಎಲ್ಲ ಪುಸ್ತಕಗಳು
- ಸಾಹಿತ್ಯ ಪುಸ್ತಕಗಳು ಮತ್ತು
- ಎಲ್ಲ ವಿಧದ ಕಾಗದ, ರಟ್ಟು, ಸ್ಟೇಶನರಿಗಳಿಗೆ

ಯುಜಮಾನ್ ಎಂಡ್ ಬ್ರದರ್ಸ್

ಕಾಗದ ಮತ್ತು ಪುಸ್ತಕ ವ್ಯಾಪಾರಿ — — ಬ್ರಾಹ್ಮಣ ಬೀದಿ, ಬಳ್ಳಾರಿ

Dealers of Mysore Paper Mills Products.

ನಮ್ಮ ಎಲ್ಲ ಗ್ರಾಹಕರಿಗೆ ದೀಪಾವಳಿಯು ಮಂಗಲದಾಯುಕವಾಗಲಿ.



ನಮ್ಮ ಯಾವತ್ತೂ ಗ್ರಾಹಕರಿಗೆ
ಸುಖಕರ ದೀಪಾವಳಿ
ಮತ್ತು
ವೈಭವದ ಹೊಸ ವರ್ಷ
ಕೋರುತ್ತೇವೆ.



ಸುಲಭ ದರಗಳಲ್ಲಿ
ಉತ್ತಮ ತರಗತಿ ವಾಚುಗಳಿಗಾಗಿ
ಸಂದರ್ಶಿಸಿರಿ.

ನವಭಾರತ ವಾಚ ಕಂ.

ಮರಾಠಾಗಲ್ಲಿ ಹುಬ್ಬಳ್ಳಿ.

ಎ.ಬಿ.ಸಿ. ಛಾಪಿನ ಸ್ಟೇನ್‌ಲೆಸ್ ಸ್ಟೀಲಿನ ಪಾತ್ರೆಗಳಿಂದಲೇ

ನಮ್ಮ ಸಂಸಾರದ
ಎ.ಬಿ.ಸಿ.
ಮಾಡಿದೆವು



ಶ್ರೇಷ್ಠ ಸ್ಟೇನಲೆಸ್ ಸ್ಟೀಲ ಪಾತ್ರೆಗಳು, ಉತ್ಕೃಷ್ಟ ಕ್ರಿಯಾಕೌಶಲ್ಯ ಹಾಗೂ ಅಪ್ರತಿಮ ಪಾಲಿಶ್ ಇವುಗಳಿಗಾಗಿ ಎ. ಬಿ. ಸಿ. ಛಾಪ ಭಾಂಡಿಗಳು ಜನಪ್ರಿಯವಾಗಿವೆ, ಅನೇಕ ಪ್ರಕಾರ ಹಾಗೂ ನೂರಾರು ಆಕಾರ.

ಫೋನ್ ನಂ. ೩೬೩೪

ಯುನಿಯನ್ ಬಾಯ್ಸಿಕಲ್ ಕಾಂಪೋನೆಂಟ್ಸ
೧೬೧, ಯೆರವಡಾ, ಪುಣೆ, ೬.

CHITRA PRABHA

ಎನ್. ಆಯ್. ಮೊಗಲಿ ಕ್ಯಾಪ್ ಮಾರ್ಟ



ನಮ್ಮಲ್ಲಿ ಎಲ್ಲ ತರದ ಟೊಪ್ಪಿಗೆ, ರೆಡಿಮೇಡ ಡ್ರೆಸ ಹೊಜೆಯರಿ. ಸ್ವೆಟರ, ಹ್ಯಾಟ ಹಾಗೂ ಫೆಲ್ಟಹ್ಯಾಟ ವಗೈರೆ ಎಲ್ಲ ಮಾಲುಗಳು ರೋಕ ಮತ್ತು ಕಿರುಕಳವಾಗಿ ಸೋವಿದರದಿಂದ ಸಿಗುವವು.

ಶ್ರೀ ಸಿದ್ಧೇಶ್ವರ ರೋಡ, ವಿಜಾಪೂರ.

ಸಂಗಮೇಶ್ವರ



ಟೇಲರಿಂಗ ಫರ್ಮ


ಬೆಳಗಾಂವ ಗಲ್ಲಿ,
ಹುಬ್ಬಳ್ಳಿ

ಪ್ರೋ:—
ಎಸ್. ಎಮ್. ಮಾಶಾಳ

ದೀಪಾವಳಿಯ ಶುಭಾಶಯಗಳು

ಪ ರಿ ವಿ ಡಿ

INDEX TO ADVERTISERS



ವಾಟರ ಪ್ರೂಫ ಸ್ಟೇನಲೆಸ್ ಸ್ಟೀಲಬ್ಯಾಕದೊಂದಿಗೆ

ಕ್ಯಾಟ ನಂ.	ಜ್ಯುಎಲ್ಸ	ರೂ.	ಕ್ಯಾಟ ನಂ.	ಜ್ಯುಎಲ್ಸ	ರೂ.
೧೬ ಕ್ರೋಂ	೧೫	೪೫	೩೧ ಕ್ರೋಂ	೧೫	೫೨
೧೮ ರೋಲ್ಡಗೋಡ	೧೫	೪೬	೩೨ ರೋಲ್ಡಗೋಲ್ಡ	೧೫	೫೫
೨೯ ಕ್ರೋಂ ಆಲ್‌ಪ್ರೂಫ	೧೬	೫೪	೩೨ R. ೨೦ ವ್ಯೆಕ್ರನ್ಸ ಗೋಲ್ಡ	೧೫	೫೮
೨೯ R. ರೊಲ್ಡಗೋಲ್ಡ ಪ್ರೂಫ	೧೮	೫೬	೪೯ ಕೋಂ ಆಲ್‌ಪ್ರೂಫ	೧೬	೬೦
೬೨ ೨೦ ವ್ಯೆಕ್ರನಗೋಲ್ಡ ,,	೨೧	೭೦	೬೫ ೨೦ ವ್ಯೆ.ಗೋಲ್ಡ ಪ್ರೂಫ	೨೧	೮೪
೬೧ ಫುಲ್‌ಸ್ಟೀಲ ,,	೨೧	೮೬	೬೮ ಫುಲ್‌ಸ್ಟೀಲ ,,	೨೧	೮೮

ಎಲ್ಲ ವಾಚುಗಳು ೩ ಹಾಗೂ ೫ ವರ್ಷ ಗ್ಯಾರಂಟಿ

ಪ್ಯಾಕಿಂಗ ಹಾಗೂ ಪೋಸ್ಟೇಜ ಉಚಿತ

ಅಗ್ಗ ಬೆಲೆಗಳ ವಾಚುಗಳ ಸಲುವಾಗಿ ಉಚಿತ ಸಚಿತ್ರ ಕ್ಯಾಟಲಾಗ ಕೇಳಿರಿ

INDO SWISS CORPORATION
218, Masjid Bunder Road, BOMBAY, 3

ದೀಪಾವಳಿಯು ನಮ್ಮ ಗ್ರಾಹಕರಿಗೆ ಸುಖಸಮೃದ್ಧಿಯನ್ನೀಯಲಿ

ಸುಪ್ರಸಿದ್ಧ . . . .

ಉಡಪಿ ನ್ಯಾಶನಲ್ ಲಾಜ್,

ಶಿವಮೊಗ್ಗ

ದೀಪಾವಳಿಯ ಶುಭ ಪ್ರಸಂಗದಲ್ಲಿ ಎಲ್ಲರಿಗೂ ತಮ್ಮ
ಶುಭ ಚಿಂತನೆ ಕಳಿಸುತ್ತಾರೆ

" ವಿಶ್ವದಲ್ಲಿಯ ಕಾರ್ಗತ್ತಲೆ ಅಳಿದು ಎಲ್ಲೆಲ್ಲಿಯೂ ಶಾಂತಿಯ ಹಾಗೂ
ಸಮೃದ್ಧಿಯ ಬೆಳಕು ಬೀರಲಿ"

ಯು. ಬಾಬುರಾವ್
ಒಡೆಯರು.

ದೀಪಾವಳಿಯು ಸರ್ವರಿಗೂ
ಸುಖಪ್ರದವಾಗಲಿ.

★




★

ಮೋಟಾರ ಎಂಜಿನ್ ರಿಪೇರಿ,
ವಾಲ್ವ ಗ್ರಾಯಿಂಡಿಂಗ, ಇಂಜಿನ್
ರೀ-ಬೋರಿಂಗ್, ಇಂಜಿನ್ ಸ್ಲೀವ
ಹೊಡೆಯುವದು, ವಾಲ್ವ ಸೀಟ
ಕಟಿಂಗ, ವಾಲ್ವ ರೀಫೇಸಿಂಗ
ರ್‍ಯಾಮರ ಹೊಡೆಯುವುದು
ಇತ್ಯಾದಿ. .
ಯಾವತ್ತೂ ಕೆಲಸ ಮಾಡಿಕೊಡುತ್ತೇವೆ.

ಕೊಲ್ಹಾಪೂರ ಗ್ಯಾರೇಜ

ಕೊಪ್ಪೀಕರ ರೋಡ, ಹುಬ್ಬಳ್ಳಿ.

ನೂತನ ದೀಪಾವಳಿಯು ಕರ್ನಾಟಕದ ನಮ್ಮ ಎಲ್ಲ ಗ್ರಾಹಕರಿಗೆ ಸುಖ-ಸಂಪತ್ತುಗಳನ್ನೀಯಲಿ!



ಶ್ರೀ ಶಂಕರ್ ಕಾಫಿ ವರ್ಕ್ಸ್

ಪೋಸ್ಟ್ ಬಾಕ್ಸ ನಂ. ೫೬

ಬಿನ್ನಿಕಂಪನಿ ರೋಡ್, ... ದಾವಣಗೇರೆ-ಸಿಟಿ

ಕಾಸಲ ರಾಮಚಂದ್ರ ಶೆಟ್ಟಿ ಅ್ಯಂಡ್ ಸನ್ಸ್
ಪ್ರೊಪ್ರೈಟರ್

ನಿಮ್ಮ ದಣಿವನ್ನು ನಿವಾರಿಸಲು
ನಿಮ್ಮ ಮನಸ್ಸಿಗೆ
ಆಹ್ಲಾದವೀಯಲು
ನಮ್ಮ
ಶಂಕರ್ ಕಾಫಿಯು
ಶ್ರೇಷ್ಠವಾದ ಪಾನೀಯ

ನಿಮ್ಮ ಬಟ್ಟೆಗಳ

ಸ್ವಚ್ಛತೆಗಾಗಿ

ಉಲನ್, ಶಿಲ್ಕ, ಸಾಕ್ಕಿನ್
ಈ ಎಲ್ಲ ಬಟ್ಟೆಗಳನ್ನು ಕಾಳಜಿ
ಪೂರ್ವಕವಾಗಿ
ನಿಮ್ಮ ವೇಳೆಗೆ ಸರಿಯಾಗಿ
ಒಗೆದು ಕೊಡುತ್ತೇವೆ.

ಒಮ್ಮೆ ಮನಗಾಣಿರಿ

ದಿ ಇಂಪೀರಿಯಲ್
ಡ್ರಾಯ ಕ್ಲೀನಿಂಗ ಕಂ.
ಸ್ಟೇಶನ್ ರೋಡ, ಹುಬ್ಬಳ್ಳಿ
ಸ್ಥಾಪನೆ: ೧೯೨೫
ಪ್ರೊ.: ಬಿ. ಡಿ ಸೈದಾಪೂರ

ಯಾವಾಗಲೂ ನಮ್ಮ . . . . . .

ನವಿಲುಛಾಪ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ



ನಮ್ಮ ಗ್ರಾಹಕರಿಗೂ ಹಿತಚಿಂತಕರಿಗೂ ದೀಪಾವಳಿಯು ಸುಖಪ್ರದವಾಗಲಿ!

. . . . . ನೆನಪಿರಲಿ—ನವಿಲಮಾರ್ಕ ಬೀಡಿ . . . . .

ದೀಪಾವಳಿಯು ಸರ್ವರಿಗೂ ಮಂಗಲವನ್ನೀಯಲಿ

ದೀಪಾವಳಿಯು ಎಲ್ಲ ಹಬ್ಬಗಳಿಗಿಂತಲೂ ಸಂಭ್ರಮದ ಹಬ್ಬವಲ್ಲವೇ?
ಹೊಸ ವಾಹನಗಳನ್ನು ಕೊಂಡು ಹಬ್ಬದ ಸಂಭ್ರಮವನ್ನು ಹೆಚ್ಚಿಸಿರಿ.
ನಮ್ಮಲ್ಲಿ ಹರ್ಕ್ಯುಲಸ್ ಸಾಯಕಲ್‌ಗಳು, ಹಿಂದುಸ್ತಾನ, ಸ್ಟುಡ್‌ಬೇಕರ ಮೊದಲಾದ
ಮೋಟರಕಾರು ಹಾಗೂ ಟ್ರಕ್ಕುಗಳು ಮತ್ತು ಜಗತ್ಪ್ರಸಿದ್ಧ

'ಫರ್ಗುಸನ್ ಟ್ರಾಕ್ಟರಗಳು'



ಯಾವಾಗಲೂ ದೊರೆಯುತ್ತವೆ.
ಅವುಗಳಿಗೆ ಬೇಕಾಗುವ ಯಾವತ್ತೂ ಬಿಡಿಭಾಗಗಳ ವಿಪುಲ ಸಂಗ್ರಹವಿದೆ
ಇದಲ್ಲದೆ, ಉತ್ತಮ ಬೆಳೆಗಾಗಿ ಬೇಕಾಗುವ

ಶಾಸ್ತ್ರೋಕ್ತ ಮಿಶ್ರಣ ಗೊಬ್ಬರವನ್ನು

ನಾವು ತಯಾರಿಸುತ್ತೇವೆ. ಮತ್ತು ನಿಮ್ಮ ಯಾವತ್ತೂ ಸರಕುಗಳನ್ನು ಪರಸ್ಥಳಗಳಿಗೆ
ಕಳಿಸುವದಿದ್ದಲ್ಲಿ ನಮ್ಮನ್ನು ವಿಚಾರಿಸಬೇಕಾಗಿ ವಿನಂತಿಸುತ್ತೇವೆ

ಫೋನ: ೮೯ **ದೇಸಾಯಿ ಮತ್ತು ಕಂಪನಿ, ಹುಬ್ಬಳ್ಳಿ.** ತಂತಿ: ದೇಸಾಯಿ ಕೊ.



ಆನೆ ಮತ್ತು ಅಂಬಾರಿ, ವಿಜಯವಾಡಾ (ಪುಟ ೩ ನೋಡಿರಿ)

ಸ್ವಾತಂತ್ರ್ಯ ದೊರೆತ ಮರುವರ್ಷ 'ಕರ್ಮವೀರ' ತನ್ನ ಮೊದಲನೇ ದೀಪಾವಳಿ ಸಂಚಿಕೆಯನ್ನು ಓದುಗರ ಕೈಯಲ್ಲಿರಿಸಿತು. ಇಂದು ಎಂಟನೇ ದೀಪಾವಳಿ ಸಂಚಿಕೆಯನ್ನು ಓದುಗರಿಗೊಪ್ಪಿಸುವಾಗ ಸ್ವಾತಂತ್ರ್ಯದ ನಂತರ ಕನ್ನಡಿಗರ ಹೃದಯಕ್ಕೆ ಅತಿ ಸಮೀಪವಾದ ಇನ್ನೊಂದು ಧ್ಯೇಯದ ಸಾಧನೆಯ ಮುಂಬೆಳಕು ಬಿದ್ದಿದೆಯೆಂಬ ಸಂತೋಷವು ದೀವಳಿಗೆಯ ಬೆಳಕಿಗೆ ಹೊಸ ಕಳೆಯನ್ನು ಕೊಡುತ್ತಿದೆ. ಈ ಮುಂಬೆಳಕು ಹುಸಿ ಮುಂಬೆಳಕಾದೀತೇ ಎಂದು ಮನಸ್ಸನ್ನು ಸಾಶಂಕಗೊಳಿಸುವ ಕೆಲ ಸಂಗತಿಗಳು ಜರುಗುತ್ತಿದ್ದರೂ ಕೊನೆಗೂ ನಮ್ಮ ಮೈಸೂರು ಬಂಧುಗಳ ಹೃದಯದಲ್ಲಿನ ಸಂಕುಚಿತ ಭಯ ಸಂಶಯಗಳು ವಿಶಾಲತರ ಕನ್ನಡತನಕ್ಕೆ ಎಡೆಮಾಡಿಕೊಟ್ಟು ಅರವತ್ತು ವರುಷಗಳ ಒಂದೇ ಕರ್ನಾಟಕದ ಹಂಬಲ ಫಲಿಸುವಂತಾದೀತೆಂದು ಹಾರೈಸುತ್ತೇವೆ. ಯಾಕೆಂದರೆ ಕನ್ನಡಿಗರ ಹೃದಯ ಮೂಲತಃ ವಿಶಾಲವಾದುದು.

*

ಹೀಗಾಗಿ "ಕರ್ಮವೀರ"ದ ಮುಂದಿನ ವಿಶೇಷ ಸಂಚಿಕೆ ಅಖಂಡ ಕರ್ನಾಟಕ ರಾಜ್ಯದಲ್ಲಿ ಹೊರಡುವುದೆಂಬ ಆಸೆಯಿಟ್ಟುಕೊಳ್ಳುವುದು ಖಂಡಿತವಾಗಿ ಸಂಭವಕೋಟಿಯ ಮಾತಾಗಿದೆ. ಈ ಪತ್ರಿಕೆ ಮೊದಲಿನಿಂದ ಇಟ್ಟುಕೊಂಡ ಎರಡು ಧ್ಯೇಯಗಳೂ ಅಲ್ಲಿಗೆ ಪೂರೈಸಿದಂತಾಗುವುದು. ಅಖಂಡ ಕರ್ನಾಟಕ ಕೈಗೆ ಬಂದ ಮೇಲೆ ಕನ್ನಡಿಗರ ಮನಸಿನ ಒಂದು ಗುರುತರ ಭಾರ ಇಳಿದು ಅವರು ಏಕಚಿತ್ತದಿಂದ ಭಾರತದ ಆಶ್ರಯದಲ್ಲಿ ತಮ್ಮ ಭವಿಷ್ಯವನ್ನು ಕಟ್ಟಿ ಬೆಳೆಸಲು ಮತ್ತು ಕಾಲಲೀಲೆಯು ಮಸುಕುಗೊಳಿಸಿದ ಕನ್ನಡಿಗರ ಕೀರ್ತಿಯ ಚಿನ್ನವನ್ನು ಮತ್ತೆ ಉಜ್ಜಿ ಬೆಳಗಿಸಲು ಉದ್ಯುಕ್ತರಾಗುವರು—ಆಗಬೇಕು.

*

ಆರ್ಥಿಕ ರಂಗದಲ್ಲಿ ನಮ್ಮ ಮೊದಲನೇ ಪಂಚವಾರ್ಷಿಕ ಯೋಜನೆ ಇನ್ನೈದು ತಿಂಗಳಿಗೆ ಮುಗಿದು ತನ್ನ ಗುರಿಯನ್ನು ನಿರೀಕ್ಷೆ ಮೀರಿ ಮುಟ್ಟುತ್ತದೆ. ಎರಡನೇ ಪಂಚವಾರ್ಷಿಕ ಯೋಜನೆಯೂ ಈಗ ಮೊದಲನೆಯದಕ್ಕಿಂತಲೂ ಹೆಚ್ಚಿನ ಗುರಿಯಿಟ್ಟುಕೊಂಡು ರಚಿಸಲ್ಪಡುತ್ತಿದೆ. ಅದರ ರೂಪರೇಷೆಗಳನ್ನು ವಿವರಿಸುವ ಎರಡು ವಿಶೇಷ ಲೇಖಗಳು ಈ ಸಂಚಿಕೆಯಲ್ಲಿ ಸಹಜವಾಗಿಯೇ ಬಂದಿವೆ. ಇಡೀ ದೇಶವು ಹೆಚ್ಚುಕಡಿಮೆ ಭಾಷಾ ರಾಜ್ಯಗಳಲ್ಲಿ ವಿಂಗಡಿಸಲ್ಪಡುತ್ತಿದ್ದು ಯೋಜನೆಗಳಲ್ಲಿ ಜನತೆಯ ಆತ್ಮೀಯತೆ ಬೆಳೆಯುವದು ಖಂಡಿತ.

*

ವಿದೇಶ ನೀತಿ ರಂಗದಲ್ಲಿ ನಮ್ಮ ಸ್ವಂತ ಹಿತದ ಪ್ರಶ್ನೆಗಳಾದ ಗೋವೆ ಮತ್ತು ಕಾಶ್ಮೀರ ಪ್ರಶ್ನೆಗಳು ಇನ್ನೂ ಪರಿಹಾರವಾಗದಿದ್ದರೂ ನಮ್ಮ ಪಂಚಶೀಲ ಸಿದ್ಧಾಂತಕ್ಕೆ ಜಗತ್ತಿನಲ್ಲಿ ಹೆಚ್ಚು ಹೆಚ್ಚು ಬೆಂಬಲ ಹಾಗೂ ಯಶ ದೊರೆಯುತ್ತಿದೆ. ನೆಹರೂರವರ ರಶಿಯ ಪ್ರವಾಸ ಹಾಗು ರಶಿಯನ್ ನಾಯಕರ ಭಾರತಾಗಮನ ಇದರ ಒಂದು ಮುಖವಾದರೆ, ಜಾಗತಿಕ ದ್ವೇಷ ಇಳಿಮುಖವಾಗಿ ದೀರ್ಘ ಶಾಂತಿಯ ಸಂಭವ ಹೆಚ್ಚಿದ್ದು ಈ ಯಶದ ಇನ್ನೊಂದು ಮುಖವಾಗಿದೆ.

*

ನಮ್ಮೀ ಸಂಚಿಕೆಯ ಬಗ್ಗೆ ಹೆಚ್ಚಿಗೇನನ್ನೂ ಹೇಳದೆ ಹೋಳಿಗೆಯ ವಿಮರ್ಶೆಯನ್ನು ಅತಿಥಿಗಳ ನಾಲಿಗೆಗೇ ಬಿಡುತ್ತಿದ್ದೇವೆ. ಇದರ ರಸ—ಹಾಗು ಪೌಷ್ಟಿಕತೆ ಹೆಚ್ಚಿಸಲು ಎಂದಿಗಿಂತಲೂ ಹೆಚ್ಚು ಶ್ರಮಿಸಿದ್ದೇವೆಂದು ಮಾತ್ರ ಹೇಳಿ ಇದರಲ್ಲಿ ನೆರವಾದವರೆಲ್ಲರಿಗೂ ಧನ್ಯವಾದ ಅರ್ಪಿಸುವೆವು. ಲೇಖ, ಕವನ, ಭವಿಷ್ಯಾದಿಗಳನ್ನು ಕಳಿಸಿದ ವಿದ್ವಾಂಸರಿಗೂ ಆಟಿಕೆಗಳನ್ನು ಕುರಿತು ಲೇಖವನ್ನು ಅನುವಾದಿಸಿ ಸಚಿತ್ರವಾಗಿ ಪ್ರಕಟಿಸಲೊಪ್ಪಿದ "ಬರ್ಮಾಶೆಲ್ ನ್ಯೂಜ" ಪತ್ರಿಕೆಯವರಿಗೂ ಮುಖಚಿತ್ರ ತಯಾರಿಸಿಕೊಟ್ಟ ಮದ್ರಾಸಿನ ತರುಣ ಕನ್ನಡಿಗ ಕಲಾವಿದ ಶ್ರೀ. ಪಡುಬಿದ್ರೆ, ವ್ಯಂಗ್ಯ ಚಿತ್ರಾದಿಗಳನ್ನು ತಯಾರಿಸಿಕೊಟ್ಟ ಶ್ರೀ. ಸದಾಶಿವ ಬಾಂದವಡೇಕರ, ಧಾರವಾಡದ ಶ್ರೀ ಕಂಚಿ, ಶ್ರೀ ತಾಂಬೆ ಇವರನ್ನೂ ವಂದಿಸಿ ಪಡಿಯಚ್ಚುಗಳನ್ನು ತಯಾರಿಸಿ ಕೊಟ್ಟ ಮದ್ರಾಸಿನ ಅಪ್ಪಾಸ್ವಾಮಿ ಕಂಪನಿ, ಹುಬ್ಬಳ್ಳಿಯ ಐಡಿಯಲ್ ಫೋಟೊ ಜಿಂಕೋ ಹಾಗು ಧಾರವಾಡದ ಶ್ರೀನಿವಾಸ ಕಂಪನಿ ಇವರನ್ನು ಅಭಿನಂದಿಸುತ್ತೇವೆ. ಜಾಹಿರಾತುಗಳನ್ನಿತ್ತ ವಣಿಕ್ ಜನರಿಗೂ ಇದನ್ನು ಸುಂದರವಾಗಿ ಮಾಡಲು ಶಕ್ತಿಮೀರಿ ದುಡಿದ ನಮ್ಮ ಸಹಕಾರಿಗಳಿಗೂ ಮುದ್ರಣವಿಭಾಗದ ಕೆಲಸಗಾರರಿಗೂ ನಮ್ಮ ಹಾರ್ದಿಕ ಅಭಿನಂದನೆಗಳು ಸಲ್ಲಬೇಕು.

ದೀವಳಿಗೆ ಮಾಡು ನಲ್ಲೆ

೧

ಮನೆಮನೆಗು ಬಂದು ದೀವಳಿಗೆಯಿಂದು ತಂದಿಹುದು ಒಸಗೆಯೊಂದ
ಮನಮನವನಿಂದು ತಾ ಬೆಳಗಬಂದಿಹುದು ನೇಹ–ಬೆಸುಗೆಯಿಂದ
ಇಳೆಮಂದಿಗೆಲ್ಲ ತಂದೀವುದೇನೊ ಆನಂದ ಒಲವಿನಿಂದ
ಅಳಲ ಮರೆಸಿ ಸೊಗಸನ್ನೆ ಸುರಿಸಿ ಬರುತಿಹುದು ಗೆಲುವಿನಿಂದ.

೨

ಭಾರತದ ತುಂಬ ಮನೆಮನೆಯಲಿಂದು ಹೊತ್ತಿಹವು ವಿವಿಧ ದೀಪ
ಪ್ರತಿ ದೀಪ ತಾನು ಈ ಜ್ಞಾನ ಹರ್ಷಗಳ ಬೆಳಕು ಹೊತ್ತ ರೂಪ;
ಬೆಳಕನಿತ್ತು, ಕಳೆಯುತಲಿ ಮನವ ಕಂಗೆಡಿಪ ತಾಪ-ಕೋಪ,
ಹೊಸ ವರುಷಕಾಗಿ ಹೊಸ ಹರುಷವಿತ್ತು ಹಾಕುವುದು ಹಬ್ಬ ಧೂಪ.

೩

ದೈನ್ಯ ದಾರಿದ್ರ್ಯ ಭೀತಿ ಅಜ್ಞಾನ ಎಲ್ಲ ಚದುರಿಬಿಡಲಿ
ಹಬ್ಬದುಬ್ಬಿದುವು ಇಹದ ಜೀವಿತಕೆ ಹೊಸತ ತಂದುಕೊಡಲಿ
ಸೊಗಸು ಸೌಭಾಗ್ಯ ಜ್ಞಾನ ಪ್ರೀತಿ ಬುವಿಯನ್ನೆ ಬೆಳಗಿ ನಿಲಲಿ
ಹೊಸತನ್ನೆ ಊಡಿ ಹೊಸತನ್ನೆ ತೀಡಿ ದೀವಳಿಗೆ ಗೆಲುವ ತರಲಿ.

೪

ಸ್ವಾತಂತ್ರ್ಯದುಸಿರು ಸರ್ವತ್ರ ಹರಡಿ ಹೊಸ ಜಗವು ರಚಿತಗೊಳಲಿ
ಜಗದ ಜನತೆಯಲಿ ಬಂಧು-ಬಾಂಧವ್ಯ ಸತತ ಖಚಿತಗೊಳಲಿ
ವಿಶ್ವದಲ್ಲಿ ವಿಶ್ವಾಸ ಬೆಳೆದು ಮನಮನದಿ ರುಚಿರಗೊಳಲಿ
ಜಗವು ತಾನು ಝುಗಝುಗಿಸೆ ಹಬ್ಬದಲಿ, ಬೆಳಕು ತುಂಬಿ ನಿಲಲಿ.

೫

ಶುದ್ಧ ಶುಭ್ರ ಹೊಂಬೆಳಕನಿಲ್ಲಿ ದೀವಳಿಗೆ ಹಬ್ಬ ಚೆಲ್ಲೆ,
ಜ್ಞಾನಜ್ಯೋತಿ ಮನೆಮನೆಗು ಹೊತ್ತಿ ಮನಮನವೆ ಬೆಳಗಿ ನಿಲ್ಲೆ,
ಸ್ವರ್ಗವದುವು ತನ್ನಿಂದೆ ತಾನೆ ಈ ಭೂಮಿಗಿಳಿವುದಿಲ್ಲೆ—;
ಅಂತೆ ನೀನು ಪ್ರತಿಸೊಡರು ಹಚ್ಚಿ ದೀವಳಿಗೆ ಮಾಡು ನಲ್ಲೆ.

—ಎಸ್. ಎಸ್. ಬಸುಪಟ್ಟದ, ಎಂ.
ಗುಳೇದಗುಡ್ಡ.

ನಾನು-ನನ್ನದು ಅಹಹ ಏನಿದು

" ನಾನು–ನನ್ನದು " ಆಹಹ ! .... ಏನಿದು
ಬಲಿತು ಹೋಗಿದೆ ಎಲ್ಲೆಡೆ
ನಾನು ಯಾರವ–ನನ್ನದಾವುದು ?
ಎಂಬ ಮಾತದು ಎಲ್ಲಿದೆ ?

ಭಲರೆ ಮನುಜನೆ ಏನು ಸೋಜಿಗೆ
ನಿನ್ನ ಜೀವನ ಇಳೆಯೊಳು.
ನಿಲದೆ ನಡೆದಿದೆ ನಿನ್ನ ಬಾಳುವೆ
ಕಾಲನಿರವನು ಮರೆತದು !

ಮನವ ತಣಿಸಲು ಹೋಗಿ ಆಯಸ-
ಬಡಿಸದಿರೆಲೋ ಆತ್ಮವ
ನಾನು–ನನ್ನದು ಎಂಬ ನೆರೆಯಲಿ
ಕೊಚ್ಚಿ ಹೋಗಲು ಬೇಡಲೋ

" ಸಿರಿಯು ನನ್ನದು–ನಾನು ಧನಪತಿ "
ಎಂಬ ಹೆಮ್ಮೆಯು ಬಲಿತಿದೆ.
ಅರಿವು ಇಲ್ಲವು–ಇಲ್ಲೆ–ಇಲ್ಲವು-
ನರನೆ ನಿನ್ನೆದೆಮನೆಯೊಳು.

ಜಗದ ಜನ್ಮದ ಯಾತ್ರೆ ಮುಗಿದೊಡೆ
ಬರುವರಾರೆಲೊ ಹಿಂದೆಡೆ ?
ಸಾಗೆಸಾಗುವೆ ಮೃತ್ಯುಮುಖದಲಿ
ಋಣದ ಮೂಟೆಯ ಭಾರದಿ

ನಾನು–ನನ್ನದು ಎಂಬ ಮಮತೆಯ
ಜಾಲ ಬಿಗಿವುದದಾರನು ?
ನಿನ್ನ ನೀನೇ ಅರಿತು ನೋಡೆಲೊ
ಹಿಂದೆ ಬರುವುದದಾವುದು ?

—ರಾಘವೇಂದ್ರ

ಕಪ್ಪೆಗಳು ಮತ್ತು ಆನೆ

ಬ್ರಹ್ಮಾರಣ್ಯ ನೀವು ಕೇಳಿದ್ದೀರಲ್ಲ, ಅದರ ಅಂಚಿನಲ್ಲಿ ಒಂದು ಹೊಂಡದ ಹತ್ತಿರ ಎರಡು ಕಪ್ಪೆಗಳು ವಾಸವಾಗಿದ್ದವು. ಒಂದು ಗಂಡು ಕಪ್ಪೆ, ಇನ್ನೊಂದು ಅದರ ಹೆಂಡತಿ.

ಕಪ್ಪೆಗಳು ಎಷ್ಟು ದೊಡ್ಡವಿರುತ್ತವೆಂದು ನಿಮಗೆ ಗೊತ್ತೇ ಇದೆ. ಇವಾದರೂ ಜಗತ್ತಿನ ಬೇರೆ ಕಪ್ಪೆಗಳಂತೆ ಚಿಕ್ಕ ಪ್ರಾಣಿಗಳೇ ಇದ್ದವು. ಎಲ್ಲ ಕಪ್ಪೆಗಳಂತೆ ಇವೂ ಡೊಳ್ಳುಹೊಟ್ಟೆಯವುಗಳೇ; ಎಲ್ಲವುಗಳಂತೆ ಇವುಗಳ ಕೈಕಾಲೂ ತೆಳ್ಳಗೆ ಉದ್ದವಾಗಿದ್ದವು. ಅವುಗಳ ಕಣ್ಣು ನೋಡಿದರೆ ವಿಕಾರವಾಗಿ ನಗು ಬರಿಸುವಂತಿದ್ದವು.

ಮತ್ತೆ ಈ ಕಪ್ಪೆಜೋಡಿಗೆ ತಮ್ಮ ಹೊಂಡ ಮತ್ತು ಆಸುಪಾಸೇ ಜಗತ್ತು. ಅದರ ಹೊರಗೆ ಏನಿದೆಯೆಂದು ಅವುಗಳಿಗೇನೂ ಗೊತ್ತಿದ್ದಿಲ್ಲ. ಅಷ್ಟು ಹತ್ತಿರದ ಗೊಂಡಾರಣ್ಯವನ್ನು ಕೂಡ ಅವು ಒಳ ಹೊಕ್ಕು ನೋಡಿರಲಿಲ್ಲ. ಆದರೆ ಎಲ್ಲ ಅಲ್ಪರಂತೆ ಇವೂ ಭಾರೀ ಸೊಕ್ಕಿನ ಜಂತುಗಳಾಗಿದ್ದವು.

ಗಂಡು ಕಪ್ಪೆ ಹಗಲೆಲ್ಲ ತನ್ನ ನಾಯಿಕೊಡೆಯ ನೆರಳಲ್ಲಿ ಆಲಸ್ಯದಿಂದ ಮಲಗಿರುತ್ತಿತ್ತು. ಮಳೆಗೆ ಎದ್ದ ಆ ನಾಯಿಕೊಡೆಗೆ ಅದು ತನ್ನ "ಶ್ವೇತಚ್ಛತ್ರ" ಎಂದು ಹುಂಬತನದಿಂದ ಹೆಸರಿಟ್ಟಿತ್ತು. ಅಲ್ಲಿ ಮಲಗಿ ತನ್ನ ಹಲಸಿನ ಬೀಜದಂಥ ಕಣ್ಣುಗಳನ್ನು ತೆರೆದುಕೊಂಡೇ ಅದು ಹಗಲುಗನಸು ಕಾಣುತ್ತ ಜಗತ್ತಿನಲ್ಲಿ ತನ್ನಷ್ಟು ದೊಡ್ಡವರಿಲ್ಲ, ತನ್ನಂಥ ಬಲಶಾಲಿಯಿಲ್ಲ ಎಂದುಕೊಳ್ಳುತ್ತಿತ್ತು.

ಸಾಲದ್ದಕ್ಕೆ ತನ್ನ ಹೆಂಡತಿಯ ಮುಂದೆ ಅದು ಪೌರುಷ ಕೊಚ್ಚುತ್ತಿತ್ತು. "ಏನು ಅಂತ ತಿಳಿದಿದ್ದಿ? ಇನ್ನು ಕೆಲ ದಿನ ಹೋಗಲಿ; ನಾನು ಇನ್ನಷ್ಟು ಬಲಶಾಲಿಯೂ ಪ್ರೌಢನೂ ಆಗಿ ಇಡೀ ಕಾಡೇವಾಡ ದೇಶವನ್ನು ಆಳುವದನ್ನು ನೋಡುತ್ತೀಯೇ." ಅದರ ಹೆಂಡತಿ ಅದಕ್ಕಿಂತ ಕಡಮೆ ಹುಂಬಜೀವಿಯಲ್ಲ. ಗಂಡನ ಈ ಉತ್ತರಪೌರುಷವನ್ನು ಅದು ನಿಜವೆಂದೇ ನಂಬುತ್ತಿತ್ತು.

ತನ್ನನ್ನು ತನ್ನ ಮರುಳ ಗಂಡ "ಹೇ ರಾಣಿ! ಓ ಎನ್ನರಸಿ" ಎಂದು ಕರೆಯುವದನ್ನು ಕೇಳಿ ತಾನಿನ್ನು ಜಗತ್ತಿನ ರಾಣಿಯೇ ಸೈ-ಯೆಂದುಕೊಂಡು ಆ ಹೆಣ್ಣು ಕಪ್ಪೆ ಹಿರಿಹಿರಿ ಹಿಗ್ಗುತ್ತಿತ್ತು. ತಾನು ತ್ರಿಲೋಕ ಸುಂದರಿಯೆಂದು ಬೇರೆ ಅದು ಬಗೆದಿತ್ತು.

ಹೀಗಿರುವಾಗ ಒಂದಾನೊಂದು ದಿನ ಈ ಕ್ಷುದ್ರ ಹೆಣ್ಣು ಕಪ್ಪೆಗೆ ನೀರು ತರಲು ಹೋಗುವ ಪ್ರಸಂಗ ಬಂತು. ಅದು ಪೊದೆಯ ಮರೆಯಿಂದ ತಲೆಯ ಮೇಲೊಂದು ಕೊಡವಿಟ್ಟುಕೊಂಡು ಹೊಂಡದ ಕಡೆ ಹೊರಟಿತು. ಅದು ನಾಲ್ಕು ಹೆಜ್ಜೆ ಬಂದಿತ್ತೋ ಇಲ್ಲವೋ ಒಮ್ಮೆಲೇ ಅರಣ್ಯದಿಂದ ಒಂದು ದೊಡ್ಡ ಆನೆ ಒಳ್ಳೇ ಉಲ್ಲಾಸದಿಂದ ಕುಣಿದಾಡುತ್ತ ಹೊರಬಂತು. ಅದು ಈ ಹೆಣ್ಣುಕಪ್ಪೆಯನ್ನು ಮೆಟ್ಟದಿದ್ದುದೇ ಪುಣ್ಯ. ಅದರ ಕಣ್ಣಿಗೆ ಈ ಕ್ಷುಲ್ಲಕ ಪ್ರಾಣಿ ಕಂಡಿದ್ದರೆ ತಾನೆ!

ಮೊದಲು ಗಾಬರಿಗೊಂಡ ಕಪ್ಪೆಗೆ ಒಡನೇ ಕೋಪಬಂತು. ಅದು

"ಎಲವೊ ಮಾಳಿಗೆಯಂಥ ಬೋಳು ಹೆಜ್ಜೆಯ ದೈತ್ಯ!
ಮುಂದೆ ನೋಡದೆ ಹೆಜ್ಜೆಯಿಕ್ಕಬೇಡ!!
ನಿನ್ನ ಮಾಳಿಗೆಯಂಥ ಹೆಜ್ಜೆಯಡಿಯಲಿ ಸಿಕ್ಕಿ!
ಅಂದಚೆಂದದ ರನ್ನ ಪುಡಿಯಾಗಬಹುದು"

ಎಂದು ಬಿರುನುಡಿ ಆಡಿತು.



ಆನೆಗಳಿಗೆ ನೀವು ಏನೇ ಹೇಳಿರಿ; ಆದರೆ ಅವುಗಳ ದೊಡ್ಡ ಕಾಲುಗಳನ್ನಾಗಲಿ ಮೊರಗಿವಿಯನ್ನಾಗಲಿ ಮಾತ್ರ ಗೇಲಿಮಾಡಬೇಡಿರಿ. ಅವುಗಳ ಕಿವಿಗಳು ಅಗಲವಿರುವುದೂ ಕಾಲುಗಳು ಮೊಂಡಾಗಿರುವುದೂ ಹೊಟ್ಟೆ ದೊಡ್ಡದಾಗಿರುವುದೂ ಸುಳ್ಳಲ್ಲ. ಆದರೂ ಹಾಗೆ ಹೇಳಿದರೆ ಅವಕ್ಕೆ ಭಾರೀ ಸಿಟ್ಟು ಬರುತ್ತದೆ. ನಮ್ಮ ನಿಮ್ಮ ಹಾಗೆಯೇ ಅವಕ್ಕೂ ಗೇಲಿಮಾಡಿದರೆ ಮೈ ಉರಿಯುತ್ತದೆ. ಈ ಆನೆ ಒಳ್ಳೇ ನಗೆಗಾರ ಆನೆಯಾಗಿದ್ದರೂ ಅದಕ್ಕೆ ಬೋಳುಮಾಳಿಗೆಯಂಥ ಕಾಲಿನ ದೈತ್ಯನೆಂದು ನಿಂದಿಸಿದ್ದಕ್ಕೆ ತುಂಬ ಸಿಟ್ಟು ಬಂತು. ಆದರೂ "ಅಂದಚಂದದ ರನ್ನ" ಎಂದು ಆತ್ಮಸ್ತುತಿ ಮಾಡಿಕೊಂಡ ಈ ಕಪ್ಪೆಯನ್ನು ನೋಡಿ ಅದಕ್ಕೆ ನಗೆ ಬಾರದಿರಲಿಲ್ಲ. ಅದು ಪ್ರತಿಯಾಗಿ ಗೇಲಿ ಮಾಡಿತು.



" ಏನೆಲಗೆ! ಡೊಳ್ಳುಹೊಟ್ಟೆಯ ಕಪ್ಪೆಹೆಣ್ಣೇ!
ನಿನ್ನನ್ನು ಕಣ್ಣೆತ್ತಿ ನೋಡುವವರಾರು ? |
ನಾನಂತು ನೀನು ಬಂದುದನ್ನೆ ನೋಡಿಲ್ಲ ! "

ಈ ಗೇಲಿಯಿಂದ "ಕಪ್ಪೆ ರಾಣಿ"ಗೆ ಇನ್ನಷ್ಟು ಕೋಪ ಬಂತು. ಅದು ಅಳುತ್ತ "ರಾಜ ಕಪ್ಪೆ"ಯ ಬಳಿ ಹೋಗಿ ಗೊಗ್ಗರ ದನಿಯಿಂದ ಆ ಕಿಡಿಗೇಡಿ ಆನೆ ತನ್ನನ್ನು ಡೊಳ್ಳುಹೊಟ್ಟೆಯ ಕಪ್ಪೆ ಹೆಣ್ಣು ಎಂದು ನಿಂದಿಸಿದ್ದಾಗಿ ದೂರು ಕೊಟ್ಟಿತು.

ಗಂಡು ಕಪ್ಪೆಗೆ ಇದನ್ನು ಕೇಳಿ ರೌದ್ರಾವೇಶ ಬಂತು. ಅದು ಸಿಟ್ಟಿನಿಂದ ಜಿಗಿದಾಡಹತ್ತಿತು. ಅದರ ಹೊಟ್ಟೆ ಮತ್ತಷ್ಟು ಉಬ್ಬಿ ಗಾಳಿ ತುಂಬಿದ ಪುಗ್ಗದಂತಾಯಿತು. ಹೀಗೆ ಉಬ್ಬಿ ಅದು ಆನೆಗೆ ಶಾಸ್ತಿ ಮಾಡುವೆನೆಂದು ಸೊಕ್ಕಿನ ಮಾತಾಡಿ ಹೊರಟಿತು. ಆದರೆ ಗುಡ್ಡದಂಥ ಆನೆಯನ್ನು ನೋಡಿದಾಕ್ಷಣ ಅದರ ಎದೆಯೇ ಹಾರಿಹೋಯಿತು. ಅದರ ಗೊಗ್ಗರು ಚೀರಾಟ ನಿಂತುಹೋಯಿತು. ಅದು ಗಾಬರಿಯಿಂದ ತಿರುಗಿ ತನ್ನ ಪ್ರೀತಿಯ ರಾಣಿಯ ಕೈ ಹಿಡಿದುಕೊಂಡು ಲಗುಬಗೆಯಿಂದ ಬದಿಗೆ ಸರಿಯಿತು. ಆದರೆ ಹೆಂಡತಿಯ ಮುಂದೆ ಹೇಡಿಯಾಗಬಾರದೆಂದು ಟೊಳ್ಳು ಪೌರುಷದ ಮಾತು ಆಡಿತು :

" ಓ ಎನ್ನ ಚೆನ್ನಾರ ಚೆಲುವೆ ಸಳಿದೋಳ ರಾಣಿ !
ಈ ಹೊಲಸು ಜಂತುವಿನ ಸಂಗವೇ ಬೇಡ. |
ಓ ನನ್ನ ರನ್ನ, ಇದು ಬರಿಯ ಹುಂಬ ಆನೆ |
ಇದಕೆ ಕೊರಡೆಯೆ ತಕ್ಕ ಮದ್ದು ಹೊರತು |
ರಾಜರಾಣಿಯರ ಸಂವಾದವಲ್ಲ ! "

ಡೊಳ್ಳು ಹೊಟ್ಟೆಯ ಚೋಟುದ್ದದ ಕಪ್ಪೆಯ ಪರಾಕ್ರಮ ಕೇಳಿ ಆನೆಗೆ ನಗು ತಡೆಯಲಿಲ್ಲ. ಅದು ಅಟ್ಟಹಾಸ ಮಾಡಿ ನಗತೊಡಗಿತು. ನಕ್ಕು ನಕ್ಕು ಹೊಟ್ಟೆ ಬಿರಿಯುವಂತಾಗಿ ಅದು ನೆಲದ ಮೇಲೆ ಕುಳಿತುಕೊಂಡಿತು. ಒಡೆದುಹೋಗದಂತೆ ತನ್ನ ಮುಂಗಾಲುಗಳಿಂದ ಅದು ಹೊಟ್ಟೆಯನ್ನು ಬಲವಾಗಿ ಅದುಮಬೇಕಾಯಿತು.

ಆ ನಡೆಯುವ ಗುಡ್ಡದ ಅಟ್ಟಹಾಸದ ದನಿಗೆ ಹೌಹಾರಿ ರಾಜಾ ರಾಣಿ ಕಪ್ಪೆಗಳು ಆಕಾಶವೇ ತಲೆಯ ಮೇಲೆ ಕುಸಿದುಬೀಳುತ್ತಿದೆಯೆಂದು ಕಂಗಾಲಾದವು. ಅವು ಅಲ್ಲಿ ನಿಲ್ಲದೆ ಜಿಗಿದುಜಿಗಿದು ಓಡತೊಡಗಿದವು. ಜೀವ ಉಳಿದರೆ ಸಾಕೆಂದು ಓಡುತ್ತಿದ್ದ ಅವು ಹೊಂಡದ ದಂಡೆ ಮುಟ್ಟುವ ವರೆಗೂ ತಿರುಗಿ ನೋಡಲಿಲ್ಲ. ಅಲ್ಲಿ ಹೋಗಿ ಅವು ನೀರಲ್ಲಿ ಹಾರಿಕೊಂಡು ಆನೆಯ ಅಟ್ಟಹಾಸ ಕಿವಿಗೆ ಕೇಳದಂತೆ ಕೆಸರಲ್ಲಿ ಅವಿತುಕೊಂಡವು.

(ಒಂದು ಕಾಠಿವಾಡಿ ಕಥೆ)

ಮೋಟರ ಅಪಘಾತದಲ್ಲಿ ಇಬ್ಬರು ಡ್ರಾಯವರರ ಜವಾಬು ತೆಗೆದುಕೊಂಡ ಮೇಲೆ ನ್ಯಾಯಧೀಶರ ವ್ಯಾಖ್ಯೆ—ಮೋಟರ ಅಪಘಾತವೆಂದರೆ ರಸ್ತೆಯಲ್ಲಿ ತಮ್ಮ ತಮ್ಮ ಸರಿಯಾದ ಪಕ್ಕಗಳಲ್ಲಿ ನಿಂತಿದ್ದ ಎರಡು ಸ್ಥಿರವಾದ ಕಾರುಗಳ ಡಿಕ್ಕಿ





ಲೇಖಿಕೆ: ಶ್ರೀಮತಿ ಕಮಲಾ ಡೋಂಗರಕೇರಿ

ಭಾರತದ ಜಾನಪದ ಆಟಿಗೆಗಳು

ಭಾರತದ ನಗರ ಮತ್ತು ಪಟ್ಟಣಗಳಲ್ಲಿ ಬೇಕಾದಷ್ಟು ಆಟಗೆ ಸಾಮಾನುಗಳು ಸಿಗುತ್ತವೆ. ಅವು ಬೇರೆ ದೇಶಗಳಲ್ಲಿ ಲಭ್ಯವಾಗುವ ಮಾದರಿಯವುಗಳೇ ಇರುತ್ತವೆ. ಯಾಂತ್ರಿಕ ಆಟಗೆಗಳು, ಕೌಶಲ ಹೆಚ್ಚಿಸುವ ಹಾಗು ಮಾಂಸಖಂಡಗಳ ಚಲನವಲನವನ್ನು ಪಳಗಿಸುವ ಆಟಗೆಗಳು, ಜ್ಞಾನೇಂದ್ರಿಯಗಳಿಗೆ ತರಬೇತಿ ಕೊಡುವ ಆಟಗೆಗಳೇ ಮೊದಲಾದವುಗಳನ್ನು ಉಲ್ಲೇಖಿಸಬಹುದು. ಇಂಥ ಆಟಗೆಗಳು ಹೆಚ್ಚಾಗಿ ಮನೋರಂಜನೆ ಮತ್ತು ಶಿಕ್ಷಣ ಇವುಗಳನ್ನು ಕುರಿತ ಆಧುನಿಕ ವಿಚಾರಗಳನ್ನು ಆಧರಿಸಿ ರಚಿಸಲ್ಪಡುತ್ತವೆ. ಅವು ವಿಜ್ಞಾನದ ಪ್ರಗತಿಯನ್ನೂ ತೋರಿಸುತ್ತವೆ. ಯಾಕಂದರೆ ಆಧುನಿಕ ಯುಗದ ಆವಿಷ್ಕಾರಗಳಾದ ವಿಮಾನ, ಜಲಾಂತರ್ಗಾಮಿ, ಟ್ಯಾಂಕು ಮೊದಲಾದವುಗಳ ಪ್ರತೀಕವಾಗಿಯೂ ಅವಿರುತ್ತವೆ.

ಆದರೆ ಈ ಆಟಗೆಗಳಿಗೆ ಸಾಂಸ್ಕೃತಿಕ ಅಥವಾ ಕಲಾತ್ಮಕ ದೃಷ್ಟಿಯಿಂದ ಮಹತ್ವವಿಲ್ಲ. ಅವುಗಳಲ್ಲಿ ಒಂದು ದೇಶದ ಸಾಮಾನ್ಯ ಜನತೆಯ ಸಂಪ್ರದಾಯಗಳನ್ನಾಗಲಿ ಕಲಾಸಿದ್ಧಿಗಳನ್ನಾಗಲಿ ಗುರುತಿಸುವಂತಿಲ್ಲ. ಗ್ರಾಮಾಂತರಗಳಲ್ಲಿ, ಹುಲ್ಲು ಛಾವಣಿಯ ಗುಡಿಸಲುಗಳಲ್ಲಿ ಅಥವಾ ಮಹಾ ನದಿಗಳ ತೀರಗಳಲ್ಲಿ, ನಗರ ಜೀವನದ ಅಟ್ಟಹಾಸದಿಂದ ಬಹು ದೂರದಲ್ಲಿ ತಯಾರಾಗುವ ಜಾನಪದ ಆಟಗೆಗಳೇ ನಿಜವಾಗಿ ನಮ್ಮ ದೇಶೀಯ ಆಟಗೆಗಳು, ನಮ್ಮ ಸಂಪ್ರದಾಯದ ಪ್ರತೀಕಗಳು.

ಈ ಚಿಕ್ಕ ಕೈಕೆಲಸದ ಆಟಗೆಗಳ ಉದ್ದಿಮೆಯು ತನ್ನ ತಯಾರಿಕೆಗಳನ್ನು ಮಾರಲು ಸಂದರ್ಭಗಳನ್ನು ಹುಡುಕಬೇಕಾಗುತ್ತದೆ. ಈ ಸುಂದರವಾದ ಆಟಗೆಗಳು ಒಳನಾಡಿನಿಂದ ಸಮೀಪದ ಜಾತ್ರೆಗಳಿಗೂ ಬೀದಿಯ ಬಜಾರಗಳಿಗೂ ದೇವಾಲಯಗಳ ವಿಶಾಲ ಪೌಳಿಗಳಿಗೂ ಕೆಲವೊಮ್ಮೆ ರೇಲ್ವೆ ನಿಲ್ದಾಣಗಳಿಗೂ ಬಂದು ಪ್ರದರ್ಶಿಸಲ್ಪಡುವದು ಕಾಣಿಸುತ್ತದೆ. ಹಳ್ಳಿಯ ಆಟಗೆಗಾರನಿಗೆ ತನ್ನ ಸರಕುಗಳನ್ನು ಕೊಳ್ಳುವವರು ಎಲ್ಲಿರುತ್ತಾರೆ, ಮಕ್ಕಳು ಮರಿಗಳ ಮನಸ್ಸು ಸೆರೆಹಿಡಿಯಬೇಕಾದರೆ ಆಟಗೆಗಳು ಎಂಥವಿರಬೇಕು ಎಂಬ ತಿಳಿವಳಿಕೆಯಿರುತ್ತದೆ. ಆನುವಂಶಿಕವಾಗಿ ಬಂದ ಕೈಗಾರಿಕೆಗಳಲ್ಲೆಲ್ಲ ಕಾಣಿಸುವ ಕೌಶಲದಿಂದ ಅವನು ದೇಶದ ಪುರಾತನ ಸಂಸ್ಕಾರ ಸಂಪ್ರದಾಯಗಳನ್ನು ಜೀವಂತವಾಗಿರಿಸುತ್ತಿದ್ದಾನೆ. ತನ್ನ ಸರಕುಗಳ ಪ್ರಚಾರ ಮಾಡಲು ಅವನಿಗೆ ಕಣ್ಣು ಕುಕ್ಕುವ ಜಾಹಿರಾತುಗಳು ಬೇಕಾಗುವದಿಲ್ಲ; ಅವನು "ಧಾಡಸಿ'' ಮಾರಾಟಗಾರನೂ ಆಗಬೇಕಿಲ್ಲ. ತನ್ನದೇ ಆದ ಶಾಂತ, ನಮ್ರ, ನಿರಾಡಂಬರ ರೀತಿಯಿಂದ ಅವನು ಆಟಗೆಗಳನ್ನು ಪ್ರದರ್ಶಿಸಿ, ಕೊಳ್ಳಬೇಕೆ ಬೇಡವೆ ಎಂಬ ನಿರ್ಧಾರವನ್ನು ಸಂದರ್ಶಕನಿಗೇ ಬಿಡುತ್ತಾನೆ. ಕಾರಖಾನೆಗಳಲ್ಲಿ ವಿವಿಧ ಯಂತ್ರ ಸಲಕರಣೆಗಳಿಂದ ಸಿದ್ಧವಾಗಿ ಪೇಟೆಯಲ್ಲಿ ಎಲ್ಲೆಲ್ಲಿಯೂ ಕಿಕ್ಕಿರಿದ ತಳಕು ಬೆಳಕಿನ ಆಟಗೆಗಳ ಕಾಟದ ನಡುವೆಯೂ ಅವನು ತನ್ನ ಚಿಕ್ಕ ಉದ್ದಿಮೆಯನ್ನು ಹೇಗೋ ಜೀವಂತವಾಗಿ ಉಳಿಸಿಕೊಂಡಿದ್ದಾನೆ.

ಕೈಕೆಲಸದ ಈ ಪರಂಪರಾಗತ ಆಟಗೆಗಳು ಕೇವಲ ಸಾಂಸ್ಕೃತಿಕ ಅರ್ಥಕ್ಕಿಂತ ಹೆಚ್ಚಿನ ಉದ್ದೇಶವನ್ನೇನಾದರೂ ಪೂರೈಸುವವೋ ಎಂದು ವಿಚಾರಿಸುವ ಕಾಲವೀಗ ಬಂದಿದೆ. ಹೊರನೋಟಕ್ಕೆ ಕ್ಷುಲ್ಲಕವೆಂದು ತೋರುವ ಈ ಪದಾರ್ಥಗಳು ನಿಜವಾಗಿ ಕ್ಷುದ್ರವೆ? ಖಂಡಿತವಾಗಿಯೂ ಅಲ್ಲ. ಅದರ ಮೇಲೇ ಹೃದಯವನ್ನಿರಿಸಿದ ಮಗುವಿಗಂತೂ ಅವು ಮಹತ್ವದ್ದು. ನಾಗರಿಕತೆಯ ಇತಿಹಾಸದ ಅಭ್ಯಾಸಿಗಾದರೂ ಅವು ಕಡಿಮೆ ಮಹತ್ವದ ವಸ್ತುಗಳಲ್ಲ. ಅವನು ಅವುಗಳ ಸಹಾಯದಿಂದ ಅಸ್ಪಷ್ಟ ಗತಕಾಲದಲ್ಲಿ ಮಾನವನ ಚಟುವಟಿಕೆಗಳ ಕಥೆಯನ್ನು ಊಹಿಸಿ ಸಂಸ್ಕೃತಿಯ ವಿಕಾಸದ ಇತಿಹಾಸವನ್ನು ಹಂತ ಹಂತವಾಗಿ ಪುನಾರಚಿಸಿಕೊಳ್ಳುತ್ತಾನೆ. ಪುರಾತನ ಅವಶೇಷಗಳನ್ನು ಅಗೆದಾಗ ದೊರೆತ ಆಟಗೆಗಳು ಪುರಾತತ್ತ್ವ ಶಾಸ್ತ್ರಜ್ಞನಿಗೆ ಸಮೃದ್ಧವಾದ ಸಾಮಗ್ರಿಯನ್ನೊದಗಿಸಿ ಅನಾದಿ ಕಾಲದ ಜೀವನದ ಒಂದು ಪರಿಪೂರ್ಣ ಚಿತ್ರವನ್ನು ಕಲ್ಪಿಸಿಕೊಳ್ಳಲು ನೆರವಾಗುತ್ತವೆ.

ಆಟಗೆಗಳು ಜಗತ್ತಿನ ಪ್ರತಿಕೃತಿ

ಪುರಾತನ ನಾಗರಿಕತೆ ಸಂಸ್ಕೃತಿಗಳಿಗೆ ಸೇರಿದವುಗಳೆಂದು ಗೊತ್ತುಪಡಿಸಲ್ಪಟ್ಟ ಆಟಗೆಗಳಿಗೂ ಇಂದು ಭಾರತದ ಮೂಲೆಮೂಲೆಗಳಲ್ಲಿ ದೊರೆಯುವ ದೇಶೀಯ ಆಟಗೆಗಳಿಗೂ ರಚನೆ, ಆಕೃತಿ ಮತ್ತು ಮೂಲಭೂತ ಕಲ್ಪನೆಗಳ ವಿಚಾರದಲ್ಲಿ ಸಾಮ್ಯವಿರುವದನ್ನು ನೋಡಿದರೆ ಆಶ್ಚರ್ಯವಾಗುವದು. ಆಟಗೆ ತಯಾರಿಯಲ್ಲಿ ಉಪಯೋಗಿಸಿದ ಸಾಮಗ್ರಿ ಬೇರೆ ಇರಬಹುದಾದರೂ ಮಕ್ಕಳಿಗೆ ಎಂಥ ಆಟಗೆಗಳು ಬೇಕೆಂಬ ವಿಚಾರದಲ್ಲಿ ನಮ್ಮ ಪೂರ್ವಿಕರ ವಿಚಾರಗಳೂ ನಮ್ಮವುಗಳಂತೆಯೇ ಇದ್ದಿರಬೇಕು. ಆಟಗೆಯ ಗಿಲಿಗಿಲಿ, ಪೀಪಿ, ಗೊಂಬೆ, ಗಾಡಿ, ಪ್ರಾಣಿಗಳು, ಹಕ್ಕಿಗಳು, ಪಾತ್ರಪರಡಿಗಳೇ ಮೊದಲಾದವುಗಳನ್ನು ಅವರೂ ಮಕ್ಕಳಿಗೆ ಆಡಲಿಕ್ಕೆ ಕೊಡುತ್ತಿದ್ದರು. ಇಂದಿನ ನಾಗರಿಕರಾದ ನಾವೂ ಹೀಗೆಯೇ ಮಾಡುತ್ತೇವೆ. ಆಧುನಿಕ ಮನಶ್ಶಾಸ್ತ್ರ ಮತ್ತು ಶಿಕ್ಷಣ ಸಿದ್ಧಾಂತಗಳು ಅವರಿಗೆ ಗೊತ್ತಿದ್ದಿಲ್ಲವಾದರೂ ಆಟಗೆಗಳನ್ನು ಪಾಠದ ಉಪಕರಣಗಳನ್ನಾಗಿಯೂ ಮಾಡಬಹುದೆಂದು ಅವರು ಗಮನಿಸದಿರಲಿಲ್ಲ.

ಇಂದಿನ ಕೈಕೆಲಸದ ಆಟಗೆಗಳನ್ನೇ ತೆಗೆದುಕೊಳ್ಳೋಣ. ಅವು ಮಕ್ಕಳನ್ನು ಸಂತೋಷಗೊಳಿಸಿ ಅಥವಾ ಅವರಲ್ಲಿ ಕೌತುಕವುಂಟುಮಾಡಿ ಸುಖಿಗಳಾಗಿ ಮಾಡುವ ಮುಖ್ಯ ಉದ್ದೇಶಗಳನ್ನಲ್ಲದೆ [illegible]



ಆನೆ, ಮದ್ರಾಸ



ಸಿಂಹಾಚಲ ಕುದುರೆ, ವಿಶಾಖಪಟ್ಟಣ

ಹೊರಗಿನ ಜಗತ್ತಿನ ಪ್ರತಿಕೃತಿಯಾಗಿ ಅದು ಮಗುವಿನ ಒಂದು ಪುಟ್ಟ ಪ್ರಪಂಚವನ್ನು ನಿರ್ಮಿಸಿ ಬಾಹ್ಯ ಜಗತ್ತಿನ ವೈವಿಧ್ಯಮಯ ವ್ಯಕ್ತಿಗಳನ್ನೂ ವ್ಯವಸಾಯಗಳನ್ನೂ ಅವು ಅಲ್ಲಿ ಪ್ರತಿಬಿಂಬಿಸುತ್ತವೆ. ಮೇಲಾಗಿ ಮಗುವಿನ ವ್ಯಕ್ತಿತ್ವವನ್ನೂ ಚಾರಿತ್ರ್ಯವನ್ನೂ ತಿದ್ದಿ ರೂಪಿಸುವ ಕೆಲಸವನ್ನೂ ಮಾಡುತ್ತವೆ.

ತೊಟ್ಟಿಲ ಕೂಸುಗಳಾಗಿದ್ದು ದೃಷ್ಟಿಯನ್ನು ಪದಾರ್ಥಗಳ ಮೇಲೆ ನಡಲು ಮತ್ತು ಶಬ್ದಗಳಿಗಾಗಿ ಆಲಿಸಲು ಕಲಿಯುತ್ತಿರುವಾಗಲೇ ಆಟಗೆಯ ಪ್ರಪಂಚದ ಪರಿಚಯ ಭಾರತದ ಮಕ್ಕಳಿಗೆ ಆಗುತ್ತದೆ. ತೊಟ್ಟಿಲ ಮೇಲ್ಗಡೆ ಚಿಕ್ಕ ಹಕ್ಕಿಗಳನ್ನೋ ಚೆಂಡುಗಳನ್ನೋ ಇರಿಸಿ ತೊಟ್ಟಿಲು ತೂಗುತ್ತಿರುವಾಗ ಅವೂ ಚಲಿಸುವಂತೆ ಮಾಡುವದು ರೂಢಿಯಾಗಿದೆ. ಇಲ್ಲಿಯೇ ಆ ಮಗುವಿಗೆ ಇಂದ್ರಿಯಗಳ ಉಪಯೋಗದ ಶಿಕ್ಷಣ ಆರಂಭವಾಗುತ್ತದೆ. ಸುತ್ತಮುತ್ತಲ ವಸ್ತುಗಳ ಧ್ಯಾಸ ಮಕ್ಕಳಿಗೆ ಆಗತೊಡಗಿದಾಗಲೇ ಅವುಗಳಿಗೆ ಬಣ್ಣ ಮತ್ತು ಆಕೃತಿಗಳ ಸೌಂದರ್ಯಾನುಭೂತಿಯ ದೀಕ್ಷೆ ದೊರೆಯುತ್ತದೆ. ಆ ಮೇಲಿನದು ಗಿಲಿಗಿಲಿ. ಮಗು ಆನಂದಭರದಿಂದ ಆದುಮುವ ಈ ಆಟಗೆಯು ಅತ್ಯಲ್ಪ ಚಲನೆಯಿಂದಲೂ ಬಗೆಬಗೆಯ ಧ್ವನಿಗಳನ್ನು ಮಗುವಿಗೆ ಪರಿಚಯಮಾಡಿ ಕೊಡುತ್ತದೆ. ನಾನಾ ಆಕೃತಿ, ಬಣ್ಣ ಮತ್ತು ಸ್ವರಗಳ ಗಿಲಿಗಿಲಿಗಳನ್ನು ಅದಕ್ಕೆ ಕೊಡಲಾಗುವದರಿಂದ ಅದರ ಕಿವಿಗಳು ಬೇಗನೇ ನಾದಗಳ ಸಾಮರಸ್ಯಕ್ಕೆ ಒಲಿಯುತ್ತವೆ. ಶಬ್ದ, ವರ್ಣ ಮತ್ತು ರೂಪಗಳನು ಪರಿಚಯ ಮಾಡಿಕೊಂಡಮೇಲೆ ಮಗು ಹೆಚ್ಚು ಕೌತುಕದ ಪದಾರ್ಥಗಳಿಗಾಗಿ ಹಂಬಲಿಸತೊಡಗುತ್ತದೆ.

ಭಾರತದ ಜಾನಪದ ಆಟಗೆಗಳು ಅವನಿಗೆ ಭಾರತದ ಗೊಂಡಾರಣ್ಯಗಳ ಮೃಗಗಳ, ನೀಲಾಕಾಶದ ಪಕ್ಷಿಗಳ ಪ್ರಾಂತಪ್ರಾಂತಗಳ ವಾಹನಗಳ ಸುಂದರ ಪ್ರತಿಕೃತಿಗಳನ್ನು ಒದಗಿಸುವದಲ್ಲದೆ ಎಲ್ಲಕ್ಕೂ ಹೆಚ್ಚಾಗಿ ಸಾಂಸ್ಕೃತಿಕ ಮಹತ್ವದ ಆಟಗೆಗಳನ್ನು ಕೊಡುತ್ತವೆ. ಒಮ್ಮೆ ನೋಡಿದಾಗ ಇವು ನಯನಾಜೂಕಿಲ್ಲದ ಒರಟು ಪದಾರ್ಥಗಳಾಗಿ ಕಾಣಬಹುದು. ಆದರೆ ಒಳಹೊಕ್ಕು ನೋಡಿದರೆ ಅವುಗಳಲ್ಲಿ ತಮ್ಮವೇ ವೈಶಿಷ್ಟ್ಯಗಳಿದ್ದು ಅವು ವಿಷಯವನ್ನು ಬಲವಾಗಿ ಬಿಂಬಿಸುತ್ತವೆಯೆಂದು ಗೊತ್ತಾಗುವದು. ಆಟಗೆಗಳಲ್ಲಿ ಆಕಾರಸೂಕ್ಷ್ಮವಾಗಲಿ ನಯನಾಜೂಕಾಗಲಿ ಅಷ್ಟು ಮುಖ್ಯವಲ್ಲ. ಅವು ಆಯಾ ವಿಷಯಗಳ ಸ್ವಭಾವ, ಚರಿತ್ರ್ಯವನ್ನು ಎತ್ತಿತೋರಿಸುವುದರಿಂದಲೇ ಜೀವಕಳೆ ಪಡೆದು ಬೇಗನೆ ಮಕ್ಕಳ ಪ್ರೀತಿಯ ವಸ್ತುಗಳಾಗುತ್ತವೆ. ಮಗುವಿಗೆ ಹೊಸತಾಗಿ ಮನಸುಹಿಡಿದ ವಸ್ತುವಿನ ಮೇಲೆ ಒಂದು ಹಾಸ್ಯದ ಇಲ್ಲವೆ ಶೌರ್ಯದ ಕತೆ ಕಟ್ಟಿ ಹೇಳಿದರೆ ಅದಕ್ಕೆ ಸಂತೋಷವಾಗುತ್ತದೆ. ಯಾವ ಅರ್ಥಪ್ರತೀತಿಯನ್ನೂ ತನಗೆ ನೀಡದಂಥ ನಿರ್ವಿಕಲ್ಪ ಪದಾರ್ಥದ ಮೇಲೆ ಅದಕ್ಕೆ ಬೇಗನೆ ಅಸಡ್ಡೆ ಹುಟ್ಟುತ್ತದೆ. ಅದಕ್ಕೆ ಬೇಕಾಗಿರುವುದು ತನ್ನ ಭಯಭಕ್ತಿಗಳಿಗೆ ಪಾತ್ರವಾಗಬಲ್ಲ ಉದ್ದಾಮ ವ್ಯಕ್ತಿತ್ವ ಅಥವಾ ತನ್ನ ಹೆಚ್ಚುತ್ತಿರುವ ಶಕ್ತಿಯನ್ನು ಪ್ರದರ್ಶಿಸಲು ಅನುಕೂಲವಾದ ಪದಾರ್ಥ. ಭಾರತದ ಜಾನಪದ ಆಟಗೆಗಳು ಇದನ್ನೇ ಒದಗಿಸುತ್ತವೆ. ಅವು ನಮ್ಮ ಕತೆ ಪುರಾಣಗಳಲ್ಲಿ ಬರುವ ವ್ಯಕ್ತಿಗಳನ್ನು ಅನುಸರಿಸಿ ನಿರ್ಮಿಸಲ್ಪಡುವದರಿಂದ ಮಗುವಿನ ಕಲ್ಪನಾಶಕ್ತಿಯನ್ನು ಕೂಡಲೆ ಸೆರೆಗೊಂಡು ಶಾಶ್ವತವಾಗಿ ಸಂತೋಷ ಸ್ಫೂರ್ತಿಗಳನ್ನೀಯುವ ವಸ್ತುಗಳಾಗುತ್ತವೆ. ವಿಕಾಸಶೀಲ ಕಲ್ಪನಾಶಕ್ತಿಯ ಈ ವಯಸ್ಸಿನಲ್ಲಿ ಅಪರಿಮಿತ ಕಾಲ್ಪನಿಕಶಕ್ತಿಯುಳ್ಳ ಪ್ರತ್ಯಕ್ಷ ವಸ್ತುಗಳು ಅದಕ್ಕೆ ಅಸೀಮ ಹರ್ಷವನ್ನುಂಟುಮಾಡುತ್ತವೆ.

ಕತೆ ಮತ್ತು ಜೀವನದ ಆಧಾರ

ಆಟಗೆಗಳ ವಿಷಯಗಳನ್ನು ನೋಡಿದರೆ ಅವನ್ನು ಹೆಚ್ಚಾಗಿ ಸಾಹಿತ್ಯದಿಂದಲೇ ತೆಗೆದುಕೊಂಡಂತೆ ಕಾಣುವದು. ಇದು ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿಯೂ ಕಾಣಿಸುವ ಸ್ಥಿತಿ. ಇಂಗ್ಲೀಷ ಮಕ್ಕಳ ಆಟಿಕೆಗಳ ವಸ್ತು ಶೇಕ್ಸಪಿಯರನ ನಾಟಕಗಳು, ಇಂಗ್ಲಿಷ ಅಜ್ಜಿಕತೆಗಳೇ ಮೊದಲಾದವುಗಳಿಂದ ಆಯ್ದುಕೊಳ್ಳಲ್ಪಡುತ್ತದೆ. ದೊಡ್ಡ ಪ್ರಮಾಣದಲ್ಲಿ ಆಟಗೆ ತಯಾರಿಸುವವರು ಈ ಜಟಿಲವಾದ ಪೌರಾಣಿಕ ಅಥವಾ ಕಥಾಪ್ರಪಂಚದ ಮಹಾವ್ಯಕ್ತಿಗಳ ಪ್ರತಿಕೃತಿಗಳನ್ನು ಮಾಡುವ ಗೋಜಿಗೇ ಹೋಗದೆ ಆ ಕೆಲಸವನ್ನು ಜಾನಪದ ಆಟಗೆ ತಯಾರಕನಿಗೆ ಬಿಟ್ಟುಬಿಟ್ಟಿದ್ದಾರೆ.

ಭಾರತೀಯ ಆಟಗೆಗಳನ್ನು ಸಾಂಸ್ಕೃತಿಕ ದೃಷ್ಟಿಯಿಂದ ನೋಡಲಾಗಿ ಅವು ಭಾರತೀಯ ಜೀವನದ ಹೆಚ್ಚುಕಡಿಮೆ ಎಲ್ಲಾ ಅಂಶಗಳನೂ



ಜೇರಿಬೇರಿ ಬೊಂಬೆಗಳು



ದನ ಮತ್ತು ಕರು, ಬನಾರಸ

ಪ್ರತಿಬಿಂಬಿಸುತ್ತವೆಯೆಂದು ನಿಸ್ಸಂದೇಹವಾಗಿ ಹೇಳಬಹುದು. ಅವು ಚಿಲ್ಲರೆ ವ್ಯಾಪಾರಿಯಿಂದ ಹಿಡಿದು ಪೌರಾಣಿಕ ದೈವಿ ವ್ಯಕ್ತಿಗಳ ವರೆಗೆ ಎಲ್ಲ ಬಗೆಯ ವ್ಯಕ್ತಿಗಳನ್ನೂ ವ್ಯಾಪಿಸುತ್ತವೆ. ಅವು ಭಾರತದ ಎಲ್ಲ ಪ್ರದೇಶಗಳ ಜನರ ವೇಷಭೂಷಣಗಳು, ವಾದ್ಯಗಳು, ವಿವಿಧ ನೃತ್ಯ ಪದ್ಧತಿಗಳ ನರ್ತಕ ನರ್ತಕಿಯರು, ಪುರಾತನ ಗುಡಿಗುಂಡಾರಗಳು ತಿರುಪತಿ, ಪುರಿಗಳಂಥ ತೀರ್ಥಕ್ಷೇತ್ರಗಳ ದೇವ ದೇವಿಯರು— ಎಲ್ಲವನ್ನೂ ಪ್ರತಿನಿಧಿಸುತ್ತವೆ.

ಭಾರತದಲ್ಲಿ ದೊಡ್ಡ ಹಬ್ಬಹುಣ್ಣಿವೆಗಳಲ್ಲಿ ಆಟಿಗೆಗಳು ಮಹತ್ವದ ಪಾತ್ರ ವಹಿಸುತ್ತವೆ. ಅವು ಮಕ್ಕಳ ಬಾಳಿನಲ್ಲಿ ಸುಖ ಸಂತೋಷಗಳನ್ನು ತುಂಬಿ ಅವರನ್ನು ಹಬ್ಬದ ಉತ್ಸಾಹದಿಂದ ತುಂದಿಲರಾಗುವಂತೆ ಮಾಡುವದಲ್ಲದೆ ಅವರಿಗೆ ಆ ಸಂದರ್ಭದ ವೈಶಿಷ್ಟ್ಯವನ್ನು ಬಿಂಬಿಸುತ್ತವೆ. ಗೋಕುಲಾಷ್ಟಮಿಯ ದಿನ ಶ್ರೀಕೃಷ್ಣನ ಬೊಂಬೆಯನ್ನು ಅವರಿಗಿತ್ತರೆ ಆ ಹಬ್ಬವನ್ನು ಅವರು ಭಾವಪರವಶರಾಗಿ ಆಚರಿಸುವರು. ಇವಲ್ಲದೆ ಬೊಗರಿ, ಗಾಳಿಪಟ ಮತ್ತು ಬೇರೆ ಗೊಂಬೆಗಳೂ ಇವೆ. ಹೀಗೆ ನಾನಾ ರೀತಿಯಿಂದ ಅವು ಮಕ್ಕಳಿಗೆ ದೇಶ ಮತ್ತು ಜೀವನ ಸೂಕ್ಷ್ಮಗಳ ಪರಿಜ್ಞಾನವನ್ನು ಹೆಚ್ಚಿಸಿ ಜನಜೀವನವನ್ನು ಅವರಿಗೆ ಪರಿಚಿತವಾಗಿ ಮಾಡುತ್ತವೆ.

C। ಭಾರತದ ಜಾನಪದ ಆಟಿಗೆಗಳಲ್ಲಿ ಅವುಗಳದೇ ಉದಾತ್ತ ಸಂದೇಶವಿದೆ ಮತ್ತು ಅವು ವಿಶಿಷ್ಟ ಉದ್ದೇಶವನ್ನು ಪೂರೈಸುತ್ತವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಅವು ಆಧುನಿಕ ಯುಗ ಮತ್ತು ವಿಚಾರಗಳ ಪ್ರತೀಕವಾದ ಕಾರಖಾನೆಯ ಆಟಗೆಗಳ ಕೆಲಸ ಮಾಡಲಿಕ್ಕಿಲ್ಲ; ಆದರೂ ಅವು ಮಗುವಿನ ಮಾನಸಿಕ, ಭಾವಿಕ ಮತ್ತು ನೈತಿಕ ಶಕ್ತಿಗಳನ್ನು ಬೆಳೆಸಲು ನೆರವಾಗುವದು ಖಂಡಿತ. ಅರ್ಥಾತ್ ಭಾರತದ ಜಾನಪದ ಆಟಗೆಗಳ ಗುಣ ಅವುಗಳ ವಾಸ್ತವಿಕತೆಯಲ್ಲಿರದೆ ಭಾವಿಕತೆಯಲ್ಲಿದೆ.

ಈ ಲೇಖವನ್ನು "ಬರ್ಮಾಶೆಲ್" (ಮುಂಬೈ) ಪತ್ರಿಕೆಯಿಂದ ಉದ್ಧರಿಸಲಾಗಿದೆ. ಶ್ರೀಮತಿ ಡೊಂಗರಕೇರಿಯವರು ಇದೇ ವಿಷಯದ ಮೇಲೆ ಬರೆದ ವಿಸ್ತಾರವಾದ A Journey Through Toyland ಎಂಬ ಪುಸ್ತಕ ಬರೆದಿದ್ದು ಅದನ್ನು ಮುಂಬಯಿಯ ಪಾಪ್ಯುಲರ ಬುಕ್ ಡಿಪೋದವರು ಪ್ರಕಟಿಸಿದ್ದಾರೆ. ಇಲ್ಲಿನ ಚಿತ್ರಗಳನ್ನು ಆ ಪುಸ್ತಕದಿಂದಲೇ ಎತ್ತಿಕೊಂಡಿದೆ. ಚಿತ್ರಕಾರರು ಶ್ರೀಮತಿ, ಎ. ಬಿ. ಶ್ವಾರ್ಸ



ಕರ್ನಾಟಕದ ಬಸವ

ಅಣುಯುಗ . . . .

ನಮಗೆ ಸರಿಯಾಗಿ ಅರ್ಥವಾಗುವ ಮೊದಲೇ ಅಣುಶಕ್ತಿಯ ಯುಗ ಪ್ರಾರಂಭವಾಗಿದೆ. ಅದರ ಪ್ರಾಥಮಿಕ ಘೋರ ರೂಪ ನೋಡಿ ನಾವು ಅಂಜದೆ ವಿವೇಕದಿಂದ ಅದನ್ನು ಶಾಂತಿ ಕಾರ್ಯಗಳಿಗೆ ಉಪಯೋಗಿಸಲು ಕಲಿಯಬೇಕು. ಭಾರತವು ಇದರಲ್ಲಿ ಹಿಂದುಳಿಯಬಾರದು.

ಅಣುಯುಗದ ಬಗ್ಗೆ ನಮಗೆ ಸಾಕಷ್ಟು ಪರಿಜ್ಞಾನವಿಲ್ಲದಿದ್ದರೂ ಅದು ಈಗಾಗಲೆ ಬಂದುಬಿಟ್ಟದೆ. ಇನ್ನು ಕಾಲು ಶತಮಾನದೊಳಗಾಗಿ ಈಗ ವಿದ್ಯುತ್ತು ಪ್ರಚಾರದಲ್ಲಿದ್ದಷ್ಟೆ ಅಣುಶಕ್ತಿ ಪ್ರಚಾರದಲ್ಲಿ ಬರುವ ಸಂಭವವಿದೆ. ಮಾನವ ಇತಿಹಾಸ ಪ್ರಾರಂಭದಿಂದಲೇ ಎನ್ನಬಹುದು, ವಿಜ್ಞಾನಿಗಳು ಶಕ್ತಿಗಳನ್ನು ಸಂಶೋಧಿಸುತ್ತಲೇ ನಡೆದಿರುವರು. ಅವರೀಗ ಅಣುಶಕ್ತಿಯನ್ನು ಸಂಶೋಧಿಸಿರುವರು. ಉಳಿದ ಶಕ್ತಿಗಳಂತೆ ಇದರ ಉಪಯೋಗವೂ ಜನಸಾಮಾನ್ಯಕ್ಕೆಲ್ಲ ಆಗಬೇಕಾದರೆ ಇನ್ನು ಕೆಲ ವರ್ಷ ಹಿಡಿಯಬಹುದು. ಆದರೆ ಈ ಸಂಶೋಧನೆಯಿನ್ನೂ ಕೊನೆಗೊಂಡಿಲ್ಲೆಂಬದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಕಾಸ್ಮಿಕ್ ಕಿರಣಗಳ ರಹಸ್ಯವನ್ನು ತಿಳಿದುಕೊಂಡು ವ್ಯವಹಾರದಲ್ಲಿ ಅದರ ಉಪಯೋಗವೆಂತಾಗಬಲ್ಲದೆಂಬದನ್ನು ಸಂಶೋಧಿಸುವಲ್ಲಿ ಮಾನವನ ಮೆದುಳು ತಲ್ಲೀನವಾಗಿದೆ. ಇಷ್ಟರಲ್ಲಿಯೇ ಅಣುಯುಗವು ಬಂದುಬಿಟ್ಟದೆ.

ಕಳೆದ ಅರ್ಧ ಶತಮಾನದಲ್ಲಿ ಆದ ಯಾವ ಸಂಶೋಧನೆಯೂ ಅಣುಶಕ್ತಿಯ ಸಂಶೋಧನೆಯಷ್ಟು ಕ್ರಾಂತಿಕಾರಕವಾಗಿದೆ ಮತ್ತು ಜಗತ್ತಿನಲ್ಲಿಯೆಲ್ಲ ವರ್ಗಗಳ ಚಿತ್ರವನ್ನು ವೇಧಿಸಿದೆಯೆಂದು ನನಗೆನಿಸುವದಿಲ್ಲ. ಐನ್‌ಸ್ಟೀನನು ಸಂಶೋಧಿಸಿದ ಸಾಪೇಕ್ಷತಾವಾದವು ಕಳೆದ ಎರಡು ಸಾವಿರ ವರ್ಷಗಳಲ್ಲಿ ವಿಜ್ಞಾನವು ಸಂಶೋಧಿಸಿದ ವಾದಗಳಿಗೆ ಬದ್ಧವಿರುದ್ಧವಾಗಿದೆಯೆಂದು ಬರ್ಟ್ರಾಂಡ ರಸ್ಸೆಲ್ಲರು ಅಭಿಪ್ರಾಯಪಟ್ಟಿರುವರು. ಅಣುಶಕ್ತಿಯ ತಾತ್ವಿಕ ತಳಹದಿಯು ಐನ್‌ಸ್ಟೀನನ ಸಾಪೇಕ್ಷತಾವಾದವನ್ನೇ ಅವಲಂಬಿಸಿದೆ. ಈ ಶಕ್ತಿಯ ಸಂಶೋಧನೆಯಿಂದ ಮಾನವನು ಈ ದಿಸೆಯಲ್ಲಿ ಮಾಡಬಹುದಾದ ಶೋಧವು ಮುಗಿದಂತಾಯಿತೆಂದು ಹೇಳಬಹುದು. ಒಂದು ಪೌಂಡು ವಿಕಿರಣಶೀಲ (ರೆಡಿಯೋ ಆ್ಯಕ್ಟಿವ್) ಯುರೇನಿಯಮ್ಮು ೧,೩೦,೦೦೦ ಟನ್ನು ಕಲ್ಲಿದ್ದಲಿಯ ಶಕ್ತಿಯನ್ನು ಕೊಡಬಲ್ಲದು. ನಿಮ್ಮ ಕಿಸೆಯಲ್ಲಿ ಒಂದು ಔಂಸ ಅಂದರೆ ಅರ್ಧ ಚಟಾಕದಷ್ಟು ಯುರೇನಿಯಂ ಇಟ್ಟುಕೊಂಡರೆ ೪,೦೦೦ ಟನ್ನು ಕಲ್ಲಿದ್ದಲಿಯನ್ನು ತೆಗೆದುಕೊಂಡು ಹೋದಂತೆಯೆ ಎಂದು ಹೇಳಬಹುದು.

ಅಣುವಿನ ವಿಚಾರವು ಬಹಳ ಹಳೆಯದು. ಜಗತ್ತಿನಲ್ಲಿಯ ಅತ್ಯಂತ ಸಣ್ಣದಾದ ಪದಾರ್ಥವನ್ನು ಸಂಸ್ಕೃತದಲ್ಲಿ ಕಣವೆಂದು ಪ್ರಾಚೀನ ಋಷಿಗಳೊಬ್ಬರು ಕರೆದರು. ಆದರೆ ಆ ಋಷಿಯ ಸಮಕಾಲೀನರು ಅವನನ್ನು ಅಪಹಾಸಮಾಡಿ ಕಣಾದ ಅಂದರೆ ಕಣಗಳನ್ನು ತಿನ್ನುವವ ಎಂದು ಕರೆದರು. ಆದರೆ ಆ ಅಣುವಿನಲ್ಲಿ ಪ್ರಚಂಡ ಶಕ್ತಿಯು ಹುದುಗಿದೆಯೆಂಬುದನ್ನು ಆಗ ಯಾರೂ ಬಗೆದಿರಲಿಲ್ಲ. ಶಾಸ್ತ್ರೀಯ ರೀತಿಯಿಂದ ಆ ಅಣುವಿನ ಸಂಶೋಧನ ನಡೆಸಿ ಅದರಿಂದ ಪ್ರಚಂಡ ಶಕ್ತಿಯನ್ನು ಉತ್ಪಾದಿಸಿ ಅದರ ಉಪಯೋಗ ಮಾಡಿಕೊಳ್ಳಬಹುದೆಂಬುದಾಗಿಯೂ ಯಾರೂ ಭಾವಿಸಿರಲಿಲ್ಲ.

ಶಕ್ತಿಯ ಉತ್ಪಾದನೆಗಾಗಿ ಪ್ರಾಚೀನ ಕಾಲದಿಂದಲೂ ಮನುಷ್ಯನು ಅಹರ್ನಿಶ ಶ್ರಮಿಸುತ್ತಿರುವನು. ನಿಸರ್ಗ ಶಕ್ತಿಯ ನಿಯಂತ್ರಣ ಮತ್ತು ಉಪಯೋಗವನ್ನು ಮಾನವನು ಮಾಡಿಕೊಳ್ಳುವನೆಂದೇ ಪಶುಗಳಿಗಿಂತ ಅವನು ಶ್ರೇಷ್ಠನು. ಮಾನವರಲ್ಲಿಯೂ ಪ್ರತ್ಯಕ್ಷವಾಗಿ ಆ ಶಕ್ತಿಯ ಉಪಯೋಗ ಮಾಡಿಕೊಳ್ಳುವವನು ಹೆಚ್ಚು ಶ್ರೇಷ್ಠನು. ಹೊಸ ಶಕ್ತಿಗಳ ಸಂಶೋಧನೆ ಮತ್ತು ಉಪಯೋಗದ ಜ್ಞಾನ ಹಾಗು ಅವಕ್ಕೆ ಆವಶ್ಯವಿದ್ದ ಉಪಕರಣಗಳ ಸಂಶೋಧನ ಇವುಗಳಲ್ಲಿಯೆ ಮಾನವನ ನಾಗರಿಕತೆ ಅಡಕವಾಗಿದೆಯೆಂದು ಹೇಳಬಹುದು.

ಮನುಷ್ಯನು ಇಂತು ಪ್ರಾಚೀನ ಕಾಲದಿಂದ ಸಂಶೋಧನೆ ನಡೆಸುತ್ತಿದ್ದರೂ ಮದ್ದಿನ ಸಂಶೋಧನೆ ೨೦೦೦ ವರುಷಗಳಿಗಿಂತ ಹಿಂದಿನದಾಗಿಲ್ಲ. ಮದ್ದು ಚೀನದಲ್ಲಿ ಮೊದಲು ಸಂಶೋಧಿಸಲ್ಪಟ್ಟಿತು. ಆದರೆ ಅಲ್ಲಿ ಪಟಾಕ್ಷಿ ಮೊದಲಾದ ಮನೋರಂಜಕ ವಸ್ತುಗಳ ಹೊರತು ಬೇರೆ ಯಾವುದಕ್ಕೂ ಅದರ ಉಪಯೋಗ ಮಾಡಿಕೊಂಡಿರಲಿಲ್ಲ. ೧೩ ನೇ ಶತಮಾನದಷ್ಟು ಇತ್ತೀಚೆಗೆ ಮಾತ್ರ ಸ್ಫೋಟಕವೆಂದು ಮದ್ದಿನ ಉಪಯೋಗ ಮಾಡಹತ್ತಿದರು. ಅನಂತರ ಬಂದೂಕುಗಳಿಗೆ ಮತ್ತು ವಿನಾಶಕ ಕಾರ್ಯಗಳಿಗಾಗಿ ಮದ್ದಿನ ಉಪಯೋಗ ಮಾಡಹತ್ತಿದರು. ಮುಂದೆ ೧೯ ನೇ ಶತಮಾನದಲ್ಲಿ ಉಗಿಯ ಶಕ್ತಿಯ ಉಪಯೋಗ ಪ್ರಾರಂಭವಾಯಿತು. ಅದಕ್ಕೂ ಇತ್ತೀಚೆ ಪೆಟ್ರೋಲಿಯಂದ ಉಪಯೋಗ ಸುರುವಾಯಿತು. ಔಷ್ಣಿಕ (Thermal) ಮತ್ತು ಜಲವಿದ್ಯುತ್ ಶಕ್ತಿಯ ಸಂಶೋಧನೆಯು ಸುಮಾರು ಮುಕ್ಕಾಲು ಶತಮಾನದಷ್ಟು ಇತ್ತೀಚಿನದೆಂದು ಹೇಳಬಹುದು. ಆದರೆ ಅದು ಉಗಿಗಿಂತ ಬಹಳ ಪ್ರಗತಿಪರವಾದುದೆಂಬಲ್ಲಿ ಸಂಶಯವಿಲ್ಲ. ವಿದ್ಯುತ್ತಿನ ಉಪಯೋಗ ಬಹಳ ಬೇಗವಾಗಹತ್ತಿದ್ದರಿಂದ ಮೊದಲಿಗಿಂತ ಒಡೆದು ಕಾಣುವಷ್ಟು ಭೇದ ತೋರಹತ್ತಿತು. ಅನಂತರ ಅಣುಶಕ್ತಿಯ ಶೋಧದಿಂದ ಶಕ್ತಿಯ ವಿಚಾರ ಮತ್ತು ಉಪಯೋಗದಲ್ಲಿ ಮಹತ್ವದ ಕ್ರಾಂತಿಯೆ ಆದಂತಾಯಿತು. ಐನ್‌ಸ್ಟೀನನು ಸಂಶೋಧಿಸಿದ $E = Mc^2$ ಸೂತ್ರದಿಂದ ನಿಸರ್ಗದ ಗುಪ್ತ ಸುಪ್ತ ಶಕ್ತಿಮಂದಿರವೇ ದೊರೆತಂತಾಯಿತು. ಸಾವಿರ ಟನ್ TNT (ಒಂದು ಭಯಂಕರ ಸ್ಫೋಟಕ ದ್ರವ್ಯ) ಯಿಂದ ಉತ್ಪನ್ನವಾಗುವಷ್ಟು ಶಕ್ತಿಯು ಮಳಲು, ಪ್ರಾಣವಾಯು ಅಥವಾ ಯುರೇನಿಯಂ ಅಥವಾ ಯಾವದೇ ಒಂದು ಔಂಸು ಪದಾರ್ಥದ ಗರ್ಭದಲ್ಲಿ ಇದೆಯೆಂದು ಈ ಸೂತ್ರದ ಅರ್ಥವಾಗುವದು.

ಆದರೆ ಈ ನೂತನ ಶಕ್ತಿಯೂ ವಿನಾಶಶಕ್ತಿಯೆಂದು ತಲೆಯೆತ್ತಿ ಮಾನವರನ್ನು ಭಯಭೀತರನ್ನಾಗಿ ಮಾಡಿತು. ಹತ್ತು ವರ್ಷಗಳ ಹಿಂದೆ ಹಿರೋಶಿಮಾ ದುರಂತದಿಂದ ಇದು ಪ್ರಸಿದ್ಧಿ ಹೊಂದಿತು. ಈ ದುರಂತದಿಂದ ೫೦ ಲಕ್ಷದಷ್ಟು ಜನ ಕಷ್ಟಕ್ಕೀಡಾಯಿತು. ಸುಂದರ ನಗರವು ಸ್ಮಶಾನದಂತೆ ವಧಸ್ಥಾನವಾಗಿ ಪರಿಣಮಿಸಿತು. ಆದರೆ ಈ ದುರಂತದಿಂದ ಮಾನವನ ಮನಸ್ಸಿನಲ್ಲಿ ಮಾತ್ರ ಒಳ್ಳೆ ಪ್ರತಿಕ್ರಿಯೆಯಾಗದಿರಲಿಲ್ಲ. ಈ ವಿನಾಶಕ ಶಕ್ತಿಯ ವಿರುದ್ಧ ಸ್ವತಃ ಐನಸ್ಟೀನನ ಮನಸ್ಸಿನಲ್ಲಿ ಪ್ರತಿಕ್ರಿಯೆಯಾದಂತೆ ಮಾನವ ಜನಾಂಗದ ಮನಸ್ಸಿನಲ್ಲಿಯೂ ಪ್ರತಿಕ್ರಿಯೆಯುಂಟಾಯಿತು. ಈ ವಿನಾಶಶಕ್ತಿಯನ್ನು ಸ್ವಾಗತಿಸಲು ಜಗತ್ತು ಸಿದ್ಧವಾಗಿಲ್ಲವೆಂದು ಐನ್‌ಸ್ಟೀನನು ಉದ್ಗಾರ ತೆಗೆದನು. ಮನುಷ್ಯನಲ್ಲಿ ಬುದ್ಧಿಯಿದ್ದರೂ ಜಾಣತನವಿಲ್ಲೆಂಬುದನ್ನು ನೋಡಿ ಅವನು ವಿಷಾದಿಸಿದನು. ಆದರೆ ಮುಂದೆ ಅಲ್ಪಾವಧಿಯಲ್ಲಿಯೆ ಈ ಅಣುಶಕ್ತಿಯನ್ನು ಮತ್ತು ವಿಕಿರಣಶೀಲ ಶಕ್ತಿಯನ್ನು ಶಾಂತಿಕಾರ್ಯಗಳಿಗಾಗಿ ಉಪಯೋಗಿಸಬಹುದೆಂಬುದನ್ನು ಕಂಡುಹಿಡಿಯಲಾಯಿತು. ವಸ್ತುತಃ ಶಕ್ತಿಯು ಒಳಿತೂ ಅಲ್ಲ ಕೆಡಕೂ ಅಲ್ಲ. ಎಲ್ಲ ಶಕ್ತಿಯೂ ಘಾತಕವೆಂದು ಬಗೆಯುವದು ನಿಜವಾಗಿ ಅಜ್ಞಾನವನ್ನು ಪ್ರದರ್ಶಿಸುತ್ತದೆ. ಅವಿವೇಕಿಗಳ ಕೈಯಲ್ಲಿಯಲ್ಲದೆ ಯಾವ ಶಕ್ತಿಯೂ ಘಾತಕವಾಗಲಾರದು. ಎರಡನೆಯವರಿಗೆ ಕೆಡಕು ಮಾಡಿದರೆ ತನಗೆ ಒಳಿತಾಗುತ್ತದೆಂಬ ತಪ್ಪು ತಿಳಿವಳಿಕೆಯಿಂದ ಪರರಿಗೆ ಕೆಡಕು ಮಾಡುವ ಮಾನವ ಪ್ರವೃತ್ತಿಯು ನಿಜವಾಗಿ ಘಾತಕವಾದುದು.

ಶಕ್ತಿಯ ಜ್ಞಾನದ ಜೊತೆಗೆ ಮಾನವನ ದುಷ್ಪ್ರವೃತ್ತಿಗಳನ್ನು ನಿಯಂತ್ರಿಸುವ ಆಧ್ಯಾತ್ಮಿಕ ಶಕ್ತಿಯ ಅಭಿವೃದ್ಧಿಯಾಗಬೇಕಾದುದು ಅವಶ್ಯವಾಗಿದೆ. ವಿನಾಶಕ್ಕಾಗಿ ಈ ಶಕ್ತಿಯ ಉಪಯೋಗವನ್ನು ಮಾಡಬಾರದೆಂದು ಮಾನವರಲ್ಲಿ ಆವಶ್ಯಕ ಸಂಸ್ಕೃತಿ ಅಭಿವೃದ್ಧಿಯಾದರೆ ಮಾತ್ರ ಅದನ್ನು ನಿಯಂತ್ರಿಸಬಹುದು. ಉಳಿದ ಯಾವದೇ ಯಾಂತ್ರಿಕ ಮತ್ತು ಪ್ರಾಕೃತಿಕ ನಿಯಂತ್ರಣದಿಂದ ಅಣು ಶಕ್ತಿಯನ್ನು ನಿಯಂತ್ರಿಸಲಾಗದು.

ಪರಸ್ಪರ ಅವಿಶ್ವಾಸ, ಭಯ ಭೀತಿ ಮೊದಲಾದ ಕಠಿಣ ಕಾಲವನ್ನು ಜಗತ್ತು ಕ್ರಮಿಸಬೇಕಾಯಿತು. ಯಾವದೇ ಕ್ಷಣದಲ್ಲಿ ಯುದ್ಧವು ಪ್ರಾರಂಭವಾಗಬಹುದೆಂಬ ಕಾಲವೂ ಇದ್ದಿತು. ಆದರೆ ಸುದೈವದಿಂದ ಆ ಭೀತಿಯ ಕಾಲ ಗತಿಸಿಹೋಗಿದೆ. ಇತ್ತೀಚೆ ಕೂಡಿದ್ದ ಜಿನೆವಾ ಪರಿಷತ್ತಿನಲ್ಲಿ ಇಂಥ ತಿಳಿಯಾದ ವಾತಾವರಣವು ಕಂಡುಬಂದಿತು. ಈ ಪರಿಷತ್ತಿನಲ್ಲಿ ೧,೪೦೦ ಅಣುಶಾಸ್ತ್ರಜ್ಞರು ಮತ್ತು ೮೦೦ ನಿರೀಕ್ಷಕರು ಬೇರೆ ಬೇರೆ ೭೩ ರಾಷ್ಟ್ರಗಳಿಂದ ಸಮ್ಮಿಲಿತರಾಗಿದ್ದರು. ಅಣುಶಕ್ತಿಯನ್ನು ವಿಧಾಯಕ ಶಾಂತಿಕಾರ್ಯಗಳಿಗಾಗಿ ಎಂತು ಉಪಯೋಗಿಸಬಹುದೆಂಬ ಬಗ್ಗೆ ಈ ಪರಿಷತ್ತಿನಲ್ಲಿ ಪರಸ್ಪರ ವಿಚಾರ ವಿನಿಮಯ ನಡೆಯಿತು. ಈ ಪರಿಷತ್ತು ಅಣುಶಕ್ತಿಯ ರಹಸ್ಯ ಸ್ಫೋಟಗೊಳಿಸಿ ಜಗತ್ತಿನಲ್ಲಿಯ ಅಣುಜ್ಞಾನವೆಲ್ಲ ಸಂಗೃಹೀತವಾಗಿ ಭಯಭೀತವಾದ ಮಾನವ ಜನಾಂಗದಲ್ಲಿ ನವ ಆಶೋದಯವನ್ನುಂಟುಮಾಡಿತು. ಆ ಪರಿಷತ್ತಿನಿಂದ ಹೊರಹೊಮ್ಮಿದ ಕೆಲವು ಮಹತ್ವದ ಸಂಗತಿಗಳಿಂತಿವೆ:— ಪರಸ್ಪರ ಅವಿಶ್ವಾಸ ತಾಳುವದಕ್ಕಾಗಿಯೇ ತಮ್ಮ ಜನ್ಮವಾಗಿದೆಂದು ಭಾವಿಸಿದ್ದ ಕೆಲ ರಾಷ್ಟ್ರಗಳಲ್ಲಿ ಮುಕ್ತ ಮನಸ್ಸಿನಿಂದ ವಿಚಾರ ವಿನಿಮಯ ನಡೆಯಿತು. ವಿಕಿರಣಕ್ರಿಯೆಯಿಂದ ಭಾವಿ ಸಂತಾನದಮೇಲೆ ದುಷ್ಪರಿಣಾಮಗಳಾಗುವ ಸಂಭವವಿದೆಂಬ ಬಗ್ಗೆ ಹೆಚ್ಚು ಜಾಗ್ರತರಾದರು. ಜಗತ್ತಿನಲ್ಲಿ ಅಣುಶಕ್ತಿಯ ಅನಂತ ಆಕರಗಳಿವೆಂಬ ಬಗ್ಗೆ ಎಲ್ಲರಿಗೂ ಮನವರಿಕೆಯಾಯಿತು. ಇನ್ನು ಐದು ವರುಷಗಳಲ್ಲಿ ತೀರ ಹಿಂದುಳಿದ ದೇಶಗಳಲ್ಲಿ ಕೂಡ ಪರಿಣಾಮಕಾರಿ ಅಣುಶಕ್ತಿಯ 'ರಿಯಾಕ್ಟರ' ಉಪಕರಣಗಳನ್ನು ಪೂರೈಸುವಸಂಭವವಿದೆಯೆಂದು ತಿಳಿಯಿತು. ಬೇರೆಬೇರೆ ದೇಶಗಳು ಉಪಯೋಗಿಸಿದ ವಿವಿಧ ವಿಧಾನಗಳಿಂದ ಒಂದೇ ಬಗೆಯ ಪರಿಣಾಮಗಳುಂಟಾದವೆಂಬುದು ಕಂಡುಬಂದಿತು. ಇದರಿಂದ ಈ ವಿಷಯದಲ್ಲಿ ಗೌಪ್ಯವನ್ನಿಡುವದು ನಿರರ್ಥಕವೆಂದು ಸಿದ್ಧವಾಯಿತು.

ವಿಕಿರಣಶೀಲ "ಐಸೋಟೋಪು''ಗಳನ್ನು ವಿಜ್ಞಾನ, ವೈದ್ಯಕೀಯ, ಒಕ್ಕಲತನ ಮತ್ತು ಉದ್ಯಮಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉಪಯೋಗಿಸಬಹುದೆಂದು ಇದೀಗ ಗೊತ್ತಾಗಿದೆ. ಮುಂದಿನ ಇಪ್ಪತ್ತು ವರುಷಗಳಲ್ಲಿ ಅಣುಗಳ ಸಂಯೋಗದಿಂದ (Fusion) ಉತ್ಪಾದನೆಯಾಗುವ ಶಕ್ತಿಯ ಉಪಯೋಗವನ್ನು ಶಾಂತಿಕಾರ್ಯಗಳಿಗಾಗಿ ಮಾಡಬಹುದೆಂದು ಬಹುಜನರು ಅಭಿಪ್ರಾಯಪಡುತಿರುವರು. ಇದು ಅತ್ಯಂತ ಮಹತ್ವದ ಮಾತಾಗಿದೆ. ಅಣುಭೇದನ (Fission) ದಿಂದ ದೊರೆಯುವ ಶಕ್ತಿಯ ನೂರ್ಮಡಿ ಶಕ್ತಿಯು ಇದರಿಂದ ಹುಟ್ಟುವದು, ಅಣುಶಕ್ತಿಯ ಭೇದನದಿಂದ ಆಟಂಬಾಂಬಿನ ಶಕ್ತಿಯು ಉತ್ಪಾದನವಾಗುತ್ತಿದ್ದರೆ ಅಣುಸಂಯೋಗದಿಂದ ಜಲಜನಕ ಬಾಂಬಿನ ಶಕ್ತಿ ಉತ್ಪಾದನವಾಗುತ್ತದೆ. ಅಣುಭೇದನವು ಜಲಜನಕ ಬಾಂಬಿನಲ್ಲಿ ಕೇವಲ ಸ್ಫೋಟ ಮಾಡುವ ಬತ್ತಿಯಂತಿದೆ. ಜಲಜನಕ ಬಾಂಬಿಗೆ ಬೇಕಾಗುವ ಕಚ್ಚಾ ಮಾಲು ಎಲ್ಲಿ ಬೇಕಾದಲ್ಲಿ ಅನಂತ ಪ್ರಮಾಣದಲ್ಲಿ ಸಿಕ್ಕುವದು. ಸಾಗರ ಬತ್ತಿ ಹೋದರೆ ಮಾತ್ರ ಅದರ ಕೊರತೆ!

ಅಮೇರಿಕೆಯ ಅಣುಶಕ್ತಿ ಆಯೋಗದ ಹಿಂದಿನ ಅಧ್ಯಕ್ಷರಾದ ಶ್ರೀ. ಗಾರ್ಡನ ಡೀನ ಇವರು ಇಡೀ ಏಶಿಯಾದಲ್ಲಿ ಭಾರತದಲ್ಲಿಯೇ ಶಾಂತಿ ಕಾರ್ಯಗಳಿಗಾಗಿ ಅಣುಶಕ್ತಿಯ ಅತಿದೊಡ್ಡ ಕಾರ್ಯಕ್ರಮಗಳಿವೆಯೆಂದು ಪ್ರಶಂಸೋದ್ಗಾರಗಳನ್ನು ತೆಗೆದಿರುವರು. ಭಾರತವು ೧೯೪೮ ರಿಂದಲೆ ಅಣುಶಕ್ತಿ ಕ್ಷೇತ್ರದಲ್ಲಿ ತನ್ನ ಅಳಿಲು ಸೇವೆಯನ್ನು ಸಲ್ಲಿಸುತಿರುವುದು. ಸುಮಾರು ೧೮೦ ಭೂಗರ್ಭ

ಶಾಸ್ತ್ರಜ್ಞರು, ೧೨೦ ವಿಜ್ಞಾನಿಗಳು ಮತ್ತು ನೂರಾರು ಜನ ಕಾರ್ಯಕರ್ತರು ಈ ಕ್ಷೇತ್ರದಲ್ಲಿ ಬಗೆಬಗೆಯ ಸಮಸ್ಯೆಗಳ ಪರಿಹಾರವನ್ನು ಕಂಡುಹಿಡಿಯುತ್ತಿರುವರು. ಆಣವಿಕ ಸಾಮುಗ್ರಿಗಳ ಸಂಶೋಧನೆಯಿಂದ ಆಟಮಿಕ್ 'ರಿಆ್ಯಕ್ಟರ' ಸಿದ್ಧಮಾಡುವವರೆಗಿನ ಎಲ್ಲ ಬಗೆಯ ಸಂಶೋಧನ ಮಾಡಿರುವರು. ನಮ್ಮ ಶ್ರೇಷ್ಠ ವಿಜ್ಞಾನಿಯಾದ ಡಾ. ಭಾಭಾ ಇವರು, ಎರಡು ದಶಕಗಳಲ್ಲಿ ಅಣುಗಳ ಸಂಯೋಗದಿಂದ ಉತ್ಪಾದನವಾಗುವ ಶಕ್ತಿಯ ಉಪಯೋಗವನ್ನು ಶಾಂತಿಕಾರ್ಯಗಳಿಗಾಗಿ ಮಾಡುವದು ಶಕ್ಯವಾಗುವದೆಂದು ಘಂಟಾಘೋಷವಾಗಿ ಸಾರಿ ರಹಸ್ಯ ಸ್ಫೋಟ ಮಾಡಿದರು. ಡಾಕ್ಟರ ಭಾಭಾರವರು ಜಿನೆವಾ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಭಾರತದಲ್ಲಿ ಆಣುವಿಕ ಕ್ಷೇತ್ರದಲ್ಲಿ ನಡೆದ ಪ್ರಚಂಡ ಪ್ರಯತ್ನಗಳಿಗೆಲ್ಲ ಡಾ. ಭಾಭಾರವರು ಅಗ್ರಣಿಗಳಾಗಿರುವರು. ಮಲಬಾರದಲ್ಲಿ ಜಗತ್ತಿನಲ್ಲಿ ಬೇರೆ ಯಾವ ಕಡೆಗೂ ಸಿಕ್ಕದಿದ್ದಷ್ಟು ಪ್ರಚಂಡ ಪ್ರಮಾಣದಲ್ಲಿ ಥೋರಿಯಂ ಹಾಗು ಮೊನಜೈಟ್ ಮಳಲು ಸಿಕ್ಕುವದು. ಬಿಹಾರದಲ್ಲಿ ಬೇರಿಲ್ಲ ಮತ್ತು ಉಳಿದ ಯುರೇನಿಯಂ ಅದುರುಗಳು ದೊಡ್ಡ ಪ್ರಮಾಣದಲ್ಲಿ ಸಿಕ್ಕುವವೆಂದು ತಿಳಿಯುತ್ತದೆ. ಕಾಸ್ಮಿಕ್ ಕಿರಣಗಳು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಭಾರತವು ಸಂಶೋಧನೆ ನಡೆಸಿದೆ. ಅವುಗಳ ಉಪಯೋಗದ ಬಗ್ಗೆಯೂ ಸಂಶೋಧನೆ ನಡೆದಿದೆ.

ಈ ನವ-ಮಾನವೀಯ ಚಟುವಟಿಕೆಗಳಲ್ಲಿ ಕೇವಲ ವಿಜ್ಞಾನಿಗಳಷ್ಟೇ ಕಾರ್ಯನಿರತರಾದರೆ ತೀರಿತೆಂದು ತಿಳಿಯಲಾಗದೆಂಬುದು ಸುಸ್ಪಷ್ಟವಿದೆ. ಪ್ರಗತಿಪರ ಜಗತ್ತಿನೊಡನೆ ಸಾಗಿ ಜ್ಞಾನ ಸಂಗ್ರಹದಲ್ಲಿ ನಮ್ಮ ಕಾಣಿಕೆಯನ್ನು ನೀಡಬೇಕಾದರೆ ಭಾರತದಲ್ಲಿಯ ಪ್ರತಿಯೊಬ್ಬ ನಾಗರಿಕನೂ ಅಣುಶಕ್ತಿಯ ಉಪಯೋಗದ ಜ್ಞಾನದ ಪ್ರಗತಿಯಲ್ಲಿ ಪ್ರತ್ಯಕ್ಷವಾಗಿ ಆಸ್ಥೆಯನ್ನು ತಾಳಬೇಕು. ವಿಜ್ಞಾನವು ಆಧುನಿಕ ಯುಗದ ಸಂಕೇತದಂತಿದ್ದು ಮಾನವ ಚಟುವಟಿಕೆಯ ಯಾವದೇ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಬೇಕಾದರೆ ವೈಜ್ಞಾನಿಕ ಮನೋವೃತ್ತಿಯು ಅವಶ್ಯವೆಂಬ ಮಾತು ನಿಃಸಂಶಯವಾದುದೆಂದು ಎಲ್ಲರೂ ತಿಳಿಯಬೇಕು. ಪ್ರಯೋಗ ಮಾಡಿ ನೋಡಲು ಸದಾ ಸಿದ್ಧರಿರುವದು ಮತ್ತು ಪ್ರಯೋಗದ ನಂತರ ಸಿದ್ಧವಾದುದನ್ನು ಒಪ್ಪಲು ತಯಾರಾಗುವದು ಶಾಸ್ತ್ರೀಯ ಮನೋವೃತ್ತಿಯ ಮುಖ್ಯ ಲಕ್ಷಣವಾಗಿದೆಂಬುದನ್ನು ಯಾರೂ ಮರೆಯಬಾರದು.

ವೈಜ್ಞಾನಿಕ ಜಗತ್ತಿನಲ್ಲಿ ಅಂಧ ಶ್ರದ್ಧೆಗಾಗಲಿ, ದೈವವಾದಕ್ಕಾಗಲಿ, ಆಕಸ್ಮಿಕತೆಗಾಗಲಿ ಇನ್ನು ಮುಂದೆ ಯಾವದೇ ಬಗೆಯ ಅವಕಾಶವಿಲ್ಲ.

ಭಾರತವು ತನ್ನ ಶಾಂತಿ ಧೋರಣೆಯಿಂದ ಜಗತ್ತಿನಲ್ಲಿಯ ಘರ್ಷಣೆಯನ್ನು ಶಮನಗೊಳಿಸಲು ಈಗಾಗಲೆ ಬಹಳ ಮಟ್ಟಿಗೆ ಸಹಾಯಕವಾಗಿದೆ. ಆದರೆ ವಿಜ್ಞಾನ ಕ್ಷೇತ್ರದಲ್ಲಿ ಅದು ಹಿಂದೆ ಬಿದ್ದರೆ ಮತ್ತು ಶಾಂತಿ ಸಾಧನ ಕಾರ್ಯಗಳಲ್ಲಿ ಆಣವಿಕ ಶಕ್ತಿಯ ಉಪಯೋಗ ಮಾಡಿಕೊಳ್ಳದಿದ್ದರೆ ಅದು ದಾರಿದ್ರ್ಯ, ಬೇನೆ ಬೇಸರಿಕೆಗಳಿಂದ ಬಳಲಿ ಆದರ ಜೀವನ ಮಟ್ಟವು ಬಹಳ ಕೆಳಗಿಳಿಯುವದು. ಸಸ್ಯಗಳ ಅಭಿವೃದ್ಧಿ ಸಾಧಿಸುವಲ್ಲಿ ಅಣುಶಕ್ತಿಯಿಂದ ಮತ್ತು ವಿಕಿರಣಕ್ರಿಯೆಯಿಂದ ಬಹಳ ಸಹಾಯವಾಗುವದಿದೆಯೆಂದು ಈಗಾಗಲೇ ಸಿದ್ಧವಾಗಿದೆ. ಆಹಾರ ಪದಾರ್ಥಗಳನ್ನು ಹೆಚ್ಚಿಸುವದು ಮತ್ತು ಸಸ್ಯಗಳಿಗೆ ತಗಲಬಹುದಾದ ಕೀಟ ಮೊದಲಾದವುಗಳನ್ನು ತಡೆಯುವದು ಅದರಿಂದ ಶಕ್ಯವಾಗಬಹುದು. ಅಣುಶಕ್ತಿಯ ಉತ್ಪಾದನೆ ಮತ್ತು ಉಪಯೋಗವು ಇನ್ನಷ್ಟು ಕಡಿಮೆ ವೆಚ್ಚದ್ದು ಮತ್ತು ಎಲ್ಲರಿಗೂ ಸಿಕ್ಕುವಂತಹದು ಆದರೆ ಔದ್ಯಮಿಕ ಕ್ಷೇತ್ರದಲ್ಲಿ ನಾವು ಕ್ರಾಂತಿಯನ್ನೆ ಸಾಧಿಸಬಹುದು. ಇನ್ನು ಕೆಲಕಾಲದಲ್ಲಿಯೇ ವಿದ್ಯುದಣು ಶಾಸ್ತ್ರದೊಡನೆ (Electronics) ಅಣುಬೀಜ ಶಾಸ್ತ್ರವು (Nucleonics) ಸ್ಪರ್ಧಿಸುವಂತೆ ಅದು ಅಭಿವೃದ್ಧಿ ಹೊಂದುತ್ತದೆ.

ವಿಜ್ಞಾನದ ವಿವಿಧ ಕ್ಷೇತ್ರದಲ್ಲಿ ನಡೆದ ಈ ಸಂಶೋಧನೆಯ ಪ್ರಗತಿಯ ಬಗ್ಗೆ ಭಾರತೀಯರೆಲ್ಲರಿಗೆ ಪರಿಜ್ಞಾನವಿರುವದು ಅವಶ್ಯವಾಗಿದೆ. ಅಂದರೆ ಈ ಪ್ರಗತಿಯ ಮಹತ್ವ ಅವರಿಗೆ ಗೊತ್ತಾಗಿ ವಿಜ್ಞಾನಿಗಳ ಪ್ರಯತ್ನಗಳಿಗೆ ಅವರು ಬೆಂಬಲ ನೀಡಬಲ್ಲರು. ಭಾರತವು ಸ್ವರಾಜ್ಯದ ಕನಸು ಕಾಣುತ್ತಿದ್ದಿತು. ಅದಿಂದು ಅವರಿಗೆ ನನಸಾಗಿದೆ. ಜಗತ್ತು ಜಾಗತಿಕ ಶಾಂತಿಯ ಕನಸು ಕಾಣುತ್ತಿದೆ. ಅದೂ ನನಸಾಗಬಲ್ಲದು. ಮಾನವ ಜನಾಂಗವು ಶಾಂತಿ ಕಾರ್ಯಗಳಿಗಾಗಿ ಅಣುಶಕ್ತಿಯ ಉಪಯೋಗ ಮಾಡಬೇಕೆಂದು ಬಯಸುತ್ತದೆ. ಹಾಗೆ ಮಾಡಲು ಅದು ಸಮರ್ಥವಾಗುವದು. ಆದರೆ ಭಾರತವು ಇದೆಲ್ಲದರ ಬಗ್ಗೆ ಸದಾ ಜಾಗ್ರತವಾಗಿದ್ದು ಮಾನವ ಪ್ರಗತಿಯಲ್ಲಿ ತನ್ನ ಪಾತ್ರವನ್ನು ವಹಿಸಲು ಸಿದ್ಧವಾಗಬೇಕಾದುದು ಅತ್ಯವಶ್ಯವಾಗಿದೆ.



ಗೀತೆ ಮತ್ತು ನಿರಹಂಕಾರ

ಗೀತೆಯು ಮೋಹನುಗ್ನನಾದ ಮನುಷ್ಯನಿಗೆ ಬೋಧಿಸುವ ಮುಖ್ಯ ತತ್ತ್ವವೇನು? ಅದೇ ನಿರಹಂಕಾರ. "ಯಥೇಚ್ಛಸಿ ತಥಾ ಕುರು" ಎಂದು ಕೃಷ್ಣನು ಅರ್ಜುನನಿಗೆ ಹೇಳಿದಾಗ ಅವನು ಅರ್ಜುನನಿಗೆ ಕರ್ಮ ಸ್ವಾತಂತ್ರ್ಯವನ್ನಿತ್ತನೆಂದು ಅರ್ಥವಲ್ಲ; ತಾನು ಈಶ್ವರೇಚ್ಛೆಯ ಸಾಧನ ವೆಂದು ಮನವರಿತು ಯುದ್ಧ ಮಾಡುವ ಸಂದರ್ಭ ದೊರೆತರೂ ಇನ್ನೂ ಸಂಶಯಪಡುವದನ್ನು ನೋಡಿ ಅಹಂಕಾರನೂಢನಾದ ಅರ್ಜುನನ ಬಗ್ಗೆ ಆಡಿದ ಮಾತಾಗಿದೆ.

ಲೇಖಕರು : ಶ್ರೀ ವೆಂಕಟರಾವ ನಾಯಕ

ಶ್ರೀಮದ್ಭಗವದ್ಗೀತೆಯ ಅಭ್ಯಾಸದಿಂದ ಆಗುವ ಆನಂದವಾಗಲಿ ಶಾಂತಿಸಮಾಧಾನ ಗಳಾಗಲಿ ಅಸ್ವಾದ್ಯಶವಾದುವೆಂಬ ಅನುಭವವು ಳ್ಳವರಿಗೆ ಅದರ ಮಹತ್ವವನ್ನು ವಿವರಿಸಿ ಹೇಳಬೇಕಾಗಿಲ್ಲ. ಮಾನವನ ಅನೇಕ ಸಮಸ್ಯೆಗಳಿಗೆ ಅತ್ಯಂತ ಸುಲಭವಾದ ಪರಿಹಾರೋಪಾಯವನ್ನು ಗೀತೆಯು ಸೂಚಿಸುತ್ತದೆ. ಆದುದರಿಂದಲೇ ಅದು ಒಂದು ಮಹತ್ವದ ಸ್ಥಾನವನ್ನು ಜೀವನದರ್ಶನ ದಲ್ಲಿಯೂ ಜೀವನವಿಜ್ಞಾನದಲ್ಲಿಯೂ ಪಡೆದಿದೆ. ಮನುಷ್ಯಬುದ್ಧಿಯು ಕ್ಷುದ್ರವಾದ ತಾತ್ಕಾಲಿಕ ಅನುವು ಆಪತ್ತುಗಳಿಂದ ಮೋಹವಶವಾದಾಗ ಅಥವಾ ಇನ್ನಾವ ಬಗೆಯ ಮಾಲಿನ್ಯದಿಂದ ಅದು ವ್ಯಾಪ್ತವಾದಾಗ ಸಾಮಾನ್ಯವಾಗಿ ಸಮಸ್ಯೆಯ ಯಥಾರ್ಥ ಸ್ವರೂಪವನ್ನು ಅರಿತುಕೊಳ್ಳಲು ಅದು ಅಸಮರ್ಥವಾಗುವದು. ಇದರ ಒಂದು ನಿದರ್ಶನವೇ ಅರ್ಜುನನ ಸಮಸ್ಯೆಯಲ್ಲಿ ನಮಗೆ ಕಂಡುಬರುತ್ತದೆ. ಧರ್ಮವಾವುದು? ಅಧರ್ಮ ವಾವುದು? ಎಂಬ ಪ್ರಶ್ನೆಗಿಂತ ಸ್ವಕರ್ತವ್ಯವನ್ನು ಯಾವ ಬುದ್ಧಿಯಿಂದ, ಯಾವ ಭಾವನೆಯಿಂದ ಮಾಡಬೇಕೆಂಬ ಸಮಸ್ಯೆಯ ವಿವೇಚನೆಯು ಶ್ರೀಮದ್ಭಗವದ್ಗೀತೆಯಲ್ಲಿ ಬಂದಿದೆಯೆಂದು ಅದರ ಆಮೂಲಾಗ್ರ ಪರಿಶೀಲನೆಯಿಂದ ಅರಿತು ಕೊಳ್ಳಬಹುದು. ಶ್ರೀ ಅರವಿಂದರು ಹೇಳಿದಂತೆ "ಗೀತೆಯು ವಾದವಿವಾದದ ಒಂದು ಶಸ್ತ್ರವಲ್ಲ; ಆಧ್ಯಾತ್ಮಿಕ ಸತ್ಯ ಅನುಭವಗಳ ಲೋಕದ ಮಹಾ ದ್ವಾರವದು. ಮತ್ತು ಅದು ನಮಗೆ ಮಾಡಿ ಕೊಡುವ ದರ್ಶನವು ಆ ಶ್ರೇಷ್ಠಲೋಕದ ಎಲ್ಲ ಪ್ರದೇಶಗಳನ್ನು ವ್ಯಾಪಿಸಿರುತ್ತದೆ." ಆದುದ ರಿಂದಲೇ, ಕರ್ಮ, ಜ್ಞಾನ, ಭಕ್ತಿಗಳ ಸಮನ್ವಯ ವನ್ನು ಅದರಲ್ಲಿ ಕಾಣಬಹುದು.

ಆದರೆ ಈಗ ವಿಚಾರ ಮಾಡಬೇಕಾಗಿರುವ ವಿಷಯವು ಈ ಸಮುಚ್ಚಯವಾಗಲಿ ಸಮನ್ವಯ ವಾಗಲಿ ಅಲ್ಲ. ಗೀತೆಯಲ್ಲಿ ಆದಿಯಿಂದ ಅಂತ್ಯದ ವರೆಗೆ ಓತಪ್ರೋತವಾಗಿ ತುಂಬಿರುವ ಮಹಾ ತತ್ತ್ವವು ಯಾವುದು? ಅಥವಾ ಅರ್ಜುನನಿಗೆ ಶ್ರೀಕೃಷ್ಣನು ಮಾಡಿದ ಉಪದೇಶದಲ್ಲಿ ಅರ್ಜುನನು ಯಾವ ಬುದ್ಧಿಯಿಂದ ಹಾಗು ಯಾವ ಭಾವನೆಯಿಂದ ಸ್ವವಿಹಿತಕರ್ಮಾನುಷ್ಠಾನ ವನ್ನು ಮಾಡಿದರೆ ಪಾಪಿಯಾಗಲಾರನು? ಎಂಬ ಅಂಶದ ವಿಚಾರವು ಮಹತ್ವದ್ದಾಗಿದೆ. ಇದನ್ನೇ ಇನ್ನೊಂದು ಬಗೆಯಲ್ಲಿ ಹೀಗೆ ಹೇಳಬಹುದು. ಅರ್ಜುನನು ಶಸ್ತ್ರಸಂನ್ಯಾಸವನ್ನು ಮಾಡಿ ಯುದ್ಧ ವನ್ನು ಮಾಡುವದಿಲ್ಲೆಂದು ಹೇಳಿ ಕೈದುಗಳನ್ನು ಕೆಳಗಿಟ್ಟು ಕುಳಿತಾಗ ಶ್ರೀಕೃಷ್ಣನು ಅರ್ಜುನನ ಯಾವ ಮನೋಭಾವವನ್ನು ಆಕ್ಷೇಪಿಸಿ ಗೀತಾ ಶಾಸ್ತ್ರವನ್ನು ಉಪದೇಶಿಸಲಿಕ್ಕೆ ಅಣಿಯಾದನು? ಎಂಬುದು ವಿಚಾರಣೀಯವಾದ ಪ್ರಶ್ನೆ. ಸಮ ಸ್ಯೆಯ ಈ ಸ್ವರೂಪವನ್ನು ಅರಿತುಕೊಂಡು ಕೊನೆಗೆ ಅರ್ಜುನನಿಗೆ ಮನವರಿಕೆ ಮಾಡಿಕೊಟ್ಟ ತತ್ತ್ವವನ್ನು ಶ್ರೀಕೃಷ್ಣನು ಯಾವ ಶಬ್ದಗಳಲ್ಲಿ ಸಂಗ್ರಹಿಸಿರುವನು? ಹಾಗೆಯೆ ಅರ್ಜುನನಾದರೂ ಶ್ರೀಕೃಷ್ಣನಿಂದ ಸಂಗೃಹೀತವಾದ ಆ ತತ್ತ್ವವನ್ನು ತಿಳಿದುಕೊಂಡು 'ಕರಿಷ್ಯೇ ವಚನಂ ತವ' ಎಂದು ಆಡಿದ ಮಾತಿನಲ್ಲಿ ಅಡಗಿರುವ ರಹಸ್ಯವೇನು? ಎಂಬ ಅಂಶಗಳನ್ನು ಉಪಕ್ರಮ ಉಪಸಂಹಾರ ಗಳ ಸಮನ್ವಯದಿಂದ ತಿಳಿದ ಮಟ್ಟಿಗೆ ಚೆನ್ನಾಗಿ ನಿರೂಪಿಸುವದು ಮುಖ್ಯ ಉದ್ದೇಶವಾಗಿದೆ.

ಈ ದೃಷ್ಟಿಯಿಂದ ಆಲೋಚನೆಯನ್ನು ಮಾಡುವ ಮುನ್ನ ಅರ್ಜುನನು ದಿಙ್ಮೂಢನಾದ ಪ್ರಸಂಗದ ಸರಿಯಾದ ಚಿತ್ರವನ್ನು ಗಮನದಲ್ಲಿಟ್ಟು ಕೊಳ್ಳುವದೊಳಿತು. ಕುರುಕ್ಷೇತ್ರದಲ್ಲಿ ಕೌರವ ಪಾಂಡವ ಸೇನೆಗಳು ಸಮ್ಮಿಲಿತವಾದ ಸಂದರ್ಭ ದಲ್ಲಿ ಸ್ವಬಾಂಧವರನ್ನು ಕೊಂದು ಗಳಿಸುವ ರಾಜ್ಯ ದಿಂದೇನು ಪ್ರಯೋಜನ? ಅದಕ್ಕಿಂತ ಗುರು ಗಳನ್ನು ಬಾಂಧವರನ್ನು ಕೊಲ್ಲದೆ ಭಿಕ್ಷಾಟನದಿಂದ ಬದುಕಿದರೆ ತಪ್ಪೇನು? ಎಂಬ ಶಂಕೆಗಳನ್ನೆತ್ತಿ ಇವು ಗಳಲ್ಲಿ ಯಾವುದು ಶ್ರೇಯಸ್ಕರ: ಭಿಕ್ಷಾಟನವೋ ಯುದ್ಧವೊ? ಎಂಬುದನ್ನು ನಿಶ್ಚಿತವಾಗಿ ಹೇಳ ಬೇಕೆಂದು "ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಂ" ಎಂದು ಅರ್ಜುನನು ಶ್ರೀಕೃಷ್ಣನನ್ನು ಪ್ರಾರ್ಥಿಸಿಕೊಂಡನೆಂಬುದು ಉಪೇಕ್ಷಣೀಯ ವಲ್ಲ. ಈ ಸಂದರ್ಭದ ಚಿತ್ರವನ್ನು ಶ್ರೀ ಅರವಿಂದರು ಬಹಳ ಸುಂದರವಾಗಿ ಕೊಟ್ಟಿರುವರು. "ಭಗವಾನ್ ಶ್ರೀಕೃಷ್ಣನು ಸಾರಥಿ; ಅರ್ಜುನನು ರಥಿಕ. ಆಧ್ಯಾತ್ಮಿಕವಾಗಿ ಅರ್ಥಪೂರ್ಣವಾದ ಮೂರು ಮಾತುಗಳು ಗೀತೆಯಲ್ಲಿ ನಿಜವಾಗಿ ಮುಖ್ಯವಾಗಿವೆ. ಅವು ಯಾವುವೆಂದರೆ, ಗುರುವಿನ ದೈವೀಸ್ವರೂಪ, ಶಿಷ್ಯನೊಡನೆ ಅವನಿಗಿರುವ ಸಹಜವಾದ ಸಂಬಂಧ ಹಾಗು ಉಪದೇಶದ ಪ್ರಸಂಗ. ಗುರುವೋ ಸಾಕ್ಷಾತ್ ಪರಮಾತ್ಮನು- ಅವತಾರವನ್ನೆತ್ತಿ ಬಂದ ಶ್ರೀಕೃಷ್ಣ. ಶಿಷ್ಯನೋ ಆ ಯುಗದ ಪ್ರಾತಿನಿಧಿಕ ಮಾನವ, ಮತ್ತು ಶ್ರೀಕೃಷ್ಣನ ಸಖ ಹಾಗು ಆತನ ಪ್ರೀತಿಪಾತ್ರ ಸಾಧನ. ಅರ್ಜುನ ಮತ್ತು ಕೃಷ್ಣ-ಒಬ್ಬ ಮಾನವ ಇನ್ನೊಬ್ಬ ದೇವ. ಹೀಗಿದ್ದರೂ ಅರ್ಜುನನಿಗೆ ಗೀತೆಯ ಆರಂಭದಲ್ಲಿ ಪರಮಾತ್ಮನ ನಿಮಿತ್ತ ಮಾತ್ರನು ತಾನೆಂಬ ವಿಷಯದ ಜ್ಞಾನವು ಸಂಪೂರ್ಣವಾಗಿ ಆಗಿಲ್ಲ. ಆದುದರಿಂದ ಅವನು ದಿಙ್ಮೂಢನಾಗಿದ್ದಾನೆ. ಅರ್ಥಾತ್ ಕುರುಪಾಂಡವ ಯುದ್ಧದಲ್ಲಿ ಅಡಗಿರುವ ದೈವೀ ಉದ್ದೇಶದ ರಹಸ್ಯವನ್ನು ಶ್ರೀಕೃಷ್ಣನೊಬ್ಬನೇ ಬಲ್ಲನು. ಅರ್ಜು ನನ ಕಣ್ಣೆದುರಿನಲ್ಲಿ ಆರಂಭದಲ್ಲಿ ಕಂಡುದು ಸ್ವಬಾಂಧವರ ರಕ್ತಪಾತದ ಸ್ಥೂಲದೃಶ್ಯವು ಮಾತ್ರ. ಈ ರಕ್ತಪಾತವನ್ನು ತಪ್ಪಿಸಲು ತಾನು ಸಮರ್ಥ ನೆಂಬ ಭ್ರಮೆಗೆ ಆತನು ಒಳಗಾಗಿರುವನು. ಅಂತೆಯೆ ಅವನು ಎರಡನೆಯ ಅಧ್ಯಾಯದ ಏಳನೆಯ ಶ್ಲೋಕದಲ್ಲಿ "ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಂ" ಎಂದು ಪ್ರಾರ್ಥಿಸಿ ಕೊಂಡು ಶ್ರೀಕೃಷ್ಣನು ಆತನ ಪ್ರಶ್ನೆಗೆ ಉತ್ತರ ವನ್ನು ಕೊಡುವ ಮುನ್ನವೇ ಅಂದರೆ ಶ್ರೇಯಸ್ಕರ ವಾದುದಾವುದೆಂಬುದನ್ನು ಸ್ಪಷ್ಟವಾಗಿ ತಿಳಿಸುವ ಪೂರ್ವದಲ್ಲಿಯೆ ಅವನ ಮಾರ್ಗದರ್ಶನದದಾರಿಯನ್ನು ಕಾಯದೆ 'ನ ಯೋತ್ಸ್ಯೇ' ಎಂದರೆ 'ನಾನು ಯುದ್ಧಮಾಡುವದಿಲ್ಲ' ಎಂದು ಸುಮ್ಮನೆ ಕುಳಿತುಬಿಟ್ಟನು. ಅರ್ಥಾತ್ ಯುದ್ಧ ಮಾಡುವ ಅಥವಾ ಮಾಡದಿರುವ ಸ್ವಾತಂತ್ರ್ಯವು ತನ ಗುಂಟೆಂಬಂತೆ ನಡೆದುಕೊಂಡನು ಎಂದು 'ನ ಯೋತ್ಸ್ಯೇ' ಎಂಬ ಪದದಿಂದ ವ್ಯಕ್ತವಾಗು ತ್ತದೆ. ಸರ್ವಜ್ಞನೂ ಸರ್ವತಂತ್ರಸ್ವತಂತ್ರನೂ ಆದ ಶ್ರೀಕೃಷ್ಣನಿಗೆ ಅರ್ಜುನನ ಮನಸ್ಸಿನ ಓವರಿ ಯಲ್ಲಿ ಅಡಗಿದ್ದ ಈ ಅಹಂಕಾರದ ಭಾವನೆಯು ಚೆನ್ನಾಗಿ ಗೊತ್ತಿದ್ದುದರಿಂದಲೇ ಅದನ್ನು ಹೊಡೆ ದೋಡಿಸಲು ಸಮಗ್ರ ಗೀತೆಯಲ್ಲಿ ಪ್ರತಿಯೊಂದು ಕಾರ್ಯವನ್ನು ನಿರಹಂಕಾರ ಭಾವನೆಯಿಂದ

ಮಾಡಬೇಕೆಂಬತತ್ತ್ವವನ್ನು ಪ್ರತಿಪಾದಿಸಿರುವನು. ಶ್ರೀ ಅರವಿಂದರಾದರೂ ಈ ಅಭಿಪ್ರಾಯವನ್ನು "Through our egoism and ignorance we are moved, thinking that we are the doers of the work, vaunting of ourselves as the real causes of the result." ಅಂದರೆ "ಅಹಂಕಾರ ವಿಮೂಢಾತ್ಮಾ ಕರ್ತಾಹಂ ಇತಿ ಮನ್ಯತೇ" ಎಂಬ ಅಭಿಪ್ರಾಯವನ್ನು ತಮ್ಮ ಮಾತುಗಳಲ್ಲಿ ವಿಶದೀಕರಿಸಿರುವರು. ಅರ್ಜುನನ ವಿಷಾದವು ಯೋಗ್ಯವಲ್ಲೆಂಬುದನ್ನು ತೋರಿಸಬೇಕಾದರೆ ಶ್ರೀಕೃಷ್ಣನಿಗೆ ಜಗದ್ವ್ಯಾಪಾರವೆಲ್ಲ ಭಗವದಧೀನ; ಮತ್ತು ಭಗವದಾರಾಧನೆಯ ಬುದ್ಧಿಯಿಂದ ಸ್ವವಿಹಿತ ವೃತ್ತಿಯ ಪ್ರಕಾರ ಮಾಡಬೇಕಾದ ನಾರಾಯಣ ದ್ವೇಷಿಗಳ ಹಾಗು ಅವರ ಪರಿವಾರದವರ ನಿಗ್ರಹವು ಕ್ಷತ್ರಿಯರ ಪರಮಧರ್ಮವೆಂಬ ಮಾತನ್ನು ಅವನ ಮನಸ್ಸಿನಲ್ಲಿ ಬಿಂಬಿಸುವದವಶ್ಯವಾಯ್ತು. ಆದುದರಿಂದ ಯುದ್ಧದ ಪಾಪಪುಣ್ಯಗಳ ಲೇಪವು ನಿನಗಿಲ್ಲೆಂದು ಅರ್ಜುನನಿಗೆ ಸಮಾಧಾನವನ್ನು ಹೇಳುವಾಗ ವಿಶ್ವರೂಪದರ್ಶನವನ್ನು ಅವನಿಗೆ ಮಾಡಿಕೊಡುವ ಪ್ರಸಂಗವು ಬಂತು. ಅಂತು ಅರ್ಜುನನು ಕ್ಷತ್ರಿಯೋಚಿತವಾದ ಧರ್ಮಯುದ್ಧವನ್ನು ಮಾಡಲು ಭಗವಂತನ ಒಂದು ಆಯುಧವು ಮಾತ್ರವಲ್ಲದೆ ಅದನ್ನು ಮಾಡುವ ಅಥವಾ ಬಿಡುವ ಅಧಿಕಾರವು ಅವನಿಗಿಲ್ಲೆಂಬ ಮಾತು ಗೀತೆಯ ಪ್ರತಿಯೊಂದು ಸಾಲಿನಲ್ಲಿಯೂ ಹೊರಹೊಮ್ಮುತ್ತದೆ. ಉದಾಹರಣೆಗಾಗಿ ಶ್ರೀಕೃಷ್ಣನು ಅರ್ಜುನನ ವಿಷಾದ ಪ್ರಸಂಗವು ನಗೆಗೀಡಾದುದೆಂಬುದನ್ನು ತೋರಿಸಲೋಸುಗ "ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ"

ಎಂದು ಅಂದಿರುವದನ್ನು ನೋಡಬಹುದು. ಹಾಗೆಯೇ "ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ" ಎಂದೂ "ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ" "ಮಯೈವೇತೇ ನಿಹತಾಃ ಪೂರ್ವಮೇವ ನಿಮಿತ್ತಮಾತ್ರಂ ಭವ ಸವ್ಯಸಾಚಿನ್" ಎಂದೂ ಹೇಳಿದ ಸಂದರ್ಭಗಳಲ್ಲೆಲ್ಲ-ಪರಮಾತ್ಮನ ಲೀಲೆಯಾದ ಈ ಜಗತ್ತಿನಲ್ಲಿ ಮಾಡತಕ್ಕ ಕೆಲಸಗಳನ್ನು ಆತನ ಸೇವೆ, ಆತನ ಪ್ರೇರಣೆಯೆಂಬ ಬುದ್ಧಿಯಿಂದ ಮಾಡದೆ ಮನುಷ್ಯನಿಗೆ ಅನ್ಯಮಾರ್ಗವಿಲ್ಲೆಂಬ ವಿಷಯವು ಒಡೆದುಕಾಣುತ್ತದೆ. ಎರಡನೆಯ ಅಧ್ಯಾಯವನ್ನು ಮೊದಲ್ಗೊಂಡು ಹತ್ತನೆಯ ಅಧ್ಯಾಯವು ಮುಗಿಯುವ ವರೆಗೆ ಶ್ರೀ ಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶದಲ್ಲಿ ಪರಮಾತ್ಮನು ಸರ್ವತ್ರ ವ್ಯಾಪ್ತನಾಗಿರುವದರಿಂದ ಆತನ ಅಂಕಿತದಲ್ಲಿರತಕ್ಕ ಜೀವನಿಗೆ ಸ್ವಯಂಕರ್ತೃತ್ವಾಭಿಮಾನಕ್ಕೆ ಅವಕಾಶವಿಲ್ಲೆಂಬ ಜ್ಞಾನವುಂಟಾದರೆ ಯುದ್ಧಾರಂಭದಲ್ಲಿ ಅರ್ಜುನನಿಗೆ ಬಂದಂತಹ ಮೋಹವು ಬರುವದಿಲ್ಲೆಂಬುದನ್ನು "ಯತ್ ಜ್ಞಾತ್ವಾ ನ ಪುನರ್ಮೋಹಂ ಏವಂ ಯಾಸ್ಯಸಿ ಪಾಂಡವ" ಎಂದು ಶ್ರೀಕೃಷ್ಣನೇ ಆಶ್ವಾಸನಪೂರ್ವಕ ಹೇಳಿರುವನೆಂಬುದನ್ನು ಮರೆಯಕೂಡದು. ಹತ್ತು ಅಧ್ಯಾಯಗಳಲ್ಲಿಯೂ ಈ ವಿಷಯವನ್ನೇ ಪ್ರಧಾನವಾಗಿಟ್ಟುಕೊಂಡು ಶ್ರೀಕೃಷ್ಣನು ಉಪದೇಶಿಸಿದ ಬಳಿಕ ಹಾಗೂ ಆತನು ಕೊಟ್ಟ ಆಶ್ವಾಸನದ ಪ್ರಕಾರ ಹನ್ನೊಂದನೇ ಅಧ್ಯಾಯದ ಪ್ರಾರಂಭದಲ್ಲಿಯೆ "ಯತ್ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ" ಎಂದು ಅರ್ಜುನನು ತಾನಾಗಿಯೆ ತನ್ನ "ಬಂಧುಸ್ನೇಹಾದಿರೂಪೋಽಯಂ ಮೋಹಃ ವಿಗತಃ" ಎಂದು ವಿವೃತ್ತಿಕಾರರು ಹೇಳಿದಂತೆ ನಾನು ನನ್ನದೆಂಬ ಅಭಿಮಾನವನ್ನು ತೊರೆದೆನೆಂದು ಒಪ್ಪಿಕೊಂಡಿರುವನು. ಇದರಂತೆಯೆ ಹದಿನೆಂಟನೆಯ ಅಧ್ಯಾಯದ ಕೊನೆಯಲ್ಲಿಯೂ "ನಷ್ಟೋ ಮೋಹಃ" ಎಂಬ ಮಾತನ್ನು ಅರ್ಜುನನು ನುಡಿದಿರುವನು. ಹೀಗೆ ಪೂರ್ವೋತ್ತರ ಸಂದರ್ಭಗಳನ್ನೆಲ್ಲ ಬಗೆದಂದರೆ ಅರ್ಜುನನನ್ನು ಆವರಿಸಿದ್ದ ಮೋಹವು ಅಹಂಕರ್ತೃತ್ವಾಭಿಮಾನ ಹಾಗು ಸ್ವಬಾಂಧವಹನನವೆಂದು ಸ್ಪಷ್ಟವಾಗದಿರದು. ಇದು ನಿರಾಧಾರವಾದುದೆಂಬುದನ್ನು ಸದೃಷ್ಟಾಂತವಾಗಿ ತೋರಿಸಿದ ಬಳಿಕ ಗೀತೆಯಲ್ಲಿ ಅರ್ಜುನನಿಗೆ "ಯಥೇಚ್ಛಸಿ ತಥಾ ಕುರು" ಎಂದು ಶ್ರೀಕೃಷ್ಣನು ಒಂದೆಡೆಯಲ್ಲಿ ಹೇಳಿದ ಮಾತಿನ ಸರಿಯಾದ ಅರ್ಥವೇನೆಂಬುದನ್ನು ಅರಿತುಕೊಳ್ಳುವದು ಕ್ರಮಪ್ರಾಪ್ತವಾಗುತ್ತದೆ. ಯಾಕಂದರೆ ಆ ಮಾತಿನ ಹಿಂದುಮುಂದಿನ ಸಂದರ್ಭವನ್ನು ತಿಳಿಯದೆ ಆಪಾತತಃ ತೋರುವ ಅರ್ಥವನ್ನು ಸರಿಯೆಂದು ಬಗೆದು ಅರ್ಜುನನಿಗೆ ಅನಿರ್ಬಂಧವಾದ ಕ್ರಿಯಾಸ್ವಾತಂತ್ರ್ಯವನ್ನೂ ಸಂಕಲ್ಪಸ್ವಾತಂತ್ರ್ಯವನ್ನೂ ಭಗವಂತನು ಕೊಟ್ಟನೆಂದು ಅರ್ಥ ಮಾಡಿದರೆ ಅದು ವಿಸಂಗತವೆಂದು ಹೇಳದೆ ಗತ್ಯಂತರವಿಲ್ಲ.

ಮೊದಲಿನಿಂದ ಕೊನೆಯ ವರೆಗೆ ಗೀತೆಯಲ್ಲಿ ನಿರಹಂಕಾರ ತತ್ತ್ವವೇ ಪ್ರತಿಪಾದಿತವಾಗಿದೆ ಎಂಬ ಮಾತಿಗೆ ಅಸಂಖ್ಯ ನಿದರ್ಶನಗಳಿವೆ. ಅವುಗಳಲ್ಲಿ ಅರ್ಜುನನು ಎರಡನೆಯ ಅಧ್ಯಾಯದಲ್ಲಿ 'ನ ಯೋತ್ಸ್ಯೇ' ಎಂದು ಆಯುಧಗಳನ್ನು ಕೆಳಗಿಟ್ಟು ಸುಮ್ಮನೆ ಕುಳಿತ ಸಂದರ್ಭವನ್ನು ನೆನೆದು ಶ್ರೀಕೃಷ್ಣನು ನೇರವಾಗಿ ೧೮ ನೆಯ ಅಧ್ಯಾಯದಲ್ಲಿಯ ೫೯ ನೆಯ ಶ್ಲೋಕದಲ್ಲಿ ಅಂದರೆ ತನ್ನ ಉಪದೇಶದ ಕೊನೆಯ ಭಾಗದಲ್ಲಿ "ಯದಹಂಕಾರಮಾಶ್ರಿತ್ಯ ನ ಯೋತ್ಸ್ಯ ಇತಿ ಮನ್ಯಸೇ-ಮಿಥ್ಯೈಷ ವ್ಯವಸಾಯಸ್ತೇ ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ'' ಎಂದು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟು "ಯುದ್ಧ ಮಾಡುವವನು ನಾನೆಂಬ ಅಹಂಕಾರದಿಂದ ನಾನು ಯುದ್ಧಮಾಡುವದಿಲ್ಲೆಂದು ತಿಳಿದಿದ್ದರೆ ಆ ನಿನ್ನ ನಿಶ್ಚಯವೆಲ್ಲ ಹುಸಿ; ಏಕೆಂದರೆ ಪ್ರಕೃತಿಯು ಅರ್ಥಾತ್ ಈಶ್ವರೇಚ್ಛೆಯು ನಿನ್ನನ್ನು ಬಲಾತ್ಕಾರದಿಂದ ಪ್ರೇರಿಸುತ್ತದೆ'' ಎಂದು ನಿಃಸಂದಿಗ್ಧವಾದ ಮಾತುಗಳಲ್ಲಿ ಹೇಳಿಬಿಟ್ಟಿರುವನು. ಹದಿನೆಂಟನೆಯ ಅಧ್ಯಾಯವು ಕೊನೆಯ ಅಧ್ಯಾಯವಾದುದರಿಂದ ಆರಂಭದಲ್ಲಿ ಎತ್ತಿದ ಪ್ರಶ್ನೆಗೆ ನೇರವಾದ ತರ್ಕಬದ್ಧವಾದ ಮತ್ತು ಸಮರ್ಪಕವಾದ ಉತ್ತರವನ್ನು ಇಲ್ಲಿಯೆ ಹುಡುಕಬೇಕಾಗುವದು. ಈ ದೃಷ್ಟಿಯಿಂದ ನೋಡಿದರೆ "ಯಸ್ಯ ನಾಹಂಕೃತೋ ಭಾವೋ'' ಎಂಬ ಆ ಅಧ್ಯಾಯದಲ್ಲಿಯ ಹದಿನೇಳನೆಯ ಶ್ಲೋಕವು, "ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಂ। ವಿಮುಚ್ಯ ನಿರ್ಮಮಃ ಶಾಂತೋ ಬ್ರಹ್ಮಭೂಯಾಯ ಕಲ್ಪತೇ'' ಎಂಬ ೫೩ ನೆಯ ಶ್ಲೋಕವು ಮತ್ತು "ಮಚ್ಚಿತ್ತಃ ಸರ್ವದುರ್ಗಾಣಿ ಮತ್ಪ್ರಸಾದಾತ್ತರಿಷ್ಯಸಿ। ಅಥ ಚೇತ್ತ್ವಂ ಅಹಂಕಾರಾನ್ನ ಶ್ರೋಷ್ಯಸಿ ವಿನಂಕ್ಷ್ಯಸಿ' ಎಂಬ ಅದೇ ಅಧ್ಯಾಯದ ೫೮ ನೆಯ ಶ್ಲೋಕವು "ಯಥೇಚ್ಛಸಿ ತಥಾ ಕುರು'' ಎಂಬ ಮಾತಿನ ಸರಿಯಾದ ಅರ್ಥವ್ಯಕ್ತಿಗೆ ಅವಶ್ಯವಾದ ವಾಸ್ತವ ಹಿನ್ನೆಲೆಯನ್ನು ಒದಗಿಸುತ್ತವೆಂದರೆ ತಪ್ಪಾಗದು. ಹದಿನೆಂಟನೆಯ ಅಧ್ಯಾಯದ ೬೩ ನೆಯ ಶ್ಲೋಕದಲ್ಲಿ: "ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ। ವಿಮೃಶ್ಯೈತ-ದಶೇಷೇಣ ಯಥೇಚ್ಛಸಿ ತಥಾ ಕುರು॥'' ಎಂದು ಶ್ರೀಕೃಷ್ಣನು ಹೇಳಿರುವನು. ಇದರ ಹಿಂದಿನ ಶ್ಲೋಕದಲ್ಲಿಯೆ "ತಮೇವ ಶರಣಂ ಗಚ್ಛ ಸರ್ವ ಭಾವೇನ ಭಾರತ। ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ। ಅಂದರೆ ಪರಮಾತ್ಮನನ್ನೇ ಮೊರೆಹೋಗು; ಆತನ ಅನುಗ್ರಹದಿಂದಲೇ ಶ್ರೇಷ್ಠವಾದ ಶಾಂತಿಯನ್ನು ಹೊಂದುವೆಯಲ್ಲದೆ ಶಾಶ್ವತವಾದ ಸ್ಥಾನವನ್ನು ಅಂದರೆ ಮೋಕ್ಷವನ್ನು ಪಡೆಯುವೆ''ಎಂದು ಹೇಳಿದುದನ್ನು ಗಮನಿಸಬೇಕು. ಹಾಗೆಯೆ ಮುಂದಿನ ಶ್ಲೋಕದಲ್ಲಿ ಅಂದರೆ ೧೮ನೆಯ ಅಧ್ಯಾಯದ ೬೪ ನೆಯ ಶ್ಲೋಕದಲ್ಲಿ "ತತೋ ವಕ್ಷ್ಯಾಮಿ ತೇ ಹಿತಂ'' ಅಂದರೆ "ನಿನಗೆ ಹಿತವಾದುದನ್ನು ಹೇಳುವೆನು; ಕೇಳು'' ಎಂದು ಆರಂಭ ಮಾಡಿ "ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು। ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ॥'' ಅಂದರೆ "ನನ್ನ ಮನಸ್ಕನಾಗು, ನನ್ನ ಭಕ್ತನಾಗು, ನನ್ನನ್ನು ನಮಸ್ಕರಿಸು. ಹೀಗೆ ಮಾಡಿದರೆ ನನ್ನೆಡೆಗೇ ಬರುವೆ. ಇದರಲ್ಲಿ ಸಂಶಯವಿಲ್ಲ. ಪ್ರತಿಜ್ಞಾಪೂರ್ವಕವಾಗಿ ಈ ಮಾತನ್ನು ನಾನು ಹೇಳುತ್ತೇನೆ'' ಎಂದು ಶ್ರೀಕೃಷ್ಣನು ಸಮಗ್ರ ಗೀತೆಯ ಉಪದೇಶವನ್ನು ಉಪಸಂಹರಿಸುತ್ತಾನೆ. ಈ ಪೂರ್ವೋತ್ತರ ಸಂಬಂಧಗಳನ್ನು ನೋಡಿದಲ್ಲಿ "ಯಥೇಚ್ಛಸಿ ತಥಾ ಕುರು'' ಎಂಬ ಮಾತನ್ನು ಶ್ರೀ ಕೃಷ್ಣನು ಬೇಸರದಿಂದ ಆಡಿರುವನಲ್ಲದೆ ಅರ್ಜುನನಿಗೆ ಸಂಕಲ್ಪಸ್ವಾತಂತ್ರ್ಯವನ್ನಾಗಲಿ ಕ್ರಿಯಾಸ್ವಾತಂತ್ರ್ಯವನ್ನಾಗಲಿ ಕೊಟ್ಟಿರುವನೆಂದು ಅರ್ಥ ಮಾಡುವದು ಯೋಗ್ಯವಾಗಲಾರದೆಂಬ ಸಂಗತಿಯು ನಿಚ್ಚಳವಾಗದಿರದು. ಗೀತಾವಿವೃತ್ತಿಕಾರರು (ಶ್ರೀ ಮಂತ್ರಾಲಯ ಪ್ರಭುಗಳು) ಈ ಸಂದರ್ಭದಲ್ಲಿ "ಯಥೇಚ್ಛಸಿ ತಥಾ ಕುರು'' ಎಂಬ ಪದಗಳಿಗೆ ಮಾಡಿದ ವಿವೃತ್ತಿಯು ಅರ್ಥ ವಿವರಣೆಯ ಮೇಲೆ ಸಾಕಷ್ಟು ಬೆಳಕನ್ನು ಬೀರುತ್ತದೆ. ಆದುದರಿಂದ ಅದನ್ನು ಇಲ್ಲಿ ಎತ್ತಿ ಕೊಡಲಾಗಿದೆ. "ಏವಂ ಭಗವಾನ್ ಅರ್ಜುನಸ್ಯ ಅತಿ ಗೋಪ್ಯಂ ತತ್ತ್ವಂ ಉಪದಿಶ್ಯ ತದನುವಾದಪೂರ್ವಂ ತೂಷ್ಣೀಂ ಸ್ಥಿತಂ ಅರ್ಜುನಂ ಆಕ್ಷಿಪತಿ। ಇತೀತಿ। ಗುಹ್ಯಾತ್ ಗುಹ್ಯತರಂ ಅತಿ ಗೋಪ್ಯಂ ಇತಿ ಪ್ರಾಗುಕ್ತ ಪ್ರಕಾರೇಣ ಜ್ಞಾನಂ ಜ್ಞೇಯಂ ತೇ ತುಭ್ಯಂ ಮಯಾ ಆಖ್ಯಾತಂ ಏತದಶೇಷೇಣ ವಿಮೃಶ್ಯ ವಿಚಾರ್ಯ ಯಥೇಚ್ಛಸಿ ತಥಾ ಕುರು ಇತ್ಯಾಕ್ಷೇಪಃ" ಅಂದರೆ "ಈ ಪ್ರಕಾರ ಶ್ರೀ ಕೃಷ್ಣಪರಮಾತ್ಮನು ಅರ್ಜುನನನ್ನು ಕುರಿತು ಅತ್ಯಂತ ಗೌಪ್ಯವಾದ ತತ್ತ್ವವನ್ನು ಉಪದೇಶಿಸಿದ ಬಳಿಕ ಸುಮ್ಮನೆ ನಿಂತ ಅರ್ಜುನನನ್ನು ಆಕ್ಷೇಪಿಸುವನು. ನಾನು ಹೇಳಿದುದನ್ನೆಲ್ಲ ಸಂಪೂರ್ಣವಾಗಿ ವಿಚಾರಿಸಿ ನಿನ್ನ ಮನಸ್ಸಿಗೆ ಬಂದಂತೆ ಮಾಡು ಎಂದು ನುಡಿದುದೇ ಆಕ್ಷೇಪವು'' ಅರ್ಥಾತ್ ಅರ್ಜುನನು ನಿರಹಂಕಾರ ಬುದ್ಧಿಯಿಂದ ಕಾರ್ಯಪ್ರವೃತ್ತನಾಗದಿದ್ದರೆ ನಾಶಕ್ಕೊಳಗಾಗುವನೆಂಬ ಅಭಿಪ್ರಾಯವನ್ನೇ ಮನದಲ್ಲಿಟ್ಟುಕೊಂಡು "ಯಥೇಚ್ಛಸಿ ತಥಾ ಕುರು'' ಎಂದು ಶ್ರೀ ಕೃಷ್ಣನು ಉದ್ವೇಗದಿಂದಲೂ ಆಕ್ಷೇಪಪೂರ್ವಕವಾಗಿಯೂ ನುಡಿದಿರುವನೇ ಹೊರತು ಮನಃಪೂರ್ವಕವಾಗಿ ಅವನಿಗೆ ಕಾರ್ಯಸ್ವಾತಂತ್ರ್ಯವನ್ನು ಕೊಡುವ ಉದ್ದೇಶದಿಂದಲ್ಲ. ಆದುದರಿಂದಲೇ ಮುಂದಿನ ಶ್ಲೋಕದಲ್ಲಿ "ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ। ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಂ॥'' ಸ್ಪಷ್ಟವಾಗಿ ಅರ್ಜುನನಿಗೆ ತನ್ನ ಮನೋಗತವನ್ನು ಶ್ರೀ ಕೃಷ್ಣ ಪರಮಾತ್ಮನು ತಿಳಿಸಿ "ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ। ಸ್ಥಿತೋಽಸ್ಮಿ ಗತ-ಸಂದೇಹಃ ಕರಿಷ್ಯೇ ವಚನಂ ತವ॥'' ಅಂದರೆ "ನನಗೆ ಪ್ರಾರಂಭದಲ್ಲಿ ಬಂದಿದ್ದ ನಾನೇ ಕರ್ತನೆಂಬ ಅಹಂಕಾರರೂಪಿಯಾದ ಮೋಹವು ನಿನ್ನ ಅನುಗ್ರಹದಿಂದ ಅಳಿಯಿತು. ಯೋಗ್ಯ ಅರಿವು ಆಯ್ತು. ಸಂಶಯವು ದೂರಾಯ್ತು. ನಿನ್ನ ಮಾತನ್ನೇ ನಡೆಸುವೆನು'' ಎಂದು ಅವನಿಂದ ವಚನವನ್ನು ತೆಗೆದುಕೊಳ್ಳುವನು. ಹೀಗೆ ಗೀತೆಯ ನುಡಿನುಡಿಯಲ್ಲಿಯೂ ನಿರಹಂಕಾರದ ಸಂದೇಶವು ಪ್ರತಿಧ್ವನಿಸುತ್ತದೆ. ಶ್ರೀ ಅರವಿಂದರು "The refusal of Arjuna to persevere

in his divinely appointed work proceeded from the egosense in him. The spiritual consequences will be infinitely worse now than before, now that a higher truth and a greater way and spirit of action have been revealed to him. Yet persisting in his egoism he perseveres in a vain and impossible refusal. He is called to be no longer a great blind instrument, but a conscious soul and an enlightened power and vessel of the Godhead" ಅಂದರೆ "ದೈವನಿಯುಕ್ತವಾದ ತನ್ನ ಕರ್ತವ್ಯವನ್ನು ಮಾಡಲು ಅರ್ಜುನನು ನಿರಾಕರಿಸಿದ್ದುದು ಆತನ ಅಹಂಕಾರದ ಮೂಲಕವಾಗಿಯೆ. ಹದಿನೆಂಟು ಅಧ್ಯಾಯಗಳ ಉಪದೇಶವನ್ನು ಕೇಳಿದ ಬಳಿಕ ಹಾಗು ಪರಾತ್ಪರ ಸತ್ಯವು ಆವಿಷ್ಕೃತವಾಗಿ ಕರ್ಮವನ್ನು ಯಾವ ಭಾವನೆಯಿಂದ ಮಾಡಬೇಕೆಂಬ ಮಹಾ ಮಾರ್ಗವೊಂದು ತೋರಿಸಲ್ಪಟ್ಟಾಗ ಅರ್ಜುನನು ಇನ್ನು ಯುದ್ಧ ಮಾಡುವದಿಲ್ಲೆಂಬ ತನ್ನ ಹಟವನ್ನೆ ಹಿಡಿದರೆ ಆಗುವ ಆಧ್ಯಾತ್ಮಿಕ ಪರಿಣಾಮ ಪ್ರತಿಕ್ರಿಯೆಗಳು ಹೀನತರವಾಗುವವು. ಅವನು ಇನ್ನು ಮುಂದೆ ಒಂದು ಅಂಧ ನಿರ್ಜೀವ ಸಾಧನವಾಗಬೇಕಿಲ್ಲ. ಆದರೆ ಪ್ರಜ್ಞಾಪೂರ್ಣ ಆತ್ಮನಾಗಿ ಪರಮಾತ್ಮನ ಜ್ಯೋತಿರ್ಮಯ ಶಕ್ತಿಯಾಗಿ ಅವನು ಇನ್ನು ಕಾರ್ಯಪ್ರವೃತ್ತನಾಗಬೇಕಾಗಿದೆ" ಎಂದು ಅರ್ಜುನನ ಮುಖಾಂತರ ಗೀತೆಯು ಲೋಕಕ್ಕೆ ಕೊಟ್ಟ ಸಂದೇಶವನ್ನು ಸಮೀಚೀನವಾಗಿ ಸಂಗ್ರಹಿಸಿರುವರು.

ಸಾಧನೆ

(ಕೆಲವು ಸಾರಜ್ಞ ವಚನಗಳು)

ಒಂದೆ ನಾಲಗೆ ಕೊಟ್ಟು
ಮುಂದೆ ಕಣ್ಣೆರಡಿಟ್ಟು
ಒಂದು ಸಲ ನುಡಿವ ಮೊದಲೆರಡು ಸಲ ನೋಡು
ಎಂದೊರೆದ ಶಿವನು ಸಾರಜ್ಞ ॥ ೧ ॥

ನೆತ್ತಿಗೇರಿರೆ ಸಿಟ್ಟು
ಒತ್ತರಿಸಿ ನುಡಿಯದಿರು;
ಚಿತ್ತಶಾಂತಿಯನು ಪಡೆ;—ನುಡಿವ ಪೂರ್ವದಲಿ
ಹತ್ತಂಕೆ ಎಣಿಸು! ಸಾರಜ್ಞ ॥ ೨ ॥

ಸುವಿವೇಕ ತಕ್ಕಡಿಯು
ಸುವಿಚಾರ ಸರಿ ತೂಕ
ಸವಿ ನುಡಿಯು ಬೆಲ್ಲ; ಬಾಳೆಂಬುವಂಗಡಿಯ
ವ್ಯವಹಾರ ಮಾಡು ಸಾರಜ್ಞ ॥ ೩ ॥

ಹುಟ್ಟಿದೊಡನೆಯೆ ಕಲೆಯ
ಪಟ್ಟವೇರಿದರುಂಟೆ ?
ಮೆಟ್ಟುಗಟ್ಟಿಗಳ ಬಿಟ್ಟುಬಿಡದೇರುವನೆ
ಮುಟ್ಟುವನು ಶಿಖರ! ಸಾರಜ್ಞ ॥ ೪ ॥

ತೆಗೆವಾಗೊರತೆ ರಾಡಿ,
ತೆಗೆದು ತುಸು ತಡೆಯೆ ತಿಳಿ;
ಮಿಗೆ ಬರೆವ ಮೊದಲು ತಪ್ಪು ತಡೆ; ಬರುಬರುತ
ಸೊಗಸಕ್ಕು ಬರೆಹ ಸಾರಜ್ಞ ॥ ೫ ॥

ಉಜ್ಜದಿದ್ದರೆ ವಜ್ರ
ಪ್ರಜ್ವಲಿಸಿ ಹೊಳೆದೀತೆ ?
ಸಜ್ಜನನ ಶೀಲ ಕಷ್ಟದಲಿ ಸಿಲುಕದಿರೆ
ಉಜ್ಜ್ವಲಿಸಬಹುದೆ? ಸಾರಜ್ಞ ॥ ೬ ॥

—ಗಂಗಪ್ಪ ವಾಲಿ



ದೀಪಾವಳಿ ಆಚರಣೆಯ ವೈವಿಧ್ಯಗಳು

ಭಾರತದಲ್ಲೆಲ್ಲ ದೀಪಾವಳಿ ಆಚರಿಸಲ್ಪಡುತ್ತಿದ್ದರೂ ಅದಕ್ಕೆ ಸಂಬಂಧಿಸಿದ ಕಥೆಗಳೂ ರೂಢಿ ಸಂಪ್ರದಾಯಗಳೂ ಭಿನ್ನಭಿನ್ನವಾಗಿವೆ. ಅವುಗಳಲ್ಲಿ ಕೆಲವು ವಿಚಿತ್ರ–ಮನೋರಂಜಕವಾಗಿಯೂ ಇವೆ. ಬಯ್ಯುವುದೂ ಒಂದು ದೀಪಾವಳಿಯ ರೂಢಿಯೆಂದರೆ ನೀವು ನಂಬುವಿರಾ? . . . .

ನಮ್ಮ ದೇಶದ ಸಂಸ್ಕೃತಿಯಲ್ಲಿ ವ್ರತಗಳು, ಹಬ್ಬಗಳು, ಉತ್ಸವಗಳು ತುಂಬ ಇವೆ. ಇವುಗಳಲ್ಲಿ ಕೆಲವನ್ನು ಇಡೀ ಭಾರತದಲ್ಲಿ ಕಾಣಬಹುದು, ಕೆಲವನ್ನು ವಿಶಿಷ್ಟ ಭಾಗಗಳಲ್ಲಿ ಮಾತ್ರ ಕಾಣಬಹುದು. ದಸರೆ, ದೀಪಾವಳಿ, ಹೋಳಿ ಹುಣ್ಣಿವೆ ಮೊದಲಾದ ಹಬ್ಬಗಳನ್ನು ಭಾರತದಲ್ಲಿ ಎಲ್ಲಿ ಹೋದರೂ ಆಚರಿಸುವದನ್ನು ಕಾಣಬಹುದು. ಹಾಗಿದ್ದರೂ ಈ ಹಬ್ಬಗಳ ಆಚರಣೆ ಒಂದೇ ವಿಧವಾಗಿರುವದಿಲ್ಲ. ಈ ಹಬ್ಬಗಳಿಗೆ ಸಂಬಂಧಪಟ್ಟ ಕಥೆಗಳಲ್ಲಿ ವ್ಯತ್ಯಾಸವಿರುವಂತೆ ಅವುಗಳ ಆಚರಣೆಯಲ್ಲೂ ವ್ಯತ್ಯಾಸ ಕಂಡುಬರುತ್ತದೆ. ದೀಪಾವಳಿ ಹಬ್ಬ ಹೇಗೆ ಮತ್ತು ಎಂದು ಪ್ರಾರಂಭವಾಯಿತು, ಅದನ್ನು ಹೇಗೆ ಆಚರಿಸಬೇಕು ಎಂಬ ಬಗ್ಗೆ ಪ್ರತಿಯೊಂದು ಪ್ರಾಂತದಲ್ಲಿ ಭಿನ್ನ ಭಿನ್ನ ಕಥೆಗಳಿದ್ದು ಅವುಗಳಿಗನುಸಾರವಾಗಿಯೆ ಅದು ಆಚರಿಸಲ್ಪಡುತ್ತದೆ. ಮನೆಯನ್ನು ಸ್ವಚ್ಛಗೊಳಿಸಿ ಶೃಂಗರಿಸುವದು, ದೀಪೋತ್ಸವ, ಲಕ್ಷ್ಮೀಪೂಜೆ ಮುಂತಾದ ಕೆಲವು ಪದ್ಧತಿಗಳನ್ನು ಎಲ್ಲೆಡೆಯಲ್ಲಿಯೂ ಕಾಣಬಹುದಾದರೂ ಪ್ರತಿಯೊಂದು ಪ್ರಾಂತಕ್ಕೂ ವಿಶಿಷ್ಟವಾಗಿರುವ ಕೆಲವೊಂದು ರೂಢಿಗಳು ಇವೆ.

ಪಾಕಿಸ್ತಾನ ಹುಟ್ಟಿಕೊಳ್ಳುವ ಮೊದಲು ಸ್ವದೇಶದಲ್ಲಿ ಸಿಂಧಿ ಸಮಾಜವು ಸುಸ್ಥಿತಿಯಲ್ಲಿದ್ದಾಗ ಅವರು ಬೇರೆ ಯಾವ ಹಬ್ಬಕ್ಕಿಂತಲೂ ದೀಪಾವಳಿಗೆ ಹೆಚ್ಚು ಮಹತ್ವ ಕೊಡುತ್ತಿದ್ದರು. ಅದನ್ನು ಸಂಭ್ರಮದಿಂದ ಆಚರಿಸಲು ಪ್ರತಿಯೊಬ್ಬರೂ ಹೆಣಗುತ್ತಿದ್ದರು. ದೀಪಾವಳಿಯ ದಿನ ಪ್ರತಿಯೊಂದು ಕುಟುಂಬದ ಗಂಡಸರು ಕೈಯಲ್ಲಿ ಒಂದೊಂದು ಹಿಲಾಲನ್ನು ಹಿಡಿದು ಊರಹೊರಗೆ ಹೋಗುತ್ತಿದ್ದರು. ಅಲ್ಲಿ ಎಲ್ಲರೂ ಒಟ್ಟುಗೂಡಿದ ಬಳಿಕ ಆನಂದದಿಂದ ಲೋಕನೃತ್ಯವನ್ನು ಮಾಡುತ್ತಿದ್ದರು. ನೃತ್ಯದಲ್ಲಿ ಯಾವುದಾದರೊಂದು ಕಾರಣಕ್ಕಾಗಿ ಭಾಗವಹಿಸದವರು ವಾದ್ಯಗಳನ್ನು ಬಾರಿಸಿ ನರ್ತಕರನ್ನು ಹುರಿದುಂಬಿಸುತ್ತಿದ್ದರು. ಆನಂದದಿಂದ ಮತ್ತರಾದ ಈ ಜನರು ತಾಸುಗಟ್ಟಲೆ ನರ್ತಿಸುತ್ತಿದ್ದರು. ನಂತರ ಸಮೀಪದಲ್ಲಿಯ ಕೆರೆಯ ದಂಡೆಯಲ್ಲಿನ ವ?ಣ್ಣು ತಂದು ಅದರ ಕಟ್ಟೆ ಕಟ್ಟಿ ಅಲ್ಲೊಂದು ಟೊಂಗೆಯನ್ನು ನಡುತ್ತಿದ್ದರು. ಬ್ರಾಹ್ಮಣರು ಪೂಜೆ ಮುಗಿಸಿದ ನಂತರ ಎಲ್ಲರೂ ಅದಕ್ಕೆ ಪ್ರದಕ್ಷಣೆ ಹಾಕಿ ನಮಸ್ಕರಿಸುತ್ತಿದ್ದರು. ಶ್ರದ್ಧಾವಂತರು ಪ್ರಸಾದ ಸ್ವೀಕರಿಸಿ ಆ ಕಟ್ಟೆಯ ತುಸು ಮಣ್ಣನ್ನು ಮನೆಗೊಯ್ಯುತ್ತಿದ್ದರು. ಮರುದಿವ ಈ ಮಣ್ಣು ಚಿನ್ನವಾಗುವದೆಂಬ ನಂಬಿಕೆ ಇವರಲ್ಲಿತ್ತು. ಈ ಮಣ್ಣು ಅತಿ ಪವಿತ್ರವೆಂದು ಅವರು ಬಗೆಯುತ್ತಿದ್ದರು. ಈ ರೂಢಿ ಬುದ್ಧಿವಾದಿ ಯುಗದ ಸ್ಪರ್ಶವಾಗದಿದ್ದ ಹಳ್ಳಿಯ ಜನರಲ್ಲಿತ್ತು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಗರ-ಪಟ್ಟಣಗಳ ಜನರಲ್ಲಿ ಇದರ ಗಂಧಗಾಳಿಯೂ ಇರಲಿಲ್ಲ. ಈ ಜನರು ಹೊಸ ವ್ಯಾಪಾರವನ್ನು ಅಂದು ಪ್ರಾರಂಭಿಸುತ್ತಿದ್ದರು. ಹೊಸ ಜಮಾ-ಖರ್ಚನ್ನೂ ಬರೆಯಲು ಪ್ರಾರಂಭಿಸುತಿದ್ದರು. ವ್ಯಾಪಾರಿ ಜನರು ತಮ್ಮ ಪರಿಚಿತ ವ್ಯಾಪಾರಿಗಳಿಗೆ ದೀಪಾವಳಿಯ ದಿನ ಮಿಠಾಯಿ, ಪಟಾಕ್ಷಿ, ಹಣ್ಣುಹಂಪಲಗಳ ಕಾಣಿಕೆ ಕಳಿಸಿ ಸಹೋದರ ಭಾವವನ್ನು ಪ್ರದರ್ಶಿಸುತ್ತಿದ್ದರು. ಪರಸ್ಪರರನ್ನು ಭೆಟ್ಟಿಯಾಗಿ ಹೊಸ ವರ್ಷ ಯಶಸ್ವಿಯಾಗಲಿ ಎಂದು ಕೋರುತ್ತಿದ್ದರು.

ದೀಪಾವಳಿ ಹಬ್ಬದ ದಿನವೇ ರಾಮನಿಗೆ ಪಟ್ಟಾಭಿಷೇಕವಾಗಿತ್ತು ಎಂಬ ಕಲ್ಪನೆ ಪಂಜಾಬಿ ಜನರಲ್ಲಿದೆ. ಇದಕ್ಕಾಗಿಯೇ ಸಂತೋಷ ವ್ಯಕ್ತ ಮಾಡಲೆಂದು ಇವರು ದೀಪಾವಳಿ ಹಬ್ಬವನ್ನಾಚರಿಸುತ್ತಾರೆ. ಲಕ್ಷ್ಮೀಪೂಜೆಯ ದಿವಸ ಇವರು ಹೊಸ ಲೆಕ್ಕ ಬರೆಯಲು ಪ್ರಾರಂಭಿಸುತ್ತಾರೆ. ಅಂದೇ ವ್ಯಾಪಾರಿಗಳ ಹೊಸ ವರ್ಷ ಆರಂಭವಾಗುತ್ತದೆ. ಪ್ರತಿಯೊಂದು ಮನೆಯವರು ಲಕ್ಷ್ಮಿಯ ಮೂರ್ತಿಯ ಎದುರು ಮನೆಯಲ್ಲಿರುವ ಎಲ್ಲ ಬೆಳ್ಳಿ ನಾಣ್ಯಗಳನ್ನಿಟ್ಟು ಪೂಜಿಸುತ್ತಾರೆ. ಲಕ್ಷ್ಮಿಯ ಕೃಪೆಯಾದರೆ, ಈ ನಾಣ್ಯಗಳಲ್ಲಿ ಕೆಲವು ಖರ್ಚಾದರೂ ಮತ್ತೆ ಹಣ ಸಿಗುವದು. ಮುಂದಿನ ವರುಷದ ಪೂಜೆಯ ಹೊತ್ತಿಗೆ ಇನ್ನೂ ಹೆಚ್ಚಿನ ನಾಣ್ಯಗಳು ಕೂಡಿಬೀಳುವವು ಎಂದು ಇವರ ಶ್ರದ್ಧೆಯಿದೆ. ಇಡೀ ವರ್ಷ ಯಾವ ಬಗೆಯ ಹಾನಿಯೂ ಆಗಲಿಕ್ಕಿಲ್ಲ, ವ್ಯಾಪಾರದಲ್ಲಿ ಲಾಭವೇ ಆದೀತೆಂದು ನಂಬುತ್ತಾರೆ. ದೀಪಾವಳಿಯ ದಿನ ರಾತ್ರಿಯೆಲ್ಲ ಜಾಗರಣೆ ಮಾಡಿ ಜೂಜಾಡುತ್ತಾರೆ.

ದಿಲ್ಲಿಯ ಸಮೀಪದ ಹಳ್ಳಿಗಳಲ್ಲಿ ದೀಪಾವಳಿ ಹಬ್ಬವನ್ನು ಬೇರೊಂದು ರೀತಿಯಲ್ಲಿ ಆಚರಿಸುತ್ತಾರೆ. ಆ ದಿವಸ ಸಂಜೆ ಜನರು ಊರ ಗಡಿಯ

ಹತ್ತರ ಒಟ್ಟುಗೂಡಿ ಗಿಡಗಳಲ್ಲಿ ಒಣಗಿದ ಟೊಂಗೆಗಳನ್ನು ಮುರಿದು ಅವನ್ನು ಚಿಮಣಿ ಎಣ್ಣೆಯಲ್ಲಿ ಅದ್ದಿ ಹಿಲಾಲನ್ನು ಮಾಡಿ ಉರಿಸಿ "ಹಿಡೋ ರಿ ಹಿಡೋ ಹಿಡೋ ರಿ ಹಿಡೋ" ಎಂಬ ಹಾಡನ್ನು ಗಟ್ಟಿಯಾಗಿ ಹಾಡುತ್ತಾರೆ. ಈ ಭಾಗದಲ್ಲಿ ಅಕ್ಕಿ ತೀರ ಕಡಿಮೆ ಬೆಳೆಯುವದರಿಂದ ಅವರು ಅಕ್ಕಿಗೆ ಬಹಳ ಮಹತ್ವ ಕೊಡುತ್ತಾರೆ. ದೀಪಾವಳಿಯ ದಿವಸ ಅಕ್ಕಿ ಮತ್ತು ಸಕ್ಕರೆ ಕೊಂಡು ಅನ್ನ, ತುಪ್ಪ, ಸಕ್ಕರೆ ಸೇರಿಸಿ ತಿನ್ನುತ್ತಾರೆ.

ಉತ್ತರ ಪ್ರದೇಶದ ಗುಡ್ಡಗಾಡ ಭಾಗದಲ್ಲಿ ದೀಪಾವಳಿಯ ದಿನ ಗೋಪೂಜೆ ಮಾಡುವ ರೂಢಿ ಇದೆ. ಅನಿಷ್ಟ ನಿವಾರಣೆಗೆಂದು ಶ್ರಾವಣ ಹುಣ್ಣಿಮೆಯ ದಿನ ಜನರು ಕೈಗೆ ಕಟ್ಟಿಕೊಂಡ ದಾರವನ್ನು ದೀಪಾವಳಿಯ ದಿನ ವಿಸರ್ಜಿಸುತ್ತಾರೆ. ಮೊದಲು ಆಕಳ ಪೂಜೆಯನ್ನು ಮಾಡಿ, ಕಾಳಜಿಪೂರ್ವಕವಾಗಿ ಕೈಗೆ ಕಟ್ಟಿದ ದಾರವನ್ನು ಬಿಚ್ಚಿ ಅದನ್ನು ಆಕಳ ಬಾಲಕ್ಕೆ ಕಟ್ಟಿ ಆಕಳಿಗೆ ಪ್ರದಕ್ಷಿಣೆ ಹಾಕುತ್ತಾರೆ. ರಾತ್ರಿ ಊಟವಾದ ಬಳಿಕ ಎಲ್ಲರೂ ಹಿಲಾಲು ಉರಿಸಿಕೊಂಡು ಊರಹೊರಗೆ ಹೋಗಿ ಕುಣಿಯುತ್ತಾರೆ. ಆ ಸಮಯದಲ್ಲಿ ಬೇರೆ ಊರಿನವರು ಯಾರಾದರೂ ಅಲ್ಲಿಗೆ ಬಂದರೆ ಮತ್ತು ಬಂದವನು ತಮ್ಮಲ್ಲಿಯ ಯಾವನೊಬ್ಬನ ನೆಂಟ-ರಿಷ್ಟರಲ್ಲಿ ಒಬ್ಬನಾಗಿದ್ದರೆ ಅವನನ್ನು ಬಯ್ಯತೊಡಗುತ್ತಾರೆ. ಈ ರೀತಿ ಬಯ್ಯುವದು ಬಹು ಶುಭದಾಯಕ ಎಂದು ಅವರು ತಿಳಿಯುತ್ತಾರೆ. ಕೈಲಿದ್ದ ಹಿಲಾಲು ಆರಿ ಹೋಗುವವರೆಗೂ ಈ ಬಯ್ಯುವ ಕಾರ್ಯಕ್ರಮ ನಡೆದಿರುತ್ತದೆ. ಅನಂತರ ಜನರು ತಂತಮ್ಮ ಮನೆಗಳಿಗೆ ತಿರುಗಿ ಹೋಗುತ್ತಾರೆ. ಈ ಭಾಗದ ಜನರು ಶಾಕ್ತರಿರುವದರಿಂದ ಶಕ್ತಿಯ ಉಪಾಸನೆಯನ್ನು ಪ್ರಾಮುಖ್ಯವಾಗಿ ಮಾಡುತ್ತಾರೆ. ಆದುದರಿಂದಲೆ ದೀಪಾವಳಿಯಲ್ಲಿ ದೇವಿಯ ಪೂಜೆಮಾಡಿ ಪಶುಬಲಿ ಅರ್ಪಿಸುವ ಪದ್ಧತಿಯು ಇಲ್ಲಿದೆ.

ಅಸಾಮದಲ್ಲಿ ಆದಿವಾಸಿಗಳೇ ಹೆಚ್ಚು. ಅವರಲ್ಲಿ ದೀಪಾವಳಿಯ ಉತ್ಸವ ಇಲ್ಲವೆಂದೂ ಅನ್ನಬಹುದು. ಆದಿವಾಸಿಗಳನ್ನುಳಿದು ಇತರ ಜನರು ಕಾಳಿಪೂಜೆಯನ್ನು ಹೆಚ್ಚಾಗಿ ಮಾಡುತ್ತಾರೆ. ಅಲ್ಲಿ ದೀಪಾವಳಿಗಿಂತ ದಸರೆ ಹಬ್ಬ ಹೆಚ್ಚು ಸಂಭ್ರಮದಿಂದ ಆಚರಿಸಲ್ಪಡುತ್ತದೆ. ಪಶುಬಲಿ ಕೊಡುವ ಪದ್ಧತಿ ಇಲ್ಲಿಯೂ ಇದೆ. ಹೆಂಡ ಇಲ್ಲವೆ ಇನ್ನಾವುದಾದರೂ ಮಾದಕ ಪೇಯವನ್ನು ಸೇವಿಸಿ ಈ ಜನರು ತಮ್ಮ ಉತ್ಸವವನ್ನಾಚರಿಸಿ ಕುಣಿದು ಹಾಡಿ ತಮ್ಮ ಆನಂದವನ್ನು ವ್ಯಕ್ತಪಡಿಸುತ್ತಾರೆ.

ಬಂಗಾಲದಲ್ಲಿ ಕಾಳಿ ಪೂಜೆಗೆ ಬಹಳ ಮಹತ್ವ-ವಿದೆ. ದೀಪಾವಳಿಯ ಶುಭದಿವಸದಲ್ಲಿ ಕಾಳಿ ಮಾತೆ ೬೪ ಸಾವಿರ ಜೋಗಿಣಿಯರೊಂದಿಗೆ ಪ್ರಕಟವಾಗಿದ್ದಳು. ಆದ್ದರಿಂದ ಅಂದು ಕಾಳಿಯ ಪೂಜೆ ಮಾಡಿದಲ್ಲಿ ಮೋಕ್ಷಪ್ರಾಪ್ತಿಯಾಗುತ್ತದೆ ಎಂದು ಈ ಜನರು ಅನ್ನುತ್ತಾರೆ. ಇಲ್ಲಿಯ ಜನರು ಲಕ್ಷ್ಮಿಯ ಪೂಜೆಯನ್ನು ಮಾಡುವದೇ ಇಲ್ಲ ಎಂದೇನೂ ಇಲ್ಲ. ಕೆಲವರು ಲಕ್ಷ್ಮೀಪೂಜೆಯನ್ನೂ ಮಾಡುತ್ತಾರೆ. ದೀಪಗಳನ್ನು ಹಚ್ಚಿ ಲಕ್ಷ್ಮಿಯ ಆಗಮನವನ್ನು ಎದುರುನೋಡುತ್ತ ರಾತ್ರಿಯೆಲ್ಲ ಜಾಗರಣೆಮಾಡಿದರೆ ಎಂದೂ ಹಣದ ಕೊರತೆಯೆನಿಸದು ಎಂದು ಈ ಜನರ ನಂಬಿಗೆಯಿದೆ. ಈ ನಂಬಿಗೆಗೆ ಕಾರಣವಾಗಿರುವ ಒಂದು ದಂತಕಥೆಯಿದೆ. ಪ್ರಾಚೀನ ಕಾಲದಲ್ಲಿ ಹೀಗೆ ರಾತ್ರಿಯೆಲ್ಲ ಜಾಗರಣೆ ಮಾಡಿದ ಬ್ರಾಹ್ಮಣ-ನೊಬ್ಬನಿಗೆ ಧನಪ್ರಾಪ್ತಿಯಾಗಿತ್ತಂತೆ. ಅಂತೇ ಈ ಜನರು ರಾತ್ರಿಯೆಲ್ಲ ಕಾಳೀಮಾತೆಯನ್ನುಸ್ತುತಿಸುವ ಹಾಡುಗಳನ್ನು ಹಾಡುತ್ತ ಧೂಪ ದೀಪಾದಿಗಳನ್ನುರಿಸುತ್ತ ಜಾಗರಣೆ ಮಾಡುತ್ತಾರೆ. ಈ ದಿನವನ್ನು ಬಂಗಾಲಿಗಳು "ಮಹಾನಿಶಾ" ಎಂದೆನ್ನುತ್ತಾರೆ.

ಹೈದರಾಬಾದದಲ್ಲಿ ಕೃಷ್ಣ ಮತ್ತು ಬಲಿರಾಜ-ವಾಮನರ ಕಥೆ ಹೆಚ್ಚಾಗಿ ಪ್ರಚಲಿತವಿದೆ. ದೀಪಾವಳಿಯಲ್ಲಿ ಇಲ್ಲಿ ಕೋಣಗಳ ಅಥವಾ ಎಮ್ಮೆಗಳ ಕಾಳಗವನ್ನು ಮಾಡಿಸುವ ರೂಢಿಯಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಬೇಕೆನ್ನುವವರು ತಮ್ಮ ಎಮ್ಮೆ, ಕೋಣಗಳಿಗೆ ಸಾಕಷ್ಟು ಉತ್ತಮ ಮೇವನ್ನು ಹಾಕಿ ಬೆಳೆಸುತ್ತಾರೆ. ಮೊದಲು ಅವುಗಳ ಮೇಲೆ ಕುಳಿತು ನಾನಾ ಬಗೆಯ ಆಟಗಳನ್ನು ಮಾಡಿತೋರಿಸುತ್ತಾರೆ. ಅನಂತರ ಕೋಣಗಳಿಗೆ ಹೆಂಡಕುಡಿಸಿ ಕಾಳಗಕ್ಕಾಗಿ ಬಯಲಿನಲ್ಲಿ ಬಿಡುತ್ತಾರೆ. ಈ ಕಾಳಗವನ್ನು ನೋಡಲು ಊರ ಜನ

ರೆಲ್ಲ ಕಲೆತಿರುತ್ತಾರೆ. ದೀಪಾವಳಿ ಹಬ್ಬದಲ್ಲಿ ಇದೇ ಅವರ ಮುಖ್ಯ ಸಮಾರಂಭ. ವ್ಯಾಪಾರಿಗಳಿಗೆ ಹೊಸ ವರ್ಷ ದೀಪಾವಳಿಯ ದಿನವೇ ಪ್ರಾರಂಭವಾಗುತ್ತದೆ.

ರಾಜಸ್ಥಾನದ ಜನರು ದೀಪಾವಳಿಗೂ ರಾಮು ಕಥೆಗೂ ಸಂಬಂಧ ಜೋಡಿಸುತ್ತಾರೆ. ರಾವಣನನ್ನು ಸೋಲಿಸಿ ರಾಮಚಂದ್ರನು ಅಯೋಧ್ಯೆಯಲ್ಲಿ ಪದಾರ್ಪಣ ಮಾಡಿದಾಗ ಪುರಜನರು ಇಡೀ ನಗರವನ್ನು ಶೃಂಗರಿಸಿ ಸಾಲು ದೀಪಗಳನ್ನು ಹಚ್ಚಿ ರಾತ್ರಿಯನ್ನು ಹಗಲನ್ನಾಗಿ ಮಾಡಿದ್ದರು. ಅಂದಿನಿಂದಲೆ ದೀಪಾವಳಿಯ ಹಬ್ಬ ಆಚರಿಸಲ್ಪಡತೊಡಗಿತು ಎಂದು ಇಲ್ಲಿಯ ಜನರು ತಿಳಿಯುತ್ತಾರೆ. ರಾಜಸ್ಥಾನದ ಕೆಲವೆಡೆಗಳಲ್ಲಿ ದೀಪಾವಳಿಯ ದಿವಸ ಬೆಕ್ಕನ್ನು ಬಹುವಾಗಿ ಸನ್ಮಾನಿಸಿ ಅದಕ್ಕೆ ಹಾಲು-ಮೊಸರನ್ನು ಕೊಡುತ್ತಾರೆ. ನಮ್ಮಲ್ಲಿ ಕೆಲವೆಡೆ ಕಸ, ಎಲೆ ಮುಂತಾದವನ್ನು ಲಕ್ಷ್ಮಿಯೆಂದು ತಿಳಿಯುವಂತೆ ಇಲ್ಲಿ ಬೆಕ್ಕನ್ನು ಲಕ್ಷ್ಮಿಯೆಂದು ತಿಳಿಯುತ್ತಾರೆ. ದೀಪಾವಳಿಯಂದು ಬೆಕ್ಕು ಎಷ್ಟೇ ಹಾನಿಯನ್ನುಂಟುಮಾಡಲಿ, ಅದನ್ನು ದಂಡಿಸುವದಿಲ್ಲ. ಹುಶ್ ಎಂದು ಬೆದರಿಸುವದೂ ಇಲ್ಲ. ಆದರ ಬದಲು ಬೆಕ್ಕು ಅಂದು ಪುಂಡಾಟಿಕೆ ನಡೆಸುವದು ತಮ್ಮ ಸೌಭಾಗ್ಯ ಎಂದು ತಿಳಿಯುತ್ತಾರೆ. ವ್ಯಾಪಾರಿಗಳಿಗೆ ಇದು ಹೊಸ ವರ್ಷದ ಪ್ರಾರಂಭದ ದಿನ. ಲಕ್ಷ್ಮೀಪೂಜೆಯು ದಿವಸ ಗಣಪತಿ ಮತ್ತು ಲಕ್ಷ್ಮಿಯ ಪೂಜೆಯನ್ನು ಸಂಭ್ರಮದಿಂದ ನೆರವೇರಿಸಿ ಅವರು ಹೊಸ ಖಾತೆಗಳನ್ನು ಬರೆಯಲು ಪ್ರಾರಂಭಿಸುತ್ತಾರೆ.



ಗುಜರಾತದಲ್ಲಿ ದ್ವಾದಶಿಯ ದಿನವೇ ದೀಪಾವಳಿ ಪ್ರಾರಂಭವಾಗುತ್ತದೆ. ಆ ದಿನವನ್ನು ಅವರು "ವಾದ್ಯವಾನ" ಎಂದು ಕರೆಯುತ್ತಾರೆ. ನಸುಕಿನಲ್ಲಿಯೆ ಎದ್ದು ಸ್ತ್ರೀಯರು ಸ್ನಾನಾದಿಗಳನ್ನು ತೀರಿಸಿಕೊಂಡು ಅಕ್ಕಿಯಿಂದ ಅಂಗಳದಲ್ಲಿ ರಂಗೋಲಿ ಹಾಕುತ್ತಾರೆ. ಇದು ಅತ್ಯಂತ ಕಲಾಪೂರ್ಣವಾಗಿರುತ್ತದೆ. ಈ ರಂಗೋಲಿಯಲ್ಲಿ ಒಂದು ವೈಶಿಷ್ಟ್ಯವಿರುತ್ತದೆ. ಏಕೆಂದರೆ ಅದರಲ್ಲಿ

ಹುಲಿಯ ಚಿತ್ರ ಬಂಡಿತವಾಗಿಯೂ ಬಂದಿರುತ್ತದೆ ಹುಲಿಯ ಚಿತ್ರ ತೆಗೆಯುವ ಸಂಪ್ರದಾಯ ಅಲ್ಲಿ ಬೆಳೆದುಕೊಂಡು ಬಂದಿದೆ. ದ್ವಾದಶಿಯಿಂದ ಬಿದಿಗೆಯ ವರೆಗೆ ಈ ಚಿತ್ರವನ್ನು ಹಾಗೆಯೆ ಇರಗೊಡುತ್ತಾರೆ. ಚತುರ್ದಶಿಯ ದಿನ ಪ್ರಾತಃಕಾಲದಲ್ಲಿ ಮನೆಯ ಹೆಂಗಸರೆಲ್ಲ ಸ್ನಾನ ಮಾಡಿ ಕಾಳಭೈರವನ ಪೂಜೆಗೆ ತೆರಳುತ್ತಾರೆ. ಅಂದು ಪ್ರತಿಯೊಬ್ಬಳೂ ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳಲೇಬೇಕು ಎಂಬ ನಿಯಮ ಅಲ್ಲಿದೆ. ದೀಪಾವಳಿಯ ದಿನ ಮುಂಜಾನೆ ಚಿಕ್ಕ ಚಿಕ್ಕ ಮಕ್ಕಳು ಒಂದೆಡೆ ಕಲೆತು ಒಂದು ಅರಿವೆಯ ತುಂಡಿನಲ್ಲಿ ಉಪ್ಪು ಕಟ್ಟಿಕೊಂಡು "ಸಪರೆ ಪರ ದಹಾಡೇ ಸಬರಸ" ಎಂದು ಕೂಗುತ್ತ ಊರಲ್ಲಿ ಅಡ್ಡಾಡುತ್ತಾರೆ. ಪ್ರತಿಯೊಂದು ಮನೆಯಲ್ಲಿ ಸ್ತ್ರೀ-ಪುರುಷರು ಅವರ ಹತ್ತಿರವಿರುವ ಉಪ್ಪನ್ನು ಖರೀದಿ ಮಾಡುತ್ತಾರೆ. ಏಕೆಂದರೆ ಹಾಗೆ ಮಾಡುವದು ಹೊಸ ವರ್ಷಾರಂಭದ ಒಂದು ಶಕುನ ಎಂದು ತಿಳಿಯಲ್ಪಡುತ್ತದೆ. ಅದೇ ದಿನ ರಾತ್ರಿ ಹುಡುಗರು ದೀವಟಿಗೆ ಗಳನ್ನು ಹಿಡಿದುಕೊಂಡು ಊರಲ್ಲಿ ಮೆರವಣಿಗೆ ತೆಗೆಯುತ್ತಾರೆ. ಜನರು ಈ ಹುಡುಗರನ್ನು ಮನೆಗೆ ಕರೆದು ಮಿಠಾಯಿ ಮತ್ತು ದಕ್ಷಿಣೆ ಕೊಡುತ್ತಾರೆ. ಇದಕ್ಕೆ ಅಲ್ಲಿ "ಮೇರನು" ಎನ್ನುತ್ತಾರೆ.

ಮೈಸೂರಿನ ದಸರಾ ಮತ್ತು ದೀಪಾವಳಿ ಭಾರತದಲ್ಲೆಲ್ಲ ಪ್ರಖ್ಯಾತವಾಗಿದೆ. ಈ ಸಮಯಗಳಲ್ಲಿ ಅಲ್ಲಿಯ ಜನರು ವಿವಿಧ ರೀತಿಯಲ್ಲಿ, ಕಲಾಪೂರ್ಣವಾಗಿ ಮನೆಯನ್ನು ಶೃಂಗರಿಸುತ್ತಾರೆ. ಅಸಂಖ್ಯ ದೀಪಗಳೊಂದಿಗೆ ಜನರ ಉತ್ಸಾಹವೂ ಪ್ರಕಾಶಿಸುತ್ತಿರುತ್ತದೆ. ದೀಪಾವಳಿಯ ದಿನ ಮುಂಜಾನೆ ಮನೆಯ ಗಂಡಸರನ್ನು ಹುಡುಗರನ್ನು ಮಣೆಯ ಮೇಲೆ ಕೂಡ್ರಿಸಿ ಹೆಂಗಸರು ಅವರ ಮೈಗೆ ಎಣ್ಣೆ ಹಚ್ಚುತ್ತಾರೆ. ಆಗ ಭಗವಾನ್ ಕೃಷ್ಣನು ನರಕಾಸುರನನ್ನು ಕೊಂದು ವಿಜಯಶಾಲಿಯಾದುದನ್ನು ವರ್ಣಿಸುವ ಸುಂದರವಾದ ಹಾಡನ್ನು ಅನ್ನುತ್ತಿರುತ್ತಾರೆ. ಸ್ನಾನವಾದ ನಂತರ ಎಲ್ಲರಿಗೂ ದೃಷ್ಟಿ ತೆಗೆಯುತ್ತಾರೆ. ಸ್ನಾನದ ಈ ಕಾರ್ಯಕ್ರಮ ಅತ್ಯಂತ ಪವಿತ್ರವಾದುದೆಂದು ಜನರು ತಿಳಿಯುತ್ತಾರೆ. ಗಂಗಾ ಸ್ನಾನದಷ್ಟೇ ಮಹತ್ವ ಇದಕ್ಕಿದೆ. ಸಂಜೆಯ ಹೊತ್ತಿಗೆ ಒಬ್ಬರಿಗೊಬ್ಬರು ಭೆಟ್ಟಿಯಾದಾಗ "ಗಂಗಾಸ್ನಾನ ಮಾಡಿದಿರಾ?" ಎಂದು ಕೇಳುತ್ತಾರೆ. ಮಾರನೆಯ ದಿನ ದೇವರು ಬಲಿರಾಜನ ಮೇಲೆ ವಿಜಯ ಸಂಪಾದಿಸಿದನೆಂದು ಉತ್ಸವವನ್ನಾಚರಿಸುತ್ತಾರೆ. ಇದು ಮೂರು ದಿನಗಳ ವರೆಗೆ ನಡೆಯುತ್ತದೆ.


ಆಂಧ್ರದಲ್ಲಿಯೂ ಇತರ ಕಾರ್ಯಕ್ರಮಗಳಿಗಿಂತ ಮನೆಯ ಶೃಂಗಾರಕ್ಕೆ ಹೆಚ್ಚು ಲಕ್ಷ್ಯವೀಯುತ್ತಾರೆ. ಪ್ರತಿಯೊಂದು ಮನೆಯ ಎದುರು ಒಂದು ಅಟ್ಟವನ್ನು ಕಟ್ಟಿ ಅದರ ಮೇಲೆ ಹಣತೆಗಳನ್ನಿರಿಸುತ್ತಾರೆ. ಅನಂತರ ಮನೆಯ ಹೆಂಗಸರು ಆ ಅಟ್ಟದ ಮೇಲೆ ಕುಳಿತು ರಾತ್ರಿಯೆಲ್ಲ ಲಕ್ಷ್ಮಿಯ ಸ್ವಾಗತಾರ್ಥ ಹಾಡು ಹೇಳುತ್ತಿರುತ್ತಾರೆ. ಕೆಲವು ಕಡೆಗಳಲ್ಲಿ ನೃತ್ಯ ಕಾರ್ಯಕ್ರಮಗಳೂ ಜರುಗುತ್ತವೆ. ನರಕಚತುರ್ದಶಿಯಂದು ಎಲ್ಲರೂ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುತ್ತಾರೆ.

ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಸಂಪ್ರದಾಯಗಳು ಸಾಮಾನ್ಯವಾಗಿ ಒಂದೇ ಬಗೆಯವು. ನರಕಚತುರ್ದಶಿ ಅಭ್ಯಂಜನಾದಿಗಳಂತೂ ಎಲ್ಲೆಡೆಯಂತೆ ಇಲ್ಲಿಯೂ ಇವೆ. ಮನೆಯ ಹೆಣ್ಣುಮಗಳು ಮದುವೆಯಾದ ವರ್ಷವಿದ್ದರೆ ಅಳಿಯನನ್ನು ಕರೆದು ಸನ್ಮಾನಿಸುವದು ಅನಿವಾರ್ಯವಾದ ರೂಢಿ. ಹಿಂದಿನ ಸಮೃದ್ಧಿಕಾಲದಲ್ಲಿ ಐದು ವರ್ಷಗಳ ವರೆಗೂ ಮಗಳು-ಅಳಿಯಂದಿರನ್ನು ಕರೆದು ಉಡುಗರೆ ಕೊಡುತ್ತಿದ್ದದುಂಟು. ಭಾವಬಿದಿಗೆ ಮತ್ತು ಅಕ್ಕನ ತದಿಗೆಯ ಕಾರ್ಯಕ್ರಮಗಳು ಇಲ್ಲಿಯ ವೈಶಿಷ್ಟ್ಯವಾಗಿವೆ. ದೀಪಾವಳಿ ಪ್ರತಿಪದೆಯ ಮರುದಿನ ಅಕ್ಕ-ತಂಗಿಯರು ತಮ್ಮಲ್ಲಿಗೆ ಅಣ್ಣ-ತಮ್ಮಂದಿರನ್ನು ಕರೆಸಿ ಔತಣ ಮಾಡುತ್ತಾರೆ. ಭಾವಬಿದಿಗೆಯ ದಿನ ಭಗಿನೀ ಹಸ್ತದಿಂದ ಭೋಜನ ಮಾಡುವದು ಮಂಗಲವೆಂದು ಭಾವಿಸಲ್ಪಡುತ್ತದೆ. ಮರುದಿನ ಅಕ್ಕ-ತಂಗಿಯರನ್ನು ಅಣ್ಣ ತಮ್ಮಂದಿರು ಕರೆಸಿ ಮರ್ಯಾದೆ ಮಾಡುತ್ತಾರೆ.

ದೀಪಾವಳಿ ಪ್ರತಿಪದೆ ಸಂನ್ಯಾಸಿಗಳನ್ನೂ ಬಿಡುವುದಿಲ್ಲ. ಸಮೀಪದಲ್ಲಿ ಸ್ವಾಮಿಗಳಿದ್ದರೆ ಭಕ್ತರು ಹೋಗಿ ಅವರಿಂದ ತೈಲಾಭ್ಯಂಜನ ಮಾಡಿಕೊಳ್ಳುತ್ತಾರೆ. ಪ್ರತಿಪದೆಯ ಗೋಪೂಜೆಯಲ್ಲದೆ ಇನ್ನೊಂದು ಕಾರ್ಯಕ್ರಮವೆಂದರೆ ರಾತ್ರಿಯೆಲ್ಲ ಪಗಡೆಯಾಟ. ಇದು ಪಾಂಡವರು ಆಡಿದ ದ್ಯೂತದ ಸ್ಮಾರಕ. ಪ್ರತಿಪದೆಯ ದಿನ ಪಾಂಡವರ ಮೂರ್ತಿಗಳನ್ನು ಕೂಡಿಸುವ ಪರಿಪಾಠವೂ ಕೆಲವು ಕಡೆ ಇದೆ. ಒಟ್ಟಿನ ಮೇಲೆ ಬಲಿ, ಪಾಂಡವರು, ಕೃಷ್ಣ ಮೊದಲಾದ ಪೌರಾಣಿಕ ವ್ಯಕ್ತಿಗಳ ಸಂಬಂಧವಿದ್ದರೂ ದೀಪಾವಳಿ ಕರ್ನಾಟಕದಲ್ಲಿ ಧಾರ್ಮಿಕಕ್ಕಿಂತಲೂ ಸಾಮಾಜಿಕ ಹಬ್ಬವೆನ್ನಬೇಕು.

ದಕ್ಷಿಣ ಕನ್ನಡದಲ್ಲಿ ನರಕಚತುರ್ದಶಿಯಿಂದ ಮೂರು ದಿನ ಎಲ್ಲೆಡೆಯಂತೆಯೇ ಹಬ್ಬ ಆಚರಿಸಲ್ಪಡುತ್ತದೆ. ಬಲಿಯ ವಿಷಯಕ್ಕೆ ಇಲ್ಲಿಯ ಒಕ್ಕಲಿಗರ ಅಭಿಮಾನ ಬಹಳ. ಅವರು ಹೊಲಗಳಿಗೆಲ್ಲ ಅಂದು ಮುಚ್ಚಂಜೆಯ ನಂತರ ದೀವಟಗೆ ಹಚ್ಚಿ ಬಲಿರಾಜನನ್ನು ಗಟ್ಟಿಯಾಗಿ ಕೂಗಿ ಕರೆಯುತ್ತಾರೆ. ಉಡುಪಿಯ ಉತ್ತರಕ್ಕೆ ಈ ಹಬ್ಬ ಮರುದಿನ ಮಾಡುತ್ತಾರೆ. ಬಲಿಯು ಉತ್ತರದಲ್ಲಿ ಪೂಜೆ-ಪುರಸ್ಕಾರ ಅವಲಕ್ಕಿ ನೈವೇದ್ಯಗಳನ್ನು ಸ್ವೀಕರಿಸುತ್ತ ಉದಿಯಾವರ ಹೊಳೆ ದಾಟುವಷ್ಟಕ್ಕೆ ಬೆಳಗಾಗಿ ಬಿಟ್ಟಿತಂತೆ! ಅದೇ ಮರುದಿನ ಅಲ್ಲಿ ಅವನಿಗೆ ಪೂಜೆ!

ಬೇರೆ ಬೇರೆ ಪ್ರಾಂತಗಳಲ್ಲಿ ದೀಪಾವಳಿ ಹಬ್ಬದ ವೈಶಿಷ್ಟ್ಯಗಳು ಈ ಬಗೆಯಾಗಿವೆ. ಹೊಸ ಬಟ್ಟೆ ಕೊಳ್ಳುವದು, ಪಕ್ವಾನ್ನವನ್ನು ತಯಾರಿಸುವದು, ಮನೆಯನ್ನು ಅಲಂಕರಿಸುವದು ಮುಂತಾದ್ದೆಲ್ಲ ಎಲ್ಲರಿಗೂ ಇದೆ. ಇವಲ್ಲದೆ ಇರುವ ವೈಶಿಷ್ಟ್ಯಗಳನ್ನು ಇದು ವರೆಗೆ ಹೇಳಿದ್ದಾಯಿತು. ಕೆಲವು ಸಂಪ್ರದಾಯಗಳು ಅಂಧಶ್ರದ್ಧೆಯಿಂದ ಹುಟ್ಟಿದರೆ ಕೆಲವು ವಿನೋದಕ್ಕಾಗಿ ಹುಟ್ಟಿವೆ. ಅದು ಹೇಗಿದ್ದರೂ ದೀಪಾವಳಿಯ ಆನಂದವನ್ನು ಇವು ಹೆಚ್ಚಿಸುವವು ಎಂಬುದು ಮಾತ್ರ ನಿಜ.





ಅವಳಿಗೆ ಗೊತ್ತಿರಲಿಲ್ಲ!

ಲೇಖಕರು:
ಶ್ರೀ ನಿರಂಜನ

"ನಂಜಪ್ನೋರು ಇಲ್ವೆ?"

"ಯಾವ ನಂಜಪ್ನೋರನ್ನಾ?

"ಈ ಮನೇಲಿ ನಂಜಪ್ನೋರೂಂತ ಒಬ್ರಿಲ್ವೆ ಅಮ್ಮಣ್ಣಿ?"

"ಇಲ್ವಲ್ಲಾ!"

"ಅಯ್ಯೋ ಭಗವಂತ!"

ಈ ಸಂಭಾಷಣೆಗೆ ಕಿವಿಗೊಡುತ್ತ ಬಾಗಿಲ ಮರೆಯಲ್ಲಿ ನಿಂತಿದ್ದ ಪಕ್ಕದ ಮನೆಯೊಡತಿ ತಲೆ ಹೊರ ಹಾಕಿ ಅಂದಳು:

"ನಂಜಪ್ಪ ಅನ್ನೋದು ಹಿಂದೆ ಈ ಮನೇಲಿ ವಾಸವಾಗಿದ್ನೋರ ಹೆಸರು ಕಣ್ರೀ."

"ಹಾಗೇನು?"

ಆ ವ್ಯಕ್ತಿಯನ್ನು ಕೇಳಿಕೊಂಡು ಬಂದಿದ್ದ ಹೆಂಗಸಿನ ಕಣ್ಣುಗಳಲ್ಲಿ ಆಸೆಯ ಬೆಳಕು ಮಿನುಗಿತು.

"ಅವರೀಗ ಎಲ್ಲಿದ್ದಾರೆ ಹೇಳ್ತೀರಾ?"

"ಹೋದ ವರ್ಷ ಅವರ ಸಾಹೇಬರಿಗೆ ಬಳ್ಳಾರಿಗೆ ವರ್ಗವಾಯ್ತು. ಅಲ್ಲೇ ಹೋಗಿರ್ಬಹುದು. ಸರಿಯಾಗಿ ಗೊತ್ತಿಲ್ಲ," ಎಂದಳು ನೆರೆಮನೆಯಾಕೆ.

ಮೂಳೆಗಳು ಎದ್ದುಕಾಣಿಸುತ್ತಿದ್ದ ಮುಖ; ಗುಳಿಬಿದ್ದಿದ್ದ ಕೆನ್ನೆಗಳು; ಆಳಕ್ಕೆ ಇಳಿದಿದ್ದ ಕಣ್ಣುಗಳು; ಅಲ್ಲೊಂದು ಇಲ್ಲೊಂದು ಬೆಳ್ಳಿಯ ಸರಿಗೆಗಳಿದ್ದ ಕೇಶರಾಶಿ; ಮೈಯನ್ನು ಮುಚ್ಚಿದ್ದ ರೇಶಿಮೆ ಸೀರೆ. ನಂಜಪ್ಪನನ್ನು ಹುಡುಕಿಬಂದಿದ್ದ ಆಕೆ ಹಿಂದೆ ಸುಂದರಿಯಾಗಿದ್ದಿರಬೇಕೆಂದು ಊಹಿಸುವುದು ಕಷ್ಟವಾಗಿರಲಿಲ್ಲ.

ನಿರಾಸೆಯಿಂದ ಆಕೆಯ ಮುಖ ಕಪ್ಪಿಟ್ಟುದನ್ನು ಕಂಡು ಮನೆಯವಳೆಂದಳು:

"ನಂಜಪ್ಪ ಅನ್ನೋರು ನಿಮ್ಮ ಬಳಗವೋ?"

"ಇಲ್ಲ ತಾಯಿ, ನಾವು ಬೇರೆ ಜನ. ದಸರೆಗೆ ಬಂದಾಗಲೆಲ್ಲಾ ಅವರಲ್ಲಿ ಒಪ್ಪೊತ್ತು ಇದ್ದು ಹೋಗೋದು ಪದ್ಧತಿ."

ಪಕ್ಕದಮನೆ ಹೆಂಗಸು ಮರೆತುದನ್ನು ಮೆಲ್ಲ ಮೆಲ್ಲನೆ ಸ್ಮರಿಸಿಕೊಂಡವಳಂತೆ ಅಂದಳು:

"ನಿಮ್ಮನ್ನ ಒಂದೆರಡು ಸಾರೆ ಇಲ್ಲಿ ನೋಡಿದ ನೆನಪಿದೆ."

ಹೊರಗೆ ಅಂಗಳದಲ್ಲೆ ನಿಂತಿದ್ದ ಆ ಹೆಂಗಸಿನ ಕಾತರ ತುಂಬಿದ ಧ್ವನಿಯಿಂದ ಮನೆಯೊಡತಿಯ ಕುತೂಹಲ ಕೆರಳಿತು. ಆಕೆ ಕೇಳಿದಳು:

"ಯಾವೂರು ನಿಮ್ಮದು?"

"ಬೆಂಗಾಡು ತಾಲೋಕು—ಸಾವೂರು."

"ಇಲ್ಲಿಂದ ಬಹಳ ದೂರ ಅಲ್ವೆ?"

"ಹೌದು."

"ದಸರಾ ನೋಡೋಕೆ ಬಂದಿರಾ?"

"ಹೂನವ್ವಾ."

"ಇಲ್ಲಿ ನಿಮಗೆ ಬೇಕಾದೋರು ಇದಾರೇಂತ ತೋರುತ್ತೆ."

"ಇದಾರೆ."

ಆ ಮನೆಯಲ್ಲಿ ಉಳಿದುಕೊಳ್ಳಲು ಅವಕಾಶ ವಿತ್ತೋ ಇಲ್ಲವೋ. ಅದೇನಿದ್ದರೂ 'ಇದಾರೆ' ಎನ್ನುವ ಸುಳ್ಳು ಉತ್ತರ ಆ ಸಾಧ್ಯತೆಗೆ ಕಲ್ಲು ಹಾಕಿತ್ತು.

ಗಂಡ ಬಂದಿರಲಿಲ್ಲವೇನೊ ಮನೆಗೆ....? ಈ ಮನೆಗೆ ಒಡತಿ ತಾನು ಎನ್ನುವಂತೆ ಬಾಗಿಲಿಗೆ ಅಡ್ಡವಾಗಿಯೆ ನಿಂತಿದ್ದ ಗೃಹಿಣಿ. ಆಕೆಗೆ ಅಂಟಿಕೊಂಡು, ಕಾಲುಗಳ ಮರೆಯಿಂದ ಇಣಿಕಿ ಇಣಿಕಿ ನೋಡುತಿದ್ದ ಮಗು, ಮುದ್ದಾದ ಮಗು........ ತನ್ನದಲ್ಲದ ಲೋಕ......

ಕಳೆದ ವರ್ಷವೇ ನಂಜಪ್ಪ ಕಟುವಾಗಿ ವರ್ತಿಸಿದ್ದ. ಆದರೂ ಆತನೆ ತನಗಿದ್ದ ಆಸರೆ. ಈಗ ಆ ನಂಜಪ್ಪನೇ ಇಲ್ಲ—

"ಬಳ್ಳಾರಿಗೆ ವರ್ಗವಾಯ್ತೆ ಅವರ ಸಾಹೇಬರಿಗೆ? ನನಗೆ ಗೊತ್ತೇ ಇರ್‍ಲಿಲ್ಲ."

ಆ ಸಾಹೇಬರೇ ಇರಬಹುದು, ಚಪಲ ತೀರಿದ ಬಳಿಕ ಮುಖ ನೋಡಲು ಬಯಸದೆ ಎರಡು ರೂಪಾಯಿ ಎಸೆದು ಕಳುಹಿಕೊಟ್ಟ ವ್ಯಕ್ತಿ....

"ಬಳ್ಳಾರಿ ಮೈಸೂರಿಗೆ ಸೇರ್ಕೊಳ್ಲಿಲ್ವೆ? ಆಗ ಬಹಳ ಜನಕ್ಕೆ ಆ ಕಡೆಗೆ ವರ್ಗವಾಯ್ತು."

ಬಳ್ಳಾರಿ ಮೈಸೂರಿಗೆ ಸೇರಿತ್ತೊ ಇಲ್ಲವೋ ಅವಳಿಗೆ ಗೊತ್ತಿರಲಿಲ್ಲ. ಹಾಗೆ ಸೇರುವುದೆಂದರೇನೆಂಬುದೂ ಆಕೆಗೆ ತಿಳಿಯದು.

"ಬರ್‍ತೀನಿ."

ಕೆಳಕ್ಕೆ ಬೇರುಬಿಟ್ಟದ್ದುವೇನೋ ಎಂಬಂತೆ ನೆಲಕ್ಕೆ ಅಂಟಿಕೊಂಡಿದ್ದ ಪಾದಗಳನ್ನು ಕೀಳುತ್ತಾ ಕೈಲಿದ್ದ ಬಟ್ಟೆಯ ಚೀಲವನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಾ, ಆಕೆ ಹೊರಟಳು.

‡ ‡ ‡ ‡

ಕಳೆದ ಏಳು ವರ್ಷಗಳಿಂದ ಆಕೆ ತಪ್ಪದೆ ನೋಡಲು ಬರುತಿದ್ದ ದಸರೆ.....

ಗಂಡನಿದ್ದಷ್ಟು ಕಾಲವೂ ಮೈಸೂರಿಗೆ ಆಕೆ ಬಂದಿರಲಿಲ್ಲ. ಕೃಷ್ಣ ಬಸಿರಲ್ಲಿದ್ದಾಗ ಆಸೆಯಾಗಿತ್ತು. ಹೋಗುವ ನಿರ್ಧಾರವನ್ನೂ ಅವರಿಬ್ಬರು ಮಾಡಿದ್ದರು. ಆದರೆ, ಮೇಯಲು ಹೋದ ಒಂದು ಹೋರಿ ಹುಲಿಯ ಬಾಯಿಗೆ ತುತ್ತಾಗಿ ಆ ಬಡಸಂಸಾರವನ್ನು ವಿಪತ್ತಿಗೆ ಗುರಿಮಾಡಿತ್ತು. ಅನಂತರ ಒದಗಿಬಂದುದು ಕಷ್ಟಪರಂಪರೆಯೇ.

ಕೃಷ್ಣ ಹುಟ್ಟಿದ ಮೂರನೆಯ ವರ್ಷದಲ್ಲೆ ಆತನ ತಂದೆ ವಿಷಮಜ್ವರಕ್ಕೆ ತುತ್ತಾಗಿ ತೀರಿಕೊಂಡ. ಆಗ ವಿಧವೆಯಾದ ಆಕೆ ಇಪ್ಪತ್ತರ ತರುಣಿ. ಆತ ಸಾಯುವ ಹೊತ್ತಿಗಾಗಲೇ ಹೇರಳ ಸಾಲವಾಗಿತ್ತೆಂಬುದು, ಆ ಸಾಲದ ಸಂಖ್ಯೆ ಬಲು ದೊಡ್ಡದೆಂಬುದು, ಆಕೆಗೆ ತಿಳಿದುದು ನಿಧಾನವಾಗಿ. ಒಡೆಯರು ಹೊಲವನ್ನೂ ಒಂಟಿ-ಎತ್ತನ್ನೂ ವಶಪಡಿಸಿಕೊಂಡರು. ಅಳಿದವನ ಮುದಿತಾಯಿಯನ್ನೂ ತನ್ನ ಎಳೆಯ ಕೂಸನ್ನೂ ರಕ್ಷಿಸುವ ಭಾರವನ್ನು ಹೊತ್ತು, ಆಕೆ ಆ ಒಡೆಯರ ಮನೆಯಲ್ಲಿ ಊಳಿಗದ ತೊತ್ತಾದಳು.

ಬಹಳ ದಿನಗಳಿಂದ, ಬಳುಕುವ ಮೈಯ ಆ ಹೆಣ್ಣಿನ ಮೇಲೆ ಕಣ್ಣಿಟ್ಟಿದ್ದ ಊರಿನ ಸೊಗಸುಗಾರ ನಿಂಗಣ್ಣ, ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ಬಲೆ ಬೀಸಿದ. ಸತ್ತು ಮಣ್ಣಾದವನೋ, ಅಪೂರ್ವವೆನ್ನುವ ಯಾವ ನೆನಪನ್ನೂ ಉಳಿಸಿ ಹೋಗಿರಲಿಲ್ಲ. ಈಗ, ಹೆಣ್ಣಿಗೆ ಸುಖವನ್ನು ನೀಡುವ ಕಲೆಯನ್ನು ತಿಳಿದಿದ್ದವನ ಸೆರೆಯಾಳಾಗಿ ಆಕೆ ಮೈ ಮರೆಯುವುದು ತಡವಾಗಲಿಲ್ಲ.

ಬಸಿರು ಕಣ್ಣುಮುಚ್ಚಾಲೆಯಾಡಿತು. ಔಷಧಿಗಳು ಯಮಯಾತನೆಗೆ ಆಕೆಯನ್ನು ಗುರಿಮಾಡಿದುವು.

ಕೃಷ್ಣ ಓಡಿಹೋದುದು ಅಂತಹ ಪರಿಸ್ಥಿತಿಯಲ್ಲೇ. ಆಕೆಗೆ ತಿಳಿಯದಂತೆಯೇ ಆ ಮಗುವಿನ ಪಾಲಿಗೆ ನಿಂಗಣ್ಣ ಯಮದೂತನಾಗಿದ್ದ. ಆಕೆ ಗೋಳಾಡಿದಳು. ಹತ್ತಿರದ ಊರುಗಳನ್ನು ಸುತ್ತಿಬಂದಳು. ಹತ್ತು ಜನರೊಡನೆ ತನ್ನ ಸಂಕಟವನ್ನು ತೋಡಿಕೊಂಡಳು.

ಆದರೆ ಆರು ವರ್ಷ ವಯಸ್ಸಿನ ಎಳೆಯಹುಡುಗ ಕೃಷ್ಣ ಮಾತ್ರ ಮರಳಿ ಬರಲಿಲ್ಲ.

ಆಕೆ ಮೊದಲಬಾರಿ ಮೈಸೂರಿನ ದಸರೆಗೆ ಬಂದುದು ನಿಂಗಣ್ಣನೊಡನೆ—ಮಗನನ್ನು ಹುಡುಕಲೆಂದು, ದಸರಾ ನೋಡಲೆಂದು.

ಕೃಷ್ಣ ಕಾಣದೆ ಹೋದರೂ ದಸರೆಯ ಹಬ್ಬವನ್ನು ನೋಡಿದುದಾಯಿತು. ಆಗ ಅವರು ಇಳಿದುಕೊಂಡುದು ನಂಜಪ್ಪನಲ್ಲಿ.

ನಿಂಗಣ್ಣನ ಪಾಲಿಗೆ ಆಕೆ, ಊರಿನಲ್ಲಿದ್ದ ಹಳೆಯ ಸೈಕಲಿಗೆ ಸಮನಾಗಿದ್ದಳು. ಅದನ್ನು ಮಾರಿ ಹೊಸದನ್ನು ಕೊಳ್ಳಬೇಕೆಂದು ಆತ ಎಂದೋ ಯೋಚಿಸಿದ್ದ. ಈಗ, ಆ ಹೆಂಗಸಿನ ಹೊರೆಭಾರವನ್ನು ಕೆಳಗಿಳಿಸಿ ಕೈಕೊಡವಿಕೊಂಡ.

ಅನಂತರವೂ ಒಂದೆರಡು ಸಾರೆ ನಿಂಗಣ್ಣ ಆಕೆಯೊಡನೆ ಮೈಸೂರಿನ ದಸರೆಗೆ ಬಂದಿದ್ದ. ಆಗ ಆತ ಕಟ್ಟುನಿಟ್ಟಿನ ವ್ಯವಸ್ಥಾಪಕ. ಗಿರಾಕಿ ಕುದುರಿಸಿಕೊಟ್ಟು ಕಮೀಶನು ಪಡೆಯುವ ಏಜಂಟು.

ಮುಂದೆ ಆಕೆ ಬರುತಿದ್ದುದು ಒಂಟಿಯಾಗಿಯೆ. ದಸರೆಯ ದಿನಗಳಲ್ಲಿ ಅವಳು ನಂಜಪ್ಪನ ಅತಿಥಿ. ಹಿಂತಿರುಗುವಾಗ ಹೊಸ ಸೀರೆ—ರವಕೆ, ಹತ್ತಿಪ್ಪತ್ತು ರೂಪಾಯಿ ನಗದು ಹಣ ಆಕೆಯ ಕೈಲಿರುತಿದ್ದುವು.

ಆಕೆಯ ಅತ್ತೆ ಎನಿಸಿಕೊಂಡಿದ್ದ ಮುದುಕಿ ಉಪವಾಸ ಬಿದ್ದೇ ಕಣ್ಣುಮುಚ್ಚಿತು.

ನಂಜಪ್ಪನಿಗೆ ಗುರುತಿನ ಮನೆಗಳು ಹಲವಿದ್ದುವು. ಆತನಲ್ಲಿಗೆ ಅತಿಥಿಯಾಗಿ ಬರುತಿದ್ದವಳು ಆಕೆಯೊಬ್ಬಳೇ ಅಲ್ಲ. ವ್ಯವಹಾರವನ್ನು ಅಚ್ಚುಕಟ್ಟಾಗಿಯೆ ನಡೆಸುತಿದ್ದ ಆ ಕುಶಲಮತಿ, ವರ್ಷ ಕಳೆದಂತೆಲ್ಲ ರೋಗಿಯಾಗುತ್ತ ಬಡಕಲಾ

ಗುತ್ತ ಬಂದ ಆಕೆಯ ವಿಷಯದಲ್ಲಿ ಸ್ವಾಭಾವಿಕವಾಗಿಯೇ ನಿರುತ್ಸಾಹ ತಳೆದ.

ಆದರೂ ಈ ಸಾರೆಯೂ ಆಕೆ ಆಸೆ ಇಟ್ಟುಕೊಂಡೇ ಬಂದಳು. ಬಲವಾಗಿ ಗಾಳಿ ಬೀಸಿದರೆ ಹಾರಿ ಹೋಗುವಂತಹ ಸೊರಗಿದ ಕಡ್ಡಿ ಜೀವ. ಬಂದು ಬಾಗಿಲು ತಟ್ಟಿದಾಗ ನಂಜಪ್ಪ 'ಹೋಗು' ಎನ್ನಲಾರ ಎಂಬ ನಂಬಿಕೆಯಿಂದಲೇ ಬಂದಳು.

ಆದರೆ ಆ ನಂಜಪ್ಪ ಬಲುದೂರದ ಬಳ್ಳಾರಿಗೆ ಹೋಗಿದ್ದ ವಿಷಯ ಆಕೆಗೆ ಗೊತ್ತಿರಲಿಲ್ಲ.

‡ ‡ ‡ ‡

ದೊಡ್ಡ ದೊಡ್ಡ ಕಟ್ಟಡಗಳ ಗೋಡೆಗಳಿಗೆ ಬಿಳಿ ಬಣ್ಣ, ಗೋಪಿಬಣ್ಣ. ಕಿಟಕಿ ಬಾಗಿಲುಗಳಿಗೆ ಹಿತ್ತಿಲ ಕೆಂಬಿಗಳಿಗೆ ಹಸುರು. ಜಂಬೂಸವಾರಿ ಸಾಗುವ ವಿಸ್ತಾರವಾದ ಬೀದಿಯುಗಲಕ್ಕೆ ಉದ್ದಕ್ಕೂ ಕಮಾನುಗಳು—ದೀಪಗಳು. ಎಗ್ಜಿಬಿಷನ್ ಕಟ್ಟಡ . . . . . .

ಆಕೆ ದುಡ್ಡು ತಂಧಿರಲಿಲ್ಲ. ಪ್ರಯಾಣದ ಅಂತ್ಯದಲ್ಲಿ ಉಳಿದಿದ್ದ ಚಿಲ್ಲರೆಯನ್ನೆಲ್ಲ ಖರ್ಚುಮಾಡಿ ಒಂದು ಮೂಲೆ ಹೋಟೆಲಿನಲ್ಲಿ ಆಕೆ ತಿಂಡಿ ತಿಂದಳು; ಕಾಫಿ ಕುಡಿದಳು . . . . ಸಂಜೆಯಾಗುವ ವರೆಗೂ ಹಾದಿಹೋಕರ ಮುಖ ನೋಡುತ್ತ ಬೀದಿ ಅಲೆದಳು.

ಕೃಷ್ಣನಿಗೆ ಹದಿಮೂರು ವರ್ಷ ವಯಸ್ಸಾಗಿರಬಹುದು ಈಗ. ತೆಳ್ಳಗೆ—ಎತ್ತರವೇ ಇರಬಹುದು ತನ್ನ ತಂದೆಯ ಹಾಗೆ. ದೇಶದ ಹತ್ತು ಮೂಲೆಗಳಿಂದ ದಸರೆ ನೋಡಲೆಂದು ಸಂಸಾರಗಳು ಬಂದಿದ್ದುವು—ಮಕ್ಕಳು, ತಾಯಿತಂದೆಯರು—ಹನ್ನೆರಡು ಹದಿಮೂರು ವರ್ಷ ವಯಸ್ಸಿನ ಮಕ್ಕಳು. ತನ್ನ ಕೃಷ್ಣ ಆ ಮಕ್ಕಳ ಹಾಗಿರಲಾರ. ಬಡವೆಯ ಬಡಹುಡುಗ . . . . .

ದೀಪಗಳು ಬೆಳಗಿದುವು. ಆಸ್ಪತ್ರೆಯ ಆವರಣದ ಹೊರಗೆ ಬೀದಿಯ ಬದಿಯಲ್ಲಿದ್ದೊಂದು ಕಲ್ಲು ಬೆಂಚಿನ ಮೇಲೆ ಆಕೆ ಕುಳಿತಳು, ಬಹಳ ಹೊತ್ತು.

ತಾನೇನು ಮಾಡಬೇಕಿನ್ನು ? ರಾತ್ರೆಯನ್ನೆಲ್ಲಿ ಕಳೆಯಬೇಕು ?

ಮೂವತ್ತಕ್ಕೆ ಮುಪ್ಪು. ಕೇಳಿದ ಯಾರಾದರೂ ನಗಬಹುದು. ಆದರೆ ನೋಡಿದವರು ನಗಲಾರರು.

ಆಹ್ವಾನದ ಮುಗುಳುನಗೆ—

ಎಷ್ಟೋ ಜನ ನೋಡುತಿದ್ದರು. ಆದರೆ ಅವರ ಪರೀಕ್ಷಕದೃಷ್ಟಿಯಲ್ಲಿ ಆಕೆ ಉತ್ತೀರ್ಣಳಾಗುತ್ತಿರಲಿಲ್ಲ.

ಸಮೀಪದಲ್ಲೆ ಹಿತ್ತಿಲಗೋಡೆಗೊರಗಿ ಕೆಲವರು ಕುಳಿತಿದ್ದರು—ಸುತ್ತುಮುತ್ತು ಬೇರೆ ಜನ . . . ದಸರಾ ನೋಡಲು ಬಂದವರೇ ಹಳ್ಳಿಯವರಿರಬಹುದು. ಅವರೊಳಗೆ ಮಾತುಕತೆ ನಡೆದಿತ್ತು.

" ಈ ಸಲನೇ ಕೊನೇ ದಸರಾ ನಂತೆ, ಹೌದಾ ? ''

" ಯಾರು ಹಾಗಂದೋರು ? ''

" ಮೈಸೂರು ಸಂಸ್ಥಾನವೇ ಬೇಡಾಂತ ಮಾಡ್ಬಿಟ್ಟವ್ರಂತೆ. ''

" ಎಂಗೆ ? ಅದ್ಯಾಕ್ಮಾಡಾರು ? ''

" ಯಾಕಂದ್ರೆ ? ಅರಮನೇನ ಕಿತ್ಕೋಬೇಕೊಂತ್ಲೂ ಮಾಡವ್ರೆ. ''

" ಕಲಿಗಾಲ ಕಣಪ್ಪೊ . . . . ''

" ಮಹಾರಾಜರೇ ಬೇಡ ಅಂದೋರುಂಟೊ? ''

ಹೊಸ ವಿಷಯ, ಹೊಸ ಮಾತು. ಆದರೆ ಆಕೆಗೊಂದೂ ತಿಳಿಯದು. ಓದುಬರಹ ಬಲ್ಲವಳಲ್ಲ. ಆಕೆಯೊಡನೆ ಸುಖಪಟ್ಟು ಹಲವರಿಗೆ ಅದರ ಅರಿವಿರಬಹುದು—ಆಕೆಗಲ್ಲ.

ಆದರೂ ದಸರಾ ಇನ್ನಿಲ್ಲವೆಂದು ಕೇಳಿ ಅವಳಿಗೆ ದುಃಖವಾಯಿತು. ಇನ್ನು ತಾನು ಈ ಊರಿಗೆ ಬರಬೇಕಾದುದಿಲ್ಲ. ತನ್ನ ಮಗ ಕೃಷ್ಣ ಎಂದಾದರೂ ದಸರೆಗೆ ಬಂದೇ ಬರುವನೆಂಬ ಆಸೆಗೂ ಅವಕಾಶವಿಲ್ಲ ಇನ್ನು. ವರ್ಷಕ್ಕೆ ಬೇಕಾದ ಸೀರೆ—ಒಂದಿಷ್ಟು ದುಡ್ಡು . . .

" ಬರ್ತೀಯಾ? ''

ಗಡಸಾಗಿದ್ದ ಸ್ವರ, ಬೀಡಿಯ ಹೊಗೆ ಉಗುಳುತಿದ್ದ ದಪ್ಪಗಿನ ತುಟಿಗಳು; ಕತ್ತಲೆಯ ಹೊತು ಮಕ್ಕಳು ಕಂಡರೆ ಹೆದರಿಕೊಳ್ಳುವಂತಹ ಆಕೃತಿ..

ಆಕೆ ವಿನೀತಳಾಗಿ ಹಿಂಬಾಲಿಸಿದಳು.

ಓಣಿಗಳನ್ನು ದಾಟ ಸೇರಿದ ಕತ್ತಲಿನ ಗೂಡುಮನೆ. ಇಲ್ಲಿ ದೀಪಗಳಿಲ್ಲ—ವಿದ್ಯುಚ್ಛಕ್ತಿ ಇಲ್ಲ. ಹರಕು ಚಾಪೆ. ಹೊಲಸು ವಾಸನೆ. ಕೆಟ್ಟ ಮಾತು . . .

* * *

ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ ವಿಸ್ತಾರವಾದೊಂದು ಭವನದಲ್ಲಿ ನಡೆಯುತಿತ್ತು. ಉದ್ವಿಗ್ನಗೊಂಡ ವಾತಾವರಣ. ಆರೋಪ-ಪ್ರತ್ಯಾರೋಪಗಳು. ಆಕ್ರೋಶ . . . .

ಬೀದಿಯುಲ್ಲೊಬ್ಬ ಮೂರು ಬಣ್ಣಗಳ ಬಾವುಟ ನೆಟ್ಟು ಉಪವಾಸ ಕುಳಿತಿದ್ದ ಖಾದಿಧಾರಿಯಾದ ಯುವಕ.

ಜನ ಆತನ ಸುತ್ತಲೂ ಗುಂಪು ಸೇರಿದ್ದರು, ಆಕೆಯೂ ಆ ಹಾದಿಯಾಗಿ ಬಂದಳು. ಇಣಿಕಿ ನೋಡುವ ಬಯಕೆಯಾಯಿತು. ಬೊಂಬೆಯಾಟವೆ? ದೊಂಬರಾಟವೆ? ಹಾವಾಡಿಗನೆ?

ಜನ ಮಾತನಾಡುತಿದ್ದರು.

"ಇದೇನ್ರಿ ಇದು?''

"ಆಮರಣ ಉಪವಾಸ ಕಣ್ರೀ!''

"ಉಪವಾಸ ಮುರಿಯೋ ತನಕವೂ ಆಮರಣ ಉಪವಾಸ!"—ಮೂರನೆಯ ಸ್ವರ.

"ಯಾಕಂತೆ?"—ಮೊದಲ ಪ್ರಶ್ನೆ ಕೇಳಿದ ಧ್ವನಿಯೇ.

"ಮೈಸೂರು ಈಗಿರೋ ಹಾಗೆಯೇ ಇರಬೇಕೂಂತ.''

"ಪಾಪ!''

ವ್ಯಂಗ್ಯೋಕ್ತಿ; ಸಹಾನುಭೂತಿಯ ಉದ್ಗಾರ.

ಮೈಸೂರನ್ನು ಉಳಿಸಿಕೊಳ್ಳಲು ಉಪವಾಸ—ಆಕೆಗೊಂದೂ ಅರ್ಥವಾಗಲಿಲ್ಲ. ಹೃಷ್ಟಪುಷ್ಟನಾದ ಆ ಯುವಕನಿಗೆ ಬೀದಿಯ ಬದಿಯಲ್ಲಿ ಉಪವಾಸ ಬಿದ್ದು ಸಾಯುವ ಗತಿ ಒದಗಬೇಕೆ?

ಪೋಲೀಸರೊಡನೆ ಬಂದ ಅಧಿಕಾರಿಯ ಸ್ವರ ಕೇಳಿಸಿತು.

"ಇಲ್ಲಿ ಯಾರೂ ಗುಂಪು ಕಟ್ಕೊಡದು. . !''

ಆಕೆ ಬೇಗಬೇಗನೆ ಅಲ್ಲಿಂದ ಹೆಜ್ಜೆ ಹಾಕಿದಳು. ಪೋಲೀಸರನ್ನು ಕಂಡರೆ ಯಾವಾಗಲೂ ಆಕೆಗೆ ಭಯವಾಗುತಿತ್ತು.

ಅಲ್ಲದೆ ಮಾತುಕತೆಯ ಉದ್ದೇಶ, ಅರ್ಥ—ಒಂದೂ ಆಕೆಗೆ ಗೊತ್ತಾಗಲಿಲ್ಲ.

* * *

ನವರಾತ್ರಿಯ ಉತ್ಸವ. ದಸರೆ ನೋಡಲೆಂದು ಮೋಡಗಳೂ ಧಾವಿಸಿ ಬಂದವು. ಅಲಂಕೃತ ಹೆಣ್ಣಿಗೆ ಕರಿಯ ಮೇಲಂಗಿ ತೊಡಿಸಿದ ಹಾಗೆ ಕತ್ತಲೆ. ಬಳಿಕ ಎಡೆಬಿಡದೆ ಸುರಿದ ಜೋರೋ ಮಳೆ . . . . .

ಪುರಭವನದ ಜಗಲಿಯ ಮೇಲೆಯೆ ಒಂದು ರಾತ್ರೆಯನ್ನು ಆಕೆ ಕಳೆದಳು.

ಬೆಳಗಾದಾಗ, ಆಕೆಯ ಇನ್ನೊಂದು ಸೀರೆಯಿದ್ದ ಕೈಚೀಲ ಮರೆಯಾಗಿತ್ತು. ತನ್ನ ದುರದೃಷ್ಟವೇ ಎಂದು ಆಕೆ ಹಲುಬಿದಳು.

ಆ ರಾತ್ರೆ ದೊರೆತದ್ದು ಎಂಟೇ ಆಣೆ. ಎಷ್ಟೊಂದು ಜನ ಸ್ಪರ್ಧಿಗಳು! ಎಂಟಾಣೆ ದೊರೆತುದೂ ಪುಣ್ಯವೇ.

ನೂರು ಊರುಗಳ ನೂರು ಬಗೆಗಳ ಜನ. ಬೇರೆ ಬೇರೆ ಭಾಷೆಗಳಲ್ಲಿ ಮಾತು. ಕಣ್ಣಿಗೆ ಬಣ್ಣಗಳ ಹಬ್ಬ. ಬಿರಿಯುವಂತೆ ತುಂಬಿಯೇ ಇರುತಿದ್ದ ಮೋಟಾರುಗಳು ಒಂದರ ಹಿಂದೊಂದು, ಒಂದರ ಹಿಂದೊಂದು. ಬೃಂದಾವನಕ್ಕೆ, ಚಾಮುಂಡಿಬೆಟ್ಟಕ್ಕೆ, ನಂಜನಗೂಡಿಗೆ. ಸದ್ದು-ಗದ್ದಲ . . . . ಜನಜಾತ್ರೆ . . . .

ಆದರೆ ಆಕೆ ಬರಿಯ ದಾರಿಹೋಕಳು. ಯಾರಾದರೂ ತನ್ನನ್ನು ಕರೆಯುವರೋ ನಾಲ್ಕಾಣೆ ಎಂಟಾಣೆ ಕೊಡುವರೋ ಎಂಬ ಧ್ಯಾನದಲ್ಲೆ ನಿರತಳಾಗಿದ್ದ ಪಾದಚಾರಿಣಿ.

ಮಳೆ ನಿಂತಿತ್ತೆಂದು, ರೈಲು ಕಂಬಿಯ ಆಚೆ ಕೆರೆಯ ಏರಿಯ ಮೇಲೆ ಮರದ ಕೆಳಗೆ ಬೀಡು ಬಿಟ್ಟಿದ್ದ ಹಳ್ಳಿಗರ ಒಂದು ತಂಡವಿತ್ತು. ಒಂಟಿಯಾಗಿ ಇರಲಾರದೆ ಆಕೆ ಅವರ ಬಳಿ ಸಾಗಿ ಸ್ವಲ್ಪ ದೂರದಲ್ಲಿ ಕುಳಿತಳು.

ತಂಡದ ಹಿರಿಯ ಕೇಳಿದ:

"ಯಾವೂರವ್ವಾ ನಿನಗೆ?''

"ಬೇಗಾಡು ತಾಲೋಕು—ಸಾವೂರು.''

"ಸಾವೂರೋರು ಬೆಳಗ್ಗೆ ಯಾರೋ ನಮಗೆ ಸಿಕ್ಕಿದ್ರು ಅಲ್ವ ಅಪ್ಪಾ?'' ಎಂದು ಕೇಳಿತು ಎಳೆಯದೊಂದು ಸ್ವರ.

[ಬೇರೆಯೂ ಯಾರೋ ಬಂದಿದ್ದರು ಹಾಗಾದರೆ! ಕೆಳಹಿತ್ತಿಲ ಗೌಡರ ಸಂಸಾರವೆಲ್ಲ ಈ ವರ್ಷ ದಸರೆ ನೋಡಲು ಹೊರಡುವುದೆಂಬ ವದಂತಿ ತನ್ನ ಕಿವಿಗೆ, ತಾನು ಹೊರಡುವದಕ್ಕೆ ಮುಂಚೆಯೆ, ಬಿದ್ದಿತ್ತು.]

ಎಳೆಯನ ಪ್ರಶ್ನೆಗೆ ಉತ್ತರವಿರಲಿಲ್ಲ. ಬದಲು ಬೇರೊಂದು ಪ್ರಶ್ನೆ:

"ಒಬ್ಳೇ ಬಂದಿದೀಯೇನವ್ವಾ ನೀನು?''

ಹಸಿದ ಕಣ್ಣುಗಳಲ್ಲ; [ತನ್ನನ್ನು ಕಂಡು ಇನ್ನು ಯಾರಿಗೂ ಹಸಿವೆಯೇ ಆಗಲಾರದೋ ಏನೋ] ಕುತೂಹಲ ಬೆರೆತ ಧ್ವನಿಯಲ್ಲಿ; ಸಹಜವಾದ ಪ್ರಶ್ನೆ. [ಆದರೂ ತಂಡದ ಹೆಂಗಸರು ತನ್ನನ್ನು ನೋಡುತ್ತಿದ್ದ ದೃಷ್ಟಿಯೋ!]

"ನಾನೂ ನನ್ನ ಮಗನೂ ಬಂದ್ವಿ. ಮಗ ತಪ್ಪಿಸ್ಕೊಂಡ್ಬಿಟ್ಟ . . . .''

ಸುಳ್ಳಿನೊಡನೆ ಅಳು-ಅಳುತ್ತ ಆಕೆ, ತಾನಾಡುತಿದ್ದುದು ನಿಜವೆಂದೇ ನಂಬಿದಳು ಬೇರೆ.

"ಹೌದಾ? ಅಯ್ಯೋ ಪಾಪ! ಎಷ್ಟೊರ್ಸದ್ನಗ?''—ಹೆಣ್ಣುಧ್ವನಿ.

"ಹದಿನೂರು ವರ್ಷ.''

"ಪೋಲೀಸ್ನೋರಿಗೆ ಹೇಳ್ಲಿಲ್ವಾ?''

"ಹೇಳಿದ್ದೆ. ಎಲ್ಲೂ ಸಿಗಲಿಲ್ಲ.''

"ಅಯ್ಯೋ ಪಾಪ!'' ....

ಸುಳ್ಳು ಹೇಳಿದಾಗ, ಸಹಾನುಭೂತಿ ...

"ಬಾ. ಒಂದು ತುತ್ತು ನಮ್ಜ ಜತೇಲಿ ಊಟ ಮಾಡು. ಯಾವ ಜನ ನೀನು?''

ಉತ್ತರ. ಊಟ. ಅಲೆದಾಟ ವ್ಯರ್ಥವೆಂದು ಯೋಚಿಸಿ ಆಕೆ ಆ ತಂಡದೊಡನೆಯೆ ನಿಂತಳು.

ದಣಿವಾರಿಸಿ ಅವರೆಲ್ಲ ಮತ್ತೆ ಊರು ನೋಡಲು ಹೊರಟರು. ಆದರೆ ಆಕೆ ಅವರ ಹಾಗೆ ಏನೂ ತಿಳಿಯದ ಹಳ್ಳಿಗಳಲ್ಲ. ಕಂಡ ಕಂಡ ಬೊಂಬೆಗಳನ್ನೆಲ್ಲ--ಜೀವಂತ ಬೊಂಬೆಗಳನ್ನು ಕೂಡ-ಬೆರಗುಗಣ್ಣಿನಿಂದ ನೋಡುವ, ನೋಡುತ್ತ ಅಲ್ಲಿಯೆ ನಿಲ್ಲುವ, ಅಜ್ಞೆಯಲ್ಲ.

ಗುಂಪಿನ ಹಿಂದೆಯೆ ನಿಂತಿದ್ದ ಆಕೆಯ ನೋಟಗಳು ನಾಲ್ಕು ಸುತ್ತುಗಳಲ್ಲೂ ಸಂಚರಿಸುತ್ತಿದ್ದುವು.

ಒಬ್ಬ "ಬಾ'' ಎಂದ.

ಮಳೆ ಧೋ ಧೋ ಎಂದು ಸುರಿದು, ಆಕೆ ಸಂಪೂರ್ಣವಾಗಿ ತೋಯ್ದುಹೋಗುವಂತೆ ಮಾಡಿತು. ಪಾಳು ಬಿದ್ದಿದ್ದ ಕಟ್ಟಡದ ಮುರುಕು ಛಾವಣಿಯ ಒಂದು ಮೂಲೆ. ಅಲ್ಲಿಯೇ ಆ

ರಾತ್ರಿಯನ್ನೆಲ್ಲ ಒಬ್ಬೊಬ್ಬರಾಗಿ ಇಬ್ಬರು ಮೂವರು ....

ಬೆಳಗ್ಗೆ ಏಳಲಾಗದೆ ಆಕೆ ಅಲ್ಲಿಯೇ ಮಲಗಿದಳು. ಸ್ವಲ್ಪ ಹೊತ್ತು ಅರೆನಿದ್ದೆಯಲ್ಲಿದ್ದ ಮೈಸೂರು ಆಗಲೆ ಎಚ್ಚತ್ತು, ಕಲರವ ಆರಂಭವಾಗಿತ್ತು.

ಮಲಗಿದಲ್ಲಿಯೆ ಬಹಳ ಹೊತ್ತು ಆಕೆ ಇದ್ದಳು. ಬೀದಿ ಹೋಗುವವರು ಆ ಮೂಲೆಯಲ್ಲೆ ತಿರುಗಿಕೊಂಡು ಗೋಡೆಗೆದುರಾಗಿ ಮೂತ್ರವಿಸರ್ಜನೆ ಮಾಡುತಿದ್ದರು. ಗಬ್ಬುವಾಸನೆ ಹೊಡೆಯುತಿತ್ತು. ಅವರ ದೃಷ್ಟಿಗೆ ಆಕೆ ಮೂಲೆಯಲ್ಲಿ ಮಲಗಿದ್ದುದು ಕಾಣಿಸಲೇ ಇಲ್ಲ. ಮುದುಡಿಕೊಂಡಿದ್ದ ಆಕೃತಿ ನಾಯಿಯೊ ? ಮುದಿ ಹಸುವೊ ? ....

ಬಿಸಿಲೇರಿ ಆ ವಾಸನೆ ತಡೆಯಲಾಗದೆ, ಬಲು ಪ್ರಯಾಸದಿಂದ ಆಕೆ ಎದ್ದಳು. ಕೈಯಿಂದ ನೆಲವನ್ನೆಲ್ಲ ತಡವಿ ನೋಡಿದಳು. ಎಲ್ಲಿಯೂ ಇರಲೇ ಇಲ್ಲ ಹಣ. ಮತ್ತೂ ಹುಡುಕಿದಾಗ ದೊರೆತುದು ನಾಲ್ಕಾಣೆಯ ನಾಣ್ಯ. [ಖದೀಮರು! ದರೋಡೆ ! ಥೂ !]

ಹೊಲಸಾಗಿದ್ದ ಸೀರೆ ಕೆದರಿದ್ದ ಕೂದಲು- ಆ ಸ್ಥಿತಿಯಲ್ಲಿ ಯಾವ ಹೋಟೆಲಿನ ಒಳಗೂ ಹೋಗುವಂತಿರಲಿಲ್ಲ. ಆಸ್ಪತ್ರೆಯ ವರೆಗೂ ಆಕೆ ನಡೆದಳು. ಅಲ್ಲೆ ಬೀದಿಯ ಬದಿಯಲ್ಲಿ ಒಬ್ಬಳು ಹೆಂಗಸು ಬುಟ್ಟಿಯಲ್ಲಿ ಹಣ್ಣುಗಳನ್ನಿಟ್ಟು ಮಾರುತಿದ್ದಳು. ಆಕೆಯ ಸಮೀಪದಲ್ಲೆ ಇನ್ನೊಂದು ಬುಟ್ಟಿಯಲ್ಲಿ ಇಡ್ಲಿಗಳನ್ನಿಟ್ಟು ಇನ್ನೊಬ್ಬಾಕೆ ಕುಳಿತಿದ್ದಳು ಕೈಯಿಂದ ನೊಣಗಳನ್ನೋಡಿಸುತ್ತಾ. ಇಡ್ಲಿಗಳ ರಾಶಿಯನ್ನು ಅರ್ಧದಷ್ಟಕ್ಕೆ ಕೊಳಕಾದ ಒಂದು ಅರಿವೆ ಮುಚ್ಚಿತ್ತು. ತನ್ನ ಮೇಲೂ ನೊಣಗಳು ಕೂತಿವೆಯೇನೋ ಎನ್ನುವಂತೆ ಮುಖದ ಮೇಲೆ ಕೈಯಾಡಿಸುತ್ತಾ ಆಕೆ ಎರಡು ಇಡ್ಲಿಗಳನ್ನು ಕೊಂಡು ತಿಂದಳು. ಬಳಿಕ ಬೀದಿ ಕೊಳಾಯಿಯ ನೀರು ಹುಡುಕುತ್ತ ನಡೆದಳು.

ಮಧ್ಯಾಹ್ನ-ಸಂಜೆ-ಮೋಡ-ಬಿಸಿಲು. ಅರಮನೆಯೊಳಗೆ ಕವಾಯತು. ಆನೆಗೆ ಶೃಂಗಾರ. ಕುವರಿಗೆ ಶೃಂಗಾರ. ರಾಜಸಭೆ. ಕರಿಯ ಅಥವಾ ಬಿಳಿಯ ಲಾಂಗ್ ಕೋಟು. ಬಿಳಿ ಷರಾಯಿ. ಕಲಾಬತ್ತು ಕಿನಾರೆ ರುಮಾಲು ಮತ್ತು ಏಳು ಮೊಳಕ್ಕೆ ಕಮ್ಮಿಯಿಲ್ಲದ ಕಲಾಬತ್ತು ಕಿನಾರೆ ಉತ್ತರೀಯ ... ಭಯ-ಭಕ್ತಿ.... ನಜರು ಒಪ್ಪಿಸುವವು.... ಹಿಂದಿರುಗುತ್ತ ಅವರೆಲ್ಲರ ಕೊರಳಲ್ಲಿ ಒಂದೆಳೆ ಮಲ್ಲಿಗೆ ಹೂವಿನ ಪುಟ್ಟ ಹಾರ. ಆ ಹಾರವನ್ನು ಹಾಕಿಕೊಂಡೇ ಮನೆಯ ವರೆಗೂ ನಡಿಗೆ; ಇಲ್ಲವೇ, ದುಡ್ಡಿದ್ದರೆ, ಜಟಕಾ ಸವಾರಿ.

ಪುರಭವನದ ಆವರಣದಲ್ಲಿ ಹಸುರು ಹುಲ್ಲಿನ ಮೇಲೆ ಮೈಮುದುಡಿ ಕುಳಿತು, ಆಕೆ ಬೀದಿಗಳಲ್ಲಿ ಹೆಚ್ಚುತ್ತಲೇ ಇದ್ದ ಜನಸಮ್ಮರ್ದವನ್ನು ನೋಡಿದಳು. ಒಂದೇ ಸಮನೇ ಹರಿಯುತ್ತಿದ್ದ ಜನಪ್ರವಾಹ. ಚಲಿಸುತ್ತಿದ್ದುದು ಯಾರು ? ಜನರೆ ? ಅಥವಾ ತಾನೆ ?....

ಮೂರು ಕಾಸಿನ ಪತ್ರಿಕೆಯೊಂದನ್ನು ಕೈಲಿ ಹಿಡಿದು ಅಲ್ಲೇ ದೂರದಲ್ಲಿ ನಿಂತಿದ್ದ ಒಬ್ಬರೆನ್ನುತ್ತಿದ್ದರು :

" ಈ ವೈಭವ ಇನ್ನು ನೋಡೋದಕ್ಕುಂಟೆ ? ಫಜ್ಲಾಲಿಯೊ, ಪಣಿಕ್ಕರೋ-ಅದು ಯಾರಾರೋ ಸೇರಿಸ್ಕೊಂಡು ಮುಳುಗಿಸೇ ಬಿಟ್ರಲ್ಲ ಮೈಸೂರ್ನ!"

ಅದರರ್ಥವೇನೋ ಅವಳಿಗೆ ಗೊತ್ತಿರಲಿಲ್ಲ....

ಆಕೆ ಜನಸಂದಣಿಯನ್ನೇ ನೋಡುತ್ತ ಕುಳಿತಳು. ಸಹಸ್ರ ಜನರ ಕಾಲ್ತುಳಿತದಿಂದ ತನ್ನೆದೆ ಪುಡಿಯಾಗುತ್ತಿದ್ದ ಹಾಗೆ-ಮತ್ತೊಮ್ಮೆ ಆ ಪ್ರವಾಹದಲ್ಲಿ ತಾನೇ ತೇಲಿ ಹೋದ ಹಾಗೆ- ಆಕೆಗೆ ಭಾಸವಾಯಿತು...

ಕತ್ತಲು.

ಯಾರೋ ಅಂದರು:— " ನಾಳೆ ಆಯುಧ ಪೂಜೆ-ನಾಡದು ವಿಜಯ ದಶಮಿ.''

ಪ್ರಯಾಸಪಡುತ್ತ ಎದ್ದಳು ಆಕೆ. ನಡೆಯಲು ಶಕ್ತಿ ಇರಲಿಲ್ಲ. ಪುರಭವನದ ಜಗಲಿಯ ಮೂಲೆ ಸೇರಿದಳು.

ಅರಮನೆಯ ಸಮೀಪದಲ್ಲಿದ್ದ ಆ ಪುರಭವನವನ್ನು ಅಲಂಕರಿಸಿದ್ದರು. ಒಳಗೆ ಸೇರಿದ್ದ ನೂರಾರು ಜನರೆದುರು ಯಾರದೋ ಭಾಷಣವಾಗುತ್ತಿತ್ತು. 'ಸಂಸ್ಕೃತಿ ಪ್ರಸಾರ ಸಪ್ತಾಹ. '

ಆದರೆ ಪುಟ್ಟಮ್ಮನಿಗೆ ಅದೊಂದೂ ತಿಳಿದಿರಲಿಲ್ಲ.

*   *

ಮತ್ತೊಂದು ಸೂರ್ಯೋದಯ. ನಿದ್ದೆ ಕಳೆದು, ಸಂಕಟ ನೆನಪಾಗುವಂತಹ ಹಗಲು. ಮಲಗಿದಲ್ಲಿಂದಲೇ ಆಕೆ ಸೂರ್ಯಕಿರಣವನ್ನು ನೋಡಲೆತ್ನಿಸಿದಳು. ಆ ಬೆಳಕು ಕಣ್ಣುಗಳನ್ನು ಕುಕ್ಕಿತು. ಜಗಲಿಯಲ್ಲಿ ಬೇರೆಯೂ ಕೆಲವರು ಮಲಗಿದ್ದರು-ಭಿಕ್ಷುಕರು. ಇನ್ನು ಪೋಲೀಸರು ಬರಬಹುದು. "ಏಳಿ!'' ಎಂದು ಬೆತ್ತ ಬೀಸುತ್ತ ಎಬ್ಬಿಸಬಹುದು....

ಆದರೆ ಪೋಲೀಸರಿಗೆ ಈ ದಿನ ಬಿಡುವಿಲ್ಲ. ಅವರೀಗ ಬೀದಿ ಕಾವಲಿನ ಭಟರು.

'ಕಿಟ್ಟಾ-ಕಿಟ್ಟಾ' ಎಂದು ಮಗನನ್ನು ನೆನೆಯುತ್ತ ಆಕೆ ನರಳಿದಳು.

"ಯಾಕೆ ಮಲಗಿದ್ದೀಯೇ?'' ಎಂದು ಯಾರೂ ಕೇಳಲಿಲ್ಲ.

ಬಿಸಿಲು ಬೇಗೆ ಹೆಚ್ಚಿತು. ಉಸಿರಾಟ ಕಷ್ಟವೆನಿಸಿತು. ಅಂಗಾಂಗಗಳಲ್ಲೆಲ್ಲ ಉರಿ. ಕೀಲುಗಳಲ್ಲಿ ನೋವು.

"ಅಯ್ಯೋ—ಅಯ್ಯೋ— ''

ಹಸಿವು ಉಪವಾಸ ಆ ಸಂಕಟವನ್ನೂ ಮೀರಿಸಿ, ಇಂತಹದೇ ಎಂದು ಹೇಳಲಾಗದ ನೋವು. ಅಂಗಾಂಗವೂ ಚೀರಾಡುತಿತ್ತು. ಗಂಟಲು ಕಟ್ಟಿಕೊಳ್ಳುತಿತ್ತು. ಎದೆ ಬಡಿತ.

ಬಿಸಿಲಾದ ಬಳಿಕ ಸಂಜೆ.... ಬಂಗಾರದಂತಹ ಬಣ್ಣವೇ ಎಲ್ಲೆಲ್ಲೂ. ಮಲಗಿದಲ್ಲಿಂದಲೆ ಶುಭ್ರವಾದ ಆಕಾಶವೇ ಕಾಣಿಸುತ್ತಿದೆ. ಪ್ರಶಾಂತವಾದ ನೀಲಿ ಬಲು ದೂರದಲ್ಲಿ. ಆದರೆ ಮರುಘಳಿಗೆಯಲ್ಲೆ ದೇಹದ ಯಾತನೆ. ಎತ್ತರದಲ್ಲಿ ಹಾರಾಡುತ್ತಿದ್ದ ಆ ಒಂದು ಹಕ್ಕಿ —ಹಾ—ಆ—....

ಕತ್ತಲಾಗಲೆ ಇಲ್ಲವೇನೋ.... ಜಲಬಾಧೆ-ದೇಹಬಾಧೆ-.... ತೆವಳಿಕೊಂಡಾದರೂ ತಾನು ದೂರ ಹೋಗಬೇಕು. ಆದರೆ ತನಗೆ ಶಕ್ತಿಯಿಲ್ಲ, ಅಯ್ಯೋ!

ಹಾದು ಹೋಗುತ್ತಿದ್ದ ಯಾರೋ ಮಾತನಾಡುತ್ತಿದ್ದರು:

"ನಾಳೆ ಜಂಬೂ ಸವಾರಿ. ''

ಹೌದು, ನಾಳೆಯ ಜಂಬೂ ಸವಾರಿಯನ್ನು ತಾನು ನೋಡಬೇಕು. ಪ್ರಣಾಮ ಮಾಡಬೇಕು.

ಸಮೀಪದಿಂದಲೆ ಹಾದು ಹೋಗುತ್ತಿದ್ದ ಜನರಿಗೆಲ್ಲ ತಾನು ಕಾಣಿಸುವುದೇ ಇಲ್ಲವೇನೋ.

ಹೊರಗೆ ಅಂಗಣದಲ್ಲಿ ಯುವಕರದೊಂದು ಗುಂಪು ನಿಂತಿತ್ತು. ವಾದವಿವಾದ [ಮಾತೇಯಾನಾಗಲೂ!] ಒಬ್ಬನೆನ್ನುತಿದ್ದ:

"ನಾನ್ಹೇಳ್ತೀನಿ ಕೇಳ್ರೋ ರಾಜಪ್ರಮುಖರು ಇರಲಿ, ಹೋಗಲಿ. ದಸರಾ ಯಾವಾಗಲೂ ಇದ್ದೇ ಇರತ್ತೆ. ಅದು ಜನಸಮುದಾಯದ ಹಬ್ಬ. ಖೋಟಾ ಆಡಂಬರ ಇರೋದಿಲ್ಲ, ಅಷ್ಟೆ. ಎಲ್ಲಾ ಇನ್ನು ಅಸಲೇ! ನೋಡ್ತಿರಿ! ನನ್ನ ಮಾತು ಸುಳ್ಳಾಗೋದಿಲ್ಲ. ಜನ ಉಸಿರಾಡ್ತಿರೋ ವರೆಗೂ ದಸರಾ ಹಬ್ಬವಿರತ್ತೆ. ಕನ್ನಡನಾಡಿಗೆಲ್ಲ, ಭಾರತ ದೇಶಕ್ಕೆಲ್ಲ, ದಸರಾ ದೊಡ್ಡ ಹಬ್ಬ''....

ಮಾತುಗಳು ಆಕೆಯ ಕಿವಿಯ ದಂಡೆಗೂ ಬಡೆದವು.

ಏನರ್ಥವೋ ಆ ಮಾತುಗಳಿಗೆ!

ಆದರೆ ನಾಳೆಯ ವಿಜಯದಶಮಿ ಉತ್ಸವ ತಾನು ನೋಡಬೇಕು.

... ಒಂದು ಇರುಳು, ಒಂದು ಹಗಲು, ಮತ್ತೊಂದು ಇರುಳು. ಮಲಗಿದಲ್ಲೇ ....

ನಾಳೆ ಏಳಬೇಕೆಂದೇ ಆಕೆ ನಿದ್ದೆ ಹೋದಳು.

ಆದರೆ ಅದು ಕೊನೆಯಿಲ್ಲದ ನಿದ್ದೆ ಎಂಬುದು ಅವಳಿಗೆ ಗೊತ್ತಿರಲಿಲ್ಲ.



“ರೂಪಂ ರೂಪಂ ಪ್ರತಿರೂಪಃ” —ಚಿತ್ರ: ಶ್ರೀ ಶ್ರೀನಿವಾಸ ನಾಯಿಕ



ಪರೋಪಕಾರದಿಂದ ಫಾಯದೆಯೇ ಹೊರತು ಎಂದೂ ನಷ್ಟವಿಲ್ಲ ಎಂದು ಸುಬ್ಬರಾಮಯ್ಯನವರು ಹೇಳಿದ ಆಪ್ತವಚನವನ್ನು ಕೇಳಿ ಮೊದಲು ನಕ್ಕ ಕಾರಂತರು, ಮುಂದೆ ಸುಬ್ಬರಾಮಯ್ಯನವರ ಯಶಸ್ವಿ ಕಾರಭಾರ ನೋಡಿ ಬೆಕ್ಕಸ ಬೆರಗಾದರು. " ನಿಮಗೂ ಲಕ್ಕು ಪ್ಲಕ್ಕು ಇದ್ದರೆ " ಬೇಕಾದರೆ ಸುಬ್ಬ-ರಾಮಯ್ಯನವರ ಅನುಕರಣೆ ಮಾಡಿರಿ !

ಪರೋಪಕಾರ, ಲಿಮಿಟೆಡ್

ಶ್ರೀ ಶಿವರಾಮ ಕಾರಂತರಿಂದ

ಮೇಲಿನ ಸಂಸ್ಥೆಯ ಹೆಸರನ್ನು ಕೇಳಿಯೇ ತಾವು ನಗಬಹುದು; ನಾನೂ ಒಂದು ಕಾಲದಲ್ಲಿ ಹಾಗೆ ಕೇಳಿ ನಕ್ಕಿದ್ದೆ. ಇಂದು, ಈ ಅಪಾರ ಸಂಸ್ಥೆಯ ಯಜಮಾನಿಕೆಯನ್ನು ನಡೆಯಿಸಿ ಕೊಂಡು ನಮ್ಮ ದೇಶದಲ್ಲೇ ಹೆಸರುವಾಸಿಯಾಗಿ ಮೆರೆಯುತ್ತಿರುವ ಶ್ರೀಮಾನ್ ಸುಬ್ಬರಾಮಯ್ಯ ನವರು, ಇಪ್ಪತ್ತು ವರ್ಷಗಳ ಹಿಂದೆ, ಸಹಪಾಠಿ ಎಂಬ ಅಭಿಮಾನದಿಂದ ನನ್ನಲ್ಲಿಗೆ ಬಂದು, ತಮ್ಮ ಹಂಚಿಕೆಗಳನ್ನೆಲ್ಲಾ ನನ್ನ ಮುಂದೆ ವಿವರಿಸಿ ಹೇಳಿ ದಾಗ ನಾನು ರೇಗಿದ್ದೆ; ಹೊಟ್ಟೆತುಂಬಾ ನಕ್ಕೂ ಇದ್ದೆ. ಆದರೆ ಅವರು ನನ್ನ ಯಾವ ಮಾತನ್ನೂ ಕೇಳಲಿಲ್ಲ. ಅದೇ ವರ್ಷ ಹಟತೊಟ್ಟು, ಆ ಸಂಸ್ಥೆಯನ್ನು ತಾವೊಬ್ಬರೇ ಹೆತ್ತುಬಿಟ್ಟರು. ಈಗ ಅವರ ಯಶಸ್ಸನ್ನು ನೋಡಿ ನನಗೇ ಹೊಟ್ಟೆಕಿಚ್ಚು ಆಗುವಂತಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಅವರು ಮಾಡಿದ ಖರ್ಚು, ಅವರು ಗಳಿಸಿದ ಕೀರ್ತಿ, ಅವರ ಹೆಸರಿಗಿರುವ ಭರಾಮು— ಇವನ್ನೆಲ್ಲ ಕಂಡಮೇಲೆ, ಗವರ್ಮೆಂಟ್ ಸೆಕ್ಯುರಿಟಿ ಪತ್ರಗಳಿಗಿಂತಲೂ ಪರೋಪಕಾರಕ್ಕೆ, ಅರ್ಥಾತ್ ' ಪರೋಪಕಾರ ಲಿಮಿಟೆಡ್ ' ಪಾಲು ಬಂಡವಾಳಕ್ಕೆ ಹೆಚ್ಚಿನ ಕಿಮ್ಮತ್ತು ಇದೆ—ಎಂದು ನನಗನಿಸುತ್ತದೆ. ಏಕೆ ಎಂದರೆ, ಆ ಸಂಸ್ಥೆಯಲ್ಲಿ ಪಾಲು ಕೊಂಡವರಿಗೆ ಏನೇನೂ ನಷ್ಟವಾಗಿಲ್ಲ. ಅವರು ಕೊಟ್ಟಹಣ ನಗದು ರೂಪದಲ್ಲಿ, ನಗದಿಗಿಂತ ಹೆಚ್ಚಿನ ಬಿರುದು, ಪುಣ್ಯ ಇತ್ಯಾದಿಗಳ ರೂಪದಲ್ಲಿ ದೊರೆತಿದೆ, ಎಂದು ನನಗೆನಿಸುತ್ತದೆ. ಸುಬ್ಬ-ರಾಮಯ್ಯನವರು ಹಿಂದೆ ನನ್ನೊಡನೆ ಹೇಳಿದ ಮಾತು ಇದು: " ಪರೋಪಕಾರದಿಂದ ಎಂದೆಂದೂ ಫಾಯದೆಯೇ ಹೊರತು ನಷ್ಟವಿಲ್ಲ,'' ಎಂದು. ಆ ಮಾತು ಸೇಕಡಾಕ್ಕೆ ನೂರರ ಅಲ್ಲ, ಇನ್ನೂರರ ಸತ್ಯ—ಎಂದು ನಾನು ಒಪ್ಪುತ್ತೇನೆ.

ನೋಡಿ, ಇಪ್ಪತ್ತು ವರ್ಷಗಳ ಕೆಳಗಿನ ಮಾತು ಇದು; ಆಗ ನನ್ನ ಸಹಪಾಠಿ ಸುಬ್ಬರಾಮಯ್ಯ ನವರಿಗೆ ಇಪ್ಪತ್ತೈದು ವರ್ಷ ಪ್ರಾಯ. ಈಗ ಅವರ ಪ್ರಾಯ ಅರವತ್ತೈದು. ಯಾರು ಅವರನ್ನು ನೋಡಿದರೂ ಅರವತ್ತೈದು ವರ್ಷದ ವಯೋ ವೃದ್ಧ, ಜ್ಞಾನವೃದ್ಧರೆಂದೇ- ಗೌರವಿಸುತ್ತಾರೆ. ನಾನೂ ಅವರ ಸಹಪಾಠಿ ಎಂದೆ. ಎಂದ ಮೇಲೆ ನನಗೂ ಅವರಿಗೂ ಸಮ-ಸಮ ಪ್ರಾಯ ಎಂದು ನೀವು ತಿಳಿಯಬಹುದು. ಅದು ಮಾತ್ರ ಹಾಗಿಲ್ಲ. ಈಗ ನನಗೆ ಐವತ್ತು ಚಿಲ್ಲರೆ ಪ್ರಾಯವಾದರೆ, ಆಗ್ಗೆ ನನಗೆ ಮೂವತ್ತು ಚಿಲ್ಲರೆಯಾಗಿತ್ತು. ಆಗ ನಾನು ಅವರಿಗಿಂತಲೂ ಐದು ಚಿಲ್ಲರೆ ವರ್ಷಕ್ಕೆ ದೊಡ್ಡವನಾಗಿದ್ದರೆ, ಈಗ ಅವರು ನನಗಿಂತ ಹತ್ತು ಚಿಲ್ಲರೆ ವರ್ಷಗಳಿಗೆ ದೊಡ್ಡವರು. ನಾನೇ ಒಮ್ಮೆ ಅವರೊಡನೆ ವಾದ ಹೂಡಿದ್ದೆ: " ಹ್ಯಾಗೆ ಸ್ವಾಮಿ, ನಿಮಗೆ ಅರುವತ್ತೈದು ವರ್ಷ ಆಗುವುದು? '' ಎಂದು. ಅವರು ಥಟ್ಟನೆ ನುಡಿದರು: " ನಿಮ್ಮ ವರ್ಷಕ್ಕೂ ನನ್ನ ವರ್ಷಕ್ಕೂ--ತಿಂಗಳುಗಳಲ್ಲಷ್ಟೇ ವ್ಯತ್ಯಾಸ'' ಎಂದು. ಒಪ್ಪಲೇಬೇಕಾದ ಮಾತದು. ಅವರು ಒಂದು ಘಂಟೆಯಲ್ಲಾಡುವ ಮಾತುಗಳನ್ನು ನಾನು ನೂರು ಘಂಟೆಗಳಲ್ಲಿಯೂ ಆಡಲಾರೆ. ಹೀಗಿರುವಾಗ, ನನ್ನ ಒಂದು ವರ್ಷಕ್ಕೆ ಅವರ ಎರಡು ವರ್ಷ ಆಗುವುದರಲ್ಲಿ ಏನಾಶ್ಚರ್ಯ ?

ಅವರು ನನ್ನ ಸಹಪಾಠಿ ಎಂದೆ. ಹ್ಯಾಗೆ ಎಂದು ನೀವು ಕೇಳಬಹುದು. ಅವರ ಊರೇ ಬೇರೆ, ನನ್ನ ಊರೇ ಬೇರೆ. ನಾನು ಶಾಲೆಗೆ ಹೋದದ್ದುಂಟು; ಅವರು ಹೋದದ್ದಿಲ್ಲ. ನಮ್ಮ ಸಹಪಾಠ ನಡೆದದ್ದು, ಕರ್ಮಧರ್ಮ ಸಂಯೋಗದಿಂದ, ಮೈಸೂರಿನಿಂದ ಮಡಿಕೇರಿಗೆ ಬಸ್ಸಿನಲ್ಲಿ ಬರುವಾಗ. ಬರುತ್ತ,ದಾರಿಯಲ್ಲೇ ಅವರು ಒಂದು ವೃತ್ತಾಂತ ಪತ್ರಿಕೆ ತೆಗೆದುಕೊಂಡರು. ನಾವಿಬ್ಬರೂ ಒಂದೇ ಸೀಟಿನಲ್ಲಿ ಕುಳಿತು, ಜತೆಯಲ್ಲೇ, ಆ ಪತ್ರಿಕೆಯನ್ನು ಓದಿದೆವು. ಅವರು ಆಗ "ನೀವು ನನ್ನ ಸಹಪಾಠಿಗಳು'' ಎಂದರು. ಜತೆಯಲ್ಲೇ ಕುಳಿತು ಪೇಪರು ಓದಿದ ಮೇಲೆ, ಆ ತೀರ್ಮಾನವನ್ನು ನಾನೂ ಒಪ್ಪಿಕೊಳ್ಳಲೇಬೇಕಾಯಿತು. ಅವಾಗಲೇ ಅವರು ನಮ್ಮ ಊರಿಗೆ ಬಂದದ್ದು; ನಮ್ಮ ಮನೆಯಲ್ಲಿ ಇದ್ದದ್ದು; ಸಹಪಾಠಿ ಎಂಬ ಅಭಿಮಾನದಿಂದ ತಮ್ಮ ಹಂಚಿಕೆಯನ್ನು ನನಗೆ ವಿವರಿಸಿ ಹೇಳಿದ್ದು; ನಾನದನ್ನು ನಿರಾಕರಿಸಿದ್ದು; ನನ್ನ ಮೂರ್ಖತನ ಕಂಡು ಅವರು ನಕ್ಕದ್ದು; "ನಿಮಗೆ ತಲೆಯಿಲ್ಲ'' ಎಂದದ್ದು; ಆಗ ನಾನು ಇದ್ದ ತಲೆಯನ್ನು ಮುಟ್ಟಿ ನೋಡಿದರೂ ಅವರು ಒಪ್ಪದೆ ಹೋದದ್ದು- ಇವುಗಳನ್ನೆಲ್ಲ ನೆನೆಯುವಾಗ ಅವರೇ ಹೆಚ್ಚು; ನಾನೇ ಕಡಿಮೆ- ಎಂದು ನನಗೆ ಈಗೀಗ ಕಾಣುತ್ತಾ ಇದೆ.

*   *   *

ಬಿಡಿ, ಆ ಹಂಚಿಕೆ ಏನೆಂದು ಹೇಳುತ್ತೇನೆ. ನೀವೂ ತಿಳಿದುಕೊಳ್ಳಿ. ನಿಮಗೂ ಲಕ್ಕು, ಪ್ಲಕ್ಕು ಎರಡೂ ಇದ್ದರೆ, ಅವರಂತಾಗಲು ಬಂದೀತು. ಇನ್ನೇನಾದರೂ ಅಂಥದೇ ಸಂಘಸಂಸ್ಥೆಗಳನ್ನು ಕಟ್ಟಿಕೊಂಡು ದೊಡ್ಡ ದೊಡ್ಡ ಕೆಲಸ ಮಾಡಿ, ಕೀರ್ತಿ ಗಳಿಸಿದಲ್ಲಿ, "ಮಹಾಭಾರತ ರತ್ನ'' ಎಂಬ ಬಿರುದಾದರೂ ಬಂದೀತು. ನಾನೇಕೆ ಅಂಥ ಪ್ರಯತ್ನ ಮಾಡುವುದಿಲ್ಲ- ಎಂದು ನೀವು ಕೇಳಬಹುದು. ಅದಕ್ಕೆ ಕಾರಣ ಇಷ್ಟೇ—ನನಗೆ ನನ್ನ ಜಾತಕದಲ್ಲಿರುವುದಕ್ಕಿಂತಲೂ ಜೋಯಿಸರ ಮೇಲೆ ವಿಶ್ವಾಸ ಜಾಸ್ತಿ. ಅವರೆಂದು ಬಿಟ್ಟದ್ದಾರೆ: "ನಿನ್ನ ಯೋಗದಲ್ಲಿ ಕಾಸು, ಬಿರುದು ಎರಡೂ ಬರೆದಿಲ್ಲ''— ಎಂದು. ಬ್ರಹ್ಮನಿಗೆ ನನ್ನ ಹಣೆಯ ಮೇಲೆ (ಇಷ್ಟಗಲ ಜಾಗವಿದ್ದೂ) ಬರೆಯುವ ಮನಸ್ಸು ಬರಲಿಲ್ಲವಾದರೆ, ನಾನೇಕೆ ಚಿಂತೆ ಕಟ್ಟ



ಕೊಳ್ಳಬೇಕು- ಎಂದು ನಾನು ಸುಮ್ಮನಿದ್ದೇನೆ. ನೀವು ಹಾಗಲ್ಲ- ವಾರ ವಾರಕ್ಕೂ ವಾರದ ಭವಿಷ್ಯ ಕಂಡು, ಓದಿ, ಅದರಿಂದಲೇ ದೊಡ್ಡವರಾಗುವ ಭರವಸೆಯುಳ್ಳವರು. ನನಗೋ, ಆ ಒಂದು ಸಾರಿಯೇ ಜೋಯಿಸರಿಗೆ ಕೊಟ್ಟ ನಾಲ್ಕಾಣೆ ನಷ್ಟವಾಯಿತಲ್ಲ- ಎಂಬ ಚಿಂತೆ ಇವತ್ತಿಗೂ ಉಳಿದಿದೆ. ಇಲ್ಲವಾದರೆ ಸುಬ್ಬರಾಮಯ್ಯನವರ ಕಂಪೆನಿಯಲ್ಲಿ, ಅಂದರೆ ಸದ್ರಿ "ಪರೋಪಕಾರ ಲಿಮಿಟೆಡ್'' ಸಂಸ್ಥೆಯಲ್ಲಿ, ಹತ್ತು ರೂಪಾಯಿಗಳನ್ನು ಕೊಟ್ಟು, ಒಂದು ಶೇರನ್ನಾದರೂ ಕೊಂಡುಕೊಳ್ಳದಿರುತ್ತಿದ್ದೆನೇ ?

ಸದ್ರಿ ಕಂಪೆನಿಯ ವಿಚಾರ ಹೀಗಿದೆ: ಅದರ ಮ್ಯಾನೇಜಿಂಗ ಏಜಂಟರೇ "ಶ್ರೀ ಸುಬ್ಬರಾಮಯ್ಯ ಸನ್ಸ್ ಏಂಡ್ ಡಾಟರ್ಸ್'' ರವರು. ಅದರ ಪಾಲು ಭಂಡವಾಳವು ಹತ್ತು ಸಾವಿರ ರೂಪಾಯಿಗಳು; ಹತ್ತು ರೂಪಾಯಿಯ ಸಾವಿರ ಶೇರುಗಳು. ಪ್ರಾರಂಭಕ್ಕೆ ಕೊಡಬೇಕಾಗಿದ್ದುದು ಶೇರಿಗೆ ಐದು ರೂಪಾಯಿಗಳಂತೆ. ಹತ್ತು ವರ್ಷಗಳಲ್ಲಿ ಮುನಾಫೆಯೇ ಆಗಲಿ, ನಷ್ಟವೇ ಆಗಲಿ, ಪಾಲಿನ ಹಣ ಪರತು. ಕೊಟ್ಟವರಿಗೇನು ನಷ್ಟ ಹೇಳಿ ? ಹೆಚ್ಚೆಂದರೆ ಹಣದ ಬಡ್ಡಿ ಹೋದೀತು.

ಹೀಗೆ ದೊರಕಿಸಿದ ಹಣದಿಂದ ಸುಬ್ಬರಾಮಯ್ಯನವರು, ಒಂದು ಅನಾಥಾಲಯ, ಒಂದು ಸಹಕಾರಿ ಸ್ಟೋರ್ಸ್, ಒಂದು ಸಮಾಜಸೇವಾ ಸಂಸ್ಥೆ (ಯಾವ ಕೆಲಸವನ್ನೂ ಮಾಡುವ) ಇಷ್ಟನ್ನು ನಡೆಯಿಸುವವರು. ಸಹಕಾರಿ ಸ್ಟೋರ್ಸಿನ ಮುನಾಫೆಯೆಲ್ಲವೂ ಅನಾಥಾಲಯ ಮತ್ತು ಸಮಾಜಸೇವಾ ಕಾರ್ಯಗಳಿಗೆ- ಸಲ್ಲುವಂಥವು. ಇದರಲ್ಲಿ ಆಗ ನನಗೆ ಅನುಮಾನ ಕಂಡರೂ ಅವರು ಈ ಇಪ್ಪತ್ತು ವರ್ಷಗಳಲ್ಲಿ ಇಷ್ಟನ್ನು ನಡೆಯಿಸಿಕೊಂಡು ಬಂದಿದ್ದಾರಲ್ಲ- ಎಂದ ಮೇಲೆ ಅವರ ಮಾತಿಗಿಂತ ಕೃತಿ ಹೆಚ್ಚಾಗಲಿಲ್ಲವೇ ?— ಏನು ತಪ್ಪು ? ಮೊನ್ನೆ ನಾನು ಮೈಸೂರಿಗೆ ಹೋದಾಗ ಅವರ ಮನೆಯ ಹೊರಗಡೆಯಲ್ಲಿ ಮೂರು ಬೋರ್ಡುಗಳಿದ್ದವು. ಯಾವಾವವೆನ್ನುತ್ತೀರಾ? "ಸಮಾಜ ಸೇವಾ ಸಂಘ'', "ಅನಾಥಾಲಯ'', "ಸಹಕಾರಿ ಸ್ಟೋರ್ಸ್''. ಅವರ ಒಬ್ಬ ಮಗ ಸ್ಟೋರ್ಸ ನಡೆಸುತ್ತಿದ್ದಾನೆ. ಆರು ಮಂದಿ ಮಕ್ಕಳು ಸಮಾಜಸೇವೆಯ ಕೆಲಸ ಮಾಡುತ್ತಿದ್ದಾರೆ. "ಪರೋಪಕಾರ ಲಿಮಿಟೆಡ್'' ಸಂಸ್ಥೆಯನ್ನು ಇಂದಿಗೂ ಅವರು ಖುದ್ದು ನಡೆಸಿಕೊಂಡು ಬರುತ್ತಿದ್ದಾರೆ.

ನಾನು ಕುತೂಹಲದಿಂದ "ನಿಮ್ಮ ಅನಾಥಾಲಯದಲ್ಲಿ ಯಾರ್ಯಾರಿದ್ದಾರೆ?'' ಎಂದು ಕೇಳಿದೆ. ಅದಕ್ಕವರು "ಸ್ವಾಮಿ, ಮುಖ್ಯ, ಮನುಷ್ಯನಿಗೆ ಪ್ರಾಮಾಣಿಕತೆ ಬೇಕು. ಅದಿಲ್ಲದೆ ಯಾವ ಸಂಘ, ಸಂಸ್ಥೆಯೂ ನಡೆಯಲಾರದು. ನಾನು ಈ ಸಂಸ್ಥೆಯನ್ನು ತೊಡಗುವ ಮೊದಲು, ಹಲವು ಅನಾಥಾಲಯಗಳನ್ನು ನೋಡಿಕೊಂಡು ಬಂದೆ. ಅಲ್ಲಿ ಹೆಚ್ಚಿನ ಮಕ್ಕಳಿಗೆ ತಾಯಿ ಅಥವಾ ತಂದೆ, ಮಾವ ಅಥವಾ ದೊಡ್ಡಪ್ಪ, ಮುಖ್ಯತಃ ಹೆರಲಿಕ್ಕೆ ಕಾರಣರಾದ ಒಬ್ಬರಲ್ಲ ಒಬ್ಬರಿದ್ದರು. ಹಾಗಿದ್ದ ಮೇಲೆ, ಆ ಮಕ್ಕಳು ಅನಾಥರಾಗುವದು ಹೇಗೆ ? ಜನಕ್ಕೆ ಪ್ರಾಮಾಣಿಕತೆಯಿಲ್ಲ. ಅಂಥವಕ್ಕೆ ಜನ ಇನ್ನೂ ಇನ್ನೂ ದುಡ್ಡು ಕೊಡುತ್ತಿದ್ದಾರಲ್ಲ— ಅದು ನನಗೆ ಆಶ್ಚರ್ಯ'' ಎಂದರು. ನಾನು ಆ ಮಾತಿಗೂ ಒಪ್ಪಲೇಬೇಕಾಯಿತು.

ಅವರು ಮಾತು ಮುಂದುವರಿಸಿದರು:"ನೋಡಿ, ನಾನೂ ನನ್ನ ಹೆಂಡತಿಯೂ ಈ ಸಂಸ್ಥೆಯನ್ನು ಸೇರುವಾಗ, ಇಬ್ಬರೂ ಅನಾಥರೇ ಆಗಿದ್ದೆವು; ಈಗಲೂ ಹಾಗೆಯೇ. ಅಪ್ಪ, ಅಮ್ಮ, ಅಜ್ಜ, ಅಜ್ಜಿ- ಯಾರೂ ನಮಗಿರಲಿಲ್ಲ. ಹೀಗಾಗಿ, ಮೊದಲಿನ ಅನಾಥರೇ ನಾವಾಗಿ, ಈ ಮನೆ ಬಾಡಿಗೆಗೆ ವಹಿಸಿಕೊಂಡು ಇಲ್ಲಿ ಬಂದು ಸೇರಿದೆವು. ಅನಾಥರಾದ ನಮ್ಮ ಮಕ್ಕಳು ಹೇಗೂ ಅನಾಥರೇ ಅಲ್ಲವೇ ? ಹೀಗಾಗಿ ನಮ್ಮ ಸಂಸಾರವೂ ಇಲ್ಲಿದೆ. ಇಲ್ಲಿನ ಒಬ್ಬೊಬ್ಬರೂ ಸಂಬಳದ ಆಶೆಗೆ ದುಡಿಯುತ್ತಿಲ್ಲ. ಸಾರ್ವಜನಿಕ ಕೆಲಸ ಮಾಡುವಾಗ ಸಂಬಳ ತಕ್ಕೊಂಡರೆ ಏನು ನ್ಯಾಯ ಹೇಳಿ ? ನಾನು, ನನ್ನ ಹೆಂಡತಿ, ಮಕ್ಕಳು ಒಬ್ಬೊಬ್ಬರಿಗೂ 'ಪೇ' ಇಲ್ಲ. ಪರೋಪಕಾರದ ಸ್ಪಿರಿಟ್ ಹಾಗಿರಬೇಕು. ಈಗ ನೋಡಿ, ಇಷ್ಟೇ ಅಲ್ಲದೆ, ಹೊಸತಾಗಿ ಒಂದು 'ಕಲೆಕ್ಟಿವ್ ಫಾರ್ಮು' ನಡೆಯಿಸಿಕೊಂಡು ಬಂದಿದ್ದೇವೆ; ಒಂದು 'ಗೋಶಾಲೆ' ಯೂ ಇದೆ'' ಎಂದು ಹೇಳಿ ಅವರ ಸಂಸ್ಥೆಯ ಹಿತ್ತಿಲು ಯಾನೆ ಫಾರ್ಮು, ಹಟ್ಟಿ ಯಾನೆ ಗೋಶಾಲೆ- ಎಲ್ಲವನ್ನೂ ತೋರಿಸಿದರು. ಪ್ರತಿಯೊಂದಕ್ಕೂ ಒಂದೊಂದು ಬೋರ್ಡಿತ್ತು. ಹಿತ್ತಲಿಗೆ ತುಸು ದೂರದಲ್ಲಿಯೆ 'ಕಂಪೋಸ್ಟ್ ಪಿಟ್- ಲಿಮಿಟೆಡ್' ಎಂದು ಒಂದು ಬೋರ್ಡು ತಗಲ ಹಾಕಿತ್ತು. "ಅದೇನು?'' ಎಂದು ಕೇಳಿದೆ. "'ಲಿಮಿಟೆಡ್,'' ಎಂದರೆ 'ಬಹಳ ಇಲ್ಲ' ಒಂದೇ ಹೊಂಡ ತೆಗೆದಿರುವುದು— ಎಂದರ್ಥ. ಊರ ಜನರು ತಮ್ಮತಮ್ಮ ಮನೆಯ ಕಚರಾಗಳನ್ನೆಲ್ಲ ಇಲ್ಲಿಗೇ ತಂದು ಹಾಕಬೇಕೆಂದು ಮಾಡಿದ್ದೇವೆ. ನಮ್ಮ ಪಿಟ್ಟಿಗೆ ಡೆಪ್ಯ್- ಕಮಿಶನರ್ ಸಾಹೇಬರಿಂದಲೇ ನೂರು ರೂಪಾಯಿ ಬಹುಮಾನ ಬಂದಿದೆ. ಇದರಲ್ಲಿ ಒಟ್ಟಾದ ತಿಪ್ಪೆಯನ್ನು ಪ್ರತಿ ವರ್ಷವೂ ಹರಾಜು ಮಾಡುತ್ತೇವೆ. ಅನಂತರ ಅದನ್ನು ನಾವು ತೆಗೆದ ಕಲೆಕ್ಟಿವ್ ಫಾರ್ಮಿಗೆ ಗೊಬ್ಬರವಾಗಿ ಉಪಯೋಗಿಸುತ್ತೇವೆ'' ಅಂದರು.

ನಾನು ಅನುಮಾನ ಸೂಚಿಸಿದೆ: "ಏನು ಸ್ವಾಮಿ, ಹರಾಜು ಮಾಡಿದ ಮೇಲೆ, ಅದನ್ನು ನೀವು ಉಪಯೋಗಿಸುವುದು ಹೇಗೆ ?'' ಎಂದು ಪ್ರಶ್ನಿಸಿದೆ.

ಅದಕ್ಕೆ ಅವರು "ನಿಮ್ಮದು ಟೆಕ್ನಿಕಲ್ ಆಬ್ಜೆಕ್ಷನ್- ಅಲ್ಲವೇ ? ಈ ಗುಂಡಿ ಇರುವುದು ಅನಾಥಾಲಯದ ವಠಾರದಲ್ಲಿ. ಅದಕ್ಕೆ ಹೊರಗಿನ ಜನ ಬರುವುದಕ್ಕೆ, ಅಂದರೆ ಗೊಬ್ಬರವನ್ನು ಕೊಂಡವರು ಬರುವದಕ್ಕೆ "ನೋ ಥೊರೋಫೇರ'' "ರಹದಾರಿ ರದ್ದು'' ಎಂಬ ಬೋರ್ಡಿದೆಯಲ್ಲ. ಹಾಗಿದ್ದ ಮೇಲೆ ಹರಾಜು ಕೊಂಡವ ನಮ್ಮ ಜಾಗ ಮೆಟ್ಟದೆ, ಗೊಬ್ಬರ ಒಯ್ಯಬೇಕಲ್ಲವೆ? ಆದರಿಂದ ಕೊಂಡವರೂ ಅದನ್ನು ಬಿಟ್ಟುಹೋಗುತ್ತಾರೆ. ಹೀಗಾಗಿ ಗೊಬ್ಬರ ಇಲ್ಲಿಯೇ ಉಳಿದು, ಈ ವಠಾರದಲ್ಲಿ ವಾಸನೆ ಹೆಚ್ಚಬಾರದೆಂದು, ನಮ್ಮ ಸಮಾಜ ಸೇವಕರಿಂದ ಅದನ್ನು ತೆಗೆಯಿಸಿ, ಕಲೆಕ್ಟಿವ್ ಫಾರ್ಮಿಗೆ ಹಾಕಿ ಬೆಳೆ, ಉತ್ಪನ್ನ ಹೆಚ್ಚಿಸುತ್ತ ಇದ್ದೇವೆ''- ಎಂದರು.

ಆ ಮಾತು ಕೇಳಿದಾಗ ನನ್ನ ಮನಸ್ಸು ಹೆಚ್ಚು ಆಹಾರ ಬೆಳೆಯಿಸುವ ವಿಷಯಕ್ಕೆ ಹರಿಯಿತು. ಆಗ ನಾನು ಕೇಳಿದೆ: "ಸ್ವಾಮಿ, ಮೊನ್ನೆ ನಿಮ್ಮ ಮೈಸೂರಿನಲ್ಲಿ 'ಕೃಷಿ ಪಂಡಿತ' ಎಂಬ ಬಿರುದು,

ಜತೆಗೆ ಸುಮಾರು ಐದು ಸಾವಿರ ರೂಪಾಯಿಗಳ ಬಹುಮಾನ ಯಾರಿಗೋ ಸಿಕ್ಕಿತಂತಲ್ಲ- ಯಾರಿಗೆ ? '' ಎಂದು ಕೇಳಿದೆ.

ಅವರು ನಕ್ಕರು. " ಬನ್ನಿ, ಎಲ್ಲ ವಿರಾಮದಲ್ಲಿ ಹೇಳುತ್ತೇನೆ. ನಿಮ್ಮಂತಹ ಸಹಪಾಠಿಗಳೊಟ್ಟಿಗೆ ವಿಚಾರವಿನಿಮಯ ಮಾಡುವದಕ್ಕೆ ನನಗೆ ಸಂತೋಷವೇ'' ಎಂದು ಮನೆಗೆ ಕರೆದುಕೊಂಡು ಹೋದರು. ಅವರ ಮಹಡಿಯ ಮೇಲೆ ಹೋಗಿ ಕುಳಿತೆವು. ಏನು ಅನಾಥಾಲಯವೆನ್ನುತ್ತೀರಾ ! ಇದ್ದರೆ ಹಾಗಿರಬೇಕು- ಅನಾಥರಿಗೆ ಅನುಕೂಲತೆಗಳು. ನೆಲಕ್ಕೆ ರತ್ನಗಂಬಳಿ, ಮೇಲೆ ಕುಳಿತಿರುವುದಕ್ಕೆ ಸೋಫಾ; ಆಚೆ ರೇಡಿಯೋ, ಈಚೆ ಇಲೆಕ್ಟ್ರಿಕ್ ಫೇನ್- ಗೋಡೆ ತುಂಬ ಪಟಗಳು. ಅದರಲ್ಲಿ ಅರೆವಾಸಿ ಫೊಟೋಗಳು, ಸುಬ್ಬರಾಮಯ್ಯನವರು ಹಾರ ಹಾಕಿಸಿಕೊಂಡು ಯಾರ್‍ಯಾರದೋ ಜತೆಗೆ ತೆಗೆಸಿಕೊಂಡವುಗಳು. " ಎಷ್ಟು ದೊಡ್ಡ ಮನುಷ್ಯರಪ್ಪಾ'' ಎಂದುಕೊಂಡೆ.

ಆ ಮೇಲೆ ಅವರು ಮಾತು ತೆಗೆದರು- ತಮ್ಮ ಕೃಷಿ ಪಾಂಡಿತ್ಯದ ವಿಚಾರ. " ಸ್ವಾಮಿ, ನನ್ನದು ಕೃಷಿಯ ಪಾಂಡಿತ್ಯಕ್ಕಿಂತ ಹೆಚ್ಚಾಗಿ ಪಾಂಡಿತ್ಯದ್ದೇ ಕೃಷಿ. ಆ ಬಿರುದು, ಬಹುಮಾನ ಬಂದದ್ದು ಬೇರೆ ಯಾರಿಗೂ ಅಲ್ಲ; ಈ ನಮ್ರ ಸಮಾಜಸೇವಕನಾದ ಸುಬ್ಬರಾಮಯ್ಯನಿಗೆ'' ಎಂದರು.

ನಿಮ್ಮ ತೋಟದ ಸಮೀಪ ಹೊಲಗಿಲಗಳನ್ನು ಕಾಣಲಿಲ್ಲವಲ್ಲಾ'' ಎಂದೆ ನಾನು. ಅವರು ಗೋಡೆಯ ಬಳಿಗೋಡಿ, ಒಂದು ಫೊಟೊವನ್ನು ತಂದು ನನ್ನ ಮುಸುಡಿಗೆ ಹಿಡಿದರು. ಏನು ನೋಡಲಿ. ಎಂಟಡಿ ಎತ್ತರದ ಜೋಳದ ಗಿಡಗಳ ಎಡೆಯಲ್ಲಿ, ಒಂದು ಗೂಟಕ್ಕೆ ಅಂಟಿಸಿ "ಕಲೆಕ್ಟಿವ್ ಫಾರ್ಮ್ಸ್'' ಎಂಬ ಬೋರ್ಡು ಇದ್ದಿತ್ತು. ಆ ಗೂಟದ ಆಚೆ ಸುಬ್ಬರಾಮಯ್ಯ. ಈಚೆ ಡಿ-ಸಿ ಮತ್ತು ಇನ್ನೆಷ್ಟೋ ಮುಂಡಾಸಿನವರು. ಅದನ್ನು ಕಂಡು ನಾನು ದಿಗಿಲಾಗಿ, " ಏನು ಸ್ವಾಮಿ, ಜೋಳ ಅಂದರೆ ದೆವ್ವನ ಹಾಗೆ ಬೆಳೆದಿದೆಯಲ್ಲ, ಬಿದಿರಿನ ಗಾತ್ರವಾಗಿದೆ. ತುಂಬ ಕಷ್ಟಪಟ್ಟಿರಬೇಕು ನೀವು'' ಎಂದೆ. "ಕಷ್ಟಪಡದೆ ಯಾವುದೂ ಆಗುವುದಿಲ್ಲ'' ಎಂದರು ಅವರು.

" ಸಹಜವೇ'' ಎಂದೆ ನಾನು.

" ಸ್ವಾಮಿ, ದಿಲ್ಲಿ, ಮದ್ರಾಸುಗಳಲ್ಲಿ, ಬೆಂಗಳೂರು ಮೈಸೂರುಗಳಲ್ಲಿ, ಯಾರ್‍ಯಾರೋ ಹೆತ್ತ ಮಕ್ಕಳನ್ನು ತಂದು, ಶಿಶು ಪ್ರದರ್ಶನ ಮಾಡಿ, ಪ್ರೈಸ್ ಹೊಡೀತಾರಲ್ಲವೇ ಜನ? ಪುಷ್ಪ ಪ್ರದರ್ಶನಗಳನ್ನು ನೀವು ನೋಡಿದ್ದೀರಲ್ಲಾ— ಡಾಲಿಯಾ, ರೋಸು ಏನೇನೋ ಗಿಡಗಳನ್ನು ತಂದು, ತೋರಿಸುವುದು. ಬಹುಮಾನ ಯಾರಿಗೆ ಹೋಗುತ್ತೆ ? ಎಲ್ಲ ದೊಡ್ಡ ಮಂದಿಯ ತೋಟಗಳಿಗೆ. ಗಿಡ ನಟ್ಟ, ಗೊಬ್ಬರಹಾಕಿದ ಕೂಲಿಗಳಿಗಲ್ಲ. ಪ್ರೈಸ ಕೊಡುವುದು ಯಾರಿಗೆಂದರೆ, ಆ ಹೂ ಮೂಸಿದ, ತರಿಸಿದ, ಬಳಿಕ ತೋರಿಸಿದ ಆಫೀಸರುಗಳಿಗೆ. ಆ ಗುಟ್ಟು ನನಗೆ ಗೊತ್ತು. ನಮ್ಮ ಡಿ. ಸಿ. ಯವರೂ ಅಂಥವರೇ. ಅವರಿಗೆ ಎರಡು ವರ್ಷಗಳ ಹಿಂದೆ 'ಕ್ರೋಟನ್ನಿ'ಗೆ ಪ್ರೈಸ್ ಬಂದಿತ್ತು. ಪ್ರೈಸ್ ಬರುವ ಮೂರು ದಿನಗಳ ಮುಂಚೆ, ಗಿಡದ ಮಡಿಕೆಯನ್ನು ಮಹಾಬಲಪ್ಪನವರ ನರ್ಸರಿಯಿಂದ ತಂದದ್ದನ್ನು ನಾನು ಕಂಡಿದ್ದೇನೆ. ಅದನ್ನು ಕಂಡು ನನಗೆ ಜ್ಞಾನ ಬಂದಿತು; ಆ ಜ್ಞಾನದ ಕೃಷಿಯನ್ನು ಮಾಡಿದೆ ನಾನು. ಇದೇ ಊರಿನಲ್ಲಿ, ಒಂದು ಮೈಲು ದೂರದಲ್ಲಿ, ತಿಪ್ಪೆ ರುದ್ರಯ್ಯನೆಂಬವನ ಜೋಳದ ಹೊಲ ಇದೆ. ನಾನು ವಂಚನೆ ಮಾಡಲಿಲ್ಲ. ರುದ್ರಯ್ಯನ ಹತ್ತಿರ ಹೋದೆ. " ರುದ್ರಯ್ಯ, ನಿನ್ನ ಹೊಲದಲ್ಲಿ, ದಾರಿಯ ಮಗ್ಗುಲಿಗೆ ನನ್ನದೊಂದು ಬೋರ್ಡು ಹಾಕುತ್ತೇನೆ. ಒಂದು ಎಂಟು ದಿನ ಇರಲಿ,— ಎಂದು ಹೇಳಿ, ಅದಕ್ಕೆ ಎಂಟಾಣೆ ಸ್ಥಳ ಬಾಡಿಗೆಯನ್ನು ಗೊತ್ತು ಮಾಡಿ, ನಮ್ಮ ಫಾರ್ಮಿನ ಬೋರ್ಡನ್ನು, ಆ ಬಾಡಿಗೆಗೆ ಕೊಂಡ ಒಂದು ಚದರಡಿ ಸ್ಥಳದಲ್ಲೇ ನೆಟ್ಟು ಬಂದೆ. ಇನ್ನೆಲ್ಲೂ ನೆಟ್ಟಿಲ್ಲ. ಆ ಮೇಲೆ ಶ್ಯಾನುಭೋಗರಿಗೊಂದು ಕಾಫಿ ಕುಡಿಸಿ, ಕಾರು ಬಾಡಿಗೆ ಗೊತ ಮಾಡಿ, ಡಿ. ಸಿ.ಯವರನ್ನು ಕರೆದೊಯ್ದು, ಹಾರ ಹಾಕಿ, ಹಾರ ಹಾಕಿಸಿಕೊಂಡು, ಫೋಟೋ ತೆಗೆಸಿಕೊಂಡು ಬಂದೆ. ಇಷ್ಟು ಮಾಡಿದ ನನಗೆ ಪ್ರೈಸ್ ಲ್ಲದೆ, ಆಕಸ್ಮಾತ್ ಮಳೆ ಬಂದು ಬೆಳೆ ಬೆಳೆದದ್ದಕ್ಕೆ, ತಿಪ್ಪೆ ರುದ್ರಯ್ಯನಿಗೆ ಪ್ರೈಸ್ ಹೋಗಬೇಕೇನು?. ಎಂದರು. ಈ ವಿಷಯ ಸಮರ್ಥನೆಗೆ, ಹತ್ತಾರು ಬಹುಮಾನ, ಪಾರಿತೋಷಕ, ಪ್ರದರ್ಶನಗಳ ಕತೆಯನ್ನು ಹೇಳಿದರು.

* * *

ಅಂಥಾ ಹತ್ತು ಕತೆಗಳನ್ನು ಕೇಳಿದ ಮೇಲೆ, ನನಗೂ ಸುಬ್ಬರಾಮಯ್ಯನವರ ವಾದ ಮನಸ್ಸಿಗೆ ಬಂದಿತು. ಇಂಗ್ಲೀಷಿನಲ್ಲಿ ಗಾದೆಯೇ ಇದೆಯಲ್ಲ, "ಚಾರಿಟೀ ಬಿಗಿನ್ಸ್ ಏಟ್ ಹೋಮ್'' ಅಂತ. ಈ ದೇಶದಲ್ಲಿ ಬಹುಮಾನ ಕೊಡುವ ಯಾವ ಕಮೀಟಿಗೇ ಆಗಲಿ, ಬಹುಮಾನ ಎಣಿಸುವಾಗ ತಮ್ಮನ್ನು ಬಿಟ್ಟು ಇನ್ನೊಬ್ಬರ ಗುರುತಿಲ್ಲದಿರುವಾಗ, ಸುಬ್ಬರಾಮಯ್ಯನವರ ಪರೋಪಕಾರದ ಕೃಷಿ ಫಲವತ್ತಾದ್ದರಲ್ಲಿ ಆಶ್ಚರ್ಯವೇನೂ ಕಾಣಲಿಲ್ಲ.

ಹೀಗೆ ನಾನು ಅವರ ಜಾಣ್ಮೆಯನ್ನು ಕುರಿತು ವಿಸ್ಮಯ ತಾಳುತ್ತಿರುವಾಗಲೇ, ಅವರ ಹಿರಿಯ ಮಗ ಯಾನೆ ಸ್ಪೋರ್ಟ್ಸ್ ಕಾರ್ಯದರ್ಶಿಯು 'ಚಂದ್ರಭವನ'ದಿಂದ ಫರಮಾಶಿ ಕಾಫಿ, ಹಲ್ವ, ದಮರೋಟ್ ಇತ್ಯಾದಿಗಳನ್ನು ಬರಮಾಡಿಸಿದ. ನಾವು ಪಟ್ಟಾಗಿ ಕುಳಿತು ತಿಂದೆವು. ತಿಂಡಿ ತಿಂದ ಹೋಟೇಲು ಹುಡುಗ, ಎರಡೂವರೆ ರೂಪಾಯಿ ಬಿಲ್ಲು ಎದುರಿಗೆ ಹಿಡಿದಾಗ, ಸುಬ್ಬರಾಮಯ್ಯ ಕಿಸೆ ತಿರುವುತ್ತಿದ್ದರು. ಒಳದನಿಯಲ್ಲಿ " ನೋಟು ಬಿದ್ದು ಹೋಯಿತೇ? '' ಎಂದುಕೊಳ್ಳುತ್ತಿದ್ದರು. ನನಗೆ ದುಃಖ ಕಂಡು, ಎರಡೂವರೆ ರೂಪಾಯಿ ಎಸೆದುಬಿಟ್ಟೆ. ಹೋಟೆಲು ಹುಡುಗ ಕೊಂಡು ಹೋದ. ಕೊಂಡು ಹೋದ ಮೇಲೆ ಅವರು "ಛೀ ಛೀ, ನೀವೇ ಕೊಟ್ಟು ಕಳುಹಿದಿರೇ?'' ಎಂದರು. ಅದಕ್ಕೆ ನಾನು, "ನಾನು ಕೊಟ್ಟರೇನು ? ನೀವು ಕೊಟ್ಟರೇನು?'' ಎಂದೆ.

" ಭಗವದ್ಗೀತೆಯಲ್ಲಿ ಎಲ್ಲಿಯೋ ಶ್ರೀ ಕೃಷ್ಣ ಪರಮಾತ್ಮ ಹಾಗೆಯೇ ಹೇಳಿದ್ದಾನಲ್ಲವೇ ? ನಾವು' 'ನೀವು' ಎಂಬ ಭೇದವಿಲ್ಲ. ಆ ಭೇದ

ವನ್ನು ಮರೆತು, ಇಷ್ಟು ವರ್ಷ ನಾನು ಸಾರ್ವಜನಿಕ ಜೀವನ ನಡೆಸಿದ್ದರಿಂದಲೇ, ಇಷ್ಟೆಲ್ಲ ಸಂಸ್ಥೆಗಳನ್ನು ಕಟ್ಟಿದೆ, ನಡೆಸಿಕೊಂಡು ಬಂದೆ— '' ಎಂದರು. ಸುಬ್ಬರಾಮಯ್ಯನವರ ಸಾಹಸಕಾರ್ಯಗಳನ್ನು ಮೆಚ್ಚುತ್ತಾ, ನಾನು ಹೋಟೆಲಿಗೆ ಮರಳಿದೆ. ಆಗ ನನಗೂ ಜ್ಞಾನೋದಯವಾಗುತ್ತಲಿತ್ತು. ಪರೋಪಕಾರಿಯಾಗುವವನಿಗೆ, ಮೂಲದಲ್ಲಿ ತನ್ನದು ಎಂಬ ವಸ್ತುವು ಯಾವುದೂ ಇರಬಾರದು- ಎಂದೆನಿಸಿತು. ಆಗ ಮಾತ್ರ ಎಂಥ ನಷ್ಟಕ್ಕೂ ಅವನು ಎದೆಗೊಡಬಲ್ಲ. ಆ ಮೇಲೆ- 'ತನ್ನದು, ಪರರದು' ಎಂಬ ವ್ಯತ್ಯಾಸ ಅವನ ಮನಸ್ಸಿನಲ್ಲೇ ಮೂಡಕೂಡದು. ಇವೆರಡೂ ಗಟ್ಟಿಯಾಗಿದ್ದರೆ, ಎಷ್ಟೂ ಪರೋಪಕಾರ ಮಾಡಬಹುದು; ಏನೂ ಹೆಸರು ಗಳಿಸಬಹುದು- ಎಂದು ತೋರಿತು.

* * *

ಹೋಟೆಲಿಗೆ ಬಂದ ಮೇಲೆ ನನಗೆ ತಿರುಗಿ ಒಂದು ಅನುಮಾನ ಮೂಡಿತು. "ಪರೋಪಕಾರಿ, ಸಂಸಾರಿಯಾಗಿರಬಹುದೆ?'' ಎಂಬ ಪ್ರಶ್ನೆ. ನಾನು ಕಂಡುದರ ಮೇಲಿಂದ- 'ಯಾಕೆ ಕೂಡದು?' ಎಂಬ ಮರುಪ್ರಶ್ನೆ ಹುಟ್ಟುತ್ತದೆ. ತಾನು ಹೇಗೆ ಸಮಾಜದವನೋ, ತನ್ನ ಹೆಂಡತಿ ಮಕ್ಕಳು ಬೇಕಾದರೆ ಮರಿಗಳು, ಎಲ್ಲವೂ ಸಮಾಜದವೇ. ಬಹು ಮಂದಿ ಸಮಾಜಸೇವಕರಾಗುತ್ತಾರೆ ಆಗ. ನಮ್ಮನ್ನು ಬಿಟ್ಟು ಸಮಾಜವಿಲ್ಲ, ಸಮಾಜವನ್ನು ಬಿಟ್ಟು ನಾವಿಲ್ಲ. ಆ ಭಾವನೆ ಬಂದರೆ, ನಮ್ಮ ಕ್ಷೇಮವೇ ಸಮಾಜಕ್ಷೇಮ; ಸಮಾಜಕ್ಷೇಮವೇ ನಮ್ಮ ಕ್ಷೇಮ ಅಲ್ಲವೇನು ?

ಮೈಸೂರು ನಗರ ಬಿಟ್ಟು, ಊರಿಗೆ ಬಂದ ಮೇಲೆ ನನ್ನ ಮಂಕುಬುದ್ಧಿಗೆ ಇನ್ನೂ ಒಂದು ಪ್ರಶ್ನೆ ತೋಚಿತು. ಇದನ್ನು ನಾನು ಸುಬ್ಬರಾಮಯ್ಯನವರ ಜತೆಯಲ್ಲಿದ್ದಾಗಲೇ ಕೇಳದ ಹೋದೆನಲ್ಲಾ- ಎಂದೆನಿಸಿತು. ಅವರು ಮೂಲದಲ್ಲಿ ಪಾಲು ಒಂದರ ಹತ್ತು ರೂಪಾಯಿ ಕೊಂಡರಲ್ಲ; ಕೊಂಡ ಮೇಲೆ ಹಿಂದಕ್ಕೆ ಕೊಟ್ಟರೇ ಇಲ್ಲವೇ? ಕೊಟ್ಟ, ರೆಹೇಗೆ ?- ಎಂಬ ಅನುಮಾನ. ಸಂಸ್ಥೆಯ ಖರ್ಚು, ವೆಚ್ಚ ಬಹಳವಾಗಿರುತ್ತ, ಪ್ರಚಾರಕ್ಕೂ ಹಣ ಬೇಕಾಗಿರುತ್ತ, ಮೂಲಧನ ಹಿಂದಕ್ಕೆ ಸಲ್ಲಿಸುವ ದಾರಿ ಯಾವುದು? ಎಂಬ ವಿಚಾರ ನನಗೆ ಕ್ಲಿಷ್ಟವಾಗಿ ಕಂಡಿತು.

ಪಾಲುಗಾರರು ಅವರಿಂದ ಹಣವನ್ನು ಪರತು ಕೇಳಿರಲಾರರು ಎಂದು ಒಂದು ಊಹೆ. ಆದರೆ ಎಲ್ಲರೂ ಹಾಗೆ ಮಾಡಲಾರರಲ್ಲ. ಕೆಲವರಾದರೂ ಹಿಂದೆ ಕೇಳಿರಬಹುದಲ್ಲ- ಎಂದೂ ಅನಿಸಿತು. ಆ ಸಮಸ್ಯೆ ಬಹುದಿನಗಳ ತನಕವೂ ತೀರ್ಮಾನವಾಗಲೇ ಇಲ್ಲ.

ಈಗ ತೀರ್ಮಾನವಾಯಿತು-ಅನ್ನಿ. ಅಂದರೆ ಒಂದು ದಿನ ನೆಟ್ಟಗೆ ಮೈಸೂರಿನಿಂದ ಸುಬ್ಬರಾಮಯ್ಯನವರು ನಮ್ಮಲ್ಲಿಗೇ ಬಂದರು. ತುಂಬ ಚಿಂತೆ ಅವರಿಗೆ! ದೇಶನಾಯಕರು ಪಾರ್ಲಿಮೆಂಟಿನಲ್ಲಿ ಏನೇನೋ ಮಸೂದೆ ತರುತ್ತಾರೆಂದು ಕೇಳಿ, ಅಂಜಿಯೇ ಬಂದಂತಿತ್ತು. ದೇಶದ ಯಾವತ್ತೂ ಪಾಲು ಬಂಡವಾಳು ಸಂಸ್ಥೆಗಳನ್ನು, ಆವಡಿ ಮಾದರಿಯ ಸಮಾಜೀಕರಣ ಯೋಜನೆಯ ಅನ್ವಯ ರಾಷ್ಟ್ರೀಕರಣಗೊಳಿಸುತ್ತಾರೆ- ಎಂಬ ಸುದ್ದಿ ಕೇಳಿ ಬಂದರು. "ಲಿಮಿಟೆಡ್'' ಎಂಬಂಥ ಸಂಸ್ಥೆ ಅವರದ್ದು. ಅವರಿಗೀಗ ಅದರ ಮೂಲವೇ ಮರೆತುಹೋಗಿದೆ. ಬಹು ಬೇಗ ವಯಸ್ಸಾದ್ದರಿಂದ ಹಾಗಾಗುವುದೂ ಸಹಜ. ನಾನು ಅವರನ್ನು ಕೇಳಿದೆ; "ಸ್ವಾಮಿ, ನಿಮ್ಮ ಲಿಮಿಟೆಡ್ ಸಂಸ್ಥೆ ಯಾವ ವರ್ಷ ರಿಜಿಸ್ಟರ್ ಆಯಿತು?'' ಎಂದು.

" ರಿಜಿಸ್ಟರ್ ಆಗಿಯೇ ಇಲ್ಲವಲ್ಲ '' ಎಂದರು.

" ಲಿಮಿಟೆಡ್ ಎಂದಿದೆಯಲ್ಲ ? ''

" ಪರೋಪಕಾರ ಲಿಮಿಟೆಡ್ ಅಂದರೆ, ಮಿತವಾದ ಪರೋಪಕಾರ ಎಂಬ ಅರ್ಥದಲ್ಲಿ ನಾನು ಹೆಸರು ಹಾಕಿದ್ದು. ಅದರ ಪ್ರಯೋಜನ ಯಾರ್‍ಯಾರಿಗೆಲ್ಲಾ ಹೋಗಬಾರದು ಎಂಬ ಕಾರಣದಿಂದ. ''


" ಹಾಗಿದ್ದರೇನು ನಿಮಗೆ ಭಯ ? ರಿಜಿಸ್ಟರ್ ಆಗದೆ ಸಂಸ್ಥೆ ಲಿಮಿಟೆಡ್ ಆಗೋದಿಲ್ಲ. ಆಗ ಸರಕಾರದವರು ಇದರಲ್ಲಿ ಕೈಹಾಕುವದಕ್ಕೆ ಬರುವುದಿಲ್ಲ'' ಎಂದು ಧೈರ್ಯ ಹೇಳಿದೆ.

" ಹಾಗೂ ಇದೆಯಲ್ಲವೆ ? ಆದರಲ್ಲಿ ಈಗ ಯಾರಿಗೂ ಪಾಲಿನ ಹಕ್ಕು ಉಳಿದಿಲ್ಲ. ಎಲ್ಲ ಶೇರೂ ನಾನೇ ಕೊಂಡಿದ್ದೇನೆ. ಹೇಗೆ ಅನ್ನುತ್ತೀರಾ- ಕೇಳಿ. ನನ್ನದೇ ಒಂದು ಪೇಪರಿತ್ತು. ಆದರಲ್ಲಿ ಒಂದು ಎರಡು ವರ್ಷಗಳ ಕಾಲ, ನಮ್ಮ ಐದು ರೂಪಾಯಿ ಕೊಟ್ಟ ಶೇರಿನ ಬೆಲೆ, ಆರು, ಎಂಟು, ಹತ್ತು ರೂಪಾಯಿಗಳ ಮಾರ್ಕೇಟು ಧಾರಣೆ ಇರುವುದಾಗಿ ಹಾಕಿಸಿದೆ. ಆಗ ಎಲ್ಲ ಶೇರುಗಳೂ ಮಾರಾಟವಾದುವು. ಆ ಮೇಲೆ ಉಳಿದ ಐದೈದು ರೂಪಾಯಿಗಳನ್ನು ತರಿಸಿಕೊಂಡೆ. ಅನಂತರ ಶೇರಿನ ಬೆಲೆ, ಒಂಭತ್ತರಿಂದ ತೊಡಗಿ ಎರಡಾಣೆಯ ತನಕವೂ ನನ್ನ ಪೇಪರಿನಲ್ಲಿ ಇಳಿಸಿದೆ. ಶೇರ್‌ದಾರರು ವಿರಕ್ತಿಗೊಂಡು, ಪೂರ್ಣ ಪಾಲು ರಶೀದಿಗಳನ್ನು ನನಗೇ ಕಳುಹಿಸಿ ಕೊಟ್ಟರು. ಇದೆಲ್ಲ ನನ್ನ ಸಂಶೋಧನೆಯಲ್ಲ. ಹೆಸರಾದ ಮಾರವಾಡಿಗಳ ಕ್ರಮವನ್ನು ನಾನೂ ಅನುಸರಿಸಿದೆ. ಶೇರಿನ ವ್ಯಾಪಾರವೇ ಹಾಗೆ ಇರುವಂಥದು. ಅದು ಬಿಡಿ; 'ಲಿಮಿಟೆಡ್' ಎಂದು ಹೆಸರು ಇದ್ದಿರುವದರಿಂದ, ತೊಂದರೆ ಬರಲಾರದು— ಎನ್ನುತ್ತೀರಾ ? ಸಮಾಜ ಸೇವೆ, ದೇಶ ಸೇವೆ, ಪರೋಪಕಾರ— ಇವತ್ತು ಈ ಪ್ರತಿಯೊಂದು ಕ್ಷೇತ್ರದಲ್ಲೂ, ಪೈಪೋಟಿ ಜಾಸ್ತಿಯಾಗಿದೆಯಲ್ಲ. ಭೂಮಾಲಿಕರ ಮೇಲೆ ಸಿಟ್ಟಿದ್ದರೆ, ಭೂಮಿ ರಾಷ್ಟ್ರೀಕರಣ ಮಾಡುತ್ತಾರೆ. ಬೇಂಕು ತಮಗೆ ಜವಾಬ್ದಾರಿಯಿಂದ ಸಾಲಕೊಡದಿದ್ದರೆ, ಅದನ್ನೂ ರಾಷ್ಟ್ರೀಕರಣ ಮಾಡುತ್ತಾರೆ. ಹೀಗಾಗಿ ಅನೇಕರಿಗೆ ನನ್ನ ಸಂಸ್ಥೆಯ ಮೇಲೆ ಕಣ್ಣು. ಈತ ಪರೋಪಕಾರದಿಂದಲೇ ಕೀರ್ತಿ ಗಳಿಸಿದ್ದಾನೆ, ಎಂಬುದರಿಂದ ಅಸೂಯೆ ಬಂದಿದೆ. ಈಗ ರಾಜಕೀಯ ಎಂಬುದು ಕೆಲವರದೇ ಕೈವಾಡ. ಅವರು ಮಾಡಿದ್ದೇ ಶಾಸನವಾಗುತ್ತದೆ. ಹೀಗಾಗಿ ನನಗೆ ಭಯವುಂಟಾಗಿದೆ.''


'' ಹಾಗಿದ್ದರೆ ನೀವು ಒಂದು ಕೆಲಸ ಮಾಡಿ— ಅಂಥ ಮಸೂದೆ ಬರುವ ಮೊದಲೇನೆ, 'ಪರೋ-ಪಕಾರ ಲಿಮಿಟೆಡ್' ಇದ್ದುದರ ನಡುವೆ ಎಡೆಯಲ್ಲಿ U N. ಎಂಬ ಎರಡಕ್ಷರ ಸೇರಿಸಿಬಿಡಿ. ಹಂಸಪಾದ ಹಾಕಿ ಮೇಲಕ್ಕೆ ದೊಡ್ಡ ಅಕ್ಷರಗಳಲ್ಲಿ ಬರೆಯಿಸಿ. ನಿಮ್ಮ ಅರ್ಥ 'ಅನ್‌ಲಿಮಿಟೆಡ್' ಅಂತ ಓದುವವರಿಗೆ ಇದು 'ಯುನೈಟೆಡ್ ನೇಶನ್ಸಿಗೆ' ಸಂಬಂಧಪಟ್ಟ ದೊಡ್ಡ ಸಂಸ್ಥೆ. ಅದಕ್ಕೆ ಅಂತರಾಷ್ಟ್ರೀಯ ಕಾನೂನೇ ಬಾಧ್ಯ ಹೊರತು, ಬೇರೆ ಕಾಯಿದೆ ಲಾಗು ಆಗಲಾರದು—ಎಂದು ತೋರಿಯೇ ತೋರುತ್ತದೆ. ನಿಮ್ಮದೇ ಪತ್ರಿಕೆ ಒಂದಿದೆ ಎನ್ನುತ್ತೀರಲ್ಲಾ, ಅದರಲ್ಲಿ ಒಂದು ಪುಟದ ದೊಡ್ಡ ಜಾಹೀರಾತು ಹಾಕಿಸಿ ಬಿಟ್ಟು, ನಾಲ್ಕು ಸಭೆ, ಸಮ್ಮೇಳನಗಳ ಕಾಲದಲ್ಲಿ, ಜನಗಳ ಕಣ್ಣು ಕುಕ್ಕುವಂತೆ ಹಂಚಿಬಿಡಿ'' – ಎಂದೆ.

ಆಗ ಸುಬ್ಬರಾಮಯ್ಯನವರಿಗಾದ ಸಂತೋಷ ಅಷ್ಟಿಷ್ಟಲ್ಲ. ಅವರು ಕೃತಜ್ಞತೆಯಿಂದ, "ನೀವು ಆರಂಭದಲ್ಲಿ ನನ್ನ ಮಾತುಗಳನ್ನು ತೆಗೆದುಹಾಕಿದರೂ ಈಗ ನನ್ನನ್ನು ಕಾಯ್ದ ಭಗವಂತನಾದಿರಿ. ನಾನು, ನೀವು ಆಗಿನಿಂದ ಒಟ್ಟಿಗೇ ಕೆಲಸ ಮಾಡಿದ್ದಾದರೆ ನನ್ನ ಸಂಸ್ಥೆ ಎಷ್ಟೋ ಎಷ್ಟೋ ದೊಡ್ಡದಾಗುತ್ತಿತ್ತು, ಇದಕ್ಕಿಂತ," ಎಂದು ಉದ್ಗರಿಸಿದರು. "ಪರೋಪಕಾರಕ್ಕೂ ನಸೀಬು ಬೇಡವೇ?'' ಎಂದೆ ನಾನು.

"ಹತ್ತು ಸಾರಿ ಹೇಳಿ ಆ ಮಾತನ್ನು. ಈ ಬೇ-ನಸೀಬ್ ದೇಶದಲ್ಲಿ, ಒಂದೇ ಒಂದು ಸತ್ವದ ಪದಾರ್ಥ ಇದ್ದುದಾದರೆ ಅದು ನಸೀಬ್, ಅದಿರುವ ಕತ್ತೆಯೂ ಕುದುರೆಯೇ; ಇಲ್ಲದ ಕುದುರೆ ಕತ್ತೆಗಿಂತಲೂ ಕಡೆ''- ಎಂದರು.







ಪತಿಪೂಜೆ

(ಏಕಾಂಕ)

ಲೇಖಕರು:- ಶ್ರೀ. ಜ. ಜಿ. ಹೆಗಡೆ

[ಗಣೇಶರಾಯರ ಮನೆ. ಪೂಜೆಯ ಭಟ್ಟರು ಗಂಟೆ ಬಾರಿಸುತ್ತ ಮಂತ್ರ ಹೇಳುತ್ತಿರುವದು ಕೇಳಿಸುವದು]

ಭಟ್ಟ:—
ತದ್ವಿಷ್ಣೋಃ ಪರಮಂ ಪದಂ
ಸದಾ ಪಶ್ಯಂತಿ ಸೂರಯಃ
ದಿವೀವ ಚಕ್ಷುರಾತತಂ ॥
ತದ್ವಿಪ್ರಾಸೋ ವಿಪನ್ಯವೋ
ಜಾಗೃವಾಂಸಃ ಸಮಿಂಧತೇ
ವಿಷ್ಣೋರ್ಯತ್ ಪರಮಂ ಪದಂ ॥

[ಮಂತ್ರ ಹೇಳಿ ಮುಗಿದ ನಂತರ ಗಂಟೆಯ ಸಪ್ಪಳ ನಿಲ್ಲುವದು.]

ಬಾಯಿಯವರೆ, ಯಶೋದಾ ಬಾಯಿಯವರೆ, ಬರ್ರಿ ಆರತಿ ತಗೋರಿ.

ಯಶೋದಾ:— ಬಂದೆ. ಆಚಾರ್ರೆ, ಈಗ ನಿಮಗೆ ಅವಸರ ಅದೇನು?

ಭಟ್ಟ:— ಹಾಂಗೇನಿಲ್ಲ. ಇನ್ನೊಂದೆರಡು ಮನೀ ಪೂಜಾ ಮಾಡಿದೆ ಅಂದ್ರ ಇವತ್ತಿನ ಕೆಲಸ ಮುಗದ್ಹಾಂಗಾತು. ಇಂದ ಆದಿತ್ಯವಾರ. ಯಾರಿಗೂ ಕಚೇರಿ ಪಚೇರಿ ಅಂತ ಅವಸರ ಇರೂದಿಲ್ಲ. ಒಂದ್ಹತ್ತು ಮಿನೀಟು ಪೂಜಾಕ್ಕ ತಡಾದ್ರೂ ಯಾರೂ ಹಾರ್‍ಯಾಡೂದಿಲ್ಲ. ಅಲ್ಲಾ, ಬಾಯಿಯವರೆ, ಏನ ಜಗತ್ತ ಅಂತೇನಿ? ಇತ್ತಲಾಗ ದೇವರ ಪೂಜಾ ಆಗ್ಬೇಕು, ಪುಣ್ಯ ಸಿಗಬೇಕು ಅಂತಾರ. ಅತ್ತಲಾಗ ಕಚೇರಿ, ಅವಸರ, ಅಂತ ಅವಸರದಾಗ ಪೂಜಾ ಮುಗಿಸಬೇಕು ಅಂತಾರ. ಅವಸರದಾಗ ಪೂಜಾ ಮಾಡಿದ್ರ ದೇವರಿಗೆ ಮೆಚ್ಚಿಗಿಯಾದೀತ? ಹೇಳ್ರಿ ನೀವೇ.

ಯಶೋದಾ:— ಹೌದು. ಆದರೆ ಗಂಡಸರಿಗೆ ಇವೆಲ್ಲ ತಿಳಿಯೂದಿಲ್ಲ. ಏನೊ ಅವಸರದಾಗ ಆದ್ರೂ ಪೂಜಾ ಮಾಡಸ್ತಾರಲ್ಲಾ, ಅದೇ ದೊಡ್ಡದು ಅಂತ ನಾವು ಸಮಾಧಾನ ಪಟ್ಟಗೊಬೇಕು.

ಭಟ್ಟ:— ಹೌದು. ಇಲ್ಲಾಂದ್ರೆ ಅವಸರಾನೂ ಬ್ಯಾಡ, ಪೂಜಾನೂ ಬ್ಯಾಡ ಅಂತ ಅಂದಿದ್ರ ನಮ್ಮಂಥವ್ರು ಹೊಟ್ಟೀಗೆ ಕೇರಹಾಕ್ಕೊಳ್ಳಬೇಕಾಗ್ತಿತ್ತು. ಖರೇ ಅಂದ್ರ ಬರೇ ಗಂಡಸರ ರಾಜ್ಯ ಆಗಿತ್ತು ಅಂದ್ರ ಅದೇನು ತಪ್ಪಿರಲಿಲ್ಲ ಬಿಡ್ರಿ. ಏನೊ ನಿಮ್ಮಂಥ ಹೆಣ್ಮಕ್ಕಳು ಇನ್ನೂ ದೇವ್ರೂ ದಿಂಡ್ರು ಅಂತ ಇಟಗೊಂಡೀರಿ ಅಂತೇ ನನ್ದೆಲ್ಲಾ ನಡದದ. ಆ ಸೀತಾಬಾಯಿ ಇದ್ದಾರಲ್ಲ, ಅವರ ಯಜಮಾನ್ರು ರಾಮರಾಯ್ರು. ಖರೇ ಅಂದ್ರ ಭಾಳ ಒಳ್ಳೆ ಮನಶಾರು ಅನ್ನೂದು ಖರೇ ಅದ. ಆದರೆ ಅವರೀಗೆ ಈ ದೇವ್ರು, ಪೂಜಾ ಪುನಸ್ಕಾರ ಅಂಬೂದರಾಗ ಎಳ್ಳಷ್ಟೂ ನಂಬಕಿ ಇಲ್ರಿ. ದೇವರ ಪೂಜಾನಃ ಬ್ಯಾಡ, ಯಾರು ಇಲ್ಲದ ಕಟಕಟಿ ಹಚ್ಚಗೋಬೇಕು ಅಂದ್ರು. ಆದ್ರೆ ಸೀತಾಬಾಯಿಯವರು ಕೇಳಲಿಲ್ಲ. ನಿಮಗೆ ತಡಾ ಆಗ್ತದ ಅಂತಿದ್ರ, ದೇವರ ನೇವೇದ್ಯಕ್ಕ ಅಂತ ಬ್ಯಾರೇ ಅನ್ನಾನೆ ಮಾಡ್ತೇನಿ, ರೊಕ್ಕ ಖರ್ಚಾಗ್ತದ ಅಂತಿದ್ರ ನನಗೆ ವರ್ಷಕ್ಕ ಒಂದು ಶೀರೀ ಕಡಮಿ ತಂದ ಕೊಡ್ರಿ ಅಂತಂದು ಹಟಾ ಹಿಡಿದ್ರು ಅಂತ, ಅವರ ಮನಿ ದೇವ್ರು ಈವತ್ತಿಗೂ ಪೂಜಾ ಕಾಣ್ತದ. ಇಲ್ಲಾ ಅಂತಂದ್ರ....

ಯಶೋದಾ:— ಹೌದು. ಗಂಡಸರು ಯಾಕೆ ಹೀಂಗ ಆಗ್ತ್ಯಾರೊ ತಿಳೀವಲ್ದು. ಮತ್ತೆ ಹೆಣ್ಮಕ್ಕಳೂ ಕೆಟ್ಟು ಹೋಗಲಿಕ್ಕ ಹತ್ತ್ಯಾರ್ರಿ. ಆಚಾರ್ರ, ಇದೆಲ್ಲಾ ಇಂಗ್ಲಿಷ ಕಲಿತದ್ದರ ಪರಿಣಾಮ ಅಂತೇನಿ ನಾ. ನಮ್ಮ ಸುಧಾ ಆದಾಳಲ್ಲ, ಕಾಲೇಜಿಗೆ ಹೋಗಲಿಕ್ಕೆ ಹತ್ತಿದಾಗಿಂದ್ಲೂ ಪೂಜಾ, ದೇವ್ರು, ವ್ರತ ಅಂದ್ರ ಮೂಗಮುರೀಲಿಕ್ಕೆ ಹತ್ಯಾಳ. ಇನ್ನೊಂದು ಹತ್ತಿಪ್ಪತ್ತು ವರ್ಷದೊಳಗೆ ....

ಭಟ್ಟ:— ಹೌದು. ಅಂದ್ಹಾಂಗ ಈವತ್ತು ನಿಮ್ಮ ಗೋವಿಂದ, ಸುಧಾ, ರಾಯ್ರು ಯಾರೂ ಮನಿಯೊಳಗೆ ಕಾಣವಲ್ಲರಲ್ಲ ?

ಯಶೋದಾ:— ಯಾವದೊ ಇಂಗ್ಲಿಷ ಸಿನೆಮಾ ನೋಡಲಿಕ್ಕ ಹೋಗ್ಯಾರ. ಈಗ ಎಷ್ಟು, ೧೧ ಹೊಡದಿರಬಹುದಲ್ಲ? ಇನ್ನೇನು ಈಗ ಬರ್ತಾರ. ಹೌದು. ಅವರು ಬರೂದರೊಳಗೆ ಒಂದು ಮಾತು ನಿಮ್ಮನ್ನ ಕೇಳ್ಬೇಕು ಅಂತ—

ಭಟ್ಟ:— ಕೇಳ್ರಲಾ.

ಯಶೋದಾ:— ನಮ್ಮ ಸುಧಾ ನಿನ್ನೆ ಪೇಪರಿನಾಗ ಒಂದು ಮಜಾದ ಸುದ್ದಿ ಬಂದದ ಅಂತ ಓದಿ ಹೇಳಿದ್ಳು. ಅಲ್ಲೆಲ್ಲೊ, ಅದ ಯಾವದೊ ದೇಶದಾಗಂತ, ನೂರಾರು ಮಂದಿ ಹೆಂಗಸರು ತಮ್ಮ ಗಂಡಂದಿರ ಪೂಜಾ ಮಾಡಿದರಂತ. ಅಂದ್ರ ರಾಜಾರೋಸ ನಾಕ ಮಂದೀಗ ಕಾಣವ್ಹಾಂಗ ಕೂಡ್ರಿಸಿ, ನಾವು ಸತ್ಯನಾರಾಯಣ ದೇವ್ರ ಪೂಜಾ ಮಾಡ್ತೇವಲ್ಲ ಹಾಂಗ ಪೂಜಾ ಮಾಡಿದ್ರಂತ.

ಭಟ್ಟ:— ಹಿಂಗೇನು? ಎಲಾ! ನನಗೆ ಗೊತ್ತೇ ಇಲ್ಲ ಬಿಡ್ರಿ.. ಛಲೊ ಮಾಡಿದ್ರು. ಭಾಳ ಛಲೊ ಮಾಡಿದ್ರು. ಅಂತೂ ನಮ್ಮ ದೇಶದಾಗ ಇನ್ನೂ ಧರ್ಮ ಅಂಬೂದು ಅದ, ಪತಿವ್ರತಾ ಸ್ತ್ರೀಯರು ಅನ್ನುವವರು ಅದಾರ ಅಂತ ಆತಲ್ಲಾ. ಭೇಷ,ಭೇಷ. ಹಾಂಗಂತೇ ಮಳಿ ಬೆಳಿ ನಮ್ಮ ದೇಶದಾಗ ಇನ್ನೂ ಕಾಣ್ತೇವಿ.

ಯಶೋದಾ:— ಆದರೆ ಸುಧಾ ಈ ಸುದ್ದಿ ಓದಿ ಬಿದ್ದಬಿದ್ದು ನಕ್ಕಳು. ಎಂಥಾ ಹುಚ್ಚ ಹೆಂಗಸರು! ಎಂಥಾ ಪುಕ್ಕ ಗಂಡಸರು! ಅಂತ ಬಿದ್ದಬಿದ್ದು ನಕ್ಕಳು.

ಭಟ್ಟ:— ಅದ ಯಾಕಂತ ?

ಯಶೋದಾ:— ಗಂಡಂದಿರನ್ನ ಪೂಜಾ ಮಾಡಿ ಏನು ಸಂಪಾದಿಸಿದರು ಈ ಹುಚ್ಚ ಹೆಂಗಸರು ಅಂತ ಅಂದ್ಳು. ಮತ್ತೆ ನಾಕ ಮಂದಿ ಎದರೀಗೆ ಪೂಜಾ ಮಾಡಿಸಿಕೊಳ್ಳಲಿಕ್ಕೆ ನಾಚಿಕೆಯಾದ್ರು ಹ್ಯಾಂಗ ಬರಲಿಲ್ಲೊ ಈ ಗಂಡಸರೀಗೆ ಅಂತಾ ಅಂದ್ಳು. ಹೆಂಡಂದಿರೀಗೆ ಹೆದರಿ ಹೂಂ ಅಂತ ಅಂದಿರಬೇಕು, ಹೇಡಿಗಳು ಅಂತ ಅಂದ್ಳು. ಹೇಳ್ರಿ, ಇಂಥವ್ರು ನಾಳೆ ಮಾಡಿಕೊಂಡ ಗಂಡಗ ಏನಾರ ಕಿಮ್ಮತ್ತು ಕೊಟ್ಟಾರು ಅಂತೀರೇನು ?

ಭಟ್ಟ:— ಏನ ಕೊಡ್ತಾರ ಬಿಡ್ರಿ. ಕಲತ ಹುಡಗೇರನ್ನ ಲಗ್ನಮಾಡಿಕೊಂಡವ್ರನ್ನ ನಾ ಏನ ನೋಡಿಲ್ಲೇನು ?

ಯಶೋದಾ:— ಏನಾರ ಹಾಳ ಭಾವಿ ಬಿದ್ದಕೊಳ್ಳವಲ್ಲರ್ಯಾಕ ? ಆಚಾರ್ರ, ಹೀಂಗ ಪೂಜಾ ಮಾಡಿದ್ರೆ....

ಭಟ್ಟ:— ಅದನ್ನ ಕೇಳಬೇಕೇನ್ರಿ? ಸ್ತ್ರೀಗೆ ಪತಿಯೆ ದೇವರು, ಅಂತ ಶಾಸ್ತ್ರದೊಳಗ ಹೇಳ್ಯದ. ಸಾವಿತ್ರಿ, ಸೀತಾ, ಎಲ್ಲಾರ ಕಥಿ ಕೇಳೀರೊ ಇಲ್ಲೊ? ಪತಿವ್ರತಾ ಸ್ತ್ರೀ ಅಂದ್ರೇನು ಸಾಮಾನ್ಯ ಅಲ್ಲ. ಆವರ ಹೆಸರ ಹೇಳಿದ್ರೆ ಪಂಚ ಮಹಾಪಾತಕ ತೊಳದು ಹೋಗ್ತದ. "ಅಹಲ್ಯಾ ದ್ರೌಪದೀ ಸೀತಾ ತಾರಾ ಮಂಡೋದರೀ ತಥಾ, ಪಂಚಕನ್ಯಾಃ ಸ್ಮರೇನ್ನಿತ್ಯಂ ಮಹಾಪಾತಕನಾಶನಂ" ಅಂತ ಹೇಳ್ಯದ. ಅದೆಲ್ಲಾ ಸುಳ್ಳೇನು? ಯಾವ ಸ್ತ್ರೀಯು ತನ್ನ ಪತಿಯನ್ನೇ ಪರದೈವತವೆಂದು ಭಾವಿಸಿ ಕಾಯೇನ ವಾಚಾ ಮನಸಾ ಪೂಜಿಸುವಳೋ ಆ ಸ್ತ್ರೀ ಪರಮ ಧನ್ಯೆ. ಅವಳು ತನ್ನನ್ನೂ ತನ್ನ ಪತಿಯನ್ನೂ ತನ್ನ ಕುಲವನ್ನೂ ಉದ್ಧರಿಸುವಳಲ್ಲದೆ ಇಹಪರಗಳೆರಡರಲ್ಲೂ ಸದ್ಗತಿಯನ್ನು ಸಂಪಾದಿಸುತ್ತಾಳೆ ಅಂತ ನಮ್ಮ ಪುರಾಣ, ಶಾಸ್ತ್ರ,ವೇದ, ಮಂತ್ರ ಎಲ್ಲಾ ಸಾರಿ ಸಾರಿ ಹೇಳ್ತಾವ. ಆದರೆ ಇದು ಕಲಿಯುಗಾರಿ, ಕಲಿಕಾಲ. ಜನರೀಗೆ ಪುಣ್ಯ ಮಾಡೂ ಮನಸಾರೆ ಹ್ಯಾಂಗ ಬಂದೀತು? ಏನೋ ನಿಮ್ಮಂಥವ್ರು ನಾಕಮಂದಿ, ಪೂರ್ವ ಜನ್ಮದ ಸಂಸ್ಕಾರ ಜೋರಾಗಿದ್ದವ್ರು ಧರ್ಮ, ದೇವ್ರು ಅಂತೀರಿ ಅಷ್ಟೆ.

ಯಶೋದಾ:— ಈ ಸುದ್ದಿ ಕೇಳಿದಾಗಿಂದ ನನ್ನ ಮನಸಿನಾಗ ಒಂದು ವಿಚಾರ ಬಂದದ. ನಮ್ಮವರಂತೂ ಇಂಥಾದ್ಯಾವದೂ ಮನಸೀಗೆ ತಗೊಂಬೂದಿಲ್ಲ. ನಾನಾರ ಕೈಲಾದಷ್ಟು ಮಾಡೋಣ, ಹೀಂಗ ಗಂಡಂದಿರ ಪೂಜಾ ಮಾಡಿದ್ರ....

ಭಟ್ಟ:— ನಿಮಗೂ ಪುಣ್ಯಾ ಬರ್ತದ. ನಿಮ್ಮ ಪುಣ್ಯದ ಬಲದಿಂದ ನಿಮ್ಮ ಗಂಡಗೂ ಪುಣ್ಯಾ ಬರ್ತದ. ಕೇಳೀರೋ ಇಲ್ಲೊ—ಸಾವಿತ್ರಿ ಪುಣ್ಯ ಜೋರಾಗಿತ್ತು ಅಂತ ಸತ್ಯವಾನ ಬದಕಿಕೊಂಡ. ಅಂದ್ರೆ ಹೆಂಡತಿ ಪುಣ್ಯದ ಫಲ ಗಂಡಗ ಸಿಕ್ತಾಂಗ ಆತೊ ಇಲ್ಲೊ? ಮಾಡಿಬಿಡರಲಾ ಅದಕೇನು? ಒಂದ ಒಳ್ಳೇ ದಿನಾ ನೋಡಿ ಗಣೇಶರಾಯ್ರ ಪೂಜಾ ಮಾಡಿ.....

ಯಶೋದಾ:— ನಾನೂ ಅದನೇ ಅಂತೇನಿ. ಸಮೀಪದಾಗ ಒಳ್ಳೇ ದಿನಾ ಅದ ಏನು ? ಮತ್ತ, ಈ ಪೂಜಾ ಅಂದ್ರೆ ಹ್ಯಾಂಗ ಮಾಡೂದು ? ಅದರ ಮಂತ್ರದ ಪುಸ್ತಕ ಎಲ್ಯಾರ ಸಿಗವಾಂಗದ ಏನು ?

ಭಟ್ಟ:— ಒಳ್ಳೆ ದಿನಾನ ! ನಾಳೆ ಬರೂ ಮಂಗಳವಾರ ಭಾಳ ಚಲೋ ದಿವಸ ಅದ. ಆ ದಿನ ಯಾವ ಶುಭ ಕಾರ್ಯಾನಾದ್ರೂ ಮಾಡ್ಬಹುದು. ಇಂದೇ ಮುಂಜಾನೆ ಯಾಕೊ ಪಂಚಾಂಗ ತಗದಾಗ ಸಹಜ ಗೊತ್ತಾತು. ಮತ್ತೆ ಮಂತ್ರದ ಪುಸ್ತಕ ಅಂದ್ರಲ್ಲಾ– ಇದಕ ಯಾಕ ಬೇಕ್ರಿ ಮಂತ್ರದ ಪುಸ್ತಕ? ಗಂಡ ದೇವ್ರು ಅಂತ ತಿಳಕೊಂಡು ನೀವು ಪೂಜಾ ಮಾಡ್ತೀರಿ. ಅಂದಮ್ಯಾಲೆ ದೇವರ ಪೂಜಾ ಹ್ಯಾಂಗ ಮಾಡ್ತೇವೊ ಹಾಂಗs ಮಾಡಿದ್ರಾತು! ಆದರೆ ಒಂದು ಮಾತು ನನಗೆ ಪುರಾಣದಾಗ ಓದಿದ ನೆನಪದ. ಹೀಂಗ ಗಂಡನ ಪೂಜಾ ಮಾಡುವಾಗ ಒಂದ ವಿಶೇಷ ಇರ್ತದ. ಅದೇನಂದ್ರ ಅಂದು ಒಂದ ದಂಪತೀಗೆ ಊಟಕ್ಕೆ ಕರೀಬೇಕು. ಮತ್ತೆ ಐದು ಮುತ್ತೈದೇರಿಗೂ ಊಟಕ್ಕೆ ಹಾಕಬೇಕು. ಅವರೆಲ್ಲಾರಿಗೂ ಬಾಗಿನಾ ಕೊಡಬೇಕು. ಬಾಗಿನಾ ಅಂದ್ರ ಮತ್ತೇನಿಲ್ಲ, ಖಣ, ಬಳಿ, ಅರಿಶಿಣ, ಕುಂಕುಮ ಮತ್ತ ಯೋಗ್ಯತಾ ಪ್ರಕಾರ ದಕ್ಷಿಣೆ. ಇಷ್ಟಾತು ಅಂದ್ರ . . . .

ಯಶೋದಾ:— ಮನಸ ಮಾಡಿದ್ರ ಆಗದ ಏನ್ರಿ ? ಆದರೆ ದಂಪತಿ ಅಂದಮ್ಯಾಲೆ . . . .

ಭಟ್ಟ:— ಚಿಂತಿ ಬಿಡ್ರಿ. ನಾ ನವ್ಮ್ಯಾಕೀನ ಕರಕೊಂಡು ಬಂದ ಬಿಡ್ತೇನಿ. ಪೂಜಾ ಮಾಡಿಸವ್ರು ಬ್ಯಾರೆ, ದಂಪತಿ ಊಟಕ್ಕೆ ಕೊಡವ್ರು ಬ್ಯಾರೆ ಆದ್ರೂ ಯಾಕೆ ? ಹೌದಲ್ಲೊ ?

ಯಶೋದಾ:— ಸರಿ. ಹಾಂಗೇ ಆಗಲಿ. ಮಂಗಳವಾರ ನಕ್ಕೀ ಆದ್ಹಾಂಗs ಸರಿ. ನಾ ಎಲ್ಲಾ ತಯಾರ ಮಾಡಿಕೋತೇನಿ. ಅಂದು ನೀವು ನಸಕನಾಗ ಬಂದು ಇವ್ರು ಆಫೀಸಿಗೆ ಹೋಗೂದರೊಳಗ ....

ಭಟ್ಟ:— ಛೆ! ಛೆ! ಗಣೇಶರಾಯರಿಗೆ ಅಂದ ರಜಾ ತಗೊಳ್ಳಿಕ್ಕೆ ಹೇಳ್ರಿ. ನಾ ಬರೇ ದಕ್ಷಿಣಾ ಊಟದ ಪೂರ್ತೆ ಪುರೋಹಿತ ಅಲ್ಲ. ಮಾಡಿದ ಮ್ಯಾಲೆ ಛಲೋ ಮಾಡ್ಬೇಕು. ಅವಸರ ಅಂತ ಒಂದ ಮಂತ್ರ ಬಿಟ್ಟು ನಾಕ ಮಂತ್ರ ನುಂಗಿ ಪೂಜಾ ಮಾಡಿಸಿದ್ರೆ ನಾಳೆ ಯಮ ನನ್ನ ನರಕಕ್ಕ ದಬ್ಯಾನು.

ಯಶೋದಾ:— ಹಾಗೇ ಆಗ್ಲಿ. ರಜಾ ಅಂದ್ರ ಅವರು ಒಪ್ತಾರೊ ಇಲ್ಲೊ ?

ಭಟ್ಟ:— ಯಾಕೆ ಒಪ್ಪೊದಿಲ್ಲ ? ಪುಣ್ಯದ ಕೆಲಸ ಅಂತ ತಿಳಸಿ ಹೇಳ್ರಲಾ. ಆತು. ನಾ ಇನ್ನ ಬರ್ತೇನಿ. ಮಂಗಳವಾರ ಆಗಿ ಹೋಗ್ಲಿ ಶುಭ ಕಾರ್ಯ. ಬಾಗಿನದ ವ್ಯವಸ್ಥಾ ಮಾಡಿರಿ. ತುಸಾ ಹೆಚ್ಚು ಹೂವುಪಾವು ತರಸ್ರಿ. ಕಲಶಕ್ಕೆ ಅಂತ—ಹೌದು, ಅಂದು ಹೊಸ ತಂಬಿಗಿಗೆ ಪೂಜಾ ಮಾಡಿ ಅದರಾಗಿಂದ ಪತಿದೇವರಿಗೆ ಸ್ನಾನ ಮಾಡಿಸಿ ಆಮ್ಯಾಲೆ ಆ ತಂಬಗೀನ ದಾನ ಕೊಡಬೇಕ್ತಾದ. ಒಂದು ಹೊಸ ತಂಬಗಿ ತರಸ್ರಿ. ಇನ್ನು ದಂಪತೀಗೆ ನೀವು ಏನು ಕೊಟ್ರೂ ನಡೀತದ. ಕೈಯೆತ್ತಿ ಕೊಟ್ಟದ್ದಕ್ಕ ತಕ್ಕ ಪ್ರತಿಫಲ ಸಿಕ್ಕೇ ಸಿಗ್ತದ. ಮತ್ತ ಹೌದು, ಹಾಂಗೇ ಎರಡ ರೂಪಾಯಿ ಚಿಲ್ಲರೀನೂ ತರಸಿಟ್ಟ ಬಿಡ್ರಿ. ಆತಲ್ಲ. ಮತ್ತೆ ಏನಾದರೂ ಇದ್ರೆ ನಾಳೆ ಬಂದಾಗ ಹೇಳ್ತೇನಿ. ಬರ್ತೀನಿನ್ನು, ಹೊತ್ತಾತು. ಬಾಗಿಲಾ ಮುಂದ ಮಾಡಿ ಕೊಂಡು ಹೋಗಲ್ಯಾ ? (ಹೋಗುವನು)

ಯಶೋದಾ:— ಹೂಂ. ಅಂತೂ ಒಂದ ಕೆಲಸ ಆದ್ಹಾಂಗಾತು. ಮತ್ತ ಈ ಪತಿಪೂಜಾ ಅನ್ನೂದು ಎಂಥಾ ದೊಡ್ಡದೊ ಅಂತ ಮಾಡಿದ್ದೆ; ಸುರಳೀತ ಅದ. ಪುಣ್ಯ ಬರ್ತದ ಅಂದಮ್ಯಾಲೆ ತಿಂಗಳೀಗೊಮ್ಮೆ ಮಾಡಿದ್ರೂ ಮಾಡ್ಬಹುದು. (ಹನ್ನೆರಡು ಹೊಡೆದ ಸಪ್ಪಳ) ಆಂ ! ಹನ್ನೆರಡು ಹೊಡೀತು. ಇನ್ನೂ ಇವರ ಸಿನೇಮಾ ಮುಗದಿಲ್ಲೇನು? ಆ ಹುಡುಗರು ಹೇಳ್ತಾರ ಇವರು ಕುಣೀತಾರ. ಲಗೂನೇ ಬಂದಿದ್ದರೆ ಕೆಲಸಾ ಬೊಗಸಿ ಮುಗಸಿಕೊಂಡು ಮುತ್ತೈದೇರಿಗಾದ್ರೂ ಹೇಳಿ ಬರಲಿಕ್ಕಾಗ್ತಿತ್ತು. (ಬಾಗಿಲು ದೂಡಿದ ಸಪ್ಪಳ) ಬಂದ್ಹಾಂಗ ಕಾಣಸ್ತದ ಮಾರಾಯ್ರು. ಇನ್ನ ಕಾಲತೊಳಿಯು ಪುರಸತ್ತಿಲ್ದೆ ಬಡಸೀದಿಯೇನು ಅಂತ ಕೇಳಕೋತಾ ಬರ್ತಾರ.

[ಗಣೇಶರಾಯ, ಸುಧಾ, ಗೋವಿಂದ ಪ್ರವೇಶಿಸುವರು]

ಸುಧಾ:— ಅವ್ವಾ, ತಾಟ ಹಾಕೀದಿಯೇನು ? ಹಸಿವ್ಯಾಗೇದ.

ಯಶೋದಾ:— ಹಾಕಲಿಕ್ಕ ಹತ್ತ್ಯೇನವಾ. ಸಿನೇಮಾ ನೋಡಿ ದಣದು ಬರ್ತೀರಿ ಅನ್ನೂದು ಗೊತ್ತಿಲ್ಲೇನು ನನಗ? ಏನು ಕೈಕಾಲು ತೊಳಕೋತಿಯೊ ಹಾಂಗs ಊಟಕ್ಕ ಕೂಡ್ತಿಯೊ ? ನಿನಗೇನು ಎಲ್ಲಾ ಒಂದೇ. ಒಂದು ಮಡಿ ಮೈಲಗಿ ಏನೂ ಇಲ್ಲ.

ಗೋವಿಂದ:— ಅವ್ವಾ, ಮಡಿಮೈಲಗಿ ಇಲ್ಲದಿದ್ದರೂ ಸ್ವಚ್ಛತಾ ಅನ್ನೂದು ಅದಲ್ಲ. ಹಾಂಗs ಹ್ಯಾಂಗ ಊಟಕ್ಕ ಕೂಡಲಿಕ್ಕ ಬಂದೀತು ? ಅಪ್ಪಾ, ಲಗೂನೆ ಕೈಕಾಲು ತೊಳಕೊಳ್ಳಪ್ಪಾ. ಹಸಿವಿಯಾಗೇದ. ಮತ್ತೆ ತುಸಾ ಹೋಮವರ್ಕೂ ಅದ. ಅದನ್ನಿಷ್ಟು ಮಾಡಿ ೫ ಗಂಟೇಕ್ಕ ನಾ ಕಾಲೇಜ ಮ್ಯಾಚ್ ನೋಡ್ಲಿಕ್ಕೆ ಹೋಗಬೇಕಾಗ್ಯದ. ಮಿಕ್ಸಡ್ ಡಬಲ್ಸದಾಗ ನಮ್ಮ ಸುಧಾನೂ ಆಡವಾಕಿ ಇದ್ದಾಳ.

ಯಶೋದಾ:— ಏನಂದಿ ?

ಗೋವಿಂದ:— ಮಿಕ್ಸಡ್ ಡಬಲ್ಸ.

ಯಶೋದಾ:— ಅಂದರೆ ?

ಸುಧಾ:— ಅಂದರೆ ಅವ್ವಾ, ಬ್ಯಾಡಮಿಂಟನ್ ಆಟದಾಗ ಒಂದೊಂದು ಕಡೆ ಇಬ್ಬರು ಅಂದರೆ ಒಬ್ಬ ಗಂಡಸು, ಒಬ್ಬ ಹೆಂಗಸು ಹೀಂಗ ಆಡೂದಕ್ಕ . . . .

ಯಶೋದಾ:— ತಿಳೀತು ಬಿಡು. ನಿಮ್ಮದು ನಿಮಗೇ ಛಂದ. ಲಗೂನೆ ನಿನ್ನ ತಲೀಮ್ಯಾಲೆ ಇಷ್ಟ ಅಕ್ಕೀಕಾಳು ಬಿದ್ದಿದ್ರೆ ನಾ ಶಿವಾ ರಾಮಾ ಅಂತ ಹಾಯಾಗಿರ್ತಿದ್ದೆ. ಅಷ್ಟಾಗಲಿಕ್ಕೆ ಇನ್ನ ಎಷ್ಟ ಪುಣ್ಯಾ ಖರ್ಚ ಆಗ್ಬೇಕೊ?

ಗಣೇಶ:— ನೀ ಯಾಕ ಹೆದರತೀಯೆ ? ಅಲ್ಲೆ, ನೀ ಏಕಾದಶಿ ಉಪಾಸಾ ಮಾಡ್ತೀದಿ, ಶುಕ್ರವಾರ ಒಪ್ಪೊತ್ತು ಮಾಡ್ತೀದಿ, ಒಂದಿನಾರ ದೇವರ ತೀರ್ಥ ತಗೊಳ್ಳದೆ ಊಟ ಮಾಡೂದಿಲ್ಲ; ವ್ರತಾ, ಉಪವಾಸ, ನಮಸ್ಕಾರ ಎಲ್ಲಾ ಮಾಡ್ತೀದಿ. ನಿನ್ನ ಪುಣ್ಯಕ್ಕೇನು ಕಡಮಿ ಅದ? ಸುಧಾನಂಥ ಹತ್ತ ಹುಡುಗೇರ ಲಗ್ನಾ ಮಾಡ್ಲಿಕ್ಕೆ ಸಾಕು. ಏನ ಚಿಂತೀ ಮಾಡಬ್ಯಾಡ.

ಯಶೋದಾ:— [ಆಕ್ಕಸದಿಂದ] ಹೌದು, ಹೌದು ಅಂದೆ. ನಿಮಗೆಲ್ಲಾ ಬರೇ ನಗಚಾಟಕಿ ಆಗಿ ಹೋಗ್ಯದ. ನೀವೇನಂದ್ರೂ ನಾ ನನ್ನ ಧರ್ಮ-ಕರ್ಮ ಬಿಡವಾಕಿ ಅಲ್ಲ. ಕೂಡ್ರಿ ಇನ್ನ ಊಟಕ್ಕ. ಮಧ್ಯಾಹ್ನ ನಿಮಗೇನಾರ ಪುರಸತ್ತದನೊ ಅಥವಾ . . . .

ಗಣೇಶ:— ಯಾಕೆ, ಮತ್ತೇನು ಕೆಲಸ ಅದ ? ಏನಾರ ಇದ್ದರ ಹೇಳಿ ಬಿಡು. ಇಂದ ಮಧ್ಯಾಹ್ನ ಮೂರು ಗಂಟೇಕ್ಕ ಧಾರವಾಡಕ್ಕ ಹೋಗಿ ಬರ್ಬೇಕು ಅಂತ ಮಾಡೇನಿ. ಅಲ್ಲಿ ಇಂದು ಕರ್ನಾಟಕ ಸಂಘದಾಗ ಲೆಕ್ಚರ ಅದ. ಅನಾಯಾಸ ಸೂಟಿ ಅದ, ಹೋಗಿ ಕೇಳಿ ಬರೋಣ ಅಂತ ಮಾಡೇನಿ.

ಯಶೋದಾ:— ನನಗೆ ಗೊತ್ತು ನಿಮಗ ಪುರಸತ್ತು ಇರೋದಿಲ್ಲ ಅನ್ನೂದು. ಅದಕೇ ಕೇಳಿಕೊಂಡುಬಿಟ್ಟೆ. ನಾಡದು ಮಂಗಳವಾರ ರಜಾ ತಗೋರಿ.

ಗಣೇಶ:— ಯಾಕೆ? ಹಾಂಗೆಲ್ಲಾ ರಜಾ ಕೊಡ್ತಾರೇನು ? ಹಾಂಗ ಸರಕ್ಕನೆ ಸಿಗಬೇಕಾದ್ರ ಕ್ಯಾಜುವಲ್ ಲೀವ್ ತಗೋಬೇಕು. ಕ್ಯಾಜುವಲ್ ಲೀವ್ ತಗೋಬೇಕಾದ್ರೆ ಏನಾದರೂ ಜಡ್ಡೊ, ಬ್ಯಾನಿಯೊ ಅಂಥಾದ್ದೇ ಏನಾರ ಆಗಬೇಕು. ಅಂಥಾ ಹೊತ್ತಿಗ ಇಲ್ಲಿ ಅಂತೇ ಕ್ಯಾಜುವಲ್ ಲೀವ್ ಇಟ್ಟಾರ.

ಯಶೋದಾ:—ಅಯ್ಯ! ಊಟಕ್ಕ ಕೂತಾಗ ಇಲ್ಲದ ಅಭದ್ರ ನುಡೀ ಬ್ಯಾಡ್ರಿ. ರಜಾ ತಗೋಬೇಕಾದ್ರೆ ಜಡ್ಡೇ ಆಗಬೇಕೇನು? ಸಂಸಾರ ಅಂದಮ್ಯಾಲೆ ಮತ್ತೆ ಏನೂ ಮಹತ್ವದ ಕೆಲಸ ಇರೂದೇ ಇಲ್ಲೇನು ?

ಗಣೇಶ:— ಇರ್ತದ. ಇಲ್ಲಾ ಅಂದವ್ರು ಯಾರು? ಆದರೆ ಹಕ್ಕಿನ ರಜಾ ತಗೋಬೇಕಾದ್ರೆ ಮೊದಲೆ ಮಂಜೂರಿ ತಗೋಬೇಕಾಗ್ತದ.

ಯಶೋದಾ:— ಅದೆಲ್ಲಾ ನನಗ ತಿಳೀದು. ಜಡ್ಡು ಅಂತಾರ ಅನ್ರಿ, ಮಂಜೂರಿನಾದ್ರು ತಗೋರಿ, ಏನಾದರೂ ಮಾಡ್ರಿ. ಆದ್ರೆ ಮಂಗಳ ವಾರ ರಜಾ ಮಾತ್ರ ತಗೋರಿ ತೀರ್ರು.

ಗಣೇಶ:— ತುಸಾ ಸಾರು ಹಾಕು. ಅಲ್ಲಾ, ಮಂಗಳವಾರ ಅದ ಅರೆ ಏನು? ರಜಾ ತಗೊಂಡು ಮನ್ಯಾಗ ಕುಂತ ಏನ ಮಾಡಬೇಕಾಗ್ಯದ? ಏನ ಹಪ್ಪಳ ಗಿಪ್ಪಳ ಮಾಡವಾಕಿ ಅದೀಯೇನು ? ಅಂಥಾದ್ದೇನಾದ್ರೂ ಇದ್ರೆ ನನ್ನಿಂದೇನ ಸಾಧ್ಯ ಇಲ್ಲ ನೋಡು. ಹಪ್ಪಳ ಲಟಸೂದಿರ್ಲಿ, ಕಾಯೂದು ಕೂಡ ನಮಗೆ ನೀಗದ ಮಾತು. ಸುಧಾ, ನೀ ಮಂಗಳವಾರ ಕಾಲೇಜಿಗೆ ಸೂಟಿ ತಗೋವಾ. ಆಕೀಗ ಇಷ್ಟು ಅವತ್ತು ಸಹಾಯ ಮಾಡು.

ಯಶೋದಾ:— ಏನು ಎಂತು ಅಂತ ಅನ್ನೂ ಮೊದಲೆ ಏನೇನಾರ ಅನ್ನಿಲಿಕ್ಕೆ ಹತ್ತಿದರಲ್ಲ. ಹಪ್ಪಳಂತ! ಹಪ್ಪಳ ಮಾಡೂದಾದ್ರ ನೀವ ಯಾಕ ಬೇಕು ನನಗೆ? ನಾ ಒಬ್ಬಾಕೀನೆ ಮಾಡ್ಲಿಕೆ ಘಟ್ಟ ಅದೇನಿ. ಅಂಥಾ ಪರಿ ಯಾರಾದ್ರೂ ಬೇಕು ಅಂದ್ರ ನೆರೆಹೊರೆಯೊಳಗೆ ನನಗೆ ಬೇಕಾದವ್ರು ಇದ್ದಾರ ತಂದೆ. ರಮಾಬಾಯಿ, ಕಮಲಾಬಾಯಿ, ಗೋದೂಬಾಯಿ ಯಾರೂ ನಾ ಬಾ ಅಂದ್ರೆ ಒಲ್ಲೆ ಅನ್ನೂದಿಲ್ಲ. ಹುಂ! ಹಪ್ಪಳಂತ! ಬಾಯೀಗೆ ಬಂದಿದ್ದು....

ಗಣೇಶ:— ಹೋಗ್ಲಿ ಬಿಡು. ನಮ್ಮ ಅಂದಾಜು ತಪ್ಪು. ಹೇಳಿಬಿಡು, ಮಂಗಳವಾರ ನನ್ನಿಂದ ಏನಾಗಬೇಕು ಅಂತ? ಅಂಥಾ ಮಹತ್ವದ ಕೆಲಸಾನೇ ಇದ್ರ.....

ಯಶೋದಾ:— ಅದ. ಏ ಸುಧಾ, ನಿನ್ನೆ ನನಗೆ ಓದಿ ಹೇಳಿದಿಯಲ್ಲ, ಆ ಸುದ್ದಿ, ಇವರಿಗೂ ತೋರಿಸೀಯೇನು?

ಸುಧಾ:— ಯಾವದು? ನನಗೆ ನೆನಪಿಲ್ಲವ್ವಾ.

ಯಶೋದಾ:— ನೀನೇ ಓದಿ ಹೇಳಿದಾಕಿ ನಿನಗೆ ನೆನಪಿಲ್ಲ? ಹೀಂಗ ಮರಿಯೂ ನೀವು ಹ್ಯಾಂಗ ಪರೀಕ್ಷಾ ಪಾಸಾಗ್ತೀರೊ? ಅದು ಯಾವದೋ ಊರು ಅಂದಿಯಲ್ಲ. ಅಲ್ಲಿ ಪತಿಪೂಜಾ ಮಾಡಿದರು ಅಂತ.....

ಸುಧಾ:— (ನಕ್ಕು) ಓ! ಅದೇನೇ! ಅದೇನೋ ಅಪ್ಪಾ, ಉತ್ತರ ಪ್ರದೇಶದಲ್ಲಿ ಪತಿಪೂಜನ ಯಜ್ಞ ಮಾಡಿದ ಸುದ್ದಿ ಅಂತ ನನಗೆ ನೀ ತೋರಿಸಲಿಲ್ಲ? ಅದನ್ನೇ ಅವ್ವಗ ಓದಿ ಹೇಳಿದ್ದೆ.

ಗಣೇಶ:— ಹೌದು. ಆದರೆ ಅದಕ್ಕೂ ಮಂಗಳವಾರ ನಾ ರಜಾ ತಗೊಳ್ಳೂದಕ್ಕೂ ಏನ ಸಂಬಂಧ ಅಂತೇನಿ?

ಸುಧಾ :— (ನಗುತ್ತ) ಅಪ್ಪಾ, ನನಗೆ ಗೊತ್ತಾತು. ಹೇಳಲ್ಯಾ? ಅವ್ವ ಮಂಗಳವಾರ ದಿನಾ ನಿನ್ನ ಪೂಜಾ ಮಾಡ್ಬೇಕು ಅಂತ ಮಾಡ್ಯಾಳು ಅಂತ ಕಾಣಸ್ತದ.

ಗಣೇಶ:— (ಗಾಬರಿಯಾಗಿ) ಹೌದೇನೆ? ಅಂ!

ಯಶೋದಾ:— ಹೌದು.

ಗಣೇಶ:— ಅಂ! ಏನ ಬಂತಸಾ ಇದು ಅಂತೇನಿ!

ಗೋವಿಂದ:— ಪೂಜಾ ಮಾಡ್ಸಿಕೊಳ್ಳಲಿಕ್ಕೆ ಯಾಕೆ ಅಂಜತೀದಿ, ಅಪ್ಪಾ? ದೇವ್ರರಾಂಗ ಕುಂತರಾತು. ಮಂತ್ರ ಹೇಳತಾರ, ಹೂ ಏರಸತಾರ, ನೇವೇದ್ಯ ಮಾಡತಾರ, ಆರತಿ ಎತ್ತತಾರ ತೀರ್ರು. ಹೂಂ ಅಂದ ಬಿಡು ಅಪ್ಪಾ. ಸೀ ತಿನ್ನದೆ ಭಾಳ ದಿನಾತು. ಈ ನೆವ ದಿಂದಾದ್ರೂ ಹೋಳಗಿ ಹೊಡಿಯೋಣು.

ಸುಧಾ:— ಹೌದಪ್ಪ, ಅವ್ವನ ಬಯಕೀನೂ ತೀರದ್ಹಾಂಗಾತು. ಅಣ್ಣಾನ ಬಯಕೀನೂ ತೀರದ್ಹಾಂಗಾತು.

ಗಣೇಶ: — ಸಾಕು ಸುಮ್ಮನಿರಿ. ಆಕಿ ಹೇಳಿದ್ರು, ನೀವು ಹೂಂ ಅಂದ ಬಿಟ್ರಿ! ಹೋಳಗಿ ತಿನ್ನಬೇಕು ಅಂತಿದ್ರ ಮಾಡಿಕೊಂಡು ತಿನ್ರಿ. ನಾ ಬ್ಯಾಡಂತೇನೇನು ? ಅಲ್ಲಾ, ನನ್ನ ಪೂಜಾ ಮಾಡ್ತಾಳಂತ. ಏನ



ಪರೋಪಕಾರದಿಂದ ಫಾಯದೆಯೇ ಹೊರತು ಎಂದೂ ನಷ್ಟವಿಲ್ಲ ಎಂದು ಸುಬ್ಬರಾಮಯ್ಯನವರು ಹೇಳಿದ ಆಪ್ತವಚನವನ್ನು ಕೇಳಿ ಮೊದಲು ನಕ್ಕ ಕಾರಂತರು, ಮುಂದೆ ಸುಬ್ಬರಾಮಯ್ಯನವರ ಯಶಸ್ವಿ ಕಾರಭಾರ ನೋಡಿ ಬೆಕ್ಕಸ ಬೆರಗಾದರು. "ನಿಮಗೂ ಲಕ್ಕು ಪ್ಲಕ್ಕು ಇದ್ದರೆ" ಬೇಕಾದರೆ ಸುಬ್ಬ-ರಾಮಯ್ಯನವರ ಅನುಕರಣೆ ಮಾಡಿರಿ !

ಪರೋಪಕಾರ, ಲಿಮಿಟೆಡ್

ಶ್ರೀ ಶಿವರಾಮ ಕಾರಂತರಿಂದ

ಮೇಲಿನ ಸಂಸ್ಥೆಯ ಹೆಸರನ್ನು ಕೇಳಿಯೇ ತಾವು ನಗಬಹುದು; ನಾನೂ ಒಂದು ಕಾಲದಲ್ಲಿ ಹಾಗೆ ಕೇಳಿ ನಕ್ಕಿದ್ದೆ. ಇಂದು, ಈ ಅಪಾರ ಸಂಸ್ಥೆಯ ಯಜಮಾನಿಕೆಯನ್ನು ನಡೆಯಿಸಿ ಕೊಂಡು ನಮ್ಮ ದೇಶದಲ್ಲೇ ಹೆಸರುವಾಸಿಯಾಗಿ ಮೆರೆಯುತ್ತಿರುವ ಶ್ರೀಮಾನ್ ಸುಬ್ಬರಾಮಯ್ಯನವರು, ಇಪ್ಪತ್ತು ವರ್ಷಗಳ ಹಿಂದೆ, ಸಹಪಾಠಿ ಎಂಬ ಅಭಿಮಾನದಿಂದ ನನ್ನಲ್ಲಿಗೆ ಬಂದು, ತಮ್ಮ ಹಂಚಿಕೆಗಳನ್ನೆಲ್ಲಾ ನನ್ನ ಮುಂದೆ ವಿವರಿಸಿ ಹೇಳಿದಾಗ ನಾನು ರೇಗಿದ್ದೆ; ಹೊಟ್ಟೆತುಂಬಾ ನಕ್ಕೂ ಇದ್ದೆ. ಆದರೆ ಅವರು ನನ್ನ ಯಾವ ಮಾತನ್ನೂ ಕೇಳಲಿಲ್ಲ. ಅದೇ ವರ್ಷ ಹಟತೊಟ್ಟು, ಆ ಸಂಸ್ಥೆಯನ್ನು ತಾವೊಬ್ಬರೇ ಹೆತ್ತುಬಿಟ್ಟರು. ಈಗ ಅವರ ಯಶಸ್ಸನ್ನು ನೋಡಿ ನನಗೇ ಹೊಟ್ಟೆಕಿಚ್ಚು ಆಗುವಂತಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಅವರು ಮಾಡಿದ ಖರ್ಚು, ಅವರು ಗಳಿಸಿದ ಕೀರ್ತಿ, ಅವರ ಹೆಸರಿಗಿರುವ ಭರಾಮು— ಇವನ್ನೆಲ್ಲ ಕಂಡಮೇಲೆ, ಗವರ್ನೆಂಟ್ ಸೆಕ್ಯುರಿಟಿ ಪತ್ರಗಳಿಗಿಂತಲೂ ಪರೋಪಕಾರಕ್ಕೆ, ಅರ್ಥಾತ್ 'ಪರೋಪಕಾರ ಲಿಮಿಟೆಡ್' ಪಾಲು ಬಂಡವಾಳಕ್ಕೆ ಹೆಚ್ಚಿನ ಕಿಮ್ಮತ್ತು ಇದೆ—ಎಂದು ನನಗನಿಸುತ್ತದೆ. ಏಕೆ ಎಂದರೆ, ಆ ಸಂಸ್ಥೆಯಲ್ಲಿ ಪಾಲು ಕೊಂಡವರಿಗೆ ಏನೇನೂ ನಷ್ಟವಾಗಿಲ್ಲ. ಅವರು ಕೊಟ್ಟಹಣ ನಗದು ರೂಪದಲ್ಲಿ, ನಗದಿಗಿಂತ ಹೆಚ್ಚಿನ ಬಿರುದು, ಪುಣ್ಯ ಇತ್ಯಾದಿಗಳ ರೂಪದಲ್ಲಿ ದೊರೆತಿದೆ, ಎಂದು ನನಗೆನಿಸುತ್ತದೆ. ಸುಬ್ಬ-ರಾಮಯ್ಯನವರು ಹಿಂದೆ ನನ್ನೊಡನೆ ಹೇಳಿದ ಮಾತು ಇದು: "ಪರೋಪಕಾರದಿಂದ ಎಂದೆಂದೂ ಫಾಯದೆಯೇ ಹೊರತು ನಷ್ಟವಿಲ್ಲ," ಎಂದು. ಆ ಮಾತು ಸೇಕಡಾಕ್ಕೆ ನೂರರ ಅಲ್ಲ, ಇನ್ನೂರರ ಸತ್ಯ—ಎಂದು ನಾನು ಒಪ್ಪುತ್ತೇನೆ.

ನೋಡಿ, ಇಪ್ಪತ್ತು ವರ್ಷಗಳ ಕೆಳಗಿನ ಮಾತು ಇದು; ಆಗ ನನ್ನ ಸಹಪಾಠಿ ಸುಬ್ಬರಾಮಯ್ಯನವರಿಗೆ ಇಪ್ಪತ್ತೈದು ವರ್ಷ ಪ್ರಾಯ. ಈಗ ಅವರ ಪ್ರಾಯ ಅರವತ್ತೈದು. ಯಾರು ಅವರನ್ನು ನೋಡಿದರೂ ಅರವತ್ತೈದು ವರ್ಷದ ವಯೋವೃದ್ಧ, ಜ್ಞಾನವೃದ್ಧರೆಂದೇ- ಗೌರವಿಸುತ್ತಾರೆ. ನಾನೂ ಅವರ ಸಹಪಾಠಿ ಎಂದೆ. ಎಂದ ಮೇಲೆ ನನಗೂ ಅವರಿಗೂ ಸಮ-ಸಮ ಪ್ರಾಯ ಎಂದು ನೀವು ತಿಳಿಯಬಹುದು. ಅದು ಮಾತ್ರ ಹಾಗಿಲ್ಲ. ಈಗ ನನಗೆ ಐವತ್ತು ಚಿಲ್ಲರೆ ಪ್ರಾಯವಾದರೆ, ಆಗ್ಗೆ ನನಗೆ ಮೂವತ್ತು ಚಿಲ್ಲರೆಯಾಗಿತ್ತು. ಆಗ ನಾನು ಅವರಿಗಿಂತಲೂ ಐದು ಚಿಲ್ಲರೆ ವರ್ಷಕ್ಕೆ ದೊಡ್ಡವನಾಗಿದ್ದರೆ, ಈಗ ಅವರು ನನಗಿಂತ ಹತ್ತು ಚಿಲ್ಲರೆ ವರ್ಷಗಳಿಗೆ ದೊಡ್ಡವರು. ನಾನೇ ಒಮ್ಮೆ ಅವರೊಡನೆ ವಾದ ಹೂಡಿದ್ದೆ: "ಹ್ಯಾಗೆ ಸ್ವಾಮಿ, ನಿಮಗೆ ಅರುವತ್ತೈದು ವರ್ಷ ಆಗುವುದು?" ಎಂದು. ಅವರು ಥಟ್ಟನೆ ನುಡಿದರು: "ನಿಮ್ಮ ವರ್ಷಕ್ಕೂ ನನ್ನ ವರ್ಷಕ್ಕೂ--ತಿಂಗಳುಗಳಲ್ಲಷ್ಟೇ ವ್ಯತ್ಯಾಸ" ಎಂದು. ಒಪ್ಪಲೇಬೇಕಾದ ಮಾತದು. ಅವರು ಒಂದು ಘಂಟೆಯಲ್ಲಾಡುವ ಮಾತುಗಳನ್ನು ನಾನು ಮೂರು ಘಂಟೆಗಳಲ್ಲಿಯೂ ಆಡಲಾರೆ. ಹೀಗಿರುವಾಗ, ನನ್ನ ಒಂದು ವರ್ಷಕ್ಕೆ ಅವರ ಎರಡು ವರ್ಷ ಆಗುವುದರಲ್ಲಿ ಏನಾಶ್ಚರ್ಯ?

ಅವರು ನನ್ನ ಸಹಪಾಠಿ ಎಂದೆ. ಹ್ಯಾಗೆ ಎಂದು ನೀವು ಕೇಳಬಹುದು. ಅವರ ಊರೇ ಬೇರೆ, ನನ್ನ ಊರೇ ಬೇರೆ. ನಾನು ಶಾಲೆಗೆ ಹೋದದ್ದುಂಟು; ಅವರು ಹೋದದ್ದಿಲ್ಲ. ನಮ್ಮ ಸಹಪಾಠ ನಡೆದದ್ದು, ಕರ್ಮಧರ್ಮ ಸಂಯೋಗದಿಂದ, ಮೈಸೂರಿನಿಂದ ಮಡಿಕೇರಿಗೆ ಬಸ್ಸಿನಲ್ಲಿ ಬರುವಾಗ. ಬರುತ್ತ,ದಾರಿಯಲ್ಲೇ ಅವರು ಒಂದು ವೃತ್ತಾಂತ ಪತ್ರಿಕೆ ತೆಗೆದುಕೊಂಡರು. ನಾವಿಬ್ಬರೂ ಒಂದೇ ಸೀಟಿನಲ್ಲಿ ಕುಳಿತು, ಜತೆಯಲ್ಲೇ, ಆ ಪತ್ರಿಕೆಯನ್ನು ಓದಿದೆವು. ಅವರು ಆಗ "ನೀವು ನನ್ನ ಸಹಪಾಠಿಗಳು" ಎಂದರು. ಜತೆಯಲ್ಲೇ ಕುಳಿತು ಪೇಪರು ಓದಿದ ಮೇಲೆ, ಆ ತೀರ್ಮಾನವನ್ನು ನಾನೂ ಒಪ್ಪಿಕೊಳ್ಳಲೇಬೇಕಾಯಿತು. ಆವಾಗಲೇ ಅವರು ನಮ್ಮ ಊರಿಗೆ ಬಂದದ್ದು; ನಮ್ಮ ಮನೆಯಲ್ಲಿ ಇದ್ದದ್ದು; ಸಹಪಾಠಿ ಎಂಬ ಅಭಿಮಾನದಿಂದ ತಮ್ಮ ಹಂಚಿಕೆಯನ್ನು ನನಗೆ ವಿವರಿಸಿ ಹೇಳಿದ್ದು; ನಾನದನ್ನು ನಿರಾಕರಿಸಿದ್ದು; ನನ್ನ ಮೂರ್ಖತನ ಕಂಡು ಅವರು ನಕ್ಕದ್ದು; "ನಿಮಗೆ ತಲೆಯಿಲ್ಲ" ಎಂದದ್ದು; ಆಗ ನಾನು ಇದ್ದ ತಲೆಯನ್ನು ಮುಟ್ಟಿ ನೋಡಿದರೂ ಅವರು ಒಪ್ಪದೆ ಹೋದದ್ದು- ಇವುಗಳನ್ನೆಲ್ಲ ನೆನೆಯುವಾಗ ಅವರೇ ಹೆಚ್ಚು; ನಾನೇ ಕಡಿಮೆ- ಎಂದು ನನಗೆ ಈಗೀಗ ಕಾಣುತ್ತಾ ಇದೆ.

* * *

ಬಿಡಿ, ಆ ಹಂಚಿಕೆ ಏನೆಂದು ಹೇಳುತ್ತೇನೆ. ನೀವೂ ತಿಳಿದುಕೊಳ್ಳಿ. ನಿಮಗೂ ಲಕ್ಕು, ಪ್ಲಕ್ಕು ಎರಡೂ ಇದ್ದರೆ, ಅವರಂತಾಗಲು ಬಂದೀತು. ಇನ್ನೇನಾದರೂ ಅಂಥದೇ ಸಂಘಸಂಸ್ಥೆಗಳನ್ನು ಕಟ್ಟಿಕೊಂಡು ದೊಡ್ಡ ದೊಡ್ಡ ಕೆಲಸ ಮಾಡಿ, ಕೀರ್ತಿ ಗಳಿಸಿದಲ್ಲಿ, "ಮಹಾಭಾರತ ರತ್ನ" ಎಂಬ ಬಿರುದಾದರೂ ಬಂದೀತು. ನಾನೇಕೆ ಅಂಥ ಪ್ರಯತ್ನ ಮಾಡುವುದಿಲ್ಲ- ಎಂದು ನೀವು ಕೇಳಬಹುದು. ಅದಕ್ಕೆ ಕಾರಣ ಇಷ್ಟೇ—ನನಗೆ ನನ್ನ ಜಾತಕದಲ್ಲಿರುವುದಕ್ಕಿಂತಲೂ ಜೋಯಿಸರ ಮೇಲೆ ವಿಶ್ವಾಸ ಜಾಸ್ತಿ. ಅವರೆಂದು ಬಿಟ್ಟಿದ್ದಾರೆ: "ನಿನ್ನ ಯೋಗದಲ್ಲಿ ಕಾಸು, ಬಿರುದು ಎರಡೂ ಬರೆದಿಲ್ಲ"— ಎಂದು. ಬ್ರಹ್ಮನಿಗೆ ನನ್ನ ಹಣೆಯ ಮೇಲೆ (ಇಷ್ಟಗಲ ಜಾಗವಿದ್ದೂ) ಬರೆಯುವ ಮನಸ್ಸು ಬರಲಿಲ್ಲವಾದರೆ, ನಾನೇಕೆ ಚಿಂತೆ ಕಟ್ಟ



ಕೊಳ್ಳಬೇಕು- ಎಂದು ನಾನು ಸುಮ್ಮನಿದ್ದೇನೆ. ನೀವು ಹಾಗಲ್ಲ- ವಾರ ವಾರಕ್ಕೂ ವಾರದ ಭವಿಷ್ಯ ಕಂಡು, ಓದಿ, ಅದರಿಂದಲೇ ದೊಡ್ಡವರಾಗುವ ಭರವಸೆಯುಳ್ಳವರು. ನನಗೋ, ಆ ಒಂದು ಸಾರಿಯೇ ಜೋಯಿಸರಿಗೆ ಕೊಟ್ಟ ನಾಲ್ಕಾಣೆ ನಷ್ಟವಾಯಿತಲ್ಲ- ಎಂಬ ಚಿಂತೆ ಇವತ್ತಿಗೂ ಉಳಿದಿದೆ. ಇಲ್ಲವಾದರೆ ಸುಬ್ಬರಾಮಯ್ಯನವರ ಕಂಪೆನಿಯಲ್ಲಿ, ಅಂದರೆ ಸದ್ರಿ "ಪರೋಪಕಾರ ಲಿಮಿಟೆಡ್'' ಸಂಸ್ಥೆಯಲ್ಲಿ, ಹತ್ತು ರೂಪಾಯಿಗಳನ್ನು ಕೊಟ್ಟು, ಒಂದು ಶೇರನ್ನಾದರೂ ಕೊಂಡುಕೊಳ್ಳದಿರುತ್ತಿದ್ದೆನೇ ?

ಸದ್ರಿ ಕಂಪೆನಿಯ ವಿಚಾರ ಹೀಗಿದೆ: ಅದರ ಮ್ಯಾನೇಜಿಂಗ ಏಜಂಟರೇ "ಶ್ರೀ ಸುಬ್ಬರಾಮಯ್ಯ ಸನ್ಸ್ ಏಂಡ್ ಡಾಟರ್ಸ್'' ರವರು. ಅದರ ಪಾಲು ಭಂಡವಾಳವು ಹತ್ತು ಸಾವಿರ ರೂಪಾಯಿಗಳು; ಹತ್ತು ರೂಪಾಯಿಯ ಸಾವಿರ ಶೇರುಗಳು. ಪ್ರಾರಂಭಕ್ಕೆ ಕೊಡಬೇಕಾಗಿದ್ದುದು ಶೇರಿಗೆ ಐದು ರೂಪಾಯಿಗಳಂತೆ. ಹತ್ತು ವರ್ಷಗಳಲ್ಲಿ ಮುನಾಫೆಯೇ ಆಗಲಿ, ನಷ್ಟವೇ ಆಗಲಿ, ಪಾಲಿನ ಹಣ ಪರತು. ಕೊಟ್ಟವರಿಗೇನು ನಷ್ಟ ಹೇಳಿ ? ಹೆಚ್ಚೆಂದರೆ ಹಣದ ಬಡ್ಡಿ ಹೋದೀತು.

ಹೀಗೆ ದೊರಕಿಸಿದ ಹಣದಿಂದ ಸುಬ್ಬರಾಮಯ್ಯನವರು, ಒಂದು ಅನಾಥಾಲಯ, ಒಂದು ಸಹಕಾರಿ ಸ್ಟೋರ್ಸ್, ಒಂದು ಸಮಾಜಸೇವಾ ಸಂಸ್ಥೆ (ಯಾವ ಕೆಲಸವನ್ನೂ ಮಾಡುವ) ಇಷ್ಟನ್ನು ನಡೆಯಿಸುವವರು. ಸಹಕಾರಿ ಸ್ಟೋರ್ಸಿನ ಮುನಾಫೆಯೆಲ್ಲವೂ ಅನಾಥಾಲಯ ಮತ್ತು ಸಮಾಜಸೇವಾ ಕಾರ್ಯಗಳಿಗೆ- ಸಲ್ಲುವಂಥವು. ಇದರಲ್ಲಿ ಅಗ ನನಗೆ ಅನುಮಾನ ಕಂಡರೂ ಅವರು ಈ ಇಪ್ಪತ್ತು ವರ್ಷಗಳಲ್ಲಿ ಇಷ್ಟನ್ನು ನಡೆಯಿಸಿಕೊಂಡು ಬಂದಿದ್ದಾರಲ್ಲ- ಎಂದ ಮೇಲೆ ಅವರ ಮಾತಿಗಿಂತ ಕೃತಿ ಹೆಚ್ಚಾಗಲಿಲ್ಲವೇ ?— ಏನು ತಪ್ಪು ? ಮೊನ್ನೆ ನಾನು ಮೈಸೂರಿಗೆ ಹೋದಾಗ ಅವರ ಮನೆಯ ಹೊರಗಡೆಯಲ್ಲಿ ಮೂರು ಬೋರ್ಡುಗಳಿದ್ದವು. ಯಾವಾವವೆನ್ನುತ್ತೀರಾ? "ಸಮಾಜ ಸೇವಾ ಸಂಘ'', "ಅನಾಥಾಲಯ'', "ಸಹಕಾರಿ ಸ್ಟೋರ್ಸ್''. ಅವರ ಒಬ್ಬ ಮಗ ಸ್ಟೋರ್ಸ ನಡೆಸುತ್ತಿದ್ದಾನೆ. ಆರು ಮಂದಿ ಮಕ್ಕಳು ಸಮಾಜಸೇವೆಯ ಕೆಲಸ ಮಾಡುತ್ತಿದ್ದಾರೆ. "ಪರೋಪಕಾರ ಲಿಮಿಟೆಡ್'' ಸಂಸ್ಥೆಯನ್ನು ಇಂದಿಗೂ ಅವರು ಖುದ್ದು ನಡೆಸಿಕೊಂಡು ಬರುತ್ತಿದ್ದಾರೆ.

ನಾನು ಕುತೂಹಲದಿಂದ "ನಿಮ್ಮ ಅನಾಥಾಲಯದಲ್ಲಿ ಯಾರ್ಯಾರಿದ್ದಾರೆ?'' ಎಂದು ಕೇಳಿದೆ. ಅದಕ್ಕವರು "ಸ್ವಾಮಿ, ಮುಖ್ಯ, ಮನುಷ್ಯನಿಗೆ ಪ್ರಾಮಾಣಿಕತೆ ಬೇಕು. ಅದಿಲ್ಲದೆ ಯಾವ ಸಂಘ, ಸಂಸ್ಥೆಯೂ ನಡೆಯಲಾರದು. ನಾನು ಈ ಸಂಸ್ಥೆಯನ್ನು ತೊಡಗುವ ಮೊದಲು, ಹಲವು ಅನಾಥಾಲಯಗಳನ್ನು ನೋಡಿಕೊಂಡು ಬಂದೆ. ಅಲ್ಲಿ ಹೆಚ್ಚಿನ ಮಕ್ಕಳಿಗೆ ತಾಯಿ ಅಥವಾ ತಂದೆ, ಮಾವ ಅಥವಾ ದೊಡ್ಡಪ್ಪ, ಮುಖ್ಯತಃ ಹೆರಲಿಕ್ಕೆ ಕಾರಣರಾದ ಒಬ್ಬರಲ್ಲ ಒಬ್ಬರಿದ್ದರು. ಹಾಗಿದ್ದ ಮೇಲೆ, ಆ ಮಕ್ಕಳು ಅನಾಥರಾಗುವದು ಹೇಗೆ ? ಜನಕ್ಕೆ ಪ್ರಾಮಾಣಿಕತೆಯಿಲ್ಲ. ಅಂಥವಕ್ಕೆ ಜನ ಇನ್ನೂ ಇನ್ನೂ ದುಡ್ಡು ಕೊಡುತ್ತಿದ್ದಾರಲ್ಲ— ಅದು ನನಗೆ ಆಶ್ಚರ್ಯ'' ಎಂದರು. ನಾನು ಆ ಮಾತಿಗೂ ಒಪ್ಪಲೇಬೇಕಾಯಿತು.

ಅವರು ಮಾತು ಮುಂದುವರಿಸಿದರು:"ನೋಡಿ, ನಾನೂ ನನ್ನ ಹೆಂಡತಿಯೂ ಈ ಸಂಸ್ಥೆಯನ್ನು ಸೇರುವಾಗ, ಇಬ್ಬರೂ ಅನಾಥರೇ ಆಗಿದ್ದೆವು; ಈಗಲೂ ಹಾಗೆಯೇ. ಅಪ್ಪ, ಅಮ್ಮ, ಅಜ್ಜ, ಅಜ್ಜಿ- ಯಾರೂ ನಮಗಿರಲಿಲ್ಲ. ಹೀಗಾಗಿ, ಮೊದಲಿನ ಅನಾಥರೇ ನಾವಾಗಿ, ಈ ಮನೆ ಬಾಡಿಗೆಗೆ ವಹಿಸಿಕೊಂಡು ಇಲ್ಲಿ ಬಂದು ಸೇರಿದೆವು. ಅನಾಥರಾದ ನಮ್ಮ ಮಕ್ಕಳು ಹೇಗೂ ಅನಾಥರೇ ಅಲ್ಲವೇ ? ಹೀಗಾಗಿ ನಮ್ಮ ಸಂಸಾರವೂ ಇಲ್ಲಿದೆ. ಇಲ್ಲಿನ ಒಬ್ಬೊಬ್ಬರೂ ಸಂಬಳದ ಆಶೆಗೆ ದುಡಿಯುತ್ತಿಲ್ಲ. ಸಾರ್ವಜನಿಕ ಕೆಲಸ ಮಾಡುವಾಗ ಸಂಬಳ ತಕ್ಕೊಂಡರೆ ಏನು ನ್ಯಾಯ ಹೇಳಿ ? ನಾನು, ನನ್ನ ಹೆಂಡತಿ, ಮಕ್ಕಳು ಒಬ್ಬೊಬ್ಬರಿಗೂ 'ಪೇ' ಇಲ್ಲ. ಪರೋಪಕಾರದ ಸ್ಪಿರಿಟ್ ಹಾಗಿರಬೇಕು. ಈಗ ನೋಡಿ, ಇಷ್ಟೇ ಅಲ್ಲದೆ, ಹೊಸತಾಗಿ ಒಂದು 'ಕಲೆಕ್ಟಿವ್ ಫಾರ್ಮು' ನಡೆಯಿಸಿಕೊಂಡು ಬಂದಿದ್ದೇವೆ; ಒಂದು 'ಗೋಶಾಲೆ' ಯೂ ಇದೆ'' ಎಂದು ಹೇಳಿ ಅವರ ಸಂಸ್ಥೆಯ ಹಿತ್ತಿಲು ಯಾನೆ ಫಾರ್ಮು, ಹಟ್ಟಿ ಯಾನೆ ಗೋಶಾಲೆ- ಎಲ್ಲವನ್ನೂ ತೋರಿಸಿದರು. ಪ್ರತಿಯೊಂದಕ್ಕೂ ಒಂದೊಂದು ಬೋರ್ಡಿತ್ತು. ಹಿತ್ತಲಿಗೆ ತುಸು ದೂರದಲ್ಲಿಯೆ 'ಕಂಪೋಸ್ಟ್ ಪಿಟ್- ಲಿಮಿಟೆಡ್' ಎಂದು ಒಂದು ಬೋರ್ಡು ತಗಲ ಹಾಕಿತ್ತು. "ಅದೇನು?'' ಎಂದು ಕೇಳಿದೆ. "'ಲಿಮಿಟೆಡ್,'' ಎಂದರೆ 'ಬಹಳ ಇಲ್ಲ' ಒಂದೇ ಹೊಂಡ ತೆಗೆದಿರುವುದು— ಎಂದರ್ಥ. ಊರ ಜನರು ತಮ್ಮತಮ್ಮ ಮನೆಯ ಕಚರಾಗಳನ್ನೆಲ್ಲ ಇಲ್ಲಿಗೇ ತಂದು ಹಾಕಬೇಕೆಂದು ಮಾಡಿದ್ದೇವೆ. ನಮ್ಮ ಪಿಟ್ಟಗೆ ಡೆಪ್ಟಿ- ಕಮಿಶನರ್ ಸಾಹೇಬರಿಂದಲೇ ನೂರು ರೂಪಾಯಿ ಬಹುಮಾನ ಬಂದಿದೆ. ಇದರಲ್ಲಿ ಒಟ್ಟಾದ ತಿಪ್ಪೆಯನ್ನು ಪ್ರತಿ ವರ್ಷವೂ ಹರಾಜು ಮಾಡುತ್ತೇವೆ. ಅನಂತರ ಅದನ್ನು ನಾವು ತೆಗೆದ ಕಲೆಕ್ಟಿವ್ ಫಾರ್ಮಿಗೆ ಗೊಬ್ಬರವಾಗಿ ಉಪಯೋಗಿಸುತ್ತೇವೆ'' ಅಂದರು.

ನಾನು ಅನುಮಾನ ಸೂಚಿಸಿದೆ: "ಏನು ಸ್ವಾಮಿ, ಹರಾಜು ಮಾಡಿದ ಮೇಲೆ, ಅದನ್ನು ನೀವು ಉಪಯೋಗಿಸುವುದು ಹೇಗೆ ? '' ಎಂದು ಪ್ರಶ್ನಿಸಿದೆ.

ಅದಕ್ಕೆ ಅವರು "ನಿಮ್ಮದು ಟೆಕ್ನಿಕಲ್ ಅಬ್ಜಕ್ಷನ್- ಅಲ್ಲವೇ ? ಈ ಗುಂಡಿ ಇರುವುದು ಅನಾಥಾಲಯದ ವಠಾರದಲ್ಲಿ. ಅದಕ್ಕೆ ಹೊರಗಿನ ಜನ ಬರುವುದಕ್ಕೆ, ಅಂದರೆ ಗೊಬ್ಬರವನ್ನು ಕೊಂಡವರು ಬರುವದಕ್ಕೆ "ನೋ ಥೊರೋಫೇರ'' "ರಹದಾರಿ ರದ್ದು'' ಎಂಬ ಬೋರ್ಡಿದೆಯಲ್ಲ. ಹಾಗಿದ್ದ ಮೇಲೆ ಹರಾಜು ಕೊಂಡವ ನಮ್ಮ ಜಾಗ ಮೆಟ್ಟದೆ, ಗೊಬ್ಬರ ಒಯ್ಯಬೇಕಲ್ಲವೆ? ಅದರಿಂದ ಕೊಂಡವರೂ ಅದನ್ನು ಬಿಟ್ಟುಹೋಗುತ್ತಾರೆ. ಹೀಗಾಗಿ ಗೊಬ್ಬರ ಇಲ್ಲಿಯೇ ಉಳಿದು, ಈ ವಠಾರದಲ್ಲಿ ವಾಸನೆ ಹೆಚ್ಚಬಾರದೆಂದು, ನಮ್ಮ ಸಮಾಜ ಸೇವಕರಿಂದ ಅದನ್ನು ತೆಗೆಯಿಸಿ, ಕಲೆಕ್ಟಿವ್ ಫಾರ್ಮಿಗೆ ಹಾಕಿ ಬೆಳೆ, ಉತ್ಪನ್ನ ಹೆಚ್ಚಿಸುತ್ತ ಇದ್ದೇವೆ''- ಎಂದರು.

ಆ ಮಾತು ಕೇಳಿದಾಗ ನನ್ನ ಮನಸ್ಸು ಹೆಚ್ಚು ಆಹಾರ ಬೆಳೆಯಿಸುವ ವಿಷಯಕ್ಕೆ ಹರಿಯಿತು. ಆಗ ನಾನು ಕೇಳಿದೆ: "ಸ್ವಾಮಿ, ಮೊನ್ನೆ ನಿಮ್ಮ ಮೈಸೂರಿನಲ್ಲಿ 'ಕೃಷಿ ಪಂಡಿತ' ಎಂಬ ಬಿರುದು,

ಜತೆಗೆ ಸುಮಾರು ಐದು ಸಾವಿರ ರೂಪಾಯಿಗಳ ಬಹುಮಾನ ಯಾರಿಗೋ ಸಿಕ್ಕಿತಂತಲ್ಲ. ಯಾರಿಗೆ?'' ಎಂದು ಕೇಳಿದೆ.

ಅವರು ನಕ್ಕರು. "ಬನ್ನಿ, ಎಲ್ಲ ವಿರಾಮದಲ್ಲಿ ಹೇಳುತ್ತೇನೆ. ನಿಮ್ಮಂತಹ ಸಹಪಾಠಿಗಳೊಟ್ಟಿಗೆ ವಿಚಾರವಿನಿಮಯ ಮಾಡುವದಕ್ಕೆ ನನಗೆ ಸಂತೋಷವೇ'' ಎಂದು ಮನೆಗೆ ಕರೆದುಕೊಂಡು ಹೋದರು. ಅವರ ಮಹಡಿಯ ಮೇಲೆ ಹೋಗಿ ಕುಳಿತೆವು. ಏನು ಅನಾಥಾಲಯವೆನ್ನುತ್ತೀರಾ! ಇದ್ದರೆ ಹಾಗಿರಬೇಕು– ಅನಾಥರಿಗೆ ಅನುಕೂಲತೆಗಳು. ನೆಲಕ್ಕೆ ರತ್ನಗಂಬಳಿ, ಮೇಲೆ ಕುಳಿತಿರುವುದಕ್ಕೆ ಸೋಫಾ; ಆಚೆ ರೇಡಿಯೋ, ಈಚೆ ಇಲೆಕ್ಟ್ರಿಕ್ ಫೇನ್– ಗೋಡೆ ತುಂಬ ಪಟಗಳು. ಅದರಲ್ಲಿ ಅರೆವಾಸಿ ಫೊಟೋಗಳು, ಸುಬ್ಬರಾಮಯ್ಯನವರು ಹಾರ ಹಾಕಿಸಿಕೊಂಡು ಯಾರ್‍ಯಾರದೋ ಜತೆಗೆ ತೆಗೆಸಿಕೊಂಡವುಗಳು. "ಎಷ್ಟು ದೊಡ್ಡ ಮನುಷ್ಯರಪ್ಪಾ'' ಎಂದುಕೊಂಡೆ.

ಆ ಮೇಲೆ ಅವರು ಮಾತು ತೆಗೆದರು– ತಮ್ಮ ಕೃಷಿ ಪಾಂಡಿತ್ಯದ ವಿಚಾರ. "ಸ್ವಾಮಿ, ನನ್ನದು ಕೃಷಿಯ ಪಾಂಡಿತ್ಯಕ್ಕಿಂತ ಹೆಚ್ಚಾಗಿ ಪಾಂಡಿತ್ಯದ್ದೇ ಕೃಷಿ. ಆ ಬಿರುದು, ಬಹುಮಾನ ಬಂದದ್ದು ಬೇರೆ ಯಾರಿಗೂ ಅಲ್ಲ; ಈ ನಮ್ರ ಸಮಾಜಸೇವಕನಾದ ಸುಬ್ಬರಾಮಯ್ಯನಿಗೆ'' ಎಂದರು.

ನಿಮ್ಮ ತೋಟದ ಸಮೀಪ ಹೊಲಗಿಲಗಳನ್ನು ಕಾಣಲಿಲ್ಲವಲ್ಲಾ'' ಎಂದೆ ನಾನು. ಅವರು ಗೋಡೆಯ ಬಳಿಗೋಡಿ, ಒಂದು ಫೊಟೊವನ್ನು ತಂದು ನನ್ನ ಮುಸುಡಿಗೆ ಹಿಡಿದರು. ಏನು ನೋಡಲಿ. ಎಂಟಡಿ ಎತ್ತರದ ಜೋಳದ ಗಿಡಗಳ ಎಡೆಯಲ್ಲಿ, ಒಂದು ಗೂಟಕ್ಕೆ ಅಂಟಿಸಿ "ಕಲೆಕ್ಟಿವ್ ಫಾರ್ಮ್ಸ್'' ಎಂಬ ಬೋರ್ಡು ಇದ್ದಿತ್ತು. ಆ ಗೂಟದ ಆಚೆ ಸುಬ್ಬರಾಮಯ್ಯ. ಈಚೆ ಡಿ-ಸಿ ಮತ್ತು ಇನ್ನೆಷ್ಟೋ ಮುಂಡಾಸಿನವರು. ಅದನ್ನು ಕಂಡು ನಾನು ದಿಗಿಲಾಗಿ, "ಏನು ಸ್ವಾಮಿ, ಜೋಳ ಅಂದರೆ ದೆವ್ವನ ಹಾಗೆ ಬೆಳೆದಿದೆಯಲ್ಲ, ಬಿದಿರಿನ ಗಾತ್ರವಾಗಿದೆ. ತುಂಬ ಕಷ್ಟಪಟ್ಟಿರಬೇಕು ನೀವು'' ಎಂದೆ. "ಕಷ್ಟಪಡದೆ ಯಾವುದೂ ಆಗುವುದಿಲ್ಲ'' ಎಂದರು ಅವರು.

"ಸಹಜವೇ'' ಎಂದೆ ನಾನು.

"ಸ್ವಾಮಿ, ದಿಲ್ಲಿ, ಮದ್ರಾಸುಗಳಲ್ಲಿ, ಬೆಂಗಳೂರು ಮೈಸೂರುಗಳಲ್ಲಿ, ಯಾರ್‍ಯಾರೋ ಹೆತ್ತ ಮಕ್ಕಳನ್ನು ತಂದು, ಶಿಶು ಪ್ರದರ್ಶನ ಮಾಡಿ, ಪ್ರೈಸ್ ಹೊಡೀತಾರಲ್ಲವೇ ಜನ? ಪುಷ್ಪ ಪ್ರದರ್ಶನಗಳನ್ನು ನೀವು ನೋಡಿದ್ದೀರಲ್ಲಾ— ಡಾಲಿಯಾ, ರೋಸು ಏನೇನೋ ಗಿಡಗಳನ್ನು ತಂದು, ತೋರಿಸುವುದು. ಬಹುಮಾನ ಯಾರಿಗೆ ಹೋಗುತ್ತೆ? ಎಲ್ಲ ದೊಡ್ಡ ಮಂದಿಯ ತೋಟಗಳಿಗೆ. ಗಿಡ ನಟ್ಟ, ಗೊಬ್ಬರಹಾಕಿದ ಕೂಲಿಗಳಿಗಲ್ಲ. ಪ್ರೈಸ ಕೊಡುವುದು ಯಾರಿಗೆಂದರೆ, ಆ ಹೂ ಮೂಸಿದ, ತರಿಸಿದ, ಬಳಿಕ ತೋರಿಸಿದ ಆಫೀಸರುಗಳಿಗೆ. ಆ ಗುಟ್ಟು ನನಗೆ ಗೊತ್ತು. ನಮ್ಮ ಡಿ. ಸಿ. ಯವರೂ ಅಂಥವರೇ. ಅವರಿಗೆ ಎರಡು ವರ್ಷಗಳ ಹಿಂದೆ 'ಕ್ರೋಟನ್ನಿ'ಗೆ ಪ್ರೈಸ್ ಬಂದಿತ್ತು. ಪ್ರೈಸ್ ಬರುವ ಮೂರು ದಿನಗಳ ಮುಂಚೆ, ಗಿಡದ ಮಡಿಕೆಯನ್ನು ಮಹಾಬಲಪ್ಪನವರ ನರ್ಸರಿಯಿಂದ ತಂದದ್ದನ್ನು ನಾನು ಕಂಡಿದ್ದೇನೆ. ಅದನ್ನು ಕಂಡು ನನಗೆ ಜ್ಞಾನ ಬಂದಿತು; ಆ ಜ್ಞಾನದ ಕೃಷಿಯನ್ನು ಮಾಡಿದೆ ನಾನು. ಇದೇ ಊರಿನಲ್ಲಿ, ಒಂದು ಮೈಲು ದೂರದಲ್ಲಿ, ತಿಪ್ಪೆ ರುದ್ರಯ್ಯನೆಂಬವನ ಜೋಳದ ಹೊಲ ಇದೆ. ನಾನು ವಂಚನೆ ಮಾಡಲಿಲ್ಲ. ರುದ್ರಯ್ಯನ ಹತ್ತಿರ ಹೋದೆ. "ರುದ್ರಯ್ಯ, ನಿನ್ನ ಹೊಲದಲ್ಲಿ, ದಾರಿಯ ಮಗ್ಗುಲಿಗೆ ನನ್ನದೊಂದು ಬೋರ್ಡು ಹಾಕುತ್ತೇನೆ. ಒಂದು ಎಂಟು ದಿನ ಇರಲಿ,— ಎಂದು ಹೇಳಿ, ಅದಕ್ಕೆ ಎಂಟಾಣೆ ಸ್ಥಳ ಬಾಡಿಗೆಯನ್ನು ಗೊತ್ತು ಮಾಡಿ, ನನ್ನ ಫಾರ್ಮಿನ ಬೋರ್ಡನ್ನು, ಆ ಬಾಡಿಗೆಗೆ ಕೊಂಡ ಒಂದು ಚದರಡಿ ಸ್ಥಳದಲ್ಲೇ ನೆಟ್ಟು ಬಂದೆ. ಇನ್ನೆಲ್ಲೂ ನೆಟ್ಟಿಲ್ಲ. ಆ ಮೇಲೆ ಶ್ಯಾನುಭೋಗರಿಗೊಂದು ಕಾಫಿ ಕುಡಿಸಿ, ಕಾರು ಬಾಡಿಗೆ ಗೊತ್ತಮಾಡಿ, ಡಿ. ಸಿ. ಯವರನ್ನು ಕರೆದೊಯ್ದು, ಹಾರ ಹಾಕಿ, ಹಾರ ಹಾಕಿಸಿಕೊಂಡು, ಫೋಟೋ ತೆಗೆಸಿಕೊಂಡು ಬಂದೆ. ಇಷ್ಟು ಮಾಡಿದ ನನಗೆ ಪ್ರೈಸಲ್ಲದೆ, ಅಕಸ್ಮಾತ್ ಮಳೆ ಬಂದು ಬೆಳೆ ಬೆಳೆದದ್ದಕ್ಕೆ, ತಿಪ್ಪೆ ರುದ್ರಯ್ಯನಿಗೆ ಪ್ರೈಸ್ ಹೋಗಬೇಕೇನು?. ಎಂದರು. ಈ ವಿಷಯ ಸಮರ್ಥನೆಗೆ, ಹತ್ತಾರು ಬಹುಮಾನ, ಪಾರಿತೋಷಕ, ಪ್ರದರ್ಶನಗಳ ಕತೆಯನ್ನು ಹೇಳಿದರು.

* * *

ಅಂಥಾ ಹತ್ತು ಕತೆಗಳನ್ನು ಕೇಳಿದ ಮೇಲೆ, ನನಗೂ ಸುಬ್ಬರಾಮಯ್ಯನವರ ವಾದ ಮನಸ್ಸಿಗೆ ಬಂದಿತು. ಇಂಗ್ಲೀಷಿನಲ್ಲಿ ಗಾದೆಯೇ ಇದೆಯೆಲ್ಲ, "ಚಾರಿಟೀ ಬಿಗಿನ್ಸ್ ಏಟ್ ಹೋಮ್'' ಅಂತ' ಈ ದೇಶದಲ್ಲಿ ಬಹುಮಾನ ಕೊಡುವ ಯಾವ ಕಮೀಟಿಗೇ ಆಗಲಿ, ಬಹುಮಾನ ಎಣಿಸುವಾಗ ತಮ್ಮನ್ನು ಬಿಟ್ಟು ಇನ್ನೊಬ್ಬರ ಗುರುತಿಲ್ಲದಿರುವಾಗ, ಸುಬ್ಬರಾಮಯ್ಯನವರ ಪರೋಪಕಾರದ ಕೃಷಿ ಫಲವತ್ತಾದ್ದರಲ್ಲಿ ಆಶ್ಚರ್ಯವೇನೂ ಕಾಣಲಿಲ್ಲ.

ಹೀಗೆ ನಾನು ಅವರ ಜಾಣ್ಮೆಯನ್ನು ಕುರಿತು ವಿಸ್ಮಯ ತಾಳುತ್ತಿರುವಾಗಲೇ, ಅವರ ಹಿರಿಯ ಮಗ ಯಾನೆ ಸ್ಪೋರ್ಸ್ ಕಾರ್ಯದರ್ಶಿಯು 'ಚಂದ್ರಭವನ'ದಿಂದ ಫರಮಾಶಿ ಕಾಫಿ. ಹಲ್ವ, ದಮರೋಟ್ ಇತ್ಯಾದಿಗಳನ್ನು ಬರಮಾಡಿಸಿದ. ನಾವು ಪಟ್ಟಾಗಿ ಕುಳಿತು ತಿಂದೆವು. ತಿಂಡಿ ತಿಂದ ಹೋಟೇಲು ಹುಡುಗ, ಎರಡೂವರೆ ರೂಪಾಯಿ ಬಿಲ್ಲು ಎದುರಿಗೆ ಹಿಡಿದಾಗ, ಸುಬ್ಬರಾಮಯ್ಯ ಕಿಸೆ ತಿರುವುತ್ತಿದ್ದರು. ಒಳದನಿಯಲ್ಲಿ "ನೋಟು ಬಿದ್ದು ಹೋಯಿತೇ?'' ಎಂದುಕೊಳ್ಳುತ್ತಿದ್ದರು. ನನಗೆ ದುಃಖ ಕಂಡು, ಎರಡೂವರೆ ರೂಪಾಯಿ ಎಸೆದುಬಿಟ್ಟೆ. ಹೋಟೆಲು ಹುಡುಗ ಕೊಂಡು ಹೋದ. ಕೊಂಡು ಹೋದ ಮೇಲೆ ಅವರು "ಛೀ ಛೀ, ನೀವೇ ಕೊಟ್ಟು ಕಳುಹಿದಿರೇ?'' ಎಂದರು. ಅದಕ್ಕೆ ನಾನು, "ನಾನು ಕೊಟ್ಟರೇನು? ನೀವು ಕೊಟ್ಟರೇನು?'' ಎಂದೆ.

"ಭಗವದ್ಗೀತೆಯಲ್ಲಿ ಎಲ್ಲಿಯೋ ಶ್ರೀ ಕೃಷ್ಣ ಪರಮಾತ್ಮ ಹಾಗೆಯೇ ಹೇಳಿದ್ದಾನಲ್ಲವೇ? ನಾವು' 'ನೀವು' ಎಂಬ ಭೇದವಿಲ್ಲ. ಆ ಭೇದ

ವನ್ನು ಮರೆತು, ಇಷ್ಟು ವರ್ಷ ನಾನು ಸಾರ್ವಜನಿಕ ಜೀವನ ನಡೆಸಿದ್ದರಿಂದಲೇ, ಇಷ್ಟೆಲ್ಲ ಸಂಸ್ಥೆಗಳನ್ನು ಕಟ್ಟದೆ, ನಡೆಸಿಕೊಂಡು ಬಂದೆ— '' ಎಂದರು. ಸುಬ್ಬರಾಮಯ್ಯನವರ ಸಾಹಸಕಾರ್ಯಗಳನ್ನು ಮೆಚ್ಚುತ್ತಾ, ನಾನು ಹೋಟೆಲಿಗೆ ಮರಳಿದೆ. ಆಗ ನನಗೂ ಜ್ಞಾನೋದಯವಾಗುತ್ತಲಿತ್ತು. ಪರೋಪಕಾರಿಯಾಗುವವನಿಗೆ, ಮೂಲದಲ್ಲಿ ತನ್ನದು ಎಂಬ ವಸ್ತುವು ಯಾವುದೂ ಇರಬಾರದು- ಎಂದೆನಿಸಿತು. ಆಗ ಮಾತ್ರ ಎಂಥ ನಷ್ಟಕ್ಕೂ ಆವನು ಎದೆಗೊಡಬಲ್ಲ. ಆ ನೋಲೆ- ' ತನ್ನದು, ಪರರದು ' ಎಂಬ ವ್ಯತ್ಯಾಸ ಅವನ ಮನಸ್ಸಿನಲ್ಲೇ ಮೂಡಕೂಡದು. ಇ ವೆ ರ ಡೂ ಗಟ್ಟಿಯಾಗಿದ್ದರೆ, ಎಷ್ಟೂ ಪರೋಪಕಾರ ಮಾಡಬಹುದು; ಏನೂ ಹೆಸರು ಗಳಿಸಬಹುದು- ಎಂದು ತೋರಿತು.

* * *

ಹೋಟೆಲಿಗೆ ಬಂದ ಮೇಲೆ ನನಗೆ ತಿರುಗಿ ಒಂದು ಅನುಮಾನ ಮೂಡಿತು. "ಪರೋಪಕಾರಿ, ಸಂಸಾರಿಯಾಗಿರಬಹುದೆ?'' ಎಂಬ ಪ್ರಶ್ನೆ. ನಾನು ಕಂಡುದರ ಮೇಲಿಂದ- ' ಯಾಕೆ ಕೂಡದು? ' ಎಂಬ ಮರುಪ್ರಶ್ನೆ ಹುಟ್ಟುತ್ತದೆ. ತಾನು ಹೇಗೆ ಸಮಾಜದವನೋ, ತನ್ನ ಹೆಂಡತಿ ಮಕ್ಕಳು ಬೇಕಾದರೆ ಮರಿಗಳು, ಎಲ್ಲವೂ ಸಮಾಜದವೇ. ಬಹು ಮಂದಿ ಸಮಾಜಸೇವಕರಾಗುತ್ತಾರೆ ಆಗ. ನಮ್ಮನ್ನು ಬಿಟ್ಟು ಸಮಾಜವಿಲ್ಲ, ಸಮಾಜವನ್ನು ಬಿಟ್ಟು ನಾವಿಲ್ಲ. ಆ ಭಾವನೆ ಬಂದರೆ, ನಮ್ಮ ಕ್ಷೇಮವೇ ಸಮಾಜಕ್ಷೇಮ; ಸಮಾಜಕ್ಷೇಮವೇ ನಮ್ಮ ಕ್ಷೇಮ ಅಲ್ಲವೇನು ?

ಮೈಸೂರು ನಗರ ಬಿಟ್ಟು, ಊರಿಗೆ ಬಂದ ಮೇಲೆ ನನ್ನ ಮಂಕುಬುದ್ಧಿಗೆ ಇನ್ನೂ ಒಂದು ಪ್ರಶ್ನೆ ತೋಚಿತು. ಇದನ್ನು ನಾನು ಸುಬ್ಬರಾಮಯ್ಯನವರ ಜತೆಯಲ್ಲಿದ್ದಾಗಲೇ ಕೇಳದೆ ಹೋದೆನಲ್ಲಾ- ಎಂದನಿಸಿತು. ಅವರು ಮೂಲದಲ್ಲಿ ಪಾಲು ಒಂದರ ಹತ್ತು ರೂಪಾಯಿ ಕೊಂಡರಲ್ಲ; ಕೊಂಡ ಮೇಲೆ ಹಿಂದಕ್ಕೆ ಕೊಟ್ಟರೇ ಇಲ್ಲವೇ? ಕೊಟ್ಟ, ರೆಹೇಗೆ ?- ಎಂಬ ಅನುಮಾನ. ಸಂಸ್ಥೆಯ ಖರ್ಚು, ವೆಚ್ಚ ಬಹಳವಾಗಿರುತ್ತ, ಪ್ರಚಾರಕ್ಕೂ ಹಣ ಬೇಕಾಗಿರುತ್ತ, ಮೂಲಧನ ಹಿಂದಕ್ಕೆ ಸಲ್ಲಿಸುವ ದಾರಿ ಯಾವುದು? ಎಂಬ ವಿಚಾರ ನನಗೆ ಕ್ಲಿಷ್ಟವಾಗಿ ಕಂಡಿತು.

ಪಾಲುಗಾರರು ಆವರಿಂದ ಹಣವನ್ನು ಪರತು ಕೇಳಿರಲಾರರು ಎಂದು ಒಂದು ಊಹೆ. ಆದರೆ ಎಲ್ಲರೂ ಹಾಗೆ ಮಾಡಲಾರರಲ್ಲ. ಕೆಲವರಾದರೂ ಹಿಂದೆ ಕೇಳಿರಬಹುದಲ್ಲ- ಎಂದೂ ಅನಿಸಿತು. ಆ ಸಮಸ್ಯೆ ಬಹುದಿನಗಳ ತನಕವೂ ತೀರ್ಮಾನವಾಗಲೇ ಇಲ್ಲ.

ಈಗ ತೀರ್ಮಾನವಾಯಿತು ಅನ್ನಿ. ಅಂದರೆ ಒಂದು ದಿನ ನೆಟ್ಟಗೆ ಮೈಸೂರಿನಿಂದ ಸುಬ್ಬರಾಮಯ್ಯನವರು ನಮ್ಮಲ್ಲಿಗೇ ಬಂದರು. ತುಂಬ ಚಿಂತೆ ಅವರಿಗೆ! ದೇಶಮುಖರು ಪಾರ್ಲಿಮೆಂಟನಲ್ಲಿ ಏನೇನೋ ಮಸೂದೆ ತರುತ್ತಾರೆಂದು ಕೇಳಿ, ಅಂಜಿಯೇ ಬಂದಂತಿತ್ತು. ದೇಶದ ಯಾವತ್ತೂ ಪಾಲು ಬಂಡವಾಳು ಸಂಸ್ಥೆಗಳನ್ನು, ಆವಡಿ ಮಾದರಿಯ ಸಮಾಜೀಕರಣ ಯೋಜನೆಯ ಅನ್ವಯ ರಾಷ್ಟ್ರೀಕರಣಗೊಳಿಸುತ್ತಾರೆ- ಎಂಬ ಸುದ್ದಿ ಕೇಳಿ ಬಂದರು. "ಲಿಮಿಟೆಡ್'' ಎಂಬಂಥ ಸಂಸ್ಥೆ ಅವರದ್ದು. ಅವರಿಗೀಗ ಅದರ ಮೂಲವೇ ಮರೆತುಹೋಗಿದೆ. ಬಹು ಬೇಗ ವಯಸ್ಸಾದ್ದರಿಂದ ಹಾಗಾಗುವುದೂ ಸಹಜ. ನಾನು ಅವರನ್ನು ಕೇಳಿದೆ; "ಸ್ವಾಮಿ, ನಿಮ್ಮ ಲಿಮಿಟೆಡ್ ಸಂಸ್ಥೆ ಯಾವ ವರ್ಷ ರಿಜಿಸ್ಟರ್ ಆಯಿತು?'' ಎಂದು.


" ರಿಜಿಸ್ಟರ್ ಆಗಿಯೇ ಇಲ್ಲವಲ್ಲ '' ಎಂದರು.

" ಲಿಮಿಟೆಡ್ ಎಂದಿದೆಯಲ್ಲ ? ''

" ಪರೋಪಕಾರ ಲಿಮಿಟೆಡ್ ಅಂದರೆ, ಮಿತವಾದ ಪರೋಪಕಾರ ಎಂಬ ಅರ್ಥದಲ್ಲಿ ನಾನು ಹೆಸರು ಹಾಕಿದ್ದು. ಅದರ ಪ್ರಯೋಜನ ಯಾರ್‍ಯಾರಿಗೆಲ್ಲಾ ಹೋಗಬಾರದು ಎಂಬ ಕಾರಣದಿಂದ. ''

" ಹಾಗಿದ್ದರೇನು ನಿಮಗೆ ಭಯ ? ರಿಜಿಸ್ಟರ್ ಆಗದೆ ಸಂಸ್ಥೆ ಲಿಮಿಟೆಡ್ ಆಗೋದಿಲ್ಲ. ಆಗ ಸರಕಾರದವರು ಇದರಲ್ಲಿ ಕೈಹಾಕುವದಕ್ಕೆ ಬರುವುದಿಲ್ಲ'' ಎಂದು ಧೈರ್ಯ ಹೇಳಿದೆ.

" ಹಾಗೂ ಇದೆಯಲ್ಲವೆ ? ಅದರಲ್ಲಿ ಈಗ ಯಾರಿಗೂ ಪಾಲಿನ ಹಕ್ಕು ಉಳಿದಿಲ್ಲ. ಎಲ್ಲ ಶೇರೂ ನಾನೇ ಕೊಂಡಿದ್ದೇನೆ. ಹೇಗೆ ಅನ್ನುತ್ತೀರಾ- ಕೇಳಿ. ನನ್ನದೇ ಒಂದು ಪೇಪರಿತ್ತು. ಅದರಲ್ಲಿ ಒಂದು ಎರಡು ವರ್ಷಗಳ ಕಾಲ, ನಮ್ಮ ಐದು ರೂಪಾಯಿ ಕೊಟ್ಟ ಶೇರಿನ ಬೆಲೆ, ಆರು, ಎಂಟು, ಹತ್ತು ರೂಪಾಯಿಗಳ ಮಾರ್ಕೇಟು ಧಾರಣೆ ಇರುವುದಾಗಿ ಹಾಕಿಸಿದೆ. ಆಗ ಎಲ್ಲ ಶೇರುಗಳೂ ಮಾರಾಟವಾದುವು. ಆ ಮೇ ಲೆ ಉಳಿದ ಐದೈದು ರೂಪಾಯಿಗಳನ್ನುತರಿಸಿಕೊಂಡೆ. ಅನಂತರ ಶೇರಿನ ಬೆಲೆ, ಒಂಭತ್ತರಿಂದ ತೊಡಗಿ ಎರಡಾಣೆಯ ತನಕವೂ ನನ್ನ ಪೇಪರಿನಲ್ಲಿ ಇಳಿಸಿದೆ. ಶೇರ್‌ದಾರರು ವಿರಕ್ತಿಗೊಂಡು, ಸೂರ್ಣ



ಪಾಲು ರಶೀದಿಗಳನ್ನು ನನಗೇ ಕಳುಹಿಸಿ ಕೊಟ್ಟರು. ಇದೆಲ್ಲ ನನ್ನ ಸಂಶೋಧನೆಯಲ್ಲ. ಹೆಸರಾದ ಮಾರವಾಡಿಗಳ ಕ್ರಮವನ್ನು ನಾನೂ ಅನುಸರಿಸಿದೆ. ಶೇರಿನ ವ್ಯಾಪಾರವೇ ಹಾಗೆ ಇರುವಂಥದು. ಅದು ಬಿಡಿ; 'ಲಿಮಿಟೆಡ್ ' ಎಂದು ಹೆಸರು ಇದ್ದಿರುವದರಿಂದ, ತೊಂದರೆ ಬರಲಾರದು— ಎನ್ನುತ್ತೀರಾ ? ಸಮಾಜ ಸೇವೆ, ದೇಶ ಸೇವೆ, ಪರೋಪಕಾರ— ಇವತ್ತು ಈ ಪ್ರತಿಯೊಂದು ಕ್ಷೇತ್ರದಲ್ಲೂ, ಪ್ರೈವೇಟ ಜಾಸ್ತಿಯಾಗಿದೆಯಲ್ಲ. ಭೂಮಾಲಿಕರ ಮೇಲೆ ಸಿಟ್ಟಿದ್ದರೆ, ಭೂಮಿ ರಾಷ್ಟ್ರೀಕರಣ ಮಾಡುತ್ತಾರೆ. ಬೇಂಕು ತಮಗೆ ಜವಾಬ್ದಾರಿಯಿಂದ ಸಾಲಕೊಡದಿದ್ದರೆ, ಅದನ್ನೂ ರಾಷ್ಟ್ರೀಕರಣ ಮಾಡುತ್ತಾರೆ. ಹೀಗಾಗಿ ಅನೇಕರಿಗೆ ನನ್ನ ಸಂಸ್ಥೆಯ ಮೇಲೆ ಕಣ್ಣು. ಈತ ಪರೋಪಕಾರದಿಂದಲೇ ಕೀರ್ತಿ ಗಳಿಸಿದ್ದಾನೆ, ಎಂಬುದರಿಂದ ಅಸೂಯೆ ಬಂದಿದೆ. ಈಗ ರಾಜಕೀಯ ಎಂಬುದು ಕೆಲವರದೇ ಕೈವಾಡ. ಅವರು ಮಾಡಿದ್ದೇ ಶಾಸನವಾಗುತ್ತದೆ. ಹೀಗಾಗಿ ನನಗೆ ಭಯವುಂಟಾಗಿದೆ.''

" ಹಾಗಿದ್ದರೆ ನೀವು ಒಂದು ಕೆಲಸ ಮಾಡಿ— ಅಂಥ ಮಸೂದೆ ಬರುವ ಮೊದಲೇನೆ, 'ಪರೋ-ಪಕಾರ ಲಿಮಿಟೆಡ್' ಇದ್ದುದರ ನಡುವೆ ಎಡೆಯಲ್ಲಿ U N. ಎಂಬ ಎರಡಕ್ಷರ ಸೇರಿಸಿಬಿಡಿ. ಹಂಸಪಾದ ಹಾಕಿ ಮೇಲಕ್ಕೆ ದೊಡ್ಡ ಅಕ್ಷರಗಳಲ್ಲಿ ಬರೆಯಿಸಿ. ನಿಮ್ಮ ಅರ್ಥ ' ಅನ್‌ಲಿಮಿಟೆಡ್ ' ಅಂತ ಓದುವವರಿಗೆ ಇದು ' ಯುನೈಟೆಡ್ ನೇಶನ್ಸಿಗೆ ' ಸಂಬಂಧಪಟ್ಟ ದೊಡ್ಡ ಸಂಸ್ಥೆ. ಅದಕ್ಕೆ ಅಂತರಾಷ್ಟ್ರೀಯ ಕಾನೂನೇ ಬಾಧ್ಯ ಹೊರತು, ಬೇರೆ ಕಾಯಿದೆ ಲಾಗು ಆಗಲಾರದು—ಎಂದು ತೋರಿಯೇ ತೋರುತ್ತದೆ. ನಿಮ್ಮದೇ ಪತ್ರಿಕೆ ಒಂದಿದೆ ಎನ್ನುತ್ತೀರಲ್ಲಾ, ಅದರಲ್ಲಿ ಒಂದು ಪುಟದ ದೊಡ್ಡ ಜಾಹೀರಾತು ಹಾಕಿಸಿ ಬಿಟ್ಟು, ನಾಲ್ಕು ಸಭೆ, ಸಮ್ಮೇಳನಗಳ ಕಾಲದಲ್ಲಿ, ಜನಗಳ ಕಣ್ಣು ಕುಕ್ಕುವಂತೆ ಹಂಚಿಬಿಡಿ'' – ಎಂದೆ.

ಆಗ ಸುಬ್ಬರಾಮಯ್ಯನವರಿಗಾದ ಸಂತೋಷ ಅಷ್ಟಿಷ್ಟಲ್ಲ. ಅವರು ಕೃತಜ್ಞತೆಯಿಂದ, "ನೀವು ಆರಂಭದಲ್ಲಿ ನನ್ನ ಮಾತುಗಳನ್ನು ತೆಗೆದುಹಾಕಿದರೂ ಈಗ ನನ್ನನ್ನು ಕಾಯ್ದ ಭಗವಂತನಾದಿರಿ. ನಾನು, ನೀವು ಆಗಿನಿಂದ ಒಟ್ಟಿಗೇ ಕೆಲಸ ಮಾಡಿದ್ದಾದರೆ ನಮ್ಮ ಸಂಸ್ಥೆ ಎಷ್ಟೋ ಎಷ್ಟೋ ದೊಡ್ಡದಾಗುತ್ತಿತ್ತು, ಇದಕ್ಕಿಂತ," ಎಂದು ಉದ್ಗರಿಸಿದರು. "ಪರೋಪಕಾರಕ್ಕೂ ನಸೀಬು ಬೇಡವೇ?'' ಎಂದೆ ನಾನು.

"ಹತ್ತು ಸಾರಿ ಹೇಳಿ ಆ ಮಾತನ್ನು. ಈ ಬೇ-ನಸೀಬ್ ದೇಶದಲ್ಲಿ, ಒಂದೇ ಒಂದು ಸತ್ವದ ಪದಾರ್ಥ ಇದ್ದುದಾದರೆ ಅದು ನಸೀಬ್, ಅದಿರುವ ಕತ್ತೆಯೂ ಕುದುರೆಯೇ; ಇಲ್ಲದ ಕುದುರೆ ಕತ್ತೆಗಿಂತಲೂ ಕಡೆ''- ಎಂದರು.



ಪತಿಪೂಜೆ

(ಏಕಾಂಕ)

ಲೇಖಕರು:- ಶ್ರೀ. ಜಿ. ಜಿ. ಹೆಗಡೆ

[ಗಣೇಶರಾಯರ ಮನೆ. ಪೂಜೆಯ ಭಟ್ಟರು ಗಂಟೆ ಬಾರಿಸುತ್ತ ಮಂತ್ರ ಹೇಳುತ್ತಿರುವದು ಕೇಳಿಸುವದು]

ಭಟ್ಟ:—
ತದ್ವಿಷ್ಣೋಃ ಪರಮಂ ಪದಂ
ಸದಾ ಪಶ್ಯಂತಿ ಸೂರಯಃ
ದಿವೀವ ಚಕ್ಷುರಾತತಂ ॥
ತದ್ವಿಪ್ರಾಸೋ ವಿಪನ್ಯವೋ
ಜಾಗೃವಾಂಸಃ ಸಮಿಂಧತೇ
ವಿಷ್ಣೋರ್ಯತ್ ಪರಮಂ ಪದಂ ॥

[ಮಂತ್ರ ಹೇಳಿ ಮುಗಿದ ನಂತರ ಗಂಟೆಯ ಸಪ್ಪಳ ನಿಲ್ಲುವದು.]

ಬಾಯಿಯವರೆ, ಯಶೋದಾ ಬಾಯಿಯವರೆ, ಬರ್ರಿ ಆರತಿ ತಗೋರಿ.

ಯಶೋದಾ:— ಬಂದೆ. ಆಚಾರ್ರೆ, ಈಗ ನಿಮಗೆ ಅವಸರ ಅದೇನು?

ಭಟ್ಟ:— ಹಾಂಗೇನಿಲ್ಲ. ಇನ್ನೊಂದೆರಡು ಮನೀ ಪೂಜಾ ಮಾಡಿದೆ ಅಂದ್ರ ಇವತ್ತಿನ ಕೆಲಸ ಮುಗದ್ಹಾಂಗಾತು. ಇಂದ ಆದಿತ್ಯವಾರ. ಯಾರಿಗೂ ಕಚೇರಿ ಪಚೇರಿ ಅಂತ ಅವಸರ ಇರೂದಿಲ್ಲ. ಒಂದ್ಹತ್ತು ಮಿನೀಟು ಪೂಜಾಕ್ಕ ತಡಾದ್ರೂ ಯಾರೂ ಹಾರ್‍ಯಾಡೂದಿಲ್ಲ. ಅಲ್ಲಾ, ಬಾಯಿಯವರೆ, ಏನ ಜಗತ್ತು ಅಂತೇನಿ? ಇತ್ತಲಾಗ ದೇವರ ಪೂಜಾ ಆಗ್ಬೇಕು, ಪುಣ್ಯ ಸಿಗಬೇಕು ಅಂತಾರ. ಅತ್ತಲಾಗ ಕಚೇರಿ, ಅವಸರ, ಅಂತ ಅವಸರದಾಗ ಪೂಜಾ ಮುಗಿಸಬೇಕು ಅಂತಾರ. ಅವಸರದಾಗ ಪೂಜಾ ಮಾಡಿದ್ರ ದೇವರಿಗೆ ಮೆಚ್ಚಿಗಿಯಾದೀತ? ಹೇಳ್ರಿ ನೀವೇ.

ಯಶೋದಾ:— ಹೌದು. ಆದರೆ ಗಂಡಸರಿಗೆ ಇವೆಲ್ಲ ತಿಳಿಯೂದಿಲ್ಲ. ಏನೊ ಅವಸರದಾಗ ಆದ್ರೂ ಪೂಜಾ ಮಾಡಸ್ತಾರಲ್ಲಾ, ಅದೇ ದೊಡ್ಡದು ಅಂತ ನಾವು ಸಮಾಧಾನ ಪಟ್ಟಗೊಬೇಕು.

ಭಟ್ಟ:— ಹೌದು. ಇಲ್ಲಾಂದ್ರೆ ಅವಸರಾನೂ ಬ್ಯಾಡ, ಪೂಜಾನೂ ಬ್ಯಾಡ ಅಂತ ಅಂದಿದ್ರ ನಮ್ಮಂಥವ್ರು ಹೊಟ್ಟೀಗೆ ಕೇರಹಾಕ್ಕೊಳ್ಳಬೇಕಾಗ್ತಿತ್ತು. ಖರೇ ಅಂದ್ರ ಬರೇ ಗಂಡಸರ ರಾಜ್ಯ ಆಗಿತ್ತು ಅಂದ್ರ ಅದೇನು ತಪ್ತಿರಲಿಲ್ಲ ಬಿಡ್ರಿ. ಏನೊ ನಿಮ್ಮಂಥ ಹೆಣ್ಮಕ್ಕಳು ಇನ್ನೂ ದೇವ್ರೂ ದಿಂಡ್ರು ಅಂತ ಇಟಗೊಂಡೀರಿ ಅಂತೇ ನಮ್ದೊಲ್ಲಾ ನಡದದ. ಆ ಸೀತಾಬಾಯಿ ಇದ್ದಾರಲ್ಲ, ಅವರ ಯಜಮಾನ್ರು ರಾಮರಾಯ್ರು. ಖರೇ ಅಂದ್ರ ಭಾಳ ಒಳ್ಳೆ ಮನಶಾರು ಅನ್ನೂದು ಖರೇ ಅದ. ಆದರೆ ಅವರೀಗೆ ಈ ದೇವ್ರು, ಪೂಜಾ ಪುನಸ್ಕಾರ ಅಂಬೂದರಾಗ ಎಳ್ಳಷ್ಟೂ ನಂಬಕಿ ಇಲ್ರಿ. ದೇವರ ಪೂಜಾನ್ಸ ಬ್ಯಾಡ, ಯಾರು ಇಲ್ಲದ ಕಟಕಟಿ ಹಚ್ಚಗೋಬೇಕು ಅಂದ್ರು. ಆದ್ರೆ ಸೀತಾಬಾಯಿಯವರು ಕೇಳಲಿಲ್ಲ. ನಿಮಗೆ ತಡಾ ಆಗ್ತದ ಅಂತಿದ್ರ, ದೇವರ ನೇವೇದ್ಯಕ್ಕ ಅಂತ ಬ್ಯಾರೇ ಅನ್ನಾನೆ ಮಾಡ್ತೀನಿ, ರೊಕ್ಕ ಖರ್ಚಾಗ್ತದ ಅಂತಿದ್ರ ನನಗೆ ವರ್ಷಕ್ಕ ಒಂದು ಶೀರೀ ಕಡಮಿ ತಂದ ಕೊಡ್ರಿ ಅಂತಂದು ಹಟಾ ಹಿಡಿದ್ರು ಅಂತ, ಅವರ ಮನಿ ದೇವ್ರು ಈವತ್ತಿಗೂ ಪೂಜಾ ಕಾಣ್ತದ. ಇಲ್ಲಾ ಅಂತಂದ್ರ....

ಯಶೋದಾ:— ಹೌದು. ಗಂಡಸರು ಯಾಕೆ ಹೀಂಗ ಆಗ್ಯಾರೊ ತಿಳೀವಲ್ದು. ಮತ್ತೆ ಹೆಣ್ಮಕ್ಕಳೂ ಕೆಟ್ಟು ಹೋಗಲಿಕ್ಕ ಹತ್ಯಾರ್ರಿ. ಆಚಾರ್ರ, ಇದೆಲ್ಲಾ ಇಂಗ್ಲಿಷ ಕಲಿತದ್ದರ ಪರಿಣಾಮ ಅಂತೇನಿ ನಾ. ನಮ್ಮ ಸುಧಾ ಅದಾಳಲ್ಲ, ಕಾಲೇಜಿಗೆ ಹೋಗಲಿಕ್ಕೆ ಹತ್ತಿದಾಗಿಂದ್ಲೂ ಪೂಜಾ, ದೇವ್ರು, ವ್ರತ ಅಂದ್ರ ಮೂಗಮುರೀಲಿಕ್ಕೆ ಹತ್ಯಾಳ. ಇನ್ನೊಂದು ಹತ್ತಿಪ್ಪತ್ತು ವರ್ಷದೊಳಗೆ ....

ಭಟ್ಟ:— ಹೌದು. ಅಂದ್ಹಾಂಗ ಈವತ್ತು ನಿಮ್ಮ ಗೋವಿಂದ, ಸುಧಾ, ರಾಯ್ರು ಯಾರೂ ಮನಿಯೊಳಗೆ ಕಾಣವಲ್ಲರಲ್ಲ ?

ಯಶೋದಾ:— ಯಾವದೊ ಇಂಗ್ಲಿಷ ಸಿನೆಮಾ ನೋಡಲಿಕ್ಕ ಹೋಗ್ಯಾರ. ಈಗ ಎಷ್ಟು, ೧೧ ಹೊಡದಿರಬಹುದಲ್ಲ? ಇನ್ನೇನು ಈಗ ಬರ್ತಾರ. ಹೌದು. ಅವರು ಬರೂದರೊಳಗೆ ಒಂದು ಮಾತು ನಿಮ್ಮನ್ನ ಕೇಳ್ಬೇಕು ಅಂತ—

ಭಟ್ಟ:— ಕೇಳ್ರಲಾ.

ಯಶೋದಾ:— ನಮ್ಮ ಸುಧಾ ನಿನ್ನೆ ಪೇಪರಿನಾಗ ಒಂದು ಮಜಾದ ಸುದ್ದಿ ಬಂದದ ಅಂತ ಓದಿ ಹೇಳಿದ್ಲು. ಅಲ್ಲೆಲ್ಲೊ, ಅದ ಯಾವದೊ ದೇಶದಾಗಂತ, ನೂರಾರು ಮಂದಿ ಹೆಂಗಸರು ತಮ್ಮ ಗಂಡಂದಿರ ಪೂಜಾ ಮಾಡಿದರಂತ. ಅಂದ್ರ ರಾಜಾರೋಸ ನಾಕ ಮಂದೀಗ ಕಾಣವ್ಹಾಂಗ ಕೂಡ್ರಿಸಿ, ನಾವು ಸತ್ಯನಾರಾಯಣ ದೇವ್ರ ಪೂಜಾ ಮಾಡ್ತೇವಲ್ಲ ಹಾಂಗ ಪೂಜಾ ಮಾಡಿದ್ರಂತ.

ಭಟ್ಟ:— ಹಿಂಗೇನು? ಎಲಾ! ನನಗೆ ಗೊತ್ತೇ ಇಲ್ಲ ಬಿಡ್ರಿ.. ಛಲೊ ಮಾಡಿದ್ರು. ಭಾಳ ಛಲೊ ಮಾಡಿದ್ರು. ಅಂತೂ ನಮ್ಮ ದೇಶದಾಗ ಇನ್ನೂ ಧರ್ಮ ಅಂಬೂದು ಅದ, ಪತಿವ್ರತಾ ಸ್ತ್ರೀಯರು ಅನ್ನುವವರು ಅದಾರ ಅಂತ ಆತಲ್ಲಾ. ಭೇಷ,ಭೇಷ. ಹಾಂಗಂತೇ ಮಳಿ ಬೆಳಿ ನಮ್ಮ ದೇಶದಾಗ ಇನ್ನೂ ಕಾಣ್ತೇವಿ.

ಯಶೋದಾ:— ಆದರೆ ಸುಧಾ ಈ ಸುದ್ದಿ ಓದಿ ಬಿದ್ದಬಿದ್ದು ನಕ್ಕಳು. ಎಂಥಾ ಹುಚ್ಚ ಹೆಂಗಸರು! ಎಂಥಾ ಪುಕ್ಕ ಗಂಡಸರು! ಅಂತ ಬಿದ್ದಬಿದ್ದು ನಕ್ಕಳು.

ಭಟ್ಟ:— ಅದ ಯಾಕಂತ ?

ಯಶೋದಾ:— ಗಂಡಂದಿರನ್ನ ಪೂಜಾ ಮಾಡಿ ಏನು ಸಂಪಾದಿಸಿದರು ಈ ಹುಚ್ಚ ಹೆಂಗಸರು ಅಂತ ಅಂದ್ಳು. ಮತ್ತೆ ನಾಕ ಮಂದಿ ಎದರೀಗೆ ಪೂಜಾ ಮಾಡಿಸಿಕೊಳ್ಳಲಿಕ್ಕೆ ನಾಚಿಕೆಯಾದ್ರು ಹ್ಯಾಂಗ ಬರಲಿಲ್ಲೊ ಈ ಗಂಡಸರೀಗೆ ಅಂತಾ ಅಂದ್ಳು. ಹೆಂಡಂದಿರೀಗೆ ಹೆದರಿ ಹೂಂ ಅಂತ ಅಂದಿರಬೇಕು, ಹೇಡಿಗಳು ಅಂತ ಅಂದ್ಳು. ಹೇಳ್ರಿ, ಇಂಥವ್ರು ನಾಳೆ ಮಾಡಿಕೊಂಡ ಗಂಡಗ ಏನಾರ ಕಿಮ್ಮತ್ತು ಕೊಟ್ಟಾರು ಅಂತೀರೇನು ?

ಭಟ್ಟ:— ಏನ ಕೊಡ್ತಾರ ಬಿಡ್ರಿ. ಕಲತ ಹುಡಗೇರನ್ನ ಲಗ್ನಮಾಡಿಕೊಂಡವ್ರನ್ನ ನಾ ಏನ ನೋಡಿಲ್ಲೇನು ?

ಯಶೋದಾ:— ಏನಾರ ಹಾಳ ಭಾವಿ ಬಿದ್ದಕೊಳ್ಳವಲ್ಲರ್ಯಾಕ ? ಆಚಾರ್ರ, ಹೀಂಗ ಪೂಜಾ ಮಾಡಿದ್ರೆ....

ಭಟ್ಟ:— ಅದನ್ನ ಕೇಳಬೇಕೇನ್ರಿ? ಸ್ತ್ರೀಗೆ ಪತಿಯೆ ದೇವರು, ಅಂತ ಶಾಸ್ತ್ರದೊಳಗ ಹೇಳ್ಯದ. ಸಾವಿತ್ರಿ, ಸೀತಾ, ಎಲ್ಲಾರಕಥಿ ಕೇಳೀರೊ ಇಲ್ಲೊ? ಪತಿವ್ರತಾ ಸ್ತ್ರೀ ಅಂದ್ರೇನು ಸಾಮಾನ್ಯ ಅಲ್ಲ. ಅವರ ಹೆಸರ ಹೇಳಿದ್ರೆ ಪಂಚ ಮಹಾಪಾತಕ ತೊಳದು ಹೋಗ್ತದ. "ಅಹಲ್ಯಾ ದ್ರೌಪದೀ ಸೀತಾ ತಾರಾ ಮಂಡೋದರೀ ತಥಾ, ಪಂಚಕನ್ಯಾಃ ಸ್ಮರೇನ್ನಿತ್ಯಂ ಮಹಾಪಾತಕನಾಶನಂ" ಅಂತ ಹೇಳ್ಯದ. ಅದೆಲ್ಲಾ ಸುಳ್ಳೇನು? ಯಾವ ಸ್ತ್ರೀಯು ತನ್ನ ಪತಿಯನ್ನೇ ಪರದೈವತವೆಂದು ಭಾವಿಸಿ ಕಾಯೇನ ವಾಚಾ ಮನಸಾ ಪೂಜಿಸುವಳೋ ಆ ಸ್ತ್ರೀ ಪರಮ ಧನ್ಯೆ. ಅವಳು ತನ್ನನ್ನೂ ತನ್ನ ಪತಿಯನ್ನೂ ತನ್ನ ಕುಲವನ್ನೂ ಉದ್ಧರಿಸುವಳಲ್ಲದೆ ಇಹಪರಗಳೆರಡರಲ್ಲೂ ಸದ್ಗತಿಯನ್ನು ಸಂಪಾದಿಸುತ್ತಾಳೆ ಅಂತ ನಮ್ಮ ಪುರಾಣ, ಶಾಸ್ತ್ರ,ವೇದ, ಮಂತ್ರ ಎಲ್ಲಾ ಸಾರಿ ಸಾರಿ ಹೇಳ್ತಾವ. ಆದರೆ ಇದು ಕಲಿಯುಗಾರಿ, ಕಲಿಕಾಲ. ಜನರೀಗೆ ಪುಣ್ಯ ಮಾಡೂ ಮನಸಾರೆ ಹ್ಯಾಂಗ ಬಂದೀತು? ಏನೋ ನಿಮ್ಮಂಥವ್ರು ನಾಕಮಂದಿ, ಪೂರ್ವ ಜನ್ಮದ ಸಂಸ್ಕಾರ ಜೋರಾಗಿದ್ದವ್ರು ಧರ್ಮ, ದೇವ್ರು ಅಂತೀರಿ ಅಷ್ಟೆ.

ಯಶೋದಾ:— ಈ ಸುದ್ದಿ ಕೇಳಿದಾಗಿಂದ ನನ್ನ ಮನಸಿನಾಗ ಒಂದು ವಿಚಾರ ಬಂದದ. ನಮ್ಮವರಂತೂ ಇಂಥಾದ್ಯಾವದೂ ಮನಸೀಗೆ ತಗೊಂಬೂದಿಲ್ಲ. ನಾನಾರ ಕೈಲಾದಷ್ಟು ಮಾಡೋಣ, ಹೀಂಗ ಗಂಡಂದಿರ ಪೂಜಾ ಮಾಡಿದ್ರ....

ಭಟ್ಟ:— ನಿಮಗೂ ಪುಣ್ಯ ಬರ್ತದ. ನಿಮ್ಮ ಪುಣ್ಯದ ಬಲದಿಂದ ನಿಮ್ಮ ಗಂಡಗೂ ಪುಣ್ಯಾ ಬರ್ತದ. ಕೇಳೀರೋ ಇಲ್ಲೊ—ಸಾವಿತ್ರಿ ಪುಣ್ಯ ಜೋರಾಗಿತ್ತು ಅಂತ ಸತ್ಯವಾನ ಬದಕಿಕೊಂಡ. ಅಂದ್ರೆ ಹೆಂಡತಿ ಪುಣ್ಯದ ಫಲ ಗಂಡಗ ಸಿಕ್ಕಾಂಗ ಆತೊ ಇಲ್ಲೊ? ಮಾಡಿಬಿಡರಲಾ ಅದಕೇನು? ಒಂದ ಒಳ್ಳೇ ದಿನಾ ನೋಡಿ ಗಣೇಶರಾಯ್ರ ಪೂಜಾ ಮಾಡಿ.....

ಯಶೋದಾ:— ನಾನೂ ಅದನೇ ಅಂತೇನಿ. ಸಮೀಪದಾಗ ಒಳ್ಳೇ ದಿನಾ ಅದ ಏನು ? ಮತ್ತ, ಈ ಪೂಜಾ ಅಂದ್ರೆ ಹ್ಯಾಂಗ ಮಾಡೂದು ? ಅದರ ಮಂತ್ರದ ಪುಸ್ತಕ ಎಲ್ಲ್ಯಾರ ಸಿಗವ್ಹಾಂಗದ ಏನು ?

ಭಟ್ಟ:— ಒಳ್ಳೆ ದಿನಾನ ! ನಾಳೆ ಬರೂ ಮಂಗಳವಾರ ಭಾಳ ಚಲೋ ದಿವಸ ಅದ. ಆ ದಿನ ಯಾವ ಶುಭ ಕಾರ್ಯಾನಾದ್ರೂ ಮಾಡ್ಬಹುದು. ಇಂದೇ ಮುಂಜಾನೆ ಯಾಕೊ ಪಂಚಾಂಗ ತಗದಾಗ ಸಹಜ ಗೊತ್ತಾತು. ಮತ್ತೆ ಮಂತ್ರದ ಪುಸ್ತಕ ಅಂದ್ರಲ್ಲಾ– ಇದಕ ಯಾಕ ಬೇಕ್ರಿ ಮಂತ್ರದ ಪುಸ್ತಕ? ಗಂಡ ದೇವ್ರು ಅಂತ ತಿಳಕೊಂಡು ನೀವು ಪೂಜಾ ಮಾಡ್ರೀರಿ. ಅಂದಮ್ಯಾಲೆ ದೇವರ ಪೂಜಾ ಹ್ಯಾಂಗ ಮಾಡ್ತೇವೊ ಹಾಂಗs ಮಾಡಿದ್ರಾತು! ಆದರೆ ಒಂದು ಮಾತು ನನಗೆ ಪುರಾಣದಾಗ ಓದಿದ ನೆನಪದ. ಹೀಂಗ ಗಂಡನ ಪೂಜಾ ಮಾಡುವಾಗ ಒಂದ ವಿಶೇಷ ಇರ್ತದ. ಅದೇನಂದ್ರ ಅಂದು ಒಂದ ದಂಪತೀಗೆ ಊಟಕ್ಕೆ ಕರೀಬೇಕು. ಮತ್ತೆ ಐದು ಮುತ್ತೈದೇರಿಗೂ ಊಟಕ್ಕೆ ಹಾಕಬೇಕು. ಅವರೆಲ್ಲಾರಿಗೂ ಬಾಗಿನಾ ಕೊಡಬೇಕು. ಬಾಗಿನಾ ಅಂದ್ರ ಮತ್ತೇನಿಲ್ಲ, ಖಣ, ಬಳಿ, ಅರಿಶಿಣ, ಕುಂಕುಮ ಮತ್ತ ಯೋಗ್ಯತಾ ಪ್ರಕಾರ ದಕ್ಷಿಣಿ. ಇಷ್ಟಾತು ಅಂದ್ರ . . . .

ಯಶೋದಾ:— ಮನಸ ಮಾಡಿದ್ರ ಆಗದ ಏನ್ರಿ ? ಆದರೆ ದಂಪತಿ ಅಂದಮ್ಯಾಲೆ . . . .

ಭಟ್ಟ:— ಚಿಂತಿ ಬಿಡ್ರಿ. ನಾ ನಮ್ಮಾಕೀನ ಕರಕೊಂಡು ಬಂದ ಬಿಡ್ತೇನಿ. ಪೂಜಾ ಮಾಡಿಸವ್ರು ಬ್ಯಾರೆ, ದಂಪತಿ ಊಟಕ್ಕೆ ಕೂಡವ್ರು ಬ್ಯಾರೆ ಆದ್ರೂ ಯಾಕೆ ? ಹೌದಲ್ಲೊ ?

ಯಶೋದಾ:— ಸರಿ. ಹಾಂಗೇ ಆಗಲಿ. ಮಂಗಳವಾರ ನಕ್ಕೀ ಆದ್ಹಾಂಗs ಸರಿ. ನಾ ಎಲ್ಲಾ ತಯಾರ ಮಾಡಿಕೋತೇನಿ. ಅಂದು ನೀವು ನಸಕನಾಗ ಬಂದು ಇವ್ರು ಆಫೀಸಿಗೆ ಹೋಗೂದರೊಳಗ ....

ಭಟ್ಟ:— ಛೆ! ಛೆ! ಗಣೇಶರಾಯರಿಗೆ ಅಂದ ರಜಾ ತಗೊಳ್ಲಿಕ್ಕೆ ಹೇಳ್ರಿ. ನಾ ಬರೇ ದಕ್ಷಿಣಾ ಊಟದ ಪೂರ್ತೆ ಪುರೋಹಿತ ಅಲ್ಲ. ಮಾಡಿದ ಮ್ಯಾಲೆ ಛಲೋ ಮಾಡ್ಬೇಕು. ಅವಸರ ಅಂತ ಒಂದ ಮಂತ್ರ ಬಿಟ್ಟು ನಾಕ ಮಂತ್ರ ನುಂಗಿ ಪೂಜಾ ಮಾಡಿಸಿದ್ರೆ ನಾಳೆ ಯಮ ನನ್ನ ನರಕಕ್ಕ ದಬ್ಯಾನು.

ಯಶೋದಾ:— ಹಾಗೇ ಆಗ್ಲಿ. ರಜಾ ಅಂದ್ರ ಅವರು ಒಪ್ತಾರೊ ಇಲ್ಲೊ ?

ಭಟ್ಟ:— ಯಾಕೆ ಒಪ್ಪೂದಿಲ್ಲ ? ಪುಣ್ಯದ ಕೆಲಸ ಅಂತ ತಿಳಸಿ ಹೇಳ್ರಲಾ. ಆತು. ನಾ ಇನ್ನ ಬರ್ತೇನಿ. ಮಂಗಳವಾರ ಆಗಿ ಹೋಗ್ಲಿ ಶುಭ ಕಾರ್ಯ. ಬಾಗಿನದ ವ್ಯವಸ್ಥಾ ಮಾಡಿರಿ. ತುಸಾ ಹೆಚ್ಚು ಹೂವುಪಾವು ತರಸ್ರಿ. ಕಲಶಕ್ಕೆ ಅಂತ—ಹೌದು, ಅಂದು ಹೊಸ ತಂಬಿಗಿಗೆ ಪೂಜಾ ಮಾಡಿ ಅದರಾಗಿಂದ ಪತಿದೇವರಿಗೆ ಸ್ನಾನ ಮಾಡಿಸಿ ಆಮ್ಯಾಲೆ ಆ ತಂಬಗೀನ ದಾನ ಕೊಡಬೇಕ್ತಾದ. ಒಂದು ಹೊಸ ತಂಬಗಿ ತರಸ್ರಿ. ಇನ್ನು ದಂಪತೀಗೆ ನೀವು ಏನು ಕೊಟ್ರೂ ನಡೀತದ. ಕೈಯೆತ್ತಿ ಕೊಟ್ಟದ್ದಕ್ಕ ತಕ್ಕ ಪ್ರತಿಫಲ ಸಿಕ್ಕೇ ಸಿಗ್ತದ. ಮತ್ತ ಹೌದು, ಹಾಂಗೇ ಎರಡ ರೂಪಾಯಿ ಚಿಲ್ಲರೀನೂ ತರಸಿಟ್ಟ ಬಿಡ್ರಿ. ಆತಲ್ಲ. ಮತ್ತೆ ಏನಾದರೂ ಇದ್ರೆ ನಾಳೆ ಬಂದಾಗ ಹೇಳ್ತೇನಿ. ಬರ್ತೇನಿನ್ನು, ಹೊತ್ತಾತು. ಬಾಗಿಲಾ ಮುಂದ ಮಾಡಿ ಕೊಂಡು ಹೋಗಲ್ಯಾ ? (ಹೋಗುವನು)

ಯಶೋದಾ:— ಹೂಂ. ಅಂತೂ ಒಂದ ಕೆಲಸ ಆದ್ಹಾಂಗಾತು. ಮತ್ತ ಈ ಪತಿಪೂಜಾ ಅನ್ನೂದು ಎಂಥಾ ದೊಡ್ಡದೊ ಅಂತ ಮಾಡಿದ್ದೆ; ಸುರಳೀತ ಆದ. ಪುಣ್ಯ ಬರ್ತದ ಅಂದಮ್ಯಾಲೆ ತಿಂಗಳೀಗೊಮ್ಮೆ ಮಾಡಿದ್ರೂ ಮಾಡ್ಬಹುದು. (ಹನ್ನೆರಡು ಹೊಡೆದ ಸಪ್ಪಳ) ಅಂ ! ಹನ್ನೆರಡು ಹೊಡೀತು. ಇನ್ನೂ ಇವರ ಸಿನೇಮಾ ಮುಗದಿಲ್ಲೇನು? ಆ ಹುಡುಗರು ಹೇಳ್ತಾರ ಇವರು ಕುಣೀತಾರ. ಲಗೂನೇ ಬಂದಿದ್ದರೆ ಕೆಲಸಾ ಬೊಗಸಿ ಮುಗಸಿಕೊಂಡು ಮುತ್ತೈದೇರಿಗಾದ್ರೂ ಹೇಳಿ ಬರಲಿಕ್ಕಾಗ್ತಿತ್ತು. (ಬಾಗಿಲು ದೂಡಿದ ಸಪ್ಪಳ) ಬಂದ್ಹಾಂಗ ಕಾಣ ಸ್ತದ ಮಾರಾಯ್ರು. ಇನ್ನ ಕಾಲತೊಳಿಯು ಪುರಸತ್ತಿಲ್ದೆ ಬಡ ಸೀದಿಯೇನು ಅಂತ ಕೇಳಕೋತಾ ಬರ್ತಾರ.

[ಗಣೇಶರಾಯ, ಸುಧಾ, ಗೋವಿಂದ ಪ್ರವೇಶಿಸುವರು]

ಸುಧಾ:— ಅವ್ವಾ, ತಾಟ ಹಾಕೀದಿಯೇನು ? ಹಸಿವ್ಯಾಗೇದ.

ಯಶೋದಾ:— ಹಾಕಲಿಕ್ಕ ಹತ್ತ್ಯೇನವಾ. ಸಿನೇಮಾ ನೋಡಿ ದಣದು ಬರ್ತೀರಿ ಅನ್ನೂದು ಗೊತ್ತಿಲ್ಲೇನು ನನಗ? ಏನು ಕೈಕಾಲು ತೊಳಕೋತಿಯೊ ಹಾಂಗs ಊಟಕ್ಕ ಕೂಡ್ತಿಯೊ ? ನಿನಗೇನು ಎಲ್ಲಾ ಒಂದೇ. ಒಂದು ಮಡಿ ಮೈಲಗಿ ಏನೂ ಇಲ್ಲ.

ಗೋವಿಂದ:— ಅವ್ವಾ, ಮಡಿಮೈಲಗಿ ಇಲ್ಲದಿದ್ದರೂ ಸ್ವಚ್ಛತಾ ಅನ್ನೂದು ಅದಲ್ಲ. ಹಾಂಗs ಹ್ಯಾಂಗ ಊಟಕ್ಕ ಕೂಡಲಿಕ್ಕ ಬಂದೀತು ? ಅಪ್ಪಾ, ಲಗೂನೆ ಕೈಕಾಲು ತೊಳಕೊಳ್ಳಪ್ಪಾ. ಹಸಿವಿ ಯಾಗೇದ. ಮತ್ತೆ ತುಸಾ ಹೋಮುವರ್ಕೂ ಅದ. ಅದನ್ನಿಷ್ಟ ಮಾಡಿ ೫ ಗಂಟೇಕ್ಕ ನಾ ಕಾಲೇಜ ಮ್ಯಾಚ್ ನೋಡ್ಲಿಕ್ಕೆ ಹೋಗ ಬೇಕಾಗ್ಯದ. ಮಿಕ್ಸಡ್ ಡಬಲ್ಸದಾಗ ನಮ್ಮ ಸುಧಾನೂ ಆಡ ವಾಕಿ ಇದ್ದಾಳ.

ಯಶೋದಾ:— ಏನಂದಿ ?

ಗೋವಿಂದ:— ಮಿಕ್ಸಡ್ ಡಬಲ್ಸ.

ಯಶೋದಾ:— ಅಂದರೆ ?

ಸುಧಾ:— ಅಂದರೆ ಅವ್ವಾ, ಬ್ಯಾಡಮಿಂಟನ್ ಆಟದಾಗ ಒಂದೊಂದು ಕಡೆ ಇಬ್ಬರು ಅಂದರೆ ಒಬ್ಬ ಗಂಡಸು, ಒಬ್ಬ ಹೆಂಗಸು ಹೀಂಗ ಆಡೂದಕ್ಕ . . . .

ಯಶೋದಾ:— ತಿಳೀತು ಬಿಡು. ನಿಮ್ಮದು ನಿಮಗೇ ಛಂದ. ಲಗೂನೆ ನಿನ್ನ ತಲೀಮ್ಯಾಲೆ ಇಷ್ಟ ಅಕ್ಕೀಕಾಳು ಬಿದ್ದಿದ್ರೆ ನಾ ಶಿವಾ ರಾಮಾ ಅಂತ ಹಾಯಾಗಿರ್ತಿದ್ದೆ. ಅಷ್ಟಾಗಲಿಕ್ಕೆ ಇನ್ನ ಎಷ್ಟ ಪುಣ್ಯಾ ಖರ್ಚ ಆಗ್ಬೇಕೊ?

ಗಣೇಶ:— ನೀ ಯಾಕ ಹೆದರತೀಯೆ ? ಅಲ್ಲೆ, ನೀ ಏಕಾದಶಿ ಉಪಾಸಾ ಮಾಡ್ತೀದಿ, ಶುಕ್ರವಾರ ಒಪ್ಪೊತ್ತು ಮಾಡ್ತೀದಿ, ಒಂದಿನಾರ ದೇವರ ತೀರ್ಥ ತಗೊಳ್ಳದೆ ಊಟ ಮಾಡೂದಿಲ್ಲ; ವ್ರತಾ, ಉಪವಾಸ, ನಮಸ್ಕಾರ ಎಲ್ಲಾ ಮಾಡ್ತೀದಿ. ನಿನ್ನ ಪುಣ್ಯಕ್ಕೇನು ಕಡಮಿ ಅದ? ಸುಧಾನಂಥ ಹತ್ತ ಹುಡುಗೇರ ಲಗ್ನಾ ಮಾಡ್ಲಿಕ್ಕೆ ಸಾಕು. ಏನ ಚಿಂತೀ ಮಾಡಬ್ಯಾಡ.

ಯಶೋದಾ:— [ಆಕ್ಕಸದಿಂದ] ಹೌದು, ಹೌದು ಅಂದೆ. ನಿಮಗೆಲ್ಲಾ ಬರೇ ನಗಚಾಟಕಿ ಆಗಿ ಹೋಗ್ಯದ. ನೀವೇನಂದ್ರೂ ನಾ ನನ್ನ ಧರ್ಮ-ಕರ್ಮ ಬಿಡವಾಕಿ ಅಲ್ಲ. ಕೂಡ್ರಿ ಇನ್ನ ಊಟಕ್ಕ. ಮಧ್ಯಾಹ್ನ ನಿಮಗೇನಾರ ಪುರಸತ್ತದನೊ ಅಥವಾ. . . .

ಗಣೇಶ:— ಯಾಕೆ, ಮತ್ತೇನು ಕೆಲಸ ಆದ ? ಏನಾರ ಇದ್ದರ ಹೇಳಿ ಬಿಡು. ಇಂದ ಮಧ್ಯಾಹ್ನ ಮೂರು ಗಂಟೇಕ್ಕ ಧಾರವಾಡಕ್ಕ ಹೋಗಿ ಬರ್ಬೇಕು ಅಂತ ಮಾಡೇನಿ. ಅಲ್ಲಿ ಇಂದು ಕರ್ನಾಟಕ ಸಂಘದಾಗ ಲೆಕ್ಚರ ಅದ. ಅನಾಯಾಸ ಸೂಟಿ ಅದ, ಹೋಗಿ ಕೇಳಿ ಬರೋಣ ಅಂತ ಮಾಡೇನಿ.

ಯಶೋದಾ:— ನನಗೆ ಗೊತ್ತು ನಿಮಗ ಪುರಸತ್ತು ಇರೋದಿಲ್ಲ ಅನ್ನೂದು. ಅದಕೇ ಕೇಳಿಕೊಂಡುಬಿಟ್ಟೆ. ನಾಡದು ಮಂಗಳವಾರ ರಜಾ ತಗೋರಿ.

ಗಣೇಶ:— ಯಾಕೆ? ಹಾಂಗೆಲ್ಲಾ ರಜಾ ಕೊಡ್ತಾರೇನು ? ಹಾಂಗ ಸರಕ್ಕನೆ ಸಿಗಬೇಕಾದ್ರ ಕ್ಯಾಜುವಲ್ ಲೀವ್ ತಗೋಬೇಕು. ಕ್ಯಾಜುವಲ್ ಲೀವ್ ತಗೋಬೇಕಾದ್ರೆ ಏನಾದರೂ ಜಡ್ಡೊ, ಬ್ಯಾನಿಯೊ ಅಂಥಾದ್ದೇ ಏನಾರ ಆಗಬೇಕು. ಅಂಥಾ ಹೊತ್ತಿಗ ಇರ್ಲಿ ಅಂತೇ ಕ್ಯಾಜುವಲ್ ಲೀವ್ ಇಟ್ಟಾರ.

ಯಶೋದಾ:—ಅಯ್ಯ! ಊಟಕ್ಕ ಕೂತಾಗ ಇಲ್ಲದ ಅಭದ್ರ ನುಡೀ ಬ್ಯಾಡ್ರಿ. ರಜಾ ತಗೋಬೇಕಾದ್ರೆ ಜಡ್ಡೇ ಆಗಬೇಕೇನು? ಸಂಸಾರ ಅಂದಮ್ಯಾಲೆ ಮತ್ತೆ ಏನೂ ಮಹತ್ವದ ಕೆಲಸ ಇರೂದೇ ಇಲ್ಲೇನು ?

ಗಣೇಶ:— ಇರ್ತದ. ಇಲ್ಲಾ ಅಂದವ್ರು ಯಾರು? ಆದರೆ ಹಕ್ಕಿನ ರಜಾ ತಗೋಬೇಕಾದ್ರೆ ಮೊದಲೆ ಮಂಜೂರಿ ತಗೋಬೇಕಾಗ್ತದ.

ಯಶೋದಾ:— ಅದೆಲ್ಲಾ ನನಗ ತಿಳೀದು. ಜಡ್ಡು ಅಂತಾರ ಅನ್ರಿ, ಮಂಜೂರಿನಾದ್ರು ತಗೋರಿ, ಏನಾದರೂ ಮಾಡ್ರಿ. ಆದ್ರೆ ಮಂಗಳ ವಾರ ರಜಾ ಮಾತ್ರ ತಗೋರಿ ತೀರ್ರು.

ಗಣೇಶ: — ತುಸಾ ಸಾರು ಹಾಕು. ಅಲ್ಲಾ, ಮಂಗಳವಾರ ಅದ ಆರಷ ಏನು? ರಜಾ ತಗೊಂಡು ಮನ್ಯಾಗ ಕುಂತ ಏನ ಮಾಡಬೇಕಾಗ್ಯದ? ಏನ ಹಪ್ಪಳ ಗಿಪ್ಪಳ ಮಾಡಿನಾಕಿ ಅದೀಯೇನು ? ಅಂಥಾದ್ದೇನಾದ್ರೂ ಇದ್ರೆ ನನ್ನಿಂದೇನ ಸಾಧ್ಯ ಇಲ್ಲ ನೋಡು. ಹಪ್ಪಳ ಲಟಸೂದಿರ್ಲಿ, ಕಾಯೂದು ಕೂಡ ನಮಗೆ ನೀಗದ ಮಾತು. ಸುಧಾ, ನೀ ಮಂಗಳವಾರ ಕಾಲೇಜಿಗೆ ಸೂಟಿ ತಗೋವಾ. ಆಕೀಗ ಇಷ್ಟು ಅವತ್ತು ಸಹಾಯ ಮಾಡು.

ಯಶೋದಾ:— ಏನು ಎಂತು ಅಂತ ಅನ್ನೂ ಮೊದಲೆ ಏನೇನಾರ ಅನ್ಲಿಕ್ಕೆ ಹತ್ತಿದರಲ್ಲ ಹಪ್ಪಳಂತ! ಹಪ್ಪಳ ಮಾಡೂದಾದ್ರ ನೀವ ಯಾಕ ಬೇಕು ನನಗೆ? ನಾ ಒಬ್ಬಾಕೀನೆ ಮಾಡ್ಲಿಕೆ ಘಟ್ಟ ಅದೇನಿ. ಅಂಥಾ ಪರಿ ಯಾರಾದ್ರೂ ಬೇಕು ಅಂದ್ರ ನೆರೆಹೊರೆಯೊಳಗೆ ನನಗೆ ಬೇಕಾದವ್ರು ಇದ್ದಾರ ತಂದೆ. ರಮಾಬಾಯಿ, ಕಮಲಾಬಾಯಿ, ಗೋದೂಬಾಯಿ ಯಾರೂ ನಾ ಬಾ ಅಂದ್ರೆ ಒಲ್ಲೆ ಅನ್ನೂದಿಲ್ಲ ಹುಂ! ಹಪ್ಪಳಂತ! ಬಾಯೀಗೆ ಬಂದಿದ್ದು....

ಗಣೇಶ:— ಹೋಗ್ಲಿ ಬಿಡು. ನಮ್ಮ ಅಂದಾಜು ತಪ್ಪು. ಹೇಳಿಬಿಡು, ಮಂಗಳವಾರ ನನ್ನಿಂದ ಏನಾಗಬೇಕು ಅಂತ? ಅಂಥಾ ಮಹತ್ವದ ಕೆಲಸಾನೇ ಇದ್ರ.....

ಯಶೋದಾ: — ಅದ. ಏ ಸುಧಾ, ನಿನ್ನೆ ನನಗೆ ಓದಿ ಹೇಳಿದಿಯಲ್ಲ, ಆ ಸುದ್ದಿ, ಇವರಿಗೂ ತೋರಿಸೀಯೇನು?

ಸುಧಾ:— ಯಾವದು? ನನಗೆ ನೆನಪಿಲ್ಲವ್ವಾ.

ಯಶೋದಾ:— ನೀನೇ ಓದಿ ಹೇಳಿದಾಕಿ ನಿನಗೆ ನೆನಪಿಲ್ಲ? ಹೀಂಗ ಮರಿಯೂ ನೀವು ಹ್ಯಾಂಗ ಪರೀಕ್ಷಾ ಪಾಸಾಗ್ತೀರೊ? ಅದು ಯಾವದೋ ಊರು ಅಂದಿಯಲ್ಲ. ಅಲ್ಲಿ ಪತಿಪೂಜಾ ಮಾಡಿದರು ಅಂತ.....

ಸುಧಾ:— (ನಕ್ಕು) ಓ ! ಅದೇನೇ! ಅದೇನೋ ಅಪ್ಪಾ, ಉತ್ತರ ಪ್ರದೇಶದಲ್ಲಿ ಪತಿಪೂಜನ ಯಜ್ಞ ಮಾಡಿದ ಸುದ್ದಿ ಅಂತ ನನಗೆ ನೀ ತೋರಿಸಲಿಲ್ಲ? ಅದನ್ನೇ ಅವ್ವಗ ಓದಿ ಹೇಳಿದ್ದೆ.

ಗಣೇಶ:— ಹೌದು. ಆದರೆ ಅದಕ್ಕೂ ಮಂಗಳವಾರ ನಾ ರಜಾ ತಗೊಳ್ಳೂದಕ್ಕೂ ಏನ ಸಂಬಂಧ ಅಂತೇನಿ ?

ಸುಧಾ :— (ನಗುತ್ತ) ಅಪ್ಪಾ, ನನಗೆ ಗೊತ್ತಾತು. ಹೇಳಲ್ಯಾ? ಅವ್ವ ಮಂಗಳವಾರ ದಿನಾ ನಿನ್ನ ಪೂಜಾ ಮಾಡ್ಬೇಕು ಅಂತ ಮಾಡ್ಯಾಳು ಅಂತ ಕಾಣಸ್ತದ.

ಗಣೇಶ:— (ಗಾಬರಿಯಾಗಿ) ಹೌದೇನೆ? ಅಂ!

ಯಶೋದಾ:— ಹೌದು.

ಗಣೇಶ:— ಅಂ! ಏನ ಬಂತಪಾ ಇದು ಅಂತೇನಿ!

ಗೋವಿಂದ:— ಪೂಜಾ ಮಾಡ್ಸಿಕೊಳ್ಳಲಿಕ್ಕೆ ಯಾಕೆ ಅಂಜತೀದಿ, ಅಪ್ಪಾ? ದೇವ್ರ ರಾಂಗ ಕುಂತರಾತು. ಮಂತ್ರ ಹೇಳತಾರ, ಹೂ ಏರಸತಾರ, ನೇವೇದ್ಯ ಮಾಡತಾರ, ಆರತಿ ಎತ್ತತಾರ ತೀರ್ರು. ಹೂಂ ಅಂದ ಬಿಡು ಅಪ್ಪಾ. ಸೀ ತಿನ್ನದೆ ಭಾಳ ದಿನಾತು. ಈ ನೆವದಿಂದಾದ್ರೂ ಹೋಳಗಿ ಹೊಡಿಯೋಣು.

ಸುಧಾ:— ಹೌದಪ್ಪ, ಅವ್ವನ ಬಯಕೀನೂ ತೀರದ್ಹಾಂಗಾತು. ಅಣ್ಣನ ಬಯಕೀನೂ ತೀರದ್ಹಾಂಗಾತು.

ಗಣೇಶ: — ಸಾಕು ಸುಮ್ಮನಿರಿ. ಆಕಿ ಹೇಳಿದ್ಳು, ನೀವು ಹೂಂ ಅಂದ ಬಿಟ್ರಿ! ಹೋಳಗಿ ತಿನ್ನಬೇಕು ಅಂತಿದ್ರ ಮಾಡಿಕೊಂಡು ತಿನ್ರಿ. ನಾ ಬ್ಯಾಡಂತೇನೇನು ? ಅಲ್ಲಾ, ನನ್ನ ಪೂಜಾ ಮಾಡ್ತಾಳಂತ. ಏನ

ಹುಡಗಾಟಿಕೆ ಆಗಿ ಹೋತಲ್ಲ. ಅಂ! ಏನಂತೇನಿ? ನಾ ನಾಳೆ ನಾಕ ಮಂದಿಯಾಗ ಮಾರಿ ಎತ್ತಿಕೊಂಡು ಅಡ್ಡಾಡಬೇಕೊ ಬ್ಯಾಡೊ ?

ಯಶೋದಾ:— ಅಡ್ಡಾಡರಲ್ಲ. ಹೆಂಡತೀ ಕಡಿಂದ ಪೂಜಾ ಮಾಡಿಸಿ ಕೊಂಡ್ರ ಏನ ಕೆಟ್ಟಾತು ? ಅದರಾಗ ನಾಚಕಿಯೇನು ಬಂತು ?

ಗಣೇಶ:— ಅಂದ್ರೆ- ನೀ ನನ್ನ ಕತ್ತಲ ಕೋಣೆಯೊಳಗ ಕೂಡ್ರಿಸಿ ಯಾರಿಗೂ ಗೊತ್ತಾಗದ್ಹಾಂಗ ಪೂಜಾ ಮಾಡತೀಯೇನು ?

ಯಶೋದಾ:— ಅಯ್ಯ! ಕದ್ದು ಮುಚ್ಚಿ ಯಾಕ ಮಾಡ್ಬೇಕು ? ಹಾಂಗಿದ್ರ ರಜಾ ತಗೋರಿ ಅಂತ ಯಾಕ ಅಂತಿದ್ದೆ! ಪುರೋಹಿತರು ಬರ್ತಾರ, ದಂಪತಿ ಊಟ ಹಾಕಬೇಕಾಗ್ತದ, ಮುತ್ತೈದೆಯರೂ ಊಟಕ್ಕೆ ಬರ್ತಾರ. ಪೂಜಾ ಮಾಡಿದ ಮ್ಯಾಲೆ ನಾ ಶಾಸ್ರೋಕ್ತ ಮಾಡವಾಕೀ. ತಿಳೀತೇನು ?

ಗಣೇಶ:— ತಿಳೀತು. ಅದಕ್ಕೇ ಮಾರಿ ಎತ್ತಿಕೊಂಡು ಅಡ್ಯಾಡಲೊ ಬ್ಯಾಡೊ ಅಂತ ಕೇಳಿದ್ದು. ಅಲ್ಲೆ, ಹೀಂಗಾದ್ರ ಜನ ಏನಂದಾರು ? ಅಂ! ಊಟಕ್ಕೆ ಬಂದವ್ರು ಏನಂದಾರು ? ಇವರಿಬ್ಬರಿಗೂ ಅಂದ್ರೆ ನನಗೆ ಮತ್ತು ನಿನಗೆ ತಲಿ ಕೆಟ್ಟದ, ಮುದಿಹುಚ್ಚು ಹಿಡದದ ಅಂತ ಅನ್ನಲಿಕ್ಕಿಲ್ಲೇನು? ಅಲ್ಲೆ, ಮತ್ತೆ ಅಂಥಾದ್ದೇನು ಬಂದದ ಈಗ ನನ್ನ ಪೂಜಾ ಮಾಡುವಂಥಾದ್ದು ?

ಯಶೋದಾ:— ಪೂಜಾ ಮಾಡ್ಲಿಕ್ಕೆ ಅಂಥಾದ್ದು ಇಂಥಾದ್ದು ಬರ್ಬೇಕು ಅಂತೇನಿಲ್ಲ. ದೇವರ ಪೂಜಾ ಮಾಡೂದಿಲ್ಲೇನು, ಹಾಂಗ ಇದು!

ಗಣೇಶ:— ಆದರೆ.... ?

ಸುಧಾ:— ಅಪ್ಪಾ, ತಿಳೀಲಿಲ್ಲೊ ನಿನಗೆ? ಹೆಂಡತೀಗೆ ಗಂಡನೇ ದೇವರು ಅಂತ ಶಾಸ್ತ್ರದಾಗ ಹೇಳ್ತಾರ. ಅವ್ವಗ ನೀ ದೇವರಾದಿ. ಅದಕೇ ನಿನ್ನ ಪೂಜಾ ಮಾಡಬೇಕಂತಾಳ. ಅಲ್ಲೇನವ್ವಾ ?

ಯಶೋದಾ:— ಹೌದು. ಮನಶಾ ಆಗಿ ಹುಟ್ಟಿದ ಮ್ಯಾಲೆ ಪುಣ್ಯಾ ಗಳಸದಿದ್ರೆ ಯಾಕ ಬಂತು ?

ಗಣೇಶ:— ಗಳಸಲ್ಲ. ಯಾರ ಬ್ಯಾಡಂತಂದ್ರು? ಈಗ ಮಾಡೂ ಉಪವಾಸ, ವ್ರತ, ಪೂಜಾ ಸಾಲದೇನು? ಮತ್ತೆ ನನ್ನ ನಗೆಗೇಡು ಮಾಡೂದು ಯಾಕೆ ? ಪುಣ್ಯಗಳಸಾಕಿ ನೀನು, ಮಂಗ್ಯಾನ್ಹಾಂಗ ಆಗಂವ ನಾ, ಯಾಕೆ ಅಂತೇನಿ !

ಯಶೋದಾ:— ಸುಮ್ಮನಿರ್ರಿ. ಪಲ್ಯಾ ಇನ್ನಷ್ಟು ಬೇಕೇನು? ಬ್ಯಾಡ? ಪುಣ್ಯ ನನಗೊಬ್ಬಾಕೀಗೆ ಬರ್ತದ ಅಂತ ಮಾಡೀರೇನು? ಗಂಡ ಮಾಡಿದ ಪುಣ್ಯ ಹೆಂಡತೀಗೆ, ಹೆಂಡತಿ ಮಾಡಿದ ಪುಣ್ಯ ಗಂಡಗ ತುಸಾಇಲ್ಲ ತುಸಾ ಸಿಕ್ಕೇ ಸಿಗ್ತದ. ಮಂಗಳವಾರ ರಜಾ ತಗೊಂಡು ಬಿಡ್ರಿ. ಏನೇನೂ ಆಗೂದಿಲ್ಲ ನಿಮಗೆ!

ಗಣೇಶ:— ಎಲಾ ಹುಕುಂ ಮಾಡತೀಯಲ್ಲ ಆಫೀಸರರ್ಹಾಂಗ. ಇಲ್ಲದ ರಗಳಿ ಹಚ್ಚಬ್ಯಾಡ ನೀನು. ಗಂಡಾ ಅನ್ನೂ ಅಧಿಕಾರ ಅದೊ ಇಲ್ಲೊ ನನಗೆ? ನಾ ಹೇಳ್ತೇನಿ ನನಗೆ ಪೂಜಾ ಬ್ಯಾಡ. ನಾ ಪೂಜಾ ಮಾಡಿಸಿಕೊಳ್ಳೂದಿಲ್ಲ. ಉಂಟೇನು ಎಲ್ಯಾರ ! ಪೇಪರದಾಗಿನ ಸುದ್ದಿ ಕಿವಿಗೆ ಬಿತ್ತು, ಇಲ್ಲದ್ದೊಂದು ಹೊಡಿಕೊಂಡು ಕುಂತಿ!

ಯಶೋದಾ:— ಇಲ್ಲದ್ದಲ್ಲ ಏನಲ್ಲ ! ಒಂದ ಅರ್ಧ ತಾಸು ಕುಂತು ಪೂಜಾ ಮಾಡಿಸಿಕೊಂಡ್ರೆ ನಿಮ್ಮ ಗಂಟೇನು ಹೋಗ್ತದ?

ಗಣೇಶ:— ಯಾಕ ಹೋಗೂದಿಲ್ಲ? ಪುರೋಹಿತರ ದಕ್ಷಿಣಿ, ದಂಪತಿಗಳ ದಕ್ಷಿಣಿ, ಮುತ್ತೈದೆಯರ ದಕ್ಷಿಣಿ, ಮತ್ತೆ ಮ್ಯಾಲೆ ಅವರೆಲ್ಲಾರಿಗೂ ಹೋಳಗಿ ಊಟ, ಪೂಜಾದ್ದ ಖರ್ಚ ಬ್ಯಾರೆ. ಏನಿಲ್ಲಾಂದರೂ ೨೦-೨೫ ರೂಪಾಯಿ ಗಂಟಾದ್ರೂ ಹೋಗೇ ಹೋಗ್ತದ. ಆ ಗಂಟು ನಂದಲ್ಲದೆ ಮತ್ಯಾರದು ? ಏನಾರ ನಿನ್ನ ತವರಮನಿ....

ಯಶೋದಾ:— ನಿನ್ನ ಅಪ್ಪನ ಗಂಟ ತರ್ತೀಯೇನು ಅಂತ ಅನ್ನರಲ್ಲ! ನನಗನ್ನದೆ ಇನ್ಯಾರೀಗೆ ಅಂತೀರಿ ನೀವು? ನನಗೇನ ಗೊತ್ತಿಲ್ಲ, ನನ್ನ ಹಣೇಬರಹ? ಹೀಂಗಾದೀತು, ಹೀಂಗಂತೀರಿ ಅಂತ ಮೊದಲೇ ಲೆಕ್ಕ ಹಾಕಿದ್ದೆ. ಹಾಂಗೇ ಆತು. ಆದರೆ....

ಗಣೇಶ:— ನೀ ಏನ ಅಂದ್ರೂ....

ಗೋವಿಂದ:— ಹೌದಪ್ಪ. "ಅತಿ ಸರ್ವತ್ರ ವರ್ಜಯೇತ್". ಅವ್ವ ಬೇಕಾದ್ದ ಪೂಜಾ ಮಾಡಿಕೊಳ್ಳವಲ್ಲಳ್ಯಾಕ. ಈ ಪತಿಪೂಜಾ ಮಾತ್ರ ಬ್ಯಾಡ. ನಾಳೆ ನಾನೂ ಕಾಲೇಜಿನಾಗ ಮಾರೀ ತೋರಸಲಿಕ್ಕೆ ಜಾಗಾ ಇರಲಿಕ್ಕಿಲ್ಲ.

ಯಶೋದಾ:— ಬಿಡೊ ಖೋಡಿ, ನಿನಗೆ ಏನ ತಿಳೀತದ ಮಣ್ಣು? ಧರ್ಮ-ಕರ್ಮ ಅಂದ್ರೆ ನಿಮಗೆ ನಾಚಕಿ ಬರ್ತದಲ್ಲ! ನಿಂದಾರ ತಪ್ಪೇನು ಇದರಾಗ ? ಇವರು ದಿನಾ ಸಂಧ್ಯಾವಂದನಿ, ಪೂಜಿ ಅಂತ ಧರ್ಮ ನಡಸಕೋತ ಬಂದಿದ್ರೆ ನೀವ ಯಾಕ ಹೀಂಗ ಆಗ್ತಿದ್ರಿ? ತಾವು ಮಾಡವ್ಹಾಂಗಿಲ್ಲ? ಮುಂದಿಗೂ ಮಾಡಿಗೊಡವ್ಹಾಂಗಿಲ್ಲ.

ಗಣೇಶ:— ಯಾಕೆ? ನಿನ್ನ ಪೂಜಾ ಪುನಸ್ಕಾರಕ್ಕ ನಾ ಎಲ್ಲಿ ಅಡ್ಡಿ ಮಾಡೇನಿ? ಏನೋ ಮಾಡತಾಳ ಮಾಡಿಕೊಳ್ಳಲಿ ಅಂತ ಸುಮ್ಮನಿದ್ರೆ ನಿಂದ ಅತಿಯಾಗಿ ಹೋತು. ಇಂದ ಪೂಜಾ ಮಾಡ್ತೇನಿ ಅಂತೀದಿ. ನಾಳೆ ನಿನ್ನ ಪುರೋಹಿತರು ಹೇಳಿದ್ರು ಅಂದ್ರೆ ನನ್ನ ಪಾಲಕೀಲಿ ಕೂಡ್ರಿಸಿ ಮೆರವಣಿಗೆ ತೇಗೀತೇನಿ ಅಂತ ಅಂದ್ರೂ ಅಂದಿ. ಅದೇನಿಲ್ಲ. ಈ ಮಾತು ಇಲ್ಲೀಗೇ ಬಿಟ್ಟುಬಿಡು! ಇನ್ನುಳಕಿ ವ್ರತಾ ಉಪವಾಸ ಬೇಕಾದಷ್ಟು ಮಾಡು. ನಂದೇನು ತಕರಾರಿಲ್ಲ. (ತೇಗಿ) ಗೋವಿಂದಾ, ನೀ ಎಷ್ಟು ನಾಕ ಗಂಟೇಕ್ಕ ಹೋಗುವವನಲ್ಲ? ನನ್ನ ಮೂರೂವರಿಗೆ ಎಬ್ಬಿಸಿಬಿಡು.

[ಎಲ್ಲರೂ ಊಟ ಮುಗಿಸಿ ಎದ್ದು ಹೋಗುವರು. ಯಶೋದಾಬಾಯಿ ಸಿಟ್ಟಿನಿಂದ ಅಡಿಗೆ ಪಾತ್ರೆಗಳನ್ನು ಎತ್ತುಡುವಳು.]

ಸುಧಾ:— (ಬಂದು) ಅಪ್ಪಾ, ಮಲಕೊಂಡೀಯೇನು? ಬಾ ಇಲ್ಲೆ. ಅವ್ವಾ ಊಟಾ ಮಾಡೂದಿಲ್ಲಂತ.

ಗಣೇಶ:— (ಬಂದು) ಯಾಕಂತ ?

ಯಶೋದಾ:— ಯಾಕಾದ್ರೂ ಇರವಲ್ಲದ್ಯಾಕ ? ತಗೊಂಡು ಮಾಡ್ತೀರೇನು? ಹೆಂಡತಿ ಅನ್ನೋವಳು ನಿಮಗೆ ಗಂಡಸರಿಗೆ ಕಾಲಾಗಿನ ಕಸಾ. ಆಚಾರ್ರೀಗೆ ಎಲ್ಲಾ ತಯಾರ ಮಾಡ್ರಿ ಅಂತ ಸುದ್ದಾ

ನಾ ಹೇಳಿಬಿಟ್ಟೆ, ನನ್ನ ಮಾತು ನೀವು ನಡಸಿಕೊಡತೀರಿ ಅನ್ನೂ ನಂಬಿಗೆಯಿಂದ.

ಗಣೇಶ:— ಅಲ್ಲೆ, ಏನಾರ ಬುದ್ಧಿ ಆದನೊ ಇಲ್ಲೊ ನಿನಗೆ? ತುಸಾ ವಿಚಾರ ಮಾಡು. ಹೀಂಗ ಗಂಡನ ಪೂಜಾ ಎಲ್ಲಿಯಾದ್ರೂ.....

ಯಶೋದಾ:— ಯಾಕೆ? ನಿಮ್ಮಂಥವರು ಇಲ್ಲದಿದ್ರ ದಿನಾ ಮಾಡ್ತಿದ್ದರು. ಆದ್ರೂ ಈಗ ಮಾಡ್ಲಿಲ್ಲೇನು ? ಪೇಪರಿನವರು ಏನು ಸುಳ್ಳೆ ಪಳ್ಳೆ ಹುಟ್ಟಿಸಿಗೊಂಡು ಬರೀತಾರೇನು ?

ಗಣೇಶ:— ಇರಬಹುದು. ಅಲ್ಲಿ ಅವರು ಮಾಡಿದ್ದು ಖರೇ ಇದ್ರೂ ಇರಬಹುದು. ಆದ್ರೆ ತಲಿಕೆಟ್ಟವರು ಮಾಡಿದ್ರು ಅಂತ.....

ಯಶೋದಾ:— ಅನ್ರಲಾ ನಂದೂ ತಲಿ ಕೆಟ್ಟದ ಅಂತ. ಅನ್ನೂ ಹಕ್ಕು ನಿಮಗದ, ಚಲಾಯಿಸ್ರಿ. ಗಂಡ ಅಂದ್ರ ದೇವ್ರು ಅಂತ ತಿಳಕೊಂಡು ನಾವು ಸುಮ್ಮಗಿರ್ತೀವಿ ಅಂತ ನೀವು ನಡಸ್ತೀರಿ. ಆದ್ರೆ ಅತ್ತೀ ಕಾಲದ್ದಾಂಗ ಸೊಸಿ ಕಾಲಾನೂ ಬರ್‍ತದ ತಿಳೀತೇನು? ಈಗ ನಮ್ಮ ಸುಧಾ ಆದಾಳಲ್ಲ. ಇಂಥವ್ರೆ ಹೆಚ್ಚಾಗಲಿಕ್ಕೆ ಹತ್ಯಾರ. ಇನ್ನೊಂದು ಹತ್ತಿಪ್ಪತ್ತು ವರ್ಷದಾಗ ಇಂಥ ಮಾತು, ಮನಸೀಗ ಬಂದದ್ದೆಲ್ಲ ಹೆಂಡ್ತೀಗ ಆಡೂ ಧೈರ್ಯ ಗಂಡಸರೀಗೆ ಬಂದೀತೇನು? ಅನ್ನೂದು ಹಾಂಗಿರಲಿ, ಅಂದದ್ದ ಅನಸಿಗೊಂಡು, ಹೊರಗ ದುಡಿಯೂದಲ್ಲದೆ ಮನೀ ಒಳಗೆ ಅಡಗೀ ಮಾಡೂದು, ಮಕ್ಕಳ ಅಡಿಸೂದು ಎಲ್ಲಾ ಮಾಡ್ಬೇಕಾದೀತು. ಆಗ ಬರ್‍ತದ ನಿಮಗೆ ಬುದ್ಧಿ!

ಗಣೇಶ:— ಮುಂದಿಂದ ಮುಂದೆ. ಅದಕೆ ಈಗ ಯಾಕೆ ತಲೀ ಕೆಡಿಸಿಕೋಬೇಕು. ಸಣ್ಣ ಹುಡುಗರ ಹಾಂಗ ಹಟ ಮಾಡಬ್ಯಾಡ. ಏಳು, ಮೊದಲು ಊಟಾ ಮಾಡು. ಆ ಮ್ಯಾಲೆ ನೋಡೋಣಂತ.

ಯಶೋದಾ:— ಅದೇನಿಲ್ಲ. ನನ್ನ ಮಾತಿಗೆ ಹೂಂ ಅಂತ ನೀವಂದ ಮಾತ್ರ ನಾ ಊಟಾ ಮಾಡವಾಕಿ. ಇಲ್ಲಾಂದ್ರ....

ಸುಧಾ:— ಅಪ್ಪಾ, ಈಗ ಏನ ಮಾಡ್ತಿ ? ಅವ್ವ ಅನ್ನಸತ್ಯಾಗ್ರಹ ಮಾಡಿದ್ಳು ಅಂದ್ರ.....

ಗೋವಿಂದ:— (ಬಂದು) ನಾ ಒಂದು ಉಪಾಯ ಹೇಳಲ್ಯಾ? ಈ ಪತಿಪೂಜಾ ಅನ್ನೂದು ಒಂದು ದೇವರ ಪೂಜಾ ಇದ್ದಾಂಗ ಅಲ್ಲೇನವ್ವಾ?

ಯಶೋದಾ:— ಹೌದು.

ಗೋವಿಂದ:— ಅಂದಮ್ಯಾಲೆ, ಹ್ಯಾಂಗ ದೇವರ ಮೂರ್ತಿ ಇಟಗೊಂಡು ಪೂಜಾ ಮಾಡ್ತೀಯೋ ಹಾಂಗೆ ಅಪ್ಪನ ಫೋಟೊ ಇಟಗೊಂಡು ಪೂಜಾ ಮಾಡಿಬಿಡಲಾ. ಹಾವೂ ಸಾಯಲಿಲ್ಲ, ಕೋಲೂ ಮುರೀಲಿಲ್ಲ ಅಂದ್ಹಾಂಗ, ನಿನ್ನ ಪೂಜಾನೂ ಆಗ್ತದ, ಅಪ್ಪನ ಮರ್ಯಾದೀನೂ ಉಳೀತದ.

ಗಣೇಶ:— ಭೇಷ್. ಹೌದೋ ಮಗನೆ!

ಯಶೋದಾ:— ಭೇಷ ಏನ ತಲಿ? ಪ್ರತ್ಯಕ್ಷ ನೀವು ಎದರಿದ್ದಾಗ ನಾ ಫೋಟೋದ ಪೂಜಾ ಮಾಡ್ಲಿಕ್ಕೆ ಒಲ್ಲೆ. ಏ ಗೋವ್ಯಾ, ಕಾಲೇಜನಾಗ ಕಲೀತೇನಿ ಅಂತ ಭಾಳ ಶಾಣ್ಯಾ ಆಗಿ ಹೋದಿಯೇನು? ನನಗೆ ಬುದ್ಧಿ ಹೇಳಲಿಕ್ಕೆ ಬಂದಾನ! ಹೋಗ್ರಿ ನೀವು ಮಲಕೋರಿ. ನಾ ಏನಾರ ಹಾಳ ಬಾವಿ ಬಿದ್ದಕೊಳ್ಳೆವಲ್ಲೆನ್ಯಾಕ. ದೇವರು ಬರೆದು ಕಳಿಸಿದ್ದು ಆಗ್ತದ. ನಿಮಗೆ ಯಾಕೆ ಚಿಂತಿ? ಹೆಂಡ್ತಿ ಸತ್ತರೇನು ಬಿಟ್ರೇನು ನಿಮಗೆ? ಯಾವ ಜನ್ಮದ ಪಾಪಾನೋ, ಹೆಂಗಸಾಗಿ ಹುಟ್ಟಿ ನಿಮ್ಮ ಹೆಂಡ್ತಿಯಾಗೇನಿ. ಅನುಭವಿಸಬೇಕು ಬಂದದ್ದು. ಈವತ್ತಿನ ಮಾತ ಯಾಕೆ? ಎಂದು ನೀವು ನಾ ಅಂದ ಮಾತ ಕೇಳೀರಿ? ನಡಸಿಕೊಟ್ಟೀರಿ ? ನಾ ಹೇಳಿದ್ದು ನಿಮ್ಮ ಮನಸೀಗ ಬಂದಾಗ, ಅದೂ ನನ್ನ ಮೇಲೆ ದೊಡ್ಡ ಉಪಕಾರ ಮಾಡವ್ರ ಹಾಂಗ ಧಿಮಾಕು ಮಾಡಿ ಮಾಡೀರಿ ಅಷ್ಟೆ. ನನಗೆ ಗೊತ್ತಿಲ್ಲೇನು? ಮರ್ಯಾದಿ ಹೋಗ್ತದಂತ. ನಿಮಗೆ ಇದ್ದ ಮರ್ಯಾದಿ ನಿಮ್ಮ ಹೆಂಡ್ತೀಗಿಲ್ಲೇನು? ಪುರೋಹಿತರಿಗೆ ಹೇಳಿ ಸಾಮಾನು ಸುದ್ದಾ ತರ್ಲಿಕ್ಕೆ ಹೇಳೀನಿ. ಈಗ ಇಲ್ಲಾಂತಂದ್ರ ....

ಗಣೇಶ:— ಅದಕೇನು ಏನಾದ್ರ ಹೇಳ್ಲಿಕ್ಕೆ ಬಂದೀತು ಬಿಡು. ನಾನೂ ತುಸಾ ವಿಚಾರಾ ಮಾಡ್ತೇನಿ. ಅಲ್ಲೆ, ನಿನ್ನ ಮಾತು ನಾ ನಡಸಿಲ್ಲ ಅಂತ ಸಹಜ ಅಂದಬಿಟ್ಟೆಯಲ್ಲ. ಬಳಿ ಬೇಕಂದಾಗ ಮಾಡಿಸಿಕೊಟ್ಟಿಲ್ಲ ? ಸರ ಬೇಕಂದಾಗ ಮಾಡಿಸಿ ಕೊಟ್ಟಿಲ್ಲ? ಪೂಜಾ ಮಾಡಿಸತೀದಿ ಅಂದಿ, ಮಾಡಿಸಿಕೊಟ್ಟಿಲ್ಲ? ಅಂ! ಮತ್ತೆ ನಿನ್ನ ಮೈಮೇಲಿನ ದಾಗೀನೆ . . . .

ಯಶೋದಾ:— ಸಾಕು ಬಿಡ್ರಿ. ನೀವಂದ್ಹಾಂಗ ನೀವು ಮಾಡದೆ ಇದ್ದದ್ದರ ಯಾದಿ ನಾನೂ ಬೇಕಾದಷ್ಟು ಹೇಳ್ಯೇನು ! ಬಳಿ, ಸರ ಮಾಡಿಸ್ಯಾರಂತ. ಮಾಡಿಸಿದ್ರಿ ಯಾಕೆ ? ಪ್ರಸಂಗ ಬಂದರ ಉಪಯೋಗಕ್ಕ ಬರ್‍ತದ.ಬಂದ ಹಣ ಕೈಯಾಗ ಇರೂದಿಲ್ಲ, ಹೀಂಗಾದ್ರೂ ಕೈಯಾಗ ನಾಕ ಬಿಲ್ಲಿ ಇರಲಿ ಅಂತ ಹೇಳಿ ಮಾಡಿಸಿದ್ದು ನೆನಪದೇನು? ಒಳ್ಳೆ ಉಪಕಾರ ಮಾಡವರ್ಹಾಂಗ ಆ ಮಾತು ಅಂದು ಹಂಗಸಬ್ಯಾಡ್ರಿ. ಹೋಗಿ ಮಲಕೋರಿ, ನೀವನ್ನೂದು ಬ್ಯಾಡ. ಪೂಜಾ ಆಗೂದೂ ಬ್ಯಾಡ. ನಾ ಪಡಕೊಂಡ ಬಂದದ್ದೇ ಅಷ್ಟು. ಇಷ್ಟು ವರ್ಷ ನೀವೇ ಗತಿ ಅಂತ ನಿಮ್ಮ ಸೇವಾ ಮಾಡಿದ್ದಕ್ಕ ಸಾರ್ಥಕ ಆತು! ಹೆಣ್ಣಿನ ಜನ್ಮದ ಹಣೇಬರಾನೆ ಇಷ್ಟು. ಒಂದು ಮನಸಿನ್ಹಾಂಗ ನಡೀವ್ಹಾಂಗಿಲ್ಲ. ಒಂದ ಮಾಡೇನು ಅಂದ್ರ ಸಾಧ್ಯ

ಇಲ್ಲ. ದೇವರು, ಮುಂದಿನ ಜನ್ಮಕ್ಕಾದರೂ ಈ ಹೆಣ್ಣ ಜನ್ಮಾ ತಪ್ಪಿಸಲಿ ಅಂತ ಏನಾನು ಪುಣ್ಯಾಗಳಿಸಿಕೊಳ್ಳೋಣ ಅಂದ್ರ ಅದಕೂ ನಿಮ್ಮ— (ಅಳತೊಡಗುವಳು)

ಗಣೇಶ.— ಎಲಾ, ಅಳಲಿಕ್ಕೇನಾತು? ಮಾತೆತ್ತಿದರೆ ಕಣ್ಣೀರು ಸುರಸೂದು ಒಂದು ನಿಮಗೆ ಗೊತ್ತದ. ಅದಕೇ ಸಂಸಾರ ಅಂದ್ರ ತಾಪತ್ರಯ ಅಂತ.....

ಸುಧಾ:— ಅಪ್ಪಾ, ತಾಪತ್ರಯ ಗಂಡಸರೀಗೆ ಮಾತ್ರ ಇರತದೇನು? ಅವರೀಗೆ ಇರೂ ಮೂರೂ ತಾಪ ಹೆಂಗಸರಿಗೂ ಇರೂದಿಲ್ಲೇನು? ಮತ್ತೆ ಹಾಂಗ ಕೇಳಿದ್ರ ಗಂಡಂದಿರ ಕಾಟ ಅನ್ನೂ ನಾಲ್ಕನೆ ತಾಪಾನೂ ಅವರೀಗೆ ಇರ್ತದ.

ಯಶೋದಾ:— ಹೀಂಗ ಮಾತಾಡೇ ನನ್ನ ಜಾಣಿ!

ಗಣೇಶ:— ಅಂದ್ರೆ, ನಾ ನಿನ್ನ ಅವ್ವನ ಗೋಳುಹೊಯ್ಕೊತೇನೆ ಅಂತ ನಿನ್ನ ಅರ್ಥ ಏನೇ ಸುಧಾ?

ಯಶೋದಾ:— ಅದನ್ನ ಆಕಿ ಯಾಕೆ ಹೇಳ್ಬೇಕು? ಅನುಭವಸಿದಾಕಿ ನಾ ಅದೇನಲ್ಲ ಇಲ್ಲಿ ಹೇಳಲಿಕ್ಕೆ! ನಾ ಕೇಳೂದೆ ತಡ, ಹೂಂ ಅಂತ ಯಾವದಕ್ಕೆ ನೀವಂದೀರಿ? ಒಂದು ಕೆಲಸ ಮಾಡಸಕೊಬೇಕಾದರೆ ಅತ್ತು ಕರೆದು ಮಾಡಿಸಿಕೊಬೇಕಾಗ್ತದ.

ಗಣೇಶ:— ಆದಕೇ ಈಗ ಅಳಲಿಕ್ಕೆ ಹತ್ತೀದೇನು?

ಯಶೋದಾ:— ನೋಡ್ರಿ. ಹೋಗಿ ಥಣ್ಣಗೆ ಮಲಕೋರಿ. ನಾ ಬೇಕಾದ್ರೆ ಅಳ್ತೇನಿ, ಸಾಕಾದ್ರೆ ಬಿಡ್ತೇನಿ. ನಿಮಗೆ ಯಾಕೆ ಅದರ ಸುಖಾದುಃಖಾ. ನಾ ಅತ್ತೆ ಅಂತ ನೀವು ಒಪ್ಪೂದು ಬ್ಯಾಡ. ನನ್ನ ನಶೀಬದಾಗ ಇದ್ರೆ ಅದು ಆಗೇ ಆಗ್ತದ. ಹರಿಬ್ರಹ್ಮ ಬ್ಯಾಡಾಂದ್ರೂ ನಿಲ್ಲೂದಿಲ್ಲ ತಿಳೀತೇನು?

ಗಣೇಶ:— ಹಾಂಗಾದ್ರೆ ಸುಸೂತ್ರ ಊಟಾ ಮಾಡಿಬಿಡಲ್ಲ. ಸುಳ್ಳೆ ಮಾತಿನಾಗ ಅಡಗಿ ಆರಿ ....

ಯಶೋದಾ:— ನನಗೆ ಆರಿದ ಅಡಗಿ ಉಂಡ ರೂಢಿ ಅದ ಬಿಸಿಬಿಸಿ ಅನ್ನೂದೆಲ್ಲಾ ಗಂಡಸರೀಗೆ, ಪತಿದೇವರೀಗೆ. ಕಷ್ಟಪಟ್ಟು ಮಾಡಿದ್ರೂ ಗಂಡ ಉಂಡ ಮೇಲೆ ಉಣ್ಣು ಹೆಂಡ್ತೀಗೆ ಬಿಸಿ ಯೆಲ್ಲಿಂದ ಬಂತು? ಮಾತಿನ ಬಿಸೀನೇ ಬಿಸಿ.

ಗಣೇಶ:— ಅಲ್ಲೆ, ಅದೆಲ್ಲಾ ಇರ್ಲಿ· ಮೊದಲು ಊಟಾ ಮಾಡಿಬಿಡು. ಹೊಟ್ಟೆ ಹಸದದ, ಏನೇನಾರ ಮಾತಾಡ್ತಿ ತೀರ್ತು. ಅಲ್ಲಾ, ಮಾತಿಗೂ ಕೃತಿಗೂ ಏನಾರ ಸಂಬಂಧ ಇರ್ಬೇಕೊ ಬ್ಯಾಡೊ? ಪುಣ್ಯಾ ಸಿಗಬೇಕು ಅಂತ ನನ್ನ ಪೂಜಾ ಮಾಡ್ಬೇಕು ಅಂತೀದಿ. ಆದರೆ ಈಗ ನನ್ನ ಗೂಡ ತಿರುಗಿ ವಾದಿಸಿ ಪಾಪ ಕಟಿಕೋತೀದಿ. ಏನನ್ನಬೇಕು ಇದಕ್ಕೆ?

ಯಶೋದಾ:— ಅಂದ್ರೆ ಹೆಂಡತಿ ಅನ್ನುವಾಕಿ ಗಂಡನ ಗೂಡ ಮಾತೇ ಆಡ್ಬಾರದು ಅಂತೀರೇನು? ಛಲೋದು, ಕೆಟ್ಟದ್ದು ಅಂತ ಹೇಳ್ಬಾರ್ದೇನು?

ಸುಧಾ:— ಹೌದಪ್ಪಾ, ಕಾರ್ಯೇಷು ಮಂತ್ರೀ ಅಂತ ಶ್ಲೋಕಾನೆ ಅದಲ್ಲ. ಕಾರ್ಯ ಮಾಡುವಾಗ ಹೆಂಡತಿ ಗಂಡಗ ಸಲಹೆ ಕೊಡಬೇಕಾಗ್ತದ. ಗಂಡ ತಪ್ಪ ಮಾಡತಿದ್ರೆ ಹಾಂಗಲ್ಲ ಅಂತ ತಿದ್ದಬೇಕಾಗ್ತದ. ಇಂಥ ಸಂದರ್ಭದೊಳಗೆ ಏನಾದರೂ ಅಂದ್ರ ಅದು ವಾದ, ಎದುರುತ್ತರ ಅಂತ ತಿಳಕೊಳ್ಳಬಾರ್ದು.

ಗೋವಿಂದ:— ನೋಡಿದೆಯೇನಪ್ಪಾ. ಸುಧಾ ಎಷ್ಟಾದರೂ ಹೆಣ್ಣು. Chips of the same block. ಮೊದಲ ಅವ್ವನ ಮಾತೀಗೆ ನಕ್ಕವಳು ಈಗ ಹ್ಯಾಂಗ ಅವ್ವನ ಪಕ್ಷ ಹಿಡಿದಳು!

ಸುಧಾ:— ಮತ್ತೆ ಚಿಪ್ಸ್ ಆಫ್ ದಿ ಸೇಮ ಬ್ಲಾಕ್ ಅಂತ ನೀ ಅಪ್ಪನ ಪಕ್ಷ ಹಿಡಿಯಲಾ, ಯಾರು ಬ್ಯಾಡಂದ್ರು? ತಾಯಿ ಅನ್ನೂ ಭಾವನಾ ನಿನಗೆ ಇದ್ರೆ, ಮಾತೃದೇವೋ ಭವ ಅನ್ನೂ ವಿಚಾರ ಇದ್ರೆ, ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ಅನ್ನೂ ತಿಳಿವಳಿಕೆ ಇದ್ರೆ ನೀ ಹೀಂಗ ಯಾಕೆ ಅವ್ವನ್ನ ನನ್ನ ಚ್ಯಾಷ್ಟಿ ಮಾಡ್ತಿದ್ದಿ?

ಗಣೇಶ:— ಎಲಾಎಲಾ, ನಿಂದಿರಿಸರೋ ಏನಿದು ಅಂತೇನಿ! ನಮ್ಮಿಬ್ಬರ ಮಾತು ಮೂಲೀಗೊತ್ತಿ ನೀವಿಬ್ರೂ ಜಗಳಾಡ್ಲಿಕ್ಕೆ ಶುರು ಮಾಡಿ ಬಿಟ್ರಲ್ಲಾ.

ಗೋವಿಂದ:— ಈ ವರ್ಷ ಸಂಸ್ಕೃತದಾಗ ಫಸ್ಟ ಬಂದೇನಿ ಅನ್ನೂ ಮಾತನ್ನ ನೆನಪೀಗೆ ತಂದುಕೊಡಲಿಕ್ಕೆ ಹತ್ಯಾಳ ಸುಧಾ. ಬಾಯಿಪಾಠ ಮಾಡಿದ ಎಲ್ಲ ಸಂಸ್ಕೃತ ವಾಕ್ಯ ಅನ್ನಲೀಕೆ ಹತ್ತ್ಯಾಳಂತ ಕಾಣಸ್ತದ. ತುಸಾ ತಡಿ, ನೋಡೋಣ ಇನ್ನೂ ಎಷ್ಟು ....

ಸುಧಾ:— ಅವ್ವಾ, ನೀ ಸುಮ್ಮಗ ಯಾಕೆ ಜೀವಕ್ಕೆ ತ್ರಾಸು ಮಾಡಿಕೋತೀದಿ. ಉಣ್ಣು. ಗಂಡಸರೆಲ್ಲಾ ಅಷ್ಟೆ. ನೀ ಉಪವಾಸಾ ಮಾಡಿದ್ರೂ ಅಷ್ಟೆ ಉಂಡರೂ ಅಷ್ಟೆ, ತನಗೆ ಬೇಕಾಗಿತ್ತು ಅಂದರೆ ಮಾತ್ರ ಅಪ್ಪ ಹೂಂ ಅಂತಾನ ಅಂತ ನೀನೇ ಹೇಳತೀದಿ. ಮತ್ತೆ....

ಯಶೋದಾ:— ಅದು ಖರೇನೇ. ಅದು ಗೊತ್ತದ ನನಗೆ. ಆದರೆ ಮಳ್ಳ ಜೀವ. ಏನೋ ಶೀರಿ, ವಸ್ತ್ರ, ಒಡವಿ ಅನ್ನೂ ಮಾತಾಗಿದ್ರ ಸರಿ, ನಶೀಬಿಲ್ಲಾ ಅಂತ ನಾಕ ತೊಟ್ಟು ಕಣ್ಣೀರು ಹಾಕಿ ಸುಮ್ಮನಿರಬಹುದಿತ್ತು. ಆದರೆ ಇದು ದೇವಕಾರ್ಯ. ಸಂಕಲ್ಪ ಮಾಡಿಕೊಂಡು ಮಾಡದಿದ್ರ ಪಾಪ ಬರ್ತದ ನಮ್ಮವ್ವಾ. ಸತ್ಯನಾರಾಯಣದೇವರ ಕಥಿಯಾಗ ಕೇಳಿದೀಯೋ ಇಲ್ಲೊ, ವ್ರತಾ ಮಾಡ್ತೇನಿ ಅಂತ ಹರಕಿ ಮಾಡಿಕೊಂಡು ಆ ಮ್ಯಾಲೆ ಮಾಡದಿದ್ರ ಏನೇನು ಕಷ್ಟ ಕೊಡ್ತಾನ ದೇವ್ರು ಅಂತ?

ಗಣೇಶ:— ಅಂದ್ರ ಈಗ ನೀ ನನ್ನ ಪೂಜಾ ಮಾಡ್ತೇನಿ ಅಂತ ಯಾವ ದೇವ್ರೀಗೆ ಹರಕೆ ಹೊತ್ತೀದಿ?

ಯಶೋದಾ:— ಯಾವ ದೇವರೀಗಾದ್ರೂ ಇರವಲ್ಲದ್ಯಾಕ. ಪೂಜಾ ಮಾಡಿಸಗೊಡದಿದ್ರ ಫಲಾ ನೀವೇ ಅನಭವಸ್ತೀರಿ.

ಗಣೇಶ:— ಹೌದೋ ಅಲ್ಲೋ. ಸುಮ್ಮನಿದ್ದು ಬಿಡು. ಅನುಭವಸಲಿಕ್ಕೆ ನಾ ಘಟ್ಟಿ ಅದೇನಿ.

ಯಶೋದಾ:— ನೀವಿದ್ದೀರಿ, ಆದ್ರೆ ನಾವಿಲ್ಲ. ನಿಮಗೆ ಕಷ್ಟ ಬಂದ್ರ ನಮಗೆ ಬಂದ್ಹಾಂಗಲ್ಲೇನು? ಅದೇನಾಗೂದಿಲ್ಲ. ನಾ ಈ ಪೂಜಾ ಮಾಡವ್ಹಾಕೀನೇ.

ಸುಧಾ:— ಹೌದು.

ಗಣೇಶ:— ಹ್ಯಾಂಗ ಮಾಡ್ತಿಯೊ ನಾ ನೋಡ್ತೇನಿ!

ಗೋವಿಂದ:— ಭೇಷ್.

ಯಶೋದಾ:— ಹೀಂಗೇನು? ನಾನೂ ನೋಡ್ತೇನಿ ಯಾಕೆ ಆಗೂದಿಲ್ಲಾಂತ.

ಗಣೇಶ:— ಏನ ಮಾಡ್ತಿ ಮಾಡು. ಆಗಿ ಹೋಗ್ಲಿ.

ಗೋವಿಂದ:— ಹೌದು. ಗಂಡ ಹೆಚ್ಚೊ, ಹೆಂಡ್ತಿ ಹೆಚ್ಚೊ ಆಗಿ ಹೋಗ್ಲಿ!

ಸುಧಾ:— ಹೌದವ್ವಾ, ಹೆದರಬ್ಯಾಡ ಆಗಿ ಹೋಗ್ಲಿ ಅಂದ್ಹಾಂಗ.

ಯಶೋದಾ:— ಏಳು ಸುಧಾ, ನಾನೇ ಸೋತುಬಿಡ್ತೇನಿ. ಸ್ಟೇಶನ್

ತನಕಾ ಬಂದು ನನ್ನ ಗಾಡಿ ಹತ್ತಿಸಿಬಿಡು. ತವರ ಮನೀಗೆಹೋಗಿ ಬಿದ್ದಿರ್ತೇನಿ.

ಗಣೇಶ:— ಓಹೊಹೊ! ಹೆದರಸಬ್ಯಾಡ. ನಾನೇನು ಇಲ್ಲಿ ಉಪಾಸಾ ಬೀಳೂದಿಲ್ಲ.

ಸುಧಾ:— ಅಪ್ಪಾ, ಮತ್ತೆ ಈಗಲೆ ಹೇಳಿದ್ತೇನಿ, ನಾ ಏನ ಅಡಗಿ ಪಡಗಿ ಮಾಡವಾಕಿ ಅಲ್ಲ. ಈ ವರ್ಷ ಆದ್ರೂ ಮೆರಿಟ್ ಸ್ಕಾಲರ್ ಸಿಪ್ ತಗೋಬೇಕು ಅಂತ ನಾ ಅಭ್ಯಾಸ ನಡಸೇನಿ.

ಗೋವಿಂದ:— ಮಾಡದಿದ್ರ ಇಲ್ಲ ಬಿಡು. ಖಾನಾವಳಿ ಎಲ್ಲಾ ಏನು ಇನ್ನೂ ದಿವಾಳಿ ತೆಗದಿಲ್ಲ.

ಗಣೇಶ:— ಹೌದು.

ಸುಧಾ:— (ನಕ್ಕು) ನೀ ಎಲ್ಲಾ ಖಾನಾವಳಿ ಕೂಳ ತಿಂದಿ, ನಾನೂ ತಿಂದೇನು. ಆದರೆ ಅಪ್ಪನ ವಿಚಾರಾನs ಮಾಡಿಲ್ಲ ನೀನು. ಅಂವ ಡಾಯಿಟ್‌ದ ಮನಶಾ.

ಯಶೋದಾ:— ಅಂದ್ರೇನೇ ಸುಧಾ, ಮತ್ತೇನಾಗ್ಯದ ಇವರಿಗೆ?

ಸುಧಾ:— ನೀ ಅಂಜಬೇಡವ್ವಾ. ಡಾಯಿಟ್ ಅಂದ್ರ ಪಥ್ಯ.

ಯಶೋದಾ:— ಅದೇನೆ? ಪಥ್ಯಾ ಮಾಡ್ಲಿಕ್ಕೆ ಏನಾಗ್ಯದ ಧಾಡಿ ಇವರೀಗೆ?

ಸುಧಾ:— ಮತ್ತೆ ಈಗ ಮಾಡ್ತಾ ಇಲ್ಲೇನು? ಸಾರಿಗೆ ಮೆಣಸಿನ ಕಾಯಿ ಬದಲು ಮೆಣಸಿನ ಕಾಳೇ ಹಾಕ್ಬೇಕು. ಹುಣಸಿ ಹಣ್ಣಿನ ಬದಲು ನಿಂಬಿ ರಸಾನೇ ಹಾಕ್ಬೇಕು. ಹಸಿ ಮೆಣಸಿನ ಕಾಯಿ ಗಾಳೀನೂ ಹತ್ತಬಾರ್ದು. ಬದನೀಕಾಯಿ, ತೊಗರಿಬ್ಯಾಳಿ ಅಂದ್ರ ಎಲೀಗೆ ಬೀಳೂ ಮುಂಚೇನೆ ಸಾಕು ಬಿಡು ಅಂತಾನ. ತಾಜಾ ಮಜ್ಜಿಗಿ ಎರಡು ಕಪ್ಪಾದ್ರೂ ದಿನಾ ಬೇಕು. ತುಪ್ಪದ್ದೇ ಒಗ್ಗರಣಿ ಆಗಬೇಕು. ದಿನಕ್ಕೊಂದು ಹೊತ್ತಾದ್ರೂ ತಪ್ಪಲ ಪಲ್ಯ ಆಗ್ಬೇಕು. ಇವೆಲ್ಲ ಮತ್ತೇನಂದಿ ಪಥ್ಯ ಅಲ್ಲೇನು? ಖಾನಾವಳಿಯವರು ಇವ ನೊಬ್ಬನ ಸಲುವಾಗಿ ಇಷ್ಟೆಲ್ಲಾ ನೇಮ ಪಾಲಿಸಿದ್ರೆ ಉಳದಾರೇನು? ನಾಕ ದಿನಾ ಖಾನಾವಳಿ ಊಟ ಉಂಡ್ರೆ – ಅಪ್ಪನ ಅವಸ್ಥೆ ನಾ ಯಾಕ ಹೇಳಲಿ?

ಯಶೋದಾ:— ನಾ ಇದೆಲ್ಲಾ ಯಾಕೊ ಬಾಯಿ ರುಚೀ ಅಂತ....

ಸುಧಾ:— ರುಚಿಯೇನು ಬಂತು ಅದರಾಗ? ಎಣ್ಣಿಯಾಗ ಕರದ ಭಜೀ ರುಚಿ ತುಪ್ಪದಾಗ ಕರದದ್ದಕ್ಕ ಬಂದೀತೇನು? ಮತ್ತೆ ಮೊದ ಲೇನು ಅಪ್ಪ ಎಲ್ಲಾ ತಿಂತಿದ್ದಿಲ್ಲೇನು? ಈಗ ಎರಡು ವರ್ಷಾತು ಈ ನೇಮಾ ಶುರೂ ಮಾಡಿ.

ಯಶೋದಾ:— ಇರಲಿ ಬಿಡು, ಏಳಿನ್ನು. ಲಗೂ ಪತ್ತಲಾ ಬದ ಲಾಸು. ನನಗೇನು ಇದ್ಹಾಂಗ ಹೊರಟಬಿಡ್ತೇನಿ. ನಿನ್ನ ಹೆರಳು, ನಿನ್ನ ಪತ್ತಲಾ, ನಿನ್ನ ಪೌಡರು ಅಂತ ಒಂದು ತಾಸ ಬೇಕು ನಿನಗೆ ತಯಾರಾಗ್ಲಿಕ್ಕೆ. ನಾ ಅಷ್ಟರೊಳಗೆ ನಾಕ ಮನೀಗೆ ಹೋಗಿ ಹೇಳಿ ಬರ್ತೇನಿ.

ಗಣೇಶ:— ಅಂದ್ರೆ?

ಯಶೋದಾ:— ಹೌದು. ನೀವು ಪೂಜಾ ಮಾಡಿಸಿಕೊಳ್ಳಲಿಕ್ಕೆ ಒಪ್ಪಿ ಕೊಳ್ಳೂವರೆಗೂ ನಾ ಏನ ತಿರುಗಿ ಈ ಮನಿಯಾಗ ಕಾಲ ಇಡವಾಕಿ ಅಲ್ಲ. ಎಲ್ಲಾರಿಗೂ ಹೋಗಿ ಬರ್ತೇನಿ ಅಂತ ಹೇಳಿ ಬರ್ತೇನಿ.

ಗಣೇಶ:— ಯಾಕೆ ಅಂತ ಕೇಳಿದರ ಏನ ಹೇಳ್ತಿ? ಗಂಡನ ಕೂಡ ಜಗಳಾಡಿ.....

ಯಶೋದಾ:— ಹೇಳ್ತೇನಿ, ಹೆದರಿಕಿಯೇನು ನನಗೆ? ಪೂಜಾದ್ದ ಕಥಿ ಹೇಳ್ತೇನಿ. ೩೦ ವರ್ಷ ಸಂಸಾರಾ ಮಾಡಿದ ಹೆಂಡತೀ. ಆಕೀದ್ದು ಒಂದಿಚ್ಛಾ ಪೂರೈಸದಿದ್ದ ಗಂಡ ಇದ್ದರೇನು ಬಿಟ್ಟರೇನು ಅಂತ ಹೋಗ್ತೇನಿ ಅಂತೇನಿ.

ಗಣೇಶ:— ಅಲ್ಲೆ, ನೀ ನಾಕ ಮಂದಿ ಹೆಂಗಸರ ಮುಂದ ಈ ಮಾತು ಅಂದಿ ಅಂದ್ರ ನೀ ಊರು ಮುಟ್ಟೂದರೊಳಗಾಗಿ ಈ ಸುದ್ದಿ ಊರು ತುಂಬಾ ಹರಡ್ತದ. ಆಗ ಮರ್ಯಾದಿ ಅನ್ನೂದು....

ಯಶೋದಾ:— ಯಾರ ಮರ್ಯಾದಿ? ಹೋದ್ರ ನಿಮ್ಮದೇ ಹೋಗ್ತದ. ಹಾದೀಲಿ ಹೋಗೂ ಮುಂದ ನಿಮ್ಮನ್ನ ಕಂಡು ಹೆಂಗಸರು ಮೂಗು ಮುರೀತಾರ. ಗಂಡಸರು, "ಎಂಥ ಛಲೋ ಹೆಂಡ್ತಿ ಇದ್ದಳು, ಪಾಪ! ಅವಳೇನೂ ಚಿನ್ನ ಕೇಳಲಿಲ್ಲ, ವಜ್ರ ಕೇಳಲಿಲ್ಲ, ಒಂದಿನಾ ಒಂದಿಷ್ಟು ಪೂಜಾ ಮಾಡ್ತೇನೆ ಅಂದ್ಳು. ಇವ ಹೂಂ ಅನ್ನೂದತ್ತಲಾಗಿರ್ಲಿ, ಅವಳನ್ನ ಬಯ್ದು ಸಾಕೊ ಬೇಕೋ ಮಾಡಿದನಂತ. ಕಾಟಾ ತಡೀ ಲಾರ್ದ ತವರ ಮನೀಗೆ ಹೋದ್ಳು" ಅಂತ ಇದ್ದದ್ದು ಇಲ್ಲದ್ದು ಎಲ್ಲಾ ಹೇಳ್ತಾರ.

ಗೋವಿಂದ:— ಅಪ್ಪಾ, ಹೂಂ ಅಂದಬಿಡಪ್ಪಾ ಅವ್ವನ ಮಾತೀಗೆ. ಇತ್ತಲಾಗ ನಿನಗೆ ಊಟಕ್ಕ ತೊಂದರೆ, ಅತ್ತಲಾಗಿ ಮರ್ಯಾದೀನೂ ಕಳಕೊಳ್ಳು ಪ್ರಸಂಗ.

ಗಣೇಶ:— ಅಂತೂ ಹೆಂಡ್ತೀನ ಮಾಡಿಕೊಂಡ ಮ್ಯಾಲೆ ಮುಗದಾಣ ಹಾಕಿಸಿಕೊಂಡ ಎತ್ತಿನಾಂಗ ಆಗ್ತದ ಗಂಡಸಿನ ಹಣೇಬರ ಅನ್ನೂದಕ್ಕೆ ನಾನೇ ಉದಾಹರಣೆ. ನೋಡಿಕೊ ಗೋವಿಂದ. ಇದರ ಮ್ಯಾಲಿಂದ ಏನ ಪಾಠ ಕಲೀತಿ ಕಲಕೊ. ಏನೇ, ಮಾರಾಯಳೆ, ಊಟಾ ಮಾಡು. ಊರೀಗೆ ಹೋಗೂದು ರದ್ದ ಮಾಡು. ಆಗಿ ಹೋಗ್ಲಿ ಮಂಗಳವಾರ ದಿನ ನನ್ನ ಪೂಜಾ, ಮಂಗಳಾರತಿ! ಆದರೆ ನಾ ನಿನ್ನ ದೇವರಾದ್ರೂ ನಿನಗೆ ಕೈಜೋಡಿಸಿ ಬೇಡಕೋತೇನಿ. ನಿನ್ನ ದಂಪತಿಗಳು, ಮುತ್ತೈದೆಯರು ಬರೂ ಮೊದಲು ನನ್ನ ಪೂಜಾ ಮುಗಿಸಿ ಬಿಡು. ಅವರಿಗೇನೂ ಊಟಾ, ದಕ್ಷಿಣಿ ಸಿಕ್ಕರ ಆತು. ಏನಂತೀನಿ ಇಷ್ಟಾದ್ರೂ ದಯಾ ತೋರಿಸಿ....

ಯಶೋದಾ:— ಹುಂ.

ಗಣೇಶ:— ಗೋವಿಂದಾ, ಹೋಗು ಆಚಾರ್ರನ್ನ ಕರಕೊಂಬಾ. ಹ್ಯಾಂಗಾದ್ರೂ ಈ ಜಗತ್ತಿನೊಳಗೆ ಹೆಂಗಸರ ಕೈಯೇ ಮೇಲಾಗ್ತದ. ಮುಂದಿನ ಜನ್ಮದಾಗ ಹೆಣ್ಣ ಜನ್ಮ ಕೊಡಸೂ ವ್ರತಾ ಯಾವ ದಾದ್ರೂ ಇದ್ರೆ ನಾನು ಮಾಡಿಬಿಡ್ತೇನಿ.

ಯಶೋದಾ:— (ನಕ್ಕು) ಹೌದು. ಕರಕೊಂಬಾ ಆಚಾರ್ರನ್ನ. ಅವರ ಇಚ್ಛಾ ಪೂರ್ಣ ಆಗಲಿ. ನಾನೂ ಆಚಾರ್ರಗೂಡ ಮಂಗಳವಾರದ ಪೂಜಾದ ವ್ಯವಸ್ಥಾದ ಬಗ್ಗೆ ಎಲ್ಲಾ ಮಾತಾಡಿ ಸರಿ ಮಾಡ್ಕೋ ತೇನಿ. ಹೋಗ್ರಿನ್ನು ನೀವು. ಆಚಾರ್ರು ಬರೂತನಕಾ ಮಲಕೋರಿ. ನಾನೂ ಅವರು ಬರೂದರೊಳಗಾಗಿ ಒಂತುತ್ತು ಊಟ ಮಾಡಿ ಕಸ-ಮುಸರಿ ಮುಗಸಿಕೋತೇನಿ. ಏಳ್ರಿನ್ನು ಇಲ್ಲಿಂದ.

(ಧಾರವಾಡ ಆಕಾಶವಾಣಿಯಲ್ಲಿ ಬಿತ್ತರಿಸಲ್ಪಟ್ಟಿದೆ)

ದ್ರಾವಿಡ ಸಂಖ್ಯಾವಾಚಿಗಳ ಸಮಸ್ಯೆ

ಲೇಖಕರು:—
ಡಾ. ವರದರಾಜ ಉಮರ್ಜಿ,
ಎಂ.ಎ., ಪಿಎಚ್.ಡಿ.

ದ್ರಾವಿಡ ಸಂಖ್ಯಾನಾಮಗಳ ಮೂಲವೆಲ್ಲಿ? ಎಂಬ ಕುತೂಹಲಜನಕ ಪ್ರಶ್ನೆ ವಿದ್ವಾಂಸರನ್ನು ಕೆರಳಿಸಿದೆ. ಅದೊಂದು ಸ್ವತಂತ್ರವಾಗಿ ಬೆಳೆದು ಬಂದ ಸಂಖ್ಯಾನಾಮಾವಳಿಯೋ ಅಥವಾ ಇಂಡೋ-ಯುರೋಪಿಯನ್ ಎಂದು ಹೆಸರಿಸಲ್ಪಡುವ ಭಾಷೆಗಳ ಗುಂಪಿನ ಮೂಲದಿಂದಲೇ ಹೊರಟದ್ದೋ? ಮೇಲಿಂದ ಮೇಲೆ ನೋಡಿದರೆ ಅವು ಸ್ವತಂತ್ರವಾದ ಸಂಖ್ಯಾವಾಚಕಗಳಂತೆ ತೋರುತ್ತವೆ. ಅನೇಕ ವಿದ್ವಾಂಸರು ಹಾಗೇ ತೀರ್ಮಾನಿಸಿದ್ದಾರೆ. ದ್ರಾವಿಡ ಭಾಷೆಗಳು ಆರ್ಯ ಭಾಷೆಗಳಿಗಿಂತ ಭಿನ್ನವಾದ ಬೇರೆಯೇ ಬುಡಕಟ್ಟಿನವು ಎಂಬ ತೀರ್ಮಾನಕ್ಕೆ ಈ 'ಸ್ವತಂತ್ರ' ಸಂಖ್ಯಾವಾಚಕಗಳ ಅಸ್ತಿತ್ವವೂ ಒಂದು ಪ್ರಮಾಣವೆಂದು ಗ್ರಹಿಸಲಾಗಿದೆ.

ಆದರೂ ಚಿಕಿತ್ಸಕ ಬುದ್ಧಿಗೆ ಕೆಲ ಸಂಶಯಗಳು ಬಂದೇ ಬರುತ್ತವೆ. ಉದಾಹರಣೆಗೆ ಕನ್ನಡ 'ಒಂದು' ಇದಕ್ಕೂ ಇಂಗ್ಲೀಷ್ 'ವನ್' (one) ಗೂ ಇರುವ ಸಾಮ್ಯ ಎದ್ದು ಕಾಣುತ್ತದೆ. ತಮಿಳಿನಲ್ಲಂತೂ ಅದು 'ಒನ್ಱು' ಎಂದೇ ಆಗುತ್ತದೆ. ಸಂಸ್ಕೃತದ 'ಏಕ' ಕ್ಕೂ ಅದಕ್ಕೂ ಇರುವ ಆಭಾಸಿಕ ಭೇದದ ಸಂಶಯವು-ತೆಲುಗಿನಲ್ಲಿ ಇದೇ ಒಂದು 'ಒಕಟಿ' 'ಒಕ' ಎಂಬ ರೂಪಧರಿಸುವದನ್ನೂ ಗೌಡ ಭಾಷೆಯಾದ ಬಂಗಾಲಿಯಲ್ಲಿ ಅದೇ 'ಏಕಟ' ಎಂದಾಗುವದನ್ನೂ ನೋಡಿದರೆ-ನಿರಸನವಾಗುತ್ತದೆ. ಇನ್ನೊಂದು ಪುರಾತನ ಆರ್ಯ ಭಾಷೆಯಾದ ಲ್ಯಾಟಿನ್ನಿನಲ್ಲಿ ಅದು "ಯುನಿಕ್" ಇತ್ಯಾದಿ ರೂಪಗಳನ್ನು ಧರಿಸುವದೂ ಕಾಣುತ್ತದೆ.

ಇನ್ನೊಂದು ತಟ್ಟನೆ ಸಾಮ್ಯ ಹೊಳೆಯುವ ಸಂಖ್ಯಾವಾಚಿ ಕನ್ನಡದ 'ಎಂಟು'. ತಮಿಳಿನಲ್ಲಿ 'ಎಟ್ಟು' ಎಂದಾಗುವ ಈ ದ್ರಾವಿಡ ಸಂಖ್ಯಾವಾಚಿಗೂ ಸಂಸ್ಕೃತದ 'ಅಷ್ಟ' ಕ್ಕೂ ನಡುವೆ ಇಂಗ್ಲೀಷ್ 'ಏಟ್' (Eight) ನ್ನು ಇಟ್ಟರೆ ಸಾಮ್ಯವು ಸ್ಪಷ್ಟವೇ ಆಗುತ್ತದೆ.

ಈ ಧಾರೆಯಲ್ಲಿ ವಿಚಾರಿಸುತ್ತ ನಾನು ದೀರ್ಘ ಕಾಲ ಪರಿಶೀಲನೆ ನಡೆಸಿದ ಮೇಲೆ ದ್ರಾವಿಡವೆಂದು ಹೇಳಲಾದ ಸಂಖ್ಯಾವಾಚಿಗಳೂ ಆರ್ಯಮೂಲದ ಸಂಖ್ಯಾವಾಚಿಗಳಿಂದಲೇ ಟಿಸಿಲೊಡೆದವೆಂಬ ಖಚಿತಾಭಿಪ್ರಾಯಕ್ಕೆ ಬಂದಿದ್ದೇನೆ. ಕೆಲ ಪ್ರತ್ಯಯಗಳ ಆಗಮದಿಂದಲೂ ಉಚ್ಚಾರ ವಿಕಲ್ಪಗಳಿಂದಲೂ ಈ ಎರಡು ಸಂಖ್ಯಾವಾಚಿ ಶ್ರೇಣಿಗಳಲ್ಲಿ ಸಂಬಂಧವೇ ಇಲ್ಲೇನೋ ಎಂಬಷ್ಟು ಭೇದಗಳು ಬೆಳೆದುಹೋಗಿವೆ. ದ್ರಾವಿಡ ಭಾಷೆಗಳಲ್ಲಿ ಸಂಸ್ಕೃತ ಶಬ್ದಗಳು ಗುರುತಿಸಲಾರದಷ್ಟು ವಿಕಲ್ಪ ಹೊಂದುತ್ತವೆಯೆಂಬುದಕ್ಕೆ ಒಂದು ನಿದರ್ಶನ ತಮಿಳು 'ಆಯಿರ' (ಸಾವಿರ). ಇದು ಸಂಸ್ಕೃತ 'ಸಹಸ್ರ'ದ ರೂಪಾಂತರವೆಂದು ಎಲ್ಲರೂ ಒಪ್ಪಿದ್ದಾರೆ. ಆದರೆ ಜನಸಾಮಾನ್ಯರಿಗೆ ಅದರ ಸುಳಿವೇ ಹತ್ತುವಂತಿಲ್ಲ.

ದ್ರಾವಿಡ ಭಾಷೆಗಳಲ್ಲಿ ಸಂಸ್ಕೃತ ಮತ್ತು ದ್ರಾವಿಡ ಸಂಖ್ಯಾವಾಚಿಗಳನ್ನು ಯಾವುದೇ ಪ್ರತ್ಯವಾಯವಿಲ್ಲದೆ ಉಪಯೋಗಿಸಲಾಗುತ್ತದೆ:

"ನಾಲ್ಕು ವೇದಮುಂ ಮೂಱಂಗಮುಂ ಪದಿನೆಂಟು ಧರ್ಮಶಾಸ್ತ್ರಂಗಳುಂ.... ಅಷ್ಟಮಲಂಗಳುಂ ಎಂಟು ಮದಂಗಳುಂ...."

—(ವಡ್ಡಾರಾಧನೆ).

ಈ ಎರಡು ಗುಂಪುಗಳ ಸಂಖ್ಯಾವಾಚಿಗಳ ರಚನೆಯಲ್ಲಿ ಹಲವು ಸಾಮ್ಯಗಳಿವೆ. ಕೆಲವೊಂದು ವೈಷಮ್ಯಗಳೂ ಇಲ್ಲದಿಲ್ಲ. ಸಂಸ್ಕೃತದ ತೊಂಭತ್ತೊಂಭತ್ತನ್ನು "ನವತಿ ವ" ಎಂದೂ "ನವನವತಿ" ಎಂದೂ ಹೆಸರಿಸಬಹುದು. ಆದರೆ ಅರ್ವಾಚೀನ ಸಂಸ್ಕೃತ ಮತ್ತು ಗೌಡಭಾಷೆಗಳಲ್ಲಿ ಏಕಗಳನ್ನು ದಶಕಗಳಿಗಿಂತ ಮೊದಲು ಇಟ್ಟು ನಿರ್ದೇಶಿಸುವ ರೂಢಿ ಬೆಳೆದುಹೋಯಿತು. ಕನ್ನಡದಲ್ಲಿ ದಶಕಗಳನ್ನು ಮೊದಲು ಹೇಳುವ ಪರಿಪಾಠವಿದೆ. ಆದರೆ ಇದು ದ್ರಾವಿಡ ವೈಶಿಷ್ಟ್ಯವೇ ಎಂದು ಹೇಳಲಾಗದು. ಆರ್ಯ ಭಾಷೆಯಾದ ಇಂಗ್ಲೀಷಿನಲ್ಲಿಯೂ ತೊಂಭತ್ತರೊಂಬತ್ತನ್ನು Nintynine ಎಂದೇ ಹೇಳಲಾಗುತ್ತದೆ.

ಎಲ್ಲಕ್ಕೂ ಹೆಚ್ಚು ಸಾಮ್ಯವು ದಶಕವಾಚಿಗಳಲ್ಲಿ ಕಾಣಿಸುತ್ತದೆ. ಆರ್ಯದ್ರಾವಿಡಗಳೆರಡರಲ್ಲಿಯೂ ದಶಕಗಳನ್ನು ಹತ್ತರ ಪಟ್ಟುಗಳಾಗಿಯೇ ಹೇಳಲಾಗುತ್ತದೆ.

ಹತ್ತು, ಇರ್-ಪತ್ತು, ಮೂ[ರ್]ವತ್ತು, ನಾಲ್-ವತ್ತು...(ಕ); ದಶ, ವಿಂ-ಶತಿ, ತ್ರಿಂ-ಶತಿ, ಚತ್ವಾರಿಂಶತ್... (ಸಂ); ದಸ, ಬೀಸ, ತೀಸ, ಚಾಲೀಸ... (ಹಿಂದಿ); Ten, twe-nty, thir-ty, for-ty..... ಇತ್ಯಾದಿ.

ಎಲ್ಲವುಗಳಲ್ಲಿಯೂ ಹತ್ತರ ಪಟ್ಟುಗಳನ್ನು ಹೇಳುವಾಗ ಎಷ್ಟು ಪಟ್ಟು ಎಂಬದನ್ನು (ಇರ್, ಮೂರ್....; [ದ್]ವಿ, ತ್ರಿ....; twe-, thir.... ಇತ್ಯಾದಿ) ಮೊದಲು ಹೇಳಿ ಮುಂದೆ ದಶಕಾರ್ಥಕ ಶಬ್ದಗಳನ್ನು ಜೋಡಿಸುವ ಸಮಾನ ನಿಯಮ ಕಾಣಿಸುತ್ತದೆ. ಇದು ತೊಂಭತ್ತರ ವರೆಗೆ ಮಾತ್ರವಲ್ಲದೆ ನೂರಕ್ಕೂ ಅನ್ವಯಿಸುತ್ತದೆ. ಸಂಸ್ಕೃತದಲ್ಲಿ 'ದಶಂ—ದಶತಃ' (ಹತ್ತು ಸಾರೆ ಹತ್ತು) ಎಂಬಲ್ಲಿ ಕೊನೆಯ ಭಾಗವಷ್ಟೇ ಉಳಿದು 'ಶತಂ' ಆದಂತೆ ಇಂಗ್ಲೀಷಿನ Hundred ಆದರೂ Taehun Taehun (rate) ಎಂಬುದು ಅಂತ್ಯಶೇಷವಾಗಿ Hundred ಆಯಿತೆಂದು ಗಾಥಿಕ್ ಸಂಖ್ಯಾನಿರುಕ್ತವು ಹೇಳುತ್ತದೆ.

ಹತ್ತರ ಪಟ್ಟುಗಳಲ್ಲಿ ಇಪ್ಪತ್ತು ವಿಶೇಷ ಗಮನಾರ್ಹವಾಗಿದೆ. ಇಂಗ್ಲೀಷಿನಲ್ಲಿ twenty ಆಗುವ ಈ ಸಂಖ್ಯೆಯು ಸಂಸ್ಕೃತದಲ್ಲಿ ದ್ವಿ-ದಶ ಆಗದೆ 'ವಿಂ-ಶತಿ' ಆಗುತ್ತದೆ. 'ದಶತಃ' ಎಂಬುದು 'ಶತ್' 'ಶತಿ' ಎಂದಿಷ್ಟೇ ಉಳಿದಿದೆಯಲ್ಲದೆ 'ದ್ವಿ' (ಎರಡು) ಎಂಬಲ್ಲಿ 'ವಿ' ಮಾತ್ರ ಉಳಿದಿದೆ. ಇಪ್ಪತ್ತು ಗೌಡ ಭಾಷೆಗಳಲ್ಲಿ 'ಬೀಸ' ಆಗುತ್ತದೆ. ಮುಂದೆ ಅದೇ 'ಈಸ್' ಎಂದಿಷ್ಟೇ (ಬಾ-ಈಸ) ಆಗುತ್ತದೆ.

ಇದನ್ನು ಇಷ್ಟು ವಿಶ್ಲೇಷಿಸುವ ಕಾರಣವೇನೆಂದರೆ ಇದು ದ್ರಾವಿಡ ಇರ್ (ಎರಡು) ಕ್ಕೆ ಕೀಲಿಕೈಯಂತಿದೆ. ದ್ರಾವಿಡ 'ಇರ್-ಪತ್ತು' ಬೇರೇನೂ ಆಗಿರದೆ 'ವಿಂ-ಶತ್' ಇದರ ರೂಪಾಂತರವೇ ಆಗಿದೆ. ಸಂಸ್ಕೃತ 'ದ್ವಿರ್' ನಲ್ಲಿ ಹಿಂದಿನ ದಕಾರ ಲೋಪವು (ಸಂಸ್ಕೃತಕ್ಕೇ) ಸಹಜವಾಗಿದ್ದು ಉಳಿದ 'ಇರ್' ಎಂಬುದೇ ದ್ರಾವಿಡ 'ಎರಡು' ಇದರ ಮೂಲವಾಗಿದೆ.

ಇನ್ನು ದ್ರಾವಿಡ ಅಂಕೆಗಳನ್ನು ಒಂದೊಂದಾಗಿ ವಿಚಾರಿಸೋಣ:—

ಒಂದು

ಕನ್ನಡ-ಒಂದು, ತಮಿಳು-ಒನ್ಱು, ಮಲೆಯಾಳಿ-ಒನ್ನು, ತೆಲುಗು-ಒಕ, ಒಕಡು, ಒಕಟಿ, ಒಣ್ಡಿ, ತುಳು-ಒಂಜಿ.

ಈ ದ್ರಾವಿಡ ಸಂಖ್ಯೆಗೆ 'ಒನ್' ಎಂಬುದು ಮೂಲವಾಗಿದ್ದು 'ದು' ಇತ್ಯಾದಿಗಳು ಪ್ರತ್ಯಯಗಳಾಗಿವೆ. ಈ ಲೇಖದ ಆರಂಭದಲ್ಲಿ ಹೇಳಿದಂತೆ ಇದಕ್ಕೆ ಒಕ, ಏಕ, ಏಕಟ ಇತ್ಯಾದಿಯಾಗಿ ಗೌಡ ಭಾಷೆಗಳಲ್ಲಲ್ಲದೆ ಯೌರೋಪ್ಯಾರ್ಯ ಭಾಷೆಗಳಲ್ಲಿಯೂ ಸಾಮ್ಯವಿದೆ. ಉದಾ:— ಗ್ರೀಕ್-aiva, ಲ್ಯಾಟಿನ್-oino,-un ಇತ್ಯಾದಿ. ಸಂಸ್ಕೃತ 'ಏಕ'ಕ್ಕೆ ಕೂಡ 'ಒಇಕ' (oika) ವೇ ಮೂಲವೆಂದು ಹೇಳುವರು.

ಈ ಸಾಮ್ಯವು ಕಾಲ್ಡ್‌ವೆಲ್ಲರಿಗೆ ಗೋಚರವಾಗಿದ್ದರೂ ಅವರು ದ್ರಾವಿಡ-ಯೌರೋಪ್ಯ ಸಾಮ್ಯ

ವನ್ನು ನಿರಾಕರಿಸಿ ಸೀಥಿಯನ್ ಸಾಮ್ಯವನ್ನು ಆಶ್ರಯಿಸಿದ್ದಾರೆ. ಸಂಖ್ಯಾವಾಚಕ 'ಒಂದು' ಎಂಬುದು ಸೀಥಿಯನ್ voteak, og, odgy ಇತ್ಯಾದಿಗಳಿಗೂ ಲ್ಯಾಪ್ ಭಾಷೆಯ okta ಕ್ಕೂ ಸಂಬಂಧಿಸಿದ್ದೆಂದು ಹೇಳಿ ಅವರು ಒಕ ಮತ್ತು ಏಕಕ್ಕೆ ಸಾಮ್ಯ ಕಾಣಿಸುತ್ತಿದ್ದರೆ ಸಂಸ್ಕೃತ, ದ್ರಾವಿಡ ಮತ್ತು ಸೀಥಿಯನ್ ಶ್ರೇಣಿಗಳು ಮೂರೂ ಯಾವುದೋ ಅನಾದಿ ಭಾಷೆಗೆ ಸಂಬಂಧಿಸಿರುವುದೇ ಅದಕ್ಕೆ ಕಾರಣವೆಂದು ವಾದಿಸಿದ್ದಾರೆ. ಆದರೆ ಸೀಥಿಯನ್ ಭಾಷೆಗಳು ಇಂಡೋ ಆರ್ಯ ಕುಲಕ್ಕೆ ತೀರ ಸಂಬಂಧವಿಲ್ಲದ ಭಾಷೆಗಳಲ್ಲ ವೆಂದು ಇಲ್ಲಿ ಹೇಳಬೇಕಾಗಿದೆ.

ಎರಡು

ಕ-ಎರಡು, ತ-ಇರಣ್ಡು, ತೆ-ರೆಣ್ಡು, ತು-ರಡ್ಡು.

ಇದರ ಮೂಲ 'ಇರ್', 'ಎರ್' ಎಂದು ತೋರುತ್ತದೆ. ವಿರಜಾಜಿ (a double jemine) ಯಲ್ಲಿ ಇದು 'ವಿರ' ಎಂಬ ರೂಪದಲ್ಲಿಯೂ ಕಾಣಿಸುತ್ತದೆ.

ಕಾಲ್ಡವೆಲ್ಲರು ಇದಕ್ಕೆ ಆರ್ಯ ಭಾಷೆಗಳಲ್ಲಿ ಸಾಮ್ಯವಿಲ್ಲೆನ್ನುತ್ತಾರೆ. ಸೀಥಿಯನ್ ಭಾಷೆಗಳಲ್ಲಿಯೂ ಇಲ್ಲೆಂದು ಅವರೊಪ್ಪುತ್ತಾರೆ. ಬ್ರಾಹುಇ ಇರ್-ಅತ್ ಅನ್ನು ಕನ್ನಡ ಎರಡಕ್ಕೆ ಅವರು ಹೋಲಿಸುತ್ತಾರೆ. ಕಿಟ್ಟೆಲ್ಲರೂ ಗುಬರ್ಟರೂ ಅದು 'ಈರ್' (ಸೀಳು) ಧಾತುವಿನಿಂದ ಹುಟ್ಟಿರಬೇಕೆನ್ನುತ್ತಾರೆ.

ಆದರೆ ಈ ಮೊದಲೇ ಹೇಳಿದಂತೆ ಸಂಸ್ಕೃತ ದ್ವಿಃ ಇದು ಸಂಸ್ಕೃತದಲ್ಲೇ 'ವಿ' (ವಿಂ-ಶತಿ) ಯಾಗುವದುಂಟಲ್ಲದೆ ಗೌಡ ಭಾಷೆಗಳಲ್ಲಿ ವಿ (ವೀಸ್-ಮರಾಠಿ), ಈ (ಬಾ-ಈಸ್-ಹಿಂದಿ) ಇತ್ಯಾದಿ ರೂಪಾಂತರ ಹೊಂದುವದನ್ನು ನೋಡುತ್ತೇವೆ. ಹೀಗೆ 'ಇರ್' ಎಂಬುದು 'ದ್ವಿರ್' ನ ರೂಪಾಂತರವೆಂದು ಸಹಜವಾಗಿ ತಿಳಿಯಬಹುದು.

ಮೂರು

ಕ-ಮೂಱು, ತ-ಮೂನ್ರು, ಮ-ಮೂನ್ನು, ತೆ-ಮುಗುರು, ಮುಗ್ಗುರು, ಮೂಡು, ತು-ಮೂಜಿ.

ಇದಕ್ಕೂ ಸೀಥಿಯನ್ ಸಾಮ್ಯವಿಲ್ಲ. ಬ್ರಾಹುಇಯಲ್ಲಿ 'ಮೂ' ಎಂದಿದೆ ಎಂದು ಕಾಲ್ಡವೆಲ್ಲರು ಹೇಳುತ್ತಾರೆ. 'ಮೂರು' ಎಂಬ ದಾಟುವಿಕೆಯ ಅರ್ಥವುಳ್ಳ ಧಾತುವಿನಿಂದ ಇದು ಹುಟ್ಟಿರಬೇಕೆಂದು ಅವರ ಅಭಿಪ್ರಾಯ. ಸಂಸ್ಕೃತ 'ತ್ರಿ' ಯ ಮೂಲವೂ 'ತೃ' ದಾಟು ಎಂಬರ್ಥದ ಧಾತುವೇ. ಇದು ತೃ-ತುರ್-ಮುರ್ ಎಂದು ಬದಲಾಗಿದೆ. ತ—ನ—ಮ ಪರಿವರ್ತನೆ ಸಹಜವಾದುದು, ಪಂಡಿತಮಾನ್ಯವಾದುದು.

ನಾಲ್ಕು

ಕ-ನಾಲ್ಕು, ತ-ನಾನ್ಗು, ಮ-ನಾಂಗು, ತೆ-ನಾಲುಗು, ತು-ನಾಲ್. ಇದು ನಸ್, ನಲ್, ನಲ, ನಲು, ನಾಕು, ನಾಲುಕು ಎಂಬ ರೂಪಗಳನ್ನೂ ಧರಿಸುವದುಂಟು. 'ನಾಲ್' ಎಂಬುದು ಮೂಲವೆನ್ನಬಹುದು.

ಕಾಲ್ಡವೆಲ್ಲರ ಅಭಿಪ್ರಾಯದಲ್ಲಿ ಈ ಸಂಖ್ಯಾವಾಚಿಗೆ ಆರ್ಯ ಭಾಷೆಗಳಲ್ಲಿ ಸಾಮ್ಯವಿಲ್ಲ. ಒಂದರಿಂದ ಮೂರರ ವರೆಗಿನ ಸಂಖ್ಯಾವಾಚಿಗಳಲ್ಲಿ ದ್ರಾವಿಡಕ್ಕೂ ಬ್ರಾಹುಇ ಭಾಷೆಗೂ ಸಾಮ್ಯವಿದ್ದರೂ ಮುಂದಿನ ಸಂಖ್ಯಾವಾಚಿಗಳೆಲ್ಲ ಬ್ರಾಹುಇಯಲ್ಲಿ ಸಂಸ್ಕೃತ ಸಂಖ್ಯಾವಾಚಿಗಳನ್ನೇ ಹೋಲುತ್ತವೆ. ಫಿನ್ನಿಶ್ urgo ಕ್ಕೆ ಮಾತ್ರ 'ನಾಲ್ಕು' ಹೋಲುತ್ತದೆಯೆಂದು ಅವರ ಹೇಳಿಕೆ. ಆದರೆ ಒಂದರಿಂದ ಮೂರರ ವರೆಗಿನ ಸಂಖ್ಯಾವಾಚಿಗಳು ಕೂಡ ಆರ್ಯ ಮೂಲದವೇ ಎಂದು ಮೇಲೆ ನಾವು ತೋರಿಸಿದ್ದೇವೆ. ಫಿನ್ನಿಶ್ ಭಾಷೆಗಳಾದರೂ ಆರ್ಯ ಪ್ರಭಾವದಿಂದ ಮುಕ್ತವಿಲ್ಲ.

ನಿಜವಾಗಿ ದ್ರಾವಿಡ 'ನಾಲ್', ಸಂಸ್ಕೃತ 'ಚತ್ವಾರ್' ದ ರೂಪಾಂತರವೇ ಆಗಿದೆ. ಚತ್ವಾರ್ ಎಂಬುದು ಹಿಂದಿಯಲ್ಲಿ 'ಚಾರ್' ಎಂದಾಗುತ್ತದೆ. ಅದೇ ಕೆಲ ವೇಳೆ 'ತಾಲ್' ಎಂದೂ ಆಗುತ್ತದೆ. (ಉದಾ :— ಇಕ-ತಾಲೀಸ್-ನಾಲ್ವತ್ತೊಂದು, ತ್ರೈಂ-ತಾಲೀಸ್—ನಲವತ್ತಮೂರು ಇತ್ಯಾದಿ) 'ತಾಲ್' ಕ್ಕೆ ಸದೃಶ ರೂಪಗಳನ್ನು ಪ್ರಾಕೃತ ಭಾಷೆಗಳಲ್ಲಿಯೂ ಕಾಣಬಹುದು. 'ತಾಲ್' ನ ನಂತರದ ಹೆಜ್ಜೆ 'ನಾಲ್'. 'ಕು' ಎಂಬುದು ನಾಮ ಪ್ರತ್ಯಯ, ಅಷ್ಟೇ.

ಐದು

ಕ-ಅಯ್ದು, ಐದು; ತ-ಅಂಜು, ಐನ್ದು, ಮ-ಅಂಜು, ತು-ಐನ್. ಇದಕ್ಕೆ 'ಅಯ್‌ನ್' ಮೂಲವೆಂದು ತೋರುತ್ತದೆ.

ಇದು ಸಂಸ್ಕೃತ 'ಪಂಚನ್' ಕ್ಕೆ ಸಂಬಂಧಪಟ್ಟಿದೆ. "ಪಂಚ"ವು ಲ್ಯಾಟಿನ್‌ನಲ್ಲಿ quinque, ಇಂಗ್ಲೀಷಿನಲ್ಲಿ five ಆಗುತ್ತದೆ. ಗೌಡ ಭಾಷೆಗಳಲ್ಲಿ 'ಪಾಂಚ' ದ ಹ್ರಸ್ವರೂಪವಾಗಿ ಇದೇ 'ಪೈಂ' ಎಂದಾಗುವದುಂಟು. Five, ಪೈಂಗಳಿಗೂ ದ್ರಾವಿಡ 'ಐ' ಗೂ ಇರುವ ಹೋಲಿಕೆ ಸ್ಪಷ್ಟವಿದೆ. ಕಾಲ್ಡವೆಲ್ಲರೂ ಇದನ್ನು ಗಮನಿಸಿದ್ದರೂ ದ್ರಾವಿಡ 'ಐ' ಬೇರೆಯೆಂದು ಸಾಧಿಸಲು ಯತ್ನಿಸಿ ಅದು ಬಹುಶಃ 'ಕೈ' ಯಿಂದ ಹುಟ್ಟಿದೆಯೆಂದು ವಾದಿಸಿದ್ದಾರೆ. 'ಕೈ' ಯ ಐದು ಬೆರಳುಗಳನ್ನು ಅದು ಸೂಚಿಸುತ್ತದೆಂದು ಅವರ ಮತ. ಆದರೆ ಸಂಸ್ಕೃತ 'ಪಂಚ' ಹಾಗೂ ತಮಿಳು ಮಲೆಯಾಳ — ಅಂಜು — ಸಂಬಂಧಿತವಾಗಿವೆಯೆಂಬುದು ಸುಸ್ಪಷ್ಟ. ಇನ್ನು ಐ ರೂಪದ ಬಗ್ಗೆ ಆರ್ಯ ಪೈಂ ಯಲ್ಲಿನ ಪ ಕಾರವು ಹ ಕಾರವಾಗಿ ಆಮೇಲೆ ಹ ಕಾರವು ಲೋಪವಾಗಿ ಐ ಎಂಬ ರೂಪವು ಹುಟ್ಟಿದೆಯೆಂದು ಹೇಳುವದು ಹೆಚ್ಚು ಸಮರ್ಪಕ. ಪ ಕಾರವು ಹ ಕಾರವಾಗಿ ಆಮೇಲೆ ಅದು ಲೋಪವಾದ ಅನೇಕ ಉದಾಹರಣೆಗಳನ್ನು ತೋರಿಸಬಹುದು. ಕೈಯಲ್ಲಿಯ ಕ ಕಾರವು ಹೇಗೆ ಲೋಪವಾಯಿತು ?

ಸಂಸ್ಕೃತ 'ಪಂಚ' (= ೫) ಇಂಗ್ಲೀಷಿನಲ್ಲಿ 'ಫೈವ್' (five) ಮತ್ತು ಗೋಥಿಕ-'ಫೈ'(fiue) ರೂಪವನ್ನು ತಾಳುವಂತೆ ಗೌಡ-ಭಾಷೆಯಲ್ಲಿ 'ಪೈಂ' ರೂಪವನ್ನು ತಾಳಿದೆ. ಮತ್ತು ಅವುಗಳಲ್ಲಿ 'ಐ' ರೂಪವನ್ನು ರೂಪಿಸುವ ಸ್ವರಗಳೂ ಇವೆ. ಪೃಚ್ (ಮಿಲಿತವಾಗು) ಎಂಬ ಧಾತುವಿನಿಂದ ಹುಟ್ಟಿದ ಪಂಚ ಎಂಬ ಪದವು ಕೂಡ ಮಿಲಿತವಾದ ಬೆರಳುಗಳುಳ್ಳ ಕೈಯನ್ನೇ ಸೂಚಿಸುತ್ತದೆಂಬುದು ಗಮನಾರ್ಹವಾಗಿದೆ.

ಆರು

ಕ-ಆಱು, (ಆಱು, ಆರು, ಆರ್, ಆರ್ ಇತ್ಯಾದಿ ಸಹಿತ) ತ, ತೆ, ಮ-ಆಱ್, ತು-ಆಜಿ 'ಆಱ್' ಎಂಬುದು ಮೂಲ.

ಕಾಲ್ಡವೆಲ್ಲರ ಮತದಲ್ಲಿ "ಆರ" ಕ್ಕೆ ಬೇರಾವ ಭಾಷೆಯಲ್ಲಿಯೂ ಸಾಮ್ಯ ದೊರಕುವದಿಲ್ಲ. ದ್ರಾವಿಡ 'ಅರು' ಎಂಬುದು 'ಅರು' (ನೂಲು ಕಡಿ) ಎಂಬರ್ಥದ ಧಾತುವಿನಿಂದ ಹುಟ್ಟಿದೆಯೆಂದು ಅವರ ಊಹೆ.

ಆದರೆ ಇದು ಸಂಸ್ಕೃತ 'ಷಟ್' ನಿಂದಲೇ ಹುಟ್ಟಿದ್ದೆಂದು ಹೇಳಬಹುದು. 'ಸಟ್' ಎಂಬ ಸಂಸ್ಕೃತ ಧಾತುವು ದಾಟಹೋಗು ಎಂಬರ್ಥ ಕೊಡುತ್ತದೆ. ಒಂದು ಕೈಯ ಬೆರಳುಗಳನ್ನೆಣಿಸಿ ಮುಂದಿನದಕ್ಕೆ ದಾಟಿದ ಸಂಖ್ಯೆಯೆಂದು ಅದು 'ಷಟ್' ಎನಿಸುತ್ತದೆ. ಗೌಡ ಭಾಷೆಗಳಲ್ಲಿ ಅದು ಛಃ, ಛೇ, ಸಹಾ ಇತ್ಯಾದಿ ರೂಪಾಂತರ ಹೊಂದುತ್ತದೆ. ಛಬ್ (ಛಬ್ಬೀಸ) ಛತ್ (ಛತ್ತೀಸ) ಇತ್ಯಾದಿ ಪರಿವರ್ತನೆಗಳೂ ಕಾಣಿಸುತ್ತವೆ. ಷಟ್-ಷಷ್, ಸಸ್, ಸರ್-ಹರ್-ಅರ್ ಹೀಗೆ ರೂಪಾಂತರ ಹೊಂದಿ ಅದು 'ಆರು' ಆಗಿದೆ.

ಏಳು

ಕ-ಏಳು, ಏಳ್, ತ, ಮ, ತು-ಏಳು, ತೆ-ಏಡು ಇದು ಎಪ್ಪತ್ತರಲ್ಲಿ 'ಎಪ್' ರೂಪವನ್ನು ಹೊಂದುವದು.

ಇದು ಆರ್ಯ 'ಸಪ್ತ' ಶಬ್ದಕ್ಕೆ ಸಂಬಂಧಿಸಿದೆ. ಲ್ಯಾಟಿನ್ Sept, ಆಂಗ್ಲಸಾಕ್ಸನ್ Seofon, Seofone, ಇಂಗ್ಲೀಷ್ Seven. ಡಚ್ Zeven ಇತ್ಯಾದಿ ರೂಪಾಂತರ ಹೊಂದುವದಲ್ಲದೆ ಗ್ರೀಕಿನಲ್ಲಿ 'ಹೆಪ್ತ' ಎಂದೂ ಆಗುವದು. ದ್ರಾವಿಡ ಏಳು ಬೇರಾವ ಭಾಷೆಯ ಸಂಖ್ಯಾವಾಚಿಯನ್ನು ಹೋಲುವದಿಲ್ಲೆಂದು ಕಾಲ್ಡವೆಲ್ಲರು ಹೇಳಿದರೂ ಸಪ್ತ-ಸೆಪ್ತ-ಹೆಪ್ತ-ಎಪ್ (ಎಪ್ಪತ್ತು) ಎಂದೂ ಸಪ್ತ-ಸೆಪ್ತ-ಸೈತ—ಸೇಟ-ಹೇಟ-ಏಟ (ತೆಲಗು ಏಡು)-ಏಳು ಎಂದೂ ರೂಪಾಂತರ ಹೊಂದುತ್ತ ಬಂದಿದೆ.

ಎಂಟು

ಕ-ಎಂಟು, ಎಣ್; ತ-ಎಟ್ಟು; ತೆ-ಎನಿಮದಿ, ತು-ಎಣ್ಮ. ಇದರಲ್ಲಿ ಎಣ್ ಎಂಬುದು ಮೂಲ.

ಕಾಲ್ಡವೆಲ್ಲರ ಪ್ರಕಾರ ದ್ರಾವಿಡರಿಗೆ ಆ ವರೆಗೆ ಏಳರ ವರೆಗೆ ಮಾತ್ರ ಸಂಖ್ಯೆಗಳು ಗೊತ್ತಿದ್ದು ಈ ಹೊಸ ಸಂಖ್ಯೆಯನ್ನು ಎಣ್ (ಎಣಿಸು) ಎಂದು ಕರೆದರಂತೆ! ಆದರೆ ವಾಸ್ತವಿಕವಾಗಿ, ಎಣ್-ಎಟ್‌ಗಳು ಸಂಸ್ಕೃತ 'ಅಷ್ಟ', ಗೌಡ 'ಆಠ', 'ಅಡ್' (ಅಡತಾಲೀಸ್) ಇತ್ಯಾದಿಗಳಿಗೂ ಲ್ಯಾಟಿನ್ Octo, ಗ್ರೀಕ್ Okto, ಮತ್ತು ಇಂಗ್ಲೀಷ್ Eight ಗಂತೂ ಎಷ್ಟು ಸಮೀಪವಾಗಿವೆಯೆಂದರೆ ಅವು ಒಂದೇ ಮೂಲದವೆಂದು ತಟ್ಟನೆ ಹೊಳೆಯುವದು.

ಒಂಭತ್ತು

ಕ-ಒಮ್ಬತ್ತು, ತ-ಒನ್ಬದು, ತೆ-ತೊಂಬದಿ, ತು-ಒರುಂಬ. ಒಂ+ಪತ್ತು ಎಂಬ ಶಬ್ದಗಳ ಸಂಯೋಗದಿಂದ ಇದು ಆಗಿದೆ.

ಇದಕ್ಕಾದರೂ ಇತರ ಭಾಷೆಗಳಲ್ಲಿ ಸಾಮ್ಯವಿಲ್ಲೆಂದು ಕಾಲ್ಡವೆಲ್ಲರು ಹೇಳಿ ತಮಿಳು 'ಒನ್‌ಬದು' ವಿಗೂ ಗ್ರೀಕ್ 'en-nea'ದ ಪೂರ್ವ ಭಾಗ ಮತ್ತು Ennea ದ ಸಂಸ್ಕೃತ ರೂಪವಾದ 'ನವನ್'ಗೂ ಸಂಬಂಧವಿಲ್ಲೆಂದು ತಿಳಿಸಿದ್ದಾರೆ. ಆದರೆ ಸಂಸ್ಕೃತದ ಊನದಶ [ಏಕೋನದಶ]ದ ಮಾದರಿಯಲ್ಲಿ ಒನ್ (ಊನ) ಪತ್ತು=ಒಂಬತ್ತು ಎಂದಾಗಿದೆ. 'ಊನದಶ'ವು ಸಂಸ್ಕೃತದಲ್ಲಿ ವಿಶೇಷ ಪ್ರಚಲಿತವಿಲ್ಲದಿದ್ದರೂ ಊನವಿಂಶ ಏಕೋನವಿಂಶ ಇತ್ಯಾದಿಗಳು ಪ್ರಚಲಿತವಿರುತ್ತವೆ.

ಹತ್ತು

ಕ-ಪತ್ತು, ಹತ್ತು; ತ, ಮ-ಪತ್ತು (ಪದಿ), ತೆ-ಪದಿ, ತು-ಪತ್ತು. ಇದು ಹದಿ (ಪದಿ), ಪದಿನ್, ಪನ್, ಹನ್ ಇತ್ಯಾದಿ ರೂಪಗಳನ್ನು ಧರಿಸುವದುಂಟು.

ದ್ರಾವಿಡ 'ಪತ್ತು' ಕೂಡ ಇತರ ಭಾಷೆಗಳಲ್ಲಿ ಸಾಮ್ಯವಿಲ್ಲದ್ದೆಂದು ಕಾಲ್ಡವೆಲ್ಲರ ಮತ. ಆದರೆ ಪತ್ತು, ಹತ್ತುಗಳಿಗೆ ಆರ್ಯ ಭಾಷೆಗಳಲ್ಲಿ ಸಾಮ್ಯವಿಲ್ಲೆಂಬುದು ಸರಿಯಲ್ಲ. ಉದಾಹರಣೆಗೆ ಮರಾಠಿ ನೈವದ (ತೊಂಭತ್ತು) ಎಂಬಲ್ಲಿ 'ವದ್' ಎಂಬ ರೂಪ 'ಪತ್' ಎಂಬುದಕ್ಕೆ ಸಮೀಪವರ್ತಿಯಾಗಿದೆ. ವಿಚಾರಿಸಿದರೆ ದ್ರಾವಿಡ ಹತ್ತು, ಪತ್ತುಗಳು ಸಂಸ್ಕೃತ ವಿಂ-ಶತ್, ತ್ರಿಂ-ಶತ್ ಇತ್ಯಾದಿಗಳಲ್ಲಿ ಕಾಣಿಸುವ 'ಶತಿ', 'ಶತ್', 'ಶತ' ಗಳಿಗೆ ಸಂಬಂಧಿಸಿದ್ದಾಗಿದೆ. ಗಾಥಿಕ್ 'ಹನ್' ಕೂಡ ಇದರ ಒಂದು ರೂಪ. ಹತ್ತು, ಪತ್ತುಗಳಲ್ಲಿರುವ ಹದ್, ಹದಿ, ಪದ್, ಪದಿಗಳು ಈ ಹನ್, ವದ್ ಇತ್ಯಾದಿಗಳಿಗೆ ಸಜಾತೀಯವಾಗಿದೆ. ಸಂಸ್ಕೃತ ದಶವು 'ದಸ್', ಅಂದರೆ ತೀರು, ಮುಗಿ ಎಂಬರ್ಥದ ಧಾತುಜನ್ಯವಾಗಿದೆ; ಇಲ್ಲಿಗೆ ಎಣಿಕೆ ತೀರಿತೆಂದು ತಾತ್ಪರ್ಯ ಎಂದು ನಿರುಕ್ತಕಾರನ ಮತ. ಆದರೆ ದಶವೆಂಬುದು ಕೂಡ ಮೂಲ ರೂಪವೆಂದು ತೋರುವದಿಲ್ಲ.

ಶತ್ ಶತಿ ಮುಂತಾದ ರೂಪಗಳು ದಶತ್ [ದಶನ್] ದಶತಿಗಳ ಸಂಕುಚಿತ (Contracted) ರೂಪಗಳಾದರೂ, ದಶನ್ ದಶತ್ ದಶತಿ ಶಬ್ದಗಳು ಕೂಡ ಸಾಮಾಸಿಕ ಪದಗಳೆಂದು ತೋರುವದು. ಹತ್ತು ಎಂಬ ಅರ್ಥವನ್ನು ಸೂಚಿಸುವ Dakan ಎಂಬ ಇಂಡೋ—ಯುರೋಪಿಯನ್ ಶಬ್ದ. Dakan ಎಂಬುದು Dvakan ಎಂಬುದರಿಂದ ಬಂದದ್ದು. Dvakan ದ ಪೂರ್ಣ ರೂಪ Dvakankan (dva—ಎರಡು kankan—ಐದು) ಅಂದರೆ ೨×೫ ಈ ವ್ಯುತ್ಪತ್ತಿಯು ತ್ಯಾಜ್ಯವಾಗದಷ್ಟು ಆಕರ್ಷಣೀಯವಾಗಿದೆಯೆಂದು ವಿದ್ವಾಂಸರ ಮತ. ಪೂರ್ವದಲ್ಲಿ ಕೈಬೆರಳಿನಿಂದ ಅಂಕಿಗಳನ್ನು ಎಣಿಸುತ್ತಿದ್ದು ಒಂದು ಅಯ್ದು ಎರಡು ಅಯ್ದು ಎಂದು ಹೇಳುತ್ತಿದ್ದರೆಂದು ವಿಮರ್ಶಿಸಿಕೊಳ್ಳಬೇಕು. ಸಂಸ್ಕೃತ ದಶನ್ ಶಬ್ದವು ಇಂಡೋಯುರೋಪಿಯನ್ dakan ಶಬ್ದಕ್ಕೆ ಸಮಾನವಾದದ್ದು. ಹಾಗೂ ದಪನ್ (ದ್ವ-ಪಂಚನ್) ಎಂಬುದು ಇಂಡೋಯುರೋಪಿಯನ್ ಕಲ್ಪಿತ Dvakan [dva·kankan] ಶಬ್ದಕ್ಕೆ ಸಮಾನವಾದದ್ದು. ಸಂಸ್ಕೃತ ದಪನ್ [ದ್ವ-ಪಂಚನ್] ಎಂಬುದು ಪ-ಶ ಬದಲಾವಣೆಯೊಂದಿಗೆ ದಶನ್ ರೂಪವನ್ನು ತಾಳಿದೆಯೆಂದು ಹೇಳಬಹುದಾದರೂ ಸಂಸ್ಕೃತ ಪಂಕ್ತಿ [=ದ ಪಂಕ್ತಿ-ದ್ವ-ಪಂಕ್ತಿ=೨×೫] ಪಕ್ತಿ ಅಂದರೆ ಹತ್ತು ಎಂಬಲ್ಲಿ ತನ್ನ ಅವಶೇಷವನ್ನು ಬಿಟ್ಟಿದೆ. ಪಂಕ್ತಿ ಎಂದರೆ ಹತ್ತು ಎಂಬ ಅರ್ಥವನ್ನು ಪಂಕ್ತಿರಥ [=ದಶರಥ] ಎಂಬಲ್ಲಿ ಕಾಣಬಹುದು. ಸಂಖ್ಯಾವಾಚಕಗಳು ಬಹಳ ಬಳಕೆಯ ಶಬ್ದಗಳಾದ್ದರಿಂದ ಅತಿ ಉಪಯೋಗದಿಂದ ಸಂಸ್ಕೃತದ ಪಂಕ್ತಿ ಹಾಗೂ ದಶತ್ ದಶತಿಗಳಲ್ಲಿಯ ದಕಾರವು ಲೋಪಹೊಂದಿ ಸಂಕುಚಿತ ಭಾವವನ್ನು ತಾಳುವದು ಸಹಜನೆಂದು ಹೇಳಬಹುದು. ಪಾಣಿನಿಯು ತನ್ನ ಸೂತ್ರದಲ್ಲಿ (೫-೧-೫೯) ಪಂಕ್ತಿ ವಿಂಶತಿಗಳನ್ನು ಒಂದೇ ಸೂತ್ರದಲ್ಲಿ ಹೆಣೆದಿದ್ದರೂ ಟೀಕಾಕಾರರಿಗೆ—ಅವುಗಳ ಮೂಲದ ಬಗ್ಗೆ ಸುಳುವು ಹತ್ತಿದಂತೆ ಕಾಣುವದಿಲ್ಲ. ಪನ್ (ದಪನ್-ದ್ವಪನ್) ಪತ್ ಪತಿ (ಪಂಕ್ತಿ-ಪಕ್ತಿ ದಪಂಕ್ತಿ-ದಪಕ್ತಿ) ಹಾಗೂ ಶನ್ (ದಶನ್) ಶತ್ (ದಶತ್) ಶತಿ (ದಶತಿ) ಎಂಬುವುಗಳು ಸಮಾನಾರ್ಥಗಳೂ ರೂಪಾಂತರಗಳೂ ಎಂದು ನಿರ್ಣಯಿಸಬಹುದಾಗಿದೆ. ಪನ್ ಪತ್ ಪತಿ ರೂಪಗಳು ದ್ರಾವಿಡ-ಕನ್ನಡ ಪತ್ ಪತಿ ತೆಲಗು ಪದಿ ಮುಂತಾದವುಗಳಿಗೆ ಮೂಲವೆಂದು ಹೇಳಬಹುದು.

ಒಂದರಿಂದ ಹತ್ತರ ವರೆಗೆ ಮೂಲ ಸಂಖ್ಯೆಗಳು. ಉಳಿದವುಗಳು ಆ ಮೂಲ ಸಂಖ್ಯೆಗಳ ಜೋಡಣೆಯಿಂದ ತಯಾರಾದ ಸಾಮಾಸಿಕ ಶಬ್ದಗಳು. ಆದ್ದರಿಂದ ಅವುಗಳನ್ನು ಇಲ್ಲಿ ಬೇರೆಯಾಗಿ ವಿವರಿಸುವ ಆವಶ್ಯಕತೆಯಿಲ್ಲ.

ಶಬ್ದವ್ಯಾಪಾರದ ವಿಚಿತ್ರಗತಿಯನ್ನು ಕುರಿತು ಮದ್ರಾಸಿನಲ್ಲಿ ಒಂದು ಕತೆ ಕೇಳಬರುತ್ತದೆ. ಮದ್ರಾಸು ನಗರದಲ್ಲಿ "ಬಾರ್ಬರ್ಸ್ ಬ್ರಿಜ್" (ಕ್ಷೌರಿಕನ ಸೇತುವೆ) ಎಂಬೊಂದು ಸೇತುವೆಯಿದೆ. ಆದರೆ ಅಲ್ಲಿ ಕೆಲಸಿಗರು ತಮ್ಮ ಕಾಯಕ ನಡೆಸುತ್ತಿರುವರೆಂದು ಊಹಿಸಿದರೆ ಅದು ಶುದ್ಧ ತಪ್ಪು.

ಈ ಸೇತುವೆಯನ್ನು ಮೊದಲು ಕಟ್ಟಿದಾಗ ಅದಕ್ಕೆ ಹ್ಯಾಮಿಲ್ಟನ್ ಎಂಬ ಬ್ರಿಟಿಶ ಅಧಿಕಾರಿಯ ಹೆಸರಿಡಲಾಯಿತಂತೆ. ಅದು ತಮಿಳರ ಬಾಯಿಯಲ್ಲಿ ಅಮಿಲ್ಟನ್-ಅಮಿಟ್ಟನ್ ಎಂದು ಬದಲಾಗುತ್ತ ಅಂಬಟ್ಟನ್ ಬ್ರಿಜ್ ಎಂದು ಸ್ಥಿರಗೊಂಡಿತು. ಅಷ್ಟು ಹೊತ್ತಿಗೆ ಅದರ ಮೂಲ ಹೆಸರೇ ಮರೆತು ಹೋಗಿತ್ತು. ಅಂಬಟ್ಟನ್ ಅಂದರೆ ತಮಿಳಿನಲ್ಲಿ ಕ್ಷೌರಿಕ. ಅದನ್ನು ಆ ಮೇಲೆ ಇಂಗ್ಲೀಷಿಗೆ ಅನುವಾದಿಸಿ ಬಾರ್ಬರ್ಸ್ ಬ್ರಿಜ್ ಎಂದು ಮಾಡಲಾಯಿತು. ಹೀಗೆ ಹ್ಯಾಮಿಲ್ಟನ್ ಬಾರ್ಬರನಾದನು!

ಸೀರೆಗಳ ಕೊಲೆಮಾಡುವ ಫ್ಯಾಶನ್ನುಗಳು

ಲೇಖಿಕೆ:- ಶ್ರೀಮತಿ ಲಲಿತಾ

ಹೊಸ ಫ್ಯಾಶನ್ನು ಬಂತೆಂದರೆ ತೀರಿತು, ಎಷ್ಟೋ ಕಲಿತ ಮಹಿಳೆಯರು ಕೂಡ ಅದರ ಒಪ್ಪು ತಪ್ಪುಗಳನ್ನು ಲೆಕ್ಕಿಸದೆ ಅದರ ಬೆನ್ನು ಹತ್ತುವರು. ಸೀರೆಗಳ ಮೇಲೆ ಈಚೆಗೆ ಪ್ರಾರಂಭವಾದ ಮಣಿ, ತಿಕಲಿ ಕೆಲಸದ ಹಾವಳಿಯಿಂದ ಅವುಗಳ ಲಾವಣ್ಯದ ಕೊಲೆಯಾಗುತ್ತಿದೆ

ಭಾರತದ 'ಸೀರೆ'ಯು ಜಗತ್ತಿನಲ್ಲಿ ನಾರಿಯರ ಉಡುಪುಗಳಲ್ಲೆಲ್ಲ ಲಾವಣ್ಯಪೂರ್ಣವಾದುದೆಂದು ಕೀರ್ತಿ ಪಡೆದಿದೆ. ಪರದೇಶಗಳಲ್ಲಿ ಕೂಡ ಅದರ ಅನುಕರಣ ನಡೆದಿದೆಯೆಂದಮೇಲೆ ನಾವು ಅದಕ್ಕಾಗಿ ಹೆಮ್ಮೆಪಡಬೇಡವೆ?

ಆದರೆ ಸೀರೆಯ ಲಾವಣ್ಯವೇ ಇಂದು ಅದರ ದುರ್ದೈವವೂ ಆಗಿದೆ. ಬನಾರಸಿ ಸೀರೆಗಳನ್ನು ಕೊಂಡು ಅವುಗಳನ್ನು ಸಂಜೆಯ ಯೌರೋಪ್ಯ ಉಡುಪಾಗಿ ಮಾರ್ಪಡಿಸುವ ಅಮೇರಿಕನ್ ಫ್ಯಾಶನ್ ಅಂಗಡಿಗಳ ಮಾತು ಬಿಡಿರಿ. ಭಾರತದ ಫ್ಯಾಶನ್ ರಮಣಿಯರು ಕೂಡ ಸೀರೆ ಲಾವಣ್ಯಪೂರ್ಣವಾಗಿರುವುದರಿಂದ ಅದನ್ನು ಬೇಕುಬೇಕಾದಂತೆ ಉಡುವುದೂ ಅವುಗಳ ಮೇಲೆ ಬೇಕುಬೇಕಾದ ಹೊಸ ಪ್ರಯೋಗ ಮಾಡುವುದೂ ಲಾವಣ್ಯಕರವಾಗಿದೆಯೆಂದು ಭಾವಿಸಿದಂತಿದೆ.

ಈ ರಮಣಿಯರ ಕೈಯಲ್ಲಿ ಸೀರೆಯು ದುರುಪಯೋಗವಾಗುತ್ತಿದೆ, ಅದರ ರೂಪುಗೆಡುತ್ತಿದೆ. ಅದನ್ನು ಅವರು ಅಸಡ್ಡಾಳ ರೀತಿಗಳಲ್ಲಿ ಉಪಯೋಗಿಸುತ್ತಿದ್ದಾರೆ. ಇದರಲ್ಲಿ ಕೆಲವು ಭಾಗ ಅಪರಾಧ ಸೀರೆಯ ಹೊಸ ಹೊಸ ಡಿಜೈನು ರೂಪಿಸುವವರ ಪದರಲ್ಲಿ ಬೀಳಬೇಕಾದರೂ ಬಹುಭಾಗ ಉಡುವವರ ಪಾಲಿಗೇ ಬರಬೇಕಾದ್ದು. ಪರಂಪರಾಗತ ಸೀರೆಯ ನಮೂನೆಗಳು ಇದ್ದಕ್ಕಿದ್ದಂತೆ ಉಳಿದಿದ್ದರೆ, ತುಸು ಏಕತಾನತೆ ಅನಿಸಬಹುದಾಗಿತ್ತಾದರೂ ಇಂದಿನ ವಿಕಾರ ಫ್ಯಾಶನ್ನುಗಳು ತಪ್ಪಿದ್ದವೆಂದು ಒಮ್ಮೊಮ್ಮೆ ತೋರುತ್ತದೆ.

ಸೀರೆಯು ಅಂದಗೇಡಾಗುತ್ತಿರುವದಕ್ಕೆ ಅದರಲ್ಲಿ ಹೊಸ ಹೊಸ ಫ್ಯಾಶನ್ ತೆಗೆಯುವ ಹುಚ್ಚೇ ಕಾರಣ. ಹೊಸತನದಲ್ಲಿ ಗುಣವಿಲ್ಲೆಂದೂ ಅಲ್ಲ, ಅದು ಪರಿಣಾಮಕಾರಕವಾಗಲಾರದೆಂದೂ ಅಲ್ಲ. ಆದರೆ ಇಂದಿನ ಕೆಲ ಮೋಡಿಗಳು ಅತಿರೇಕಕ್ಕೆಳಸುತ್ತಿವೆ. ಕೇವಲ ಹೊಸತನ ಸಾಧಿಸಿದಾಕ್ಷಣ ಚೆಲುವಿಗೆ ಪೋಷಕವಾದೀತು, ಧರಿಸುವವರಿಗೆ ಒಪ್ಪೀತು ಎಂಬ ನಿಯಮವಿಲ್ಲ. ಹೊಸತನ ಮಿತಿಮೀರಿತೆಂದರೆ ಅದು ಯಾವುದನ್ನು ಸುಧಾರಿಸ ಹೊರಟದೆಯೋ ಅದನ್ನೇ ನಾಶಗೊಳಿಸುವುದು.


ಈಚೆಗೆ ಸೀರೆಯ ರೇಶ್ಮೆ ಕಸೂತಿ ಕೆಲಸದಲ್ಲಿ ಗಾಜಿನ ಮಣಿಗಳನ್ನೂ ಸಿಕ್ವಿನ್ನು (Sequin) ಗಳನ್ನೂ ಎಲ್ಲ ಬಗೆಯ ತಳತಳಿಸುವ ತುಣುಕುಗಳನ್ನೂ ಕಲಬೆರಕೆ ಮಾಡುವ ಮೋಡಿಯೊಂದು ಹೊರಟದೆ. ಕೆಲ ವರ್ಷ ಹಿಂದೆ ಯುರೋಪಿನಲ್ಲಿ ಪ್ರಾರಂಭವಾದ ಈ ಫ್ಯಾಶನ್ನು ಭಾರತಕ್ಕೆ ಆಯಾತವಾಯಿತು. ಅಲ್ಲಿ ಇದರ ಕಸುಬುಗಾರಿಕೆ ಉತ್ಕೃಷ್ಟವಾಗಿತ್ತು. ಡಿಜೈನುಗಳು ಸ್ವತಃ ಮೋಹಕವಾಗಿರುತ್ತಿದ್ದವು. ಅತಿ ಬೆಲೆ ಬಾಳುವ ಗೌನುಗಳಿಗೂ ಯುರೋಪಿನ ಫ್ಯಾಶನ್ ಅಂಗಡಿಗಳು ಇದನ್ನು ಉಪಯೋಗಿಸುತ್ತಿವೆಯೆಂದು ಕೇಳಬಂತು.

ಈ ತಳತಳಿಸುವ ಮಣಿ ಕೆಲಸ ಹೊಚ್ಚಹೊಸದು, ಈ ವರೆಗೆ ಕಂಡುಕೇಳದ್ದು ಮತ್ತು ತುಂಬ ವೆಚ್ಚದ್ದು. ದುರ್ದೈವದಿಂದ ಇವು ಮೂರೂ ಹೆಂಗಸರನ್ನು ಮುಗ್ಧಗೊಳಿಸುವ ಗುಣಗಳು! ಆದರೆ ಅದು ಸೀರೆಯ ಸ್ವರೂಪಕ್ಕೆ ಸರ್ವಥಾ ಒಪ್ಪಲಾರದ ಮೋಡಿಯಾಗಿದೆ. ಈ ಡಿಜೈನುಗಳು ಸೀರೆಯ ಸಹಜ ಸೌಂದರ್ಯವನ್ನು ಹಾಳುಗೆಡಹಿದವು. ಯೌರೋಪ್ಯ ನಾಟ್ಯಶಾಲೆಯ ಪೋಷಾಕಿನ ಮೇಲೆ ಮೋಹಕವಾಗಬಹುದಾದ್ದು ಸೀರೆಯ ಮೇಲೆ ನಿಷ್ಪ್ರಭವಾಗಿ ಕಾಣುತ್ತದೆ. ಪಾಶ್ಚಾತ್ಯ ಮಾದರಿಗಳನ್ನು ಭಾರತೀಯ ಸೀರೆಯ ಮೇಲೆ ಇದ್ದಕ್ಕಿದ್ದಂತೆ ನಕಲು ತೆಗೆದರೆ ಓರಣಗೇಡಾಗುವದೆಂಬ ಸಂಗತಿ ಇಷ್ಟೆಲ್ಲ ಸುಶಿಕ್ಷಿತ ಸ್ತ್ರೀಯರಿಗೆ ಹೊಳೆಯದಿರುವುದು ಆಶ್ಚರ್ಯವೇ ಸೈ. ಅಥವಾ ಅವರು ಸೊಗಸು ಬೆಳೆಯಲಿ ಕೆಡಲಿ,ಹೊಸತಾದರೆ ತೀರಿತೆಂಬ ಮಬ್ಬಿಗೆ ಬಿದ್ದಿದ್ದಾರೋ ಏನೋ.

✖

ಈ ಹುಚ್ಚು ಹಬ್ಬಲು ತಡವಾಗಲಿಲ್ಲ. ಈಗ ಯಾವ ಅಂಗಡಿ ನೋಡಿದರೂ ನೈಲನ್ ಮೊದಲಾದ ಜವಳಿಯ ಸೀರೆಗಳ ಮೇಲೆ ರೇಶ್ಮಿಯ ಬಳ್ಳಿ ಹೂಗಳ ನಡುವೆ ಈ ಗಾಜಿನ, ತಗಡಿನ ಮತ್ತು ಏತೇತರದೋ ತಳಕುಬೆಳಕಿನ ಕಸೂತಿಯೇ ಕಸೂತಿ ತುಂಬಿರುತ್ತದೆ. ಇವುಗಳ ಮಾರಾಟ ಜೋರಿನಿಂದ ನಡೆಯುತ್ತಿರಬೇಕು. ಈ ಹುಚ್ಚು ಒಮ್ಮೆ ಎದ್ದು ಕುಣಿದು ತಾನಾಗಿ ತಣ್ಣಗಾದೀತೆಂದು ಆಶಿಸಬೇಕಲ್ಲದೆ ಬೇರೆ ಸಮಾಧಾನವಿಲ್ಲ.

ಇಂಥ ಅಕರಾಳ ಸೀರೆಗಳ ನಿರ್ಮಾಪಕರಿಗೆ ಭಾರತದಲ್ಲಿ ಸೀರೆಗಳ ಶೋಭೆ ಹೆಚ್ಚಿಸುವ ಅಲಂ-



ಕಾರ ಪದ್ಧತಿಗಳೇ ಇದ್ದಿಲ್ಲವಾದರೆ ಅವರ ಉಪದ್ವ್ಯಾಪವನ್ನು ಕ್ಷಮಿಸಬಹುದಾಗಿತ್ತು. ಆದರೆ ಕಾಶ್ಮೀರದಿಂದ ಕುಮಾರಿಯವರೆಗೆ ಕಾಠೇವಾಡದಿಂದ ನಾಗಪರ್ವತಗಳವರೆಗೆ ಎಂಥ ನಾರೀ ಹೃದಯವನ್ನೂ ಸೂರೆಗೊಳ್ಳಬಲ್ಲ ಬಗೆಬಗೆಯ ಕಸೂತಿ ಕ್ರಮಗಳು ಬೇಕಾದಷ್ಟಿವೆ. ಇವೆಲ್ಲವೂ ಪರಂಪರಾಗತವಾಗಿ ಈ ಕಲೆಯನ್ನೂ ಕಸುಬನ್ನೂ ಉಳಿಸಿ ಬೆಳಸಿಕೊಂಡು ಬಂದ ಕುಶಲ ಕೆಲಸಗಾರರ ಕೈಯಲ್ಲಿ ಜೋಪಾನವಾಗಿವೆ. ಅವರ ಕೆಲಸವನ್ನು ಅರಿತು ಮತ್ತು ಅವುಗಳಲ್ಲಿನ ವಿವಿಧ ಸಂಪ್ರದಾಯಗಳನ್ನು ಅರ್ಥಮಾಡಿಕೊಂಡವರು ಆದರಿಂದ ನಿಜವಾಗಿ ಮೋಹಿತರಾಗುವರು. ಅವರು ಉಪಯೋಗಿಸುವ ಬಣ್ಣಗಳು ನಮ್ಮ ದೇಶದ ಉಡುಪುಗಳಿಗೆ ಸ್ವಾಭಾವಿಕವಾದವು. ಅವರ ಡಿಜೈನುಗಳು ಪುರಾತನ ಕಾಲದಲ್ಲಿ ಹೇಗೆ ಅಚ್ಚ ಭಾರತೀಯವಾಗಿದ್ದವೋ ಹಾಗೆ ಇಂದಿಗೂ ಅಚ್ಚ ಭಾರತೀಯವೇ ಆಗಿ ಸೀರೆಗಳಿಗೆ ಒಪ್ಪುವಂಥವು. ಆವರು ರೂಪಿಸಿದ ಈ ಅಸಂಖ್ಯ ಮಾದರಿಗಳನ್ನು ಉಪಯೋಗಿಸಿಕೊಳ್ಳದೆ ಪರದೇಶಗಳ ಅನುಕರಣೆ ಮಾಡುವುದು ಶುದ್ಧ ಮೌಢ್ಯವಲ್ಲದೆ ಇನ್ನೇನು?

ಸೀರೆಯ ಮೇಲಾಗಲಿ ರವಿಕೆಯ ಮೇಲಾಗಲಿ ಕೈಚೀಲ ಮೊದಲಾದ ಇತರ ಸಾಧನಗಳ ಮೇಲಾಗಲಿ ಕಸೂತಿ ಕೆಲಸವಿದ್ದರೆ ಸ್ತ್ರೀಯ ಉಡುಪಿನ ಏಕತಾನತೆ ನಿವಾರಣೆ ಹೊಂದಿ ಹೊಸ ಸಿಂಗಾರ ವುಂಟಾಗುವುದೆಂಬದು ನಿಜ. ಆದರಿಂದ ನಮ್ಮ ವೈಯಕ್ತಿಕ ವರ್ಣ ಮತ್ತು ಚಿತ್ರ ರುಚಿಗಳನ್ನೂ ಪ್ರಕಟಿಸಲು ಅನುವಾಗುತ್ತದೆ. ಪ್ರತಿಯೊಂದು ಪಟ್ಟಣದಲ್ಲಿಯೂ ಯೋಗ್ಯ ಮಜೂರಿಗೆ ನಾವು ಸೂಚಿಸುವ ಮಾದರಿಯ ಕಸೂತಿ ಹಾಕಿಕೊಡ-ಬಲ್ಲ ಕುಶಲರೂ ಇರುತ್ತಾರೆ. ನಮಗೆ ಮೆಚ್ಚಿಕೆಯಾಗುವ ಚಿತ್ತಾರವನ್ನು ಆರಿಸಲು ಬೇಕಾದಷ್ಟು ಮಾದರಿಗಳೂ—ನಮಗೆ ಆ ಕಣ್ಣು ಇದ್ದರೆ-ಇವೆ. ಈ ವಿಷಯದಲ್ಲಿ ಭಾರತದ ಪ್ರತಿಯೊಂದು ಪ್ರಾಂತವೂ ತನ್ನದೇ ಕಸೂತಿ ಪದ್ಧತಿಗಳಿಂದ ಕಾಣಿಕೆ ಸಲ್ಲಿಸಿದೆ. ಇದರಲ್ಲಿ ಯಾವ ಪ್ರಾಂತ ಹೆಚ್ಚು, ಯಾವುದು ಕಡಿಮೆಯೆಂದು ಹೇಳುವುದು ಕೂಡ ಕಠಿನ. ನಮ್ಮಲ್ಲಿ ಆರಿಸುವ ಮತ್ತು ಹೊಂದಿಸುವ ಯೋಗ್ಯತೆಯೊಂದಿದ್ದರೆ ಎಂಥ ಅಭಿರುಚಿಯನ್ನೂ ಅವು ತೃಪ್ತಿಪಡಿಸಬಲ್ಲವು.

ಉದಾಹರಣೆಗೆ ಪಂಜಾಬದ 'ಫೂಲಕರಿ' ಕಸೂತಿ. ಇದನ್ನು ಸಾಮಾನ್ಯವಾಗಿ ಖಾದಿಯ ಮೇಲೆ ಒಳ್ಳೇ ತೀಕ್ಷ್ಣ ಬಣ್ಣದ ರೇಶ್ಮೆಯಿಂದ ಹಾಕಲಾಗುತ್ತದೆ. ಇದು ಸೀರೆ ಕುಪ್ಪಸಗಳ ಅಂಚಿಗೊ, ಅದಕ್ಕೆ ಹೊಂದಿಕೆಗಾಗಿ ಕೈಚೀಲಕ್ಕೋ ಹಾಕಿದರೆ ತುಂಬ ಆಕರ್ಷಕವಾಗಬಲ್ಲದು. ಇದಲ್ಲದೆ ವಿವಿಧ ಹೊಲಿಗೆಗಳಲ್ಲಿ 'ಕನ್ನಡಿ' ಕೆಲಸ ಮಾಡಬಹುದು. ಗುಡ್ಡಗಾಡು ಜನಾಂಗಗಳಲ್ಲಿ ಭಾರತದಲ್ಲೆಲ್ಲ ಇದರ ವಿವಿಧ ಪ್ರಕಾರಗಳಿರುತ್ತವೆ. ಸೀರೆಯ ನಿರಿಗೆಯಮಧ್ಯದಲ್ಲಿ ಸುಮಾರು ಆರಿಂಚು ಅಗಲದ ಬಣ್ಣದ ಕಸೂತಿ ಪಟ್ಟಿ ಮತ್ತು ಅದರ ನಡುವೆ ಚಿಕ್ಕ 'ಕನ್ನಡಿ' ಕೆಲಸಗಳು ಹಾಗು ರವಿಕೆಯ ಮೇಲೂ ಇಂಥದೇ ಚಿತ್ತಾರ ಇವುಗಳಿಂದ ಉಡುಪಿಗೆ ಒಂದು ಆಢ್ಯತೆ ಬರುವಂತೆ ಮಾಡಬಹುದು. ಅಥವಾ ಕಾಶ್ಮೀರ ಮಾದರಿಯಲ್ಲಿ ಸುಂದರ ವನಸ್ಪತಿ ಅಥವಾ ಪಕ್ಷಿ ಚಿತ್ರಗಳನ್ನು ಸೆರಗಿನ ಮೇಲೆ ಕಸೂತಿ ಹಾಕಿದರೂ ಲಾವಣ್ಯವರ್ಧನೆಯಾಗಬಲ್ಲದು.

ಹೊಸ ಪಾಶ್ಚಾತ್ಯ ಮಾದರಿಯಂತೆ ಗಾಜಿನ ಮಣಿ, ಮುತ್ತಿನ ಚಿಪ್ಪೇ ಮೊದಲಾದವುಗಳಿಂದ ಸೀರೆ ರವಿಕೆಗಳ ಸಿಂಗಾರ ಮಾಡುವುದೂ ಅಬದ್ಧವಾಗಲಾರದು. ಆದರೆ ಅದು ಸೀರೆಯ ಜಾಯಮಾನಕ್ಕೆ ಒಪ್ಪುವಂತೆ ಯೋಜಿಸಲ್ಪಡಬೇಕು. ಅದು ಸೀರೆಯ ವೈಶಿಷ್ಟ್ಯಗಳಾದ ಸೆರಗು, ಅಂಚು ಅಥವಾ ನೆರಿಗೆ ಇವುಗಳಲ್ಲೊಂದನ್ನು ಪ್ರಾಧಾನವಾಗಿ ತೋರಿಸುವಂತಿರಬೇಕು. ಇಲ್ಲದಿದ್ದರೆ ಸೀರೆಯ ಮತ್ತು ಸಂಗಡ ಅದನ್ನು ಉಟ್ಟವರ ಸೌಂದರ್ಯದ ಕೊಲೆಯೇ ಆದಂತೆ. ಸರಿಯಾದ ಕಸೂತಿಯಿಂದ ಸೀರೆಯ ಸೊಬಗು ಹೆಚ್ಚುತ್ತದೆ. ಆದರೆ ಇಂಥ ಒಂದು ಸೀರೆಗೆ ಅದು ಒಪ್ಪುವದೋ ಇಲ್ಲವೋ ಎಂಬ ಸಂಶಯಬಂದರೆ ಕಸೂತಿಯ ಗೋಜಿಗೆ ಹೋಗದಿರುವದೇ ಯೋಗ್ಯ.

ತರುಣ ಜನಾಂಗದ ಅಸಮಾಧಾನ

ಇಂದಿನ ತರುಣ ಜನಾಂಗದ 'ಪೋಕರಿ' ವರ್ತನೆಯು ಹಿರಿಯರಿಗೆ ಅತಿ ದೊಡ್ಡ ತಲೆನೋವಾಗಿದೆ. ಭರದಿಂದ ಬದಲಾಗುತ್ತಿರುವ ಜಗತ್ತಿನಲ್ಲಿ ಕಿರಿಯರ ಮನೋಭಾವವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾರದೆ ತಮ್ಮ ಕಾಲದ ವರ್ತನೆಯನ್ನೇ ಅಪೇಕ್ಷಿಸುವ, ಕಿರಿಯರ ಮಾನಸಿಕ ದ್ವಂದ್ವಗಳಲ್ಲಿ ಸರಿಯಾದ ಮಾರ್ಗದರ್ಶನ ಮಾಡಲರಿಯದೆ ತಮ್ಮ ಅಧಿಕಾರ ಚಲಾಯಿಸುವ ಹಿರಿಯರು ಈ ಪರಿಸ್ಥಿತಿಗೆ ಬಹಳಮಟ್ಟಿಗೆ ಕಾರಣರಾಗಿದ್ದಾರೆಂದು ಲೇಖಕರ ಅಭಿಮತ.

ಲೇಖಕರು : ಶ್ರೀ. ಕುಮಾರಸ್ವಾಮಿ

ನಮ್ಮ ತರುಣ ಜನಾಂಗದ ಭವಿಷ್ಯವನ್ನು ನಿರಾಶೆಯ ಮಾತುಕತೆಗಳಲ್ಲಿಯೆ ವರ್ಣಿಸುತ್ತಿರುವುದನ್ನು ನಾವು ಇಂದು ಎಲ್ಲೆಲ್ಲಿಯೂ ನೋಡುತ್ತಿದ್ದೇವೆ. ಯುವಕ-ಯುವತಿಯರನ್ನು ಗದರಿಸಿ, ಬೆದರಿಸಿ, ಉಪದೇಶಗಳ ಸುರಿಮಳೆಯಿಂದ ಅಪ್ರತಿಭರನ್ನಾಗಿ ಮಾಡಿ, ಅವರನ್ನು 'ಸಭ್ಯ'ರಾಗಿ ರೂಪಿಸಲು ಸಮಾಜದ ಹಿರಿಯರೂ ರಾಷ್ಟ್ರದ ಧುರೀಣರೂ ಹವಣಿಸುತ್ತಿರುವುದನ್ನು ಇಂದು ನಿತ್ಯವೂ ಕಾಣುತ್ತಿದ್ದೇವೆ. ವಿದ್ಯಾರ್ಥಿಗಳ ಶಿಸ್ತುಗೇಡಿತನವೂ ಯುವಕರ ಅಸಮಾಧಾನವೂ ನಮ್ಮನ್ನು ನರಕಕ್ಕೆ ಒಯ್ಯುತ್ತಿವೆ; ಆಕಾಶವೇ ಕಳಚಿ ತಲೆಯ ಮೇಲೆ ಬೀಳುವಂತೆ ಮಾಡುತ್ತಿವೆ ಎಂಬ ದಾಟಯಲ್ಲಿ ಸಾಮಾನ್ಯವಾಗಿ ತರುಣರ ವರ್ತನೆಗಳನ್ನು ಆಕ್ಷೇಪಿಸಲಾಗುತ್ತದೆ; ಕಟುವಾದ ಮಾತುಗಳಲ್ಲಿ ಅವನ್ನು ಖಂಡಿಸಲಾಗುತ್ತದೆ.

ರಾಷ್ಟ್ರದ ಹಿತದೃಷ್ಟಿಯುಳ್ಳವರನ್ನು ಮೇಲಿಂದ ಮೇಲೆ ಇಂದಿನ ತರುಣರ ನಡವಳಿಕೆಯೂ ಅದರ ಪರಿಣಾಮವಾಗಿ ಘಟಿಸಿದ ಪ್ರಸಂಗಗಳೂ ಹೊಡೆದೆಬ್ಬಿಸಿವೆ. ಯುವಕರು ಕೇವಲ ಕಿಡಿಗೇಡಿಗಳಾಗಿ ಏಕೆ ವರ್ತಿಸುತ್ತಾರೆ, ಮೂರ್ಖರಂತೆ ಏಕೆ ನಡೆದುಕೊಳ್ಳುತ್ತಾರೆ, ಅವರು ಸರಿಯಾದ ದಾರಿಯನ್ನು ಏಕೆ ಹಿಡಿದು ಸಾಗುವುದಿಲ್ಲ, ಅವರ ಅಸಂತೃಪ್ತಿಯ ಮೂಲವೇನು ಎಂದು ಮುಂತಾಗಿ ತುಸು ಗಂಭೀರವಾಗಿ ವಿಚಾರಿಸುವುದಕ್ಕೆ ಸಾಕಷ್ಟು ವ್ಯವಧಾನವಿಲ್ಲದವರು, ಸಮಯವಿಲ್ಲದವರು ಕೇವಲ ಟೀಕೆಯಿಂದಲೇ ತೃಪ್ತರಾಗುತ್ತಾರೆ. ಸಮಸ್ಯೆಯ ವಿಶ್ಲೇಷಣೆಗೆ ಪ್ರಯತ್ನಿಸದೆ "ನಾವು ಹೇಳಿದಂತೆ ನೀವು ಕೇಳಬೇಕು" :ಎಂಬ ಕಟ್ಟಪ್ಪಣೆಯನ್ನು ಯುವಕರ ಮೇಲೆ ಹೇರಿ, ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಅವರು ಹವಣಿಸುತ್ತಾರೆ. ಅದಕ್ಕಿಂತ ಹೆಚ್ಚಿನದೇನನ್ನೂ ಅವರು ಮಾಡಲು ಹೋಗುವುದಿಲ್ಲ.

ಇದರಿಂದ ಯುವಕರು-ಇವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು-ಸುಧಾರಿಸುವರೆ? 'ಇಲ್ಲ' ಎಂಬ ಚುಟುಕಿನ ಉತ್ತರವನ್ನು ಈ ಪ್ರಶ್ನೆಗೆ ಕೊಟ್ಟರೆ, ಅನೇಕರಿಗೆ ನಿರಾಶೆಯಾದೀತು; ಕೋಪವೂ ಬಂದೀತು. ಆದರೆ ನಿಜವಾಗಿ ಸತ್ಯಕ್ಕೆ ಹೊಂದಿಕೊಂಡ ಉತ್ತರವೆಂದರೆ ಇದೊಂದೇ ಎಂಬುದಾಗಿ ನನ್ನ ತಿಳಿವಳಿಕೆ ಹೇಳುತ್ತದೆ. ನಾವು ಇಂದು ಕುಡಿಮೀಸೆ ಮೂಡಿರುವ ಯಾವ ತರುಣನನ್ನೇ ಆಗಲಿ, ಋತುಮತಿಯಾಗಿರುವ ಯಾವ ಕನ್ಯೆಯನ್ನೇ ಆಗಲಿ, "ನಿನ್ನ ಮನಸ್ಸನ್ನು ಬೇಸರಗೊಳಿಸುವ, ಕ್ಷೋಭೆಗೀಡು ಮಾಡುವ ಸಂಗತಿ ಏನು?" ಎಂದು ಪ್ರಾಮಾಣಿಕವಾದ ಸಹೃದಯತೆಯಿಂದ ವಿಚಾರಿಸಿದ ಪಕ್ಷದಲ್ಲಿ, "ಹಿರಿಯರ ಮೂರ್ಖತನ" ಅತಿಯಾಯಿತೆಂಬ ಸತ್ಯಾಂಶವೇ ಹೊರಬೀಳುತ್ತದೆ.

*

ಹಿರಿಯರು ಅದೆಂತು ಮೂರ್ಖತನವನ್ನು ತೋರಿಸುತ್ತಾರೆ? ಉದಾಹರಣೆಯೊಂದನ್ನು ತೆಗೆದುಕೊಳ್ಳೋಣ. ಹದಿನೈದು ವರ್ಷದ ಹುಡುಗಿ ಶಾಲೆ ಬಿಟ್ಟ ಬಳಿಕ, ಬೇಸರ ಕಳೆಯಲೆಂದು ಹೊರಗೆ ಸ್ವಲ್ಪ ತಿರುಗಾಡಿಕೊಂಡು ಬರಲೇ ಬಾರದೆ ? ಇಂಥದೊಂದು ಇಚ್ಛೆಯನ್ನು ವ್ಯಕ್ತಪಡಿಸಿದುದಕ್ಕಾಗಿ ಆ ತರುಣಿಯನ್ನು ಬೈದು ಮನೆಯೊಳಗೆ ಕಾವಲಿನಲ್ಲಿ ಕೂಡಿಸಬೇಕೆ? ಹದಿನೆಂಟು ವಯಸ್ಸಿನ ತರುಣ ಊರಿನ ಪಂದ್ಯಾಟವನ್ನು ನೋಡಲು ಹೋಗುವುದಕ್ಕೆ ಮನೆಯವರ ಅಪ್ಪಣೆಯನ್ನು ಅವಶ್ಯವಾಗಿಯೂ ಪಡೆಯಬೇಕೆ? ಹೌದು ಎಂದಾದರೆ, ತನಗೆ ಏನೇನೂ ಸ್ವಾತಂತ್ರ್ಯವಿಲ್ಲವೆ, ತನಗೆ ತನ್ನ ಹಿತ ತಿಳಿಯದೆ—ಎನ್ನುವ ವಿಚಾರ ಸಂಬಂಧಪಟ್ಟ ಕಿರಿಯನಲ್ಲಿ ಸಹಜವಾಗಿಯೇ ಮೂಡುತ್ತದೆ; ಮನಸ್ಸನ್ನು ಕೊರೆಯಹತ್ತುತ್ತದೆ.

ಮೇಲಿನ ಉದಾಹರಣೆ ಅಷ್ಟು ಸಮರ್ಪಕವಾಗಿ ತೋರಲಿಕ್ಕಿಲ್ಲ—ಇಂದು ಇಷ್ಟು ಹೆಚ್ಚಿನ ಕಟ್ಟುನಿಟ್ಟಾದ ನಿಯಮಗಳನ್ನು ತಮ್ಮ ಮಕ್ಕಳಿಗೆ ಅನ್ವಯಿಸುವ ಹಿರಿಯರು ವಿರಳ ಎಂಬುದನ್ನು ಒಪ್ಪುವುದೇ ಲೇಸು. ಆದಾಗ್ಯೂ, ಮುಂದಿನ ಜನಾಂಗವಾಗಿ ಮೆರೆಯಲಿರುವ ಕಿರಿಯರ ಮೇಲೆ ಹಿರಿಯರು ತಮ್ಮ ವಜ್ರಮುಷ್ಟಿಯ ಉಗ್ರ ನಿಯಂತ್ರಣವನ್ನು ಬೇರೆ ಹಲವು ವಿಧಗಳಲ್ಲಿ ಇಟ್ಟುಕೊಂಡಿದ್ದಾರೆಂಬುದು ಸುಳ್ಳಲ್ಲ. ಅನೇಕ ಮುಖದ ಈ ಹತೋಟಿಗಳು "ನಾನು ಇನ್ನೂ ಮಗುವಲ್ಲ ಎಂಬುದನ್ನು ಹಿರಿಯರು ಏಕೆ ತಿಳಿದುಕೊಳ್ಳುವದಿಲ್ಲ ?" ಎಂದು ಕಿರಿಯರು ಮನನೊಂದು ತಲೆಕೆರೆದುಕೊಳ್ಳುವಂತೆ ಮಾಡುತ್ತವೆ.

ಪಾಶ್ಚಾತ್ಯ ಜಗತ್ತಿನ ನಿದರ್ಶನವೊಂದನ್ನು ಕೊಟ್ಟರೆ ತರುಣ ಜನಾಂಗವನ್ನು ಪೀಡಿಸುತ್ತಿರುವ ಸಂಗತಿ ಯಾವುದೆಂಬುದು ಚೆನ್ನಾಗಿ ಮನವರಿಕೆಯಾದೀತು–ಹದಿನೈದು ವರ್ಷದ ಒಬ್ಬ ಮೊಮ್ಮಗನನ್ನು ನೋಡಲು ಅಜ್ಜಿಯು ಬಂದಳು. "ಇಲ್ಲಿ ಬಾ, ಮಗು—ಎಲ್ಲಿ, ನನಗೊಂದು ಮುತ್ತು ಕೊಡು" ಎಂದಳು. "ಅಜ್ಜೀ, ನನಗೀಗ ಪುರಸೊತ್ತಿಲ್ಲ; ತುಂಬ ಕೆಲಸ ಮಾಡಲಿದೆ. ನಾನೀಗ ನಿನ್ನೊಡನೆ ಮಾತಾಡಿ ಕುಳಿತಿರುವಂತಿಲ್ಲ. ನಿನಗೆ ಮುತ್ತಿಡಲು ನಾನೀಗ ಮಗುವಲ್ಲ—ನಾನು ದೊಡ್ಡವನಾಗಿದ್ದೇನೆ" ಎಂದ ಈ ಮೊಮ್ಮಗ. ಅಜ್ಜಿಗೆ ಈ ಮಾತುಗಳಿಂದ ಸಂತೋಷವಾಗಬೇಡವೆ? ಅವಳು ಮೊಮ್ಮಗನ ನಿಜವಾದ ಹಿತಚಿಂತಕಳಾಗಿದ್ದರೆ ಆನಂದತುಂದಿಲಳಾಗಬೇಕಾದದ್ದು ಸಹಜ. ಆದರೆ ಹುಡುಗನ ತಾಯಿ "ಅಜ್ಜಿಗೆ ಎದುರುತ್ತರ ಕೊಡುತ್ತೀಯಾ?" ಎಂದು ಗದರಿಸಿದಳು ! ಅಜ್ಜಿಯ ಪೀಡೆ ತಪ್ಪಿದರೆ ಸಾಕೆಂದು ಹೊರಗೆ ಹೊರಟದ್ದ ಈ ಮೊಮ್ಮಗ ಹಿಂದೆ ಬಂದು "ಅಜ್ಜಿ, ಇದೇ ಕೊನೆಯ ಸಲ—ನಾನು ತುಂಬ ದೊಡ್ಡವನಾಗಿದ್ದೇನೆ, ತಿಳಿಯಿತೆ?" ಎಂದು ಮುತ್ತಿಟ್ಟ. ಅವನನ್ನು ಅಜ್ಜಿ ಸಂತೋಷಾತಿರೇಕದಿಂದ ನೇವರಿಸಿದಳು. ಆಗ ಹುಡುಗನ ಕಣ್ಣೆನಂಚುಗಳು ಹನಿಯುತ್ತಿದ್ದುದನ್ನು ಕಂಡಳು. ಮೊಮ್ಮಗನಿಗೆ ತನ್ನ ಕೆಲಸ ರುಚಿಸಿರಲಿಲ್ಲ.

ಬಗೆಹರಿಯದ ದ್ವಂದ್ವಗಳು ನಮ್ಮ ತರುಣ ಜನಾಂಗವನ್ನು ಇಂದು ಪೀಡೆಗೆ ಗುರಿ ಮಾಡುತ್ತಿವೆ ಎಂಬುದನ್ನು ಮೇಲಿನ ಘಟನೆ ತಿಳಿಸುತ್ತದೆ. ತಮ್ಮ ಮನಸ್ಸಾಕ್ಷಿಯ ಧ್ವನಿಗೆ ಕಿವಿಗೊಡಬೇಕೆ, ಅಥವಾ ಹಿರಿಯರ ಆ ಮಾತಿಗೆ ಮನ್ನಣೆ ಕೊಡಬೇಕೆ—ಏನೆಂದು ತಿಳಿಯದೆ ತರುಣರು ತುಂಬ ಪೇಚಾಟಪಡುತ್ತಾರೆ. ಒಂದೇ ಸಮಯದಲ್ಲಿ ಇಬ್ಬರು ಯಜಮಾನರನ್ನು ಸೇವೆಯಿಂದ ತೃಪ್ತಿಗೊಳಿಸುವುದು ಹೇಗೆ ಸಾಧ್ಯವಿಲ್ಲವೊ ಹಾಗೆ ಏಕಕಾಲದಲ್ಲಿ ಎರಡೂ ವಿಚಾರಧಾರೆಗಳಲ್ಲಿ ತೇಲಿ ಹೋಗುವುದೂ ಸಾಧ್ಯವಿಲ್ಲವೆಂಬುದು ಸ್ಪಷ್ಟ. ಆದುದರಿಂದ ನಾವು ಈ ದ್ವಂದ್ವದೊಳಗಿಂದ ಪಾರಾಗುವ ಒಂದು ಸುಲಭೋಪಾಯವನ್ನು ಹುಡುಕಿಕೊಳ್ಳಬೇಕಾಗಿದೆ. ತರುಣ-ತರುಣಿಯರಿಗೆ ಶ್ರೇಯಸ್ಸನ್ನು ಮಾಡಬಹುದಾದ ಮುಕ್ತಿಮಾರ್ಗ ಯಾವುದೆಂದು ವಿಚಾರಿಸಲು ಈಗ ಪ್ರಯತ್ನಿಸೋಣ.

*

ಉಜ್ವಲ ಭವಿಷ್ಯವನ್ನು ತರುಣ ಜನಾಂಗ ಹೊಂದಿರಬೇಕು ಎಂಬುದು ನಮ್ಮೆಲ್ಲರ ಆಶೆಯಾಗಿದೆ. ಇದು ನ್ಯಾಯವಾದುದೆಂಬುದರಲ್ಲಿ ಪ್ರತಿಮಾತಿಲ್ಲ. ಹೆತ್ತವರ ದೃಷ್ಟಿಯಲ್ಲಿ ಅವರವರ ಮಕ್ಕಳು ಎಂದೆಂದಿಗೂ ಕಿರಿಯರೇ, ಕೂಸುಗಳೇ! "ಊರಿಗೆ ಅರಸನಾದರೂ ತಾಯಿಗೆ ಮಗ" ಎನ್ನುತ್ತಾರಲ್ಲ, ಹಾಗೆ! ಆದರೆ ಅರಸುತನದ ಗೌರವ ದೊರಕಿಸಿಕೊಡುವ ಸಿಂಹಾಸನವನ್ನು ಮಗನು ಏರಿದ ಬಳಿಕ, ತಾಯಿಯು ಅತ್ಯುಚ್ಚವಾದ ಆ ಪೀಠಕ್ಕೆ, ಅದರ ಮರ್ಯಾದೆಗೆ ಕುಂದುಬಾರದಂತೆ, ತನ್ನ ಮಾತೃಸ್ಥಾನದ ಅಧಿಕಾರವನ್ನು ಚಲಾಯಿಸಬೇಕಲ್ಲವೆ? ಹಾಗಲ್ಲದಿದ್ದರೆ, ಆ ಸಿಂಹಾಸನಕ್ಕೆ, ಅದರ ಮೇಲೆ ತೂಗುವ ಆ ಶ್ವೇತಛತ್ರಕ್ಕೆ, ಏನು ಬೆಲೆ ಬಂದೀತು? ತರುಣರ ಸಮಸ್ಯೆಯನ್ನು ತುಸು ಸಹಾನುಭೂತಿಯಿಂದ ವಿಚಾರಿಸಿರಿ ಎಂದು ಹೇಳುವ ನಾನು ಹಿರಿಯರಿಂದ ಸ್ವಲ್ಪ ಮಟ್ಟಿನ ತ್ಯಾಗವನ್ನು ಅಪೇಕ್ಷಿಸುತ್ತೇನೆ.



" ಏನು ಇದು, ನಾಚಿಕೆ ಬರುವದಿಲ್ಲವೇ ನಿನಗೆ "

ಮಕ್ಕಳು ದೊಡ್ಡವರಾಗಿ, ದೇಶದ ನಾಗರಿಕರಾಗುತ್ತಾರೆ; ರಾಷ್ಟ್ರದ ಕಠಿನ ಸಮಸ್ಯೆಗಳನ್ನು ಬಿಡಿಸಬೇಕಾದ ಹೊಣೆಗಾರ ವ್ಯಕ್ತಿಗಳಾಗುತ್ತಾರೆ; ಕುಟುಂಬ ಮತ್ತು ಸಮಾಜದ ವ್ಯವಸ್ಥೆಯನ್ನು ಅವರು ಉಚಿತ ರೀತಿಯಲ್ಲಿ ಮುಂದರಿಸಿಕೊಂಡು ಹೋಗುತ್ತಾರೆ; ಹಣ್ಣೆಲೆಗಳು ಸ್ವಯಮೇವ ಉದುರುತ್ತಿರುತ್ತವೆ, ಆಗ ಹಸುರೆಲೆಗಳು ನಗುವುದನ್ನು ನಿಸರ್ಗಧರ್ಮವೆಂದು ಹಣ್ಣಾಗುತ್ತಿರುವ ಎಲೆಗಳು ತಿಳಿದು ಸಹನೆ ತೋರಿಸಬೇಕು. "ನಮ್ಮ ತಾರುಣ್ಯಕಾಲದ ಸಂಪ್ರದಾಯ ಮತ್ತು ನಡವಳಿಕೆಗಳೇ ಶ್ರೇಷ್ಠ" ಎನ್ನುತ್ತಾ ಈಗಿನದನ್ನು ತಿರಸ್ಕಾರದಿಂದ ಹಿರಿಯರು ದಯವಿಟ್ಟು ನೋಡಬಾರದು. ಇಂಥ ಚಪಲ ಮೂಡಿದಾಗಲೆಲ್ಲ ಅವರು ತಮ್ಮ ತಾರುಣ್ಯವನ್ನು ತಮ್ಮ ಹಿರಿಯರ ತಾರುಣ್ಯದ ಕಾಲದೊಡನೆ ಹೋಲಿಸಿ ನೋಡುವುದೇ ಒಳಿತು! ಹೊರಪೋಷಾಕು ಹೇಗೆ ಬದಲಾಗಿದೆಯೊ, ನಿತ್ಯದ ಆಚಾರವೂ ಹಾಗೆಯೇ ಬೇರೆಯಾಗಿದೆ; ಮಾನಸಿಕ ವಿಚಾರಧಾರೆಯೂ ಈ ಅವಧಿಯಲ್ಲಿ ತುಂಬ ಪರಿವರ್ತನೆ ಹೊಂದಿದೆ. ಎಲ್ಲ ಕ್ಷೇತ್ರದಲ್ಲೂ ಎರಡು-ಮೂರು ತಲೆಮಾರುಗಳ ಹಿಂದಿಗಿಂತ ಭಿನ್ನವಾದ ದಾರಿಯನ್ನು ಹಿಡಿದೇ ಪ್ರಗತಿಯು, ಪರಿವರ್ತನೆಯು ದಾರಿಯು ಸಾಗಿದೆ, ಉತ್ತರ ಭಾರತದ ಕೋಸಿ ನದಿ ತನ್ನ ಪ್ರವಾಹಗತಿಯನ್ನು ಬದಲಿಸಿರುವಂತೆ! ಇದನ್ನು ಹಿರಿಯರು ಮೊದಲು ಮನಗಾಣಬೇಕು; ಅವರು "ಕಾಲಾಯ ತಸ್ಮೈ ನಮಃ" ಎಂದರೆಯೇ ಶ್ರೇಯಸ್ಸು.

*

ಹಾಗಾದರೆ, ತರುಣ ಜನಾಂಗವನ್ನು ಅದರಷ್ಟಕ್ಕೆ ಬಿಟ್ಟುಬಿಟ್ಟರೆ ಕೆಲಸವಾಯಿತೆ? ಇಷ್ಟು ಸುಲಭದಲ್ಲಿ ಪರಿಹಾರಗೊಳ್ಳುವ ಸಮಸ್ಯೆ ಇದಲ್ಲ. ಎಲ್ಲ ಪಾರುಪತ್ಯವನ್ನೂ ತರುಣ ಜನಾಂಗದ ಕೈಗೆ ಕೊಟ್ಟುಬಿಟ್ಟರೆ, ಹಳಬರಿಗೆ ಈ ಲೋಕದಲ್ಲಿ ಉಳಿಯುವುದೇ ಕಠಿಣವಾದೀತು. ಎಲ್ಲ ಕ್ರಾಂತಿಗಳಲ್ಲಿ ಆದ ಹಾಗೆ, ಹಿರಿಯರ ಬೇಟೆ ನಡೆದೀತು! ಪರಿಸ್ಥಿತಿಯನ್ನು ಅಷ್ಟು ಮುಂದೆ ಹೋಗಗೊಡುವಂತಿಲ್ಲವಲ್ಲ! ಕಾರಣ, ಪರಸ್ಪರ ಸಮನ್ವಯ ಸಾಧನೆಗೆ ವಿವೇಕಶೀಲರು ಪ್ರಯತ್ನಪಡಬೇಕಾಗುತ್ತದೆ. ಸಮಾಜವನ್ನು ಮುನ್ನಡೆಸಿಕೊಂಡು ಹೋಗುವುದೆಂದರೆ ಹಿಂದಿನದೆಲ್ಲವನ್ನೂ ಅಳಿಸಿಬಿಡುವುದಲ್ಲ; ಮುಂದಿನ ದಾರಿಯನ್ನು ಗುರುತಿಸಿ, ಹಿಂದಿನದರೊಡನೆ ಹೊಂದಾಣಿಕೆಯನ್ನು ಸ್ಥಾಪಿಸಿ ಸಾಗುವುದೆಂದೇ ಇದರ ಅರ್ಥ.

ಇದನ್ನು ಹೇಗೆ ಸಾಧ್ಯವಾಗಿ ಮಾಡಬಹುದು? ನಾಗರಿಕತೆಯ ಮೇಲೆ ತುಸುವಾದರೂ ಅಭಿಮಾನವಿರುವವರಲ್ಲಿಯಷ್ಟೇ ನಾವು ನವಜಾಗೃತಿಯನ್ನು ಹುಟ್ಟಿಸಬಹುದು. ತೀರ ದುರಾಚಾರಿಯಾದವನನ್ನು ಸದಾಚಾರಸಂಪನ್ನನಾಗಿ ಮಾಡಲು ಮಂತ್ರದಂಡಕ್ಕೆ ಅಥವಾ ಪವಾಡಪುರುಷರಿಗೆ ಮಾತ್ರ ಸಾಧ್ಯವಲ್ಲದೆ ಸಾಮಾನ್ಯರಿಗೆ ನೀಗುವ ಮಾತು ಅದಲ್ಲ. ಇದ್ದಲಿನ ತುಣುಕಿಗೆ ಬೆಂಕಿ ಹಚ್ಚಿ ಉರಿಸಬಹುದು; ಹಿಮುಗಡ್ಡೆಯ ತುಂಡಿಗಲ್ಲ. ಅಧಿಕಾರವನ್ನು ಒಪ್ಪುವವನ ಮೇಲೆ ಮಾತ್ರ ಅದನ್ನು ನಯಭಯಾಧಿ ವಿಧಾನಗಳಿಂದ ನಾವು ಚಲಾಯಿಸಬಹುದು; ದಂಗೆಖೋರನ ಮೇಲಲ್ಲ. ನಮ್ಮ ತರುಣರು ಇಂದು ದಂಗೆಖೋರರಾಗಿದ್ದಾರೆಯೆ? ಟೀಕೆಗಳಿಗೆ ಮಾತ್ರ ಕಿವಿಗೊಟ್ಟ ಪಕ್ಷದಲ್ಲಿ ತರುಣ ಜನಾಂಗದ ದೆಸೆಯಿಂದ ಸರ್ವನಾಶವಾಯಿತು ಎನ್ನಬೇಕಾಗುತ್ತದೆ. ನಿರಾಶೆಯ ನಿಟ್ಟುಸಿರನ್ನೆ ಬಿಡಬೇಕಾಗುತ್ತದೆ. ಆದರೆ ವಾಸ್ತವಾಂಶವನ್ನು ಗಮನಿಸಿದರೆ ಇಷ್ಟು ಹೆಚ್ಚಿನ ಭೀತಿಗೆ ಕಾರಣವಿರುವುದಿಲ್ಲ. ನಮ್ಮ ಹುಡುಗರು ಹಿರಿಯರು ಭಾವಿಸುವಷ್ಟು ಕೆಟ್ಟಿಲ್ಲ.

ಮನುಷ್ಯನ ವ್ಯಕ್ತಿತ್ವದ ವಿಶ್ಲೇಷಣೆಯನ್ನು ಮಾಡಿದ ಮಹಾನುಭಾವರಿಗೆ ಅನುವಂಶಿಕ ಗುಣಗಳ ಪ್ರಭಾವವೂ ಬಾಹ್ಯ ವಾತಾವರಣದ ಒತ್ತಡವೂ ಮುಖ್ಯಾಂಶಗಳಾಗಿ ಕಂಡುಬಂದಿವೆ. ಈಚೆಗೆ, ಕೆಲವು ತಲೆಮಾರುಗಳಲ್ಲಿ ಅನುವಂಶಿಕವಾದ ಗುಣಸಂಪತ್ತು ಹೆಚ್ಚು ಉತ್ತಮವಾಗುತ್ತ

ಹೋಗುತ್ತಿದೆ ಎಂದು ಮನಃಶಾಸ್ತ್ರಜ್ಞರ ಅಭಿಪ್ರಾಯ. ಆದರೆ, ಏನು ಕಾರಣವೋ, ಬಾಹ್ಯ ಪ್ರಭಾವವು ಇಷ್ಟು ಆಶಾದಾಯಕವಾಗಿಲ್ಲ. ಔದ್ಯಮಿಕ ವಿಪ್ಲವ, ಯಾಂತ್ರಿಕ ಸಲಕರಣೆಗಳ ಪ್ರಾಬಲ್ಯ, ಜಗತ್ತಿನ ಇತರ ಸಂಸ್ಕೃತಿಗಳೊಡನೆ ತಿಕ್ಕಾಟ ಇತ್ಯಾದಿ ಕಾರಣಗಳಿಂದ ನಮ್ಮೆಲ್ಲರ ನಡವಳಿಕೆಯಲ್ಲಿ ಭೀಕರವಾದ ತುಮುಲವೇಳುವಂತಾಗಿದೆ–ನಾವಿನ್ನೂ ನಿಶ್ಚಿತ ನೆಲೆಯೊಂದನ್ನು ಮುಟ್ಟಿಲ್ಲ. ಬೇಗನೆ ಅದನ್ನು ಮುಟ್ಟಲು ಶಕ್ತರಾಗುವುದೂ ಸಂಶಯ. ಜಗತ್ತು ಹಿಂದಿಗಿಂತ ಎಷ್ಟೋ ಸಮೀಪಕ್ಕೆ ಸರಿದಿರುವುದರಿಂದ—ತಾಸಿಗೆ ೨,೫೦೦ ಮೈಲು ವೇಗದಲ್ಲಿ ಇಂಧನವನ್ನು ಮರಳಿ ತುಂಬಿಸಿಕೊಳ್ಳುವ ಆವಶ್ಯಕತೆ ಇಲ್ಲದೆ ಪೃಥ್ವಿಗೆ ಒಂದೇಸವನೆ ಎಂಭತ್ತು ಸುತ್ತು ತೆಗೆಯಬಲ್ಲ ಅಣುವಿಮಾನಗಳನ್ನು ಕಟ್ಟುವ ಕನಸನ್ನು ನಾವೀಗ ಕಾಣುತ್ತಿರುವುದರಿಂದ—ಇಷ್ಟರವರೆಗೆ ನಾವು ಬಹಳ ಜತನದಿಂದಲೂ ಜೋಪಾನವಾಗಿಯೂ ಕಾಯ್ದುಕೊಂಡು ಬಂದ ಸಂಪ್ರದಾಯಗಳೂ ಸಾಂಸ್ಕೃತಿಕ ವೈಶಿಷ್ಟ್ಯಗಳೂ ಇತರ ವಿಶ್ವವ್ಯಾಪಾರಗಳೊಡನೆ, ಪದ್ಧತಿ ಮತ್ತು ಪರಂಪರೆಗಳೊಡನೆ, ತೀವ್ರವೇ ಸೇರಿಕೊಂಡು ಹೋಗಬೇಕಾಗುತ್ತದೆ. ಇದನ್ನು ಈಗಲೇ ತಿಳಿದುಕೊಂಡು ನಾವು ಮುಂದಿನ ಜನಾಂಗಕ್ಕೆ ತಕ್ಕ ತರಬೇತಿ ಕೊಡದಿದ್ದರೆ ಈಗಿಗಿಂತ ನೂರುಮಡಿಯಾದ ಕಷ್ಟಕ್ಕೆ ನಮ್ಮ ಭಾವಿ ಸಂತಾನವನ್ನು ನೂಕಿದಂತಾಗುತ್ತದೆ.

*

ಜೋಯಿಸನಂತೆ ಹೀಗೆ ನಾನು ಹೇಳುತ್ತಿದ್ದೇನೆಂದು ಭಾವಿಸಬಾರದು— ಶ್ರೇಷ್ಠ ವಿಚಾರಕರಿಗೆ ಇದು ಒಪ್ಪಿತವಾದ ಮಾತು. "ತರುಣರ ಹಿತವಾಗಬೇಕೆಂದಿದೆಯೆ? ಇಷ್ಟು ವಿಶಾಲವಾದ ದೂರದೃಷ್ಟಿಯನ್ನಿಟ್ಟುಕೊಂಡು ಅನುಕಂಪದೊಡನೆ ನಡೆದುಕೊಳ್ಳಿರಿ" ಎಂಬುದೇ ಕಾಲರಾಯನು ಹಿರಿಯರಿಗೆ ಮಾಡುವ ಉಪದೇಶ. ಸಂಘರ್ಷದಿಂದ ಭೀತರಾಗಿರುವ ಕಿರಿಯರಿಗೆ ಹಿರಿಯರ ದೃಢವಾದ ಆಸರೆ ಬೇಕಾಗಿದೆ. "ನಾಳೆಯ ವಾತಾವರಣವನ್ನು ವಿಚಕ್ಷಣತೆಯಿಂದ ಸರಿಯಾಗಿ ಊಹಿಸಿರಿ" ಎಂದೇ ಹಿರಿಯರು ಈ ಸಂದರ್ಭದಲ್ಲಿ ಉಪದೇಶ ಮಾಡಬಲ್ಲರು; ಮಾಡಲೂಬೇಕು. ಆದರೆ ಎಂದೆಂದಿಗೂ "ಹಿಂದೆ ನೋಡಿ, ನಡೆಯಿರಿ. ಹಿಂದಿನ ಆದರ್ಶವನ್ನೆ ನಂಬಿ ಕುಳಿತಿರಿ" ಎಂದು ಮಾತ್ರ ಹಿರಿಯರು ಹೇಳಲಾಗದು. ನಮಗೆ ಸುಭದ್ರ ಸಾಂಸ್ಕೃತಿಕ ತಳಪಾಯ ಬೇಕು, ನಿಜ. ಭಾರತದಮಟ್ಟಿಗೆ ಈ ಬುನಾದಿಯು ತುಂಬ ಬಲಿಷ್ಠವಾಗಿದೆ. ಇದರ ಮೇಲೆ ನಾವು ಎಷ್ಟು ಎತ್ತರದ ಸೌಧವನ್ನೂ ಕಟ್ಟಿಕೊಳ್ಳಬಹುದು. ಗುರುತ್ವಾಕರ್ಷಣೆಗೆ ತಲೆಬಾಗಬೇಕೆಂಬುದೊಂದೇ ಇಲ್ಲಿ ಶರ್ತ—ಈ ಗುರುತ್ವಾಕರ್ಷಣಶಕ್ತಿಯೇ ನೈತಿಕ ಮೂಲ್ಯ: ಅದಕ್ಕೆ ವಿರುದ್ಧ ಹೋಗದಿದ್ದರೆ ಆಯಿತು.

ಕಾಲಬದಲಾದಂತೆ ನೈತಿಕ ಮೂಲ್ಯ ಬದಲಾಗುವುದಿಲ್ಲವೆ? ಹೊರ ತೋರಿಕೆಗೆ ನಕಾರಾರ್ಥಕವಾದ ಉತ್ತರ ಸಲ್ಲದೆನಿಸುತ್ತದೆ. ಆದರೆ ನೈತಿಕ



ಪಾರ್ಕಿನಲ್ಲಿ ಭಿಕ್ಷುಕ: "ಅಮ್ಮಾ, ನಮಗೂ ಒಂದಿಷ್ಟು ನೀಡಿರಿ!"

ಮೂಲ್ಯವೆನ್ನುವಾಗ ನಾವು ಅಂತಃಸತ್ವಕ್ಕೆ ಮಹತ್ವ ಕೊಡಬೇಕು—ತಿರುಳಿಗೆ ಬೆಲೆ ಕಟ್ಟಬೇಕು. ಹರಿಜನರನ್ನು ಒಂದು ಕಾಲದಲ್ಲಿ ಹಿಂದುಗಳು ದೂರ ವಿಡುತ್ತಿದ್ದರು. ನಮ್ಮ ತರುಣ ಜನಾಂಗದಲ್ಲಿ ಇಂದು ಹೆಚ್ಚಿನವರು ಇದಕ್ಕೆ ಸಮ್ಮತಿಸುತ್ತಿಲ್ಲ. ಹರಿಜನರಿಗೆ ಅಗ್ರಪೀಠ ಕೊಡುವುದನ್ನು ಭೂಷಣವೆಂದು ರಾಜಕೀಯ ಪಕ್ಷಗಳು ಹೇಗೆ ಭಾವಿಸಿವೆಯೊ ವಿದ್ಯಾರ್ಥಿವೃಂದದ ಕೆಲವು ಮಂದಿ ತಮ್ಮ ನಾಯಕನ ಆಯ್ಕೆಯಲ್ಲಿಯೂ ಇಂಥ ಸಾಹಸಕ್ಕೆ ಕೈಹಾಕಿಯಾರು. ಚುನಾವಣೆಯ ಸಮಿತಿಯ ಮುಂದೆ ಇವರು ತಮ್ಮ ಅಭಿಪ್ರಾಯವನ್ನು ಮಂಡಿಸಬಹುದು; ಒತ್ತಾಯಿಸಬಹುದು. ಮತದಾರರಲ್ಲಿ ತಮಗೆ ಬೆಂಬಲವನ್ನು ಕೇಳಬಹುದು. ಅವರಿಗೆ ನೆರವು ಸಾಕಷ್ಟು ಸಿಗದಿದ್ದರೆ, ಅವರು ಜನಾಭಿಪ್ರಾಯ ಸಂಘಟನೆಯ ಇತರ ಶಾಂತ ವಿಧಾನಗಳನ್ನು ಅನುಸರಿಸಬಹುದು. ಇದು ನೈತಿಕ ಮೂಲ್ಯವನ್ನು ಗುರುತಿಸಿ ನಡೆಯುವ ಕೆಲಸ; ಇದೇ ಪ್ರಾಮುಖ್ಯವಾದ ಅಂಶವಲ್ಲದೆ, ಹರಿಜನನನ್ನು ಹುರಿಯಾಳಾಗಿ ನಿಲ್ಲಿಸುವ ವಿಚಾರದಲ್ಲಿ ವ್ಯಕ್ತವಾದ ಹಿಂದಿನ ಮತ್ತು ಇಂದಿನ ಮನೋಭಾವದ ಅಂತರ ಕೇವಲ ಗೌಣ. ಶಾಂತ ವಿಧಾನವನ್ನು ಬಿಟ್ಟು, ಪ್ರತಿಕಕ್ಷಿಗಳ ಸೊಂಟ ಮುರಿಯಲು ಹೋಗುತ್ತಿದ್ದರೆ, ಅದನ್ನು ಹಿಂದಿನ ಸಹೃದಯರಂತೆ ಇಂದಿನವರೂ ಅನ್ಯಾಯವೆಂದೇ ಹೇಳುತ್ತಾರೆ—ಅದಕ್ಕೆ ಮನ್ನಣೆ ಸಿಗದು.

*

"ನಮಗೆ ಎತ್ತರ ಎತ್ತರಕ್ಕೆ ಹಾರಲು ಅವಕಾಶ ಕೊಡಿ" ಎಂದು ಉತ್ಸಾಹಿ ತರುಣರು ಹಿರಿಯರನ್ನು ಕೇಳುತ್ತಿದ್ದಾರೆ. ಹಿರಿಯರ ಮೇಲ್ವಿಚಾರಣೆಯೇ ಬೇಡವೆಂದು ಅವರು ನಿರಾಕರಿಸುತ್ತಿದ್ದಾರೆನ್ನುವುದು ಸರಿಯಲ್ಲ. "ನಮ್ಮನ್ನು ನೀವು ಚೆನ್ನಾಗಿ ನಡೆಸಿಕೊಳ್ಳಿ" ಎಂಬುದೇ ಯುವಕಯುವತಿಯರ ಬಿನ್ನಹ. ತಮ್ಮ ವ್ಯಕ್ತಿತ್ವದ ಪ್ರತಿಫಲನಕ್ಕೆ ಅವರು ಸಂದರ್ಭಗಳನ್ನು ಕಾಯುತ್ತಿರುತ್ತಾರೆ; ಶಕ್ತಿ, ಸಾಮರ್ಥ್ಯಗಳನ್ನು ತೋರ್ಪಡಿಸಿ ಹಿರಿಯರ ಮೆಚ್ಚಿಗೆಯನ್ನು ಗಳಿಸುವ ಉತ್ಕಟೇಚ್ಛೆ ಕಿರಿಯರದು. ಹಟಮಾರಿತನ, ಮೊಂಡುತನ, ಪುಂಡುತನ, ಉಡಾಳತನಗಳು ಹಿರಿಯರು ಈ ಆಶೋತ್ತರಗಳಿಗೆ ಗಮನವೀಯದೆ, ಸಮ್ಮತಿ ಕೊಡದೆ, ಮೂದಲಿಕೆಯ ಮಾತುಗಳಿಂದ ತಮ್ಮನ್ನು ಹಂಗಿಸಿದ ಕ್ಷಣದಲ್ಲಿಯಷ್ಟೇ ಕಿರಿಯರಲ್ಲಿ ಮೂಡಿಕೊಳ್ಳುತ್ತವೆ. ಇದನ್ನು ತಪ್ಪಿಸಲು ಮನೆಯ ವಾತಾವರಣ ಪ್ರೇಮಮಯವಾಗಿರಬೇಕು. ಹಿರಿಯರ ಮಾರ್ಗದರ್ಶನ ಮಗುವಿಗೆ ಹೆಚ್ಚು ಹೆಚ್ಚು ಸ್ವತಂತ್ರ ರೀತಿಯಲ್ಲಿ ಉತ್ತಮ ವ್ಯವಹಾರಗಳನ್ನು ಮಾಡುತ್ತಿರುವುದಕ್ಕೆ ಪೋಷಕ

ವಾಗಿ ದೊರಕಬೇಕು. ದೇಶ, ಕಾಲಗಳಿಗೆ ಉಚಿತವಾದ ಕಿರಿಯರ ಆಕಾಂಕ್ಷೆಗಳಿಗೆ ಹಿರಿಯರಿಂದ ನೆರವು ಸಿಗಬೇಕೇ ಹೊರತು, ಬೈಗಳಲ್ಲ.

ಸಮಾಜದ ಪುರೋಗತಿಗೆ ಘಾತಕವಾದ ವಿಷಯಗಳಿಗೆ ತಮ್ಮ ಸಮ್ಮತಿ ಇಲ್ಲವೆಂದು ಹಿರಿಯರು ಬಾಲ್ಯಕಾಲದಲ್ಲಿಯೇ ಈಗಿನ ಕಿರಿಯರಿಗೆ ತಿಳಿಯಪಡಿಸಲು ಸಮರ್ಥರಾದರೆ, ಮುಂದಿನ ತರುಣ ಜನಾಂಗದ ಮೇಲೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಮುಂದಿನ ಪೀಳಿಗೆಯವರಿಗೆ ನಾನಾ ಬಗೆಯ ಸಂಘರ್ಷದ ಕಷ್ಟಕಾಲವೇ ಕಾದಿದೆ. ಹಿರಿಯರು ಇದನ್ನು ಉಪೇಕ್ಷಿಸಲಾಗದು. ಸಮಾಜದ ಅಭಿವೃದ್ಧಿಯು ಭವಿಷ್ಯದಲ್ಲಿ ಹೇಗಾಗುವುದೆಂಬುದನ್ನು ನಿಷ್ಕರ್ಷೆಯಾಗಿ ನಾವು ಯಾರೂ ಈಗಲೇ ಹೇಳುವಂತಿಲ್ಲ. ಉದಾರ ಭಾವನೆಗೆ, ಉದಾತ್ತ ದೃಷ್ಟಿಕೋಣಕ್ಕೆ ಇಲ್ಲಿ ಎಡೆ ಇರಲಿ ಎಂಬ ಸಣ್ಣ ವಾಕ್ಯದಿಂದಲೇ ನಾವು ತತ್ಕಾಲಕ್ಕೆ ತೃಪ್ತಿಪಟ್ಟುಕೊಂಡು, ಸಮಯ ಸಂದರ್ಭಗಳು ಬಂದ ಹಾಗೆಲ್ಲ ಸಮಂಜಸ ನಿರ್ಣಯವೊಂದನ್ನು ಮಾಡಬೇಕಾಗುತ್ತದೆ. ತರುಣರ ಮಾನಸಿಕ ಗೊಂದಲವನ್ನು ಎಷ್ಟರ ಮಟ್ಟಿಗೆ ಕಡಿಮೆ ಮಾಡಲು ನಾವು ಶಕ್ತರಾಗುತ್ತೇವೋ ಅಷ್ಟು ಮಟ್ಟಿಗೆ ವಾತಾವರಣವು ಸುಧಾರಿಸಿಕೊಳ್ಳುತ್ತದೆ. ಭದ್ರತೆಯ ಭರವಸೆಯನ್ನು ಕಿರಿಯರಿಗೆ ಕೊಡುವುದು ಮತ್ತು ಸಾಂಸ್ಕೃತಿಕ ತಾಕಲಾಟದಲ್ಲಿ ನುಗ್ಗಾಗದಂತೆ ಮನವೊಲಿಸುವಿಕೆಯಿಂದ ಕಿರಿಯರ ಹೃದಯವನ್ನು ಗೆದ್ದು ಎಚ್ಚರದಿಂದ ಮೈಗಾವಲಿರುವುದು—ಇವೇ ಇದಕ್ಕಿರುವ ಉಪಾಯ.

*

ಕಿರಿಯರ ಶ್ರೇಯಸ್ಸನ್ನು ಬಯಸುವ ಹಿರಿಯರು ಅವರನ್ನು ಮನುಷ್ಯರೆಂದು ಮನ್ನಿಸಲು ಹಿಂಜರಿಯಲಾಗದು. ವಿಧೇಯಕತೆ ಮತ್ತು ಶಿಸ್ತುಪಾಲನೆಗಳನ್ನು ಹಿರಿಯರು ಕಿರಿಯರಿಂದ ಅಪೇಕ್ಷಿಸಬಾರದೆಂದು ಇದರ ಅರ್ಥವಲ್ಲ. ಕಿರಿಯರಿಗೆ ತಮ್ಮ ನ್ಯಾಯ್ಯವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ಸಮಾಜಘಾತಕವಲ್ಲದ ಚಟುವಟಿಕೆಗಳಲ್ಲಿ ನಿರತರಾಗಲು ಹೆಚ್ಚು ಹೆಚ್ಚು ಅವಕಾಶಗಳನ್ನು ಕೊಡುವದು ಯೋಗ್ಯವಾಗಿದೆ. ತರುಣ ಜನಾಂಗದವರು ಹೆಚ್ಚಾಗಿ ವಿದ್ಯಾರ್ಥಿ ಜೀವನವನ್ನು ನಡೆಸುತ್ತಿರುವರೆಂಬುದರಿಂದ ಅವರಿಗಾಗಿ ಕೆಲವು ಸೂಚನೆಗಳನ್ನು ಕೊಡಬಹುದು—ವಿಧೇಯತೆಯು ಹೇಡಿತನವಲ್ಲವೆಂದು ಕಿರಿಯರು ಭಾವಿಸಲಿ! ಸಲಿಗೆಯು ಬಲಹೀನತೆಯಲ್ಲವೆಂದು ಹಿರಿಯರು ತಿಳಿಯಲಿ! ಅವರವರ ಸದಭಿರುಚಿಗಳಿಗನುಗುಣವಾದ ಕ್ಷೇತ್ರದಲ್ಲಿ ಚೆನ್ನಾದ ಶಿಕ್ಷಣ ಕಿರಿಯರಿಗೆ ದೊರಕಲಿ! ತಮ್ಮ ಶಕ್ತಿಯನ್ನವರು ಆಟ-ವಿನೋದಗಳಲ್ಲಿ ದ್ವೇಷಾಸೂಯೆಗಳಿಗೆಡೆ ಇಲ್ಲದಂತೆ ವ್ಯಕ್ತಪಡಿಸುವ ಸಂದರ್ಭಗಳು ಸದಾ ಸಿಗಲಿ! ಕಿರಿಯರ ಮೇಲೆ ಹಿರಿಯರು ಸ್ವಲ್ಪ ಸ್ವಲ್ಪವೇ ಹೊಣೆಗಾರಿಕೆಯನ್ನು ಹೇರುತ್ತ ಹೋಗಲಿ! ಜವಾಬ್ದಾರಿಯನ್ನು ಚೆನ್ನಾಗಿ ಕಿರಿಯರು ನಿರ್ವಹಿಸಿದಾಗ ಪ್ರಶಂಸೆ ಮಾಡಲಿ! ಕಿರಿಯರು ತಪ್ಪಿದಾಗ ತೇಜೋವಧೆ ಮಾಡದೆ, ಪ್ರೇಮ ಮಾರ್ಗದಿಂದ ಅವರಿಗೆ ಹಿರಿಯರು ತಿಳಿಸಿ ಹೇಳಲಿ!

ಇದು ನನಗೆ ಹೊಳೆಯುವ, ನಾನು ಸೂಚಿಸುವ ಕ್ರಮ. ಕಿರಿಯರು ತಪ್ಪುವದಿಲ್ಲವೆಂದು ಸಾಧಿಸುವುದು ನನ್ನ ಉದ್ದೇಶವಲ್ಲ. ಹಾಗೆ ಮಾಡಹೋಗುವದು ಎದೆಗಾರಿಕೆಯಾದೀತು; ನ್ಯಾಯಸಮ್ಮತವಾಗಲಾರದು. ಕಿರಿಯರಿಂದ ತಪ್ಪಾಗುವದಕ್ಕೆ ಅವರ "ಅಹಂ'' ಕಾರಕ್ಕೆ ಸಮರ್ಪಕವಾದ ನಿರ್ಗಮನ ಮಾರ್ಗ ಸಮಾಜದಲ್ಲಿ ದೊರಕುತ್ತಿಲ್ಲವೆಂಬುದೇ ಮುಖ್ಯ ಕಾರಣ. ಅವರ ಸದಭಿಲಾಷೆಗಳಿಗೆ, ಮಹತ್ವಾಕಾಂಕ್ಷೆಗಳಿಗೆ ನೀರೆರೆದು ಪೋಷಿಸುವ ಅಭಿಮಾನಿಗಳು ಕೌಟುಂಬಿಕ ವರ್ಗದಲ್ಲಿ ಸಾಕಷ್ಟು ಸಿಗದಿರುವುದೂ ಪೋಕರಿಗಳಂತೆ ಅವರು ವರ್ತಿಸಲು ಕಾರಣ. ಶಾಲೆಯಲ್ಲಿ ಮೇಧಾವಿ ವಿದ್ಯಾರ್ಥಿಗೆ ಶಿಕ್ಷಕರು ಪಾಠ ಹೇಳಿ ಕೊಡುವ ವೇಗ ಬಹಳ ನಿಧಾನವೆನಿಸುತ್ತದೆ; ಪುನರಾವರ್ತನೆಯ ಕಾಲದಲ್ಲಿ ಅವನು ಚಿತ್ರ ಬಿಡಿಸುತ್ತ ಕುಳಿತುಕೊಳ್ಳಬಹುದು. ಅವನು ಪಾಠದತ್ತ ಈಗ ಲಕ್ಷ್ಯ ಕೊಡುವದಿಲ್ಲ—ಏಕೆಂದರೆ ಅವನು ಆ ಪಾಠವನ್ನು ಕಲಿತಾಗಿದೆ. ಅವನ ಈಗಿನ ವರ್ತನೆ ಶಿಸ್ತಿಗೆ ವಿರುದ್ಧ ಎನ್ನುವವರು ಅವನ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡವರಲ್ಲ! ಕಾಲೇಜಿನ ಹುಡುಗನೊಡನೆ ಸಲಿಗೆ ಬೆಳೆಸಿ, ಪ್ರಣಯ ಸಲ್ಲಾಪದಲ್ಲಿ ತೊಡಗಿರುವ ತರುಣಿಗೆ ಹಿರಿಯರು ಪ್ರಾಪ್ತವಯಸ್ಸಿನಲ್ಲಿಯೇ ಅನುರೂಪ ವರನೊಡನೆ ಮದುವೆ ಮಾಡಿಬಿಡುತ್ತಿದ್ದರೆ, ಮರ್ಯಾದೆ ಹೋಗುವ ಪ್ರಸಂಗ ಬರುತ್ತಿದ್ದಿಲ್ಲ. ಯುವಕರ ಈ ಮಾದರಿಯ ಎಷ್ಟೋ " ಮಹಾಪರಾಧ '' ಗಳಿಗೆ ತಾವೇ ಹೊಣೆಯಾಗಿದ್ದೇವೆ ಎಂಬುದನ್ನು ತಿಳಿದುಕೊಳ್ಳುವದು ಹಿರಿಯರಿಗೆ ತಮ್ಮ ಘನತೆಗೆ ಕಡಿಮೆಯಾಗಿ ತೋರಬಾರದು. ಕಿರಿಯರನ್ನು ಮೇಲೆ ತಂದು ಉತ್ಕರ್ಷದ ಪಥಕ್ಕೇರಿಸಬಲ್ಲವರು ಹಿರಿಯರೇ—ಒಪ್ಪೋಣ. ಆದರೆ, ಅರಸನ ತಪ್ಪು ಪುರೋಹಿತನ ಹೊಣೆ ಹೇಗಾಗುವುದೋ, ಹಾಗೆ ಹೆಚ್ಚಿನ ತಪ್ಪುಗಳಿಗೆ ಹಿರಿಯರೇ ಕಾರಣ ಎಂಬುದನ್ನು ಮರೆಯದಿರೋಣ!

ಅಸತ್ಯ ಸೌಂದರ್ಯ :

ಭಾರತದ ಕವಿಸಮಯಗಳು

ಲೇಖಕರು: ಡಾ. ಕೆ. ಕೃಷ್ಣಮೂರ್ತಿ, ಎಂ ಎ., ಪಿಎಚ್. ಡಿ.

ಸ್ಥವಿರನ ನಗುವಂತಿರೆ ತಾಂ
ಕವಿವದನಾಂಭೋಜಬದ್ಧಸದ್ಮಳ್ ಮುದದಿಂ।
ಭುವನಮಶೇಷಂ ಬೇರೆಂ-
ಬವೊಲನಿಶಂ ತೋರಲಾರ್ಪ ವಾಣಿಯೆ
ಗೆಲ್ಗೆಳ್ ॥ *

ಸತ್ಯಾನ್ವೇಷಣೆ ಶಾಸ್ತ್ರದ ಲಕ್ಷ್ಯವಾದರೆ ಕಾವ್ಯದ ಗುರಿ ಸೌಂದರ್ಯೋಪಾಸನೆ. ಸತ್ಯವು ಪ್ರಜ್ಞಾವೇದ್ಯ; ಆದರೆ ಸೌಂದರ್ಯ ಅನುಭವೈಕಗಮ್ಯ. ಸತ್ಯಗ್ರಾಹಿಯಾದ ಪ್ರಜ್ಞೆಯು ತರ್ಕದಲ್ಲೇ ಪ್ರತಿಷ್ಠಿತ; ಆದರೆ ಸೌಂದರ್ಯಗ್ರಾಹಿಯಾದ ಪ್ರತಿಭೆ ತರ್ಕನಿರಪೇಕ್ಷ. ಗುರೂಪದೇಶದಿಂದಲೂ ಸಂತತ ಪ್ರಯತ್ನದಿಂದಲೂ ಶಾಸ್ತ್ರ ಪಾಂಡಿತ್ಯವನ್ನು ಸರ್ವರೂ ಸಾಧಿಸಬಹುದು; ಆದರೆ ಸೌಂದರ್ಯ ಪರಾಮರ್ಶಕ್ಕೆ ಜನ್ಮಸಿದ್ಧವಾದ ಸಂಸ್ಕಾರವೊಂದೇ ಪ್ರಯೋಜಕ †. ಇಂತಹ ಪ್ರತಿಭಾವಂತರ ಸಂಖ್ಯೆ ಯಾವಾಗಲೂ ಸಣ್ಣದಾಗಿಯೇ ಇರುತ್ತದೆ. ಆದರೆ ಅವರ ಕಲ್ಪನಾಕೃತಿಗಳು ಅಜರಾಮರವಾದ ಕೀರ್ತಿಯನ್ನು ಪಡೆಯಬಲ್ಲವು; ಅನಂತ ಕಾಲದ ವರೆಗೂ ಸಹೃದಯರ ಮೆಚ್ಚುಗೆಗೆ ಪಾತ್ರವಾಗಬಲ್ಲವು. ಹೊಸ ಹೊಸ ಸಂಶೋಧನಗಳಿಂದ ಶಾಸ್ತ್ರಪ್ರಕ್ರಿಯೆಗಳು ಕಾಲಕಾಲಕ್ಕೂ ಬದಲಾಯಿಸುತ್ತವೆ; ಆದರೆ ಮಾನವಸ್ವಭಾವವು ಮಾತ್ರ ಬದಲಾಗದಿರುವದರಿಂದ ಸೌಂದರ್ಯಸಾರವಾದ ಕಾವ್ಯದ ಆಸಕ್ತಿ ಎಂದೂ ಕುಂದುವುದಿಲ್ಲ. ಕವಿಗಳು ತಮ್ಮ ವಾಣಿಯು ಎಷ್ಟೇ ಅಲೌಕಿಕವಾಗಿದ್ದರೂ ಅಸಮಂಜಸವಾಗಿದ್ದರೂ ಅದನ್ನು ತಾವು ಕಂಡ ಸತ್ಯದ ಪ್ರತಿಬಿಂಬವೆಂದೇ ಸಾರುವುದು ಅವರ ರೂಢಿ. ಹೀಗೆ ತರ್ಕಬದ್ಧವಾದ ಶಾಸ್ತ್ರಸತ್ಯವೇ ಬೇರೆ; ತರ್ಕವಿಸಂಗತವಾದ ಕಾವ್ಯಸತ್ಯ ಅಥವಾ ಕಲ್ಪನಾಸತ್ಯವೇ ಬೇರೆ ಎನ್ನುವ ಪ್ರಸಂಗ ವಿಮರ್ಶಕನಿಗೆ ಒದಗುತ್ತದೆ. ಆದರೆ ತಾತ್ವಿಕವಾಗಿ ವಿಚಾರ ಮಾಡುವವರು ಸತ್ಯದಲ್ಲಿ ಎರಡು ಬಗೆಗಳನ್ನು ಒಪ್ಪಲು ಸಿದ್ಧರಾಗಲಾರರು. ಪ್ರಮಾಣಸಿದ್ಧವಾದುದು ಮಾತ್ರ ಸತ್ಯವೆಂದು ನಂಬುವ ತತ್ತ್ವಚಿಂತಕನು ಪ್ರಮಾಣಸಿದ್ಧವಲ್ಲದುದನ್ನು ಸತ್ಯವೆಂದು ಸ್ವೀಕರಿಸುವುದಿಲ್ಲ; ಅದನ್ನು ಅಸತ್ಯವೆಂದೇ ಸಿದ್ಧಾಂತಿಸುತ್ತಾನೆ. ಈ ದೃಷ್ಟಿಯಿಂದ ಪ್ಲೇಟೋ ಎಂಬ ಗ್ರೀಕ್ ತತ್ವಜ್ಞಾನಿಯು ಕವಿಗಳಿಗೆ ತನ್ನ ಆದರ್ಶ ರಾಜ್ಯದಲ್ಲಿ ಸ್ಥಾನವನ್ನು ನಿರಾಕರಿಸುತ್ತಾನೆ; ನಮ್ಮ ಮೀಮಾಂಸಕರೂ "ಕಾವ್ಯಾಲಾಪಾಂಶ್ಚ ವರ್ಜಯೇತ್'' ಎನ್ನುತ್ತಾರೆ. ಆದರೆ ಕವಿಗಳು ಇದು ತಮಗೆ ದೂಷಣವಲ್ಲ; ಭೂಷಣವೇ ಎಂದು ಹೊಗಳಿಕೊಳ್ಳುತ್ತಾರೆ; ಏಕೆಂದರೆ ಜಗತ್ತಿನ ಸ್ಥೂಲವಾದ ಪ್ರತ್ಯೇಕಾಂಶಗಳು ಶಾಸ್ತ್ರಗೋಚರವಾಗುವಂತೆ ಮೂಲಭೂತವಾದ ಸರ್ವವ್ಯಾಪಿಯಾದ ಪರಮಾರ್ಥ ಸತ್ಯವು ಗೋಚರವಾಗುವುದಿಲ್ಲ; ಅದರ ಸಾಕ್ಷಾತ್ಕಾರವೂ ತರ್ಕದೂರ. ತಮ್ಮ ಕಲ್ಪನಾಸತ್ಯವಾದರೂ ಅತ ಏವ "ಬ್ರಹ್ಮಾಸ್ವಾದಸಹೋದರ'' ವೆಂದು ಕವಿಗಳೂ ಕಾವ್ಯಮೀಮಾಂಸಕರೂ ಸಂತುಷ್ಟರಾಗುತ್ತಾರೆ. ಆದಿಯಲ್ಲಿ ಬರೆದ ಪದ್ಯದಲ್ಲಿ ಹೇಳಿರುವಂತೆ— ಮುದುಕನಾದ ಬ್ರಹ್ಮನು ಮಾಡುವ ಸೃಷ್ಟಿಯು ನೀರಸ, ಅಸುಂದರ, ವಿಸಂಗತ. ಅವನನ್ನು ಹಾಸ್ಯ ಮಾಡಲೋ ಎಂಬಂತೆ ಸರಸ್ವತಿಯು ಕವಿಗಳ ಮುಖಕಮಲದಲ್ಲಿ ಕುಳಿತು ತೋರಿಸುವ ನೂತನ ಸೃಷ್ಟಿಯು ರಸಮಯ, ಸುಂದರ, ಸುಸಂಗತ. ಬ್ರಹ್ಮನಿಗಿಂತ ಕವಿಯೇ ಒಂದು ಕೈ ದೊಡ್ಡವನು. ರವಿಯು ಮುಟ್ಟಲಾರದ ಮಟ್ಟಗಳನ್ನೂ ಕವಿಯು ಮುಟ್ಟಿ ನೂತನ ಚಮತ್ಕಾರವನ್ನು ತರಬಲ್ಲನು. ಕವಿಯು ಕೇವಲ ಶುಷ್ಕ ತಾರ್ಕಿಕನಲ್ಲ; ನಿರ್ಮಲದರ್ಶನದ ಋಷಿ.

ಹೀಗೆ ಸೌಂದರ್ಯನಿರೂಪಣೆಯಲ್ಲಿ ಕವಿಗೆ ನಿರಂಕುಶತ್ವವನ್ನು ಮಾನ್ಯ ಮಾಡಬಹುದೇ ಇಲ್ಲವೆ ಎಂಬ ಪ್ರಶ್ನೆಯೇಳುತ್ತದೆ, ಕಾವ್ಯಮೀಮಾಂಸಾಶಾಸ್ತ್ರದಲ್ಲಿ. ಪಾಠಕರು ತೆಪ್ಪನೆ ಒಪ್ಪಿಕೊಳ್ಳುವುದಕ್ಕೂ ಒಂದು ಮಿತಿಯಿರುತ್ತದೆ. ಮಿತಿಮೀರಿ ಅಸಂಭವವಾದ ಪ್ರತಿಪಾದನೆ ಬಂದರೆ ಅವರಿಗೆ ಕಾವ್ಯದಲ್ಲಿ ಜಿಹಾಸೆಯೇ ಉಂಟಾಗಬಹುದು. ಆದ್ದರಿಂದ ಕವಿಗಳ ನಿರಂಕುಶತ್ವಕ್ಕೆ ಒಂದಲ್ಲ, ಎರಡಲ್ಲ, ನೂರಾರು ಪ್ರತಿಬಂಧಕಗಳನ್ನು ಅಲಂಕಾರಶಾಸ್ತ್ರವು ನಿಯೋಜಿಸುತ್ತದೆ—ಸೌಂದರ್ಯ ಪ್ರತೀತಿಗೆ ಭಂಗಬರಲಾಗದೆಂಬ ಘನೋದ್ದೇಶದಿಂದಲೇ. ಕಾವ್ಯದಲ್ಲಿ ಅನೌಚಿತ್ಯಕ್ಕಿಂತ ಹೆಚ್ಚಿನ ದೋಷವೇ ಇಲ್ಲವೆಂದು ಅದು ಘಂಟಾಘೋಷವಾಗಿ ಸಾರುತ್ತದೆ ‡. ನಿಯತವಾದ ಕಾಲ, ದೇಶಗಳಲ್ಲಿ ಘಟನೆಗಳು ಲೋಕವಿರುದ್ಧವಾಗಿ ಅಥವಾ ಶಾಸ್ತ್ರವಿರುದ್ಧವಾಗಿ ವರ್ಣಿತವಾಗಬಾರದೆಂದು ಸ್ಪಷ್ಟವಾಗಿ ಹೇಳುತ್ತದೆ. ರಾತ್ರಿ ಸೂರ್ಯೋದಯವನ್ನೂ ಮಾಘಮಾಸದಲ್ಲಿ ಸೆಕೆಯನ್ನೂ ವರ್ಣಿಸುವವನು ಕವಿಯಲ್ಲ; ಹುಚ್ಚ. ಹಾಗಾದರೆ ಕವಿಯ ಕಲ್ಪನಾಸ್ವಾತಂತ್ರ್ಯವೆಲ್ಲಿ ಉಳಿಯಿತೆನ್ನಬಹುದು. ಅದು ಅಚ್ಚಳಿಯದೆ ಸಂಪೂರ್ಣವಾಗಿ ಉಳಿಯುವುದು ಮನುಷ್ಯರ ಚಿತ್ರವಿಚಿತ್ರವಾದ ಚಿತ್ತವೃತ್ತಿಗಳ ಪ್ರಕಟನೆಯಲ್ಲಿ; ಮತ್ತು ಪ್ರತಿಕ್ಷಣವೂ ವಿಭಿನ್ನವಾದ ಪ್ರಕೃತಿಯ ಪ್ರತಿಪಾದನೆಯಲ್ಲಿ. ಪ್ರೇಮವನ್ನು ಕುರಿತು ಲಕ್ಷ ಕವಿಗಳು ಹಾಡಿದರೂ ಮುಗಿಯದ ವಸ್ತುವಿದೆ; ಮಧುಮಾಸದ ಸೊಬಗನ್ನು ಲೆಕ್ಕವಿಲ್ಲದಷ್ಟು ಕವಿಗಳು ಬಣ್ಣಿಸಿದ್ದರೂ ಮತ್ತೂ ಹೊಸದಾಗಿ ಬಣ್ಣಿಸಲಾಸ್ಪದವಿದೆ. ಕಾವ್ಯದ ವರ್ಣನಾಂಶದಲ್ಲಿ ಕವಿಗೆ ನಿರಂಕುಶತ್ವ ಉಂಟೇ-ಉಂಟು; ವರ್ಣನಾಂಶದಲ್ಲಿ ಮಾತ್ರ ಕೆಲವೊಂದು ಶಾಸ್ತ್ರನಿಯಮಗಳೂ ಉಂಟು. ಆದರೆ ಕವಿಯು ಈ ಪಾರತಂತ್ರ್ಯದಿಂದಲೂ ಬೇಕಾದರೆ ಕೆಲವೊಂದು ಉಪಾಯಗಳ ಮೂಲಕ ಮುಕ್ತನಾಗಬಹುದು. ಪ್ರತಿಪಾದ್ಯ ವಸ್ತುವನ್ನು ನಿತ್ಯಜೀವನಕ್ಕೆ, ತತ್ಕಾಲದೇಶಗಳಿಗೆ, ಅನ್ವಯಿಸುವುದಾದರೆ ಮಾತ್ರ ಅವನಿಗೆ ನಿಯಮಗಳು ಬಾಧಿಸುತ್ತವೆ. ಯಾವುದೋ ಕಾಲಾಂತರದ, ಲೋಕಾಂತರದ, ಸ್ಥಿತಿಯನ್ನು ತಾನು ಬರೆಯುವೆನೆಂದು ಹೊರಟರೆ ಅವನಿಗೆ ಈ ನಿಯಮಗಳೂ ಬಾಧಿಸುವುದಿಲ್ಲ. ಎಂತಹ ಅದ್ಭುತ ಪ್ರಸಂಗಗಳನ್ನಾದರೂ ವರ್ಣಿಸಬಹುದು. ರಾಮಾಯಣದ ಕವಿ ಮಂಗನನ್ನು ಸಮುದ್ರದಾಚೆ ಜಿಗಿಸಬಹುದು; ಅನೌಚಿತ್ಯವಿರುವುದಿಲ್ಲ. ಕಾಳಿದಾಸನು ನಾಯಕನನ್ನು ಭೂಮಿಯಿಂದ ಸ್ವರ್ಗಕ್ಕೂ ಸ್ವರ್ಗದಿಂದ ಭೂಮಿಗೂ ಸಂಚಾರಮಾಡಿಸಬಹುದು; ದೋಷ ತಟ್ಟುವುದಿಲ್ಲ. ಸಂಸ್ಕೃತದ ಮಹಾಕವಿಗಳೆಲ್ಲರೂ ಪ್ರಾಯಿಕವಾಗಿ ಈ ವಿಶೃಂಖಲ ಮಾರ್ಗವನ್ನೇ ಅನುಸರಿಸಿದ್ದಾರೆ. ಅದನ್ನು ಸಂಪ್ರದಾಯಶರಣತೆ ಎಂದು ತೆಗಳುವುದು ಪಾಶ್ಚಾತ್ಯರ ಪ್ರಣಾಲಿ.

ವರ್ಣನಾಂಶದಲ್ಲಿ ಕವಿಗೆ ಸರ್ವಸ್ವಾತಂತ್ರ್ಯವುಂಟೆಂದು ಹೇಳಿದೆವು. ಪ್ರತಿಭೋನ್ಮೇಷಕ್ಕೆ ಕಟ್ಟಿಲ್ಲವೆಂದಂತಾಯಿತು. ಆ ಉಕ್ತಿಚಮತ್ಕಾರಗಳನ್ನು ವಿವೇಚಿಸಿ ಅವುಗಳ ತಳದಲ್ಲಡಗಿರುವ ತತ್ವಗಳನ್ನು ಸಾಮಾನ್ಯ ಸೂತ್ರಗಳಾಗಿ ಮಾಡುವ ಪ್ರಯತ್ನ ಅಲಂಕಾರಶಾಸ್ತ್ರಕಾರರದು. ಯಾವುದು ಶಾಸ್ತ್ರದೂರವೋ ಅದನ್ನೇ ಶಾಸ್ತ್ರೀಯವಾಗಿ ವಿವೇಚಿಸಿದಲ್ಲದೆ ಮನುಷ್ಯನ ಪ್ರಜ್ಞೆಗೆ ವಿಶ್ರಾಂತಿಯಿರುವದಿಲ್ಲ. ಈ ಬಗೆಯ ವಿವೇಚನೆಯಿಂದ, ಸೂತ್ರ

---

* ಕಾವ್ಯಪ್ರಕಾಶದ ನಾಲ್ಕನೆಯ ಉಲ್ಲಾಸದಲ್ಲಿ ಉದಾಹೃತವಾಗಿರುವ "ಜಾ ಠೇರಂ....'' ಇತ್ಯಾದಿ ಪ್ರಾಕೃತ ಮುಕ್ತಕದ ಅನುವಾದ. ಮೂಲ ಪದ್ಯವು ಭಾಸರಚಿತವೆಂದು ಸಾಯಣಾಚಾರ್ಯರ 'ಅಲಂಕಾರ ಮಹೋದಧಿ' ಯಲ್ಲಿ ಬರೆದಿದೆ.

† "ಗುರೂಪದೇಶಾದಧ್ಯೇತುಂ ಶಾಸ್ತ್ರಂ ಜಡಧಿಯೋಽಪ್ಯಲಮ್ । ಕಾವ್ಯಂ ತು ಜಾಯತೇ ಜಾತು ಕಸ್ಯ ಚಿತ್ಪ್ರತಿಭಾವತಃ ॥

— ಭಾಮಹನ ಕಾವ್ಯಾಲಂಕಾರ.

‡ 'ಅನೌಚಿತ್ಯಾದೃತೇ ನಾನ್ಯದ್ ರಸಭಂಗಸ್ಯ ಕಾರಣಮ್ '— ಆನಂದವರ್ಧನನ ಧ್ವನ್ಯಾಲೋಕ.

ರಚನೆಯಿಂದ, ಕವಿಯಾಗಲೆಳಸುವವರಿಗೂ ರಸಿಕರಿಗೂ ಹೆಚ್ಚಿನ ಲಾಭವಾಗುವುದರಲ್ಲಿ ಸಂದೇಹವಿಲ್ಲ. ಲಾಕ್ಷಣಿಕರ ಪ್ರಯತ್ನದ ಫಲವಾಗಿ ಕೆಲವು ಮುಖ್ಯಾಂಶಗಳು ಹೊರಬಿದ್ದಿವೆ:- ಶಾಸ್ತ್ರರಚನೆಯ ಸರಣಿಯೇ ಬೇರೆ; ಕಾವ್ಯರಚನೆಯ ಸರಣಿಯೇ ಬೇರೆ. ಶಾಸ್ತ್ರಸರಣಿಯಲ್ಲಿ ಶಬ್ದಾರ್ಥಗಳ ನೇರವಾದ ಯೋಜನೆಯಿರುತ್ತದೆ; ಕಾವ್ಯಸರಣಿಯಲ್ಲಿ ಶಬ್ದಾರ್ಥಗಳ ವಕ್ರ ಅಥವಾ ಚಮತ್ಕಾರಪೂರ್ಣ ಯೋಜನೆಯಿರುತ್ತದೆ; ಅವುಗಳಲ್ಲಿ ಅಪಾರವಾದ ವ್ಯಂಜಕತ್ವ ಶಕ್ತಿಯೂ ತುಂಬಿಕೊಂಡಿರುತ್ತದೆ. ಸಾಹಿತ್ಯ ರಚನೆಯ ವಕ್ರತೆಯೇ ಅದರ ಜೀವಾಳ. ಒಂದೊಂದು ಉಕ್ತಿವಕ್ರತೆಯೂ ಒಂದೊಂದು ಅಲಂಕಾರವೆನಿಸುತ್ತದೆ. ಚಿತ್ತವೃತ್ತಿ ವಿಶೇಷಗಳನ್ನು ನೇರವಾಗಿ ಹೇಳಲು ಬರುವುದೇ ಇಲ್ಲ; ವಕ್ರಮಾರ್ಗದಿಂದ, ವ್ಯಂಜನಾವ್ಯಾಪಾರದಿಂದ ಸೂಚಿಸಲು ಮಾತ್ರ ಬರುತ್ತದೆ. ಇದೇ "ಧ್ವನಿ". ಧ್ವನಿಯೇ ಕಾವ್ಯದ ಆತ್ಮ.

ಕಾವ್ಯಸರಣಿಯ ಒಂದೊಂದು ವಕ್ರಪ್ರಕಾರವೂ ಒಂದೊಂದು ಅಲಂಕಾರವೆನ್ನಲಾಯಿತು. ಎಲ್ಲ



ಕತ್ತಲೆಯು ಕರ್ರಗೆ ಸೂಜಿಯಿಂದ ಚುಚ್ಚುವಷ್ಟು ದಟ್ಟವಾಗಿದೆಯೆಂದು ಕವಿಗಳ ಹೇಳಿಕೆ!

ಅಲಂಕಾರಗಳಿಗೂ ಮೂಲವಾದ ಈ ವಿಶೇಷವನ್ನು "ಅತಿಶಯೋಕ್ತಿ"ಯೆಂದೂ ಭಾಮಹ, ದಂಡಿ, ಮೊದಲಾದ ಪ್ರಾಚೀನರು ಸ್ಪಷ್ಟಪಡಿಸಿದ್ದಾರೆ. ಉತ್ಪ್ರೇಕ್ಷೆ, ಅಪಹ್ನುತಿ, ನಿದರ್ಶನ ಮುಂತಾದ ಪ್ರಸಿದ್ಧಾಲಂಕಾರಗಳಲ್ಲೆಲ್ಲ ಈ ಅತಿಶಯ ಅಥವಾ ವಕ್ರತೆಯುಂಟು; ಇದೇ ವೈಚಿತ್ರ್ಯ ಅಥವಾ ಸೌಂದರ್ಯ ಅಥವಾ ಚಮತ್ಕಾರ. ಉಕ್ತಿಪ್ರಕಾರವು ಲೋಕದ ವಸ್ತುಸ್ಥಿತಿಗೆ ದೂರವಾಗಿರುವುದರಿಂದ ಈ ಬಗೆಯ ಎಲ್ಲ ಅಲಂಕಾರಗಳೂ "ಅಸತ್ಯ ಸೌಂದರ್ಯ"ದ ಪ್ರಭೇದಗಳೇ ಆಗುತ್ತವೆ. ಒಂದು ಉದಾಹರಣೆಯನ್ನು ನೋಡಿ:— ನೈಷಧ ಕಾವ್ಯದ ಹನ್ನೆರಡನೆಯ ಸರ್ಗದ ಕಡೆಗೆ ರಾಜನನ್ನು ಹೀಗೆ ವರ್ಣಿಸಿದೆ:-

"ಈ ರಾಜನ ಅಕೀರ್ತಿಯನ್ನು ಎಣಿಸಲು ಅನಂತಕ್ಕಿಂತ ಮೇಲಿನ ಸಂಖ್ಯೆ ಬೇಕು; ಅದರ ಬಣ್ಣವೋ ಹುಟ್ಟುಗುರುಡನು ನೋಡುವ ಅಂಧಕಾರದಂತೆ ಕಪ್ಪು. ಬಂಜೆಯು ಹೆತ್ತ ಮೂಗರ ಗುಂಪು ಹೆಣ್ಣಾಮೆಯ ಹಾಲಿನ ಕಡಲ ತಡಿಯಲ್ಲಿ ಕುಳಿತುಕೊಂಡು ಅಷ್ಟಮಸ್ವರದಿಂದ ಅದನ್ನು ಗಾನಮಾಡುತ್ತಿದೆ."

ಅನಂತಕ್ಕಿಂತ ಹೆಚ್ಚಿನ ಸಂಖ್ಯೆ, ಹುಟ್ಟುಗುರುಡನ ನೋಟ, ಅಂಧಕಾರದ ಮೂರ್ತತೆ, ಹೆಣ್ಣಾಮೆಯ ಹಾಲು, ಬಂಜೆಯ ಮಕ್ಕಳು, ಮೂಗರ ಗಾಯನ, ಅಷ್ಟಮಸ್ವರ- ಒಂದೊಂದೂ ಲೋಕಸ್ಥಿತಿಯ ದೃಷ್ಟಿಯಿಂದ ನೋಡಿದರೆ ಅತ್ಯಂತ ಅಸತ್ಯಗಳೇ. ಆದರೆ ಇವುಗಳೆಲ್ಲವೂ ಎಷ್ಟು ಅಸತ್ಯಗಳೋ ರಾಜನ ಅಕೀರ್ತಿಯೂ ಅಷ್ಟೇ ಅಸತ್ಯವೆಂದು ಕವಿ ಸುಂದರವಾಗಿ ಸೂಚಿಸುತ್ತಾ, ರಾಜನ ಕೀರ್ತಿಯನ್ನೇ ಪ್ರಕಾರಾಂತರದಿಂದ ವರ್ಣಿಸುತ್ತಿದ್ದಾನೆ. ಈ ಅಲಂಕಾರವನ್ನು "ವ್ಯಾಜಸ್ತುತಿ"ಯೆನ್ನುತ್ತಾರೆ. ಇಂತಹ ಅಲಂಕಾರಕೃತವಾದ ಉಕ್ತಿವಕ್ರತೆಯಲ್ಲಿ ಅಸತ್ಯಾಂಶವಿದ್ದರೂ ಅದು "ಕವಿಸಮಯ" ವೆನಿಸುವದಿಲ್ಲ. ಅಚೇತನ ವಸ್ತುಗಳಿಗೆ ಚೇತನಧರ್ಮವನ್ನಾರೋಪಿಸಿ ವರ್ಣಿಸಿದರೂ ಅಲಂಕಾರವೆನಿಸುವುದೇ ಹೊರತು ಕವಿಸಮಯವೆನಿಸುವುದಿಲ್ಲ.

卐

ಹಾಗಾದರೆ ಕವಿಸಮಯವೆಂದರೇನು ? ಕಾವ್ಯದಲ್ಲಿ ವರ್ಣ್ಯವಾದ ವಿಷಯಗಳು ಲೋಕಸಿದ್ಧವೂ ಶಾಸ್ತ್ರಸಂಗತವೂ ಆಗಿರಬೇಕೆಂಬುದು ನಿಯಮ. ಆದರೆ ಒಮ್ಮೊಮ್ಮೆ ಈ ನಿಯಮಕ್ಕೆ ಅಪವಾದಗಳು ಅಗತ್ಯವಾಗಿರುತ್ತವೆ. ಅಂತಹ ಅಪವಾದಗಳೇ ಕವಿಸಮಯಗಳು. ಲೋಕಸ್ಥಿತಿ ಹಾಗೂ ಶಾಸ್ತ್ರಸ್ಥಿತಿಗೆ ಅನನುಗುಣವಾದ ವಸ್ತುಗಳನ್ನು ಕವಿ ಬಳಸಲೇಬೇಕಾಗುವ ಅನಿವಾರ್ಯಗಳಾವುವೆಂಬುದನ್ನು ನೋಡೋಣ:- ೧. ಲೋಕದಲ್ಲಿ ಕವಿಯ ವರ್ಣನೆಗೆ, ಉಕ್ತಿವಕ್ರತೆಗೆ, ಸಹಜವಾಗಿಯೇ ಹೊಂದಿಕೊಳ್ಳುವ ವಸ್ತುಗಳೂ ಇರುತ್ತವೆ. (ಚಂದ್ರ; ರಮಣಿ ಇತ್ಯಾದಿ); ಹಾಗೆ ಹೊಂದಿಕೊಳ್ಳದ ಅಮೂರ್ತಾಂಶಗಳೂ ಇರುತ್ತವೆ. (ಕೀರ್ತಿ; ಸದಸದ್ವಿವೇಕ ಇತ್ಯಾದಿ). ಇಂತಹ ಅಮೂರ್ತ ಭಾವಗಳಿಗೆ ಒಂದು ಮೂರ್ತರೂಪವನ್ನು ಕೊಟ್ಟು ಅವುಗಳಿಗೆ ಗುಣಗಳನ್ನು ಆರೋಪಿಸುವ ಪದ್ಧತಿ ಕವಿಗಳಲ್ಲೆಲ್ಲ ಆದಿಕಾಲದಿಂದಲೇ ಪ್ರಸಿದ್ಧವಾಗಿತ್ತು. ಕೀರ್ತಿಯನ್ನು ಪ್ರಭೆಯೆಂದೂ ಅದರ ಬಣ್ಣ ಬಿಳುಪೆಂದೂ ಎಂದಿನಿಂದಲೂ ಕವಿಗಳು ಹೇಳುತ್ತಬಂದಿದ್ದಾರೆ. ಇದೇ ಕವಿಗಳ ಸಂಕೇತ ಅಥವಾ ಸಮಯ. ಹಾಗೆಯೇ ಕೋಪವು ಜಲವೆಂದೂ ಅದರ ಬಣ್ಣ ಕೆಂಪೆಂದೂ ಹೇಳುವುದು ಕವಿಸಮಯ. ಕತ್ತಲೆಯು ಸೂಜಿಯಿಂದ ಚುಚ್ಚುವಂತೆ ದಟ್ಟವಾಗಿದೆಯೆನ್ನುವುದೂ ಕವಿಸಮಯವೇ. ಈ ಕವಿಸಮಯಗಳಲ್ಲಿ ಸಾಕ್ಷಾತ್ತಾಗಿ ಸೌಂದರ್ಯವಿಲ್ಲದಿದ್ದರೂ ಅಲಂಕಾರಗಳ ಆವಿರ್ಭಾವಕ್ಕೆ ಅವು ಸಾಧಕಗಳಾಗುವುವೆಂದು ಅವಕ್ಕೆ ಮಹತ್ವವುಂಟಾಗುತ್ತದೆ. ಅಸತ್ಯವಾದರೂ ಕವಿಗಳು ಅವನ್ನಾಶ್ರಯಿಸಲು ಇದೇ ಕಾರಣ. ಉದಾಹರಣೆಗೆ ಕೆಳಗೆ ಬರೆದ ಸಮುದ್ರಗುಪ್ತ ಮಹಾರಾಜನ ಪ್ರಶಸ್ತಿಯಲ್ಲಿ ಸೌಂದರ್ಯವಿರುವದು ಉಪಮಾಲಂಕಾರದಲ್ಲಿಯೇ ಹೊರತು ಕೀರ್ತಿ ಬಿಳುಪೆಂಬ ಕವಿಸಮಯದಲ್ಲಲ್ಲ:

ಪ್ರಧಾನಭುಜವಿಕ್ರಮಪ್ರಶಮಶಾಸ್ತ್ರ-
ವಾಕ್ಯೋದಯೈಃ
ಉಪರ್ಯುಪರಿಸಂಚಯೋಚ್ಛ್ರಿತಮನೇಕ-
ಮಾರ್ಗಂ ಯಶಃ।
ಪುನಾತಿ ಭುವನತ್ರಯಂ ಪಶುಪತೇರ್ಜ-
ಟಾಂತರ್ಗುಹಾ-
ನಿರೋಧಪರಿಮೋಕ್ಷಶೀಘ್ರಮಿವ ಪಾಂಡು
ಗಾಂಗಂ ಪಯಃ॥ (ಹರಿಷೇಣ)

ಕೀರ್ತಿಯನ್ನು ಲೋಕಪಾವನೆಯಾದ ಗಂಗಾನದಿಗೆ ಹೋಲಿಸುವುದಕ್ಕೆ ಆಶ್ರಯ ಮೇಲೆ ಹೇಳಿದ ಕವಿಸಮಯ.

೨. ಸದಸದ್ವಿವೇಕ, ವಿರಹಿಗಳ ಶೃಂಗಾರ, ಮುಂತಾದುವಕ್ಕೆ ತಕ್ಕ ಉಪಮೆಗಳೇ ಲೋಕದಲ್ಲಿ ಇಲ್ಲವೆಂದೆನಿಸಿದರೆ ಕವಿಗಳು ಅಶಾಸ್ತ್ರೀಯವಾದರೂ ಜನರಲ್ಲಿ ಪ್ರಚಾರದಲ್ಲಿರುವ ನಂಬಿಕೆಗಳನ್ನು ತಮ್ಮ ವರ್ಣನೆಗೆ ಉಪಯೋಗಿಸಿಕೊಳ್ಳುವ ರೂಢಿಯುಂಟು. ಉದಾಹರಣೆಗೆ ಹಾಲು-ನೀರುಗಳನ್ನು ಬೇರ್ಪಡಿಸುವ ಶಕ್ತಿ ಹಂಸಕ್ಕಿದೆಯೆಂಬ ಮಾತನ್ನೂ ಚಕ್ರವಾಕಪಕ್ಷಿಯು ರಾತ್ರಿಯೆಲ್ಲಾ ವಿರಹತಾಪದಿಂದ ಗೋಳಿಡುತ್ತದೆಂಬ ಪ್ರಥೆಯನ್ನೂ ಹೇಳಬಹುದು. ಈ ಜಾತಿಯ ಕವಿಸಮಯಗಳಲ್ಲೂ ಸಹಜಸೌಂದರ್ಯಕ್ಕಿಂತ ಹೆಚ್ಚಾಗಿ ಅಲಂಕಾರಪೋಷಕತ್ವವುಂಟೆಂಬ ಮಹತ್ವವೇ ಹೆಚ್ಚಿನದು. ಉದಾಹರಣೆಗೆ ಈ ಮಳೆಗಾಲದ ವರ್ಣನೆಯನ್ನು ನೋಡಿ—

ಘನತರ ಘನವೃಂದಚ್ಛಾದಿತೇ ವ್ಯೋಮ್ನಿ
ಲೋಕೇ
ಸವಿತುರಥ ಹಿಮಾಂಶೋಃ ಸಂಕಥೈವ
ವ್ಯರಂಸೀತ್ ।
ವಿರಹಮನುಭವನ್ತೀ ಸಂಗಮಂ ಚಾಪಿ
ಭರ್ತ್ರಾ
ರಜನಿದಿವಸಭೇದಂ ಚಕ್ರವಾಕೀ ಶಶಂಸ ॥

'ಆಕಾಶವೆಲ್ಲ ಕಾರ್ಮುಗಿಲುಗಳಿಂದ ಮುಚ್ಚಿ ಹೋಗಿ ಸೂರ್ಯಚಂದ್ರರ ಕಥೆಯೇ ಮುಗಿದು ಹೋಯಿತು. ಚಕ್ರವಾಕಿಯು ಗಂಡನೊಡನೆ ಕೂಡಿ ಸುಮ್ಮನಿದ್ದಾಗ ಹಗಲೆಂದೂ ಗಂಡನನ್ನು ಅಗಲಿ ಗೋಳಾಡುತ್ತಿದ್ದಾಗ ರಾತ್ರಿಯೆಂದೂ ಜನರು ತಿಳಿಯುವಂತಿತ್ತು.' ಇಲ್ಲಿ ಚಮತ್ಕಾರ-ಕಾರಿಯಾದುದು ಕಾರ್ಮುಗಿಲುಗಳ ಪ್ರಭಾವವನ್ನು ಸೂಚಿಸುವ ಅತಿಶಯೋಕ್ತಿ; ಇದಕ್ಕೆ ಕವಿಸಮಯ ಪೋಷಕವಾಗಿದೆ, ಅಷ್ಟೆ.

೩. ಜಲಾಶಯ, ಬೆಟ್ಟ ಮುಂತಾದ ಪ್ರಕೃತಿ ವರ್ಣನೆಯ ಪ್ರಸಂಗದಲ್ಲಿ ವಸ್ತುಸ್ಥಿತಿಯನ್ನು ಮಾತ್ರ ವರ್ಣಿಸಿದರೆ ಸರ್ವಾಂಗಸೌಂದರ್ಯವು ಸಿದ್ಧಿಸದೆ ಹೋಗಬಹುದು. ಆದ್ದರಿಂದ ಕವಿಗಳು ವಾಸ್ತವದ ಎಲ್ಲೆಯನ್ನು ದಾಟ ನದಿಗಳಲ್ಲೆಲ್ಲ ಹಂಸ, ಕಮಲ, ಕನ್ನೈದಿಲೆ ಮುಂತಾದುವನ್ನೂ ಬೆಟ್ಟಗಳಲ್ಲೆಲ್ಲ ನಾನಾ ರತ್ನಗಳನ್ನೂ ವರ್ಣಿಸುತ್ತಾರೆ. ಈ ಜಾತಿಯ ಕವಿಸಮಯದಲ್ಲಿ ಸೌಂದ-ರ್ಯಾಂಶವು ನೇರವಾಗಿ ಸಮ್ಮಿಳಿತವಾಗುತ್ತದೆ. ಭಾರವಿಯ ಒಂದು ಪದ್ಯದ ಅನುವಾದವನ್ನಿಲ್ಲಿ ಉದಾಹರಿಸಿದೆ:—

ಇಲ್ಲಿ ಗಿರಿಪರಿಸರದೆ ಗಿಳಿಮರಿತೆರದ ಬಣ್ಣದ
ಪಚ್ಚೆಯ-
ಕಿರಣನಿಕರವು ಕಲೆತು ರವಿಕರಜಾಲ-
ದೊಳು ಮಾರ್ಪೊಳೆವುವು ।
ಹಸಿರು ಹುಲ್ಲಿನ ಶಂಕೆಯನ್ನವು ಹರಿಣ-
ಗಣಗಳಿಗೊಡರಿಸೆ
ತಿನ್ನಲಾಶಿಸಿ ನೆಕ್ಕುತವುಗಳು ಕಡೆಗೆ
ಯತ್ನವ ಬಿಡುವುವು ॥ *

ಇಲ್ಲಿಯೂ ಕವಿಸಮಯವು ಭ್ರಾಂತಿಮದಲಂಕಾ-ರಕ್ಕೆ ಆಲಂಬನವಾಗಿರುವದು ವ್ಯಕ್ತ.

೪. ಕಡೆಯದಾಗಿ, ಕವಿಗಳು ವರ್ಣನಾ ಸೌಕರ್ಯಕ್ಕಾಗಿ ಶ್ರೀಗಂಧವು ಮಲಯಾಚಲ ಒಂದರಲ್ಲಿಯೇ ಸಿಕ್ಕುವುದೆಂದೂ ಶುಕ್ಲಪಕ್ಷದಲ್ಲೆಲ್ಲ ಬೆಳದಿಂಗಳೊಂದೇ ಇರುವುದೆಂದೂ ಕನ್ನೈದಿಲೆ ಹೂಗಳು ರಾತ್ರಿಯೇ ಅರಳುವುವೆಂದೂ ಕೆಲವು ಸಂಕೇತಗಳನು ಮಾಡಿಕೊಂಡಿದ್ದಾರೆ. ಹೀಗೆಯೆ



ನಗೆ ಬೆಳ್ಳಗಿದೆ. ಶಿವನು ಕೈಲಾಸದಲ್ಲಿ ನಕ್ಕಾಗ ಹೀಗಾಗುತ್ತದಂತೆ!

ತಾಮ್ರಪರ್ಣಿಯಲ್ಲಿ ಮಾತ್ರ ಮುತ್ತುಗಳು ಸಿಕ್ಕು-ತ್ತವೆ; ಶಂಖಗಳು ಸಮುದ್ರದಲ್ಲಿ ಮಾತ್ರ; ಕೋಗಿಲೆ ವಸಂತದಲ್ಲಿ ಮಾತ್ರ ಕೂಗುತ್ತದೆ ಮುಂತಾದ ನಿಯಮಗಳೂ ಕವಿಪರಂಪರೆಯಲ್ಲಿ ಉಂಟು. ಇವುಗಳ ಉದ್ದೇಶವು ಕೂಡ ವರ್ಣ್ಯವಸ್ತುಗಳ ಸಹಜಸೌಂದರ್ಯವನ್ನು ಹೆಚ್ಚಿಸು-ವುದೇ ಆಗಿದೆ.

* ಕನ್ನಡ ಕಿರಾತಾರ್ಜುನೀಯ, ಡಾ॥ ಕೆ. ಕೃಷ್ಣ-ಮೂರ್ತಿ, ಪುಟ ೫೪.

ಹೀಗೆ ಕವಿಸಮಯಗಳೆಂದರೆ ಸಂಸ್ಕೃತ ಕವಿಗಳಲ್ಲಿ ಪರಂಪರಾಪ್ರಾಪ್ತವಾಗಿರುವ, ಇಂದಿನ ಲೋಕಸ್ಥಿತಿಗೆ ವಿರುದ್ಧವಾಗಿರುವ, ಕೆಲವೊಂದು ಕಟ್ಟಳೆಗಳು; ಲೋಕಸ್ಥಿತಿಯನ್ನು ಬಿಡಬಾರದೆಂಬ ಕವಿನಿಯಮಕ್ಕೆ ಸಹೃದಯರು ಒಪ್ಪಿರುವ ಅಪವಾದಗಳು. ಇವನ್ನೂ ದೋಷವೆಂದೇ ಪರಿಗಣಿಸಬಾರದೇಕೆ ? ಎಂಬ ಪ್ರಶ್ನೆಗೆ ಕಾವ್ಯಮೀಮಾಂಸಾಕಾರನಾದ ರಾಜಶೇಖರನು ಹೇಳುವ ಉತ್ತರ ವಿಷ್ಟೆ:- "ಪೂರ್ವದ ವಿದ್ವಾಂಸರು ಸಹಸ್ರಶಾಖವಾದ ವೇದವೇದಾಂಗವನ್ನೋದಿ, ಶಾಸ್ತ್ರಗಳನ್ನು ತಿಳಿದು, ದೇಶಾಂತರಗಳಲ್ಲೂ ದ್ವೀಪಾಂತರಗಳಲ್ಲೂ ಸಂಚರಿಸಿ ತಮಗೆ ಕಂಡುಬಂದ ಸಂಗತಿಗಳನ್ನೇ ಬರೆದಿದ್ದಾರೆ. ಅವು ಇಂದು ಬೇರೆಯಾಗಿದ್ದರೂ ಪೂರ್ವದಂತೆಯೇ ಅವುಗಳನ್ನು ಕವಿಗಳು ಬರೆದಾಗ ಕವಿಸಮಯವೆನಿಸುತ್ತದೆ. ಪೂರ್ವಕವಿಪ್ರಯೋಗಗಳಲ್ಲಿರುವ ಸಾರ್ಥಕ್ಯವು ಪರೋಪಕರಣನಿರತರಲ್ಲಿ ಕಾಣುವುದಿಲ್ಲ.'' ಕಾವ್ಯಸೌಂದರ್ಯವು ಪ್ರಧಾನವಾಗಿ ಅಲಂಕಾರನಿಷ್ಠವೇ ಹೊರತು, ಕವಿಸಮಯನಿಷ್ಠವಲ್ಲವೆಂದು ಪ್ರತಿಪಾದಿಸಲಾಯಿತು. ಸಂಸ್ಕೃತ ಸಾಹಿತ್ಯದ ಅವನತಿಕಾಲದಲ್ಲಿ ಅದು ಕವಿಸಮಯನಿಷ್ಠವೆಂಬ ಭ್ರಾಂತಿಯಿಂದ ಕವಿಗಳು ಬರೆದು ಕಾವ್ಯದಲ್ಲಿ ಕಲ್ಪನಾಸ್ವಾತಂತ್ರ್ಯಕ್ಕಿಂತ ಹೆಚ್ಚಾಗಿ ಕೃತ್ರಿಮತಾಪ್ರದರ್ಶನವನ್ನೂ ಉಕ್ತಿಪಾರತಂತ್ರ್ಯವನ್ನೂ ಪ್ರಕಟಿಸಿದರೆಂದು ನಿರ್ಣಯಿಸಬಹುದಾಗಿದೆ. ಆದರೆ ಪ್ರತಿಭಾಮಾತ್ರ ಪ್ರಭಾವಿತರಾದ ಪೂರ್ವಕವಿಗಳಲ್ಲಿ ಅನೇಕಾಲಂಕಾರಗಳಿಗೆ ಆಗರವಾಗುವ ಕವಿಸಮಯಗಳು ಅಸತ್ಯಪ್ರತೀತಿಯನ್ನು ಕೆರಳಿಸಿ ಸೌಂದರ್ಯಾನುಭೂತಿಗೆ ವಿಘ್ನಗಳಾಗುವುದಿಲ್ಲ; ಕಲ್ಪನಾಸತ್ಯವೆಂಬ ಭಾವನೆಯನ್ನುಕ್ಕಿಸಿ ನಿರುಪಮಸೌಂದರ್ಯವನ್ನು ಬೀರುವ ಕೈದೀಪಗಳಾಗುತ್ತವೆ. ಪ್ರಕೃತಿಯನ್ನು ಕೇವಲ ಸೌಂದರ್ಯಮಯವಾಗಿ ಪ್ರದರ್ಶಿಸಲು, ಅಮೂರ್ತ ಭಾವಗಳಿಗೆ ಸುಂದರ ಮೂರ್ತಿಯನ್ನು ನಿರ್ಮಿಸಲು, ಅಲಂಕಾರಗಳಿಗೆ ಸಮುಚಿತ ರಂಗಸ್ಥಲವನ್ನು ಕಲ್ಪಿಸಿ ಕಲ್ಪನಾ-ಲೋಕವನ್ನು ರಚಿಸಲು, ಕವಿಸಮಯಗಳಿಂದ ಪೂರ್ವ ಕವಿಗಳಿಗೆ ಮಹೋಪಕಾರವಾಗಿದೆ. ಸಂಸ್ಕೃತ ಕಾವ್ಯದ ಸುಧೆಯನ್ನು ಸವಿಯಲು ಕವಿಸಮಯಗಳ ಪರಿಚಯ ಅಗತ್ಯ. ಸಂಸ್ಕೃತ ಕಾವ್ಯವು ಕೇವಲ ಕೃತ್ರಿಮತೆಯ ಕಗ್ಗಂಟೆಂದು ಹೀಗಳೆಯುವ ಮೊದಲು, ಕವಿಸಂಪ್ರದಾಯದ ಪರಿಚಯವನ್ನು ಪಡೆದು ಅದರ ಹಿಂದೆ ಕಲ್ಪನಾ-ವಿಲಾಸವುಂಟೇ ಇಲ್ಲವೇ ಎಂಬ ಮುಂದಿನ ವಿವೇಚನೆ ಮಾಡಬೇಕು; ಆ ವಿವೇಚನೆಗೆ ಅಲಂಕಾರ ಶಾಸ್ತ್ರದಿಂದಾಗುವ ಸಹಾಯ ಅಪಾರ.

ಹೆಚ್ಚು ಕಡಿಮೆ ಎಲ್ಲ ಜನರೂ ವಿಪತ್ತುಗಳನ್ನು ಎದುರಿಸಿ ನಿಲ್ಲಬಲ್ಲರು. ಆದರೆ ಮನುಷ್ಯನ ಚಾರಿತ್ರ್ಯವನ್ನು ಪರೀಕ್ಷಿಸಬೇಕೆಂದಿದ್ದರೆ ಅವನಿಗೆ ಅಧಿಕಾರ ಕೊಡಿರಿ.

—ಅಬ್ರಹಾಂ ಲಿಂಕನ್

ಕಥೆ

ಕಾನಸ್ಟೆಬಲ್ ಕೆಂಪಯ್ಯನಿಗೆ ಬಿದ್ದ ತಪರಾಕು

ಪೇಟೆಯಲ್ಲಿ ವಾಹನ ನಿಯಂತ್ರಣಕ್ಕೆ ಕೂಡ ನಾಲಾಯಕ್ ಆಗಿದ್ದರೂ; ಕಾನಸ್ಟೆಬಲ್ ಕೆಂಪಯ್ಯ ಹಳ್ಳಿಯಲ್ಲಿ ಕೋಳಿಕಾಣಿಕೆ ಪಡೆಯುವದರಲ್ಲಿ ಒಳ್ಳೇ ಕದೀಮನೇ ಆಗಿದ್ದ. ಆದರೆ ಹಳ್ಳೀ ಕೊಂಪೆಯಲ್ಲಿಯೂ ಕಾಲ ಕೆಟ್ಟುಹೋಗಿದೆ. ಹಳ್ಳೀ ಕೊರಮರು ಕಾನಸ್ಟೆಬಲ್ ಸಾಹೇಬರಿಗೆ ಮರೆಯಲಾರದ ಬುದ್ಧಿ ಕಲಿಸಿದರು. . . . . . .

ಲೇಖಕರು: ಶ್ರೀ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಂ. ಎಲ್. ಸಿ.

೧

ಕಾನಸ್ಟೆಬಲ್ ಕೆಂಪಯ್ಯನನ್ನು ಜಿಲ್ಲೆಯ ಮುಖ್ಯ ಪಟ್ಟಣಕ್ಕೆ ವರ್ಗ ಮಾಡಿದಾಗ, ಅವನಿಗೆ ತನ್ನ ಪ್ರಾಣವೇ ಹಾರಿಹೋದಂತೆ ಆಯಿತು. ಕೆಲಸಕ್ಕೆ ಸೇರಿದಂದಿನಿಂದ ಅವನು ಹೇಗೋ, ರಸ್ತೆಯಿಂದ ದೂರವಾಗಿದ್ದ ಹಳ್ಳಿಗಳಲ್ಲಿಯೇ ಇರಲು ಅವಕಾಶ ಮಾಡಿಕೊಂಡಿದ್ದನು. ಅದರಿಂದ ಅವನಿಗೆ ನಾನಾವಿಧವಾದ ಅನುಕೂಲಗಳಾಗುತ್ತಿದ್ದವು. ಹಳ್ಳಿಯ ಪೋಲೀಸ್ ಠಾಣೆಯಲ್ಲಿ ಇದ್ದವರು ಅವನು, ದಫೇದಾರರು ಮತ್ತು ಇನ್ನೊಬ್ಬ ಕಾನಸ್ಟೆಬಲ್. ದಫೇದಾರರ ಸಂಸಾರ ಬೇರೆ ಊರಿನಲ್ಲಿದ್ದುದರಿಂದ ದಫೇದಾರರು ವಾರಕ್ಕೆ ಐದು ದಿನ ಪೋಲೀಸ ಠಾಣೆಯಲ್ಲಿರುತ್ತಿರಲಿಲ್ಲ. ದಫೇದಾರರು ಇಲ್ಲದ ಕಾಲದಲ್ಲಿ ಕೆಂಪಯ್ಯ ವಾರಕ್ಕೆ ಮೂರು ದಿನ ಹಳ್ಳಿಗಳ ಮೇಲೆ ಹೋಗುತ್ತಿದ್ದನು. ಹೋಗುತ್ತಿದ್ದ ಉದ್ದೇಶ, ಹಳ್ಳಿಗಳಲ್ಲಿ ಕಾವಲು ಕಾಯುವದಕ್ಕೆ (ಬೀಟ್)ಎಂದು. ಮನೆಗೆ ಹಿಂದಿರುಗುವಾಗ ಪ್ರತಿದಿನವೂ ಕೆಂಪಯ್ಯ ತರಕಾರಿ, ಬೆಣ್ಣೆ-ಮೊಸರು, ಮೊಟ್ಟೆ, ಕೋಳಿ, ಒಂದೊಂದು ದಿನ ಸೌದೆಗಾಡಿ ಹೀಗೆ ಸಮೃದ್ಧನಾಗಿ ಹಿಂದಿರುಗುತ್ತಿದ್ದನು. ಅವನು ಕಾವಲಿದ್ದ ಪೋಲೀಸ್ ಠಾಣೆಯ ಮುಂದೆ ನಾಲ್ಕು ಬಸ್ಸುಗಳು ಓಡುತ್ತಿದ್ದವು. ಮಾಮೂಲು ನಿತ್ಯ ಒಂದು ಬಸ್ಸಿಗೆ ನಾಲ್ಕು ಆಣೆ. ಜನರನ್ನು ಹೆಚ್ಚಿಗೆ ಹಾಕಿದ್ದರೆ ಹೆಚ್ಚು ದುಡ್ಡು. ಬಂದುದರಲ್ಲಿ ಅರ್ಧವನ್ನು ದಫೇದಾರರಿಗೆ ಕೊಟ್ಟು ಉಳಿದದ್ದನ್ನು ಕೆಂಪಯ್ಯನೂ ಅವನ ಜತೆ ಕಾನಸ್ಟೆಬಲನೂ ಹಂಚಿಕೊಳ್ಳುತ್ತಿದ್ದರು. ಹೀಗೆ ಹಳ್ಳಿಯ ಪೋಲೀಸ್ ಠಾಣೆಯಲ್ಲಿಯೇ ಎಂಟು ವರ್ಷ ಕಳೆದುಹೋಯಿತು.


ಇದ್ದಕ್ಕಿದ್ದಂತೆ ಕೆಂಪಯ್ಯನನ್ನು ಜಿಲ್ಲೆಯ ಮುಖ್ಯ ನಗರಕ್ಕೆ ವರ್ಗಾಯಿಸಿಬಿಟ್ಟರು. ಕೆಂಪಯ್ಯನಿಗೆ ಸ್ಥಳ ಹೊಸದು. ಅಲ್ಲದೆ ಪಟ್ಟಣದಲ್ಲಿ ಸಬ್ ಇನಸ್ಪೆಕ್ಟರು, ಇನಸ್ಪೆಕ್ಟರು, ಸುಪರಿಂಟೆಂಡೆಂಟರು, ಜಿಲ್ಲಾಧಿಕಾರಿಗಳು ಮುಂತಾದ ಅನೇಕ ಅಧಿಕಾರಿಗಳ ಕಾಟ. ಕಾಲಕ್ಕೆ ಸರಿಯಾಗಿ ಕೆಲಸಕ್ಕೆ ಹೋಗಬೇಕು; ಕಚೇರಿಯಲ್ಲಿ "ಹಾಜರ'' ಆಗಬೇಕು. ಕೆಂಪಯ್ಯನಿಗೆ ಕಾಲಕ್ಕೆ ಸರಿಯಾಗಿ ಯಾವ ಕೆಲಸವನ್ನೂ ಮಾಡಿಯೇ ಅಭ್ಯಾಸವಿರಲಿಲ್ಲ. ಅವನಿಗೆ ತನ್ನ ಸಮವಸ್ತ್ರವನ್ನು ಸಹ ಶಿಸ್ತಿನಿಂದ ಸರಿಯಾಗಿ ಧರಿಸುವುದು ಅಭ್ಯಾಸವಾಗಿರಲಿಲ್ಲ. ಹಳ್ಳಿಯ ಪೋಲೀಸ ಠಾಣೆಯಲ್ಲಿದ್ದಾಗ ಅವನು ಹೇಗೋ ತನ್ನ ನಿಕ್ಕರ್ (ಚಡ್ಡಿ) ನ್ನು ಸಡಿಲವಾಗಿ ಸಿಗೆಹಾಕಿಕೊಂಡುಬಿಡುತ್ತಿದ್ದನು. ಪೋಲೀಸಿನವರಿಗೆ "ಅರಿವೆಕಾಲು'' ಎಂಬ ಹೆಸರೇ ಇದ್ದರೂ ಅವನು ಕಾಲಿನ ಪಟ್ಟಿಯನ್ನು ಕಟ್ಟಿಕೊಳ್ಳುತ್ತಲೇ ಇರಲಿಲ್ಲ. ಅಲ್ಲದೆ ಬೇರೆ ಬಟ್ಟೆಗಳನ್ನೇ ಅವನು ಕೊಂಡುಕೊಳ್ಳದೆ ಯಾವಾಗಲೂ ಹಳ್ಳಿಯಲ್ಲಿ ತನ್ನ ಸಮವಸ್ತ್ರವನ್ನೇ ಧರಿಸಿಕೊಂಡಿರುತ್ತಿದ್ದನು. ಜಿಲ್ಲಾ ಮುಖ್ಯ ಪಟ್ಟಣಕ್ಕೆ ವರ್ಗವಾದಾಗ, ಅವನ ಸಮವಸ್ತ್ರಗಳೆಲ್ಲ ತೂತು ಬಿದ್ದಿದ್ದವು. ರುಮಾಲು ತರ್ಕಾರಿ ಕಲೆಯಿಂದ ಕಲುಷಿತವಾಗಿತ್ತು. ಪಟ್ಟಣದಲ್ಲಿ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಸಬ್ ಇನಸ್ಪೆಕ್ಟರರ ಮುಂದೆ ಹಾಜರಾಗುವುದೇ ಕೆಂಪಯ್ಯನಿಗೆ ಯಮಯಾತನೆಯಾಗಿತ್ತು. ಅದರ ಜತೆಗೆ "ನಿನ್ನ ಯೂನಿಫಾರಂ! ಇದೇನು ಗೋಣಿಚೀಲ. ರಾತ್ರಿಯೆಲ್ಲ ಕೆಸರಿನ ಗದ್ದೆಯಲ್ಲಿ ಮೀನು ಹಿಡಿಯುತ್ತಿದ್ದೆಯೊ? ನೀನೇನು ಪೋಲೀಸೊ, ಝಾಡಮಾಲಿಯೋ?'' ಎಂದು ಸಬ್ ಇನಸ್ಪೆಕ್ಟರು ಗದರಿಸಿದಾಗ ಕೆಂಪಯ್ಯ ಮನಸ್ಸಿನಲ್ಲಿ "ನನಗೆ ಆಗಲೇ ಎಂಟು ವರ್ಷ ಪೋಲೀಸ ಠಾಣೆಯ ಸರ್ವಿಸ್; ಅದಕ್ಕೆ ಹಿಂದೆ ನಾಲ್ಕು ವರ್ಷ ಹಳ್ಳಿಯ ಸರ್ವಿಸ್; ಇಂತಹ ಅನುಭವದಾರನನ್ನ ಇವತ್ತು ಕೆಲಸಕ್ಕೆ ಸೇರಿದ ಪಡ್ಡೆಹುಡುಗರ ಎದುರಿಗೆ, ಈ ಸಬ್ ಇನಸ್ಪೆಕ್ಟ್ ಸಾಹೇಬ ಬಯ್ಯುತ್ತಾನಲ್ಲ. ಹಳ್ಳಿಯವರ ಮಾನ ಪಟ್ಟಣದಲ್ಲಿ ಹೋಯ್ತು'' ಎಂದು ಯೋಚಿಸಿಕೊಳ್ಳುತ್ತಿದ್ದನು. ಪಟ್ಟಣದಲ್ಲಿ ಅವನ ಜತೆಯ ಪೋಲೀಸ್ ಕಾನಸ್ಟೆಬಲ್‌ಗಳು ನಿತ್ಯ ಅಗಸನಿಗೆ ಹಾಕಿದ ಸಮವಸ್ತ್ರವನ್ನು ಧರಿಸಿಕೊಂಡು ಒಳ್ಳೆ ಜರ್ಬಾಗಿ ಗೆಲುವಾಗಿ ಬರುತ್ತಿದ್ದರು. ಕೆಂಪಯ್ಯನಿಗೂ ತಾನು ಹೊಸದಾಗಿ ಒಂದು ಜತೆ ಸಮವಸ್ತ್ರವನ್ನು ತನ್ನ ಸ್ವಂತ ದುಡ್ಡಿನಿಂದಲೇ ಹೊಲಿಸಿಕೊಳ್ಳಬೇಕೆಂದು ಆಸೆಯಾಯಿತು. ಆದರೆ ಅವನ ಕೈಯ್ಯಲ್ಲಿ ಹಣವಿರಲಿಲ್ಲ.

ಪಟ್ಟಣವನ್ನು ಸೇರಿದಮೇಲೆ ಕೆಂಪಯ್ಯನಿಗೆ ಮತ್ತೊಂದು ಅನಿರೀಕ್ಷಿತವಾದ ವೆಚ್ಚ ಒದಗಿತ್ತು. ಅದು ಅವನ ಕ್ಷೌರದ ಖರ್ಚು. ಒಬ್ಬ ಮನುಷ್ಯನಿಗೆ ಕ್ಷೌರಕ್ಕೆ ಎಷ್ಟು ವೆಚ್ಚವಾಗಬಹುದೆಂದು, ಹಳ್ಳಿಯಲ್ಲಿದ್ದಾಗ ಯಾರಾದರೂ ಅವನಿಗೆ ಹೇಳಿದ್ದರೆ, ಅವನು ಖಂಡಿತ ಅದನ್ನು ನಂಬುತ್ತಿರಲಿಲ್ಲ. ಕೆಂಪಯ್ಯ ಹಳ್ಳಿಯಲ್ಲಿದ್ದಾಗ ಎರಡು ತಿಂಗಳಿಗೆ ಒಂದು ಸಲ ಕ್ಷೌರ ಮಾಡಿಸಿಕೊಳ್ಳುತ್ತಿದ್ದನು. ಅದಕ್ಕೂ ದುಡ್ಡು ಕೊಡುತ್ತಿರಲಿಲ್ಲ. ಹಳ್ಳಿಯ ರಕ್ಷಣೆ ಮಾಡುವವನ ಗಡ್ಡವನ್ನೂ ತಲೆಯನ್ನೂ ಬೋಳಿಸುವುದು ಹಳ್ಳಿಯ ಹಜಾಮನ ಹಣೆಬರಹ. ತಿಂಗಳಿಗೊಂದು ಸಲ ಕೆಂಪಯ್ಯ ಮಾಡಿಸಿಕೊಂಡಿದ್ದರೂ ಕ್ಷೌರಿಕ ಮಾಡುತ್ತಿದ್ದ. ಆದರೆ ಕೆಂಪಯ್ಯನಿಗೆ ಅದರ ಆವಶ್ಯಕತೆ ತೋರಿರಲಿಲ್ಲ. ಜತೆಗೆ ಕೆಂಪಯ್ಯನಿಗೆ ಗಡ್ಡ, ಮೀಸೆ ಸರಿಯಾಗಿಲ್ಲದಿದ್ದರೆ ಏನೋ ಒಂದು ಅರಕೆ ಅನುಭವವಾಗುತ್ತಿದ್ದಿತು. ಅವನು ಎಚ್ಚರವಾಗಿರುವ ಕಾಲದಲ್ಲೆಲ್ಲ ಎಡಗೈಯಿಂದ ಗಡ್ಡವನ್ನು ನೀವುವುದು, ಮೀಸೆಯನ್ನು ಮಾಲೀಸ್ ಮಾಡುವುದು ಈ ಕಾರ್ಯದಲ್ಲಿಯೇ ತೊಡಗಿರುತ್ತಿದ್ದನು. ಆ ಗಡ್ಡ ಮೀಸೆ ಹತ್ತಿಯಂತೆ ಕೈಗೆ ಸಿಕ್ಕಿದರೆ ಮಾತ್ರ ಅವನಿಗೆ ಸಮಾಧಾನವಾಗುತ್ತಿದ್ದಿತು. ಇಲ್ಲದಿದ್ದರೆ ಇಲ್ಲ. ಕ್ಷೌರ ಮಾಡಿಸಿಕೊಂಡ ಎಂಟು ದಿವಸ ಅವನಿಗೆ ಯಾವಾಗಲೂ ಎಲ್ಲರ ಮೇಲೆಯೂ ಅಸಮಾಧಾನವೇ ಇರುತ್ತಿದ್ದಿತು. ಇದಕ್ಕೆ ಮುಖ್ಯ ಕಾರಣ, ಆ ದಿನಗಳಲ್ಲಿ ಅವನು ಗಡ್ಡಕ್ಕೆ ಕೈಹಾಕಿದ ಕೂಡಲೇ ಅವನಿಗೆ ಪದ್ಧತಿಯಂತೆ ಮಖಮಲ್ಲಿನಂತಿರುವ ಮೆತ್ತನೆಯ ಗಡ್ಡ ಸಿಕ್ಕುವುದರ ಬದಲು ಮುಳ್ಳಿನ ಮೊನೆಯಂತೆ ತರಿತರಿಯಾಗಿ ಸಿಕ್ಕುತ್ತಿದ್ದಿತು. ಆ ವಾರವೆಲ್ಲ ಅವನು ಕಂಡಕಂಡವರ ಮೇಲೆ ರೇಗುತ್ತಲೇ ಇರುತ್ತಿದ್ದನು. ಎಡಗೈ ಗಡ್ಡದ ಮೇಲೆ ಕೆಲಸ ಮಾಡುತ್ತಿರುವಾಗಲೇ ಅವನು ಸಮಾಧಾನದಿಂದ ಹಿತವಾಗಿ ಇತರರೊಂದಿಗೆ ಮಾತನಾಡುತ್ತಿದ್ದುದು.

ಇಂತಹನಿಗೆ ಮೂರು ದಿನಕ್ಕೊಂದು ಸಲ ಪಟ್ಟಣದಲ್ಲಿ ಕ್ಷೌರ ಮಾಡಿಸಿಕೊಳ್ಳುವುದೆಂದರೆ ಅದು ದೊಡ್ಡ ಅನಾಹುತವಲ್ಲದೆ ಮತ್ತೇನು? ಆ ಸಲೂನ್ ಅಂಗಡಿಯವರು ಮೂರು ಆಣೆ ಕೊಟ್ಟಲ್ಲದೆ ಕ್ಷೌರ ಮಾಡುತ್ತಿರಲಿಲ್ಲ. ಆ

ಗಡ್ಡವ್ರೋ ! ರಾಮು ರಾಮಾ, ಎಲ್ಲಿ ಎಷ್ಟು ಗೊಬ್ಬರ ನೀರು ಹಾಕಿದರೂ ಯಾವ ಪೈರೂ ಅಷ್ಟು ಪುಷ್ಟವಾಗಿ ಬೆಳೆಯುವುದಿಲ್ಲ. ಕ್ಷೌರಿಕ ಕೂದಲನ್ನು ಹೆರೆದು ಕತ್ತಿಯನ್ನು ಕೆಳಕ್ಕೆ ಇನ್ನೂ ಇಡುವುದಕ್ಕೆ ಮುಂಚೆಯೇ ಅವನು ಹೊರಟು ಹೋದನೋ ಎಂದು ಗಡ್ಡ ಇಣಿಕಿ ನೋಡು ವಂತೆ ತೋರುತ್ತಿತ್ತು. ಮೂರು ಮೂರು ದಿನಕ್ಕೆ ಒಂದೊಂದು ಸಲ ಹೆರಿಸಿಕೊಂಡು ಕೆಂಪಯ್ಯನಿಗೆ ಚರ್ಮದ ಮೇಲಿನ ಒಂದು ಪರೆಯನ್ನೇ ಹೆರಿಸಿ ತೆಗೆದುಹಾಕಿದ ಅನುಭವವುಂಟಾಗಿತ್ತು. ತಿಂಗಳಿಗೆ ಗಡ್ಡಕ್ಕೇ ಎರಡು ರೂಪಾಯಿ! ಇಷ್ಟಾದರೂ ಜತೆಯ ಕಾನಸ್ಟೇಬಲ್‌ಗಳು ಅವನ ಮೀಸೆ ಗಡ್ಡ ಕುರಿತು ಹಾಸ್ಯ ಮಾಡುತ್ತಲೇ ಇದ್ದರು. ಹಳಿಯಲ್ಲಿ ಜನ ತನ್ನನ್ನೂ ಸಾಹೇಬರು ಎಂದು ಕರೆದಾಗ, ಅದು ತನ್ನ ಹುದ್ದೆಯ ಗೌರವವೆಂದು ಕೆಂಪಯ್ಯ ಭಾವಿಸಿದ್ದನು. ಪಟ್ಟಣಕ್ಕೆ ಬಂದ ಮೇಲೆ ಅದು ಜನ, ತನ್ನ ಗಡ್ಡವನ್ನು ನೋಡಿ ತನಗೆ ಇಟ್ಟ ಹೆಸರೆಂದು ಅವನಿಗೆ ಅರ್ಥವಾಯಿತು.

ಹಳ್ಳಿಯ ಠಾಣೆಯಲ್ಲಿ ಕೆಲಸವನ್ನೇ ಮಾಡದಿದ್ದರೂ ಹನ್ನೆರಡು ವರುಷಗಳ ಕಾಲ ಯಾರ ಆಕ್ಷೇಪಣೆಗಳಿಗೂ ಒಳಗಾಗದೆ 'ಕೆಲಸ ಮಾಡಿದ್ದ' ಕೆಂಪಯ್ಯನಿಗೆ ಪಟ್ಟಣದಲ್ಲಿ ಎಂಟು ತಿಂಗಳು ಕಳೆಯುವುದರೊಳಗಾಗಿ ಐದು ಅಲಕ್ಷ್ಯದ ಆಪಾದನೆಗಳು (ಬ್ಲಾಕ್ ಮಾರ್ಕ್) ಬಂದವು. ಅವನ ಆಪಾದನೆಯ ಪುಸ್ತಕವನ್ನು ಒಂದು ದಿನ ನೋಡಿ ಇನಸ್ಪೆಕ್ಟರು " ನಿನ್ನ ಮೇಲೆ ಇನ್ನೊಂದು ಆಪಾದನೆ ಬಂದರೆ ನಿನಗೆ ಡಿಗ್ರೇಡು ಅಥವಾ ಸಸ್ಪೆಂಡ್ ಆಗುತ್ತದೆ'' ಎಂದು ಗದರಿಸಿದ್ದರು. ಹಳ್ಳಿಯಲ್ಲಿ ಯಕ್ಷಗಾನ ಪ್ರಸಂಗ ನೋಡಿದ್ದ ಕೆಂಪಯ್ಯನಿಗೆ ಶಿಶುಪಾಲನ ತಪ್ಪುಗಳ ಜ್ಞಾಪಕ ಬಂತು. "ಇನ್ನೊಂದು ತಪ್ಪು! ಅಲ್ಲಿಗೆ ನನ್ನ ತಲೆ ಹಾರಿ ಹೋಗುತ್ತೆ. ನಾನೇನೋ ಶಿಶುಪಾಲ ಇರಬಹುದು, ಇನಸ್ಪೆಕ್ಟರ್ ಏನು ಕೃಷ್ಣ ಅಲ್ಲವಲ್ಲ?'' ಎಂದು ಕೆಂಪಯ್ಯ ಯೋಚಿಸಿದನು. "ಸಸ್ಪೆಂಡ್ ಏನೋ ಸರಿ. ಆದರೆ ಇವರು ಡಿಗ್ರೇಡ್ ಎನ್ನು-ತ್ತಾರಲ್ಲ ಪೋಲೀಸ ಇಲಾಖೆಯಲ್ಲಿ ಕಾನಸ್ಟೆಬಲ್



ಕೆಂಪಯ್ಯ ಗಡ್ಡ ನೀವುತ್ತ ಆಕಾಶ ನೋಡುತ್ತ ನಿಂತುಬಿಟ್ಟ !

ಕೊನೆಯ ಹುದ್ದೆ. ಅದಕ್ಕಿಂತ ಡಿಗ್ರೇಡ್ ಯಾವುದು?'' ಎಂದು ಅವನು ಅರ್ಥ ವಿನೋದವಾಗಿಯೂ ಸ್ವಲ್ಪ ತಿರಸ್ಕಾರದಿಂದಲೂ ಯೋಚಿಸತೊಡಗಿದನು.

* *

ಇದ್ದಕ್ಕಿದ್ದಂತೆ ಕೆಂಪಯ್ಯನಿಗೆ ಮತ್ತೊಂದು ಅಪಾಯ ಎದುರಾಯಿತು. ಜಿಲ್ಲೆಯ ಪೋಲೀಸ ಸುಪರಿಂಟೆಂಡೆಂಟರು ಕಾನಸ್ಟೆಬಲ್‌ಗಳನ್ನೆಲ್ಲ ಕರೆಸಿ, ಅವರಲ್ಲಿ ಕೆಲವರನ್ನು ಅದೇ ನಗರದ ವಾಹನ ಸಂಚಾರ ವ್ಯವಸ್ಥೆಯ ಹತೋಟಿಗೆ ನಿಯಮಿಸಿದರು. ಆ ಕಾರ್ಯವನ್ನು ಕೆಂಪಯ್ಯ ಹಿಂದೆ ಎಂದೂ ಮಾಡಿರಲಿಲ್ಲ. ಆದರೆ, ಹೊಸದಾಗಿ ಕಾನಸ್ಟೆಬಲ್ ಆದವರಿಗಿಂತ ಹನ್ನೆರಡು ವರುಷ ಅನುಭವಿಯಾದ ಕೆಂಪಯ್ಯ ಉತ್ತಮನೆಂದು ಸುಪರಿಂಟೆಂಡೆಂಟರು ಭಾವಿಸಿದ್ದರು. ತನ್ನನ್ನು ಆ ಕಾರ್ಯಕ್ಕೆ ಎಂದಿಗಾದರೂ ನಿಯಮಿಸಬಹುದೆಂದು ಕೆಂಪಯ್ಯನಿಗೆ ಕನಸಿನಲ್ಲಿ ಸಹ ಹೊಳೆದಿರಲಿಲ್ಲ. " ದುಷ್ಕಾಲ ನನ್ನ ಬೆನ್ನು ಹತ್ತಿದೆ '' ಎಂದು ಕೆಂಪಯ್ಯ ಸಂಚಾರ ವ್ಯವಸ್ಥೆಯ ಹತೋಟಿಗೆ ತನಗೆ ಕೊಟ್ಟ ಶಿಕ್ಷಣವನ್ನು ಇತರ ಕಾನಸ್ಟೆ-ಬಲ್‌ಗಳೊಡನೆ ತೆಗೆದುಕೊಂಡನು. ಅನಂತರ ಎಲ್ಲರನ್ನೂ ನಿಯಮಿಸಿದಂತೆ ಕೆಂಪಯ್ಯನನ್ನೂ ಒಂದು ವರ್ತುಲ (ಸರ್ಕಲ್) ದಲ್ಲಿ ಸಂಚಾರದ ಹತೋಟಿಗಾಗಿ ನಿಲ್ಲಿಸಿದರು.

ವರ್ತುಲದಲ್ಲಿ ಸ್ವಲ್ಪ ಎತ್ತರವಾಗಿದ್ದ ಪಾದಪೀಠದ ಮೇಲೆ ನಿಂತುಕೊಂಡ ಕೆಂಪಯ್ಯ ಜನರಿಗೂ ವಾಹನಗಳಿಗೂ ಬೈಸಿಕಲ್‌ಗಳಿಗೂ ಕೈ-ಯಿಂದ ಸಂಜ್ಞೆ ಮಾಡಿ ದಿಕ್ಕನ್ನು ತೋರಿಸತೊಡಗಿದನು. ಹಿಂದೆ "ಇದು ಯಾವ ಮಹಾಕೆಲಸ?'' ಎಂದು ಹಾಸ್ಯ ಮಾಡುತ್ತಿದ್ದ ಕೆಂಪಯ್ಯನಿಗೆ ಪಾದಪೀಠದ ಮೇಲೆ ನಿಂತುಕೊಂಡು ಸುತ್ತು ನೋಡಿದಾಗ, ತಾನೇ ಒಂದು ಗಾಳಿಗಿರಗಟ್ಟೆಯ ಮೇಲೆ ಕುಳಿತಿದ್ದಂತೆ ಭಾಸವಾಯಿತು. ಆ ಪಟ್ಟಣದಲ್ಲಿ ವಾಹನಗಳು ಕಡಿಮೆಯಾಗಿದ್ದರೂ ಅವೆಲ್ಲವೂ ಪಿಶಾಚಿಗಳಂತೆ ತನ್ನ ಮೇಲೆಯೇ ನುಗ್ಗುತ್ತಿದ್ದವು. ಕೆಂಪಯ್ಯನಿಗೆ ವಾಹನಗಳಲ್ಲಿ ಹೋಗು

ವನರ ಮೇಲೆಲ್ಲ ಕೋಪವುಂಟಾಯಿತು. "ಇವರು ಯಾಕೆ ಹೀಗೆ ಅಲೆಯುತ್ತಾರೆ? ಗಂಭೀರವಾಗಿ ಮನೆಯಲ್ಲಿರುವುದಕ್ಕೆ ಇವರಿಗೆ ಆಗಿರುವುದೇನು?" ಎಂದು ಅವನು ತನ್ನಲ್ಲಿಯೇ ಮೊರೆಯುತ್ತಿದ್ದನು. ಮೋಟಾರಿನಲ್ಲಿ ಬರುವವರು "ಮುಂದಕ್ಕೆ ಹೋಗುತ್ತೇವೆ'' ಎಂದು ಅದೇ ದಾರಿಯಲ್ಲಿ ಮುಂದಕ್ಕೆ ಕೈನೀಡಿದಾಗ ಕೆಂಪಯ್ಯನಿಗೆ ಅವನು ತನ್ನ ಮುಖವನ್ನೇ ತಿವಿಯುತ್ತಿರುವಂತೆ ಭಾಸವಾಗುತ್ತಿತ್ತು. ತಾನೂ ಪ್ರತಿಯಾಗಿ ಅವನ ಮುಖದ ಕಡೆಗೆ ತನ್ನ ಮುಷ್ಟಿಯನ್ನು ಯಾಕೆ ನೀಡಬಾರದು? ಎಂದು ಅವನು ಎಷ್ಟೋ ವೇಳೆ ಯೋಚಿಸಿದ್ದನು. ವರ್ತುಲದಲ್ಲಿ ಮೋಟಾರು ಬಳಸಿಕೊಂಡು ಹೋಗಬೇಕಾದಾಗ, ಸಾರಥಿಯು ತನ್ನ ಕೈಯನ್ನು ಒಂದು ವಿಧವಾಗಿ ಸುತ್ತಿ ದಿಕ್ಕನ್ನು ತೋರಿಸುತ್ತಿದ್ದನು. ಕೆಂಪಯ್ಯನಿಗೆ ಅದು ಹೇಗೋ ವಿಚಿತ್ರವಾಗಿ ಒಂದು ನರ್ತನ ಭಂಗಿಯಂತೆ ತೋರುತ್ತಿತ್ತು. ಬೈಸಿಕಲ್‌ನ ಪ್ರಯಾಣಿಕ ಬಂದು "ಹೀಗೆ ಹೋಗುತ್ತೇನೆ'' ಎಂದು ದಾರಿ ತೋರಿಸಿದಾಗ ಕೆಂಪಯ್ಯನಿಗೆ ಸಿಟ್ಟು ಬರುತ್ತಿದ್ದಿತು. ಅವನು ಮನಸ್ಸಿನಲ್ಲಿ "ಹೋದರೆ ಹೋಗು. ಅದಕ್ಕೆ ನಾನು ಮಾಡಬೇಕಾದುದೇನು?'' ಎಂದು ಸುಮ್ಮನಾಗಿ ಬಿಡುತ್ತಿದ್ದನು. ಎಲ್ಲ ಕಡೆಗಳಿಂದಲೂ ಬೈಸಿಕಲ್ಲುಗಳು ಮೋಟಾರುಗಳು ಬಂದಾಗ ಏನೂತೋರದೆ ಎರಡುಕೈಗಳನ್ನೂ ಮೇಲಕ್ಕೆತ್ತಿಬಿಡುತ್ತಿದ್ದನು. ಗಾಬರಿಯುಂಟಾದಾಗ ಕೈಯ್ಯನ್ನು ಒಂದು ಕಡೆಗೆ ತೋರಿಸಿ, ಮುಂದಲ ಗಳಿಗೆಯಲ್ಲಿಯೇ ಬೇಡವೆಂದು ತಲೆಯಲ್ಲಾಡಿಸುತ್ತಿದ್ದನು. ಮತ್ತೊಂದು ಸಲ, ಕೆಂಪಯ್ಯ ಗಡ್ಡ ಕೆರೆಯುತ್ತಾ ಆಕಾಶ ನೋಡಿಕೊಂಡು ಸುಮ್ಮನೆ ನಿಂತುಬಿಟ್ಟದ್ದಾಗ, ವರ್ತುಲದ ಸುತ್ತ ಗಾಡಿಗಳೂ ಮೋಟಾರುಗಳೂ ಲಾರಿ ಬಸ್ ಸೈಕಲುಗಳೂ ಇರುವೆಯ ಸಾಲಿನಂತೆ ಬಂದು ನಿಂತುಬಿಟ್ಟವು. ಅವರೆಲ್ಲ ಕೈ ತೋರಿಸಿದರೂ ಕೊಂಬು ಊದಿದರೂ ಗಂಟೆಬಾರಿಸಿದರೂ ಕೂಗಿದರೂ ಕೆಂಪಯ್ಯ ಅನ್ಯಮನಸ್ಕನಾಗಿ ಆಕಾಶ ನೋಡುತ್ತ ಗಡ್ಡಕೆರೆ-ಯುತ್ತಿದ್ದುದರಿಂದ ಆ ಸುತ್ತ ಬಂದುನಿಂತ ವಾಹನಗಳ ಸಾಲಿನ ಕಡೆ ಅವನ ದೃಷ್ಟಿ ಹೋಗಿಯೇ ಇರಲಿಲ್ಲ. ದೂರದಲ್ಲಿ ಮೋಟಾರು ಬೈಸಿಕಲ್‌ನಲ್ಲಿ ಹೋಗುತ್ತಿದ್ದ ಸಬ್ ಇನಸ್ಪೆಕ್ಟರು ಪ್ರಯಾಣ ಒಂದೆಡೆ ತಡೆದುದನ್ನು ಕಂಡು ವರ್ತುಲಕ್ಕೆ ಬಂದರು. ಅವರು ಮೋಟಾರು ಬೈಸಿಕಲ್ಲಿನಿಂದ ಇಳಿದು, ಪಾದಪೀಠವನ್ನು ಏರಿ ಕೆಂಪಯ್ಯನ ಹಿಂದೆ ನಿಂತು ಅವನ ಬೆನ್ನಿನ ಮೇಲೆ ತಟ್ಟಿದಾಗಲೆ ಕೆಂಪಯ್ಯ ಗಡ್ಡದಿಂದ ಕೈತೆಗೆದು ಕನಸಿನಲ್ಲಿ ಎಚ್ಚರಗೊಂಡಂತೆ ಸುತ್ತ ನಿಂತಿದ್ದ ವಾಹನಗಳ ಸಾಲನ್ನು ನೋಡಿದುದು.

ಕೊನೆಗೊಮ್ಮೆ ಕೆಂಪಯ್ಯನಿಗೆ ಮಲೆನಾಡ ಕೂದೂರು ಠಾಣೆಗೆ ವರ್ಗವಾಯಿತು. ಆ ವರ್ಗ ಶಿಕ್ಷೆಯೆಂದು ಅಲ್ಲ, ಸ್ವಾಭಾವಿಕವಾಗಿ ಆಯಿತು. ಪೋಲೀಸ ಇಲಾಖೆಯಲ್ಲಿ "ದಕ್ಷನಲ್ಲದವ ಅಪರಾಧಿ'' ಎಂಬ ಅಪಾದನೆ ಹೊರಬೇಕಾದರೆ, ಇನ್ನೂ ಹೆಚ್ಚು ಅನಾಚಾರಗಳನ್ನು ಮಾಡಬೇಕು. ಮತ್ತೊಬ್ಬ ಕಾನಸ್ಟೈಬಲ್‌ನ ಮಗನಿಗೆ ಮಿಡಲ್ ಸ್ಕೂಲ ಪರೀಕ್ಷೆಯಲ್ಲಿ ತೇರ್ಗಡೆಯಾದುದರಿಂದ, ಆತ ಪಟ್ಟಣದ ಪ್ರೌಢ ಪಾಠಶಾಲೆಗೆ ಸೇರಲಿಚ್ಛಿಸಿದನು. ಸುಪರಿಂಟೆಂಡೆಂಟರು ಇತರ ಎಲ್ಲ ಕಾನ-ಸ್ಟೈಬಲ್‌ಗಳನ್ನೂ ಯಾರು ಮಲೆನಾಡಿನ ಕೂದೂರಿಗೆ ಹೋಗುತ್ತೀರೆಂದು ವಿಚಾರಿಸಿದರು. ಯಾರೂ ಹೋಗಲು ಒಪ್ಪಲಿಲ್ಲ. ಕೊನೆಗೆ ತಮಗೆ ಯಾರು ಬೇಕಿಲ್ಲ ಎಂದು ಅವರು ಯೋಚನೆ ಮಾಡಿ, ಕೆಂಪಯ್ಯನನ್ನು ಅಲ್ಲಿಗೆ ವರ್ಗಮಾಡಿದರು.

೨

ಮಲೆನಾಡಿನ ಮಧ್ಯದಲ್ಲಿದ್ದ ಕೂದೂರು ಠಾಣೆ ಕೆಂಪಯ್ಯನಿಗೆ ಅಪರಿಚಿತವಾಗಿರಲಿಲ್ಲ. ಅವನು ಅಲ್ಲಿ ಹಿಂದೆ ಉದ್ಯೋಗದಲ್ಲಿ ಇಲ್ಲದಿದ್ದರೂ ಆ ಭಾಗಗಳನ್ನು ನೋಡಿದ್ದನು. ಪಟ್ಟಣಕ್ಕೆ ಅವನಿಗೆ ವರ್ಗವಾಗುವುದಕ್ಕಿಂತ ಮುಂಚೆ ಅವನು ಇದ್ದ ಹಳ್ಳಿಗಿಂತ ಕೂದೂರು ಹೆಚ್ಚು ಕುಗ್ರಾಮ. ಹಿಂದಲ ಹಳ್ಳಿಯ ಠಾಣೆಯ ಎದುರಿಗೆ ನಾಲ್ಕು ಬಸ್ಸುಗಳಾದರೂ ಹೋಗುತ್ತಿದ್ದವು. ಕೂದೂರಿಗೆ ಯಾವ ಕಡೆಯಿಂದಲೂ ರಸ್ತೆ ಇರಲಿಲ್ಲ. ಅದರ ಸುತ್ತುಮುತ್ತಲಿನ ಹಳ್ಳಿಗಳಿಗೆ ಕಾಲುದಾರಿಯಿಂದ ಮಾತ್ರ ಹೋಗಬಹುದಾಗಿದ್ದಿತು. ಅಲ್ಲಿಗೂ ಒಬ್ಬ ದಫೆದಾರರು, ಕೆಂಪಯ್ಯ ಮತ್ತು ಇನ್ನೊಬ್ಬ ಕಾನಸ್ಟೈಬಲ್ ಕಾವಲುಗಾರರು. ಆ ದಫೆದಾರರೂ ವಾರಕ್ಕೆ ಐದು ದಿನ ಜಿಲ್ಲಾ ಮುಖ್ಯ ಪಟ್ಟಣ-ದಲ್ಲಿಯೇ ಇರುತ್ತಿದ್ದರು. ಇನಸ್ಪೆಕ್ಟರೇ ಆಗಲಿ ಸಬ್ ಇನಸ್ಪೆಕ್ಟರೇ ಆಗಲಿ ಆರು ತಿಂಗಳಿಗೆ ಒಂದು ದಿನವೂ ಆ ದಾರಿಯಲ್ಲಿ ಬರುತ್ತಿರಲಿಲ್ಲ. ಸುತ್ತಲಿನ ಹಳ್ಳಿಯವರಿಗೆ ಪೋಲೀಸ ಸ್ಟೇಶನ್ ಕಡೆ ಲಕ್ಷ್ಯವೇ ಇರಲಿಲ್ಲ. "ಠಾಣೆಗೆ ಯಾರು ಅಧಿಕಾರಿ? ಅಲ್ಲಿ ಇರುವವರು ಯಾರು ಯಾರು?" ಎಂಬುದಾವುದನ್ನೂ ಅವರು ಯೋಚಿಸುತ್ತಲೇ ಇರಲಿಲ್ಲ.

ವಾರಕ್ಕೆ ಒಂದುದಿನ ನಡೆಯುತ್ತಿದ್ದ ಕೂದೂರ ಸಂತೆಯೋ ಆ ಪ್ರಾಂತಕ್ಕೆ ಜನ ಒಂದಾಗಿ ಸೇರುವ ದೊಡ್ಡ ಪರಸೆ. ಆ ಸಂತೆಯಲ್ಲಿ ಕೆಂಪಯ್ಯ ತನಗೆ ವಾರಕ್ಕೆ ಬೇಕಾದ ತರಕಾರಿ, ಬೆಣ್ಣೆ, ಮೊಟ್ಟೆ, ಕೋಳಿ ಎಲ್ಲವನ್ನೂ ಶೇಖರಿಸಿಕೊಳ್ಳುತ್ತಿದ್ದನು. ಸಂತೆಗೆ ಬರುತ್ತಿದ್ದ ಹನುಮನಹಳ್ಳಿಯ ಕೋಳಿಗಳೂ ಮೊಟ್ಟೆಗಳೂ ಆ ಪ್ರಾಂತದಲ್ಲಿಯೇ ಪ್ರಸಿದ್ಧವಾದುವು. ಹನುಮನಹಳ್ಳಿಯಲ್ಲಿ ಪ್ರತಿಯೊಬ್ಬರೂ ಸುಧಾರಿಸಿದ ಸೀಮೆ ಕೋಳಿಗಳನ್ನು ಸಾಕುತ್ತಿದ್ದರು. ಉಳಿದ ಕೋಳಿಗಳಿಗಿಂತ ಆ ಕೋಳಿಗಳಿಗೆ ಗಿರಾಕಿಗಳು ಹೆಚ್ಚು. ಆ ಕೋಳಿ ಮೊಟ್ಟೆಗಳು ನಾಡ ಕೋಳಿ ಮೊಟ್ಟೆಗಳ ಎರಡರಷ್ಟು ಗಾತ್ರವಾಗಿದ್ದು, ಗಜನಿಂಬೇಹಣ್ಣಿನಂತೆ ಇರುತ್ತಿದ್ದವು. ಒಂದು ದಿನ ಆ ಮೊಟ್ಟೆ ಮತ್ತು ಕೋಳಿಯ ರುಚಿ ನೋಡಿದ ಮೇಲೆ ಕೆಂಪಯ್ಯನಿಗೆ ನಿತ್ಯಾ ಅವೇ ಬೇಕೆನ್ನಿಸಿತು. ಪಟ್ಟಣದಲ್ಲಿ ಹೊಟ್ಟೆಗೆ ಹಿಟ್ಟಿಲ್ಲದೆ, ಗೊಂತಿನಲ್ಲಿ ಕಟ್ಟಿದ ಹಸು ಮುಂದೆ ಹಾಕಿದ ಹುಲ್ಲನ್ನು ಮಾತ್ರ ತಿನ್ನುತ್ತಿದ್ದಂತೆ, ಬರಿಯ ಸಂಬಳದ ಮೇಲೆಯೇ ಜೀವಿಸಿ, ಹೊಟ್ಟೆ ಬೆನ್ನು ಅಂಟಿಕೊಂಡು ಅರ್ಧ ಜೀವದಿಂದಿದ್ದ ಅವನಿಗೆ ಹನುಮನಹಳ್ಳಿ ಕೋಳಿ ಒಳ್ಳೆ ಅಶ್ವಗಂಧಿ, ಮಕರಧ್ವಜದಂತೆ ಆಯಿತು. ನಾಲ್ಕು ವಾರ ಅದನ್ನ ತಿನ್ನುವುದರೊಳಗಾಗಿ ಕೆಂಪಯ್ಯ ಹಿಂದಲಂತೆ ಆದನು. ನಿತ್ಯಾ ಒಂದು ಕೋಳಿಯನ್ನಾದರೂ ಸಂಪಾದಿಸುವ ಬಗೆ ಹೇಗೆ ಎಂಬ ಚಿಂತೆ ಅವನಿಗೆ ಹಿಡಿಯಿತು.

ಮಲೆನಾಡಿನ ಹಳ್ಳಿಗಳಲ್ಲಿ ಈಗಲೂ ರಾತ್ರಿಯ ಹೊತ್ತು, ಸರದಿವಾರಾಗಿ ಗ್ರಾಮಸ್ಥರು ಗ್ರಾಮದ ಕಾವಲಿರಬೇಕೆಂಬ ನಿಯಮವಿದೆ. ಇದಕ್ಕೆ ಪೋಲೀಸ್ ಕಾನಲು ಎಂದು ಹೆಸರು. ಗ್ರಾಮದ

ಕುಳಗಳೆಲ್ಲ ನಿತ್ಯ ಇಬ್ಬರು ಮೂವರಂತೆ, ರಾತ್ರಿ ಹೊತ್ತು ಊರು ಗಸ್ತು ಹೊಡೆಯುತ್ತಾರೆ. ಸುತ್ತ ಎಲ್ಲಿಯಾದರೂ ಕಳವು ಸಂಭವಿಸಿದರೆ ಕೂಡಲೆ ಪ್ರತಿ ಹಳ್ಳಿಯಲ್ಲಿಯೂ ಕಾವಲನ್ನು ಹೆಚ್ಚು ಬಿಗಿ ಮಾಡುತ್ತಾರೆ. ಇಲ್ಲದಿದ್ದರೆ ಹಾಗೂ ಹೀಗೂ ಕಾವಲುಗಾರರು ಅರ್ಧ ರಾತ್ರಿಯಲ್ಲಿ ಒಂದು ಸಲ ಎಲ್ಲರನ್ನೂ ಎಬ್ಬಿಸಿ, ಜೋಪಾನ ಎಂದು ಹೇಳಿ ಮನೆಯಲ್ಲಿ ಹೋಗಿ ಮಲಗುತ್ತಾರೆ. ಈ ಕಾವಲು ವ್ಯವಸ್ಥೆಯನ್ನು ಏರ್ಪಡಿಸುವುದು, ಇಂತಿಂತಹ ದಿನಗಳಲ್ಲಿ ಇಂಥವರು ಕಾವಲಿರಬೇಕೆಂದು ಗೊತ್ತು ಮಾಡುವುದು, ಅವರು ಹಾಗೆ ಕಾವಲಿದ್ದಾರೆಯೇ ಎಂದು ನೋಡುವುದು, ಇಲ್ಲದಿದ್ದರೆ ಅವರ ಹೆಸರನ್ನು ಮೇಲಕ್ಕೆ ತಿಳಿಸಿ ಅವರಿಗೆ ಸರಿಯಾದ ಶಿಕ್ಷೆ ಮಾಡಿಸುವುದು ಇವೆಲ್ಲ ಆ ಹಳ್ಳಿಯ ಹತ್ತಿರದ ಪೋಲೀಸ್ ಠಾಣೆಗೆ ಸೇರಿದ ಜವಾಬ್ದಾರಿ.

ಕಾನಸ್ಟೆಬಲ್ ಕೆಂಪಯ್ಯನಿಗೆ ಇದ್ದಕ್ಕಿದ್ದಂತೆ ಹನುಮನಹಳ್ಳಿ ಪೋಲೀಸ್ ಕಾವಲಿನ ವಿಷಯದಲ್ಲಿ ತುಂಬ ಶ್ರದ್ಧೆಯುಂಟಾಗಿಹೋಯಿತು. ಕೆಂಪಯ್ಯ ಅಂದೇ ಹನುಮನಹಳ್ಳಿಗೆ ಹೋದನು. ಆ ಊರು ಪೋಲೀಸ್ ಠಾಣೆಗೆ ಅಷ್ಟು ಸಮೀಪದಲ್ಲಿದ್ದರೂ ಪೋಲೀಸಿನವರು ಊರಿಗೆ ಬರುವುದೇ ಅಪರೂಪವಾಗಿದ್ದುದರಿಂದ, ಊರಿನವರಿಗೆ ಕೆಂಪಯ್ಯನನ್ನು ನೋಡಿ ಸ್ವಲ್ಪ ಆಶ್ಚರ್ಯವೂ ಗಾಬರಿಯೂ ಉಂಟಾಯಿತು. ಪಟೇಲ ಹನುಮೇಗೌಡನು ಕೆಂಪಯ್ಯನನ್ನು ಊರ ಮುಂದಲ ಚಾವಡಿಯಲ್ಲಿ ಕೂರಿಸಿ, " ಈಗ ಅಂತಹ ರಾತ್ರಿ ಕಾವಲು ಬೇಕಿಲ್ಲ. ನಾವೆಲ್ಲ ಎಚ್ಚರಿಕೆಯಿಂದ ಇದ್ದೇವೆ. ಪೋಲೀಸ್ ಸ್ಟೇಶನ್ ಇಷ್ಟು ಹತ್ತಿರದಲ್ಲಿರುವುದರಿಂದ, ಈ ಪ್ರಾಂತಕ್ಕೆ ಕಳ್ಳರು ಸುಳಿಯಲು ಹೆದರುತ್ತಾರೆ " ಎಂದು ಹೇಳಿದರೂ ಕೆಂಪಯ್ಯ ಒಪ್ಪಲಿಲ್ಲ. " ಈ ಕಾಲದ ಕಳ್ಳರ ವಿಚಾರ ನಿಮಗೆ ತಿಳಿಯದು; ಅವರು ಬಹಳ ಕಂತ್ರಿಗಳು. ಬೇಕಾದ ವೇಷ ಬದಲಾಯಿಸುತ್ತಾರೆ. ಪೋಲೀಸ್ ಠಾಣೆಯ ಎದುರಿಗೇ ಕದಿಯುತ್ತಾರೆ. ಪೋಲೀಸಿನವರ ಉಡುಪಿನಲ್ಲಿಯೇ ಕದಿಯುತ್ತಾರೆ. ಈ ಹಳ್ಳಿಗಳ ಜವಾಬ್ದಾರಿ ನನಗೆ ಸೇರಿದುದು. ನಿಮ್ಮ ಮಾತು ಕೇಳಿಕೊಂಡು ನಾನು ಎಚ್ಚರ ತಪ್ಪಿದರೆ ನೀವ್ಯಾರೂ ಬಂದು ನನ್ನ ಉಳಿಸೋದಿಲ್ಲ. ರಾತ್ರಿ ಕಾವಲು ಇರಲೇಬೇಕು " ಎಂದನು. ಪಟೇಲ ಹನುಮೇಗೌಡ ವಿಧಿಯಿಲ್ಲದೆ ಒಪ್ಪಿಕೊಂಡು ಸುಮ್ಮನಾದನು. ಕಾನಸ್ಟೆಬಲ್ ಕೆಂಪಯ್ಯ, ದಿನಕ್ಕೆ ಇಬ್ಬರಂತೆ ಕಾವಲುಪಟ್ಟಿ ಮಾಡಿ, ಅದರಂತೆ ರಾತ್ರಿಯೆಲ್ಲ ಕಾವಲಿರಬೇಕೆಂದೂ ತಪ್ಪಿದರೆ ಸಜ ಆಗುವುದೆಂದೂ ಹೆದರಿಸಿ, ಹೊರಟುಹೋದನು.

ಆ ರಾತ್ರಿ, ತಿಮ್ಮಪ್ಪನಿಗೂ ಬೋರಯ್ಯನಿಗೂ ಕಾವಲಿನ ಸರದಿ ಬಿದ್ದಿತ್ತು. "ಕಣದಲ್ಲಿ ಗುಡ್ಡೆ ಇಲ್ಲ. ಕತ್ತಲೆ ಮಳೆಗಾಲವಲ್ಲ. ಈಗ ಭಯವೇನು? " ಎಂದುಕೊಂಡು, ಅವರಿಬ್ಬರೂ ಮಲಗುವುದಕ್ಕೆ ಮುಂಚಿತವಾಗಿ ಊರಿನ ಪ್ರತಿ ಮನೆಯ ಮುಂದೆಯೂ ಒಂದೊಂದು ಸಲ ಗಟ್ಟಿಯಾಗಿ ಕೂಗಿ " ಎಚ್ಚರವಾಗಿರಿ " ಎಂದು ಹೇಳಿ ಹೋಗಿ, ತಾವೂ ಮಲಗಿಕೊಂಡರು. ಆ ರಾತ್ರಿ, ಅರ್ಧರಾತ್ರಿ ಕಳೆದ ಮೇಲೆ, ಯಾರೋ ತನ್ನ ಹೆಸರು ಕರೆಯುತ್ತಿರುವಂತೆ ಬೋರಯ್ಯನಿಗೆ ಭಾಸವಾಯಿತು. ಅವನು, ನಿದ್ರೆಯಿಂದ ಎಚ್ಚತ್ತು ನೋಡುವಾಗ, ಬಾಗಿಲಿನಲ್ಲಿ ತಿಮ್ಮಪ್ಪನೂ ಕಾನಸ್ಟೆಬಲ್ ಕೆಂಪಯ್ಯನೂ ನಿಂತಿದ್ದರು. ತಿಮ್ಮಪ್ಪ ಅಪರಾಧಿಯಂತೆ " ಕಾನಸ್ಟಬಲ್‌ರು ನನ್ನನ್ನು ಎಚ್ಚರಿಸಿದರು. ನೀನಾದರೂ ಗಸ್ತಿಗೆ ಹೋಗಿದ್ದೀಯೋ ಅಂತ ನೋಡಲು ಬಂದೆ. ನೀನೂ ಮಲಗಿದ್ದಿ" ಎಂದನು. ಮುಂದಲ ಗಳಿಗೆಯಲ್ಲಿಯೇ ಕಾನಸ್ಟಬಲ್ ಕೆಂಪಯ್ಯ " ಕಾವಲು ತಪ್ಪಿದಿರಿ. ರಿಪೋರ್ಟಗೆ ರುಜು ಹಾಕಿ " ಎಂದು ಮೊದಲೇ ಸಿದ್ಧಮಾಡಿಟ್ಟುಕೊಂಡಿದ್ದ ಒಂದು ಕಾಗದವನ್ನು ತಿಮ್ಮಪ್ಪನ ಮುಂದಕ್ಕೆ ನೀಡಿದನು. ಒಂದೆರಡು ನಿಮಿಷಗಳೊಳಗಾಗಿ ತಿಮ್ಮಪ್ಪ, ರುಜು ಹಾಕದಿದ್ದ ಕಾಗದವನ್ನು ಕಾನಸ್ಟಬಲ್‌ರಿಗೆ ಹಿಂದಕ್ಕೆ ಕೊಟ್ಟನು. ಜತೆಯಲ್ಲಿ ತಿಮ್ಮಪ್ಪನ ಒಂದು ಕೋಳಿಯೂ ಕಾನಸ್ಟೆಬಲ್‌ರ ಕೈಸೇರಿತು.

ಅಲ್ಲಿಂದ ಮುಂದೆ ಪ್ರತಿ ದಿನವೂ ಅದೇ ಮಾಮೂಲು ಆಯಿತೆಂದು ಹೇಳಬಹುದು. ಕಾವಲುಗಾರರು ಹೇಗೆ ಕಾವಲಿದ್ದರೂ ಕಾನ್‌ಸ್ಟಬಲ್ ಕೆಂಪಯ್ಯ, ಅದಾವುದೋ ಮಾಯದಲ್ಲಿ ಅವರನ್ನು ತಪ್ಪಿಗೆ ಸಿಕ್ಕಿಸಿಬಿಡುತ್ತಿದ್ದನು. ಆಗಲೇ ಊರಿನ

ಐವತ್ತು ಅರವತ್ತೂ ಕೋಳಿಗಳು ಕೆಂಪಯ್ಯನಲ್ಲಿ ಜೀರ್ಣವಾಗಿ ಹೋಗಿದ್ದವು. ಹೀಗೆ ಇನ್ನು ಕೆಲವು ದಿನ ನಡೆದರೆ, ಹನುಮನ ಹಳ್ಳಿಯವರು ಅನೇಕ ತಿಂಗಳುಗಳಿಂದ ಕಷ್ಟಪಟ್ಟು ಬೆಳೆಸಿ ಸಾಕಿದ್ದ, ಅವರ ಮುಖ್ಯ ಜೀವನೋಪಾಯವಾಗಿದ್ದ ಸೀಮೆ ಕೋಳಿಯ ತಳಿ ನಿರ್ನಾಮವಾಗುವುದರಲ್ಲಿ ಯಾವ ಸಂಶಯವೂ ಇರಲಿಲ್ಲ. "ಈ ಏಕಚಕ್ರ ನಗರಕ್ಕೆ ಸಂಭವಿಸಿದ ಬಕಬಾಧೆಯನ್ನು ನಿವಾರಿಸುವ ಬಲಭೀಮನೆಲ್ಲಿ?'' ಎಂದು ಹಳ್ಳಿಯವರು ಕಂಡಕಂಡ ದೇವರಿಗೆ ಹರಕೆ ಹೊರತೊಡಗಿದರು.

ತಮಗೆ ತಾವು ಸಹಾಯ ಮಾಡಿಕೊಳ್ಳುವವರಿಗೆ ದೇವರೂ ಸಹಾಯ ಮಾಡುತ್ತಾನೆ ಎಂಬ ಗಾದೆ ಹನುಮನಹಳ್ಳಿಯವರಿಗೆ ಇದ್ದಕ್ಕಿದ್ದಂತೆ ಹೊಳೆಯಿತು. ಆ ಸಂಜೆ, ಗ್ರಾಮದ ಚಾವಡಿಯಲ್ಲಿ, ಊರಿನ ಎಲ್ಲ ಕಾವಲುಗಾರರದೂ ಸಭೆಯಾಯಿತು. ಸಭೆಗೆ ಕಾವಲುಗಾರರು ಹೊರತು ಇತರ ಯಾರ ಪ್ರವೇಶವೂ ಇರಲಿಲ್ಲ. ಕುಳವಾಡಿ, ದೊಣ್ಣೆ ಹಿಡಿದುಕೊಂಡು, ಚಾವಡಿಯ ಸುತ್ತಾ ಯಾರೂ ಸೇರದಂತೆ ಗಸ್ತು ಹೊಡೆಯುತ್ತಿದ್ದನು. ಸಭೆಗೆ ಪಟೇಲ್ ಹನುಮೇಗೌಡರು ಬಂದಿರಲಿಲ್ಲ. ಸುಮಾರು ಒಂದು ಗಂಟೆಯ ಕಾಲ ಸಭೆಯ ಕಾರ್ಯಗಳು ನಡೆದ ಮೇಲೆ, ಗಂಭೀರ ಮುಖಭಾವದಿಂದ ಎಲ್ಲರೂ ಚಾವಡಿ ಬಿಟ್ಟು ಹೊರಬಿದ್ದರು. ರಾತ್ರಿಯ ಕಾವಲನ್ನು ಇನ್ನೂ ಹೆಚ್ಚು ಎಚ್ಚರಿಕೆಯಿಂದ ಮಾಡಬೇಕೆಂಬ ತೀರ್ಮಾನವಾಯಿತೆಂದು ಕುಳವಾಡಿ, ಅನಂತರ ಎಲ್ಲರಿಗೂ ಹೇಳಿದನು. ಚಾವಡಿಯ ಎದುರಿಗೇ ಇದ್ದ ತನ್ನ ಮನೆಯ ಜಗಲಿಯ ಮೇಲೆ, ಪಟೇಲ್ ಹನುಮೇಗೌಡರು ಕುಳಿತಿದ್ದರು. ಊರಿಗೆ ಹಿರಿಯರಾದ ಅವರಿಗೆ ಕಾವಲಿನ ಕಾರ್ಯ ಬಿದ್ದಿರಲಿಲ್ಲವಾಗಿ, ಅವರು ಚಾವಡಿಯ ಸಭೆಗೆ ಹೋಗಿರಲಿಲ್ಲ. ಆದರೆ ಚಾವಡಿಯಿಂದ ಹೊರಬಿದ್ದ ಪ್ರತಿಯೊಬ್ಬರೂ ಹನುಮೇಗೌಡರ ಕಡೆ ನೋಡಿಯೇ ನೋಡುತ್ತಿದ್ದರು. ಎಚ್ಚರಿಕೆಯಿಂದ ನೋಡುವವರಿಗೆ, ಹನುಮೇಗೌಡರ ಮುಖದಲ್ಲಿ ಒಂದು ಚೇಷ್ಟೆಯ ಮನೋಭಾವವೂ ಸಂಜ್ಞೆಯ ವಿನೋದಸಂಭಾ



ಡಾಕ್ಟರ್ (ವಿಮಾ ಏಜಂಟನಿಗೆ) — ಬನ್ನಿ ಬನ್ನಿ ಏಜಂಟರೇ, ಇವರೂ ನಮ್ಮವರೇ. ಕಟ್ಟಿಗೆ ಅಡ್ಡೆ ಯಜಮಾನರು.

ಷಣೆಯೂ ತೋರುತ್ತಿದ್ದಿತು. ಹನುಮೇಗೌಡ ಅವರಿಗೆಲ್ಲ “ ಸರಿ ಸರಿ ” ಎನ್ನುವಂತೆ ತಲೆಯು ಲ್ಲಾಡಿಸುತ್ತಿದ್ದನು.

ಆ ರಾತ್ರಿ, ಕೆಂಪಯ್ಯ, ಒಂದು ದಟ್ಟ ಪಂಚೆ ಯನ್ನುಟ್ಟುಕೊಂಡು, ಬೆನ್ನು ಪೂರ್ತ ಹರಿದಿದ್ದ ಒಂದು ಅಂಗಿಯನ್ನು ಧರಿಸಿ,ಅದರ ಮೇಲೆ ಒಂದು ದುಪ್ಪಟಿಯನ್ನು ಹೊದೆದುಕೊಂಡು ಹನುಮನ ಹಳ್ಳಿಗೆ ಬಂದನು. ಆಗ ಸುಮಾರು ಗಂಟೆ ಒಂದು ವರೆ ಆಗಿತ್ತು. ಕೆಂಪಯ್ಯ ಸುಖವಾಗಿ ಒಂದು ನಿದ್ರೆ ಮಾಡಿ, ಹೊರಟುಬಂದಿದ್ದನು. ಅವತ್ತಿನ ಸರದಿ ಪುಟ್ಟಪ್ಪ ಮತ್ತು ರಂಗಯ್ಯನದಾಗಿತ್ತು. ಕೆಂಪಯ್ಯ ನಿಗೆ ಬಹಳ ದಿನಗಳಿಂದ ಪುಟ್ಟಪ್ಪನ ಪುಷ್ಟವಾದ ಕೋಳಿಯಮೇಲೆ ಕಣ್ಣು ಇತ್ತು. “ ಆ ಆಸೆ ಇಂದು ಫಲಿಸುತ್ತೆ ” ಎಂದು ಕೆಂಪಯ್ಯ ಒಂದು ವಿಧ ವಾದ ತೃಪ್ತಿಯ ಮನೋಭಾವದಿಂದ ನಿಧಾನ ವಾಗಿ ಹೆಜ್ಜೆ ಹಾಕುತ್ತ ಮುಂದುವರಿಯುತ್ತಿದ್ದನು. ಚಾವಡಿಯ ಹತ್ತಿರಕ್ಕೆ ಅವನು ಬಂದಕೂಡಲೇ, ಯಾರು ಏನು ಎಂಬುದು ಅವನಿಗೆ ಗೊತ್ತಾಗುವ ದಕ್ಕೆ ಮುಂಚೆಯೇ ಹಿಂದಿನಿಂದ ಅವನ ತಲೆಗೆ, ಯಾರೋ ಒಂದು ಮುಸುಕನ್ನು ಹಾಕಿದರು. ಅವನ ಕೈಯನ್ನು ಯಾರೋ ಹಿಡಿದುಕೊಂಡರು



ಬೆನ್ನಿನಮೇಲೆ ಒಂದೇ ಸವನೆ ಗುಡ್ ಗುಡ್ ಎಂದು ಹತ್ತಾರು ಗುದ್ದುಗಳು ಬಿದ್ದವು. ಕೆಂಪಯ್ಯನು ಗಟ್ಟಿಯಾಗಿ “ ಪಟೇಲರೆ ಪಟೇಲರೆ ಸತ್ತೆ ಸತ್ತೆ ಖೂನಿ ಖೂನಿ ” ಎಂದು ಕಿರಚಿದನು. ಮತ್ತೆ ಅವನ ಬೆನ್ನಿಗೆ ಗುಡ್ ಗುಡ್ ಎಂದು ಗುದ್ದುಗಳು ಬಿದ್ದವು. ಇಬ್ಬರು ಅವನನ್ನು ಬಲವಾಗಿ ತಬ್ಬಿ ಅಲ್ಲಾಡದಂತೆ ಹಿಡಿದುಕೊಂಡುಬಿಟ್ಟರು.

ಆ ವೇಳೆಗೆ ಪಟೇಲ್ ಹನುಮೇಗೌಡರು ಅಲ್ಲಿಗೆ ಬಂದರು. “ ಯಾರಯ್ಯ ಏನ್ರಯ್ಯ ಈ ಅವೇಳೆ ಯಲ್ಲಿ ಗದ್ದಲ? ಕಾವಲು ಕಾಯುವವರು ಹೀಗೆ ಯಾಕೆ ಕೂಗಾಡಬೇಕು ? ” ಎಂದರು. ಕೆಂಪಯ್ಯ ‘ ಪಟೇಲರೆ ’ ಎಂದು ಏನನ್ನೋ ಹೇಳುವುದಕ್ಕೆ ಹೋದನು. ಆಗ ಮತ್ತೆ ಎರಡು ಗುದ್ದು ಅವನ ಬೆನ್ನಿನಮೇಲೆ ಬಿದ್ದುದರಿಂದ ಅವನು ತೆಪ್ಪಗಾದನು. ಪುಟ್ಟಪ್ಪನು ಪಟೇಲರಿಗೆ “ ಗೌಡರೇ, ನಾವು ಗಸ್ತು ತಿರಗತಾ ಇದ್ವೊ. ಇದಾವನೋ ಕಳ್ಳ ಹೊಂಚು ಹಾಕ್ತ ತಿರಗತಿದ್ದ. ಹಿಡಕೊಂಡೊ. ಸ್ವಲ್ಪ ಕೊಸ ರಾಡಿದ. ಎರಡು ಕೊಟ್ವೊ ಅಷ್ಟೆ ” ಎಂದನು. ಪಟೇಲರು “ ಪಾಪ ಪಾಪ, ಹೊಡೀಬಾರದು, ಚಾವಡಿಯಲ್ಲಿ ಕೂರಿಸಿ. ಇನ್ನೇನು ಪದ್ಧತಿಯಂತೆ ದಫೆದಾರ್ ಕೆಂಪಯ್ಯ ಬರ್ತಾರಲ್ಲ. ಅವರ ವಶಕ್ಕೆ ಒಪ್ಪಿಸಿಬಿಡೋಣ ” ಎಂದರು. ಅಷ್ಟು ಹೊತ್ತಿಗೆ ಕೆಂಪಯ್ಯನು ಮುಸುಕಿನೊಳಗೆಯೇ “ ಪಟೇಲ್ ಹನುಮೇಗೌಡರೇ, ನಾನೇ ಕೆಂಪಯ್ಯ ” ಎಂದನು. ಹನುಮೇಗೌಡರು ಬೆಚ್ಚಿಬಿದ್ದು ‘ಹಾ’ ಎಂದರು. ಕೆಂಪಯ್ಯನನ್ನು ಕಟ್ಟ ಹಿಡಿದಿದ್ದವರು ಸರಕ್ಕನೆ ಕೈಬಿಟ್ಟರು. ಮುಸುಕು ತೆಗೆದ ಕೆಂಪಯ್ಯನನ್ನು ನೋಡಿ ಪಟೇಲರಿಗೆ ವಿನೋದವಾಯಿತು.

ಪಟೇಲರು ಕೂಡಲೇ ತಮ್ಮ ನಗುವನ್ನು ಅಡ ಗಿಸಿಕೊಂಡು, ಪುಟ್ಟಯ್ಯನನ್ನೂ ರಂಗನನ್ನೂ ಊರಿನವರನ್ನೂ ಕುರಿತು “ ಅಲ್ಕಣ್ರಯ್ಯ, ನಿಮ ಗೇನು ಜ್ಞಾನಗೀನ ನೆಟ್ಟಗಯ್ತೊ? ಯಾರನ್ನ ಅಂತ ಹೊಡಿತಿದ್ರಿ. ದಫೆದಾರ್ರು ಕಣ್ರೊ ದಫೆ ದಾರ್ರು. ನಿಮಗೆ ತಿಂದು ಕೊಬ್ಬು ಹೆಚ್ಚಾಯ್ತು. ಊರೆಲ್ಲ ಉರಲು ಹೋಗೋಕೆ ಮಾಡ್ಕೊಂಡ್ರಿ. ದಫೇದಾರ್ರು ಒಬ್ಬೊಬ್ಬರನ್ನೂ ನೇತು ಹಾಕಿಸ್ತಾರೆ ನಡೀರಿ” ಎಂದರು. ಪುಟ್ಟಪ್ಪನು ಏನೂ ತಿಳಿಯದ ವನಂತೆ “ದಫೆದಾರ್ರು ಅಂತ ನಮಗ್ಹೆಂಗೆ ಗೊತ್ತಾ ಗಬೇಕು?” ಎಂದನು. ಬರಿ ಕಾನಸ್ಟೆಬಲ್ ಆಗಿದ್ದ ಕೆಂಪಯ್ಯನಿಗೆ, ಜನರೆಲ್ಲ ದಫೇದಾರರು ಎಂದು ತನ್ನನ್ನು ಕರೆದುದರಿಂದ, ಗುದ್ದು ಬಿದ್ದಿದ್ದರೂ ಸ್ವಲ್ಪ ಸಮಾಧಾನವಾಯಿತು. ಹನುಮೇಗೌಡನು ಕೆಂಪಯ್ಯನನ್ನು ನೋಡುತ್ತ “ ಅಲ್ಕಣ್ರೆ ದಫೆ ದಾರ್ರೆ. ನಿಮಗೇನು ಬಂದದ್ದು ಕೇಡುಗಾಲ. ನಮ್ಮನ್ನಾಕ್ಯಾಗ, ನಿಮ್ಮ ದಿರಸು ಹಾಕ್ಕೊಂಡು ಬರೋಕೆ ಇಲ್ವೆ? ನೀವು ದಫೆದಾರ್ರು ಅಂತ ಈ ಬಡಪಾಯಿಗಳಿಗೆ ಹೇಗೆ ಗೊತ್ತಾಗಬೇಕು? ಸರ್ಕಾ ರದೋರು ಕೊಟ್ಟಿರೊ ಅಂಗಿ ಚಡ್ಡಿ ರುಮಾಲ ಆ ರಿ ವೆ ಹಾಕ್ಕೊಂಡ್ಬಂದಿದ್ರೆ, ನಿಮ್ಮ ಮೈ ಮುಟ್ಟೋಕೆ ಯಾರಿಗಾದರೂ ಎದೆ ಆಗೋದೆ? ಬುಡಿಬುಡಿ ನಿಮ್ಮನ್ನ ನಾನು ಒಪ್ಪಲಿಲ್ಲ ” ಎಂದನು. ಕೆಂಪಯ್ಯನನ್ನು ಪಟೇಲರು ಮನೆಗೆ ಕರೆದುಕೊಂಡು ಹೋಗಿ, ಸಿದ್ಧವಾಗಿಟ್ಟಿದ್ದ ಬಿಸಿ ಬಿಸಿ ಹಾಲನ್ನು ಕೊಟ್ಟು ಮಲಗಿಸಿದರು. ಕೆಂಪ ಯ್ಯನಿಗೆ ಬೆನ್ನಿನ ನೋವು ಹೋಗಬೇಕಾದರೆ ಅನಂತರ ಒಂದು ತಿಂಗಳು ಹಿಡಿಯಿತು.

* *


ಈಚೆಗೆ ಕೆಂಪಯ್ಯ, ಹನುಮನಹಳ್ಳಿಗೆ, ರಾತ್ರಿಯ ಕಾವಲು ನೋಡಲು ಹೋಗುತ್ತಿಲ್ಲ. ಹನುಮನಹಳ್ಳಿ ಕೋಳಿಗಳು ಅಸಂಖ್ಯಾತವಾಗಿ ಬೆಳೆದು, ಯಾವ ಸಂತೆಯಲ್ಲಿಯೂ ಅವುಗಳ ಮಾರಾಟವೇ ನಡೆಯುತ್ತಿದೆ. ಕೆಂಪಯ್ಯನಿಗೆ ಒಂದು ಸಂಶಯ ಮಾತ್ರ ಇಂದಿಗೂ ನಿವೃತ್ತಿಯಾ ಗಿಲ್ಲ. “ ವಿಷಯ ಪಟೇಲರಿಗೆ ಮೊದಲು ತಿಳಿ ದಿತ್ತೆ ? ಇಲ್ಲವೆ ? ” ತಿಳಿದಿರಲಿ ಬಿಡಲಿ ಮನುಷ್ಯ ಬಹು ಘಾಟಿ ಎಂಬುದರಲ್ಲಿ ಕೆಂಪಯ್ಯನಿಗೆ ಏನೂ ಅನುಮಾನವಿರಲಿಲ್ಲ.



“ ಈಗ ನೋಡಿ ಸಾರ್, ಎಲ್ಲಾ ಮೋಟಾರುಗಳು ಸಾವಕಾಶ ಹೋಗುವುದಿಲ್ಲವೆ ? ”

ದೀಪಾವಳಿಯ
ಅಭಿನಂದನೆಗಳು

ಪ್ಲಾಯ್‌ವುಡ್



ದಿ ಇಂಡಿಯನ್ ಪ್ಲಾಯ್‌ವುಡ್ ಮ್ಯಾ. ಕಂ. ಲಿ.

ಅಧಿಕ ಉಲ್ಲಾಸದ ವರ್ಷ
ಪ್ಲಾಯವುಡ್‌ದೊಂದಿಗೆ

ಪುರಾತನ ಭಾರತದಲ್ಲಿ

ಅಪರಾಧ ಮತ್ತು ದಂಡ

ಬ್ರಿಟಿಶ ನ್ಯಾಯಪದ್ಧತಿ ಭಾರತದಲ್ಲಿ ಜಾರಿಯಲ್ಲಿ ಬಂದನಂತರ ನಮ್ಮ ಪುರಾತನ ನ್ಯಾಯಪದ್ಧತಿಯೇ ನಮಗೆ ಮರೆತುಹೋಗಿದೆ. ಸಮಕಾಲೀನ ಜಗತ್ತಿನಲ್ಲಿ ಭಾರತದ ನ್ಯಾಯಪದ್ಧತಿ ಇತರ ದೇಶಗಳಿಗಿಂತ ಕಡಿಮೆ ಕ್ರೂರವಾಗಿತ್ತೆಂದು ಗ್ರೀಕ ಮತ್ತು ಚೀನಿ ಯಾತ್ರಿಕರು ಬರೆದಿದ್ದಾರೆ. ನಮ್ಮ ಪರಂಪರೆ ಬಿಟ್ಟು ಕೇವಲ ಪುರಾವೆಯನ್ನು ಅವಲಂಬಿಸಿದ ಬ್ರಿಟಿಶ ನ್ಯಾಯಪದ್ಧತಿ ತಂದದ್ದರಿಂದಲೇ ನಮ್ಮಲ್ಲಿ ಅನೇಕ ಅನ್ಯಾಯಗಳು ದಕ್ಕಿ ಹೋಗುತ್ತಿವೆಂದು ಕೆಲ ನ್ಯಾಯವಿದರ ಅಭಿಪ್ರಾಯವಾಗಿದೆ. ಇಲ್ಲಿ ಪುರಾತನ ನ್ಯಾಯಪದ್ಧತಿಯ ಸಿಂಹಾವಲೋಕನವಿದೆ.

ಲೇಖಕರು: ಶ್ರೀ. ಬಿ. ಎಚ್. ಶ್ರೀಧರ, ಎಂ. ಎ.

ಇತರ ಶಾಸ್ತ್ರಗಳಂತೆ ಧರ್ಮಶಾಸ್ತ್ರಕ್ಕೂ ವೇದಗಳೇ ಮೂಲವೆಂದು ಭಾರತದಲ್ಲಿ ತಿಳಿಯಲಾಗುತ್ತದೆ. ಆದರೆ ನ್ಯಾಯವ್ಯವಹರಣೆಯ ವಿಧಿವಿಧಾನಗಳು ಸ್ಮೃತಿಗಳಲ್ಲೇ ಹೆಚ್ಚಾಗಿ ವಿವರಿಸಲ್ಪಟ್ಟಿವೆ. ಸ್ಮೃತಿಸದೃಶವಾದ ಮಹಾಭಾರತ (ಕ್ರಿ.ಪೂ.೪೦೦) ಕೌಟಲೀಯ ಅರ್ಥಶಾಸ್ತ್ರ (ಕ್ರಿ.ಪೂ. ೩೦೦), ಮನು (ಕ್ರಿ. ಪೂ. ೧ನೇ ಶತಮಾನ), ಯಾಜ್ಞವಲ್ಕ್ಯ, ಬಾರ್ಹಸ್ಪತ್ಯ ಸ್ಮೃತಿಗಳು (ಕ್ರಿ. ಶ. ೨ನೇ ಶತಮಾನ), ವಿಷ್ಣುಸ್ಮೃತಿ (ಕ್ರಿ. ಶ. ೩ನೇ ಶತಮಾನ), ನಾರದಸ್ಮೃತಿ (ಕ್ರಿ.ಶ. ೪೦೦) ಗಳು ನಮ್ಮ ಮುಖ್ಯ ಸ್ಮೃತಿಸಾಹಿತ್ಯವೆನಿಸಿವೆ.

ಪ್ರಾಚೀನ ಭಾರತದಲ್ಲಿ ತಪ್ಪು-ಸರಿಗಳ ಕಲ್ಪನೆ ಪಾಪಪುಣ್ಯಗಳೊಡನೆ ಹೊಂದಿಕೊಂಡಿತ್ತು, ಸುಳ್ಳು ಸತ್ಯಗಳಿಂದ ಹೊರಟದ್ದಾಗಿತ್ತು. Law-suits ಅಥವಾ ವ್ಯವಹಾರ ಪ್ರಪಂಚವನ್ನು ಹೊಕ್ಕರೆ: ಧರ್ಮ, ವ್ಯವಹಾರ, ಚರಿತ್ರ ಮತ್ತು ರಾಜಶಾಸನ ಎಂಬಿವು ಅದರ ಚತುಷ್ಪಾದಗಳು. ಯಾಜ್ಞವಲ್ಕ್ಯನ ಪ್ರಕಾರ ವ್ಯಾಜ್ಯ ಅಥವಾ ದಾವೆಯ ವಸ್ತು, ಅದರ ಉತ್ತರ, ಪ್ರಮಾಣ ಅಥವಾ ಕ್ರಿಯೆ ಮತ್ತು ನಿರ್ಣಯ ಎಂಬಿವು ಅದರ ಚತುರಂಗಗಳು. ಪ್ರಾಚೀನ ವಿಧಿಗಳನ್ನು ಸ್ಥೂಲವಾಗಿ Civil ವ್ಯಾವಹಾರಿಕ ಮತ್ತು Criminal ಅಪರಾಧಿಕ ಎಂದು ಎರಡು ವಿಧವಾಗಿ ವಿಭಜಿಸಿ ಅಭ್ಯಸಿಸಬಹುದು. ನಾವೀಗ ಪ್ರವೇಶಿಸಬೇಕಾದದ್ದು ಅಪರಾಧ ರಾಜ್ಯವನ್ನು !

ರಾಜಧರ್ಮ, ರಾಜನೀತಿ ಅಥವಾ ಅರ್ಥಶಾಸ್ತ್ರ ಎಂಬುದು ಧರ್ಮಶಾಸ್ತ್ರದ ವ್ಯಾಪ್ತಿಯಲ್ಲಿ ಅಡಕವಾಗುತ್ತದೆ. ರಾಜನ ಧರ್ಮಗಳಲ್ಲಿ ನ್ಯಾಯದಾನವೂ ಒಂದು ಮುಖ್ಯ ಧರ್ಮ; ಅವನೇ ಅತ್ಯುಚ್ಚ ಧರ್ಮಾಧಿಕರಣ. ಸಭ್ಯರೆಂಬ ಜೊತೆಯ ನ್ಯಾಯಾಧೀಶರೊಡನೆ ರಾಜನು ನ್ಯಾಯದಾನ ಮಾಡುತ್ತಿದ್ದನು. ರಾಜ್ಯದ ದೂರ ಪ್ರದೇಶಗಳಲ್ಲಿ ಕೆಳ ಕೋರ್ಟುಗಳೂ ಇರುತ್ತಿದ್ದವು. ಪ್ರಜೆಗಳು ತಮ್ಮ ತಮ್ಮ ವರ್ಣಾಶ್ರಮ ಧರ್ಮಗಳನ್ನು ತಪ್ಪದೇ ಪಾಲಿಸುವಂತೆ ನೋಡಿಕೊಂಬುದು ರಾಜನ ಆದ್ಯ ಕರ್ತವ್ಯವಾಗಿತ್ತು. 'ನಾದಂಡ್ಯೋ ನಾಮ ರಾಜ್ಞೋಽಸ್ತಿ ಯಃ ಸ್ವಧರ್ಮೇ ನ ತಿಷ್ಠತಿ-ಸ್ವಧರ್ಮ ಪಾಲಿಸದ ಯಾವನೂ ರಾಜದಂಡದಿಂದ ಮುಕ್ತನಲ್ಲ' ಎಂಬುದು ರಾಜಶಾಸನದ ಮೂಲಸೂತ್ರ.

ಪಾಪ, ಪಾತಕ ಅಥವಾ ಅಪರಾಧಗಳಲ್ಲಿ ಗಣ್ಯವಾದವು ಐದು: ಬ್ರಹ್ಮಹತ್ಯೆ, ಸುರಾಪಾನ, ಸ್ವರ್ಣಸ್ತೇಯ, ಗುರುತಲ್ಪಗಮನ ಮತ್ತು ತತ್ಸಂಯೋಗ. ಬೆಂಕಿ ಹಚ್ಚುವವನು, ವಿಷಹಾಕುವವನು, ಶಸ್ತ್ರ ಹಿಡಿದು ಹಿಂಸಿಸಬರುವವನು, ವಿತ್ತಾಪಹಾರ ಮಾಡುವವನು, ಆಸ್ತಿ ಹಾಗು ಹೆಂಡತಿಯರನ್ನು ಕಸಿದುಕೊಂಬವನು ಆತತಾಯಿಗಳೆಂದು ಕುಪ್ರಸಿದ್ಧರಾಗಿದ್ದರು. *ಸ್ತೇಯ ಅಥವಾ ಕಳವು ಅಪರಾಧಗಳಿಗೊಂದು ಮಹಾ ಮಾದರಿ. ಕಳ್ಳನನ್ನು ಅಥವಾ ಇತರ ಅಪರಾಧಿಯನ್ನು ಹಿಡಿಯುವುದರಲ್ಲಿ ರಾಜನೇ ಸ್ವತಃ ಭಾಗವಹಿಸಬಹುದಾಗಿತ್ತು. ಏಕೆಂದರೆ ಅವನೇ ಪ್ರಜೆಗಳ ವಿತ್ತಜೀವಿತಗಳ ರಕ್ಷಕ. ಕಳ್ಳನೊಯ್ದ ಮಾಲನ್ನು ಪತ್ತೆ ಮಾಡಿ ಹಿಂದೆ ಕೊಡಿಸಲಾಗದಲ್ಲಿ ಕಳಕೊಂಡ ಫಿರ್ಯಾದಿಗೆ ರಾಜನೇ ಸ್ವತಃ ತನ್ನ ಬೊಕ್ಕಸದಿಂದ ಸಮಪರಿಹಾರ ದ್ರವ್ಯವನ್ನು ಕೊಡಬೇಕಾಗಿತ್ತು. ಕಳ್ಳ
ಕಂಡುಹಿಡಿಯಲು ಚೌರ್ಯನಾಶಕರಾದ
ಅಧಿಕಾರಿಗಳನ್ನು ನಿಯಮಿಸಲಾಗುತ್ತಿತ್ತು.
ಹಾಸ್ಪದ ವರ್ತನೆಯುಳ್ಳವರ ಹಿಂದೆ ಗೂಢ
ರನ್ನಿಡಲಾಗುತ್ತಿತ್ತು.

ತಾನು ಅಪರಾಧಿಯಲ್ಲವೆಂಬುದನ್ನು ಆ
ಪಿಯೇ ಸಿದ ಮಾಡಿ ತೋರಿಸಬೇಕಾಗಿತ್ತು.
ಕೊಂಡುಹೋದ ಪ್ರಾಣಿಗಳ ಹೆಜ್ಜೆ ಸಾಲು ಒ
ಗದ್ದೆಯೊಳಮುಖವಾಗಿ ಹೊಕ್ಕಿದ್ದರೆ ಅ
ಹೊರಮುಖವಾಗಿ ಹೊರಟ ಹೆಜ್ಜೆಗಳನ್ನು ತೋ
ಕೊಡುವುದು ತನ್ನ ನಿರಪರಾಧಿತ್ವವನ್ನು
ಮಾಡಲು ಅವನಿಗೆ ಅಗತ್ಯ. ಒಂದು ದ
ತನಿಖೆಯಲ್ಲಿ ಮನುಷ್ಯರ ಸಾಕ್ಷಿ, ಸಾನ್ನಿವೆ
ಸಾಕ್ಷಿ (Circumstancial Eviden
ಮತ್ತು ದಿವ್ಯಸಾಕ್ಷಿ (Ordeals) ಎಂಬ ಮ
ವಿಧದ ಪ್ರಮಾಣಗಳನ್ನು ತೆಗೆದುಕೊಂಬುದು
ಕೆಯಲ್ಲಿತ್ತು. ಸ್ತೇಯದಂತೆಯೇ ಸಾಹಸ (H
nous Crime) ಮತ್ತು ಪಾರುಷ್ಯ (Defar
tion and Assault) ಎಂಬಿವೂ ಅಪ
ವರ್ಗಗಳು.

ಮನುಷ್ಯರ ಸಾಕ್ಷಿಯಲ್ಲಿ ಶ್ರೋತ್ರಿಯರು
ಗಣ್ಯರು. ಆ ವರ್ಗ ವೇದಪಾರಗರದು; ಅ
ವಿಶಿಷ್ಟ ಹಕ್ಕುಳ್ಳವರು. ಆದರೆ ಅವರನ್ನು ಬ
ಮೇಲಿನವರೆಂದು ಸಾಮಾನ್ಯವಾಗಿ ಸಾಕ್ಷಿಗೆ
ಯುತ್ತಿದ್ದಿಲ್ಲ. ಅಪರಾಧಿಗಳೆಂದು ಸಿದ್ಧವಾ
ರಂತೂ ಸಾಕ್ಷಿಗೆ ಅನರ್ಹರು—ಅವರು ದೋ
ಯುಕ್ತರಾದ್ದರಿಂದ. ಪರಸ್ಪರ ವ್ಯಾಹತಿಯಾದ
ವರೂ ಸ್ತ್ರೀಯರೂ ಬಾಲರೂ ಉನ್ಮತ್ತರೂ
ವೃದ್ಧರಾಗಿ ಶಿಥಿಲೇಂದ್ರಿಯರಾದವರೂ ತಕ್ಕವ
ಸ್ತ್ರೀಪುರುಷ ಸಂಬಂಧದ ಇಲ್ಲವೆ ಕೇವಲ ಸ್ತ್ರೀ
ಪ್ರಕರಣಗಳಲ್ಲಿ ಸ್ತ್ರೀಸಾಕ್ಷಿಗಳಿಗೆ ಸ್ಥಾನವಿ
ಗೂಢಚಾರರು ಸಾಕ್ಷಿ ಸ್ಥಾನದಲ್ಲಿ ನಿಲ್ಲುವಂತಿದ್ದ
ಅವರು ಸೂಚಿಗಳು ಅಥವಾ ಸ್ವಯಮುಕ್ತಿಗ
ಸತ್ತವರಿಂದ ಅರ್ಥಮರ್ಥ ವಿಷಯಸಂಗ್ರ
ಮಾಡಿದ ಜನರೂ ಸಾಕ್ಷಿಗಳಾಗಲಾರರು; ಅ
ನ್ಯತಾಂತರರು.

ನಾರದನಪ್ರಕಾರ ಸಾಕ್ಷಿಗಳಲ್ಲಿಕೃತ (Appoi
ted) ಮತ್ತು ಅಕೃತ (Not appointe
ಎಂದು ಎರಡು ವಿಧ. ಕೃತರಲ್ಲಿ ಲಿಖಿತ (Sub
cribing witness), ಸ್ಮಾರಿತ (One who h
been reminded), ಯದೃಚ್ಛಾಭಿಜ್ಞ ಅಥ
ಯಾದೃಚ್ಛಿಕ (A casual witness), ಗು

* Theft is the typical crime, th
treatment of which serves as th
model for the rest. Megasthenes
undoubtedly gives too favourable
picture when he says that the
was rare, the number of injunction
ralating to it, and the extreme sev
rity of the punishment, are sufficien
evidence against him.-Louis Reno

…ಕ್ಷಿ, ಉತ್ತರ ಸಾಕ್ಷಿ (An indirect witness) …ಂದು ಐದು ವಿಧ. ಅಕೃತರಲ್ಲಿ ಸಹಗ್ರಾಮೀಣರು …ುಖ್ಯ ನ್ಯಾಯಾಧೀಶ ಅಥವಾ ರಾಜ, ಕಾರ್ಯ …ಧ್ಯಗತ (One who knows the transaction well), ದೂತಕ (One who is deputed by a party in a transaction) …ುತ್ತು ಕುಲ್ಯ (A member of the family) …ಂದು ಐದು ವಿಧ.

…ಎಲ್ಲ ಸಾಕ್ಷಿಗಾರರೂ ಸಮಾನ ಸ್ಥಾನದವರಿದ್ದಾಗ, …ಬ್ಬನೇ ಒಬ್ಬನ ಬಹುಮತ ಒಂದು ಪಕ್ಷಕ್ಕೆ …ನುಕೂಲವಿದ್ದಾಗ ಎಲ್ಲ ಸಾಕ್ಷಿಗಾರರೂ ಅನರ್ಹ …ಾಗಿ ನ್ಯಾಯಾಧೀಶರು ಬಾಯಿಸಾಕ್ಷಿಯನ್ನು ಗಣ …ನೆಗೆ ತೆಗೆದುಕೊಳ್ಳಲಾಗುತ್ತಿದ್ದಿಲ್ಲ. ಒಂದುವೇಳೆ …ನಿವಾರ್ಯವಾದರೆ ಅವರಲ್ಲೇ ಅತ್ಯುತ್ತಮರ ಸಾಕ್ಷಿ …ಯನ್ನು ತೆಗೆದುಕೊಳ್ಳಬಹುದಾಗಿತ್ತು-ವಿಶಿಷ್ಟ ಪ್ರಕ …ಣಗಳಲ್ಲಿ.

…ಮನು, ಯಾಜ್ಞವಲ್ಕ್ಯ ಮತ್ತು ನಾರದರ …ಹೇಳಿಕೆಯಂತೆ ಸಾಕ್ಷಿಗಳಲ್ಲಿಯ ಬಹುಸಂಖ್ಯರ …ಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು. …ದರೆ ಸಾಕ್ಷಿಗಳಲ್ಲಿ ಸರಿಯಾಗಿ ಅರ್ಧಜನರತ್ತ …ರ್ಧ ಇತ್ತ ಆದರೆ ಅವರಲ್ಲಿಯೇ ಹೆಚ್ಚು ಚರಿತ್ರ …ತರೂ ಅಲಿಪ್ತರೂ ಆದವರ ಮತವನ್ನು ಸ್ವೀಕರಿ …ಬಹುದು. ಆ ಅತ್ಯುದಾತ್ತರಲ್ಲೂ ಅರ್ಧ ಇತ್ತ ಅರ …ತ್ತ ಎಂಬಂತಾದರೆ ಅವರಲ್ಲಿಯೂ ಮತ್ತೆ ಆಯ್ಕೆ …ಾಡಿ ಅತ್ಯುನ್ನತ ಗುಣಗಳ ಸಾಕ್ಷಿಯನ್ನು ಗ್ರಾಹ್ಯ …ಾಗಿ ತೆಗೆದುಕೊಳ್ಳಬಹುದು. ಸಾಕ್ಷಿಗಾರರ ಹೇಳಿಕೆ …ಯಲ್ಲಿ ಸ್ಥಳ, ಕಾಲ, ಅಸ್ತಿ, ರಕನು, ಬಣ್ಣ, …ಾತಿ, ಆಕೃತಿ, ವಯಸ್ಸು ಮುಂತಾದ ವಿವರಗಳು …ಫಿರ್ಯಾದಿಯ ವಿವರಗಳೊಡನೆ) ಅಸಂಬದ್ಧ, ಪರಸ್ಪರ ವಿರುದ್ಧ ಎನಿಸಿದಲ್ಲಿ ಆ ಹೇಳಿಕೆಗೆ ಏನೂ ಬೆಲೆ ಇಲ್ಲವೆಂದು ನಾರದನ ಮತ. ನ್ಯಾಯಾಧೀಶ ತೀರ್ಪು ಕೊಟ್ಟಬಳಿಕ ಫಿರ್ಯಾದಿಯೊಬ್ಬನು (ಮುಂಚೆ ದುರ್ಬಲ ಸಾಕ್ಷಿ ಒದಗಿಸಿದ್ದು) ಹೆಚ್ಚಿನ ಸಬಲ ಸಾಕ್ಷಿಗಳನ್ನು ತಂದರೆ ಅವನ್ನು ಗಣಿಸಲಾಗುತ್ತಿದ್ದಿಲ್ಲ. ಆರೋಪಿಯು ಕೊಟ್ಟ ಉತ್ತರವು ಕೋರ್ಟಿನಲ್ಲಿ ದಾಖಲಾದ ಮೇಲೆ ಫಿರ್ಯಾದಿಯು ತನ್ನ ಸಾಕ್ಷಿಗಳ ಮತ್ತು ಕಾಗದಪತ್ರಗಳ ಪಟ್ಟಿಯನ್ನು ಹಾಜರುಮಾಡತಕ್ಕದ್ದೆನ್ನುತ್ತಾನೆ ಯಾಜ್ಞವಲ್ಕ್ಯ. ಅವನು ಹಾಗೆ ಮಾಡದೆ ವಿಲಂಬಿಸಿ, ತನಿಖೆಯ ವೇಳೆಯಲ್ಲಿ ಸಕಾಲಕ್ಕೆ ಬೇಕಾದ ಎಲ್ಲ ಸಾಕ್ಷಿಗಾರರನ್ನೂ ದಫ್ತರಗಳನ್ನೂ ದಾಖಲೆಗಳನ್ನೂ ಹಾಜರು ಮಾಡದೆ ನಿರ್ಣಯವನ್ನು ಇನ್ನೇನು ನ್ಯಾಯಾಧೀಶ ಕೊಡುತ್ತಾನೆ ಎಂಬಲ್ಲಿಯವರೆಗೆ ಸುಮ್ಮನೆ ಕುಳಿತಿದ್ದರೆ, ಆ ಕೊನೆಯ ಹಂತದಲ್ಲಿ ಹೊಸ ಸಾಕ್ಷಿ ಪುರಾವೆಗಳನ್ನು ತರಲು ಅವನಿಗೆ ಅಧಿಕಾರವನ್ನು ಕೊಡಲಾಗುತ್ತಿದ್ದಿಲ್ಲ.

ಈ ಸಂದರ್ಭದಲ್ಲಿ ಹಿಂದೆ ಹೇಳಿದ ಸ್ತೇಯ, ಸಾಹಸ, ಪಾರುಷ್ಯ, ಪರದಾರಗಮನ, ವಧ, ಬಂಧಾದಿಗಳ ಪಟ್ಟಿಗೆ ಸುಳ್ಳುಸಾಕ್ಷಿ ಹೇಳುವುದನ್ನು (Perjury) ಸೇರಿಸಬಹುದು. ಒಂದು ಸಂಗತಿಯ ಬಗ್ಗೆ ಮಿಕ್ಕವರೊಡನೆ ತಾನೂ ಸಾಕ್ಷಿ ಹೇಳುವೆನೆಂದು ವಚನವಿತ್ತು ಅನಂತರ ವಿಚಾರಣೆಯಲ್ಲಿ ತನಗೇನೂ ತಿಳಿಯದೆಂದು ವಾಗ್ಮೂಲವಿತ್ತರೆ ಸೋತಪಕ್ಷವು ಕೊಡಬೇಕಾದುದರ ಎಂಟು ಪಟ್ಟು ದಂಡವನ್ನು ಅವನಿಂದ ವಸೂಲುಮಾಡಬೇಕೆಂದು ಯಾಜ್ಞವಲ್ಕ್ಯನ ಸಿದ್ಧಾಂತ. ಒಂದು ಸಂಗತಿಯನ್ನು ಸ್ವತಃ ನೋಡಿದ ಸಾಕ್ಷಿಗಾರನೊಬ್ಬನು ವಿಚಾರಣೆಯ ಕಾಲದಲ್ಲಿ ಮೌನಧಾರಣೆ ಮಾಡಿದರೆ (ಅವನಿಗೆ ಕಾಹಿಲೆ ಅಥವಾ ಇನ್ನಾವ ಮಹಾ ಸಂಕಟ ಒದಿಯದಿದ್ದಾಗ) ಮೂರುಪಕ್ಷಗಳವರೆಗೆ ಕಾದು ಬಳಿಕ ನಷ್ಟ ತುಂಬಿಸಿಕೊಟ್ಟು ಅದರ ಹತ್ತನೆಯ ಒಂದಂಶವನ್ನು ರಾಜನಿಗೆ ದಂಡವಾಗಿ ತೆರಬೇಕೆಂದು ಮನು, ಯಾಜ್ಞವಲ್ಕ್ಯ, ಕಾತ್ಯಾಯನರ ನಿರ್ಣಯ. ಸುಳ್ಳುಸಾಕ್ಷಿ ಹೇಳಿದವನನ್ನು ನಿಂದಿಸಿ ದಂಡ ಹಾಕಬೇಕೆಂದಿದ್ದಾನೆ ಗೌತಮ. ಸೋತಪಕ್ಷ ಕೊಡಬೇಕಾದ ದಂಡದ ದ್ವಿಗುಣ ಪ್ರಮಾಣವನ್ನು ಸುಳ್ಳುಸಾಕ್ಷಿದಾರನಿಂದಲೂ ಅವನನ್ನು ಹಾಜರು ಮಾಡಿದವರಿಂದಲೂ ವಸೂಲು ಮಾಡಬೇಕೆಂದು ಯಾಜ್ಞವಲ್ಕ್ಯ ಸಾರಿದ್ದಾನೆ. ಅಂಥ ಕೆಲಸವನ್ನು ಬ್ರಾಹ್ಮಣ ಮಾಡಿದರೆ ಅವನನ್ನು ದೇಶದಿಂದ ಹೊರಹಾಕಬೇಕೆನ್ನಲಾಗಿದೆ. ನಾಲ್ಕು ವರ್ಣಗಳಲ್ಲಿ ಯಾವುದಾದರೊಂದು ವರ್ಣದವನಿಗೆ ತಾನು ಸತ್ಯ ಹೇಳಿದರೆ ಮರಣದಂಡನೆ ವಿಧಿಸಲಾಗುತ್ತದೆ ಎಂಬಂತಹ ಅತ್ಯಯ ಪ್ರಸಂಗದಲ್ಲಿ ಒಂದುವೇಳೆ ಒಬ್ಬನು ಸುಳ್ಳುಸಾಕ್ಷಿ ಕೊಟ್ಟರೆ ಅಪರಾಧವಲ್ಲ ಎಂಬುದು ಗೌತಮ, ಮನು, ಯಾಜ್ಞವಲ್ಕ್ಯರ ಮತ.

* *

ಸಾಕ್ಷಿಗಳನ್ನು ತೆಗೆದುಕೊಂಡ ಬಳಿಕ ಕೋರ್ಟು ಯುಕ್ತಿ ಅಥವಾ ಸಾನ್ನಿವೇಶಿಕ ಪ್ರಮಾಣಗಳನ್ನು ಗ್ರಹಿಸುತ್ತಿತ್ತು. ಸಾಮಾನಿನೊಡನೆ ಸಿಕ್ಕಿಬಿದ್ದ ಕಳ್ಳನ ಸಾಮಗ್ರಿಗಳೂ ಇತರ ಅರ್ಥಸಾಧಕ ವಸ್ತುಗಳೂ ಚಿಹ್ನಗಳೂ ಸಾಂದರ್ಭಿಕ ಸಂಗತಿಗಳೂ ಗಣನೆಗೆ ಬರುತ್ತಿದ್ದವು. ಇವುಗಳ ಆಧಾರದ ಮೇಲೆ ರಾಜನೂ ಸಭ್ಯರೂ ಮುಖ್ಯನ್ಯಾಯಾಧೀಶರೂ ಆರೋಪದ ಸತ್ಯಾಸತ್ಯತೆಯನ್ನು ಅನುಮಾನದಿಂದ (Inference) ನಿರ್ಣಯಿಸುತ್ತಿದ್ದರು. ಈ ಎರಡು

ಅಂಗಗಳಿಂದ ನ್ಯಾಯವನ್ನು ನಿರ್ಣಯಿಸುವುದು ಅಸಾಧ್ಯವಾದಾಗ ಮೂರನೆಯದಾದ ದಿವ್ಯ ಸಾಕ್ಷಿಯ ನೆರವನ್ನು ತೆಗೆದುಕೊಳ್ಳಲಾಗುತ್ತಿತ್ತು. ಆರೋಪಿ ಆಗ ಶಪಥ ಮಾಡಬೇಕಾಗಿತ್ತು. ಶಪಥದಲ್ಲಿ ಆಣೆ ಮಾಡುವುದೂ ಅಗ್ನ್ಯಾದಿ ದಿವ್ಯಗಳನ್ನು ಅನುಭವಿಸುವುದೂ ಅಡಕವಾಗುತ್ತವೆ. ಈ ದಿವ್ಯಾನುಭವದ ಆದೇಶವನ್ನು ಕಾಲ, ದೇಶ ಮತ್ತು ಆರೋಪಿಗಳ ಲಿಂಗ, ವಯಸ್ಸು, ಜಾತಿ, ಶಕ್ತಿ ಮುಂತಾದವುಗಳನ್ನು ಲೆಕ್ಕಿಸಿ ಕೊಡಲಾಗುತ್ತಿತ್ತು.

ದಿವ್ಯ ಸಾಕ್ಷಿಯ ಕೆಲ ಮಾದರಿಗಳನ್ನು ಇಲ್ಲಿ ಕೊಡಬಹುದು. ತಕ್ಕಡಿಯಲ್ಲಿ ಎರಡನೆಯ ಸಲ ತೂಗಿಸಿಕೊಂಡಾಗ ಕಡಿಮೆಭಾರ ಬಂದರೆ ಆರೋಪಿ ನಿರಪರಾಧಿ. ವಿಷಕುಡಿದಾಗ ಏನೂ ಆಗದೆ ಬದುಕಿ ಉಳಿದವ ಅಪರಾಧದ ಆರೋಪದಿಂದ ಮುಕ್ತ. ಅಗ್ನಿಪ್ರವೇಶಮಾಡಿ ಸುಡಲ್ಪಡದೆ ಹೊರಬರಬೇಕು ಕೆಂಪಗೆ ಕಾದ ಕಬ್ಬಿಣದ ಸರಳನ್ನು ಹಿಡಿದು ಕೈ ಸುಟ್ಟುಕೊಳ್ಳದೆ ಉಳಿಯಬೇಕು. ಯಜ್ಞಯಾಗಾದಿ ಧರ್ಮಕಾರ್ಯದಿಂದ ಗಳಿಸಿದ ಪುಣ್ಯವನ್ನು ಧಾರೆಯೆರೆಯಬೇಕು. ನ್ಯಾಯಾಧೀಶನು ಮುಂಚಿನ ದಿನ ಸೂರ್ಯನ ಬಿಸಿಲಿನಲ್ಲಿ ಅಕ್ಕಿ ನೆನೆಯಿಸಿ ಪೂಜೆಮಾಡಿ ರಾತ್ರಿ ಸೂರ್ಯ ವಿಗ್ರಹದ ತೀರ್ಥ ಹಾಕಿಟ್ಟು ಮರುದಿನ ಶೋಧ್ಯ(ಆರೋಪಿ)ನೆದುರಿಗಿಟ್ಟಾಗ ಮೂರು ಸಲ ಅಕ್ಕಿಯನ್ನು ತಿಂದು ಉಗುಳಿದರೂ ಆರೋಪಿಯ ಲಾಲಾರಸದಲ್ಲಿ ರಕ್ತ ಕಂಡುಬರದಿದ್ದರೆ ಅವನು ಮುಕ್ತ. ಎಣ್ಣೆ ತುಪ್ಪಗಳು ಒಂದು ಪಾತ್ರೆಯಲ್ಲಿ ಕುದಿಯುವಾಗ ಅದರಲ್ಲಿ ಹಾಕಿದ ಒಂದು ಚಿಕ್ಕ ಚಿನ್ನದ ತುಂಡನ್ನು ಬರಿಗೈಯಿಂದ (ಬೆರಳು ಚಿಟಕೆಯಿಂದ) ಎತ್ತಿ ತೆಗೆದು ಚರ್ಮ ಸುಡಲ್ಪಡದೆ, ಸುಲಿಯಲ್ಪಡದೆ ಉಳಿದರೆ ನಿರಪರಾಧಿತ್ವ ಸಿದ್ಧ. ಕೆಂಪಗೆ ಕಾದ ನೇಗಿಲ ಮೊನೆಯನ್ನು ನೆಕ್ಕಿ ನಾಲಿಗೆ ಸುಟ್ಟುಕೊಳ್ಳದೆ ಉಳಿದವ ಶುದ್ಧಾತ್ಮ. ಧರ್ಮಾಧರ್ಮಗಳ ಮೂರ್ತಿಗಳನ್ನು ಮಾಡಿ ಅವುಗಳನ್ನು ಮಣ್ಣು ಅಥವಾ ಸೆಗಣಿಯಿಂದ ಮೆತ್ತಿ ಉಂಡೆಗಳನ್ನಾಗಿ ಮಾಡಿ ಎರಡನ್ನೂ ಪಾತ್ರೆಯೊಂದರೊಳಗಿಟ್ಟು ಆರೋಪಿಯೆದುರು ಹಿಡಿದಾಗ ಅವನು ಲಾಟರಿ ಎತ್ತುವಂತೆ ಎರಡರಲ್ಲೊಂದನ್ನು ಎತ್ತಿದಾಗ ಧರ್ಮಮೂರ್ತಿಯೇ ಕೈಗೆ ಸಿಕ್ಕಿದರೆ ಅವನು ಅಪರಾಧಕಳಂಕದಿಂದ ದೂರನಾದ!

ಮೇಲಿನ ದಿವ್ಯಗಳು ಹಳೆಯ ಇಂತಹವೇ ಆದ ಅಪಾಯಕರ ಹರಕೆಗಳನ್ನು ನೆನಪಿಗೆ ತರುತ್ತವೆ. ದೇವರಲ್ಲಿ ಇಂದಿನವರಿಗೆ ಅಸಾಧ್ಯವಾದ ನಂಬಿಗೆಯನ್ನು ಇಟ್ಟುಕೊಂಡಿದ್ದ ಸ್ಥಳ, ಕಾಲ, ವ್ಯಕ್ತಿಗಳಲ್ಲಿ ಅಪೂರ್ವವಾಗಿ ದಿವ್ಯಗಳ ಆಚರಣೆ ಬಳಕೆಯಲ್ಲಿದ್ದಿರಬಹುದು — ಅವುಗಳಲ್ಲಿಯೂ ಅತ್ಯಪಾಯಕರ ದಿವ್ಯಗಳ ಆಚರಣೆ ಅತ್ಯಪೂರ್ವವಾಗಿತ್ತೆಂದೇ ಹೇಳಬೇಕು.

* *

ಪ್ರಕರಣದಲ್ಲಿ ಗೆದ್ದ ಪಕ್ಷಕ್ಕೆ ಕೊಡುವ ನಿರ್ಣಯ ಪತ್ರಕ್ಕೆ ಜಯಪತ್ರವೆನ್ನುತ್ತಿದ್ದರು. ವ್ಯಾಸ ಹಾಗೂ ಶುಕ್ರರ ಪ್ರಕಾರ ನಿರ್ಣಯಕ್ಕೆ ಮೂರು ಪ್ರಮಾಣಗಳು (Possession, Documents, and Witnesses), ತರ್ಕಬದ್ಧ, ಅನುಮಾನ, ದೇಶಾಚಾರ, ಶಪಥ, ರಾಜಶಾಸನ ಮತ್ತು ವಾದಿ ಪ್ರತಿವಾದಿಗಳ ಕಬೂಲಿ ಜವಾಬು ಇವುಗಳು ಆಧಾರಗಳು. ಜಯಪತ್ರದಲ್ಲಿ ದೂರಿನ ಸಂಕ್ಷಿಪ್ತ ಸಾರ, ಅದಕ್ಕೆ ಪ್ರತಿವಾದಿ (ಆರೋಪಿ, ಶೋಧ್ಯ) ಕೊಟ್ಟ ಉತ್ತರ, ಸಾಕ್ಷಿಗಾರರ ಹೇಳಿಕೆ, ಪ್ರಮಾಣ, ಇವುಗಳ ಚರ್ಚೆ, ವಾದ, ಸಂಬಂಧಪಟ್ಟ ಸ್ಮೃತಿವಾಕ್ಯಗಳು, ಸಭ್ಯರ ಅಭಿಪ್ರಾಯ, ತೀರ್ಮಾನ ಮತ್ತು ಗೆದ್ದವನಿಗೆ ದೊರೆತ ಪರಿಹಾರ ಎಂಬಿವುಗಳನ್ನು ಕಾಣಿಸಿ ಮುಖ್ಯ ನ್ಯಾಯಾಧೀಶ ಸ[illegible] ರಾಜಮುದ್ರೆಯೊತ್ತಿ ಗೆದ್ದವನಿಗೆ ಅದನ್ನು [illegible]ಬೇಕೆಂದು ನಾರದ, ಬೃಹಸ್ಪತಿ, ವೃದ್ಧ[illegible] ಮತ್ತು ವ್ಯಾಸರ ಮತ. ಮಿತಾಕ್ಷರ ಪದ್ಧತಿ[illegible] ಗೆದ್ದವರಿಗೆ ಕೊಡುವ ಜಯಪತ್ರವೆಂಬ[illegible] ದಾನೆಯ ವಿಷಯದ ಸಂಗ್ರಹ, ಅದರ [illegible]ತ್ತರ, ಪ್ರಮಾಣ, ಮತ್ತು ನಿರ್ಣಯಗಳಿರ[illegible] ವಾದದ ಬದಲಾವಣೆ, ಗೈರುಹಾಜರು, ಪ್ರ[illegible]ವನ್ನು ಮುಂದರಿಸದಿರುವುದು ಮುಂತಾದ [illegible]ಗಳಿಂದ ಸೋತ ವಾದಿಗೆ ಕೊಡುವ ನಿ[illegible] ಪತ್ರಕ್ಕೆ ಹೀನಪತ್ರವೆನ್ನಲಾಗುವುದು.

* *

ಒಂದು ದೊಡ್ಡ ಕಳ್ಳತನ ನಡೆದಾಗ ಕಳ್ಳ[illegible] ದಿದ್ದರೆ ಅವನ ಹಳ್ಳಿಯ ಸಮಸ್ತರೂ ಅ[illegible] ಜವಾಬುದಾರರೆಂದು ಗಣಿಸಲಾಗುತ್ತಿತ್ತು. [illegible] ಮೇರೆಗೆ ಕಳ್ಳನನ್ನು ಹಿಡಿಯದೆ ಹೋದ ಕಾ[illegible]ಗಾರರು, ಪೋಲೀಸರು, ನೆರೆಹೊರೆಯವರ[illegible] ಈ ಎಲ್ಲರೂ ದಂಡಕ್ಕೆ ಬಾಧ್ಯರಾಗುತ್ತಿದ್ದ[illegible] ನಿಜವಾದ ಕಳ್ಳ ಸಿಕ್ಕಿದ ಮೇಲೂ ಮೊ[illegible] ಆರೋಪಿತನಾದ ಇನ್ನೊಬ್ಬ ತನ್ನ ನಿರಪರಾ[illegible]ವನ್ನು ಸಿದ್ಧಮಾಡಿ ತೋರಿಸದಿದ್ದಲ್ಲಿ ಅವನು [illegible]ಯನ್ನು ಅನುಭವಿಸಲೇಬೇಕಾಗಿತ್ತು! ಭಾರಿ [illegible]ನನ್ನು ಚಿತ್ರಹಿಂಸೆಯಿಂದ ವಧಿಸುತ್ತಿದ್ದರು. ವಿಧಿಸುವಾಗ ಕದ್ದ ಮಾಲು, ಕದ್ದವನ ಸ್ಥಾನಮ[illegible]

ಂತಾದವನ್ನು ಗಣಿಸಲಾಗುತ್ತಿತ್ತು. ಕಳ್ಳನ ಬಿಗರೂ ದಂಡ್ಯರು. ಕದ್ದು ಮಾರಿದ್ದನ್ನು ತ್ತಿಲ್ಲದೆ ಕೊಳ್ಳುವದೂ ಅಪರಾಧವೆನಿಸಿದ ಲವಿತ್ತು. ಮೌರ್ಯರ ಕಾಲದಲ್ಲಿ ಅದು ತಿದ್ದು ಹೊಂದಿತು. ಹಾದಿಹೋಕ ಬ್ರಾಹ್ಮಣ ಸ್ತ್ರಾಗಿ, ತಿನ್ನಲು ಏನೂ ಇಲ್ಲದಾಗ ಹತ್ತಿರದ ಬ್ಬಿನ ಗದ್ದೆಯಿಂದ ಎರಡು ಕಬ್ಬುಗಳನ್ನಾಗಲಿ ಸನ್ನಾಗಲಿ ಕದ್ದು ತಿಂದರೆ ಅದು ಅಪರಾಧ ಲ್ಲವೆಂದಿದ್ದಾನೆ ನಾರದ !

ದ್ಯೂತದಲ್ಲಿ ಮೋಸ, ತೂಕ ಅಳತೆಗಳಲ್ಲಿ ಚನೆ, ಖೊಟ್ಟನಾಣ್ಯ ನಿರ್ಮಾಣ, ಖಾಸಗಿ ಅಥವಾ ರ್ವಜನಿಕ ದಾಖಲೆಗಳ ಅಫರಾತಫರಾ, ಸಂಬಳದ ವಾ ಕೂಲಿಯ ಕೆಲಸದಲ್ಲಿ ಕಳ್ಳಬೀಳುವುದು ಂತಾದ ಅನಾರ್ಯವರ್ತನೆಗಳು ದಂಡಾರ್ಹ ದು ಕೌಟಲ್ಯ ಹೇಳಿದ್ದಾನೆ. ಸಾಹಸವೆಂಬ ರ್ಗಕ್ಕೆ ಸೇರುವ ಅಪರಾಧಗಳಲ್ಲಿ—ವಧ, ಗಸನ್ನು ಹೊತ್ತುಕೊಂಡು ಹೋಗುವುದು ವಾ ಬಲಾತ್ಕಾರದಿಂದ ಸ್ತ್ರೀ ಮರ್ಯಾದೆಗೆ ಗ ತರುವುದು, ದುರಾಕ್ರಮಣ, ನಿಂದೆ, ಆಸ್ತಿಗೆ ಹಾನಿಯನ್ನುಂಟುಮಾಡುವುದು ಬಿವು ಬರುತ್ತವೆ. ರಾಜದ್ರೋಹವಂತೂ ಹಾ ಸಾಹಸ. ಕೊಂದವನಿಗೆ ಮರಣ ಡನೆ ಇತ್ತೆಂಬುದು ನಿಜವಾದರೂ ಎಲ್ಲ ದರ್ಭಗಳಲ್ಲಿ ಹಾಗೆ ತಲೆದಂಡ ತೆರಬೇಕಾಗಿ ದು ಹೇಳಲು ಬರುವುದಿಲ್ಲ. ಕಾಲ ಹೋದ ಗೆ ಆ ಸಾಹಸಾಪರಾಧಿಗಳ ಆಸ್ತಿಯನ್ನು ವಶ ಸಿಕೊಂಬುದೇ ಹೆಚ್ಚು ರೂಢಿಗೆ ಬಂದ ಡನೆ. ಹೆಂಡತಿ ಮಕ್ಕಳ ಕೊಲೆಗೆ ಮರಣ ಡನೆಯೇ ಶಿಕ್ಷೆ. ಭ್ರೂಣದಲ್ಲಿ ಲಿಂಗಚಿನ್ಹ ಾಡಿದನಂತರ ಬೇಕೆಂದು ಮಾಡಿಕೊಂಡ ರ್ಭೇತ್ಪಾತಕ್ಕೂ ಅದೇ ದಂಡ. ಹಾದರದ ರಣಗಳಲ್ಲಿ (ಅದು ವರ್ಣಸಂಕರಕಾರಕ ವಾದ್ದರಿಂದ) ಹೆಂಗಸು ರಕ್ಷಿತಳಿದ್ದಳೋ ಅರಕ್ಷಿತಳಿದ್ದಳೋ, ಬಲಾತ್ಕಾರ ನಡೆಯಿತೋ ಇಲ್ಲವೋ ಮುಂತಾದ ಪ್ರತಿಯೊಂದು ವಿವರವನ್ನು ದೃಷ್ಟಿಯಲ್ಲಿಟ್ಟುಕೊಂಡು ದಂಡಿಸುತ್ತಿದ್ದರು. ಕೌಟಲ್ಯನ ಪ್ರಕಾರ ಅಂಥ ಪ್ರಕರಣದಲ್ಲಿ ಹೆಂಗಸಿಗೇ ಉಗ್ರತರ ಶಿಕ್ಷೆ. ಹತ್ತಿರದ ಸಂಬಂಧಿಕರೊಡನೆ ಅವೈಧಿಕ ಕಾಮಕಾರ್ಯ ನಡೆಸುವುದೂ ದಂಡಾರ್ಹ. ಧರ್ಮಶಾಸ್ತ್ರಕಾರರು ಇಂಥ ೨೦ ಸಂಬಂಧಗಳನ್ನು ಉಲ್ಲೇಖಿಸಿದ್ದಾರೆ. ಅವುಗಳಲ್ಲಿ ಗುರುಪತ್ನೀ ಗಮನವೂ ಸೇರಿದೆ. ಹೊಡೆದಾಟ ಬೈದಾಟಗಳಲ್ಲಿ ಹೊಡೆಸಿಕೊಂಡ ಅಥವಾ ಬೈಯಿಸಿಕೊಂಡಾತ ಅದೇ ಸ್ಥಳದಲ್ಲಿ ಆಗಿಂದಾಗ (ಅಪರಾಧಿ ನಿಂದ್ಯ ಜಾತಿಯವನಾಗಿದ್ದಲ್ಲಿ) ಅಪರಾಧಿಗೆ ಕಾಯದೆಬದ್ಧ ಶಿಕ್ಷೆಯನ್ನು ಕೊಡಿಸಬಹುದು. ಪ್ರಾಣಿಗಳನ್ನು ಹಿಂಸಿಸುವುದೂ ಅಪರಾಧವೇ. ಅದರಲ್ಲೂ ಹಸುವಿನ ಹಿಂಸೆ ಅತ್ಯಂತ ಹೇಯ; ಕರುವುಳ್ಳ ಹಸುವಿನ ಹತ್ಯೆ ಮಹಾಪರಾಧ-ಅದು ಬ್ರಹ್ಮಹತ್ಯೆಗೆ ಸರಿ. ಬೆಳೆ ಹಾಳು ಮಾಡುವುದು, ಮನೆ ಮುರಿಯುವುದೂ ಅಪರಾಧಗಳು. ಗೋಡೆ ಕೆಡಹುವವನನ್ನು, ಹೊಂಡ ಮುಚ್ಚುವವನನ್ನು ಅಥವಾ ಬಾಗಿಲೊಡೆದು ಒಳಬರುವವನನ್ನು ದೇಶತ್ಯಾಗಕ್ಕೀಡುಮಾಡಲಾಗುತ್ತಿತ್ತು.

* *

ದಂಡನೆಗಳಲ್ಲಿ ಎಚ್ಚರಿಕೆ ಕೊಡುವುದು, ಉಗ್ರವಾಗಿ ಬೈದು ಬುದ್ಧಿಹೇಳುವುದು, ಹಣದ ದಂಡ ಹೇರುವುದು ಮತ್ತು ಶಾರೀರಿಕ ಶಿಕ್ಷೆ ವಿಧಿಸುವುದು ಗಣ್ಯವಾಗಿದ್ದವು. ದಂಡದ ವಸೂಲಿ ಒಂದು 'ಕಾಕಿಣಿ' (ಬಿಲ್ಲೆ) ಯಿಂದ ಎಲ್ಲ ಆಸ್ತಿಯನ್ನೂ ಕಿತ್ತುಕೊಳ್ಳುವವರೆಗೆ ಇತ್ತು. ಸಾಧಾರಣ ದಂಡಗಳು ೨೫೦ ರಿಂದ ೧,೦೦೦ ಪಣಗಳ (ರೂಪಾಯಿ) ವರೆಗೆ ಹೋಗುತ್ತಿದ್ದವು. ಕೆಲವೊಮ್ಮೆ ಕದ್ದ ಮಾಲಿನ ೧೨ ಪಟ್ಟು ದಂಡವನ್ನು ವಸೂಲು ಮಾಡುತ್ತಿದ್ದರು. ಆಸ್ತಿಯ ಜಪ್ತಿಯಲ್ಲಿ ದಿನ ಬಳಕೆಯ ಸಾಮಾನುಗಳನ್ನೂ ಕೆಲಸದ ಸಾಧನಗಳನ್ನೂ ಬಿಡಲಾಗುತ್ತಿತ್ತು.

ಶಾರೀರಿಕ ಶಿಕ್ಷೆಯೆಂದರೆ ಶರೀರದ ವಿವಿಧ ಭಾಗಗಳ ಮೇಲೆ ಹೊಡೆಯುವುದು ಮತ್ತು ಅವನ್ನು ಕತ್ತರಿಸುವುದು. ಯಾವ ಅಂಗದಿಂದ ಅಪರಾಧ ನಡೆಯಿತೋ ಅದನ್ನು ಕತ್ತರಿಸಬೇಕು ಎಂದಿದ್ದಾನೆ ಮನು. ಆದರೆ ಈ Lex Talionis—ಪ್ರತೀಕಾರ ತತ್ವವನ್ನು ಸ್ಮೃತಿಗಳಲ್ಲಿ ಕೆಲ ವರ್ಗದ ಅಪರಾಧಗಳಿಗೆ ಮಾತ್ರ ಪರಿಮಿತಗೊಳಿಸಲಾಗಿದೆ. ಕೌಟಲ್ಯನ



ಪ್ರಕಾರ ಅಂಥ ಶಿಕ್ಷೆ ಮರಣದಂಡನೆಗೆ ಸರಿಸಾಟಿ. ಈ ಕತ್ತರಿಸುವುದು ಅಥವಾ ಕರ್ತನವು ಚಿತ್ರಹಿಂಸೆಯಿಂದ ಭಿನ್ನ—ಇದು ಸರಳವಾಗಿ ಕಡಿದೊಗೆಯುವುದು. ಭಾರಹೇರಿ ಸಾಯಿಸುವುದು, ಸುಡುವುದು, ಉರುಳು ಹಾಕುವುದು, ಮುಳುಗಿಸುವುದು, ವಿಷ ಕುಡಿಸುವುದು ಮುಂತಾದವು ಚಿತ್ರಹಿಂಸೆಗಳು. ಅಲ್ಲದೆ, ಅಪರಾಧಿಯನ್ನು ಕತ್ತೆಯಮೇಲೆ ಕುಳ್ಳಿರಿಸಿ ಮೆರವಣಿಗೆ ಮಾಡಿಸುವುದು (ಹಾದರದಲ್ಲಿ),

ಸಾಂಕೇತಿಕ ಪ್ರದರ್ಶನ ನಡೆಯಿಸುವುದು (ಗುರುಪತ್ನೀಗಮನದ ಪ್ರಕರಣದಲ್ಲಿ ಕಾದ ಕಬ್ಬಿಣದ ಹಾಸಿಗೆಯಮೇಲೆ ಮಲಗಿಸುತ್ತಿದ್ದರು) ಮುಂತಾದವೂ ಚಿತ್ರಹಿಂಸೆಗಳೊಳಗೇ ಬರುತ್ತವೆ. ಚಿತ್ರಹಿಂಸೆಯನ್ನು ಕಬೂಲಿಗಾಗಿ ಹೆಚ್ಚಾಗಿ ಬಳಸಲಾಗುತ್ತಿತ್ತಲ್ಲದೆ ಶಿಕ್ಷೆಗಾಗಿ ಅಲ್ಲ. ಆದರೆ ಉಗ್ರ ಚಿತ್ರಹಿಂಸೆಗಳ ರೂಢಿ ಕಡಮೆ, ಅತ್ಯಪೂರ್ವ. ಸರ್ವಸಾಧಾರಣವಾದ ಚಿತ್ರಹಿಂಸೆಯೆಂದರೆ ಚಾಟಯೇಟು. ಅರಾಜಕೀಯ ಅಪರಾಧಕ್ಕೂ ದೇಶತ್ಯಾಗವನ್ನು ವಿಧಿಸಲಾಗುತ್ತಿತ್ತು. ಒತ್ತಾಯದ ದುಡಿತ ಅಥವಾ ಸಶ್ರಮಶಿಕ್ಷೆಯೂ ಜಾರಿಯಲ್ಲಿತ್ತು. ಮಹಾಪರಾಧಿ ಬ್ರಾಹ್ಮಣನಿಗೆ ಗಣಿಯಲ್ಲಿ ತೋಡುವ ಕೆಲಸ ಹಚ್ಚಲಾಗುತ್ತಿತ್ತೆಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಂಡುಬರುತ್ತದೆ. ಅದು ಜೀವಾವಧಿ ಆಳ್ಗೆಲಸ ಅಥವಾ ನಿಯತಾವಧಿಯ ಗೆಯ್ತ. ಜಾತಕಗಳಲ್ಲಿ ಹೇಳಿದ ಸರಳವಾದ ಕಾರಾವಾಸ ಮಾತ್ರ ಸ್ಮೃತಿಗಳಲ್ಲಿ ಬಹಳ ವಿರಳವಾಗಿ ಉಲ್ಲಿಖಿತವಾಗಿದೆ.

*　　　*

ಕೆಲ ಅಂಶಗಳಲ್ಲಿ ಅತ್ಯುಗ್ರವಾಗಿದ್ದರೂ ವೈಧಿಕ ದಂಡನೆ ಬೇರೆಯ ಪ್ರಾಚೀನ ಸಮಾಜಗಳಲ್ಲಿದ್ದುದಕ್ಕಿಂತ ಪ್ರಾಚೀನ ಭಾರತದಲ್ಲಿ ಕಡಿಮೆ ಉಗ್ರವಾಗಿತ್ತೆಂದು ವಿದ್ವಾಂಸರ ಮತ. ಒಟ್ಟಿನ ಮೇಲೆ ಅಲ್ಲಿ ಇಲ್ಲಿ ಕ್ಷುದ್ರಕಾರಣಗಳಿಗಾಗಿ ಒಬ್ಬಿಬ್ಬರನ್ನು ದಂಡಿಸುತ್ತಿದ್ದ ಪ್ರಕರಣಗಳನ್ನು ಬಿಟ್ಟರೆ ಅಪರಾಧಿಗಳನ್ನು ಸಾಮಾನ್ಯವಾಗಿ ದ್ವೇಷ-ಪ್ರತೀಕಾರ ಬುದ್ಧಿಗಳಿಲ್ಲದೆ ಲಘು-ಶಿಕ್ಷೆಗಳಿಗೆ ಗುರಿಪಡಿಸಲಾಗುತ್ತಿತ್ತು; ಅವರಿಗೆ ಕ್ಷಮೆಯೂ ಎಷ್ಟೋ ಬಾರಿ ಸುಲಭಸಾಧ್ಯವಾಗಿತ್ತು. ಗುಪ್ತರ ಕಾಲದ ಕಾಯದೆ ದಂಡನೆಯಲ್ಲಿ ಮೃದುವಾಗಿತ್ತೆಂದು ಫಾಹಿಯನ ಸಾಕ್ಷಿ ಕೊಟ್ಟಿದ್ದಾನೆ. ಸ್ಮೃತಿಗಳಲ್ಲಿ ಬ್ರಾಹ್ಮಣನನ್ನು ಯಾವ ಕಾರಣದಿಂದಲೂ ತಲೆದಂಡಕ್ಕೆ ಗುರಿಮಾಡಲಾಗದೆಂದು ಹೇಳಿದೆ. ಆದರೆ ಪ್ರತ್ಯಕ್ಷ ವ್ಯವಹಾರದಲ್ಲಿ ಈ ತತ್ವ ಅಮಲಿನಲ್ಲಿತ್ತೆನ್ನಲು ಬರುವುದಿಲ್ಲ. ಅವರಿಗೆ ಸಾಮಾನ್ಯವಾಗಿ ಕೊಡಲಾಗುತ್ತಿದ್ದ ಶಿಕ್ಷೆಯೆಂದರೆ ತಲೆ ಬೋಳಿಸಿಕೊಳ್ಳಲು ಹೇಳುವುದು ಅಥವಾ ಕಾದ ಕಬ್ಬಿಣದಿಂದ ಬರೆ ಹಾಕುವುದು ಎಂದಿದೆ ಅರ್ಥಶಾಸ್ತ್ರದಲ್ಲಿ.

ಕ್ಷಮಾದಾನದ ಅಧಿಕಾರ ರಾಜನಲ್ಲಿತ್ತು. ಆದರೆ ಕೆಲವೊಂದು ಸಂದರ್ಭದಲ್ಲಿ ಮರಣದಂಡನೆ ಅಪರಿಹಾರ್ಯವಾಗಿತ್ತು. ಹಬ್ಬ-ಹುಣ್ಣಿವೆಯ ದಿನಗಳಲ್ಲಿ ಜಯಸಮಾರಂಭದಲ್ಲಿ, ರಾಜನಿಗೆ ಪುತ್ರೋತ್ಸವನಾದಾಗ ಮತ್ತು ಇನ್ನಿತರ ಇಂಥ ಪ್ರಸಂಗಗಳಲ್ಲಿ ಬಂದಿಗಳನ್ನು ಕಾರಾಗೃಹದಿಂದ ಮುಕ್ತಮಾಡುವುದು ನಿತ್ಯರೂಢಿಯಾಗಿತ್ತು.

ಧರ್ಮಶಾಸ್ತ್ರಗಳಲ್ಲಿ ದಂಡನೆಗಳ ಜೊತೆಗೆ ಪ್ರಾಯಶ್ಚಿತ್ತಗಳೂ ಬರುತ್ತವೆ. ಅವುಗಳ ಸುದೀರ್ಘ ವಿವರಗಳನ್ನು ನಾವು ಅವುಗಳಲ್ಲಿ ಕಾಣಬಹುದು. ಹೆಚ್ಚಾಗಿ ಅವು ಧಾರ್ಮಿಕ ಅಪರಾಧಗಳಿಗೆ ಸಂಬಂಧಿಸಿದವೆನ್ನಬಹುದು. ಅಲ್ಲದೆ ಅವು ಆರ್ಯರಿಗೆ ಮಾತ್ರ ಪರಿಮಿತ. ಅನೇಕ ಸಾಮೂಹಿಕ ನೀತಿಮಟ್ಟಗಳನ್ನು ಮೂಲೆಗೊತ್ತುವಷ್ಟು ಈ ಪ್ರಾಯಶ್ಚಿತ್ತಗಳು ಪ್ರಭಾವಿಗಳಾಗಿದ್ದವೆಂಬುದು ನಿಜ. ಪ್ರಾಯಶ್ಚಿತ್ತವಿಧಿ ಧರ್ಮಜ್ಞರೆನಿಸಿಕೊಂಡಿದ್ದ ವ್ಯವಹಾರೇತರ ಪರಿಷತ್ತಿನವರ ಅಧಿಕಾರಕ್ಕೊಳಪಟ್ಟದ್ದು; ಅದು ಅಪರಾಧಿ ತನ್ನ ಒಪ್ಪಿಗೆಯಿಂದ, ಧರ್ಮಶಾಸಕರ ಮೇಲಿನ ಭಯ ಭಕ್ತಿಗಳಿಂದ ತಾನೇ ಅನುಭವಿಸುವ ವ್ರತ, ನಿಯಮ, ಉಪವಾಸ, ದಾನ, ತಪಸ್ಸು, ತ್ಯಾಗ ಮುಂತಾದ ಕಾಯಕ್ಲೇಶ-ಅರ್ಥವಿಯೋಗ ರೂಪದ್ದು. ಆದರೆ ಮನು ಮತ್ತು ವಸಿಷ್ಠರ ಪ್ರಕಾರ ವ್ಯಾವಹಾರಿಕ ಶಿಕ್ಷೆ ಧಾರ್ಮಿಕ ಶಿಕ್ಷೆಗೆ ಬದಲಾಗಿ ವಿಧಿಸಲ್ಪಡಬಹುದು; ಆದರೆ ಧಾರ್ಮಿಕ ಶಿಕ್ಷೆಗಳು ಮೊದಲಿನವಕ್ಕೆ ಆದೇಶಗಳಾಗಲಾರವು.

ಎರಡನೇ ಯೋಜನೆಯ ಬಗ್ಗೆ ವಾದ ವಿವಾದವೇಕೆ ?

ಎರಡನೇ ಪಂಚವಾರ್ಷಿಕ ಯೋಜನೆಯು ಕರಡು ಸಿದ್ಧವಾಗಿದ್ದು ಅದರ ಬಗ್ಗೆ ಅರ್ಥಶಾಸ್ತ್ರಿಗಳಲ್ಲಿಯೂ ಉದ್ದಿಮೆದಾರರಲ್ಲಿಯೂ ತುರುಸಿನ ಚರ್ಚೆ ಯೆದ್ದಿದೆ. ಈ ಚರ್ಚೆಯು ಸ್ವರೂಪವೇನೆಂದು ಲೇಖಕರು ವಿವರಿಸಿದ್ದಾರೆ.

ಲೇಖಕರು: ಪ್ರೊ. ಪಿ. ಎನ್. ನರಸಿಂಗರಾವ್, ಎಂ. ಎ.

ಎರಡನೇ ಪಂಚವಾರ್ಷಿಕ ಯೋಜನೆಯು ೧೯೫೬ ಎಪ್ರಿಲ ೧ ರಿಂದ ಪ್ರಾರಂಭವಾಗಲಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯು ಆರ್ಥಿಕ ಅಭಿವೃದ್ಧಿಗೆ ಹೊಸ ಹಾದಿಯೊಂದನ್ನು ತೆರೆಯಲೆಳಸಿ ಸಾಕಷ್ಟು ಯಶಸ್ವಿಯಾಗಿದೆ. ಇದರಿಂದ ಎರಡನೇ ಯೋಜನೆಯ ಬಗ್ಗೆ ತುಂಬಾ ಕುತೂಹಲವುಂಟಾಗಿದೆ. ಎರಡನೇ ಪಂ. ವಾ. ಯೋಜನೆಯ ಕೊನೆಯ ಸ್ವರೂಪ ಇನ್ನೂ ಸಿದ್ಧವಾಗಿಲ್ಲ. ಆದರೂ ಅದರ ರೂಪರೇಷೆ ನಮ್ಮ ಮುಂದಿದೆ. ಈ ರೂಪರೇಷೆಯಲ್ಲಿ ಅದರ ಉದ್ದೇಶಗಳೂ ವಿವಿಧ ಉದ್ಯೋಗಗಳಲ್ಲಿ ಸಾಧಿಸಲ್ಪಡಬೇಕಾದ ಗುರಿಗಳೂ ಉಲ್ಲೇಖಿಸಲ್ಪಟ್ಟವೆ. ಔದ್ಯೋಗಿಕ ಮತ್ತು ಆರ್ಥಿಕ ರಂಗಗಳಲ್ಲಿ ಸರಕಾರದ ನೀತಿಯನ್ನೂ ಅದು ಸೂಚಿಸುತ್ತದೆ. ಹೀಗಾಗಿ ಯೋಜನೆಯು ಸಹಜವಾಗಿಯೇ ತುಂಬ ವಿವಾದಗಳನ್ನೆಬ್ಬಿಸಿದೆ.

ಎರಡನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಎದ್ದಿರುವ ವಾದವಿವಾದಗಳನ್ನು ವಿವರಿಸುವದೇ ಈ ಲೇಖದ ಉದ್ದೇಶ. ಅದರ ಮೇಲೆ ಬಂದ ಎಲ್ಲ ಟೀಕೆಗಳನ್ನು ಎಣಿಸುವ ಅಗತ್ಯವಿಲ್ಲದಿದ್ದರೂ ವಾದಗ್ರಸ್ತವಾದ ಪ್ರಶ್ನೆಗಳನ್ನು ನಾವು ತಿಳಿದುಕೊಳ್ಳುವುದು ಆಗತ್ಯವಾಗಿದೆ.

ಯೋಜನೆಯ ಗಾತ್ರ

ಯೋಜನೆಯ ವಿವರಗಳು ಪೂರ್ತಿಯಾಗಿ ನಿರ್ಧಾರವಾಗಿ ಅದು ಆಚರಣೆಗೆ ಬರುವ ಮೊದಲು ನಾವು ಆದರ ಗಾತ್ರವನ್ನು ಗೊತ್ತುಪಡಿಸಿಕೊಳ್ಳಬೇಕಾಗುವದು. ಯೋಜನೆಯ ಗಾತ್ರ ಎಷ್ಟಿರಬೇಕೆಂಬ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಎರಡನೇ ಪಂ. ವಾ. ಯೋಜನೆಯಲ್ಲಿ ನಮ್ಮ ಆರ್ಥಿಕ ಅಭಿವೃದ್ಧಿ ರಭಸದಿಂದ ಆಗಬೇಕೆಂಬ ಮನೀಷೆ ಇಟ್ಟುಕೊಳ್ಳಲಾಗಿದೆ.

ಭಾರತದ ರಾಷ್ಟ್ರೀಯ ಆದಾಯವನ್ನು ಪ್ರತಿ ವರ್ಷ ಸೇಕಡಾ ೫ರಂತೆ, ಅಂದರೆ ಯೋಜನೆಯ ಅವಧಿಯಲ್ಲಿ ಒಟ್ಟು ಸೇಕಡಾ ೨೫ರಷ್ಟು, ಹೆಚ್ಚಿಸಬೇಕೆಂಬುದು ಒಂದು ಮುಖ್ಯ ಗುರಿಯಾಗಿದೆ. ಕೆಲ ಭಾರತೀಯ ಅರ್ಥಶಾಸ್ತ್ರಜ್ಞರನ್ನೊಳಗೊಂಡು ಹಲವರು ಇಷ್ಟು ಎತ್ತರವಾದ ಗುರಿಯನ್ನು ನಮ್ಮ ದೇಶದ ಈಗಿರುವ ಸಂಪತ್ತಿಯ ಬಲದಿಂದ ಸಾಧಿಸುವುದು ಅಸಾಧ್ಯವೆಂದು ಅಭಿಪ್ರಾಯಪಡುತ್ತಾರೆ. ಸೇಕಡಾ ೨೫ರಷ್ಟು ಆದಾಯ ಹೆಚ್ಚಿಸಬೇಕಾದರೆ ತೊಡಗಿಸಬೇಕಾದ ಪ್ರಮಾಣದಲ್ಲಿ ಬಂಡವಳ ನಮಗೆ ಲಭ್ಯವಾಗಲಾರದೆಂದು ಅವರ ಮತ. ಆದ್ದರಿಂದ ಔದ್ಯೋಗಿಕ ಅಭಿವೃದ್ಧಿಯು ಕಡಿಮೆ ವೇಗದಿಂದ ಆಗಬೇಕೆಂದು ಅವರು ವಾದಿಸುತ್ತಾರೆ. ನಾವು ಮಾಡುವ ವೆಚ್ಚಗಳು ನಮ್ಮ ಸಂಪತ್ತಿನ ಅಳವು ಮೀರಿದ್ದಾದರೆ ಅತಿಪ್ರಸರಣದ ಗಂಭೀರ ಭಯವಿದೆಯೆನ್ನುತ್ತಾರೆ ಅವರು.

ಆದರೆ ಯೋಜಕರ ಅಭಿಮತದಲ್ಲಿ ಸೇಕಡಾ ೫ರಷ್ಟು ಆದಾಯದ ಅಭಿವೃದ್ಧಿಯು ನಮ್ಮ ಕನಿಷ್ಠ ಗುರಿಯಾಗಬೇಕು. ಇದರಲ್ಲಿ ಅವ್ಯವಹಾರ್ಯವಾದುದೇನೂ ಇಲ್ಲ. ಪ್ರಗತಿ ಹೊಂದಿದ ಪರದೇಶಗಳಲ್ಲಿ ಯಾವುದೇ ಯೋಜನೆಯಿಲ್ಲದೆ ಪ್ರತಿ ವರ್ಷ ಸೇಕಡಾ ೩ರ ಮಾನದಿಂದ ಆದಾಯದ ಅಭಿವೃದ್ಧಿಯಾಗುತ್ತಿದೆ. ಭಾರತದ ರಾಷ್ಟ್ರೀಯ ಉತ್ಪನ್ನವು ೧೯೪೮-೪೯ ರಿಂದ ೧೯೫೩-೫೪ರ ೫ ವರ್ಷದ ಅವಧಿಯಲ್ಲಿ ಸೇಕಡಾ ೧೫ ರಷ್ಟು ಅಭಿವೃದ್ಧಿ ಹೊಂದಿದೆ. ಇದಲ್ಲದೆ ಮೊದಲನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಪ್ರಗತಿಗೆ ಒಂದು ರಭಸ ದೊರೆತಿದೆ. ಇವೆಲ್ಲದರ ಬಲದಿಂದ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇಕಡಾ ೨೫ ರಷ್ಟು ಅಭಿವೃದ್ಧಿಯ ಗುರಿಯಿಟ್ಟುಕೊಂಡದ್ದರಲ್ಲಿ ತಪ್ಪೇನೂ ಇಲ್ಲ. ಇದು ಯೋಜಕರು ಟೀಕಾಕಾರರಿಗೆ ಕೊಡುತ್ತಿರುವ ಉತ್ತರ.

ಖಾಸಗಿ ಉದ್ದಿಮೆಗಳ ಪ್ರಶ್ನೆ

ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಸರಕಾರವು ವಹಿಸಬೇಕಾಗಿರುವ ಔದ್ಯೋಗಿಕ ಮತ್ತು ಆರ್ಥಿಕ ನೀತಿಯ ಬಗ್ಗೆಯೂ ಸಾಕಷ್ಟು ವಾದ ವಿವಾದಗಳು ನಡೆದಿವೆ. ಭಾರತದ ಆರ್ಥಿಕ ಧ್ಯೇಯವು ಸಮಾಜವಾದಿ ಸ್ವರೂಪದ ರಚನೆಯನ್ನು ಸಾಧಿಸುವುದಾಗಿದೆಯೆಂದು ಹೇಳಲಾಗಿದೆ. ಆದರೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸಮ್ಮಿಶ್ರ ಆರ್ಥಿಕ ಪದ್ಧತಿಯನ್ನೇ ಕಲ್ಪಿಸಲಾಗಿದೆಯೆಂದು ದೂರು ಕೇಳಿಬರುತ್ತಿದೆ.

ಭಾರತದ ಸ್ಥಿತಿಗತಿಯಲ್ಲಿ ಸಮ್ಮಿಶ್ರ ಆರ್ಥಿಕ ಪದ್ಧತಿಯೇ ಅತ್ಯಂತ ಯುಕ್ತವಾದುದೆಂದು ತೋರುತ್ತದೆ. ಭಾರತದ ಉದ್ದಿಮೆದಾರರು ಈ ಪದ್ಧತಿಗೆ ಇನ್ನೂ ಮನವೊಲಿದಿಲ್ಲೆಂಬ ಮಾತು ಬೇರೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಉದ್ದಿಮೆಗಳ ಸರಕಾರಿ ಕ್ಷೇತ್ರವನ್ನು ತ್ವರಿತಗತಿಯಲ್ಲಿ ವಿಸ್ತರಿಸುವ ಸಂಕಲ್ಪವಿದೆ. ಸರಕಾರವು ತಾನೇ ಮಹತ್ವದ ಮೂಲ (Key) ಉದ್ದಿಮೆಗಳನ್ನು ಸ್ಥಾಪಿಸಿ ಅದನ್ನು ಶಕ್ಯವಿದ್ದಷ್ಟು ರಭಸದಿಂದ ಬೆಳೆಸಬೇಕೆನ್ನುತ್ತದೆ. ಆದರೆ ಖಾಸಗಿ ಕ್ಷೇತ್ರವನ್ನು ಕಡೆಗಣಿಸಲಾಗುವದಿಲ್ಲ. ಖಾಸಗಿ ಉದ್ದಿಮೆ ಕ್ಷೇತ್ರಕ್ಕೂ ಹಣದ ಪೂರೈಕೆ, ಕಚ್ಚಾ ಸರಕುಗಳ ಪೂರೈಕೆ ಮೊದಲಾದ ನೆರವುಗಳನ್ನು ನೀಡಲು ಅದು ಆಶಿಸುತ್ತದೆ.

ಇದೇನೋ ಸರಿಯೇ. ಆದರೆ ಸರಕಾರವು ವಹಿಸಬೇಕೆಂದಿರುವ ಧೋರಣೆಯು ಖಾಸಗಿ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚುವುದಕ್ಕೆ ಏನೇನೂ ಹಿತಕರವಾಗಿಲ್ಲೆಂದು ಖಾಸಗಿ ಉತ್ಪಾದಕರೂ ಬೇರೆ ಹಲವರೂ ಆಕ್ಷೇಪಿಸುತ್ತಾರೆ. ಯಾಕಂದರೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸರಕಾರಿ ಕ್ಷೇತ್ರದ ಉದ್ದಿಮೆಗಳಲ್ಲಿ ಒಟ್ಟು ೪,೦೦೦ ಕೋಟಿ ರೂಪಾಯಿಗಳನ್ನು ತೊಡಗಿಸಬೇಕೆಂದು ಯೋಜಿಸಲ್ಪಟ್ಟದ್ದರೆ ಖಾಸಗಿ ಕ್ಷೇತ್ರಕ್ಕೆ ೧,೬೦೦ ಕೋಟಿ ರೂಪಾಯಿಗಳನ್ನಷ್ಟೇ ಗುರುತು ಹಾಕಲಾಗಿದೆ. ಇದೂ ಅಲ್ಲದೆ, ಖಾಸಗಿ ಕ್ಷೇತ್ರದಲ್ಲಿ ದೊಡ್ಡ ಉದ್ದಿಮೆಗಳ ಬಗ್ಗೆ ಸರಕಾರವು ವಹಿಸಲಿರುವ ಧೋರಣೆಯು ಫಲವಾಗಿ ಅಂಥ ಉದ್ದಿಮೆಗಳ ವಿಕಾಸವೇ ಕುಂಠಿತವಾಗಿ ಖಾಸಗಿ ಉಪಕ್ರಮಗಳಿಗೆ ನಿರುತ್ಸಾಹ ಬಂದುಬಿಡಬಹುದೆಂಬ ಭಯ ವ್ಯಕ್ತಗೊಳಿಸಲ್ಪಟ್ಟದೆ.

ಉದಾಹರಣೆಗಾಗಿ, ದೊಡ್ಡ ಪ್ರಮಾಣದ ಉದ್ದಿಮೆಗಳಿಗೂ ಚಿಕ್ಕ ಉದ್ದಿಮೆ, ಗ್ರಾಮೋದ್ಯೋಗ ಹಾಗೂ ಕೈಗಾರಿಕೆಗಳಿಗೂ ಸ್ಪರ್ಧೆ ಬಿದ್ದು ಚಿಕ್ಕವುಗಳಿಗೆ ಆಪತ್ತು ಬಾರದಂತೆ, ಸರಕಾರವು ದೊಡ್ಡ ಉದ್ದಿಮೆಗಳ ಉತ್ಪತ್ತಿಗಳ ಮೇಲೆ ಅಬಕಾರಿ ಕರ ಹೇರಬೇಕೆಂದು ಸೂಚಿಸಲ್ಪಟ್ಟದೆ. ಸರಕಾರವು ದೊಡ್ಡ ಉದ್ದಿಮೆಗಳಲ್ಲಿ ಹಣತೊಡಗಿಸುವದನ್ನೂ ನಿಯಂತ್ರಿಸಬಹುದಾಗಿದೆ. ಮನೆ ಕೈಗಾರಿಕೆ, ಗ್ರಾಮೋದ್ಯೋಗ ಹಾಗು ಚಿಕ್ಕ ಉದ್ದಿಮೆಗಳ ಅಭಿವೃದ್ಧಿಗೆ ಆತಂಕವಾಗುವಂತಿದ್ದರೆ ವಿಶಿಷ್ಟ ಜಾತಿಯ ದೊಡ್ಡ ಉದ್ದಿಮೆಗಳಲ್ಲಿ ಹಣ ತೊಡಗಿಸಬೇಕೆಂಬವರಿಗೆ ಸರಕಾರವು ಅನುಮತಿಯನ್ನೇ ಕೊಡಲಿಕ್ಕಿಲ್ಲ. ಅಂದ ಮೇಲೆ ಭಾರತೀಯ ಉದ್ದಿಮೆದಾರರು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸರಕಾರವು ವಹಿಸಬೇಕೆಂದಿರುವ ನೀತಿಯನ್ನು ಕಠೋರವಾಗಿ ಟೀಕಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಕೆಲ ಪ್ರಸಿದ್ಧ ಅರ್ಥಶಾಸ್ತ್ರಜ್ಞರೂ ಈ ನೀತಿಯು ಜಾಣತನದ್ದಲ್ಲೆಂದು ಪ್ರತಿಪಾದಿಸಿದ್ದಾರೆ. ಇದರಿಂದ ಒಂದು ಕಡೆ ದೊಡ್ಡ ಉದ್ದಿಮೆಗಳಿಗೆ ಪೆಟ್ಟು ಬಿದ್ದು, ಇತ್ತ ಚಿಕ್ಕ ಉತ್ಪಾದಕರಿಗೆ ಏನೂ ಪ್ರಯೋಜನವಾಗದೆ

ಹೋಗಬಹುದು. ಹೀಗಾಗಿ ಕಾರಖಾನೆಗಳಲ್ಲಿ ತಯಾರಾದ ಸರಕುಗಳಿಗೂ ಹೆಚ್ಚಿನ ಬೆಲೆ ತೆರಬೇಕಾದ ಪ್ರಸಂಗ ಬರುವದೇ ಮೊದಲಾದ ಕಾರಣಗಳಿಂದ ಗಿರಾಕಿಗಳಿಗೂ ಕಷ್ಟಕಾಲ ಬರಬಹುದು.

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಕರಣವನ್ನು ಇನ್ನಷ್ಟು ವಿಸ್ತರಿಸುವ ಸೂಚನೆಯಿದೆ. ಸರಕಾರಿ ಕ್ಷೇತ್ರದಲ್ಲಿ ಕೆಲ ಮಹತ್ವದ ಉದ್ದಿಮೆಗಳನ್ನು ಸ್ಥಾಪಿಸಲಾಗುವದಲ್ಲದೆ ಖಾಸಗಿ ಕ್ಷೇತ್ರದಲ್ಲಿ ಈಗಿರುವ ಕೆಲ ಉದ್ದಿಮೆಗಳನ್ನೂ ಸರಕಾರವು ವಶಪಡಿಸಿಕೊಳ್ಳಬಹುದಾಗಿದೆ. ವಿಮೆ ಮತ್ತು ಬ್ಯಾಂಕುಗಳನ್ನು ಸರಕಾರವು ರಾಷ್ಟ್ರೀಕರಿಸಬಹುದು. ಸರಕಾರವು ವ್ಯಾಪಾರದಲ್ಲಿಯೂ ತೊಡಗಬಹುದು. ಇದನ್ನೆಲ್ಲ ಕೆಲ ವರ್ಗಗಳು ವಿರೋಧಿಸುತ್ತಿವೆ. ಸರಕಾರವು ರಾಷ್ಟ್ರೀಕರಣಕ್ಕೆ ಬದ್ಧವಾಗಿದೆಯೆಂಬುದು ನಿಜ. ಆದರೆ ಈ ನಿಟ್ಟಿನಲ್ಲಿ ರಾಷ್ಟ್ರೀಕರಣವು ಸೂಕ್ತವಲ್ಲೆಂದು ಅನೇಕರು ಭಾವಿಸುತ್ತಾರೆ. ಸರಕಾರಿ ವ್ಯಾಪಾರ ವ್ಯವಹಾರಗಳನ್ನು ನಡೆಸುವ ಸಂಸ್ಥೆಗಳ ಮೇಲೆ ಜನರಿಗೆ ಒಂದು ಬಗೆಯ ಅವಿಶ್ವಾಸ ಹುಟ್ಟಿಬಿಟ್ಟಿದೆ. ಸಾರ್ವಜನಿಕ ಲೆಕ್ಕಪತ್ರದ ಸಮಿತಿಯು ಈಚೆಗೆ ಕೆಲ ಸರಕಾರಿ ವ್ಯಾಪಾರೋದ್ಯಮಗಳಲ್ಲಿ ನಡೆದ ಅವ್ಯಾಪಾರಗಳನ್ನು ಬಹಿರಂಗಪಡಿಸಿದೆ. ಈ ವರದಿಗಳನ್ನು ನೋಡಿ ಈ ದೇಶದಲ್ಲಿ ಜನರು ದಂಗುಬಡಿದಂತಾಗಿದ್ದಾರೆ.

ನಿರುದ್ಯೋಗ ಪರಿಹಾರ

ಚರ್ಚೆಗೆ ಆಸ್ಪದ ಕೊಟ್ಟ ಇನ್ನೊಂದು ಅಂಶವೆಂದರೆ, ನಿರುದ್ಯೋಗ ಸಮಸ್ಯೆ ಮತ್ತು ಅದರ ಪರಿಹಾರಕ್ಕೆ ಸೂಚಿಸಲ್ಪಟ್ಟ ಕ್ರಮಗಳು. ಮುಂದಿನ ಐದು ವರ್ಷಗಳಲ್ಲಿ ದೇಶವು ಎದುರಿಸಬೇಕಾದ ಅತಿ ದೊಡ್ಡ ಸಮಸ್ಯೆಯೆಂದರೆ ನಿರುದ್ಯೋಗದ್ದೆಂದು ಎಲ್ಲರೂ ಒಪ್ಪುತ್ತಾರೆ. ಇಂದು ಪ್ರಾಯಪ್ರಬುದ್ಧರಾದ ಗಂಡಸರಲ್ಲಿ ಬಹಳ ಜನರಿಗೆ ಉದ್ಯೋಗವಿಲ್ಲ. ಇವರಲ್ಲಿ ಅನೇಕರು ಸುಶಿಕ್ಷಿತರು. ಇವರಲ್ಲದೆ, ಹಳ್ಳಿಗಳಲ್ಲಿ ಅರ್ಧಮರ್ಧ ನಿರುದ್ಯೋಗಿಗಳಾದವರಿದ್ದಾರೆ. ಜನಸಂಖ್ಯೆ ಒಂದೇಸವನೆ ಹೆಚ್ಚುತ್ತಿದೆ; ಪ್ರತಿವರ್ಷ ೧೮ ಲಕ್ಷ ಹೊಸ ಜನರು ಉದ್ಯೋಗಕ್ಕೆ ಅಣಿಯಾಗುತ್ತಾರೆ. ಈ ಎಲ್ಲರಿಗೂ ನೌಕರಿಗಳನ್ನು ಒದಗಿಸುವದು ಪ್ರಚಂಡ ಸಮಸ್ಯೆಯೇ. ಹೀಗಾಗಿ ಎಲ್ಲರಿಗೂ ಉದ್ಯೋಗ ಕೊಡುವುದು ಎರಡನೇ ಪಂಚವಾರ್ಷಿಕ ಯೋಜನೆಯ ಗುರಿಗಳಲ್ಲೊಂದಾಗಿದ್ದು ಅದಕ್ಕೆ ಬಹಳ ಪ್ರಾಶಸ್ತ್ಯವನ್ನೂ ಕೊಡಲಾಗಿದೆ.

ಆದರೆ ನಿರುದ್ಯೋಗವನ್ನು ಯೋಜಕರು ಯಾವ ರೀತಿಯಿಂದ ನಿವಾರಿಸಬೇಕೆನ್ನುತ್ತಾರೆ? ಬಹಳ ಮಟ್ಟಿಗೆ ಗ್ರಾಮೋದ್ಯೋಗ, ಕೈಗಾರಿಕೆಗಳ ಸ್ಥಾಪನೆಯಿಂದ. ಸರ್ಕಾರಿ ಕ್ಷೇತ್ರದಲ್ಲಿಯೂ ಹೆಚ್ಚು ಜನರಿಗೆ ನೌಕರಿ ಕೊಡುವ ಆಸೆ ಅವರಿಗಿದೆ. ನೀರಾವರಿ ಮೊದಲಾದ ಕಾಮಗಿರಿಗಳಲ್ಲಿಯೂ ಉದ್ಯೋಗಗಳನ್ನು ಕೊಡಬಹುದು. ಆದರೆ ಅವರು ವಿಶೇಷವಾಗಿ ಕೈಯೂರಿರುವುದು ಗ್ರಾಮೋದ್ಯೋಗ, ಕೈಗಾರಿಕೆಗಳ ಮೇಲೆ. ಇದಕ್ಕೆ ಬೇಕಾದಷ್ಟು ಗ್ರಾಮೋದ್ಯೋಗ, ಕೈಗಾರಿಕೆ ಮೊದಲಾದವುಗಳನ್ನು ಬೇಗನೆ ಸ್ಥಾಪಿಸುವದು ಸಾಧ್ಯವಿದೆಯೆಂದೇ ಇಟ್ಟುಕೊಂಡರೂ ಅವು ಉತ್ಪಾದಿಸಿದ ಸರಕುಗಳಿಗೆ ಪೇಟೆ ದೊರಕಿಸುವುದು ಅತಿ ಕಠಿಸ. ಈ ಉದ್ದಿಮೆಗಳ ಅವಸ್ಥೆಯನ್ನು ಅಭ್ಯಸಿಸಿದ ಜನರಿಗೆ ಅವುಗಳ ಉತ್ಪತ್ತಿಗಳನ್ನು ಮಾರುವುದು ಎಷ್ಟು ಕಷ್ಟವೆಂದು ಗೊತ್ತಿದೆ.

ಅದು ಹೋಗಲಿ. ಸುಶಿಕ್ಷಿತ ನಿರುದ್ಯೋಗಿಗಳ ಗತಿಯೇನು? ಅವರನ್ನು ಈ ಗ್ರಾಮೋದ್ಯೋಗಗಳಲ್ಲಿ ನೇಮಿಸಿಕೊಳ್ಳಲಾದೀತೆ? ಯೋಜಕರು ಇದು ಸಾಧ್ಯವಿದೆಯೆಂದು ಹೇಳುತ್ತಾರೆ. ಆದರೆ ಈ ತರುಣರಿಗೆ ಅದರಲ್ಲಿ ಕೌಶಲವೂ ಇಲ್ಲ, ಆಸಕ್ತಿಯೂ ಇಲ್ಲ. ಕೌಶಲವನ್ನಾದರೂ ತರಬೇತಿ ಕೇಂದ್ರಗಳ ಮೂಲಕ ಅವರಿಗೆ ಒದಗಿಸಬಹುದು. ಆದರೆ ಅವರ ಮನೋವೃತ್ತಿಯನ್ನು ಬದಲಿಸಲಾದೀತೆ? ಸುಶಿಕ್ಷಿತರಲ್ಲಿ ಹೆಚ್ಚಿನವರಿಗೆ ಶಾರೀರಿಕ ಶ್ರಮಕ್ಕಿಂತ ಬೌದ್ಧಿಕ ಶ್ರಮದ ಮೇಲೆಯೇ ಆಸ್ಥೆಯಿರುತ್ತದೆ.

ಈ ಸಂಬಂಧದಲ್ಲಿ ಇನ್ನೂ ಒಂದು ವಿಷಯವು ವಿಚಾರಾರ್ಹವಾಗಿದೆ. ಯಾವುದೇ ಕೈಗಾರಿಕೆ, ಗ್ರಾಮೋದ್ಯೋಗ ಸ್ಥಾಪಿಸಿದರೂ ಅದನ್ನು ಉಳಿಸಿ ಬೆಳಸಿಕೊಳ್ಳಬೇಕು. ಅವುಗಳನ್ನು ತತ್ಕಾಲಕ್ಕೆ ಜನರಿಗೆ ಉದ್ಯೋಗ ಕೊಡುವ ಆಪದ್ಧರ್ಮವೆಂದು ಪ್ರಾರಂಭಿಸುವುದು ತರವಲ್ಲ. ಆದರೆ ಯೋಜಕರಲ್ಲಿ ಕೆಲವರು ಇದನ್ನು ಆಪದ್ಧರ್ಮವೆಂದೇ ಭಾವಿಸಿದಂತಿದೆ. ಕೈಗಾರಿಕೆಗಳಿಗೆ ನಮ್ಮ ಆರ್ಥಿಕ ರಚನೆಯಲ್ಲಿ ಸ್ಥಾನವಿದೆ ಮತ್ತು ಅವುಗಳನ್ನು ಶಾಶ್ವತ ತಳಹದಿಯ ಮೇಲೆಯೇ ಪ್ರಾರಂಭಿಸಬೇಕೆಂದು ಯೋಜನಾಮಂತ್ರಿ ಶ್ರೀ ಗುಲಜರಿಲಾಲ ನಂದಾರವರು ಹೇಳುವದು ನ್ಯಾಯ್ಯವಾಗಿದೆ.

ಹಣ ದೊರಕಿಸುವ ಹಾದಿ

ಯೋಜನೆಯು ಎಷ್ಟೇ ಪರಿಪೂರ್ಣವಾಗಿದ್ದರೂ ಅದಕ್ಕೆ ಅವಶ್ಯವಾದ ಹಣವೊದಗಿಸಿದ ಹೊರತು ಅದನ್ನು ಆಚರಣೆಗೆ ತರಲು ಸಾಧ್ಯವಿಲ್ಲ. ಹಣವು ಬೀಜಪ್ರಶ್ನೆಯಾಗಿದ್ದು ಆ ಬಗ್ಗೆ ತುಂಬ ವಾದವಿವಾದವಾಗಿದೆ. ಎರಡನೇ ಪಂಚವಾರ್ಷಿಕ ಯೋಜನೆಗೆ ಹಣ ದೊರಕಿಸಲು ಯಾವ ಉಪಾಯ ಯೋಜಿಸಲ್ಪಟ್ಟಿದೆಯೆಂದು ನೋಡುವಾ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟು ೪,೮೦೦ ಕೋಟಿ ರೂಪಾಯಿ ವೆಚ್ಚ ಮಾಡಬೇಕೆಂದು ಸೂಚಿಸಲ್ಪಟ್ಟಿದೆ. (ಮೊದಲೇ ನಾವು ನೋಡಿದಂತೆ ಇದರಲ್ಲಿ ಬಂಡವಳವೆಂದು ತೊಡಗಿಸುವ ಹಣ ೩,೬೦೦ ಕೋಟಿ ಮಾತ್ರ.) ಇಷ್ಟು ಹಣ ಎಲ್ಲಿಂದ ಬರಬೇಕು ? ಕರ ಮತ್ತು ಕರೇತರ ಆಕರಗಳಿಂದ ಒಟ್ಟು ರೂ. ೩,೨೦೦ ಕೋಟಿ ಕಂದಾಯಾದಾಯ ಕೂಡಿಸಬಹುದು. ೧,೦೦೦ ಕೋಟಿಯಷ್ಟು ಸಾಲ ಎತ್ತಬಹುದು. ರೇಲ್ವೆ ಮತ್ತು ಇತರ ಸಂಕೀರ್ಣ ಮೂಲಗಳಿಂದ ೨೦೦ ಕೋಟಿ ಸಿಗಬಹುದು. ವಿದೇಶಗಳಿಂದಲೂ ನಮಗೆ ಧನ ಸಹಾಯ ಸಿಗುವ ನಿರೀಕ್ಷೆಯಿದೆ. ಇದು ಸುಮಾರು ೪೦೦ ಕೋಟಿಯೆಂದು ಹಿಡಿಯೋಣ. ಇಷ್ಟಾದರೂ ಸುಮಾರು ೨,೦೦೦ ಕೋಟಿಯಷ್ಟು ಕೊರತೆ ಸರಕಾರೀ ಕ್ಷೇತ್ರದಲ್ಲೇ ತಲೆದೋರುವುದು. ಸರಕಾರದ ಔದ್ಯಮಿಕ ಹಾಗು ವ್ಯಾಪಾರಿ ಉಪಕ್ರಮಗಳಿಂದ ಹೆಚ್ಚಿನ ಲಾಭ ನಿರೀಕ್ಷಿಸಬಹುದಾದರೂ ಕೊರತೆ ತುಂಬಲು ಅದು ಎಷ್ಟೂ ಸಾಲದು. ಹೀಗಾಗಿ ಹೆಚ್ಚಿನ ಕರಭಾರ ಮತ್ತು ಕೊರತೆಯ ಧನವಿನಿಯೋಗ ಅಗತ್ಯವಾಗಿದೆಯೆಂಬುದು ಸ್ಪಷ್ಟವೇ ಇದೆ. ಈಗ ರಾಷ್ಟ್ರೀಯ ಆದಾಯದಲ್ಲಿ ಸೇಕಡಾ ೭ ರಷ್ಟು ಕರಭಾರದಿಂದ ವಸೂಲು ಮಾಡಲ್ಪಡುತ್ತಿದ್ದರೆ ಇದನ್ನು ಮುಂದೆ ಸೇಕಡಾ ೯-೧೦ ಕ್ಕೇರಿಸಬೇಕಾಗುವದು. ಇಷ್ಟಾದರೂ ೧,೦೦೦ ದಿಂದ ೧,೨೦೦ ಕೋಟಿ ರೂಪಾಯಿಗಳನ್ನು ಕೊರತೆ ಧನವಿನಿಯೋಗದಿಂದ (ನೋಟಗಳನ್ನು ಮುದ್ರಿಸಿ) ಎರಡನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ತುಂಬಿಕೊಳ್ಳಬೇಕಾಗುತ್ತದೆ.



" ಈ ಸೀರೆ ಉಟ್ಟರೆ ನೀವು ಹೀಗೇ ಕಾಣುತ್ತೀರಿ "

ಎರಡನೇ ಪಂಚವಾರ್ಷಿಕ ಯೋಜನೆಗೆ ಹಣ ಕೂಡಿಸಲು ಮಾಡಲ್ಪಟ್ಟ ಸೂಚನೆಗಳಲ್ಲಿ ಮೇಲಿನವು ಕೆಲವು. ಇವುಗಳಲ್ಲಿ ಕರಭಾರ ಮತ್ತು

ಕೊರತೆ ಧನವಿನಿಯೋಗದ ಸೂಚನೆಗಳೇ ವಿಶೇಷ ವಾಗ್ವಾದವನ್ನೆಬ್ಬಿಸಿವೆ. ಜನತೆಯ ಕರಭರಣ ಶಕ್ತಿ ಬಹಳ ಮಿತವಾಗಿದೆ. ಈಗಾಗಲೇ ಈ ಮಿತಿ ಮುಟ್ಟಿದ್ದಾಗಿದೆಯೆಂದು ಅನೇಕರು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೂ ಹೆಚ್ಚು ಕರ ಹೊರಿಸಿದ್ದಾದರೆ ಅದರಿಂದ ಹಣವುಳಿಸುವ ಮತ್ತು ತೊಡಗಿಸುವ ಪ್ರವೃತ್ತಿಯೇ ನೊಟಕಾಗಬಹುದು. ಹೆಚ್ಚಿನ ಕರಭಾರ ವಿಶೇಷವಾಗಿ ಮೇಲಿನ ಮತ್ತು ಮಧ್ಯಮ ವರ್ಗಗಳ ಮೇಲೆ ಬೀಳುವದು. ಮಧ್ಯಮ ವರ್ಗದ ಜೀವನಮಟ್ಟ ಆಗಲೇ ತೀರ ಕೆಳಗಿದೆ. ಇನ್ನೂ ಕರ ಹೇರಿದರೆ ಅದು ಮತ್ತಷ್ಟು ಕುಗ್ಗುವದು. ಅಲ್ಲದೆ ಹೆಚ್ಚಿನ ಕರಭಾರ ಹೇರುವದಿದ್ದರೆ ಕೆಲ ಜೀವನಾವಶ್ಯಕ ಪದಾರ್ಥಗಳ ಮೇಲೆಯೂ ಕರ ಬೀಳದೆ ನಿವೃತ್ತಿಯಿರದು. ಸದ್ಯದ ನಮ್ಮ ರಾಜ್ಯಘಟನೆಯು ಮೇರೆಗೆ ಇದಕ್ಕೆ ಅವಕಾಶವಿಲ್ಲ. ಯೋಜಕರು ಘಟನೆಯನ್ನೇ ತಿದ್ದೋಣವೆಂದು ಸುಲಭವಾಗಿ ಹೇಳಿಬಿಡುತ್ತಾರೆ. ಆದರಿದು ತುಂಬ ಆಕ್ಷೇಪಣೀಯವಾಗಿದೆ.

ಇನ್ನು ಕೊರತೆ ಧನವಿನಿಯೋಗದ ವಿಚಾರವೇನು? ಕೆಲವೊಂದು ಪ್ರಸಂಗದಲ್ಲಿ ಕೊರತೆಯ ಧನವಿನಿಯೋಗ ಅಗತ್ಯವಾಗಿರಬಹುದು. ಆದರೆ ಯೋಜನಾವಧಿಯಲ್ಲಿ ೧,೦೦೦ ದಿಂದ ೧,೨೦೦ ಕೋಟಿಯಷ್ಟು ಮಾನದ ಕೊರತೆಯ ಧನವಿನಿಯೋಗವು ಅಪಾಯಕರವಾಗಿದೆಯೆಂದು ಎಷ್ಟೋ ಅರ್ಥಶಾಸ್ತ್ರಜ್ಞರು ಭಾವಿಸುತ್ತಾರೆ. ಇದು ಆಗಲೇ ಪದಾರ್ಥಗಳು ಅತಿ ತುಟ್ಟಿಯಾಗಿರುವ ಈ ದೇಶದಲ್ಲಿ ಅತಿಪ್ರಸರಣಾವಸ್ಥೆಯನ್ನು ತಂದೊಡ್ಡಬಹುದು. ಬೆಲೆಗಳು ಒಮ್ಮೆ ಏರತೊಡಗಿದವೆಂದರೆ ಅವುಗಳನ್ನು ಹಿಡಿತದಲ್ಲಿಡುವದು ಸರಕಾರಕ್ಕೆ ಕಠಿನ ಹೋಗುವದು. ಸರಕಾರವು ಹಾಕಬಹುದಾದ ನಿಯಂತ್ರಣಗಳಿಂದ ಏನೂ ಫಲವಾಗಲಾರದು. ನಿಯಂತ್ರಣಗಳ ಕಹಿಯಾದ ಅನುಭವ ನಮಗಿದೆ.

ಎರಡನೇ ಪಂಚವಾರ್ಷಿಕ ಯೋಜನೆಯನ್ನು ಕುರಿತು ನಡೆದ ವಾದವಿವಾದಗಳಲ್ಲಿ ಎಷ್ಟೋ ಭಾಗ ಅರ್ಥ ಹೀನವಾದುದು, ಅನವಶ್ಯಕವಾದುದು. ಈ ದೇಶದಲ್ಲಿ ಆರ್ಥಿಕ ಯೋಜನೆಗಳಿಗೇ ವಿರೋಧಿಗಳಾದ ಜನರಿರುವದೇ ಅದಕ್ಕೆ ಕಾರಣ. ಮೊದಲನೇ ಪಂಚವಾರ್ಷಿಕ ಯೋಜನೆಯನ್ನು ಖಂಡಿಸಿದಂತೆ ಅವರು ಎರಡನೆಯದನ್ನೂ ಖಂಡಿಸುತ್ತಿದ್ದಾರಲ್ಲದೆ ಬೇರಲ್ಲ. ಯೋಜನೆಗಳು ನಮ್ಮ ಪ್ರಧಾನ ಮಂತ್ರಿಗಳ ಹುಚ್ಚುಗಳಲ್ಲೊಂದೆಂದು ಅವರು ಬಗೆದಂತಿದೆ. ಆರ್ಥಿಕ ಯೋಜನೆಗಳಲ್ಲಿ ಮಂತ್ರಶಕ್ತಿಯಿಲ್ಲೆಂಬುದು ಒಪ್ಪತಕ್ಕ ಮಾತು. ಕಷ್ಟಪಟ್ಟು ದುಡಿಯಬೇಕಾಗುತ್ತದೆ, ಸಹನೆ ಮತ್ತು ಸತತೋದ್ಯೋಗ ಅಗತ್ಯವಾಗಿದೆ; ಎಚ್ಚರಿಕೆ ಮತ್ತು ಯೋಗ್ಯ ನಿಯಂತ್ರಣಗಳೂ ಬೇಕಾಗಿವೆ: ಆದರೆ ಯೋಜಿದರೆಯಿಲ್ಲದೆ ತ್ವರಿತ ಪ್ರಗತಿಯಾಗದು. ಮೊದಲನೆಲ್ಲ, ಪಂಚವಾರ್ಷಿಕ ಯೋಜನೆಯು ಒಟ್ಟಿನ ಮೇಲೆ ತುಂಬ ಯಶಸ್ವಿಯಾಗಿದೆ. ಕಳೆದ ಕೆಲ ವರ್ಷಗಳಿಂದಾದ ಗಮನಾರ್ಹ ಆರ್ಥಿಕ ಪ್ರಗತಿಯು ವಿದೇಶೀ ನಿರೀಕ್ಷಕರ ಪ್ರಶಂಸೆಯನ್ನು ಕೂಡ ಪಡೆದಿದೆ. ಎರಡನೇ ಪಂಚವಾರ್ಷಿಕ ಯೋಜನೆಯೂ ಯಶಸ್ವಿಯಾಗಿ ಕೃತಿಗಿಳಿಸಲ್ಪಟ್ಟು ಯೋಜನಾವಧಿಯ ಅಂತ್ಯದಲ್ಲಿ ಜಗತ್ತಿನ ಅತ್ಯಂತ ಮುಂದುವರಿದ ದೇಶಗಳಲ್ಲಿ ಭಾರತವೂ ಹೆಸರಿಸಲ್ಪಡಲೆಂದು ಹಾರೈಸೋಣ.

ಜ್ಯೋತಿಷಿ ಶ್ರೀ. ಕೃಷ್ಣಶಾಸ್ತ್ರಿ ಭಿಡೆ
ಭವಿಷ್ಯಕಥನ ಕಾರ್ಯಾಲಯ, ಕಾರ್ಲೇಕರ ಬಿಲ್ಡಿಂಗ,
ಖಡೇಬಜಾರ-ಬೆಳಗಾಂವಿ

ವರ್ಷ ಭವಿಷ್ಯ

ಶಾಲಿವಾಹನ ಶಕೆ ೧೮೭೭ ಕಾರ್ತಿಕ ಶುದ್ಧ ೧ ಮಂಗಳವಾರದಿಂದ
ಶಕೆ ೧೮೭೮ ಆಶ್ವಿನ ಬಹುಳ ೩೦ ಶುಕ್ರವಾರ
ಅಂದರೆ

೧೯೫೫ ನೇ ಇಸ್ವಿಯ ನವಂಬರ ೧೫ ರಿಂದ
೧೯೫೬ ನೇ ಇಸ್ವಿಯ ನವಂಬರ ೨ರ ವರೆಗೆ

(ಈ ದೀಪಾವಳಿಯಿಂದ ಮುಂದಿನ ದೀಪಾವಳಿಯ ವರೆಗೆ)

ಸೂಚನೆ:— ಈ ವರ್ಷ ಆಯಾ ರಾಶಿಯವರಿಗೆ ಆಯಾ ಗ್ರಹಗಳ ಪರಿಣಾಮ ಯಾವ ಬಗೆಯಿಂದ ಆಗುವದೆಂಬದನ್ನು ಸಾಕಲ್ಯವಾಗಿ ವಿಚಾರಮಾಡಿ ಈ ಭವಿಷ್ಯವನ್ನು ಬರೆದದ್ದಾಗಿದೆ. ಇದರಿಂದ ಆಯಾ ರಾಶಿಯವರಿಗೆ ತಮಗಾಗಬಹುದಾದ ಇಷ್ಟಾನಿಷ್ಟ ಪರಿಣಾಮಗಳು ಸಾಧಾರಣವಾಗಿ ಗೊತ್ತಾಗುವವು.

ಆಯಾ ವ್ಯಕ್ತಿಗಳ ಜನ್ಮಕುಂಡಲಿಯ ಮೇಲಿಂದ ಭವಿಷ್ಯವನ್ನು ಬರೆದದ್ದಾದರೆ ಪೂರ್ಣವಾಗಿ ನಿಜವಾಗಿ ಪರಿಣಮಿಸುವದು. ಆದರೂ ಈ ವರ್ಷ ಪ್ರತಿಯೊಬ್ಬರಿಗೆ ಆಯಾ ಗ್ರಹಗಳ ಪರಿಣಾಮವಾಗಿ ಸುಖದುಃಖದ ವಾತಾವರಣವನ್ನು ಎಂತು ಕಳೆಯಬೇಕಾಗುವದೆಂಬುದು ಈ ಭವಿಷ್ಯದಿಂದ ಗೊತ್ತಾಗುವದು. ಅದರ ಕಲ್ಪನೆ ಸ್ಪಷ್ಟವಾಗಿ ಆಗುವದು.

ಜನ್ಮರಾಶಿಗನುಸಾರ ಮತ್ತು ಜನ್ಮಲಗ್ನದ ಮೇಲಿಂದ ಈ ಭವಿಷ್ಯವನ್ನು ಪೂರ್ಣವಾಗಿ ಮನನಮಾಡಿಕೊಂಡು ಅದರಂತೆ ವರ್ತಿಸಿದ್ದಾದರೆ ಶುಭಾಶುಭಗಳ ವಿಷಯದಲ್ಲಿ ಬಹಳ ಜಾಗ್ರತ ಉಳಿಯಲು ಬರುವದು.

ಪುರುಷರಂತೆ ಹೆಣ್ಣುಮಕ್ಕಳಿಗೂ ಶುಭಾಶುಭ ಫಲಗಳು ದೊರೆಯುವವು. ಆದರೆ ದೈಹಿಕ ಭೇದ ತಾರತಮ್ಯವನ್ನು ಮಾತ್ರ ನೆನಪಿನಲ್ಲಿಡಬೇಕು.

ಮೇಷ

ಒಟ್ಟಾರೆ ಈ ವರ್ಷ ಈ ರಾಶಿಯವರಿಗೆ ಶಾರೀರಿಕ ಮತ್ತು ಪ್ರಾಪಂಚಿಕ ಸುಖ ಕೆಲ ಮಟ್ಟಿಗೆ ಕಡಿಮೆಯಾದರೂ ಔದ್ಯೋಗಿಕ ಮತ್ತು ಬೌದ್ಧಿಕ ವಿಷಯಗಳಲ್ಲಿ ಆ ಕೊರತೆಯು ಪೂರ್ಣ ತುಂಬಿಬರುವದೆಂಬುದು ನಿಶ್ಚಿತವೆಂದು ತಿಳಿಯಿರಿ.

ನೀವು ಪ್ರಕೃತಿಯನ್ನು ಬಹಳ ಜಪ್ಪಿಸಿಕೊಂಡಿರಿ. ಈ ವರ್ಷ ಇರುವ ೮ನೇ ರಾಹು ಮತ್ತು ಶನಿ ಅದರಂತೆ ಕೆಲಕೆಲ ದಿನ ಇರುವ ೮ನೇ ಮಂಗಳ, ರವಿ, ಬುಧ ಮತ್ತು ಶುಕ್ರ ಇವರಿಂದ ಹೆಚ್ಚು ಕಾರಣವಿಲ್ಲದೆ ನಿಮ್ಮ ಪ್ರಕೃತಿ ಕೆಡುವ ಅಂಜಿಕೆ ಇದೆ. ಮಧ್ಯದಲ್ಲಿ ಏನೋ ಸ್ವಲ್ಪ ಸುಧಾರಿಸಿದಂತೆ ತೋರುವದಷ್ಟೆ, ಆದರೆ ವರ್ಷಾರಂಭದಲ್ಲಿ ರಾಶಿಸ್ವಾಮಿಯಾದ ಮಂಗಳನ ಸ್ಥಾನ ಬಲಿಷ್ಠವಿದ್ದುದರಿಂದ ಆಯುಷ್ಯಕ್ಕೆ ಸಹಸಾ ಅಂಜಿಕೆ ಇಲ್ಲ. ಕ್ಲೇಶ ಪರಿಹಾರಾರ್ಥವಾಗಿ ರಾಹು ಶನಿ ಜಪ ಪೂರ್ಣಮಾಡಬೇಕು. ಅಂದರೆ ನಿಶ್ಚಿತವಾಗಿ ಅಂಜಿಕೆ ಇಲ್ಲ. ಜನೆವರಿ ೭ ರಿಂದ ಫೆಬ್ರುಅರಿ ೨೦ ಮತ್ತು ಅಕ್ಟೋಬರ ೧೬ ರಿಂದ ಮುಂದಿನ ಅವಧಿಯಲ್ಲಿ ಹೆಚ್ಚು ಜಪ್ಪಿಸಿಕೊಂಡಿರಬೇಕು. ಮೂಲವ್ಯಾಧಿ, ಭಗೇಂದ್ರ, ಮೂತ್ರದಾಹ ಮೊದಲಾದ ಉಷ್ಣ ವಿಕಾರದ ರೋಗಗಳು ಅದರಂತೆ ಭೂತಬಾಧೆ, ದೃಷ್ಟಿಬಾಧೆ ಮೊದಲಾದ ಗುಪ್ತಬಾಧೆಗಳ ಅಂಜಿಕೆ ಹೆಚ್ಚು.

ಉಳಿದ ವಿಷಯಗಳಲ್ಲಿಯೂ ಈ ವರ್ಷ ದೇಹ ಸುಖಕ್ಕೆ ಅಷ್ಟೊಂದು ಅನುಕೂಲವಿಲ್ಲ. ಆದರೆ ಮಾರ್ಚ ೧೪ ರ ವರೆಗಿನ ಮತ್ತು ಮೇ ೧೧ ರಿಂದ ಅಕ್ಟೋಬರ ೧೬ ವರೆಗಿನ ಕಾಲವು ಮಾತ್ರ ಬಹಳ ಸಮಾಧಾನದ್ದು. ಈ ಅವಧಿಯಲ್ಲಿ ಪ್ರಿಯಮಿತ್ರರ ಮತ್ತು ಪೂಜ್ಯ ವ್ಯಕ್ತಿಗಳ ಸಹವಾಸ ದೊರೆಯುವದು. ಉದ್ದಿಷ್ಟ ವಿಷಯದ ಬಗ್ಗೆ ಯೋಗ್ಯ ಸಲಹೆ ಮತ್ತು ಯಥಾಶಕ್ತಿ ಸಹಾಯ ಅವರಿಂದ ದೊರೆಯುವದು. ಈ ವರ್ಷ ಗೃಹಕಲಹ ಬಹಳ ಹೆಚ್ಚಿ ಕುಟುಂಬದಲ್ಲಿ ಗದ್ದಲಹೆಚ್ಚುವದು. ನವಂಬರ ೨೪ ರವರೆಗೆ ಮತ್ತು ಫೆಬ್ರುಅರಿ ೫ ರಿಂದ ಮಾರ್ಚ ೨೨ ಎಪ್ರಿಲ ೨೯ರಿಂದ ಜುಲೈ ೨೧ ಮತ್ತು ಅಕ್ಟೋಬರ ೨೫ ರ ನಂತರದ ಅವಧಿಯಲ್ಲಿ ಈ ವಾತಾವರಣ ಮತ್ತಷ್ಟು ಪ್ರಕ್ಷುಬ್ಧವಾಗುವದು. ಯಾರ ಲಗ್ನ ಇಲ್ಲವೆ ಕುಂಡಲಿಯಲ್ಲಿ ದ್ವಿತೀಯ ಅಂದರೆ ಕುಟುಂಬ ಸ್ಥಾನದಲ್ಲಿ ರಾಹು ಇಲ್ಲವೆ ಕೇತು ಇದ್ದು ಅಣ್ಣತಮ್ಮಂದಿರು, ಕಕ್ಕಮಕ್ಕಳು ಕ್ವಚಿತ್ ತಂದೆ ಮಕ್ಕಳು ಕೂಡ ಕೂಡಿ ಇದ್ದರೆ ವಿಭಕ್ತರಾಗುವ ಸರತಿ ಬಹಳ ಜನರಿಗೆ ಬರುವದು. ಬಾಯಿಯಂತೂ ಸದಾ ಹಗುರಾಗುವದು. ಸರಳ ಮಾತಾಡಿದರೂ ಯಾರಿಗೂ ಅದು ಹಿತವೆನಿಸುವದಿಲ್ಲ. ಸಹಜವಾಗಿ ಇಲ್ಲವೆ ಯಾವದೊಂದು ನೇತ್ರರೋಗದಿಂದ ದೃಷ್ಟಿ ಸ್ವಲ್ಪಮಟ್ಟಿಗೆ ಮಂದವಾಗುವದು. ಇಟ್ಟ ವಸ್ತು ಇಟ್ಟಲ್ಲಿಯೇ ಕಳವಾಗುವದು ಇಲ್ಲವೆ ಮಾಯವಾಗುವದು.

ಸ್ತ್ರೀಸುಖವೂ ಮನಸ್ಸಿನಂತೆ ಸಿಕ್ಕುವದಿಲ್ಲ. ಯಾರೊಬ್ಬರ ಸ್ಥಳಾಂತರದಿಂದ ಮೇಲಿಂದಮೇಲೆ ಅದರಲ್ಲಿ ಖಂಡ ಬೀಳುವದು. ಆದರೆ ಉಭಯತರಲ್ಲಿಯ ಪ್ರೇಮ ನಿಶ್ಚಲವುಳಿಯುವದು. ಮನೆಯಲ್ಲಿಯ ತೊಂದರೆ ಇಬ್ಬರಿಗೂ ಸಮವೇ. ಒಂದು ವೇಳೆ ನಿಮ್ಮ ಲಗ್ನವಾಗಿರದಿದ್ದರೆ ಈವರ್ಷ ಆಗುವದು ಸ್ವಲ್ಪ ಕಠಿಣವೆ. ಆದರೂ ಆಗುವ ಬಾಶಿಂಗಬಲ ಹೆಚ್ಚು ಬಲಿಷ್ಠವಾಗಿದ್ದರೆ ಅದು ಮಾರ್ಚ ೧೪ ರಿಂದ ಮೇ ೧೧ ರ ಅವಧಿಯಲ್ಲಿ ಆಗುವದು. ವಧೂವರರು ಮುಂದೆ ಸಂಸಾರದಲ್ಲಿ ಅನುರೂಪರೆನಿಸಿದರೂ ಸದ್ಯದಲ್ಲಿ ನೋಡಲಿಕ್ಕೆ ಪರಸ್ಪರ ಅಷ್ಟೊಂದು ಮನಸ್ಸಿಗೆ ಬರುವದಿಲ್ಲ.

ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಮಾರ್ಚ ೧೪ ರ ವರೆಗೆ ಇಲ್ಲವೆ ಮೇ ೧೧ ರಿಂದ ಅಕ್ಟೋಬರ ೧೬ ರ ವರೆಗೆ ಲಗ್ನವಾಗುವ ಇಲ್ಲವೆ ಕನಿಷ್ಠ ನಿಶ್ಚಯವಾಗುವದು ಖಾತ್ರಿ. ಈ ಅವಧಿಯಲ್ಲಿ ಸಿಂಹಸ್ಥ ಗುರುವಿರುವದರಿಂದ ಕೆಲವರು ಲಗ್ನ ಮಾಡುವದಿಲ್ಲಾದ್ದರಿಂದ ಕೇವಲ ಲಗ್ನ ನಿಶ್ಚಯವಾಗುವದು. ಅಳಿಯ ಇಲ್ಲವೆ ಸೊಸೆ ಮನಸ್ಸಿಗೆ ಬರುವಂಥವರು ದೊರೆಯುವರು. ಆದರೆ ವರದಕ್ಷಿಣೆ ಅಥವಾ ವಧುವಿಗೆ ಸಾಕಷ್ಟು ವಸ್ತ್ರಾಲಂಕಾರ ದೊರೆಯುವದಿಲ್ಲ. ಮನೆಯಲ್ಲಿ ನೋಕರರಿದ್ದರೆ ಅವರಲ್ಲಿ ಕೆಲವರು ಮಾರ್ಚ ೧೪ ರಿಂದ ಮೇ ೧೧ ರ ಅವಧಿಯಲ್ಲಿ ನೌಕರಿ ಬಿಡುವರು, ಕೆಲವರು ಕೆಲಸಕ್ಕೆ ಬರುವದಿಲ್ಲ. ಸಂಬಳ ಹೆಚ್ಚಿಸಿರೆಂದು ಆಗ್ರಹತಾಳುವರು, ಇಲ್ಲವೆ ಕೆಲಸ ಹೆಚ್ಚಾಗುವದೆಂದು ತಕರಾರು ಮಾಡುವರು. ಈ ರೀತಿ ಯಾವದೊಂದು ನೆವದಿಂದ ಬಹಳ ತೊಂದರೆ ಕೊಡುವರು. ವಾಹನಗಳಿಂದ ದೊರೆಯುವ ಸುಖಕ್ಕಿಂತ ಅವುಗಳ ದುರಸ್ತಿ ವೆಚ್ಚವೇ ಹೆಚ್ಚು.

ಹೊಲ ಪಟ್ಟಿಯು ಉತ್ಪನ್ನ ಅಷ್ಟಕ್ಕಷ್ಟೆ. ಸಮೀಪದ ಆಪ್ತರು ಇಲ್ಲವೆ ದೂರಿನ ಆಪ್ತರು ಸ್ವಲ್ಪ ತೊಂದರೆಯನ್ನೇ ಕೊಡುವರು. ಒಟ್ಟಾರೆ ಪ್ರಾಪಂಚಿಕ ಸುಖ ಮೃಗಜಲದಂತೆ ತೋರಿ ಸಾಕಷ್ಟು ದೊರೆಯುವದಿಲ್ಲ.

ಧಂವೆ ಕೂಲಿಯವರಿಗೆ ಈ ವರ್ಷ ಬಹಳ ಅನುಕೂಲ. ಅವುಗಳ ವಿಸ್ತಾರ ಮತ್ತು ಲಾಭ ಅಪೇಕ್ಷೆಗಿಂತ ಹೆಚ್ಚು ಫಲದಾಯಕ. ನೋಕರರಿಗೆ ಪ್ರಮೋಶನ ದೊರೆಯುವದು. ಖಾತೆ ಬದಲಾಗುವದಿದ್ದರೆ ನಿಮ್ಮ ಮನಸ್ಸಿಗೆ ಬಂದ ಸ್ಥಳಕ್ಕೆ ವರ್ಗವಾಗುವದು. ಕೈಕೆಳಗಿನ ಜನರು ಪೂಜ್ಯಭಾವನೆಯಿಂದ ನಡೆಯುವರು, ವರಿಷ್ಠರು ಪ್ರೀತಿಯಿಂದ ನೋಡಿಕೊಳ್ಳುವರು. ಇತರ ಜನರಲ್ಲಿ ನಿಮ್ಮ ಕರ್ತವ್ಯನಿಷ್ಠೆಯ ಬಗ್ಗೆ ಗೌರವ. ಧಂದೆಯವರಿಗೆ ಪತ್ತು ಪ್ರತಿಷ್ಠೆ ಕಾಯ್ದುಕೊಳ್ಳುವ ಪ್ರಸಂಗ ಹೆಚ್ಚಿ ಬಂಡವಲು ಬೆಳೆದು ಧಂದೆ ಹಬ್ಬುವದು. ಪ್ರತಿಷ್ಠೆ ಹೆಚ್ಚುವದು. ಬಹಳ ರೀತಿಯಿಂದ ಭಾಗ್ಯೋದಯವಾಗುವದು. ನವಂಬರ ೨೧ರ ವರೆಗೆ ಅನಂತರ ಫೆಬ್ರುಅರಿ ೨ ರಿಂದ ಜುಲೈ ೩೧ರ ವರೆಗೆ ದ್ರವ್ಯಲಾಭ ತುಂಬ. ಧಂದೆಯವರಂತೆ ನೋಕರರಿಗೆ ಕೂಡ ಅಕಸ್ಮಾತ್ ಲಾಭದ ಯೋಗ ಖಾತ್ರಿಯಿಂದ ಇದೆ. ಉದ್ಯೋಗದಲ್ಲಿ ಎನ್ನಿರಿ, ನೋಕರಿಯಲ್ಲಿ ಎನ್ನಿರಿ ಕೆಲಸದ ದಗದಗಿ ಬಹಳ ಹೆಚ್ಚುವದು. ತಂದೆತಾಯಿಗಳ ಪ್ರಕೃತಿಗೆ ಬಹಳ ತೊಂದರೆ. ಕದಾಚಿತ್ ಅವರ ವಿಯೋಗದ ಸಂಭವವೂ ಇದೆ. ಸಮೀಪಕ್ಕಿಂತ ದೂರದ ಪ್ರವಾಸ ಹೆಚ್ಚು ಸುಖಕರವಾಗುವದು. ಯಾತ್ರೆ, ದೇವಧರ್ಮ, ಯಜ್ಞಯಾಗ ಮೊದಲಾದ ಧಾರ್ಮಿಕ ಕೃತ್ಯಗಳು ಬಹಳ. ಮಿತ್ರಸುಖ ಚೆನ್ನಾಗಿ ದೊರೆಯುವದು. ದಾವೆ ಖಟ್ಲೆ ಇಲ್ಲವೆ ಖಾಸಗಿ ಸ್ಪರ್ಧೆಯ ಕೆಲಸದಲ್ಲಿ ಪ್ರತಿಪಕ್ಷಿಯನ್ನು ಪೂರ್ಣ ಸೋಲಿಸುವಿರಿ. ಆದರೂ ಅವರು ಗುಪ್ತವಾಗಿ ಮೇಲಿಂದಮೇಲೆ ನಿಮ್ಮ ಮೇಲೆ ಹಲ್ಲೆಮಾಡಿ ನಿಮಗೆ ದೊರೆತ ವಿಜಯದ ಪೂರ್ಣ ಲಾಭ ನಿಮಗೆ ದೊರೆಯದಂತೆ ಮಾಡುವರು. ನವಂಬರ ೨೩ರ ವರೆಗೆ ಅನಂತರ ದಿಸೆಂಬರ ೧೦ ರಿಂದ ೨೯, ಮಾರ್ಚ ೫ರಿಂದ ೨೩, ಎಪ್ರಿಲ ೨೬ ರಿಂದ ಅಗಸ್ಟ ೨ ಈ ಅವಧಿ ಶತ್ರುನಾಶಕ್ಕೆ ಹೆಚ್ಚು ಅನುಕೂಲ.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಅವರಲ್ಲಿ ಅನೇಕರಿಗೆ ಬಹುಶಃ ಪುತ್ರ ಲಾಭದ ಯೋಗವಿದೆ. ದಿಸೆಂಬರ ೧೬ರಿಂದ ಜನೇವರಿ ೧೪, ಫೆಬ್ರುಅರಿ ೧೨ರಿಂದ ಮಾರ್ಚ ೧೩ ಮತ್ತು ಮೇ ೧೧ ರಿಂದ ಅಕ್ಟೋಬರ ೧೬ ಈ ಅವಧಿಯಲ್ಲಿ ಅತ್ಯಂತ ಸುಲಭ ಪ್ರಸೂತರಾಗುವರು. ಉಳಿದ ಅವಧಿಯಲ್ಲಿಯೂ ಅಷ್ಟೇನು ತೊಂದರೆಯೇನೂ ಇಲ್ಲ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಮಾರ್ಚ ೧೪ರ ವರೆಗೆ ಇಲ್ಲವೆ ಮೇ ೧೧ರಿಂದ ಅಕ್ಟೋಬರ ೧೬ರ ವರೆಗೆ ಆಗುವದಿದೆಯೋ ಅವರು ಖಾತ್ರಿಯಿಂದ ಯಶಸ್ವಿಯಾಗುವರು. ಆದರಲ್ಲಿಯೂ ಯಾರು ನವಂಬರ ೨೧ ರಿಂದ ಜನೆವರಿ ೭, ಮೇ ೨೦ರಿಂದ ಜುಲೈ ೩೦ರ ಅವಧಿಯಲ್ಲಿ ಪರೀಕ್ಷೆಗೆ ಕೂಡ್ರುವರೊ ಅವರು ಬಹುಶಃ ಮೇಲಿನ ವರ್ಗದಲ್ಲಿ ಕೂಡ ಪಾಸಾಗುವರು.

ವೃಷಭ

ಈ ವರ್ಷ ನಿಮಗೆ ಪ್ರಾಪಂಚಿಕ ವಿಷಯಗಳಲ್ಲಿ ದಗದಗಿಯಿದ್ದಷ್ಟು ಆರ್ಥಿಕ ಮತ್ತು ಔದ್ಯೋಗಿಕ ವಿಷಯಗಳಲ್ಲಿ ದಗದಗಿಯಿರುವದಿಲ್ಲೆಂಬುದು ನಿಶ್ಚಿತವೆಂದು ತಿಳಿಯಿರಿ.

ಈ ರಾಶಿಯವರ ಆರೋಗ್ಯ ಒಟ್ಟಾರೆ ಅನುಕೂಲವೆ. ಆದರೆ ಯಾವಾಗಾದರೊಮ್ಮೆ ಪಿತ್ತವಿಕಾರ, ರಕ್ತದ ಒತ್ತಡ, ಗಂಟಲನೋವು ಮೊದಲಾದವುಗಳಿಂದ ಪ್ರಕೃತಿ ಕೆಡುವ ಸಂಭವವಿದೆ. ಅಲ್ಲದೆ ಸ್ವಭಾವದಲ್ಲಿಯೂ ತರ್ಕಟತನ ಹೆಚ್ಚಿ ಶೀಘ್ರಕೋಪಿಗಳಾಗುವಿರಿ. ಆದರಿಂದ ಸ್ವತಃ ನಿಮಗೆ ಮತ್ತು ಎರಡನೆಯವರಿಗೂ ಮಾನಸಿಕ ಸ್ವಾಸ್ಥ್ಯ ಸಿಕ್ಕುವದಿಲ್ಲ. ಮಾರ್ಚ ೧೪ರ ವರೆಗೆ ಮತ್ತು ಮೇ ತಾ. ೧೧ ರಿಂದ ಅಕ್ಟೋಬರ ೧೬ರ ವರೆಗಿನ ಕಾಲದಲ್ಲಿ ಇದೆಲ್ಲ ಬಹಳ ಹೆಚ್ಚು.

ಉಳಿದ ವಿಷಯಗಳಲ್ಲಿಯೂ ದೇಹಸುಖಕ್ಕೆ ಈ ವರ್ಷ ಅಷ್ಟೊಂದು ಅನುಕೂಲವಿಲ್ಲ. ಮನೆಯಲ್ಲಿ ಒಂದಿಲ್ಲೊಂದು ಕಾರಣದಿಂದ ಎಲ್ಲರ ದುಸಮುಸಿ. ಅವರ ಮತ್ತು ನಿಮ್ಮ ವಿಚಾರ ತೀರ ಭಿನ್ನಭಿನ್ನ. ಅವರಲ್ಲಿ ಒಬ್ಬನು ಮನೆಯ ಯಾಜಮಾನ್ಯವನ್ನು ತಾನು ವಹಿಸಿಕೊಳ್ಳಬೇಕೆಂದು ಕಾರಸ್ಥಾನ ನಡೆಸುವನು. ಇದರಿಂದ ಪ್ರತಿಯೊಂದರಲ್ಲಿ ಇಮ್ಮಡಿ ವೆಚ್ಚವಾದರೂ ಅದು ಕೆಡುವ ಇಲ್ಲವೆ ವಿಪರೀತಕ್ಕಿಡುವ ಅಂಜಿಕೆ. ದ್ರವ್ಯದ ಕೊರತೆಗಾಗಿ ಇಲ್ಲವೆ, ನಿಮ್ಮ ನಿಮ್ಮಲ್ಲಿಯ ಮತಭೇದದಿಂದ ಯೋಜಿತ ಮಂಗಲ ಮತ್ತು ಧಾರ್ಮಿಕ ಕಾರ್ಯಗಳೂ ಸ್ಥಗಿತವಾಗುವವು. ಇಲ್ಲವೆ ಮುಂದಕ್ಕೆ ಹಾಕಲ್ಪಡುವವು. ನಿಮ್ಮ ಮಾತು ಯಾರಿಗೂ ಸೇರುವದಿಲ್ಲ. ಆದರೆ ಅಕ್ಟೋಬರ ೧೬ ರ ನಂತರ ಮಾತ್ರ ಪರಿಸ್ಥಿತಿ ಕ್ರಮಶಃ ಸುಧಾರಿಸುತ್ತ ಹೋಗುವದು.

ಇಡೀ ವರ್ಷ ಉಳಿಯುವ ೭ನೇ ಶನಿ ಮತ್ತು ರಾಹು ಈ ಎರಡು ಪಾಪಗ್ರಹಗಳ ಮೂಲಕ ಸ್ತ್ರೀಸುಖವೂ ನೆಟ್ಟಗೆ ಸಿಕ್ಕುವದಿಲ್ಲ. ಅವಳ ಪ್ರಕೃತಿ ಮೇಲಿಂದಮೇಲೆ ಕೆಡುವ ಸಂಭವವಿದೆ. ಆದರೆ ಪ್ರತ್ಯಕ್ಷ ರೋಗಕ್ಕಿಂತ ಅವಳು ಹೆಚ್ಚು ಡೋಂಗು ಮಾಡುವಳು. ಪರಸ್ಪರ ಪ್ರೇಮದಲ್ಲಿ ವ್ಯತ್ಯಯ ಬರದಿದ್ದರೂ ಅದು ಕಡಿಮೆಯಾಗಿದೆಂದು ಪ್ರತಿಯೊಬ್ಬರು ದೂರುತ್ತ ಕೂಡುವರು. ಕ್ಷುಲ್ಲಕ ಮಾತಿನಲ್ಲಿಯೂ ವಿತಂಡವಾದ ಹೆಚ್ಚುವದು. ಲಗ್ನವಾಗಿರದಿದ್ದರೆ ಮಾರ್ಚ ೧೪ರಿಂದ ಮೇ ೧೧ ರ ಅವಧಿಯಲ್ಲಿ ಮತ್ತು ಬಹಳ ಪ್ರಯತ್ನದಿಂದ ಆಗುವ ಸಂಭವವಿದೆ. ಉಳಿದ ಅವಧಿಯಲ್ಲಿ ಒದಗಿಬಂದಿದೆಂದೆನಿಸಿದರೂ ಆಯತ್ತ ಸಮಯದಲ್ಲಿ ಮುರಿಯುವದು. ಆದರೆ ವಧೂವರರು ಮಾತ್ರ ಪರಸ್ಪರ ಅನುರೂಪ ದೊರೆಯುವರು.

ನಿಮ್ಮ ಮಕ್ಕಳಲ್ಲಿ ಯಾರಾದಾದರೂ ಲಗ್ನಮಾಡ ಬಯಸಿದ್ದರೆ ಅದೂ ಒಮ್ಮೆಲೆ ಕೂಡಿ ಬರುವದಿಲ್ಲ ಪ್ರಥಮತಃ ಅಳಿಯು ಇಲ್ಲವೆ ಸೊಸೆ ಮನಸ್ಸಿಗೆ ಬರಲಿಕ್ಕೆ, ಮನಸ್ಸಿಗೆ ಬಂದರೆ ಮುಂದಿನದೆಲ್ಲ ಕೂಡಿ ಬರುವದಕ್ಕೆ ಬಹಳ ತೊಂದರೆ. ಆಯತ್ತಹೊತ್ತಿಗೆ ಏನೋ ವಿಘ್ನ ಬರುವದು. ಇಷ್ಟೆಲ್ಲ ಆಗಿಯೂ ಲಗ್ನವಾದರೆ ಅಳಿಯ ಇಲ್ಲವೆ ಸೊಸೆ ಮೊದಲು ಎಣಿಸಿದಷ್ಟು ಅನುರೂಪರಿಲ್ಲೆಂದು ಮನಸ್ಸು ವ್ಯಗ್ರವಾಗುವದು. ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಅನುಕೂಲವಿದ್ದರೂ ಅದಕ್ಕಾಗಿ ಮೊದಲು ಬಹಳಷ್ಟು ಹಣ ವೆಚ್ಚ ಮಾಡಬೇಕಾಗುವದು ಸ್ಥಾವರ ಆಸ್ತಿಯಲ್ಲಿಯೂ ನಿರುಪಾಯರಾಗಿಯೆ ಬಹಳ ಸುಧಾರಣೆಮಾಡಬೇಕಾಗುವದು. ಆದರೆ ಅವೆಲ್ಲ ಮನಸ್ಸಿನಂತೆ ಸುಧಾರಣೆಹೊಂದುವವು. ಆಶ್ರಿತರು ಇಲ್ಲವೆ ನೋಕರರು ಪ್ರಾಮಾಣಿಕರಾಗಿ ಆದರೆ ಕೆಲ ಮಟ್ಟಿಗೆ ದುರಭಿಮಾನಿಗಳಾಗಿ ನಡೆಯುವರು. ವಾಹನಗಳಿದ್ದರೂ ಆಯತ್ತ ಸಮಯದಲ್ಲಿ ಅವುಗಳ ಉಪಯೋಗ ಆಗಬೇಕಾಗುವಷ್ಟು ಆಗುವದಿಲ್ಲ. ಮೇ ೧೧ ರಿಂದ ಅಕ್ಟೋಬರ ೧೬ ರ ವರೆಗೆ ಆಪ್ತರಲ್ಲಿ ಕೆಲವರು ಉದ್ಧಟತನದಿಂದ ವರ್ತಿಸುವರು. ಮಿತ್ರರು ಕೂಡ ಈ ಅವಧಿಯಲ್ಲಿ ಸ್ವಲ್ಪ ದೂರದೂರವೆ. ಸ್ಥಾವರ ಆಸ್ತಿ ಪದರಿನಲ್ಲಿ ಬೀಳಬೇಕಾದರೆ ಬಹಳ ಪ್ರಯಾಸಪಡಬೇಕಾಗುವದು.

ಉದ್ಯೋಗ ಧಂದೆಯವರಿಗಿಂತ ಈ ವರ್ಷ ನೋಕರರಿಗೆ ಹೆಚ್ಚು ಅನುಕೂಲ. ಸಂಬಳ ಬಹಳ ಹೆಚ್ಚಾಗದಿದ್ದರೂ ಅಧಿಕಾರವಾದರೂ ಹೆಚ್ಚುವದು. ಎಪ್ರಿಲ ೪ ರಿಂದ ಮೇ ೨೦ ಇಲ್ಲವೆ ಜುಲೈ ೩೧ ರಿಂದ ಅಗಷ್ಟ ೨೦ ರ ಅವಧಿಯಲ್ಲಿ ಬಹಳ ಅನುಕೂಲ ಘಟನೆಗಳು ಸಂಭವಿಸುವವು. ಕೈಕೆಳಗಿನ ನೋಕರರು ಕೆಲಮಟ್ಟಿಗೆ ತೊಂದರೆಕೊಟ್ಟರೂ ವರಿಷ್ಠರು ಅದನ್ನು ಲೆಕ್ಕಿಸದೆ ಸ್ವಲ್ಪಾದರೂ ಹಿತ ಮಾಡುವರು. ವರ್ಗವಾಗುವ ಶಾಖೆಯಿದ್ದರೆ ಕೆಲಸ ಹೆಚ್ಚಿಗೆ ಬೀಳುವ ಆದರೆ ಇತರ ದೃಷ್ಟಿಯಿಂದ ಬಹಳ ಸುಖ ಸೌಕರ್ಯಗಳುಳ್ಳ ಸ್ಥಳಗಳಿಗೆ ವರ್ಗವಾಗುವದು. ಬಹಳ ದೂರದ ಸ್ಥಳಕ್ಕೂ ವರ್ಗವಾಗುವ ಸಂಭವವಿದೆ. ಸರ್ವಸಾಮಾನ್ಯ ಜನರಲ್ಲಿ ಮಾತ್ರ ನಿಮ್ಮ ಬಗ್ಗೆ ಸ್ವಲ್ಪ ತಪ್ಪು ತಿಳಿವಳಿಕೆಯಾಗುವದು.

ಧಂದೆಯವರಿಗೆ ಭಾಗ್ಯೋದಯ ಪ್ರತ್ಯಕ್ಷವಾಗಿ ಆಗುವ ಯೋಗ ಕಡಮೆ ಇದ್ದರೂ ಭಾವೀ ಹಿತಕ್ಕೆ ಪರಿಪೋಷಕವಾದ ಅನೇಕ ಸಂಗತಿಗಳು ನಿಶ್ಚಯವಾಗಿ ಸಂಭವಿಸುವವು. ಹಳಬರಿಗಿಂತ ಹೊಸಬರಿಂದ ಹೆಚ್ಚು ಹಿತ. ದ್ರವ್ಯಲಾಭ ಅಂದಾಜಿನಷ್ಟು ಆದರೂ ಸಕಾಲದಲ್ಲಿ ಆದು ಆಗದಿರುವದರಿಂದ ಹಣದ ಕೊರತೆ ಮೇಲಿಂದ ಮೇಲೆ ಎನಿಸುವದು. ಮತ್ತು ಆ ಕಾಲದ ಅವಶ್ಯಕತೆಯನ್ನು ಪೂರಯಿಸುವದಕ್ಕಾಗಿ ಸಾಲ ಮಾಡಬೇಕಾಗುವದು ಇಲ್ಲವೆ ಕೈಗಡ ತರಬೇಕಾಗುವದು. ಮಾರ್ಚ ೧೪ ರ ವರೆಗಿನಷ್ಟು ಯಾತಾಯಾತ ಮುಂದೆ ಆಗಲಿಕ್ಕಿಲ್ಲ. ನವಂಬರ ೨೪ ರವರೆಗೆ ಮತ್ತು ಮುಂದೆ ಡಿಸೆಂಬರ ೧೮ ರಿಂದ ಜನೆವರಿ ೧೧ ಮಾರ್ಚ ೨೯ ರಿಂದ ಎಪ್ರಿಲ ೨೯, ಜುಲೈ ೧ ರಿಂದ ಸಪ್ಟಂಬರ ೨೪ ಮತ್ತು ಅಕ್ಟೋಬರ ೨೫ ರ ಮುಂದಿನ ಅವಧಿ ಲಾಭಕ್ಕೆ ಬಹಳ ಅನುಕೂಲವಿದೆ. ಪತ್ತು ಮತ್ತು ಪ್ರತಿಷ್ಠೆಗೆ ಯಾವಾಗಲೂ ಅಂಜಿಕೆಯಿಲ್ಲ. ಆದರೆ ಲೋಕವದಂತಿ ಮಾತ್ರ ಒಂದೆರಡು ಸಲ ಸಂಶಯಾಸ್ಪದ ಹೊರಡುವದು. ಕೆಲ ಭಾನಗಡಿಯ ಲೇಖೀ ವ್ಯವಹಾರ ಇಲ್ಲವೆ ತೊಡಕಿನ ಪತ್ರವ್ಯವಹಾರ ನವಂಬರ ೨೩ರ ವರೆಗೆ, ಡಿಸೆಂಬರ ೧೧ರಿಂದ ೨೯, ಎಪ್ರಿಲ ೮ ರಿಂದ ೨೬, ಜುಲೈ ೧೭ ರಿಂದ ಅಗಷ್ಟ ೨ ಈ ಅವಧಿಯಲ್ಲಿ ಆಗುವ ಅಂಜಿಕೆ ಬಹಳವಿದೆ. ಅಕ್ಟೋಬರ ೧೬ ರ ನಂತರ ಯಾವದೊಂದು ಧಾರ್ಮಿಕ ಕೃತ್ಯ ಸಂಭವಿಸುವದು. ಎಷ್ಟೇ ಸಾಹಸಪಟ್ಟರೂ ಈ ವರ್ಷ ನಿಮ್ಮ ಕೈಯಲ್ಲಿ ನಾಲ್ಕು ದುಡ್ಡು ಉಳಿಯುವದು ಕಷ್ಟ.

ದಾನೆ, ಖಟ್ಲೆ ಮತ್ತು ಖಾಸಗಿ ಸ್ಪರ್ಧೆಗಳಲ್ಲಿ ತೀವ್ರ ಹೋರಾಟ ನಡೆಸಿದರೂ ತಿಲಮಾತ್ರ ಯಶ ಸಿಕ್ಕುವದೂ ಕಡಿಮೆ. ತದ್ವಿರುದ್ಧ ಮಾರ್ಚ ೧೪ರ ವರೆಗೆ, ಮುಂದೆ ಮೇ ೧೧ರಿಂದ ಅಕ್ಟೋಬರ ೧೬ರ ವರೆಗೆ ಪ್ರತಿಪಕ್ಷಿಗಳಿಂದ ಬಹಳ ತೊಂದರೆಯಾಗುವದು. ಎಲ್ಲಿ ಓಡಿಹೋಗಲಿ ಎನಿಸುವದು. ಆದುದರಿಂದ ಒಡಂಬಡಿಕೆಯ ಮಾರ್ಗ ಸ್ವೀಕರಿಸುವದು ಹಿತಪ್ರದವೆನಿಸುವದು.

ಈ ರಾಶಿಯ ಸ್ತ್ರೀಯರು ಪ್ರಸೂತರಾಗುವವರಿದ್ದರೆ ನವಂಬರ ೨೧ರ ವರೆಗೆ ಮತ್ತು ಮೇ ೨೦ ರಿಂದ ಅಕ್ಟೋಬರ ೧೯ರ ವರೆಗೆ ಅಲ್ಪಸ್ವಲ್ಪ ಕಷ್ಟದಿಂದಲೆ ಪ್ರಸವಹೊಂದುವರು. ಅನೇಕರಿಗೆ ಬಹುಶಃ ಹೆಣ್ಣು ಹುಟ್ಟುವದು. ಆಯುರ್ಬಲ ದೃಷ್ಟಿಯಿಂದ ಗಂಡಿಗಿಂತ ಹೆಣ್ಣು ಹುಟ್ಟುವದೇ ಲೇಸು ಎಂದೆನಿಸುವದು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಮಾರ್ಚ ೧೪ ರಿಂದ ಮೇ ೧೧ ಇಲ್ಲವೆ ಅಕ್ಟೋಬರ೧೬ರ ನಂತರ ಆಗುವದಿದೆಯೊ ಅವರು ಯಶಸ್ವಿಯಾಗುವರೆಂದು ಖಾತ್ರಿಯಿಂದ ಹೇಳಬಹುದು. ಆದರೆ ಮೇಲಿನ ವರ್ಗದ ಆಸೆಯನ್ನು ಅವರು ಹಿಡಿಯತಕ್ಕದ್ದಲ್ಲ.

ಮಿಥುನ

ಒಟ್ಟಾರೆ ನಿಮಗೆ ಈ ವರ್ಷ ಮಾನಸಿಕ ಸುಖಕ್ಕಿಂತ ಶಾರೀರಿಕ, ಪ್ರಾಪಂಚಿಕ ಮತ್ತು ಆರ್ಥಿಕ ಸುಖ ಚೆನ್ನಾಗಿ ದೊರೆತು ಪ್ರಗತಿ ಪಥದಲ್ಲಿ ನೀವು ಸಾಗುವಿರೆಂಬುದು ನಿಶ್ಚಯವೆಂದು ತಿಳಿದುಕೊಳ್ಳಿರಿ.

ಈ ರಾಶಿಯವರ ಆರೋಗ್ಯ ಉತ್ತಮವೇ ಉಳಿಯುವದು. ಆದರೆ ನವಂಬರ ೩ರಿಂದ ಡಿಸೆಂಬರ ೧೦, ಡಿಸೆಂಬರ ೨೯ ರಿಂದ ಮಾರ್ಚ ೫, ಎಪ್ರಿಲ ೨೬ ರಿಂದ ಜೂನ ೩೦ ಈ ಅವಧಿಯಲ್ಲಿ ಅದು ಸ್ವಲ್ಪ ಕೆಡುವ ಸಂಭವವಿದೆ. ತಲೆನೋವು, ಥಂಡಿ, ಮಳಮಳ ಅನಿಸುವದು ಮೊದಲಾದ ಕಿರಕುಳ

ಉಪದ್ರವನಾಗುವದು ಇಷ್ಟೆ.

ಉಳಿದ ವಿಷಯುಗಳಲ್ಲಿ ದೇಹಸುಖ ಅನುಕೂಲ ಆದರೆ ಮನೆಯುವರಿಗಿಂತ ಹೊರಗಿನ ಆಪ್ತರು ಇಲ್ಲವೆ ನೆರೆಯುವರು ಹೆಚ್ಚು ಪ್ರೀತಿಯಿಂದ ನಡೆದು ಕೊಳ್ಳುವರು. ಮನೆಯಲ್ಲಿ ಕೆಲ ಸುಧಾರಣೆಗಳಿಗಾಗಿ ಇಲ್ಲವೆ ಅಚ್ಚುಕಟ್ಟಗಾಗಿ ಅನೇಕ ಸಲ ಮತಭೇದವಾಗುವದು. ಆದರೆ ಕೊನೆಗೆ ಎಲ್ಲರೂ ನಿಮಗೆ ಮರ್ಯಾದೆ ಕೊಡುವರು. ಮನೆಯ ಇಲ್ಲವೆ ಆಸ್ತಿಯ ದುರಸ್ತಿಗಾಗಿ ಬಹಳ ವೆಚ್ಚ ಮಾಡಲಾಗುವದು ಇಲ್ಲವೆ ಹಾಗೆ ಮಾಡಬೇಕಾದ ಪ್ರಸಂಗ ಬರುವದು. ಮೊದಲು ನಿಮ್ಮ ಹೇಳಿಕೆ ಅವರಿಗೆ ಒಪ್ಪಿಗೆಯಾಗದಿದ್ದರೂ ವಿಚಾರಾಂತ್ಯದಲ್ಲಿ ಅದು ಬಹಳಮಟ್ಟಗೆ ಸರಿಯೆನಿಸುವದು. ಆದರೆ ಕೆಲಸಲ ನಿಮ್ಮ ಮಾತೇ ಅಸಹ್ಯವೆನಿಸುವಷ್ಟು ಮರ್ಮಭೇದಕವಿರುವದು.

ಸ್ತ್ರೀಸುಖಕ್ಕಾದರೂ ಈ ವರ್ಷ ಬಹಳ ಅನುಕೂಲ ಅವಳ ಆರೋಗ್ಯ ಅಕ್ಟೋಬರ ೧೬ರ ವರೆಗೆ ಬಹಳ ಉತ್ತಮವುಳಿಯುವದು. ಉಭಯತರಲ್ಲಿ ಬಹಳ ಮತ್ತೈಕ್ಯ ಮತ್ತು ಏಕನಿಷ್ಠ ಪ್ರೇಮ ನಲಿದಾಡುವದು. ಸಹವಾಸದಲ್ಲಿಯೂ ೧೫ ದಿನಗಳಿಗಿಂತ ಹೆಚ್ಚಿಗೆ ಅಂತರ ಬೀಳುವದಿಲ್ಲ. ನಿಮ್ಮ ಮದುವೆ ಇನ್ನೂ ಆಗಿರದಿದ್ದರೆ ಅದು ಬಹುಶಃ ಆಗುವದು ಮತ್ತು ವಧೂವರರು ಪರಸ್ಪರ ಗುಣರೂಪಗಳಲ್ಲಿ ಒಳ್ಳೆ ಅನುರೂಪ ಇರುವರು. ವಿವಾಹ ಒಮ್ಮೆಲೇ ಗೊತ್ತಾಗಿ ಅಲ್ಪಾವಧಿಯಲ್ಲಿಯೇ ಸಾಂಗವಾಗುವದು. ವರನಿಗೆ ವರದಕ್ಷಿಣೆಯೆನ್ನಿರಿ, ವಧುವಿಗೆ ವಸ್ತ್ರಾಲಂಕಾರ ಮೊದಲಾದ್ದೆನ್ನಿರಿ ಅಪೇಕ್ಷೆಗಿಂತ ಹೆಚ್ಚಿಗೆ ದೊರೆಯುವವು.

ನಿಮ್ಮ ಮಕ್ಕಳ ಮದುವೆಯಾಗುವದಿದ್ದರೆ ಅದು ಮಾತ್ರ ಆಗುವ ಸಂಭವ ಬಹಳ ಕಡಮೆ. ವರ ಇಲ್ಲವೆ ವಧು ಹುಡುಕುವದು ಬಹಳ ಜೋರಿನಿಂದ ನಡೆಯುವದೆನ್ನಿರಿ. ಆದರೆ ಮೊದಲು ಮನಸ್ಸಿಗೆ ಬರಲು, ಮನಸ್ಸಿಗೆ ಬಂದ ನಂತರ ಕೊಡತಕ್ಕೊಳ್ಳುವ ಯಾದಿ ತಯಾರಾಗಲು ಅದೂ ಆದರೆ ಮುಂದೆ ಮುಹೂರ್ತ ಸಿಕ್ಕಲಿಕ್ಕೆ ಹದಿನೆಂಟು ಅಡಚಣೆಗಳು ಬರುವವು. ಒಂದು ವೇಳೆ ಲಗ್ನ ಆದದ್ದೆ ಆದರೆ ಅಲ್ಪ ಕಾರಣಗಳಿಗಾಗಿ ಉಭಯ ಪಕ್ಷಗಳಲ್ಲಿ ಹೆಚ್ಚು ಬಡೆದಾಟವಾಗುವದು. ಅಳಿಯ ಇಲ್ಲವೆ ಸೊಸೆ ಮನಸ್ಸಿಗೆ ಬಂದಿರುವರೆಂದೆನಿಸಿದರೂ ಮುಂದೆ ಅವರ ವರ್ತನೆ ಸ್ವಲ್ಪ ಒಗ್ಗುವದಿಲ್ಲ. ಮನೆಯಲ್ಲಿ ನೋಕರರು, ಆಳುಗಳು ಮತ್ತು ಉಳಿದ ಆಶ್ರಿತರು ವಿಶ್ವಾಸದಿಂದ ಮತ್ತು ಆದರದಿಂದ ನಡೆಯುವರು ನಿಜ. ಆದರೆ ಅವರಲ್ಲಿಯ ಕೆಲವರು ತಮ್ಮ ದೈವಕ್ಕನುಸಾರವಾಗಿ ಪ್ರಾಪಂಚಿಕ ಆಪತ್ತಿಯಲ್ಲಿ ಬರುವದರಿಂದ ನಿರುಪಾಯರಾಗಿ ತಮ್ಮ ಕೆಲಸಕ್ಕೆ ಬರುವದಿಲ್ಲ. ವಾಹನಗಳಿದ್ದರೆ ಅವುಗಳ ಸೌಖ್ಯ ಮನಸ್ಸಿಗೆ ಬೇಕಾದಷ್ಟು ಸಿಕ್ಕುವದು ಆದರೆ ಒಮ್ಮೆ ಅದರಿಂದ ಅಪಘಾತದ ಅಂಜಿಕೆಯೂ ಇದೆ. ಆಪ್ತರು ಎಷ್ಟೊಂದು ಪ್ರೇಮದಿಂದ ವರ್ತಿಸುವರೊ ಮಿತ್ರರು ಮಾತ್ರ ಅಷ್ಟೊಂದು ಪ್ರೇಮದಿಂದ ನಡೆಯುವದಿಲ್ಲ. ಸ್ತ್ರೀ ಸುಖ ಉತ್ತಮ. ಪರ ಸ್ತ್ರೀ ಬಗ್ಗೆ ಕುವಿಚಾರ ಮನಸ್ಸಿನಲ್ಲಿ ಹೊಯ್ದಾಡುವದು.

ಈ ವರ್ಷ ಹೊಸದಾಗಿ ಸ್ಥಾವರ ಜಂಗಮ ಸಂಗ್ರಹವನ್ನು ಬಹಳಷ್ಟು ಮಾಡುವಿರಿ. ಆದರೆ ಆದರಿಂದ ಮುಂದೆ ಎಷ್ಟು ಉತ್ಪನ್ನ ಬರುವದೆಂಬದನ್ನೂ ಲಕ್ಷ್ಯಕ್ಕೆ ತಂದುಕೊಳ್ಳುವ ತಾರತಮ್ಯ ಉಳಿಯುದ್ದರಿಂದ ಬಹಳ ತಪ್ಪುಮಾಡಿದಂತೆ ಎನಿಸುವದು. ಮನೆತನದ ಲೌಕಿಕವನ್ನು ಕಾಯ್ದುಕೊಳ್ಳುವ ಈರ್ಷೆಗಾಗಿ ಅಲ್ಪ ಬೆಲೆಯ ಸ್ಥಾವರ ಜಂಗಮ ಆಸ್ತಿಯನ್ನು ಹೆಚ್ಚು ಬೆಲೆ ಕೊಟ್ಟುಕೊಳ್ಳುವದೇ ಮೊದಲಾದ ಹುಚ್ಚು ವ್ಯವಹಾರ ನವಂಬರ ೨೩ ರಿಂದ ದಿಸೆಂಬರ ೧೦, ಮಾರ್ಚ ೨೩ ರಿಂದ ಎಪ್ರಿಲ ೮ ಮತ್ತು ಅಗಸ್ಟ ೨ ರಿಂದ ೨೧ ರ ಮಧ್ಯಂತರದಲ್ಲಿ ಸಂಭವಿಸುವದು.

ನೋಕರರಿಗೆ ಕೂಲಿಯುವರಿಗೆ ಈ ವರ್ಷ ಮೊದಲು ದಗದಗಿ ಮತ್ತು ಮನೋಭಂಗ ಮಾಡುವಂತಹದೆಂದೆನಿಸಿದರೂ ವರ್ಷತುಂಬ ಇರುವ ಆರನೇ ಶನಿ ಮತ್ತು ರಾಹುವಿನಿಂದ ಕೊನೆಗೆ ಬಯುಸಿದಷ್ಟು ಲಾಭ ಮತ್ತು ಯಶಸ್ಸು ದೊರೆಯುವದು. ಚಮತ್ಕಾರಿಕ ವೃತ್ತಿಯ ಜನರೊಡನೆ ಉದ್ಯೋಗಸ್ಥರು ಪತ್ರವ್ಯವಹಾರ ಮಾಡಬೇಕಾದ ಪ್ರಸಂಗ ಬರುವದು. ಅವರ ಮರ್ಜಿ ಹಿಡಿದು ಸಾಕುಬೇಕಾಗಿ ಹೋಗುವದು. ಅನೇಕ ಸಲ ಈ ಸಂಬಂಧವನ್ನು ಕಡಿದುಕೊಂಡು ಬಿಡುವಾ ಎನಿಸುವದು. ಆದರೆ ಕೊನೆಯಲ್ಲಿ ನಿಶ್ಚಯುವಾಗಿ ಯಶಸ್ಸು ಮತ್ತು ಲಾಭ ಸಿಕ್ಕುವ ಮೋಹದಿಂದ ಮೂಗು ತಿಕ್ಕುತ್ತ ಕೂಡ್ರಬೇಕಾಗುವದು. ಉದ್ಯೋಗದಲ್ಲಿ ಒಂದೆರಡು ಶಾಖೆಗಳನ್ನು ತೆರೆದರೆ ಯಶಸ್ವಿಯಾಗುವಿರಿ. ಸಂಚಾರಿ ಉದ್ಯೋಗಸ್ಥರಿಗೆ ಹೆಚ್ಚು ಲಾಭ. ಪ್ರತ್ಯಕ್ಷ ದ್ರವ್ಯ ಲಾಭಕ್ಕೆ ಜನೆವರಿ ೭ ರ ವರೆಗೆ, ಫೆಬ್ರುಆರಿ ೨೦ ರಿಂದ ಎಪ್ರಿಲ ೪ ವರೆಗೆ ಮತ್ತು ಮೇ ೨೦ ರ ನಂತರದ ಎಲ್ಲ ಅವಧಿ ಅತ್ಯಂತ ಉತ್ತಮ. ಸಾಮಾಜಿಕ ಪ್ರತಿಷ್ಠೆ ಮೊದಲಿಗಿಂತ ಇಮ್ಮಡಿ ಮುಮ್ಮಡಿ ಹೆಚ್ಚುವ ಕಾರ್ಯಗಳು ದಿಸೆಂಬರ ೧೬ ರಿಂದ ಜನೆವರಿ ೧೪, ಫೆಬ್ರುಆರಿ ೧೨ ರಿಂದ ಮಾರ್ಚ ೧೩, ಎಪ್ರಿಲ ೧೩ ರಿಂದ ಮೇ ೧೪, ಜೂನ ೧೪ ರಿಂದ ಸಪ್ಟಂಬರ ೧೬ ರ ವರೆಗೆ ಮೇಲಿಂದಮೇಲೆ ಸಂಭವಿಸುವವು.

ನೋಕರರಿಗೂ ೬ ನೇ ಶನಿ ರಾಹುಗಳು ಹೆಚ್ಚು ತಾರಕ. ನಿಮ್ಮ ವರಿಷ್ಠರು ನಿಮ್ಮನ್ನು ಶಿಫಾರಸು ಮಾಡುವರು. ಈ ವರ್ಷ ನಿಮ್ಮ ಬದಲಿ ಆಗುವ ಸಂಭವ ಬಹಳ ಕಡಮೆ. ಆದರೆ ಬಹಳ ಪ್ರಯತ್ನ ಮಾಡಿದರೆ ಮಾರ್ಚ ೧೪ರಿಂದ ಮೇ ೧೧, ಅಕ್ಟೋಬರ ೧೬ರ ನಂತರದ ಅವಧಿಯಲ್ಲಿ ಆಗುವದು. ಆದರೆ ಸುಖಸೌಕರ್ಯ ದೃಷ್ಟಿಯಿಂದ ಆ ಸ್ಥಳ ಅಷ್ಟೊಂದು ಅನುಕೂಲವಿಲ್ಲ. ಅನೇಕರಿಗೆ ಮೇಲಿನ ಗ್ರೇಡು ಸಿಕ್ಕುವದು. ಕೈಕೆಳಗಿನವರು ನಿಮ್ಮ ಬದನಾಮಿ ಮಾಡುವ ಪ್ರಯತ್ನ ಬಹಳ ಮಾಡುವರು. ಆದರೆ ಕೊನೆಗೆ ಅದರಲ್ಲಿ ಅವರ ದಂತಭಂಗವೇ ಆಗುವದು. ಒಟ್ಟಿಗೆ ಈ ರಾಶಿಯ ಜನರಿಗೆ ಈ ವರ್ಷ ಬಹಳ ಲಾಭ. ದೂರದ ಪ್ರವಾಸ ಬಹಳ ಆಗಲಾರದು. ಆದರೆ ಸಮೀಪದ ಸ್ಥಳಗಳಿಗೆ ಮಾತ್ರ ಬೇಸರಿಕೆ ಬರುವಷ್ಟು ಹೋಗಬೇಕಾಗುವದು. ಪ್ರವಾಸದಲ್ಲಿ ಗಡಿಯಾರ, ಫೌಂಟನಪೆನ್ನ, ಕನ್ನಡಕ ಇಂಥ ಯಾವದೊಂದು ನಿತ್ಯೋಪಯೋಗಿ ವಸ್ತು ಕಳೆಯುವ ಇಲ್ಲವೆ ಕಳವಾಗಿ ಹೋಗುವ ಅಂಜಿಕೆ ಬಹಳ. ದೇವರು ಧರ್ಮದಲ್ಲಿ ದೃಢ ಶ್ರದ್ಧೆಯಿಲ್ಲದಿದ್ದರೂ ಪ್ರಸಿದ್ಧಿಗಾಗಿ ಕೈಸಡಿಲುಬಿಟ್ಟು ದಾನ ಮಾಡುವಿರಿ. ಕೆಲ ಮಿತ್ರರೊಡನೆ ದ್ವೇಷ ಸಂಭವಿಸಿದರೂ ಕೆಲವರೊಡನೆ ಹೊಸ ಮಿತ್ರತ್ವವೂ ಆಗುವದು. ಪ್ರೇಮವೂ ಕೂಡುವದು.

ದಾವೆ ಖಟಲೆ ಖಾಸಗಿ ಸ್ಪರ್ಧೆಗಳಲ್ಲಿ ಅಂದಾಜಿಗಿಂತ ಹೆಚ್ಚು ಯಶಸ್ಸುದೊರೆಯುವದು. ಶತ್ರುವು ಹುಲ್ಲುಕಡ್ಡಿಗೆ ಸಮಾನ ಎಣಿಸಲ್ಪಡುವನು. ಆದರೆ ಸ್ತ್ರೀ ಶತ್ರುವಿದ್ದರೆ ಅವಳು ಬಹಳ ತೊಂದರೆ ಕೊಡುವಳು. ಮತ್ತು ಜನತೆಯಲ್ಲಿ ಇಲ್ಲದ ಸಲ್ಲದ ಅಪವಾದ ಹೊರಿಸುವಳು. ಶತ್ರುವಿನ ಮೇಲೆ ಯಶಸ್ಸಂಪಾದನೆಗಾಗಿ ಜನೆವರಿ ೭ರಿಂದ ಫೆಬ್ರುವರಿ ೨೦, ಎಪ್ರಿಲ ೪ರಿಂದ ಮೇ ೨೦ ಮತ್ತು ಜುಲೈ ೩೧ ರಿಂದ ಅಗಸ್ಟ ೨೦ರ ಅವಧಿ ಹೆಚ್ಚು ಅನುಕೂಲ.

ಈ ರಾಶಿಯ ಸ್ತ್ರೀಯರು ಮಾರ್ಚ ೧೪ ಕ್ಕೆ ಮೊದಲು ಇಲ್ಲವೆ ಮೇ ೧೧ ರಿಂದ ಅಕ್ಟೋಬರ ೧೬ರೊಳಗೆ ಹಡೆದರೆ ಪ್ರಸೂತಿ ಸುಲಭವಾಗುವದು. ಉಳಿದ ವೇಳೆಯಲ್ಲಿ ಅಷ್ಟು ಸುಲಭವಾಗದಿದ್ದರೂ ಗಂಡಾಂತರದ ಅಂಜಿಕೆಯಿಲ್ಲ. ಬಹುಶಃ ಅನೇಕರಿಗೆ ಸುಂದರ ಹೆಣ್ಣು ಕೂಸುಗಳು ಹುಟ್ಟುವವು.

ನವಂಬರ ೨೪ ರಿಂದ ದಿಸೆಂಬರ ೧೮, ಜನೆವರಿ ೧೧ರಿಂದ ಫೆಬ್ರುಅರಿ ೫, ಮಾರ್ಚ ೩ ರಿಂದ ೨೯, ಜುಲೈ ೨೧ ರಿಂದ ಸಪ್ಟೆಂಬರ ೧ ಮತ್ತು ಸಪ್ಟೆಂಬರ ೨೮ ರಿಂದ ಅಕ್ಟೋಬರ ೨೫ರ ಅವಧಿಯಲ್ಲಿ ಪರೀಕ್ಷೆಯಾದ ವಿದ್ಯಾರ್ಥಿಗಳು ನಿಶ್ಚಯವಾಗಿ ಯಶಸ್ವಿಯಾಗುವರು.

ಕರ್ಕ

ಒಟ್ಟಾರೆ ಈ ವರ್ಷ ನಿಮಗೆ ಆರ್ಥಿಕ ದೃಷ್ಟಿಯಿಂದಲೆ ಹೆಚ್ಚು ಸುಖ ಸಿಕ್ಕುವದು. ಉಳಿದ ವಿಷಯಗಳಲ್ಲಿ ಅಷ್ಟೊಂದು ಸುಖ ಸಿಕ್ಕುವದಿಲ್ಲ.

ಈ ರಾಶಿಯುವರ ಆರೋಗ್ಯ ಅಷ್ಟೊಂದು ಚೆನ್ನಾಗಿ ಉಳಿಯುವ ಯೋಗವಿಲ್ಲದಿದ್ದರೂ ಹಾಸಿಗೆಯ ಮೇಲೆ ಬೀಳುವ ಪ್ರಸಂಗವೇನು ಬರುವದಿಲ್ಲ. ಅಪಚನ, ಆಮ್ಲಪಿತ್ತ, ಹೊಟ್ಟೆಯಲ್ಲಿ ಗ್ಯಾಸು ಹಿಡಿಯುವದು ಮತ್ತು ಬದ್ಧಕೋಷ್ಠತ್ವ ಮೊದಲಾದ ವಿಕಾರಗಳು ಯಾವಾಗಾದರೊಮ್ಮೆ ತೊಂದರೆಕೊಡುವವು. ಮಾರ್ಚ ೧೪ ರ ವರೆಗೆ ಮತ್ತು ಮೇ ೧೧ ರಿಂದ ಅಕ್ಟೋಬರ ೧೬ ರ ವರೆಗೆ ಈ ವಿಕಾರದ ಅಂಜಿಕೆ ಹೆಚ್ಚು.

ಉಳಿದ ವಿಷಯಗಳಲ್ಲಿ ದೇಹಸುಖಕ್ಕೆ ಈ ವರ್ಷ ಮೇಲೆ ಮೇಲೆ ನೋಡಲಿಕ್ಕೆ ಉತ್ತಮವಿದ್ದರೂ ಮಾನಸಿಕ ದೃಷ್ಟಿಯಿಂದ ಅಷ್ಟೊಂದು ಅನುಕೂಲವಿಲ್ಲ. ಆಯುಷ್ಯದಲ್ಲಿ ಗತಿಸಿದ ಕಾಲದ ಸಿಂಹಾವಲೋಕನವನ್ನು ಮೇಲಿಂದ ಮೇಲೆ ಮಾಡುವ ಚಟಬೀಳುವದು. ಈ ವರೆಗೆ ಸ್ವ ಇಲ್ಲವೆ ಪರಹಿತದ ಸಾಕಷ್ಟು ಕಾರ್ಯಗಳನ್ನೇನೂ ಮಾಡಿರುವದಿಲ್ಲ. ಮನಸ್ಸಿನಲ್ಲಿನ ಉದ್ದೇಶಗಳು ಬಹಳಷ್ಟು ಅಸಾಧ್ಯವಾಗಿವೆಂಬ ತರ್ಕವಿತರ್ಕ ಮೊದಲಾದವುಗಳಿಂದ ಮನಸ್ಸು ಬಹಳ ಉದಾಸೀನಹೊಂದುವದು. ಆದರೂ ಮನೆಯಲ್ಲಿ ಮತ್ತೈಕ್ಯ. ನಿಮ್ಮ ಪ್ರಭುತ್ವ ಮತ್ತು ಕೌಟುಂಬಿಕ ಉತ್ಕರ್ಷ ಹೆಚ್ಚುವದು. ಪ್ರಿಯಜನರ ಸಹವಾಸ ಮೇಲಿಂದ ಮೇಲೆ. ನಿಮ್ಮ ನೇತೃತ್ವದಲ್ಲಿ ನಿಮ್ಮ ಸಮೀಪದ ಆಪ್ತರಲ್ಲಿ ಕೆಲವು ಮಂಗಲಕಾರ್ಯಗಳು ಸಂಭವಿಸುವವು. ಆಪ್ತರೆಲ್ಲ ಒಳ್ಳೆ ಪ್ರೇಮದಿಂದ ವರ್ತಿಸುವರು ಮತ್ತು ಸ್ವಲ್ಪ ಹಣದಲ್ಲಿಯೆ ಸ್ಥಾವರದಲ್ಲಿ ಮಹತ್ವದ ಸುಖಸೌಕರ್ಯಗಳ ಕಾರ್ಯ ಅನಾಯಾಸವಾಗಿ ಸಾಧ್ಯವಾಗುವದು. ಆದರೆ ಒಬ್ಬ ಯಃಕಶ್ಚಿತ ಮನುಷ್ಯ ನಿಮ್ಮ ಮೇಲೆ ಗುಪ್ತರೀತಿಯಿಂದ ಇಲ್ಲವೆ ಪ್ರತ್ಯಕ್ಷವಾಗಿ ಅಪಮಾನಾಸ್ಪದ ಮಾತಿನ ಆರೋಪ ಹೊರಿಸುವನು. ಇದಕ್ಕಾಗಿ ನಿಮಗೊಂದು ಬಗೆಯ ಹೃದ್ರೋಗ ಹಿಡಿಯುವ ಅಂಜಿಕೆ ಇದೆ. ನವಂಬರ ೨೪ ರಿಂದ ದಿಸೆಂಬರ ೧೮, ಜನೇವರಿ ೧೧ ರಿಂದ ಫೆಬ್ರುಅರಿ ೫, ಎಪ್ರಿಲ ೨೯ ರಿಂದ ಜುಲೈ ೧, ಜುಲೈ ೨೧ ರಿಂದ ಸಪ್ಟಂಬರ ೧ರವರೆಗೆ ಈ ಬಗೆಯ ಭೀತಿ ಹೆಚ್ಚು. ಈ ವರ್ಷ ಪಂಚಮ ಉರ್ಫ ಬುದ್ಧಿಸ್ಥಾನದಲ್ಲಿ ಅಥವಾ ೫ ನೇ ಶನಿ ಮತ್ತು ರಾಹುವಿನ ಪರಿಣಾಮವಾಗಿ ಮನಸ್ಸು ಅರ್ಥಾತ್ ಬುದ್ಧಿಯ ಸ್ವಾಸ್ಥ್ಯ ವುಳಿಯುವದಿಲ್ಲ.

ಸ್ತ್ರೀಸುಖ ಅನುಕೂಲ. ಮೊದಲಿಗಿಂತ ಅವಳಲ್ಲಿ ಪ್ರೇಮ ಹೆಚ್ಚುವದು. ಈ ವರ್ಷ ಬಹಳ ದಿನಗಳಿಂದ ಇರುವ ದ್ವಿತೀಯ ಅರ್ಥಾತ್ ಕುಟುಂಬ ಸ್ಥಾನದಲ್ಲಿಯ ಗುರು ಅವಳ ಪ್ರತಿಯೊಂದು ಇಚ್ಛೆಯನ್ನು ಪೂರ್ಣಗೊಳಿಸುವಂತೆ ನಿಮ್ಮ ಸ್ವಭಾವವನ್ನು ಮಾರ್ಪಡಿಸುವನು. ಹಲವು ಸಲ ಅವಳ ಆಗ್ರಹದ ಬಗ್ಗೆಯೂ ಕೌತುಕವನ್ನು ವ್ಯಕ್ತಪಡಿಸುವಿರಿ. ಒಟ್ಟಾರೆ ಹೇಳಬೇಕಾದರೆ ಹೆಚ್ಚಾಗಿ ಹೆಂಡತಿಯ ಕೈಗೊಂಬೆಗಳಾಗುವಿರಿ. ಆದರೆ ನಿಮ್ಮ ಮದುವೆ ಇನ್ನೂ ಆಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ೨ನೇ ಗುರು ಇದ್ದರೂ ಮದುವೆ ಒದಗಿ ಬರುವ ಸಂಭವವಿಲ್ಲ. ಬಾಸಿಂಗಬಲ ಬಹಳ ತೀವ್ರವಾಗಿದ್ದರೆ ಮಾರ್ಚ ೧೪ ರಿಂದ ಮೇ ೧೧ ರ ಅವಧಿಯಲ್ಲಿ ಆದರೆ ಆಗಬಹುದು. ವರನಿಗಿಂತ ವಧು ಎಲ್ಲ ವಿಷಯಗಳಲ್ಲಿ ಒಂದು ಕೈ ಮೇಲು. ವಧೂವರರಲ್ಲಿ ಬಹಳ ಪ್ರೀತಿ.

ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಮೇ ೧೧ರ ವರೆಗೆ ಬಹಳ ಮಾಡಿ ಆಗಬಹುದು. ಅದು ಅನಾಯಾಸವಾಗಿ ಕೂಡಿಬಂದು ಪ್ರತ್ಯಕ್ಷ ಸಾಂಗವಾಗಿಯೇ ಹೋಗುವದು. ಅಳಿಯ ಇಲ್ಲವೆ ಸೊಸೆ ಮೊದಲಿನ ಪರಿಚಯದವರೇ ಇರುವ ಸಂಭವ. ಸುಂದರ ಮತ್ತು ಸುಸ್ವಭಾವದವರು ಇರುವರು. ಬೀಗರು ಮನಸ್ಸಿಗೆ ಒಗ್ಗುವ, ಪ್ರತಿಷ್ಠಿತ ಇರುವರು. ಆದರೆ ಅವರ ಕೈ ಮಾತ್ರ ಸ್ವಲ್ಪ ಬಿಗು. ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಅನುಕೂಲವಿಲ್ಲ. ಕೆಲವರಿಗಂತು ಬಹಳ ಕಠಿನ ಕ್ಲೇಶವಾಗುವ ಸಂಭವವಿದೆ. ಜನೆವರಿ ೭ ರಿಂದ ಫೆಬ್ರುಅರಿ ೨೦, ಮೇ ೨೦ರ ನಂತರದ ಕಾಲ ವಿಶೇಷತಃ ಅಗಸ್ಟ ೨೭ರಿಂದ ಅಕ್ಟೋಬರ ೧೯ರ ವರೆಗೆ ಹೆಚ್ಚು ಅಂಜಿಕೆಯಿದೆ. ಮನೆಯಲ್ಲಿ ನೋಕರ ಚಾಕರರು ವಿಶ್ವಾಸದಿಂದ ಮತ್ತು ಪ್ರೀತಿಯಿಂದ ನಡೆಯುವರು. ವಾಹನಗಳಿದ್ದರೆ ಅವುಗಳ ಸುಖ ಚೆನ್ನಾಗಿ ಸಿಕ್ಕುವದು. ಹಳೆ ವಾಹನಗಳಿದ್ದರೆ ಮುರಿಯುವದಿಲ್ಲ. ತೊಂದರೆಯನ್ನು ಕೊಡುವದಿಲ್ಲ. ಉಪಯೋಗಕ್ಕೆ ಅನುಕೂಲವಾಗುವದು. ನೆರೆಯುವರು ಮಾತ್ರ ಸ್ವಲ್ಪ ಅಸೂಯೆಯಿಂದ ವರ್ತಿಸುವರು. ಹೊಲ ತೋಟಪಟ್ಟಿಯ ಉತ್ಪನ್ನ ವ್ಯವಸ್ಥಿತ ಸಿಗುವದು. ಮನೆ ಬಾಡಿಗೆ ಕೊಟ್ಟಿದ್ದರೆ ಬಾಡಗಿ ವಸೂಲಿಗೆ ಬಹಳ ಪ್ರಯಾಸಪಡಬೇಕಾಗುವದು.

ಧಂದೆ ಕೂಲಿಯುವರ ದೃಷ್ಟಿಯಿಂದ ಈ ವರ್ಷ ಹೆಚ್ಚು ಲಾಭದಾಯಕ. ಪತ್ತು ಮತ್ತು ಪ್ರತಿಷ್ಠೆ ಉಳಿಸಿಕೊಳ್ಳಲು ಮೊದಲು ಎರಡು ಮೂರು ತಿಂಗಳು ಸ್ವಲ್ಪ ತೊಂದರೆಯಾದರೂ ಮುಂದೆ ಯೋಗ್ಯ ಸಮಯದಲ್ಲಿ ತುಂಬ ಲಾಭವಾಗುವದು. ಮಾರ್ಚ ೧೪ ರಿಂದ ಮೇ ೧೧ ಮತ್ತು ಅಕ್ಟೋಬರ ೧೬ರ ನಂತರದ ಅವಧಿಯಲ್ಲಿ ಭಾಗ್ಯೋದಯ ಸೂಚಕ ಘಟನೆಗಳು ಸಂಭವಿಸುವವು. ಉದ್ಯೋಗದಲ್ಲಿಯ ಸಾಹಸ ಪ್ರಶಂಸನೀಯ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಿಗಳನ್ನು ಪೂರ್ಣವಾಗಿ ಪರಾಜಯಗೊಳಿಸುವಂತಹದು. ಎಲ್ಲ ಉದ್ಯೋಗದವರು ಬಹಳ ಕೀರ್ತಿವಂತರಾಗುವರು.

ಧಂದೆಯುವರಂತೆ ನೋಕರರಿಗೂ ಈ ವರ್ಷ ಯಶಸ್ಸು ಲಾಭ ಅಪೇಕ್ಷಿಸಿದಷ್ಟು ಸಿಕ್ಕುವದು. ಮೇಲಿನ ಗ್ರೇಡಿಗಾಗಿ ಮೊದಮೊದಲು ವರಿಷ್ಠರೊಡನೆ ತಿಕ್ಕಾಟ ಮಾಡಬೇಕಾದರೂ ಅರ್ಜಿ, ವಿನಂತಿ, ಸಂದರ್ಶನ ಮೊದಲಾದ್ದನ್ನು ಮಾಡಬೇಕಾದರೂ ಕೊನೆಗೆ ಧ್ಯೇಯ ಸಾಧ್ಯವಾಗುವದು. ವರ್ಗವಾಗುವ ಶಾಖೆಯಲ್ಲಿದ್ದರೆ ಮೇಲಿಂದಮೇಲೆ ವರ್ಗವಾಗುವದು. ಆದಾದರೂ ಕೆಲಸಕ್ಕೆ ಅನುಕೂಲವಿದ್ದರೂ ಪ್ರಪಂಚಕ್ಕೆ ತೀರ ಅನನುಕೂಲವಾದ ಸ್ಥಳಕ್ಕೆ ವರ್ಗವಾಗುವದು. ಕೈಕೆಳಗಿನ ನೋಕರರು ನಮ್ರತೆಯಿಂದ ವರ್ತಿಸುವರು ಮತ್ತು ನಿಮ್ಮವರಂತೆ ನಡೆಯುವರು. ಆದರೆ ವರಿಷ್ಠರ ಬೆದರಿಕೆ ಮಾತ್ರ ಮೇಲಿಂದ ಮೇಲೆ ಇದ್ದದ್ದೆ. ಸಾಮಾಜಿಕ ಪ್ರತಿಷ್ಠೆ ಉದ್ಯೋಗಸ್ಥರಿಗೂ ನೋಕರಿಯಲ್ಲಿದ್ದವರಿಗೂ ಚನ್ನಾಗಿ ಸಿಕ್ಕುವದು. ಅಧಿಕಾರ ಮತ್ತು ಪ್ರಭುತ್ವದ ಉಪಯೋಗ ಪರಕಲ್ಯಾಣಕ್ಕಾಗಿ ಹೆಚ್ಚಾಗಿ ಮಾಡುವ ಧ್ಯೇಯವಿಟ್ಟುಕೊಳ್ಳುವಿರಿ. ಮಿತ್ರಸುಖ ಅನುಕೂಲ. ಆದರೆ ಅವರಲ್ಲಿ ಕೆಲವರು ಪ್ರಾಪಂಚಿಕ ಇಲ್ಲವೆ ಆರ್ಥಿಕ ಆಪತ್ತಿಯಲ್ಲಿ ಬರುವರು. ದೂರದ ಪ್ರವಾಸಯೋಗ ಕಡಮೆಯೆ. ಸಮೀಪದ ಪ್ರವಾಸವೂ ಅಷ್ಟಕ್ಕಷ್ಟೆ. ದೇವಧರ್ಮದ ಬಗ್ಗೆ ಮೊದಲಿನಷ್ಟು ಭಕ್ತಿಕೂಡ ಉಳಿಯುವದಿಲ್ಲ. ಆದರೂ ಪರೋಪಕಾರ ಹೆಚ್ಚಾಗಿ ಸಂಭವಿಸುವದು. ಸ್ವಪ್ನ ಶುಭ ಮತ್ತು ಭಾವೀ ಸೂಚಕವಿರುವವು. ನಿಮ್ಮ ನಿಂದಕರೂ ಪ್ರಶಂಸಿಸುವಂತೆ ನಿಮ್ಮ ವರ್ತನೆ.

ದಾವೆ ಖಟ್ಲೆ ಖಾಸಗಿ ಸ್ಪರ್ಧೆಗಳಲ್ಲಿ ರಾಜಿ ಆಗುವದು ಹೆಚ್ಚು. ಆದ ಒಡಂಬಡಿಕೆ ಪರಸ್ಪರರಿಗೆ ಸಮಾಧಾನಕಾರಕ. ಆದರೆ ಯಾವ ಕೆಲಸ

ಗಳಲ್ಲಿ ಒಡಂಬಡಿಕೆಯಾಗುವದಿಲ್ಲವೊ ಅವುಗಳಲ್ಲಿ ಕೊನೆಗೆ ನಿಮಗೇ ಯಶಸ್ಸು ಸಿಕ್ಕುವದು. ಆದರೆ ಅದು ನಿಮಗೆ ಪಚನವಾಗದಂತೆ ನಿಮ್ಮ ಶತ್ರುಗಳು ಮೇಲಿಂದ ಮೇಲೆ ತಮ್ಮ ದೃಷ್ಟಿಕ್ಷೇಪ ಮಾಡುವರು.

ಈ ರಾಶಿಯ ಸ್ತ್ರೀಯರ ಪ್ರಸೂತಿ ಸ್ವಲ್ಪ ಕಷ್ಟದಿಂದಲೆ ಆಗುವದೆಂದು ಹೇಳಬೇಕಾಗುವದು. ಅದರಲ್ಲಿ ಮಾರ್ಚ ೧೪ ರಿಂದ ಮೇ ೧೧ರ ವರೆಗೆ ಹಡೆಯುವವರಿಗೆ ಅಷ್ಟೊಂದು ಗಂಡಾಂತರವಿಲ್ಲ. ಬಹಳಷ್ಟು ಹೆಣ್ಣು ಮಕ್ಕಳಿಗೆ ಹೆಣ್ಣು ಹುಟ್ಟುವವು.

ಕೆಲವರಿಗೆ ಹಿಂದಿನ ಜನ್ಮದ ಏನಾದರೊಂದು ಗುರುತು ಇಟ್ಟುಕೊಂಡು ಮಗು ಹುಟ್ಟುವ ಸಂಭವವಿದೆ.

ಮಾರ್ಚ ೧೪ ರಿಂದ ಮೇ ೧೧ ರ ಅವಧಿಯಲ್ಲಿ ಪರೀಕ್ಷೆಯಾಗುವ ವಿದ್ಯಾರ್ಥಿಗಳು ನಿಶ್ಚಯವಾಗಿ ಯಶಸ್ವಿಯಾಗುವರು. ಕೆಲವರಿಗೆ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಬೇಕೆಂಬ ದುರ್ಬುದ್ಧಿ ಹುಟ್ಟುವದು. ಕೆಲವರಿಗೆ ಪರೀಕ್ಷೆಗೆಕೂಡದಂಥ ಅನಿವಾರ್ಯ ಅಡಚಣೆಗಳು ಬರುವವು.

ಸಿಂಹ

ಈ ರಾಶಿಯವರಿಗೆ ಒಟ್ಟಾರೆ ಈ ವರ್ಷ ಪ್ರಾಪಂಚಿಕ ವಿಷಯಗಳಲ್ಲಿ ಒಂದು ಬಗೆಯ ರಖರಖಿಯಿದ್ದರೂ ಔದ್ಯೋಗಿಕ ಮತ್ತು ಸಾಮಾಜಿಕ ಪ್ರಭುತ್ವದಲ್ಲಿ ಅವರು ಉಚ್ಚ ಸ್ಥಾನವನ್ನು ಪಡೆಯುವರೆಂಬುದು ನಿಶ್ಚಿತವಿದೆ.

ಈ ರಾಶಿಯ ಜನರ ರೋಗ್ಯ ಮಾರ್ಚ ೧೪ ರಿಂದ ಮೇ ೧೧ ಮತ್ತು ಜುಲೈ ೩೧ ರಿಂದ ಅಗಸ್ಟ ೨೦ ಈ ಅವಧಿಯಲ್ಲಿ ಒಂದೊಮ್ಮೆ ಕೆಟ್ಟರೂ ಕೆಡಬಹುದು. ಆದರೆ ಉಳಿದ ಸಮಯದಲ್ಲಿ ಅದು ಬಹಳ ಅನುಕೂಲ. ಏನಾದರೂ ಸ್ವಲ್ಪ ತೊಂದರೆಯಾದರೂ ಅದು ತಿನ್ನುಣ್ಣುವ ಪದಾರ್ಥಗಳಿಂದ. ಜನನ ಕಾಲಕ್ಕೆ ಇಲ್ಲವೆ ಲಗ್ನ ಇಲ್ಲವೆ ರಾಶಿಯಲ್ಲಿ ದ್ವಿತೀಯ ಸ್ಥಾನದಲ್ಲಿ ಮಂಗಳನಿದ್ದರೆ ಯಾವದಾದರೊಂದು ಬಗೆಯ ನೇತ್ರರೋಗದ ಸಂಭವವಿದೆ.

ಎಷ್ಟೇ ಸಮೃದ್ಧಿಯಿದ್ದರೂ ದೇಹಸುಖ ಅಷ್ಟೊಂದು ಚೆನ್ನಾಗಿ ದೊರೆಯುವದಿಲ್ಲ. ಇಡೀ ವರ್ಷ ಇರುವ ಚತುರ್ಥ ಶನಿ ಮತ್ತು ರಾಹು ಮನೆಯಲ್ಲಿಯ ತಾಯಿ ತಂದೆಗಳಿಗೆ ಮತ್ತು ಏಕನಿಷ್ಠೆಯಿಂದ ವರ್ತಿಸುವ ಸೇವಕರಿಗೆ ಪ್ರಕೃತಿಯ ಬಗ್ಗೆ ಬಹಳ ತೊಂದರೆಯಾಗುವದು, ಅಲ್ಲದೆ ಗೃಹಕಲಹ ಬಹಳ ಹೆಚ್ಚುವದು. ರೈತರು ಜಮೀನದಾರರನ್ನು ಬಹಳ ಪೀಡಿಸುವರು. ಜನೆವರಿ ೭ ರಿಂದ ಫೆಬ್ರುಅರಿ ೨೦ ರ ವರೆಗೆ ಮತ್ತು ಮೇ ೨೦ ರಿಂದ ಅಗಸ್ಟ ೨೦ ರ ವರೆಗೆ ಅವರು ಪ್ರತಿ ದಿನ ಹೊಸ ಹೊಸ ಅಡಚಣೆ ತಂದೊಡ್ಡುವರು. ನೆರೆಹೊರೆಯವರು ಕೂಡ ಅತ್ಯಂತ ಅಸೂಯೆಯಿಂದ ವರ್ತಿಸುವರು. ಮತ್ತು ಒಳ್ಳೆ ಮಾತಿಗೂ ಕೆಟ್ಟ ಅರ್ಥ ಹಚ್ಚಿ ಟೀಕೆ ಮಾಡಹತ್ತುವರು, ನಿಂದಿಸುವರು. ಮನೆ ಹೊಲಗಳ ದುರಸ್ತಿ ಮುಂತಾದ್ದರಲ್ಲಿ ಹೆಚ್ಚಿನ ವೆಚ್ಚ ಈ ವರ್ಷ ಮಾಡಬೇಕಾದ ಪ್ರಸಂಗ ಬರುವದು. ಮನೆಯಲ್ಲಿಯ ಬಹುಶಃ ಎಲ್ಲರೂ ಸ್ವಾರ್ಥಿಗಳಾಗಿ ಎರಡನೆಯವರ ಅನ್ನವನ್ನು ಕಸಿದುಕೊಳ್ಳಲು ಪ್ರಯತ್ನಿಸುವರು. ಅಷ್ಟರಲ್ಲಿ ಕೆಲವರು ಸುಳ್ಳೊಂದು ಸೊಟ್ಟೊಂದು ಹೇಳಿ ಹಣ ಇಲ್ಲವೆ ವಸ್ತುಗಳನ್ನು ಎತ್ತಿಹಾಕಲು ಪ್ರಯತ್ನಿಸುವರು. ಎಲ್ಲಬಗೆಯ ತೊಂದರೆಯಿಂದ ನಿದ್ರೆಯ ಪ್ರಮಾಣ ಬಹಳ ಕಡಮೆಯಾಗುವದು. ಆದರೂ ಬಹಳ ದಿನಗಳ ವರೆಗೆ ಇರುವ ಮೊದಲನೆ ಅರ್ಥಾತ್ ಜನ್ಮಸ್ಥ ಗುರುವಿನ ಪರಿಣಾಮವಾಗಿ ನಿಮ್ಮ ಸಹನಶಕ್ತಿ ಹೆಚ್ಚಿ ಎಲ್ಲವನ್ನು ತೂಗಿಸಿಕೊಂಡು ಹೋಗುವಷ್ಟು ಬಲಬರುವದು. ಮನೆಯಲ್ಲಿ ಯಾವಾಗಾದರೊಮ್ಮೆ ಪೈಶಾಚಿಕ ಚಮತ್ಕಾರಗಳು ಕಂಡುಬರುವವು.

ಹೆಂಡತಿಯ ಆರೋಗ್ಯಕ್ಕೆ ಈ ವರ್ಷ ಅನುಕೂಲವಾಗಿದ್ದರೂ ಅವಳ ಸ್ವಭಾವ ಮಾತ್ರ ಬಹಳ ತ್ರಾಸಿನದಾಗಿ ಪರಿಣಮಿಸುವದು. ನಿಮ್ಮ ಪ್ರತಿ ಶಬ್ದವನ್ನು ಅವಳು ಉಪಹಾಸ ಮಾಡಹತ್ತುವಳು. ಜಡವಸ್ತುವನ್ನು ಇಲ್ಲವೆ ನಿರರ್ಥಕ ವಸ್ತುವನ್ನು ಮೇಲಿಂದಮೇಲೆ ಬೇಡಹತ್ತುವಳು. ತನ್ನ ತವರುಮನೆಯವರ ದೊಡ್ಡಸ್ತಿಕೆಯನ್ನು ಪ್ರದರ್ಶಿಸುವಳು. ಒಟ್ಟಾರೆ ಉಭಯತರಲ್ಲಿನ ಪ್ರೇಮ ಸ್ವಲ್ಪಾದರೂ ಕಡಮೆಯಾಗುವದು. ಇನ್ನೂ ನಿಮ್ಮ ಮದುವೆ ಆಗಿರದಿದ್ದರೆ, ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಅದು ಒದಗಿಬರುವದು ಸ್ವಲ್ಪ ಕಠಿನವೆ. ಒಂದು ವೇಳೆ ಕೂಡಿಬಂದರೂ ಮಾರ್ಚ ೧೪ರಿಂದ ಮೇ ೧೧ರ ಅವಧಿಯಲ್ಲಿ ಬಹಳ ಪ್ರಯಾಸದಿಂದ ಸಾಧ್ಯವಾಗುವದು. ಆದರೆ ಅದರಲ್ಲಿಯೂ ಕೆಲ ಅನಪೇಕ್ಷಿತ ಅಡಚಣೆ ಬಂದು ಗೊತ್ತಾದ ಮುಹೂರ್ತವನ್ನು ಹಿಂದೆ ಮುಂದೆ ಸರಿಸಬೇಕಾಗುವದು. ವಧೂವರರು ಪರಸ್ಪರ, ಮೇಲೆ ನೋಡುವವರಿಗೆ ಪ್ರೇಮಿಗಳೆಂದು ತೋರಿದರೂ ಒಳಒಳಗೆ ಒಬ್ಬರಿಗೊಬ್ಬರಿಗೆ ಅಷ್ಟೊಂದು ಕೂಡಿ ನಡೆಯುವದಿಲ್ಲ.

ನಿಮ್ಮ ಮಕ್ಕಳಲ್ಲಿ ಯಾರದಾದರೂ ಲಗ್ನ ಮಾಡುವದಿದ್ದರೆ ಅದು ಮೇ ೧೧ ರಿಂದ ಅಕ್ಟೋಬರ ೧೬ರ ಮಧ್ಯದಲ್ಲಿ, ಸಿಂಹಸ್ಥ ಗುರು ಇರುವನೆಂದು ಮಾಡದಿದ್ದರೆ, ಲಗ್ನನಿಶ್ಚಯವಂತೂ ಆಗೇ ತೀರುವದು. ಅಳಿಯ ಇಲ್ಲವೆ ಸೊಸೆ ಎಲ್ಲ ವಿಷಯಗಳಲ್ಲಿ ಮನಸ್ಸಿಗೆ ಬರುವರು. ಬೀಗರು ಮಾತ್ರ ಅಷ್ಟೊಂದು ಸರಳರಲ್ಲ, ಯಾದಿ ಮಾಡಿದಂತೆ ನಡೆದುಕೊಳ್ಳುವವರಲ್ಲ. ಸುಳ್ಳುಸುಳ್ಳೆ ಕೆದರಿ ಕೆದರಿ ತೊಂದರೆ ಕೊಡುವರು. ಮಕ್ಕಳ ಉತ್ಕರ್ಷಕ್ಕೆ ಈ ವರ್ಷವೆಲ್ಲ ಚೆನ್ನಾಗಿದ್ದು, ಮೇ ೧೧ರ ನಂತರ ಅವರವರ ಕರ್ತೃತ್ವ ಮತ್ತು ವಯೋಮಾನಕ್ಕನುಸಾರವಾಗಿ ಖಾತ್ರಿಯಿಂದ ಆಗುವದು. ಮನೆಯಲ್ಲಿ ಉಳಿದವರಿಗಿಂತ ಮಕ್ಕಳೆ ನಿಮ್ಮೊಡನೆ ಒಳ್ಳೇ ರೀತಿಯಿಂದ ವರ್ತಿಸುವರು.

ಧಂದೆ ಕೂಲಿಯವರಿಗೆ ಈ ವರ್ಷ ಅನುಕೂಲ. ಪ್ರಗತಿ ಪ್ರತಿಷ್ಠೆ ಮತ್ತು ಲಾಭಕ್ಕೆ ಬಹಳ ಅನುಕೂಲವೆಂಬಲ್ಲಿ ಸಂದೇಹವಿಲ್ಲ. ಯೋಜಿಸಿದ ಉದ್ಯೋಗಸ್ಥರ ಕಾರ್ಯ ಸಿದ್ಧಿಸುವದು. ಅನೇಕರು ಸಹಾಯಕರು ದೊರೆಯುವರು. ದೊಡ್ಡವರ ಭೆಟ್ಟಿ ಮತ್ತು ಆಶ್ರಯದ ಯೋಗ ನಿಶ್ಚಯ. ಪತ್ತು ಪ್ರತಿಷ್ಠೆ ಸಾಕಷ್ಟು ದೊರೆತು ಅಪೇಕ್ಷೆಗಿಂತ ಹೆಚ್ಚು ದ್ರವ್ಯಲಾಭವಾಗುವದು. ನವಂಬರ ೨೩ರ ವರೆಗೆ ಮತ್ತು ಮುಂದೆ ದಿಸೆಂಬರ ೧೦ರಿಂದ ೨೯, ಮಾರ್ಚ ೫ ರಿಂದ ೨೩, ಎಪ್ರಿಲ ೮ ರಿಂದ ೨೬, ಜೂನ ೩೦ ರಿಂದ ಜುಲೈ ೧೭ ಮತ್ತು ಅಗಸ್ಟ ೨ರ ನಂತರದ ಅವಧಿ ಎಲ್ಲ ರೀತಿಯಿಂದ ಉತ್ಕರ್ಷಕ್ಕೆ ಅನುಕೂಲ. ಸಂಚಾರೀ ವ್ಯಾಪಾರಿಗಳಿಗಿಂತ ಒಂದೇ ಕಡೆಗೆ ಕುಳಿತು ವ್ಯಾಪಾರ ಮಾಡುವವರಿಗೆ ಈ ವರ್ಷ ಹೆಚ್ಚು ಕಲ್ಯಾಣಪ್ರದವೆನಿಸುವದು.

ನೋಕರರಿಗೆ ಕೂಡ ಈ ವರ್ಷ ಬಹಳ ಭಾಗ್ಯೋದಯದ್ದು. ಮೇ ೧೧ ರಿಂದ ಅಕ್ಟೋಬರ ೧೬ ರ ಮಧ್ಯದಲ್ಲಿ ಮೇಲಿನ ಗ್ರೇಡ ಖಾತ್ರಿಯಿಂದ ಸಿಕ್ಕುವದು. ವರಿಷ್ಠರು ಸ್ವಲ್ಪ ಸಿಟ್ಟಿನವರಿದ್ದರೂ ನಿಮ್ಮ ಸರಳತನದ ಮುಂದೆ ಅವರ ಆಟವೇನೂ ನಡೆಯುವದಿಲ್ಲ. ಕೈಕೆಳಗಿನವರು ಕರ್ತವ್ಯತತ್ಪರರಾಗಿದ್ದು ನೀವು ಹೇಳಿದಂತೆ ಕೇಳುವರು. ವರ್ಗವಾಗುವ ಶಾಖೆಯಲ್ಲಿ ಇದ್ದರೆ ಈಗಿದ್ದ ಊರಿನ ಸಮೀಪದ ಸ್ಥಳಕ್ಕೆ ವರ್ಗವಾಗುವದು. ಅಲ್ಲಿ ನಿಮ್ಮ ಸಾಮಾಜಿಕ ದರ್ಜೆ ಬಹಳ ಹೆಚ್ಚುವ ಸಂಗತಿಗಳು ಅಕಲ್ಪಿತವಾಗಿ ಘಟಿಸುವವು. ಮೇ ೨೦ ರ ನಂತರ ಪ್ರಗತಿದಾಯಕ ಒಂದೆರಡು ಘಟನೆಗಳಾದರೂ ಸಂಭವಿಸುವವು. ಅದರಂತೆ ಮಕ್ಕಳಿಗೆ ಅನಿಷ್ಟ ಮಾಡುವವನೊಬ್ಬ ಅಕಸ್ಮಾತ್ತಾಗಿ ಗಂಟುಬೀಳುವನು. ಈ ವರ್ಷ ಲಾಭಕ್ಕೆ ಅದರಂತೆ ವಸ್ತ್ರಾಲಂಕಾರ ಮೊದಲಾದ ಅಮೂಲ್ಯ ವಸ್ತುಗಳ ಸಂಗ್ರಹಕ್ಕೆ ಒಳ್ಳೆ ಕಾರಕವಿರುವದು. ಆದರೆ ನಿತ್ಯೋಪಯೋಗಿ ಅಲ್ಲದ ವಸ್ತುಗಳನ್ನೆ ಹೆಚ್ಚಾಗಿ ಕೊಳ್ಳುವ ಯೋಗ. ಬಹಳ ದೂರದ ಪ್ರವಾಸ ಒಮ್ಮೆರಡು ಸಲವಾದರೂ ಘಟಿಸುವದು. ಸಮೀಪದ ಪ್ರವಾಸವಂತೂ ಮೇಲಿಂದಮೇಲೆ. ಪ್ರಸಿದ್ಧ ದೇವಸ್ಥಾನಗಳನ್ನು ಸಂದರ್ಶಿಸುವಿರಿ. ಧರ್ಮಶ್ರದ್ಧೆ ಹೆಚ್ಚು. ಸ್ವೀಕೃತ ಉಪಾಸನೆ ಅಖಂಡವಾಗಿ ಸಾಗುವದು. ಮಿತ್ರಸುಖ ಬಹಳ ಉತ್ತಮ. ಈ ವರ್ಷ ಅವರವರ ಪರಿಶ್ರಮದಂತೆ ಅವರದಾದರೂ ಉತ್ಕರ್ಷವಾಗುವದು.

ದಾವೆ, ಫಿರ್ಯಾದಿ, ಖಾಸಗಿ ಸ್ಪರ್ಧೆಗಳಲ್ಲಿ ಬಹಳ ಮಟ್ಟಿಗೆ ನಿಮಗೆ ಯಶಸ್ಸು. ಯಶಸ್ಸು ಸಿಕ್ಕುವ ಕಲ್ಪನೆ ಇಲ್ಲದಾಗ ಕೂಡ, ಆಶ್ಚರ್ಯಕಾರಕ ಯೋಗದಿಂದ ಯಶಸ್ಸು ಸಿಕ್ಕಿ ಪ್ರತಿಪಕ್ಷ ಮೂಗು ಹಿಕ್ಕಬೇಕಾಗುವದು. ನಿಮ್ಮವರೇ ಕೆಲವರು ನಿಮ್ಮ ಯಶಸ್ಸನ್ನು ನೋಡಿ ಸಹಿಸಲಾರರು.

ಮಾರ್ಚ ೧೪ ರಿಂದ ಮೇ ೧೧ ರೊಳಗೆ ಹಡೆ

ಯದಿದ್ದವರು ಉಳಿದ ಯಾವದೇ ಸಮಯದಲ್ಲಿ ಈ ವರ್ಷ ಹಡೆದರೂ ಸುಲಭ ಪ್ರಸೂತವಾಗಿ ಗಂಡುಮಗುವೇ ಹುಟ್ಟುವದು. ಮಾರ್ಚ ೧೪ ರಿಂದ ಮೇ ೧೧ರೊಳಗೆ ಹಡೆಯುವದು ಅಷ್ಟೊಂದು ತೊಂದರೆಯದಾಗದಿದ್ದರೂ ಹುಟ್ಟುವ ಮಕ್ಕಳ ಜೀವನಶಕ್ತಿ ಬಹಳ ಕಡಮೆಯಿರುವದು. ಯಾವ ವಿದ್ಯಾರ್ಥಿಗಳು ಮಾರ್ಚ ೧೪ ರಿಂದ ಮೇ ೧೧ ರ ಅವಧಿಯನ್ನು ಬಿಟ್ಟು ಉಳಿದ ಕಾಲಕ್ಕೆ ಪರೀಕ್ಷೆಗೆ ಕೂಡುವರೊ ಅವರು ಯಶಸ್ವಿಯಾಗುವದು ನಿಶ್ಚಿತ. ಇಷ್ಟೇ ಅಲ್ಲ ಅಗಸ್ಟ ೨೦ ರ ನಂತರ ಪರೀಕ್ಷೆಯಾದರೆ ಅವರು ಮೇಲಿನ ವರ್ಗವನು ಪಡೆಯಬಹುದು.

ಕನ್ಯಾ

ಒಟ್ಟಾರೆ ಈ ವರ್ಷ ಪ್ರಾಪಂಚಿಕ ವಿಷಯಗಳಲ್ಲಿ ಬಹಳ ತೊಂದರೆ. ಆದರೆ ಧಂದೆ ಕೂಲಿ ನೋಕರಿಯಲ್ಲಿ ಆದಕ್ಕಿಂತ ಬಹಳ ಉತ್ತಮ. ಭವಿಷ್ಯತ್ತಿನಲ್ಲಿ ಆಗುವ ಪ್ರಗತಿಯ ದ್ಯೋತಕ ನಿಶ್ಚಿತವಾಗಿ ಕಂಡುಬರುವದು.

ಈ ರಾಶಿಯುವರ ಆರೋಗ್ಯ ಈ ವರ್ಷ ಬಹಳ ಉತ್ತಮ. ಆದರೆ ಯಾರಿಗೆ ಮೂತ್ರಾಶಯದಂಥ ವಿಕಾರವಿದ್ದರೆ ಇಲ್ಲವೆ ಬಾಯಿ ಬರುವ ರೂಢಿಯಿದ್ದರೆ ಅವರಿಗೆ ನವಂಬರ ೨೧ ರಿಂದ ಜನೇವರಿ ೭ ಮತ್ತು ಎಪ್ರಿಲ ೪ ರಿಂದ ಮೇ ೨೦ ರ ಮಧ್ಯದಲ್ಲಿ ಸ್ವಲ್ಪ ಜಪ್ಪಿಸಬೇಕಾಗುವದು. ಇತರ ವಿಷಯಗಳಲ್ಲಿ ದೇಹಸುಖಕ್ಕೆ ಈ ವರ್ಷ ಬಹಳ ಅನುಕೂಲವಿಲ್ಲ. ಮನೆಯಲ್ಲಿ ಒಂದಿಲ್ಲೊಂದು ಬಗೆಯ ಕಿಟಕಿಟ ಇದ್ದದ್ದೆ. ಇಡೀ ವರ್ಷ ಶನಿ ಮತ್ತು ರಾಹು ತೃತೀಯಸ್ಥಾನದಲ್ಲಿ ಅಂದರೆ ಸ್ಥಾನಬಲಿಷ್ಠನಿದ್ದದ್ದರಿಂದ ಕಳೆದ ಏಳೂವರೆ ವರ್ಷ ಇದ್ದ ಸಾಡೇಸಾತಿ ಒಂದೊಮ್ಮೆ ಬಿಟ್ಟುಹೋಯಿತೆಂದು ಸಂತೋಷ ಹಚಿಕೊಳ್ಳಬಹುದು. ಆದರೆ ದುರ್ದೈವದಿಂದ ಗುರು ಇದೇ ಸಮಯಕ್ಕೆ ೧೨ ನೇ ಸ್ಥಾನಕ್ಕೆ ಬಂದಿರುವದರಿಂದ ಮತ್ತು ಸುಮಾರು ೧೧ ತಿಂಗಳು ಇದೇ ಸ್ಥಾನದಲ್ಲಿ ಉಳಿಯುವದರಿಂದ ಹಿಂದಿನ ಕೊಡತಕ್ಕೊಳ್ಳುವ ವ್ಯವಹಾರವೊಂದು ಬಹಳ ಪೀಡಿಸುವದು. ಅದರಿಂದ ಎಲ್ಲಿಯಾದರೂ ಓಡಿಹೋಗಬೇಕೆಂದೆನಿಸುವದು. ಮನೆಯಲ್ಲಿನ ಸುಖಸೌಕರ್ಯದ ಕಡೆಗೆ ಇಷ್ಟೆ ಅಲ್ಲ, ಊಟ ಉಡಿಗೆಗಳತ್ತ ಕೂಡ ಹೆಚ್ಚು ಲಕ್ಷ ಉಳಿಯುವದಿಲ್ಲ. ಅದಕ್ಕಾಗಿ ಪುರಸತ್ತು ಸಿಕ್ಕುವದಿಲ್ಲ. ನಿಮ್ಮ ಸಹಾಯದಿಂದಲೇ ಅಪ್ತರ ಉತ್ಕರ್ಷವಾಗಿದ್ದರೂ ಈ ಕಾಲದಲ್ಲಿ ಅವರು ನಿಮ್ಮ ಶತ್ರುಗಳಂತೆ ವರ್ತಿಸುವರು. ಹೊಲಗಳ ಬೆಳೆ ಮನಸ್ಸಿನಂತೆ ಬಂದಿದ್ದರೂ ರೈತರು ಸಹಸಾ ಅದನ್ನು ಕೊಡುವದಿಲ್ಲ. ತದ್ವಿರುದ್ಧ ನೀವೇ ಅವರನ್ನು ಮುಳುಗಿಸಿದಿರೆಂದು ಕೂಗಹತ್ತುವರು. ಯಾರಿಂದಲಾದರೂ ಹಣ ಬರುವದಿದ್ದರೆ ಅವರಿಂದ ಒಂದು ಆಣೆ ಕೂಡ ಬರುವದಿಲ್ಲ. ತದ್ವಿರುದ್ಧವಾಗಿ ನೀವು ಯಾರಿಗಾದರೂ ಕೊಡಬೇಕಾಗಿದ್ದರೆ ಸಾವಕಾರರು ಅದರ ವಸೂಲಿಗಾಗಿ ಒತ್ತಾಯ ನಡೆಸುವರು. ಮನೆಯಲ್ಲಿಯ ಜನರು ತೋರಿಕೆಗೆ ನೀವು ಹೇಳಿದ್ದಕ್ಕೆ ಹೂಗುಟ್ಟಿದರೂ ಮನಸ್ಸಿನಲ್ಲಿ ನಿಮ್ಮನ್ನು ತುಚ್ಛೀಕರಿಸುವರು. ನೋಕರ ಚಾಕರರು ಮಾತ್ರ ಏಕನಿಷ್ಠ ಉಳಿಯುವರು ಮತ್ತು ಸಮಯ ಬಂದಾಗೆಲ್ಲ ಚೆನ್ನಾಗಿ ಪರಿಶ್ರಮ ಮಾಡುವರು. ವಾಹನ ಸುಖ ಸಾಧಾರಣ ಅನುಕೂಲ. ಮನೆಯಲ್ಲಿ ಮತ್ತು ಆಪ್ತರಲ್ಲಿ ಪ್ರತಿಷ್ಠೆ ಇಲ್ಲದಿದ್ದರೂ ಊರಲ್ಲೆಲ್ಲ ಅದು ಉಳಿಯುವದು. ಇದ್ದ ಮನೆ ಬಿಟ್ಟು ಬೇರೆ ಕಡೆ ಹೋಗುವ ಸಂಭವವಿದೆ. ಇದೇ ತರದ ಕೆಲ ವಿಷಯಗಳಲ್ಲಿ ಮಾರ್ಚ ೫ ರಿಂದ ೨೩, ಎಪ್ರಿಲ ೮ ರಿಂದ ೨೬ ಮತ್ತು ಆಗಸ್ಟ ೨ರಿಂದ ೨೧ರ ಅವಧಿಯಲ್ಲಿ ಹೆಚ್ಚು ತೊಂದರೆ.

ಪತಿಪತ್ನಿಯರ ಪ್ರೇಮ ನಿಶ್ಚಲವಾಗಿದ್ದರೂ ಸ್ತ್ರೀಸುಖ ಚೆನ್ನಾಗಿ ದೊರೆಯುವದಿಲ್ಲ. ಅವಳ ಆರೋಗ್ಯ ಕಿರಕುಳ ಬೇನೆಯಿಂದಾದರೂ ಸದಾ ಕೆಟ್ಟಿರುವದು. ಅಲ್ಲದೆ, ಅವಳು ಇಲ್ಲವೆ ನೀವು ಗ್ರಾಮಾಂತರಕ್ಕೆ ಹೋಗುವದರಿಂದ ಅನೇಕ ದಿನ

ಸಹವಾಸ ಸುಖ ದೊರೆಯುವದಿಲ್ಲ. ನಿಮ್ಮ ಮದುವೆ ಇನ್ನೂ ಆಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವ ಇಚ್ಛೆಯೂ ಇದ್ದರೆ ಬಾಸಿಂಗ ಬಲ ಇರುವದಿಲ್ಲ. ಅದರಲ್ಲಿ ಲಗ್ನವಾಗುವದಾದರೆ, ಮಾರ್ಚ ೧೪ ರಿಂದ ಮೇ ೧೧ ರ ಅವಧಿಯಲ್ಲಿ ಆಗುವದು. ವಧೂವರರು ರೂಪದಿಂದ ಸಾಮಾನ್ಯವಾಗಿದ್ದರೂ ಗುಣದಿಂದ ಒಳ್ಳೆಯವರಾಗಿರುವರು. ವರದಕ್ಷಿಣೆ ಅಥವಾ ವಧುವಿಗೆ ವಸ್ತ್ರಾಲಂಕಾರಾದಿಗಳು ಅಪೇಕ್ಷೆಗಿಂತ ಬಹಳ ಕಡಮೆ ದೊರೆಯುವವು.

ನಿಮ್ಮ ಮಕ್ಕಳಲ್ಲಿ ಯಾರದಾದರೂ ವಿವಾಹ ಮಾಡುವದಿದ್ದರೆ ಅದಕ್ಕಾದರೂ ಈ ವರ್ಷ ಪ್ರಬಲ ಯೋಗವಿಲ್ಲ. ಒಂದು ವೇಳೆ ಒದಗಿದರೆ ಮಾರ್ಚ ೧೪ ರಿಂದ ಮೇ ೧೧ರಲ್ಲಿಯೇ ಆಗಬಹುದು. ಆದರೆ ಅಳಿಯ ಅಥವಾ ಸೊಸೆ ಕಲ್ಪನೆ ಮೀರಿ ಒಳ್ಳೆಯವಳು ದೊರೆಯುವರು. ಮಕ್ಕಳೆಲ್ಲರ ಬಹಳ ಉನ್ನತಿಯಾಗುವದು. ನಿಮ್ಮೊಡನೆ ಅವರು ಹೆಚ್ಚು ಚನ್ನಾಗಿ ವರ್ತಿಸುವರು. ಮಿತ್ರ ಸುಖ ಒಟ್ಟಾರೆ ಅನುಕೂಲ. ಆದರೆ ಅವರಲ್ಲಿ ಒಬ್ಬಿಬ್ಬರು ಮಾತ್ರ ಕೆಡುವರು.

ಧಂದೆ, ಕೂಲಿಯವರಿಗೆ ಈ ವರ್ಷ ಬಹಳ ಅನುಕೂಲ. ತೃತೀಯ ಅಂದರೆ ಪರಾಕ್ರಮ ಸ್ಥಾನದಲ್ಲಿ ಇರುವ ರಾಹು ಮತ್ತು ಶನಿ ಅತ್ಯಂತ ಸಾಹಸದ ಕಾರ್ಯ ಮಾಡಲು ಉತ್ಸಾಹ ತುಂಬಿ ಅದರಲ್ಲಿ ಯಶಸ್ಸನ್ನು ಸಂಪಾದಿಸಿ ಕೊಡುವರು. ಎಂಥ ದೊಡ್ಡವರೊಡನೆ ಆಗಬಹುದಾದ ಸಂದರ್ಶನದಲ್ಲಿಯೂ ನಿಮ್ಮ ವರ್ಚಸ್ಸು ಬೀಳುವದು ಮತ್ತು ಯೋಜಿಸಿದ ಕಾರ್ಯಗಳಲ್ಲಿ ಅವರ ಶಾಬ್ದಿಕ ಇಲ್ಲವೆ ಆರ್ಥಿಕ ಸಹಾಯ ಸಿಕ್ಕುತ್ತ ಹೋಗುವದು. ಸಂಚಾರೀ ಧಂದೆಯವರಿಗೆ ಹೆಚ್ಚು ಯಶಸ್ಸು. ಕಳೆದ ೬-೭ ವರ್ಷಗಳಿಗಿಂತ ಈ ವರ್ಷ ನಿಶ್ಚಯವಾಗಿ ನಿಮ್ಮ ಭಾಗ್ಯೋದಯವಾಗುವದು. ಮತ್ತು ಮುಂದೆ ಇದಕ್ಕಿಂತ ಹೆಚ್ಚು ಅಭಿವೃದ್ಧಿಯಾಗುವಂಥ ಘಟನೆಗಳು ಸಂಭವಿಸುವವು. ಧಂದೆಯಲ್ಲಿ ಪತ್ತು ಮತ್ತು ಪ್ರತಿಷ್ಠೆ ದಿನದಿನಕ್ಕೆ ಹೆಚ್ಚುತ್ತ ನಡೆಯುವದು. ನಿಮ್ಮ ವಿಶ್ವಾಸ ಮತ್ತು ಪ್ರಾಮಾಣಿಕತೆ ಎಲ್ಲೆಲ್ಲಿಯೂ ಪ್ರಶಂಸಿಸಲ್ಪಡುವವು. ಉದ್ಯೋಗದ ಸ್ಥಳ ಇಲ್ಲವೆ ಗ್ರಾಮ ಬದಲಾಗುವ ಸಂಭವವಿದೆ. ಇಲ್ಲವೆ ಬೇರೆ ಕಡೆ ಶಾಖೆಗಳನ್ನಾದರೂ ತೆರೆಯುವಿರಿ.

ನೋಕರರಿಗೂ ಈ ವರ್ಷ ಪ್ರಗತಿಪರವಿದೆ. ವರಿಷ್ಠರು ವಿಶೇಷ ಅನುಗ್ರಹ ಮಾಡುವರು. ಕೈಕೆಳಗಿನವರೂ ಚನ್ನಾಗಿ ನಡೆಯುವರು. ಉಳಿದ ಜನರೂ ನಿಮ್ಮ ಬಗ್ಗೆ ಅನುಕೂಲ ಗ್ರಹ ಮಾಡಿಕೊಳ್ಳುವರು. ಈ ವರ್ಷದ ಕೊನೆಯಲ್ಲಿ ಆದರೂ ಮೇಲಿನ ಗ್ರೇಡು ದೊರೆಯುವದೆಂದು ತೋರುವದು. ಬದಲಿಯಾಗುವ ಶಾಖೆಯಲ್ಲಿದ್ದರೆ ಅಲ್ಪಶ್ರಮದ ಆದರೂ ಸ್ವಲ್ಪ ಅನನುಕೂಲ ಸ್ಥಳಕ್ಕೆ ವರ್ಗವಾಗುವ ಸಂಭವವಿದೆ. ಕೆಲಕಾಲ ಪೂಜ್ಯ ವ್ಯಕ್ತಿಗಳ ಸಹವಾಸ ದೊರೆಯುವದು. ವಿಶೇಷ ಸೃಷ್ಟಿ ಸೌಂದರ್ಯ ನೋಡುವಂಥ ಸ್ಥಳಗಳಿಗೆ ಪ್ರವಾಸ ಹೊರಡುವಿರಿ. ದ್ರವ್ಯಲಾಭಕ್ಕೂ ಈವರ್ಷ ಅಷ್ಟೊಂದು ಅನುಕೂಲವಿಲ್ಲದಿದ್ದರೂ ಕೆಟ್ಟೇನಿಲ್ಲ. ಅದರಲ್ಲಿಯೂ ಜನೆವರಿ ೧೧ ರ ವರೆಗೆ ಮತ್ತು ಮುಂದೆ ಫೆಬ್ರುಅರಿ ೫ ರಿಂದ ಮೇ ೨ರ ವರೆಗೆ, ಅನಂತರ ಮಾರ್ಚ ೨೯ ರಿಂದ ಎಪ್ರಿಲ ೨೯ ರವರೆಗೆ, ಅನಂತರ ಜುಲೈ ೧ ರಿಂದ ೨೧ ರ ವರೆಗೆ ಮತ್ತು ಸಪ್ಟಂಬರ ೧ ರಿಂದ ೨೮ರ ವರೆಗೆ, ಆ ಬಳಿಕ ಅಕ್ಟೋಬರ ೨೫ ರ ನಂತರದ ಕಾಲದಲ್ಲಿ ವಿಶೇಷ ಲಾಭ ದೊರೆಯುವದು. ನಾಲ್ಕು ದುಡ್ಡು ಕೈಯಲ್ಲಿ ಉಳಿಯದಿದ್ದರೂ ಕೊಡುವದೇನೂ ಉಳಿಯುವದಿಲ್ಲ.

ಈ ವರ್ಷ ದಾವೆ ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೆ ಸಮಸ್ಥಿತಿ ಆದರೂ ನಿಮಗೆ ಜನೆವರಿ ೭ ರಿಂದ ಫೆಬ್ರುಅರಿ ೨೦ ಮತ್ತು ಅಗಸ್ಟ ೨೧ರ ನಂತರವೇ ಯಶಸ್ಸು ದೊರೆಯುವದೆಂಬುದನ್ನು ಲಕ್ಷ್ಯದಲ್ಲಿಡಿರಿ.

ಮಾರ್ಚ ೧೪ರಿಂದ ಮೇ ೧೧ರೊಳಗಾಗಿ ಹಡೆಯುವ ಅದರಂತೆ ಅಕ್ಟೋಬರ ೧೬ರ ನಂತರ ಹಡೆಯುವ ಸ್ತ್ರೀಯರು ಸುಲಭವಾಗಿ ಹಡೆಯುವರು. ಉಳಿದ ಸಮಯದಲ್ಲಿ ಅಷ್ಟೊಂದು ಸುಲಭ ಪ್ರಸೂತಿಯಾಗುವದಿಲ್ಲ. ಅನೇಕರಿಗೆ ಕನ್ಯಾರತ್ನದ ಯೋಗವೆ ಹೆಚ್ಚಿಗೆ ಇದೆ. ಆದರೆ ಹುಟ್ಟಿದ ಮಗು ಸ್ವಲ್ಪ ಕಪ್ಪಿದ್ದರೂ ಸದೃಢವಿರುವದು.

ದಿಸೆಂಬರ ೧೮ರಿಂದ ಜನೆವರಿ ೧೧ ಫೆಬ್ರುಅರಿ ೫ ರಿಂದ ಮಾರ್ಚ ೨, ಮಾರ್ಚ ೨೯ ರಿಂದ ಎಪ್ರಿಲ ೨೯ ಇಲ್ಲವೆ ಸಪ್ಟೆಂಬರದಲ್ಲಿ ಪರೀಕ್ಷೆಯಿದ್ದ ವಿದ್ಯಾರ್ಥಿಗಳು ೧೦೦ಕ್ಕೆ ೮೦ರಷ್ಟು ಯಶಸ್ಸಿನ ಖಾತ್ರಿ ಹಿಡಿಯಬೇಕು.

ತುಲಾ

ಒಟ್ಟಾರೆ ಈ ವರ್ಷ ಪ್ರಾಪಂಚಿಕ ತೊಂದರೆಯಿಂದ ನೀವು ಜರ್ಜರಿತರಾಗಿ ಹೋಗುವಿರಾದರೂ ಉದ್ಯೋಗ ಧಂದೆಯ ದೃಷ್ಟಿಯಿಂದ ಬಹಳ ಉತ್ಸಾಹಹೊಂದುವಿರೆಂಬುದು ನಿಶ್ಚಿತ.

ನಿಮ್ಮ ಆರೋಗ್ಯ ಈ ವರ್ಷ ಅಷ್ಟೊಂದು ಚೆನ್ನಾಗಿ ಉಳಿಯಲಾರದು. ದಿನವೂ ಅದರಲ್ಲಿ ಒಂದಿಲ್ಲೊಂದು ಬಗೆಯ ತಕರಾರು ಇದ್ದದ್ದೆ. ಮೈಉರಿ, ಕಣ್ಣು ಕೆಡುವದು, ಕಿಡ್ನಿವಿಕಾರ, ಮಧುಮೇಹಗಳಿಂದ ತೊಂದರೆಯಾಗುವ ಸಂಭವ ಹೆಚ್ಚು. ಅಲ್ಲದೆ ಬೀಳುವ ದುಃಸ್ವಪ್ನಗಳಿಂದ ಮನಸ್ಸಿನಲ್ಲಿ ಶಾಂತಿಯುಳಿಯುವದಿಲ್ಲ. ಸತ್ತ ಮನುಷ್ಯರು ಮೇಲಿಂದಮೇಲೆ ಸ್ವಪ್ನದಲ್ಲಿ ಬರುವರು. ವಿಶೇಷವಾಗಿ ದಿಸೆಂಬರ ೧೮ ರಿಂದ ಜನೆವರಿ ೧೧, ಫೆಬ್ರುಅರಿ ೫ ರಿಂದ ಮಾರ್ಚ ೨, ಮಾರ್ಚ ೨೯ ರಿಂದ ಎಪ್ರಿಲ ೨೯, ಜುಲೈ ೧ ರಿಂದ ೨೧ ಮತ್ತು ಅಕ್ಟೋಬರ ೨೫ರ ನಂತರದ ಕಾಲದಲ್ಲಿ ತೊಂದರೆಯಾಗುವದು.

ಸಾಡೇಸಾತಿಯ ಮೂರನೇ ೨॥ ವರ್ಷ ಇದೀಗ ಪ್ರಾರಂಭವಾಗಿದೆ. ಇದು ಸಾಡೇಸಾತಿಯ ಕೊನೆಯ ಭಾಗವು. ೧೨ನೇ ಮತ್ತು ೧ನೇ ಶನಿ ಹೋಗಿ ೨ನೇ ಶನಿ ಬಂದಿದ್ದಾನೆ. ೨ನೇ ಸ್ಥಾನ ಕುಟುಂಬ ಮತ್ತು ಧನಸ್ಥಾನ. ಈ ವರ್ಷ ಇದೇ ಸ್ಥಾನಕ್ಕೆ ಶನಿಯ ಜೊತೆಯಲ್ಲಿ ರಾಹು ಬಂದಿರುವನು. ಇದರ ಪರಿಣಾಮವಾಗಿ ಕೌಟುಂಬಿಕ ಸುಖ ಅತ್ಯಂತ ತಾಪದಾಯಕವಾಗುವ ಅಂಜಿಕೆ ಇದೆ. ನಿಮ್ಮನಿಮ್ಮಲ್ಲಿಯ ಕಲಹ ಬಹಳ ಹೆಚ್ಚುವದು. ಸಣ್ಣ ದೊಡ್ಡ ಹಲವಾರು ಪದಾರ್ಥಗಳು ಭೂತಚೇಷ್ಟೆಯಂತೆ ಇಟ್ಟಲ್ಲಿಯೇ ಮಾಯವಾಗುವದರಿಂದ ಬಹಳ ಗೊಂದಲವೇಳುವದು. ಯಾರು ಬೇಕಾದವರು ತಮ್ಮ ಹೋಳಿಗೆಯ ಮೇಲೆ ತುಪ್ಪ ಬಡಿಸಿಕೊಳ್ಳುವರು. ನಿಮ್ಮ ಮತ್ತು ಬಹುಶಃ ಉಳಿದವರ ಮಾತುಗಳು ಸದಾ ಅಭದ್ರವೆನಿಸುವವು. ಹತ್ತಿರವಿದ್ದ ಹಣವೆಲ್ಲ ಬಹುಶಃ ಮುಗಿಯುವದು ಮತ್ತು ಹಣದ ಕೊರತೆ ವಿಪರೀತವಾಗುವದು. ಆದರೂ ಈ ರಾಶಿಯವರಿಗೆ ಶನಿಯು ಬಹಳ ಶುಭಫಲ ಕೊಡುತ್ತ ಹೋಗುವನು. ಆದುದರಿಂದ ಫಜೀತಿಯಾಗುವ ಸರತಿ ಬರುವದಿಲ್ಲ ಮತ್ತು ಕುಟುಂಬದಲ್ಲಿ ಅಪಘಾತ ಮುಂತಾದ್ದೇನೂ ಸಂಭವಿಸುವದಿಲ್ಲ. ಕುಟುಂಬ ಏಕತ್ರವಾಗಿದ್ದರೆ ಮಾತ್ರ ವಿಭಕ್ತವಾಗುವ ಅಂಜಿಕೆಯಿದೆ. ಮನೆಯಲ್ಲಿಯ ನೋಕರಚಾಕರರು ಒಳ್ಳೇ ರೀತಿಯಿಂದ ವರ್ತಿಸುವರು. ಆದರೆ ಅವರ ಜೀವಕ್ಕೆ ಈ ವರ್ಷ ಅಷ್ಟೊಂದು ಸುಖವಿಲ್ಲ. ವಾಹನಗಳು ಮೇಲಿಂದಮೇಲೆ ಕೆಡುವವು. ಆಪ್ತರು ಮತ್ತು ನೆರೆಯವರು ತುಚ್ಛತರೀತಿಯಿಂದ ನಿಮ್ಮನು ನೋಡುವರು. ಮಾನಸಿಕ ತೊಂದರೆ ವಿಪರೀತ. ನೀವು ಒಳ್ಳೆ ಮಾತಾಡಿದರೂ ಎರಡನೆಯವರಿಗೆ ಢೋಂಗೆನಿಸುವದು. ಹೊಲ ತೋಟಪಟ್ಟಿಗಳ ಬಗ್ಗೆ ಮೊದಲಿನ ಕೆಲ ತಿಂಗಳು ಬಹಳ ತೊಂದರೆಯಾಗುವದು. ಆದರೆ ದುಃಖದಲ್ಲಿಯೂ ಸುಖವೆಂದರೆ ಕೊನೆಯಲ್ಲಿ ಕಿಟಕಿಟ ಮುಗಿದು ಮನಸ್ಸಿನಂತೆ ಯಶಸ್ಸು ಸಿಕ್ಕುವದು. ನಿದ್ರೆಯಂತೂ ಅರ್ಧಕ್ಕೆ ಇಳಿಯುವದು. ಕೆಲಸಲ ಕಿವಿಯು ನೋಯಹತ್ತುವದು. ಕಷ್ಟ ಪರಿಹಾರಾರ್ಥ ಶನಿ ಮತ್ತು ರಾಹುವಿನ ಪೂರ್ಣ ಜಪ ಮಾಡಬೇಕು. ಮುಂದೆ ದೊಡ್ಡ ಪ್ರಮಾಣದಲ್ಲಿ ಶನಿ ರಾಹು ದಾನವನ್ನು ಪ್ರತ್ಯೇಕವಾಗಿ ಕೊಡಬೇಕು.

ಸ್ತ್ರೀ ಸುಖಕ್ಕೆ ಈ ವರ್ಷ ಅಷ್ಟೊಂದು ಅನುಕೂಲವಿಲ್ಲದಿದ್ದರೂ ಕೆಟ್ಟೇನೂ ಇಲ್ಲ. ಉಭಯತರಲ್ಲಿ ಪ್ರೇಮ ಮೊದಲಿಗಿಂತ ಹೆಚ್ಚುವದು. ಕ್ಷಣ ಹೊತ್ತು ಪರಸ್ಪರರನ್ನು ಅವಲಂಬಿಸುವದಿಲ್ಲ. ಆದರೂ ನಿಮ್ಮಂತೆ ಅವಳ ಆರೋಗ್ಯವೂ ಅನೇಕ ಸಲ ಕೆಡುವದು. ನವಂಬರ ೨೧ರ ವರೆಗೆ ಅನಂತರ ಜನೆವರಿ ೭ ರಿಂದ ಫೆಬ್ರುಅರಿ ೨೦ ರ ವರೆಗೆ ಅದು ಕೆಲಮಟ್ಟಿಗೆ ಹೆಚ್ಚುವ ಸಂಭವವಿದೆ. ಆದರೆ

ಸುಮಾರು ಈ ವರ್ಷವೆಲ್ಲ ಇರುವ ೧೧ ನೇ ಗುರುವಿನಿಂದ ಪರಸ್ಪರ ಸಹವಾಸದಲ್ಲಿ ವ್ಯತ್ಯಯ ಬರುವದಿಲ್ಲ. ಅವಳಿಗಾವ ಜಡ್ಡು ಅಷ್ಟೇನು ಹೆಚ್ಚುವದಿಲ್ಲ. ಇನ್ನೂ ನಿಮ್ಮ ಲಗ್ನವೇ ಆಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಅದು ನಿಶ್ಚಿತವಾಗಿ ಆಗುವ ಬಾಸಿಂಗಬಲವಿದೆ. ವಧೂವರರು ಪರಸ್ಪರ ಅನುರೂಪರಿರುವರು. ಅತ್ಯಂತ ಉತ್ಸಾಹದಿಂದ ಲಗ್ನವಾಗುವದು. ಆದರೂ ವರದಕ್ಷಿಣೆಯಾಗಲಿ ವಧುವಿಗೆ ವಸ್ತ್ರಾಲಂಕಾರಗಳಾಗಲಿ ಅಷ್ಟಕ್ಕಷ್ಟೆ. ಬೀಗರೂ ಅತ್ಯಂತ ಸರಳವೃತ್ತಿಯವರಿರುವರು.

ನಿಮ್ಮ ಮಕ್ಕಳಲ್ಲಿ ಯಾರದಾದರೂ ಮದುವೆಯಾಗುವದಿದ್ದರೆ ಅವರದಾದರೂ ಅಲ್ಪಾಯಾಸದಿಂದ ಕೂಡಿ ಬರುವದು. ಅಳಿಯ ಇಲ್ಲವೆ ಸೊಸೆ ಗುಣ ಮತ್ತು ರೂಪಗಳಲ್ಲಿ ನಿಮ್ಮ ಅಪೇಕ್ಷೆ ಮೀರಿ ಶ್ರೇಷ್ಠತರಗತಿಯವರು ಸಿಕ್ಕುವರು. ವಧೂ ಇಲ್ಲವೆ ವರ ನೀವು ನೋಡಬೇಕೆಂದು ಮಾಡಿದ ಸ್ಥಳದವರಾಗದೆ ಬೇರೊಂದು ಸ್ಥಳದವರೆ ಸಿಕ್ಕುವರೆಂಬುದು ನಿಮ್ಮ ಪ್ರತ್ಯಯಕ್ಕೆ ಬರುವದು. ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಎಷ್ಟು ಅನುಕೂಲವಿದೆಯೋ ಅಷ್ಟೇ ಅವರಿಗಾಗಿ ಹೆಚ್ಚು ವೆಚ್ಚ ಮಾಡಬೇಕಾದ ಪ್ರಸಂಗಗಳು ಬರುವವು. ಅವರು ನಿಮ್ಮೊಡನೆ ಸ್ವಲ್ಪ ವಿರುದ್ಧವೆ ವರ್ತಿಸುವರು.

ಸಾಡೇಸಾತಿ ಇದ್ದರೂ ೧೧ನೇ ಗುರುವಿನಿಂದ ಧಂದೆ ಕೂಲಿಯವರ ಯಶಕ್ಕೆ ಈ ವರ್ಷ ಅನುಕೂಲವಿದೆ. ಉದ್ಯೋಗಧಂದೆ ಹೆಚ್ಚು ವ್ಯಾಪಿಸಿ ಅಂದಾಜಿಗಿಂತ ನಾಲ್ಕು ದುಡ್ಡು ಹೆಚ್ಚಿಗೆ ಸಿಕ್ಕುವದು. ಕಾಯಂವಾಗಿ ನಡೆಯುವ ಉದ್ಯೋಗಗಳಿಗೆ ದೊಡ್ಡವರ ಆಶ್ರಯ ವಿಶೇಷ ದೊರೆಯುವದು. ಮತ್ತು ಮೊದಲಿಗಿಂತ ಹೆಚ್ಚು ಬೆಳೆಯುವದು. ಮತ್ತು ಪ್ರತಿಷ್ಠೆಯು ಹೆಚ್ಚುವದು. ಕೈ-ಕೆಳಗಿನವರೂ ಸಹಾಯಕ ಮನೋಭಾವದಿಂದ ನಡೆಯುವರು. ನಡೆಯುತಿದ್ದ ಉದ್ಯೋಗವಲ್ಲದೆ ಹೊಸತೊಂದು ಉದ್ಯೋಗವನ್ನು ಈ ವರ್ಷ ಪ್ರಾರಂಭಿಸುವ ಸಂಭವವಿದೆ.

ನೌಕರರಿಗೂ ಈ ವರ್ಷ ದೈವೀಕೃಪೆ ಇದ್ದುದು ನಿದರ್ಶನಕ್ಕೆ ಬರುವದು. ವರಿಷ್ಠರು ನಿಮ್ಮ ಮೇಲೆ ಹೆಚ್ಚು ಜವಾಬದಾರಿಯ ಕೆಲಸವನ್ನು ಹೇರಿ ಸತ್ವಪರೀಕ್ಷೆಯನ್ನು ಮಾಡುವರು. ಆದರೆ ಯಾವದೇ ಬಗೆಯ ಅಕಲ್ಯಾಣವನ್ನು ಮಾಡದೆ ಅನೇಕ ರೀತಿಯಿಂದ ನಿಮ್ಮ ಕಲ್ಯಾಣವನ್ನೇ ಸಾಧಿಸುವರು. ಕೈಕೆಳಗಿನ ಜನರು ಮಾತ್ರ ಬೇಕೆಂತಲೆ ಕೆಲಸ-ಗೇಡಿಗಳಾಗಿ ಪೀಡಿಸುವರು. ಆದರೆ ಕೊನೆಯಲ್ಲಿ ಅವರಿಗೆ ಪರಭಾರೆ ವರಿಷ್ಠರಿಂದಲೆ ಪೆಟ್ಟು ಬೀಳುವದು. ಖಾತ್ರಿಯಾಗಿ ಸಂಭವವಿಲ್ಲದಿದ್ದರೂ ಅಕಲ್ಪಿತ ಘಟನೆಯಿಂದ ಮೇಲಿನ ಗ್ರೇಡು ಸಿಕ್ಕುವದು. ಬದಲಿಯಾಗುವ ಶಾಖೆಯಿದ್ದರೆ ಅತ್ಯಂತ ಅನಾನುಕೂಲ ಸ್ಥಳಕ್ಕೆ ಆಗುವ ಅಂಜಿಕೆಯಿದೆ. ನವಂಬರ ೧೬ ರಿಂದ ಜನೆವರಿ ೧೪, ಫೆಬ್ರುಅರಿ ೧೨ ರಿಂದ ಮಾರ್ಚ ೧೩, ಎಪ್ರಿಲ ೧೩ ರಿಂದ ಜುಲೈ ೧೬, ಅಗಸ್ಟ ೧೬ ರಿಂದ ಸಪ್ಟಂಬರ ೧೬ ಮತ್ತು ಅಕ್ಟೋಬರ ೧೭ ರ ನಂತರದ ಕಾಲವು ಬಹಳ ಅನುಕೂಲ. ಆದರೂ ವೆಚ್ಚವೂ ಬಹಳ ಹೆಚ್ಚಿ ವಿಶೇಷ ಸಂಗ್ರಹ ಮಾಡುವದೇ ಸಾಧ್ಯವಾಗುವುದಿಲ್ಲ. ಮಿತ್ರಸುಖ ಅನುಕೂಲ. ಬಂಧುಭಗಿನಿಯರಿಗೆ ಉತ್ಕರ್ಷಕಾರಕ ಘಟನೆಗಳು ಸಂಭವಿಸುವವು. ಒಂದೆರಡು ಸಲವಾದರೂ ದೂರದ ಪ್ರವಾಸ ಸಂಭವಿಸುವದು. ಆದರೆ ಸಮೀಪದ ಪ್ರವಾಸ ಬಹಳ ಕಡಮೆ. ದೇವ-ದೈವಗಳಲ್ಲಿ ವಿಶ್ವಾಸ ಹೆಚ್ಚುವದು.

ದಾವೆ ಖಟಲೆ ಮತ್ತು ಖಾಸಗಿ ಸ್ಪರ್ಧೆಗಳಲ್ಲಿ ಯಶಸ್ಸಿನ ಮಾನದಿಂದ ದಗದಗಿ ಮತ್ತು ವೆಚ್ಚ ಹೆಚ್ಚುತ್ತ ಹೋಗುವದು. ಶತ್ರುಗಳಿಗೂ ಈ ವರ್ಷ ಬಹಳ ಅಪಯಶಸ್ಸಿನದು. ನಿಮ್ಮ ಮೇಲೆ ಫೌಜದಾರಿಮಾಡುವದಾಗಿ ಯಾರೊಬ್ಬರು ಬೆದರಿಕೆ ಹಾಕುವರು. ಕೊನೆಗೆ ಅದು ಸುಳ್ಳೆನಿಸುವದು.

ಹಡೆಯುವ ಸ್ತ್ರೀಯರು ಈ ರಾಶಿಯವರಿದ್ದರೆ ಅವರಿಗೆ ಬಹುಶಃ ಗಂಡು ಹುಟ್ಟುವವು. ಆದರೆ ಜನೆವರಿ ೭ ರಿಂದ ಫೆಬ್ರುವರಿ ೨೦ ಮತ್ತು ಮೇ ೨೦ ರ ನಂತರದ ಕಾಲ ಕಷ್ಟಪ್ರಸೂತಿಯದಾಗಿದೆ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಮಾರ್ಚ ೧೪ ರಿಂದ ಮೇ ೧೧ ರ ಮಧ್ಯದಲ್ಲಿ ಆಗುವದೋ ಮತ್ತು ಅಕ್ಟೋಬರ ೧೬ರ ನಂತರವಾಗುವದೋ ಅವರಿಗೆ ಯಶಸ್ಸಿನ ಬಗ್ಗೆ ಅಷ್ಟೊಂದು ಖಾತ್ರಿ ಹೇಳಲಿಕ್ಕೆ ಬರುವದಿಲ್ಲ. ಆದರೆ ಉಳಿದ ವೇಳೆಯಲ್ಲಿ ಪರೀಕ್ಷೆಯಾದರೆ ನಿಶ್ಚಯವಾಗಿ ಯಶಸ್ವಿಯಾಗುವಿರಿ.

ವೃಶ್ಚಿಕ

ಒಟ್ಟಾರೆ ಈ ವರ್ಷ ನೀವು ನೀರಲ್ಲಿ ಹೊರಟ ನೌಕೆಯಂತೆ ತೇಲುತ್ತ ಮುಳುಗುತ್ತ ನಡೆಯಬೇಕಾಗಿ ಬಂದರೂ ಕೊನೆಯಲ್ಲಿ ನಿಮಗೊಳ್ಳೆಯದಾಗುವದೆಂಬಲ್ಲಿ ಸಂದೇಹವಿಲ್ಲ.

ಈ ರಾಶಿಯು ಜನರಿಗೆ ಸಾಡೇಸಾತಿ ಸುರುವಿದ್ದು ಅದರ ಮೊದಲನೆ ಎರಡೂವರೆ ವರ್ಷ ಇದೀಗ ಕೊನೆಗಂಡಿವೆ. ಎರಡನೆ ಭಾಗ ಪ್ರಾರಂಭವಾಗಿದೆ. ಹನ್ನೆರಡನೇ ಅರ್ಥಾತ್ ವ್ಯಯಸ್ಥಾನದಲ್ಲಿದ್ದ ಶನಿಯು ಸಂಚಾರ ಮುಗಿದು ಈಗ ಮೊದಲನೇ ಅಂದರೆ ಜನ್ಮಸ್ಥ ಶನಿ ಬಂದಿರುವನು. ಈ ವರ್ಷ ಶನಿಯು ಜೊತೆಯಲ್ಲಿ ರಾಹುವೂ ಇರುವನು. ಅರ್ಥಾತ್ ಈ ಎರಡು ಪಾಪಗ್ರಹಗಳಿಂದ ನಿಮ್ಮ ಆರೋಗ್ಯ ಅಷ್ಟೊಂದು ಚೆನ್ನಾಗಿರುವದಿಲ್ಲ. ಅಲ್ಲದೆ ಅದು ಎಷ್ಟರ ಮಟ್ಟಗೆ ಕೆಟ್ಟರುವದೊ ಅದಕ್ಕಿಂತ ಹೆಚ್ಚು ನಿಮ್ಮ ಮನಸ್ಸೇ ಗಾಬರಿಯಾಗುವದು. ಆದರೂ ಗಂಡಾಂತರದ ಅಂಜಿಕೆಯೇನೂ ಇರುವದಿಲ್ಲ. ಏಕೆಂದರೆ ಮಾರಕೇಶ (ಈ ರಾಶಿಯು) ಗುರು ಇಡೀ ವರ್ಷ ಅನುಕೂಲನಿರುವನು. ವಾತಪೀಡೆ, ಬದ್ಧಕೋಷ್ಠ, ಮೂಲವ್ಯಾಧಿ ಇಲ್ಲವೆ ಅಂತರ್ಗಳದಂಥ ವಿಕಾರಗಳು ಹೆಚ್ಚಿಗೆ ಸಂಭವಿಸುವವು. ಫೆಬ್ರುವರಿ ೨೦ ರಿಂದ ಎಪ್ರಿಲ ೪ ಮತ್ತು ಅಗಸ್ಟ ೨ ರಿಂದ ಅಕ್ಟೋಬರ ೧೯ ಈ ಕಾಲದಲ್ಲಿ ಪಥ್ಯ ಮುಂತಾದ್ದನ್ನು ಚೆನ್ನಾಗಿ ಸಂಭಾಳಿಸಬೇಕು ಮತ್ತು ಶನಿ, ರಾಹು ಹಾಗು ಮಂಗಳನ ಸಂಪೂರ್ಣ ಜಪಮಾಡುವದು ಹಿತಪ್ರದವಾಗಿದೆ.

ಉಳಿದ ವಿಷಯಗಳಲ್ಲಿ ದೇಹಸುಖಕ್ಕೆ ಈ ವರ್ಷ ಬಹಳ ಉತ್ತಮ ಉಳಿದು ಕುಟುಂಬದಲ್ಲಿ ಬಹಳ ವರ್ಚಸ್ಸು ಉಳಿಯುವದು. ಮನೆಯಲ್ಲಿ ಕೌಟುಂಬಿಕ ಉತ್ಕರ್ಷದ ಒಂದೆರಡು ಘಟನೆಗಳಾದರೂ ಒಂದರ ಹಿಂದೊಂದು ಸಂಭವಿಸುವವು. ಮೇ ೧೧ ರಿಂದ ಅಕ್ಟೋಬರ ೧೬ ರ ಕಾಲ ಬಹಳ ಹಿತದಾಯಕ. ಆಪ್ತರು ಮತ್ತು ನೆರೆಯವರು ಆದರಭಾವದಿಂದ ವರ್ತಿಸುವರು. ಆಸ್ತಿಯಲ್ಲಿಯೂ ಕೆಲ ಅನುಕೂಲ ಘಟನೆಗಳು ಸಂಭವಿಸುವವು. ನೋಕರರು ವಾಹನಗಳು ಮೊದಲಾದವುಗಳ ಸುಖವೂ ಅನುಕೂಲ ದೊರೆಯುವದು. ಬಂಧು ವರ್ಗದವರು ಉತ್ಕರ್ಷಹೊಂದುವರು. ಅವರು ನಿಮ್ಮೊಡನೆ ಪ್ರೇಮದಿಂದ ನಡೆಯುವರು. ಕೆಲ ಹೊಸ ವಸ್ತುಗಳನ್ನು ಸಂಗ್ರಹಿಸುವಿರಿ.

ಸ್ತ್ರೀಸುಖವು ಪ್ರೇಮದೃಷ್ಟಿಯಿಂದ ಅನುಕೂಲ. ಸಹವಾಸಸುಖವೂ ಅನುಕೂಲ. ೮—೧೫ ದಿನಗಳಿಗಿಂತ ಹೆಚ್ಚಿಗೇನೂ ಸ್ತ್ರೀ ಸುಖದಲ್ಲಿ ಅಂತರ ಬೀಳುವದಿಲ್ಲ. ಉಭಯತರಲ್ಲಿ ಕೆಲವೊಮ್ಮೆ ಶಾಬ್ದಿಕ ಕಲಹದ ಯೋಗವಿದ್ದರೂ ಪರಸ್ಪರರಲ್ಲಿ ಶ್ರದ್ಧೆ ಅಚಲವೆ. ಅವಳ ಆರೋಗ್ಯ ಒಟ್ಟಾರೆ ಅನುಕೂಲ. ಆದರೆ ಯಾವಾಗಾದರೊಮ್ಮೆ ಪಿತ್ತವಿಕಾರವಾಗುವ ಸಂಭವ. ನಿಮ್ಮ ಮದುವೆ ಇನ್ನೂ ಆಗಿರದಿದ್ದರೆ ಅದು ಆಗುವ ಸಂಭವ ಮಾತ್ರ ಈಗ ಬಹಳ ಕಡಮೆಯಿದೆ. ಅದರಲ್ಲಿಯೂ ಬಾಸಿಂಗಬಲ ಹೆಚ್ಚಿಗೆ ಇದ್ದರೆ ಅವರ ಮದುವೆ ಮಾರ್ಚ ೧೪ರಿಂದ ಮೇ೧೧ರ ಮಧ್ಯದಲ್ಲಿ ಆಗುವದು. ವಧೂವರರು ಪರಸ್ಪರ ಕೂಡುವರು.

ನಿಮ್ಮ ಮಕ್ಕಳ ಮದುವೆಯಾಗುವದಿದ್ದರೆ ಅದು ಆಗುವದು ಕಠಿನವೆ. ಕದಾಚಿತ್ ನಿಶ್ಚಯವಾಗಿಯೂ ಉಳಿಯುವದು. ಮಾರ್ಚ ೧೪ ರಿಂದ ಮೇ ೧೧ ರ ಮಧ್ಯದಲ್ಲಿ ಸಂಭವಿಸಬಹುದು. ಅಳಿಯ ಇಲ್ಲವೆ ಸೊಸೆ ರೂಪಗುಣಗಳಿಂದ ಒಳ್ಳೆಯವರಿರುವದು ನಿಜ. ಆದರೆ ಅವರು ನಿಮ್ಮೊಡನೆ ಮಾತ್ರ ಅಷ್ಟೊಂದು ಕೂಡಿ ನಡೆಯುವದಿಲ್ಲ. ನಿಮ್ಮ ಮಕ್ಕಳು ನಿಮ್ಮೊಡನೆ ಅಷ್ಟೊಂದು ಚೆನ್ನಾಗಿ ನಡೆಯುವದಿಲ್ಲ.

ಧಂದೆ ಕೂಲಿಯವರಿಗೂ ಈ ವರ್ಷ ಮಧ್ಯಮ ಪ್ರತಿಯದೆ. ಉದ್ಯೋಗದ ಬಗ್ಗೆ ಮಾಡಿದ ಸಾಹಸ ಮತ್ತು ಪ್ರಯತ್ನದ ಮಾನದಿಂದ ಯಶಸ್ಸು ಸಿಕ್ಕುವದು ಕಠಿನವೆ. ಪ್ರಗತಿ ಪ್ರತಿಷ್ಠೆ ಉತ್ತಮವಿದ್ದರೂ ದ್ರವ್ಯಲಾಭ ಸ್ವಲ್ಪೇ. ಕೈಯಲ್ಲಿದ್ದ ದುಡ್ಡು ಬೇಗಬೇಗ ವೆಚ್ಚ ಮಾಡಬೇಕಾಗುವ ಪ್ರಸಂಗ ಬರುವದು. ಆದರೆ ಅದರಲ್ಲಿ ಬಹಳಷ್ಟು ಹಣ ಶುಭ ಮತ್ತು ಮೊದಲು ಅಪೇಕ್ಷಿಸಿದ ಕೆಲಸಗಳಿಗಾಗಿಯೆ. ನಿಮ್ಮ ಸದ್ಗುಣ ಮತ್ತು ಪರಹಿತಕ್ಕಾಗಿ ನೀವು ಮಾಡಿದ ಸ್ವಾರ್ಥತ್ಯಾಗಗಳಿಗಾಗಿ ಜನರು ನಿಮ್ಮ ಗುಣಗೌರವ ಮಾಡುವರು. ಆದರೆ ಹಣದ ಸಹಾಯ ಬೇಕಾದರೆ ಮಾತ್ರ ಅದು ಯಾರಿಂದಲೂ ಸಿಕ್ಕಲಾರದು. ಮತ್ತು ನಿಮ್ಮ ವ್ಯವಹಾರ ಸುರಕ್ಷಿತ ಮತ್ತು ಸುರಳಿತ ಉಳಿಯುವದಕ್ಕಾಗಿ ಸಾಲವನ್ನು ತೆಗೆಯಬೇಕಾಗುವದು. ಯಾರಾದರೂ ಹಣ ಕೊಡಲು ಮುಂದೆ ಬಂದರೆ ನಿಮ್ಮ ದುರ್ದೈವವೇ ಅದಕ್ಕೆ ಅಡ್ಡ ಬರುವದು. ಆದರೆ ಇಡೀವರ್ಷ ನಿಮಗಿರುವ ೧೦ ನೇ ಗುರುವಿನ ಪರಿಣಾಮವಾಗಿ ಮರ್ಯಾದೆ ಮತ್ತು ಲೌಕಿಕ ಅಬಾಧಿತ ಉಳಿಯುವದೆಂಬಲ್ಲಿ ಸಂದೇಹವಿಲ್ಲ.

ನೋಕರರಿಗೆ ಈ ವರ್ಷ ಪಗಾರ ಹೆಚ್ಚಳಕ್ಕಿಂತ ಅಧಿಕಾರವೃದ್ಧಿಯ ಯೋಗವೆ ಹೆಚ್ಚಿಗೆ. ಕಾಯಂವಾಗದಿದ್ದರೂ ಟೆಂಪರರಿಯಾದರೂಮೇಲಿನಗ್ರೇಡ ಸಿಕ್ಕುವದು ನಿಶ್ಚಿತ. ವರಿಷ್ಠ ಅಧಿಕಾರಿಗಳ ಮರ್ಜಿ ವಿಶೇಷವಿರುವದು. ವಿಶೇಷ ಕೆಲಸಗಳಲ್ಲಿ ಅವರು ನಿಮಗೆ ಸಹಾಯಮಾಡುವರು ಇಲ್ಲವೆ ನಿಮ್ಮ ನೇಮಕದ ಶಿಫಾರಸು ಮಾಡುವರು. ವರಿಷ್ಠರು ಕನಿಷ್ಠರು ಈ ಸಂಬಂಧವು ಕದಾಚಿತ ಮಿತ್ರತ್ವದಲ್ಲಿ ರೂಪಾಂತರ ಹೊಂದಬಹುದು. ಬದಲಿಯಾಗುವ ಖಾತೆ ಇದ್ದರೆ ಬದಲಿಯಾಗುವದಿಲ್ಲ. ಒಂದೊಮ್ಮೆ ಆದರೂ ಪ್ರಸಿದ್ಧಿಯನ್ನು ಹೆಚ್ಚಿಸುವಂಥ ಮತ್ತು ಸುಖ-ಸೌಕರ್ಯಗಳುಳ್ಳ ಸ್ಥಳಕ್ಕೆ ಅಗುವದು. ಕೈಕೆಳಗಿನ ನವಕರರು ವಿನಮ್ರರಾಗಿ ನಡೆಯುವರು. ಸಾರ್ವಜನಿಕಾಭಿಪ್ರಾಯ ಅನುಕೂಲ ಉಳಿಯುವದು. ಅದರಲ್ಲಿಯೂ ಲಾಭಕ್ಕಾಗಿ ನವಂಬರ ೨೩ ರಿಂದ ಮಾರ್ಚ ೫, ಮಾರ್ಚ ೨೩ ರಿಂದ ಎಪ್ರಿಲ ೮, ಎಪ್ರಿಲ ೨೬ ರಿಂದ ಜುಲೈ ೧೬ ಮತ್ತು ಅಗಸ್ಟ ೨೧ ರಿಂದ ಅಕ್ಟೋಬರ ೨೮ ರ ಕಾಲ ಹೆಚ್ಚು ಅನುಕೂಲ. ಹಳೆಯ ಗೆಳೆಯರು ಸ್ವಲ್ಪ ದೂರ ದೂರ ಹೋಗುವರು. ಆದರೆ ಹೊಸಬರು ಮಾತ್ರ ಒಳ್ಳೆ ಪ್ರೇಮದಿಂದ ವರ್ತಿಸುವರು. ದೂರದ ಪ್ರವಾಸ ಬಹಳ ಸಲ ಸಂಭವಿಸುವದು. ಮತ್ತು ಅದರಲ್ಲಿಯು ಉದ್ದೇಶ ಬಹುಶಃ ಸಾಧಿಸುವದು. ಭೆಟ್ಟಿಯ ಕೆಲಸ ಉತ್ತಮ. ಆದರೆ ಲೇಖನ ಕೆಲಸ ಸ್ವಲ್ಪ ತೊಂದರೆಯದು. ದೊಡ್ಡವರ ಭೆಟ್ಟಿ ಸಹವಾಸದ ಯೋಗ ಬಹಳ.

ದಾವೆ ಖಟಲೆ ಖಾಸಗಿ ಸ್ಪರ್ಧೆಗಳಲ್ಲಿ ವೆಚ್ಚ ತೊಂದರೆ ಮತ್ತು ದಗದಗಿ ಮೊದಲು ಬಹಳ. ಆದರೆ ಕೈಯಲ್ಲಿ ಪ್ರತ್ಯಕ್ಷ ಯಶಸ್ಸು ದೊರೆಯದಿದ್ದರೂ ಮುಂದಾದರೂ ಸಿಕ್ಕುವಂಥ ಅನುಕೂಲ ಘಟನೆಗಳು ಒದಗುವವು. ನಿಮ್ಮ ಕೆಲಸಗಳು ಹಾಗೆಯೆ ಸಾಗುವವು. ಶತ್ರುಗಳಲ್ಲಿ ಕೆಲವರು ಉಂಟಾದ ಕಲಹವನ್ನು ತೀರಿಸಿಕೊಳ್ಳುವದಕ್ಕೆ ಸಿದ್ಧರಾಗುವರು.

ಯಾವ ಸ್ತ್ರೀಯರು ಮಾರ್ಚ ೧೪ ರಿಂದ ಮೇ ೧೧ ಮತ್ತು ಅಕ್ಟೋಬರ ೧೬ ರ ನಂತರ ಹಡೆಯಲಿರುವರೋ ಅವರಿಗೆ ಯಾವದೇ ಬಗೆಯ ತೊಂದರೆಯಾಗದೆ ಬಹುಶಃ ಗಂಡು ಮಗು ಹುಟ್ಟುವದು. ಉಳಿದ ಕಾಲಕ್ಕೆ ಹಡೆಯುವವರಿಗೆ ಬಹುಶಃ ಹೆಣ್ಣು ಹುಟ್ಟುವದಲ್ಲದೆ ಪ್ರಸೂತಿ ಕಷ್ಟವನ್ನು ಅನುಭವಿಸಬೇಕಾಗಿ ಬರುವದು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಮೇಲಿನ ಅವಧಿಯಲ್ಲಿ ಅಂದರೆ ಮಾರ್ಚ ೧೪ ರಿಂದ ಮೇ ೧೧ ಮತ್ತು ಅಕ್ಟೋಬರ ೧೬ ರ ನಂತರ ಅಗುವದೋ ಅವರು ನಿಶ್ಚಯವಾಗಿ ಪಾಸಾಗುವರು.

ಧನು

ಒಟ್ಟಾರೆ ಈ ವರ್ಷ ಔದ್ಯೋಗಿಕ ದೃಷ್ಟಿಯಿಂದ ಅನಾನುಕೂಲವಿಲ್ಲದಿದ್ದರೂ ಪ್ರತಿಯೊಂದು ವಿಷಯದಲ್ಲಿ ಆಳವಾಗಿ ವಿಚಾರ ಮಾಡಿಯೆ ಮುಂದಿನ ಹೆಜ್ಜೆ ಇಡಿರೆಂದು ಎಚ್ಚರಿಕೆ ಕೊಡುತ್ತದೆ.

ಈ ರಾಶಿಯ ಜನರ ಆರೋಗ್ಯ ಈ ವರ್ಷ ಒಂದೆರಡು ಸಣ್ಣ ದೊಡ್ಡ ಅಪಘಾತದಿಂದ, ಜನೆವರಿ ೭ ರಿಂದ ಫೆಬ್ರುಅರಿ ೨೦ ಇಲ್ಲವೆ ಎಪ್ರಿಲ ೪ ರಿಂದ ಮೇ ೨೦ ರ ಮಧ್ಯದಲ್ಲಿ ಕೆಡುವ ಅಂಜಿಕೆ ಹೆಚ್ಚಿಗಿದೆ. ಬಹುಶಃ ನೀರಿನಲ್ಲಿಯ ಅಪಘಾತ ಇರಬಹುದು. ಉಳಿದದ್ದು ಆರೋಗ್ಯ ದೃಷ್ಟಿಯಿಂದ ದೇಹಕ್ಕೆ ಹಿತವೆ.

ಉಳಿದ ವಿಷಯಗಳಲ್ಲಿ ದೇಹ ಸುಖಕ್ಕೆ ಈ ವರ್ಷ ಅಷ್ಟೊಂದು ಅನುಕೂಲವಿಲ್ಲ. ಏಕೆಂದರೆ ಇದೇ ತಾನೆ ಬಂದ ಹನ್ನೆರಡನೆಯ ಅಂದರೆ ವ್ಯಯಸ್ಥಾನದಲ್ಲಿಯ ಶನಿಯು ಈ ರಾಶಿಯವರಿಗೆ ಸಾಡೇಸಾತಿ ಪ್ರಾರಂಭವಾಯಿತೆಂದು ಎಚ್ಚರಿಕೆ ಕೊಡುತ್ತಾನೆ. ಮತ್ತು ಈ ಶನಿಗ್ರಹ ಈ ರಾಶಿಯ ದ್ವಿತೀಯ ಮತ್ತು ತೃತೀಯೇಶ ಅಂದರೆ ಧನ ಮತ್ತು ಪರಾಕ್ರಮಾಧಿಪತಿ ಇರುವನು. ಇದರಿಂದ ಧನಸಂಚಯಕ್ಕಾಗಿ ನಿರರ್ಥಕ ವೆಚ್ಚ ಮಾಡಬೇಕಾಗುವದು. ಮೊದಲೆ ಯಾವುದೊಂದು ವ್ಯಸನವಿದ್ದರೆ ಅದು ಹೆಚ್ಚುವದು. ಆದರೆ ಹಾಗೆ ವ್ಯಸನವಿಲ್ಲದಿದ್ದರೂ ಯಾವದೊಂದು ವ್ಯಸನ ಹೊಸದಾಗಿ ಹತ್ತುವ ಅಂಜಿಕೆಯಿದೆ. ರಾಜವಿರೋಧಿ ಇಲ್ಲವೆ ಸಮಾಜವಿರೋಧಿ ಕೃತಿಗಳ ಆರೋಪದಿಂದ ದಂಡ ಇಲ್ಲವೆ ಶಿಕ್ಷೆ ಅಥವಾ ನಿದಾನ ಜನರಿಂದ ಉಪಹಾಸದ ಅಂಜಿಕೆಯೂ ಇದೆ. ಏಕತ್ರ ಕುಟುಂಬವಿದ್ದರೆ ಅದರಲ್ಲಿ ಒಡಕು ಹುಟ್ಟುವದು ಮತ್ತು ಕೂಡಿಯೇ ಉಳಿದರೆ ನಿಮ್ಮನಿಮ್ಮಲ್ಲಿ ಕೂಡಿ ನಡೆಯುವದಿಲ್ಲ. ಆದರೂ ರಾಶಿಸ್ವಾಮಿ ಗುರು ಇಡೀ ವರ್ಷ ೯ ನೇ ಮತ್ತು ೧೦ ನೇ ಶುಭ ಸ್ಥಾನಗಳಲ್ಲಿರುವದರಿಂದ ಮೇಲೆ ಹೇಳಿದ ಫಲಗಳು ತೀವ್ರ ದೊರೆಯವೆ ಬಹಳಷ್ಟು ಸೌಮ್ಯ ಪ್ರಮಾಣದಲ್ಲಿ ದೊರೆಯುವವು. ಆಸ್ತಿಯಲ್ಲಿ ಹೆಚ್ಚು ವೆಚ್ಚದ ಆದರೂ ಒಳ್ಳೆ ಸುಖಸೌಕರ್ಯಗಳ ಸುಧಾರಣೆಗಳನ್ನು ಬಹಳ ಮಾಡುವಿರಿ. ಸಮೀಪದ ಆಪ್ತರು ಸ್ವಲ್ಪ ಒತ್ತಾಯದಿಂದಲಾದರೂ ನಿಮ್ಮಿಂದ ಹಿತಕಾರಕವಾದ ಕೆಲಸಗಳನ್ನು ಮಾಡಿಸಿಕೊಳ್ಳುವರು. ನೋಕರರು ಮೊದಲಾದ ಆಶ್ರಿತವರ್ಗದವರು ನ್ಯಾಯನಿಷ್ಠುರತೆಯಿಂದ ವರ್ತಿಸುವರು. ಆದರೂ ಅವರೆಲ್ಲ ತಮ್ಮ ಕೆಲಸಗಳಲ್ಲಿ ಒಳ್ಳೆ ಕಾರ್ಯಕ್ಷಮರಾಗುವರು. ವಾಹನಗಳ ದುರಸ್ತಿಗಾಗಿ ಬಹಳ ವೆಚ್ಚ ಮಾಡಬೇಕಾಗಿ ಬಂದರೂ ಅವಶ್ಯಕ ಪ್ರಸಂಗಗಳಲ್ಲಿ ಅವೊಳ್ಳೆ ಉಪಯುಕ್ತವೆನಿಸುವವು. ಒಟ್ಟಾರೆ ಅವಶ್ಯಕ ಸುಖಕ್ಕಾಗಿ ನೀವು ಕುರಕುರಿ ಮಾಡಲಾರಿರೆಂಬುದು ನಿಷ್ಕರ್ಷ.

ಸ್ತ್ರೀಸೌಕರ್ಯ ಈ ವರ್ಷ ಬಹಳ ಉತ್ತಮ. ಉಭಯತರಲ್ಲಿ ಪ್ರೇಮ ಹೆಚ್ಚುವದು ಮತ್ತು ಸಹವಾಸವೂ ಬಹಳ ಕಾಲ ಸಿಕ್ಕುವದು. ಆದರೆ ಅವಳಿಗೆ ಫೆಬ್ರುಅರಿ ೨೦ ರಿಂದ ಎಪ್ರಿಲ ೪ ಮತ್ತು ಜುಲೈ ೩೧ ರಿಂದ ಅಗಷ್ಟ ೨೦ ಈ ದಿನಗಳು ಮಾತ್ರ ಸ್ವಲ್ಪ ಕಷ್ಟದ್ದೆನಿಸುವವು. ಅವಳ ತವರು ಮನೆಯವರಿಗೆ ಈ ವರ್ಷ ಬಹಳ ಅಸಮಾಧಾನ ಕಾರಕ. ನಿಮ್ಮ ಲಗ್ನವಿನ್ನೂ ಆಗುವದಿದ್ದರೆ ಈ ವರ್ಷ ಮಾಡಿಕೊಳ್ಳುವದಿದ್ದರೆ ಅಲ್ಪಾಯಾಸದಿಂದ ಮತ್ತು ಅನಾಯಾಸವಾಗಿ ಕೂಡಿಬಂದು ಲಗ್ನವಾಗಿ ಹೋಗುವದು. ವಧೂವರರು ಪರಸ್ಪರ ಅನುರೂಪ ಇರುವರು ಆದರೆ ಮುಹೂರ್ತ ಮಾತ್ರ ಮುಂದೆ ಬೀಳಬಹುದು. ನಿಮ್ಮ ಅಥವಾ ಅವರ ಗೌತ್ರಿಕ ಅಡಚಣಿಗಾಗಿ ಅಷ್ಟೆ. ಅದರಂತೆ ನಿಮ್ಮ ಮಕ್ಕಳ ಲಗ್ನಮಾಡುವದಿದ್ದರೆ ಅವಾವರೂ ಯೋಗ ಸ್ಥಳದಲ್ಲಿ ಒದಗಿ ಬರುವದು ಮತ್ತು ನಿಶ್ಚಿತ ಮುಹೂರ್ತದಲ್ಲಿ ಏನೂ ತಕರಾರು ಇಲ್ಲದೆ ಲಗ್ನವಾಗಿ ಹೋಗುವದು. ಆದರೆ ಅಳಿಯ ಇಲ್ಲವೆ ಸೊಸೆ ಮೊದಲು ತಿಳಿದಷ್ಟು ವಿನಯಿಗಳಿರುವದಿಲ್ಲ. ನಿಮ್ಮ ಹೆಣ್ಣು-ಗಂಡು ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಬಹಳ ಉತ್ತಮ ಆದರೆ ನಿಮ್ಮೊಡನೆ ಮಾತ್ರ ಅವರು ಉದ್ಧಟ ರೀತಿಯಿಂದ ವರ್ತಿಸುವರು. ಸಾಡೇಸಾತಿ ಇದ್ದರೂ ಧಂದೆ ಕೂಲಿಯವರಿಗೆ ಈ ವರ್ಷ ಕೆಟ್ಟೇನೂ ಇಲ್ಲ. ಅಪೇಕ್ಷೆಗಿಂತ ಹೆಚ್ಚು ಅನುಕೂಲವೆನಿಸುವದು. ಧಂದೆ ಬಹಳ ತೇಜಿಯಾಗುವದರಿಂದ ನಾಲ್ಕು ಮಾತುಆಡಲು ಕೂಡ ನಿಮಗೆ ಸವಡು ಉಳಿಯುವದಿಲ್ಲ. ಗಿರಾಕಿಗಳು ಹೆಚ್ಚುವರು ಮತ್ತು ನಿಮ್ಮ ಬಗ್ಗೆ ಒಳ್ಳೆ ಸಂತುಷ್ಟರಿರುವರು. ಪತ್ತು ಮತ್ತು ಪ್ರತಿಷ್ಠೆ ಹಾಗೆಯೆ ಉಳಿಯುವದು ಮತ್ತು ದುರ್ಘಟ ಕೆಲಸಗಳೂ ಸಾಧ್ಯವಾಗುವವು. ಪರಿಚಯವಿದ್ದ ಸರಕಾರಿ ಅಧಿಕಾರಿಗಳಿಂದ ಧಂದೆಯಲ್ಲಿಯ ಅನೇಕ ಅಡಚಣಿಗಳು ದೂರಾಗುವವು. ದ್ರವ್ಯಲಾಭ ತುಂಬ. ಆದರೆ ವ್ಯಯಸ್ಥಾನದ ಶನಿ ವಿಪರೀತ ಲಾಭ ಪಡೆಯಬೇಕೆಂಬ ಆಸುರೀ ಮಹತ್ವಾಕಾಂಕ್ಷೆಯನ್ನು ಹುಟ್ಟಿಸಿ ಅವ್ಯಾಪಾರೇಷು ವ್ಯಾಪಾರ ಮಾಡುವ ಮೋಹದಲ್ಲಿ ನಿಮ್ಮನ್ನು ಕೆಡಹುವನು ಮತ್ತು ಕೊನೆಗೆ ಅದರಲ್ಲಿ ಪೂರ್ಣ ಮೋಸ ಹೋಗಿ ವಿಪರೀತ ಹಾನಿಯಲ್ಲಿ ಬರುವಿರಿ. ಆದುದರಿಂದ ಸೂಚಿಸಿದಷ್ಟು ಮತ್ತು ಪಚನವಾಗುವಷ್ಟು ತೆಗೆದುಕೊಳ್ಳಬೇಕೆಂಬ ಎಚ್ಚರಿಕೆಯಿಂದ ಇರ್ರಿ.

ನೋಕರರಿಗೂ ಈ ವರ್ಷ ಉತ್ಕರ್ಷಪ್ರದವಿದೆ. ಮೇಲಿನ ಗ್ರೇಡು ಖಾತ್ರಿಯಿಂದ, ನಿಮ್ಮ ಹಕ್ಕು ಇಲ್ಲದಿದ್ದರೂ ಸಿಕ್ಕುವದು. ವರಿಷ್ಠರು ಒಳ್ಳೆ ಸಂತುಷ್ಟರಿರುವರು. ಆದರೂ ಕೈಕೆಳಗಿನವರು ನಿಮ್ಮ ಕಾಲನ್ನು ಹಿಂದೆ ಜಗ್ಗಲು ಬಹಳ ಪ್ರಯತ್ನ ಮಾಡುವರು. ವರಿಷ್ಠರು ಸಂತುಷ್ಟರಿದ್ದರೂ ಅದು ಮೃಗಜಲದ ನೀರೆಂದು ಬಗೆದು ದಕ್ಷತೆಯಿಂದ ಕೆಲಸಮಾಡಬೇಕು ಮತ್ತು ನಿಮ್ಮ ಮಾರ್ಗ ಬಿಟ್ಟು ವರ್ತಿಸಬಾರದು. ಇದನ್ನು ಚೆನ್ನಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಸಾಡೇಸಾತಿ ಇರುವದರಿಂದ ಯಾವಾಗ ಏನು ಮೈಮೇಲೆ ಬರುವದೊ ನಿಯಮವಿಲ್ಲ ಲಂಚ ತೆಗೆದುಕೊಳ್ಳುವ ಶಾಖೆಯಲ್ಲಿ ಕೆಲಸಮಾಡುತಿದ್ದರೆ ಲಂಚ ತೆಗೆದುಕೊಳ್ಳ ಹೋಗಿ ಗಂಡಾಂತರದಲ್ಲಿಯೇ ಬೀಳಬಹುದೆಂದು ಎಚ್ಚರಿಸಬೇಕಾಗಿದೆ. ವರ್ಗವಾಗುವದಿದ್ದರೆ ಸ್ವಲ್ಪ ಹೆಚ್ಚಿನ ಸ್ಥಳಕ್ಕೆ ಹೋದರೂ ಪ್ರಾಪಂಚಿಕ ಅನಾನುಕೂಲ ಸ್ಥಳಕ್ಕೆ ಹೋಗುವಿರಿ. ಲಾಭಕ್ಕೆ ವಿಶೇಷವಾಗಿ ನವಂಬರ ೨೪ ರಿಂದ ಡಿಸೆಂಬರ ೧೪, ಜನೆವರಿ ೧೧ ರಿಂದ ಫೆಬ್ರುಅರಿ ೫, ಮಾರ್ಚ ೨ ರಿಂದ ೨೯, ಎಪ್ರಿಲ ೨೯ ರಿಂದ ಜುಲೈ ೧, ಜುಲೈ ೨೧ ರಿಂದ ಸಪ್ಟಂಬರ ೧ ಮತ್ತು ಸಪ್ಟೆಂಬರ ೨೪ ರಿಂದ ಅಕ್ಟೋಬರ ೨೫ ಈ ಕಾಲ ಹೆಚ್ಚು ಅನುಕೂಲ. ಮಿತ್ರಸುಖಕ್ಕೆ ಈ ವರ್ಷ ಅನುಕೂಲವಿಲ್ಲ. ಅವರು ನಿಮ್ಮ ಬಗ್ಗೆ ಬಗೆಬಗೆಯಾಗಿ ಸಂಶಯ ತೆಗೆದುಕೊಳ್ಳುವರು. ದೂರದ ಪ್ರವಾಸ ಸುಖ. ಹೇತು ಸಾಧ್ಯ. ಸಮೀಪದ ಪ್ರವಾಸ ಅಷ್ಟೊಂದು ಹಿತಕರವಲ್ಲ. ದೇವಧರ್ಮ ಶ್ರದ್ಧೆ ಹೆಚ್ಚು. ಯಾತ್ರಾದಿ ಪುಣ್ಯಕೃತ್ಯ ಸಂಭವಿಸುವದು. ಪೂಜ್ಯಜನರ ಭೆಟ್ಟಿಯ ಯೋಗವಿದೆ. ಪರಸ್ತ್ರೀ ಬಗ್ಗೆ ಪಾಪವಿಚಾರ ಯಾವಾಗಾದರೊಮ್ಮೆ ನಿಮಗೆ ಬರುವದು.

ದಾವೆ ಖಟ್ಲೆ ಖಾಸಗಿ ಸ್ಪರ್ಧೆಗಳಲ್ಲಿ ವಿಪರೀತ ವೆಚ್ಚ. ಬೇಡಾದವರ ಗದ್ದತುಟ ಹಿಡಿಯುವ ಪ್ರಸಂಗ ಬಂದು ವಿಪರೀತ ತೊಂದರೆ ಅನುಭವಿಸ ಬೇಕಾಗುವದು. ಹತ್ತೆಂಟು ಕೆಲಸಗಳಲ್ಲಿ ಒಂದೆ ರಡು ಮಾತ್ರ ಯಶಸ್ವಿಯಾಗುವವಷ್ಟೆ.

ಹಡೆಯುವ ಸ್ತ್ರೀಯರಿದ್ದರೆ, ಅವರು ಈ ವರ್ಷ ಮಾರ್ಚ ೧೪ ರಿಂದ ಮೇ ೧೧ ರ ಕಾಲ ವನ್ನು ಬಿಟ್ಟು ಉಳಿದ ಕಾಲದಲ್ಲಿ ಹಡೆದರೆ ಬಹುಶಃ ಗಂಡುಮಗುವನ್ನು ಹೆರುವರು ಮತ್ತು ಪ್ರಸೂತಿಯ ಕಷ್ಟವು ಸ್ವಲ್ಪೂ ಆಗುವದಿಲ್ಲ. ಆದರೆ ಕೆಲವರಿಗೆ ಮಾತ್ರ ಅವಳಿ-ಜವಳಿ ಮಕ್ಕಳು ಹುಟ್ಟುವ ಸಂಭವ ಬಹಳವಿದೆ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ನವಂಬರ ೨೦ ರಿಂದ ಜನೆವರಿ ೭, ಫೆಬ್ರುಅರಿ ೨೦ ರಿಂದ ಎಪ್ರಿಲ ೪ ಮತ್ತು ಮೇ ೨೦ ರಿಂದ ಅಗಷ್ಟ ೨ ಈ ಅವಧಿ ಯಲ್ಲಿ ಆಗುವದೂ ಅವರು ಖಾತ್ರಿಯಿಂದ ತೇರ್ಗಡೆ ಹೊಂದುವರು ಮತ್ತು ಮೇಲೆ ಹೇಳಿದ ಮೂರು ತಾರೀಕುಗಳಲ್ಲಿ ಕೊನೆಯ ಅವ ಧಿಯಲ್ಲಿ ಆದವರಿಗೆ ಗ್ರೇಡ ಕೂಡ ಸಿಕ್ಕುವ ಸಂಭ ವವಿದೆ.

ಮಕರ

ಒಟ್ಟಾರೆ ಈ ರಾಶಿಯವರು ಪ್ರಾಪಂಚಿಕ ಸುಖಕ್ಕಾಗಿ ಬಹಳ ಒದ್ದಾಡಬೇಕಾಗುವ ದಾದರೂ ಧಂದೆ-ಕೂಲಿ ಮಾಡುವವರಿಗೆ ಒಳ್ಳೆ ಪ್ರಗತಿಕಾರಕವಿದೆ ಮತ್ತು ಆರ್ಥಿಕ ಸ್ಥಿತಿ ಬಹಳ ಮಟ್ಟಿಗೆ ಸುಧಾರಿಸುವದು ಎಂಬದಾಗಿ ತಿಳಿಯಿರಿ.

ಈ ರಾಶಿಯವರ ಆರೋಗ್ಯ ಈ ವರ್ಷ ಚೆನ್ನಾಗಿ ಉಳಿಯುವದು. ಆದರೆ ಹೆಚ್ಚು ಶಕ್ತಿಸಂಪನ್ನರಾಗ ಬೇಕೆಂದು ಯಾವದೊಂದು ಪೌಷ್ಟಿಕ ಔಷಧ ತೆಗೆದುಕೊಂಡರೆ ಮಾತ್ರ ಅದು ಬಹಳ ಕೆಡುವ ಸಂಭವವಿದೆ. ಹೊಟ್ಟೆಯಲ್ಲಿ ಗ್ಯಾಸ ಹಿಡಿಯು ವದು ಯಾರಿಗೆ ಇದೆಯೊ ಅವರಂತೂ ಎಂದೂ ಪೌಷ್ಟಿಕ ಔಷಧ ತೆಗೆದುಕೊಳ್ಳಬಾರದು. ಜನೆವರಿ ೧೪ ರಿಂದ ಫೆಬ್ರುಅರಿ ೧೨ ಮತ್ತು ಜುಲೈ ೧೬ರಿಂದ ಅಗಷ್ಟ ೧೬ ರ ಕಾಲದಲ್ಲಿಯಂತೂ ಆ ಔಷಧ ತೆಗೆದುಕೊಳ್ಳಲೇಬಾರದು. ಉಳಿದ ವಿಷಯಗಳಲ್ಲಿ ದೇಹಸುಖಕ್ಕೆ ಅನುಕೂಲ. ಈ ವರ್ಷ ರಾಶಿ ಸ್ವಾಮಿ ಯಾದ ಶನಿ ಹನ್ನೊಂದನೆಯವನು ಲಾಭಸ್ಥಾನ ದಲ್ಲಿ ಪೂರ್ಣವಿರುವದರಿಂದ ಮತ್ತು ಇವನೇ ಧನೇಶನಿರುವದರಿಂದ ಕೌಟುಂಬಿಕ ಉತ್ಕರ್ಷ ಬಹಳ. ಯಾವ ಮಾತಿಗಾಗಿ ಕಳೆದ ಹಲವು ವರ್ಷಗಳಿಂದ ನೀವು ತಳಮಳಿಸುತಿದ್ದಿರೊ ಅದರ ನಿದಿಧ್ಯಾಸ ನಡೆಸಿದ್ದಿರೊ ಅದು ಪೂರ್ಣವಾಗಿ ಅಲ್ಲ ದಿದ್ದರೂ ಹನ್ನೆರಡಾಣೆಯಷ್ಟಾದರೂ ಖಾತ್ರಿ ಯಿಂದ ಸಾಧ್ಯವಾಗುವದು. ಆದರೆ ಇದೇ ಕಾಲಕ್ಕೆ ಸುಮಾರು ಇಡಿ ವರ್ಷ ಇರುವ ೮ ನೇ ಗುರುವಿ ನಿಂದ ಕ್ಷುಲ್ಲಕವಾದರೂ ಕೆಲ ಮನ ನೋಯು ವಂಥ ಕಾರಣಗಳಿಗಾಗಿ ಮನಸ್ಸು ಅಸ್ವಸ್ಥವಾಗು ವದು. ಯಶಸ್ಸಾದರೂ ನೀವು ಯೋಜಿಸಿದ ರೀತಿ ಯಲ್ಲಿ ಆಗದೆ ಅನ್ಯಮಾರ್ಗದಿಂದ ಆಗುವದರಿಂದ ನಿಮ್ಮ ಮಹತ್ವ ಕಡಮೆಯಾಯಿತೆಂದು ಮನಸ್ಸಿ ನಲ್ಲಿ, ನಿಜವೇ ಇರಲಿ ಇಲ್ಲವಿರಲಿ, ತೋರು ವದು. ಸಾಮಾನ್ಯವಾಗಿ ಆ ಪ್ರತ್ರ ರಗೂಡ ಕೂಡಿ ನಡೆಯುವದು. ವಾಹನಗಳನ್ನು ಮತ್ತು ದನಕರುಗಳನ್ನು ಕೊಳ್ಳುವಿರಿ. ನೋಕರಚಾಕರ ರಲ್ಲಿಯೂ ಬದಲಾಗುವದು. ಇದೆಲ್ಲದರಿಂದ ದೊರೆಯುವ ಸುಖವು ಸ್ವಲ್ಪ ದಗದಗಿಯದೆ ಆದರೂ ಅಪೇಕ್ಷಿಸಿದಷ್ಟು ಸಿಕ್ಕುವದು. ಸ್ಥಾವರ ಜಂಗಮಗಳಲ್ಲಿ ಸ್ವಲ್ಪಾದರೂ ಹೆಚ್ಚಳ. ಬಂಧು ಗಳೊಡನೆ ಸ್ವಲ್ಪ ತಿಕ್ಕಾಟ ಬರುವದು. ಮೊದಲೆ ಆ ಬಗೆಯ ತಿಕ್ಕಾಟವಿದ್ದರೆ ಅದು ಮತ್ತಷ್ಟು ಹೆಚ್ಚುವದು. ಕೆಲ ಸಲ ಸ್ವಸುಖತ್ಯಾಗದ ವಿಚಾರ ಬಹಳ ಹೆಚ್ಚುವದು ಮತ್ತು ಆ ಭರದಲ್ಲಿ ಪರಮಾ ರ್ಥದಲ್ಲಿ ನಾಲ್ಕು ಹೆಜ್ಜೆ ಇಡುವಿರಿ. ಆದರೆ ರಾಶಿ ಸ್ವಾಮಿ ಶತ್ರುಕ್ಷೇತ್ರದವರಿರುವದರಿಂದ ಪರಮಾರ್ಥ ದತ್ತ ಹೆಜ್ಜೆ ಅದಕ್ಕೂ ಮುಂದೆ ಬೀಳಲಾರದು.

ಸ್ತ್ರೀ ಸುಖಕ್ಕೆ ಈ ವರ್ಷ ಸಾಧಾರಣವೆ. ಉಭ ಯತರಲ್ಲಿ ಸ್ವಲ್ಪೂ ಮನಮೇಳನವುಳಿಯುವದಿಲ್ಲ. ಸರಳ ಮಾತಾಡಿದ್ದರೂ ವಿಪರೀತಾರ್ಥ ಮಾಡಿ ಕೊಳ್ಳುವಿರಿ. ಅವಳ ಆರೋಗ್ಯವೂ ಅಷ್ಟು ಚೆನ್ನಾಗಿ ಉಳಿಯುವದಿಲ್ಲ. ದೊಡ್ಡವಲ್ಲದಿದ್ದರೂ ಕಿರಕಳ ತಕರಾರು ಸದಾ ಇದ್ದದ್ದೆ. ಇಂಥವೇ ಕಾರಣಗಳಿ ಗಾಗಿ ಅವಳ ಸಹವಾಸ ಸುಖ ಅಷ್ಟಕ್ಕಷ್ಟೆ ದೊರೆ ಯುವದು. ನಿಮ್ಮ ಲಗ್ನವಿನ್ನೂ ಆಗಿರದಿದ್ದರೆ ಈ ವರ್ಷ ಮಾಡಿಕೊಳ್ಳುವದಿದ್ದರೆ ಆಗುವ ಯೋಗ ಅಷ್ಟೊಂದು ಪ್ರಬಲವಿಲ್ಲ. ಅದರಲ್ಲಿಯೂ ಏನೋ ಒದಗಿಬರುವದಾದರೆ ಮಾರ್ಚ ೧೪ ರಿಂದ ಮೇ ೧೧ ರ ಅವಧಿಯಲ್ಲಿ ಆಗುವದು. ವಧೂ ವರರು ರೂಪಗುಣಗಳಿಂದ ಪರಸ್ಪರ ಅನು ರೂಪ ಇರುವರು. ಆದರೆ ವಿಶೇಷ ಪರಿಚಯ ವಾದಂತೆ ಪರಸ್ಪರರಲ್ಲಿ ಭಿನ್ನತೆ ಹೆಚ್ಚಿಗಿದ್ದದ್ದು ಕಂಡುಬರುವದು.

ಅದರಂತೆ ನಿಮ್ಮ ಮಕ್ಕಳಲ್ಲಿ ಯಾರದಾದರೂ ಲಗ್ನ ಮಾಡಬಯಸಿದ್ದರೆ ಅದೂ ಒದಗಿಬರುವ ಗ್ರಹಬಲವಿರುವದಿಲ್ಲ. ಆದರೂ ಬಹಳ ಪ್ರಯಾಸ ದಿಂದ ಮಾಡಿದರೆ ಮಾರ್ಚ ೧೪ ರಿಂದ ಮೇ ೧೧ ಅಥವಾ ಅಕ್ಟೋಬರ ೧೬ ರ ನಂತರ ಕದಾಚಿತ್ ಆಗಬಹುದು. ಅಳಿಯ ಇಲ್ಲವೆ ಸೊಸೆ ರೂಪ ದಂತೆ ಗುಣದಲ್ಲಿಯೂ ನಿಮ್ಮ ಮನಸ್ಸಿಗೆ ತಕ್ಕಂತೆ ಇರುವರು. ಈ ವರ್ಷ ನಿಮ್ಮ ಮಕ್ಕಳೆಲ್ಲ ಅವ ರವರ ವಯಸ್ಸು ಮತ್ತು ಯೋಗ್ಯತೆಗೆ ತಕ್ಕಂತೆ ಒಳ್ಳೆ ಉತ್ಕರ್ಷ ಹೊಂದುವರು. ಅನೇಕರು ಸಮಾಜದಲ್ಲಿ ಪ್ರತಿಷ್ಠೆ ಹೊಂದುವರು ಮತ್ತು ಕೀರ್ತಿ ಸಂಪಾದಿಸುವರು. ನಿಮ್ಮೊಡನೆಯೂ ಸೌಜನ್ಯ ದಿಂದ ವರ್ತಿಸುವರು.

ಧಂದೆ, ಕೂಲಿಯವರಿಗೆ ಈ ವರ್ಷ ಬಹಳ ಅನುಕೂಲವಿದ್ದು ವಿಪುಲದ್ರವ್ಯಲಾಭ ಒದಗಿಸಿ ಕೊಡುವದು. ಧಂದೆಯವರು ಧಂದೆಯನ್ನು ವಿಸ್ತ ರಿಸಿಕೊಂಡು ಹೋಗುವದಲ್ಲದೆ ನಿಮ್ಮ ಸಜ್ಜನಿ ಕೆಯ ಮತ್ತು ಪ್ರಾಮಾಣಿಕತನದ ಖ್ಯಾತಿ ಎಲ್ಲೆಡೆ ಹಬ್ಬುವದು. ದೊಡ್ಡವರಿಂದ ನಿಮಗೆ ಬೆಂಬಲ ದೊರೆಯುವದು. ಮುಖ್ಯ ಶಾಖೆಯ ಒಂದೆರಡು ಅದೇಕೆ ಎರಡಕ್ಕಿಂತ ಹೆಚ್ಚು ಉಪಶಾಖೆಗಳನ್ನು ತೆಗೆಯುವ ಅವಕಾಶ ನಿಮಗೆ ಉಂಟಾಗುವದು. ಪ್ರತಿಯೊಂದು ವಿಷಯದಲ್ಲಿ ಅಲ್ಪಾಯಾಸದಿಂದ ಇಲ್ಲವೆ ಅನಾಯಾಸದಿಂದ ಯಶಸ್ಸು ಸಿಕ್ಕಹತ್ತು ವದು. ಧಂದೆಯಲ್ಲಿ ಯಶಸ್ಸು ಸಿಕ್ಕುವದು ಈ ವರ್ಷದ ವೈಶಿಷ್ಟ್ಯವೆ ಆಗಿದೆ.

ಅಕ್ಟೋಬರ ೧೬ ರ ನಂತರ ಮುಂದೆ ಈ ವರ್ಷದ ಕೆಲವೇ ದಿನಗಳು ಉಳಿಯುತ್ತಿವೆಯಷ್ಟೆ. ಆ ದಿನಗಳು ಕೆಲ ಕೆಲ ವಿಷಯಗಳಲ್ಲಿ ಅಪೂರ್ವ ಯಶಸ್ಸಿನವೆನಿಸುವವು. ಪತ್ತು ಪ್ರತಿಷ್ಠೆ, ಮತ್ತು ನಿಮ್ಮ ಮಾತಿನ ಬೆಲೆ ಸಂಪೂರ್ಣವಾಗಿ ಉಳಿಯು ವದು. ಅಂಗಡಿ ಹಿಡಕೊಂಡು ಕೂಡುವವರಿಗಿಂತ ಸಂಚಾರಿ ಧಂದೆಯವರಿಗೆ ಹೆಚ್ಚು ಪ್ರಗತಿ. ನೋಕ ರರು ಧಂದೆಯವರ ಹ್ಯಾವನ್ನು ಹೆಚ್ಚಿಗೆ ಮಾಡಿ ಪ್ರಯೋಜನವಿಲ್ಲ. ಏಕೆಂದರೆ ಅವರಿಗೆ ಈ ವರ್ಷವೂ ಉತ್ಕರ್ಷದ ಬಗ್ಗೆ ಸ್ಪಷ್ಟ ಜಾಹೀರ ಮಾಡುವದಾಗಿದೆ. ಬಹುತರ ಜನರಿಗೆ ಮೇಲಿನ ಗ್ರೇಡು ಕಾಯಂವಾಗಿ ಸಿಕ್ಕುವದು. ಯಾರಿಗಾ ದರೂ ತಾತ್ಪೂರ್ತಿಕವಾಗಿ ಮೇಲಿನ ಗ್ರೇಡು ದೊರೆ ತಿದ್ದರೆ ಅವರಿಗೆ ಹಾಗೆಯೇ ಅದು ಮುಂದರಿ

ಯುತ್ತ ಹೋಗುವದು. ಮುಂದೆ ಕೆಲದಿನಗಳ ನಂತರ ಅದು ಕಾಯಂ ಆಗುವದು. ಇದರಲ್ಲಿ ಸಹಸಾ ವ್ಯತ್ಯಯುಬರಲಾರದು. ಬದಲಿ ಆಗುವ ಶಾಖೆ ಇದ್ದರೆ ಅದಾದರೂ ನಿಮಗೆ ಒಪ್ಪಿಗೆಯಾಗುವ,ನೀವು ಬೇಡುವ ಸ್ಥಳಕ್ಕೇ ಆಗುವದು.ಆದರೆ ಇಚ್ಛಿತ ಸ್ಥಳವೂ ನಿಮಗಷ್ಟೊಂದು ಸುಖದಾಯಕವಾಗಲಾರದು. ಯದೃಚ್ಛೆಯಿಂದ ವರ್ಗವಾದರೆ ಅದುವೇ ನಿಮಗೇ ಅನುಕೂಲವಾಗಿ ಪರಿಣಮಿಸುವದು. ಲೋಕಪ್ರತಿಷ್ಠೆ ಉತ್ತಮ. ಪುರುಷರಿಗಿಂತ ಸ್ತ್ರೀ ವರ್ಗದಲ್ಲಿ ಆದರ ಹೆಚ್ಚು. ಮನೋರಂಜನೆಯ ಮತ್ತು ಕಲಾಕಾರರ ಸಹವಾಸದ ಯೋಗ ಅನೇಕ ಸಲ ದೊರೆಯುವದು. ಕೇವಲವಾಗಿ ವಿಶೇಷ ಲಾಭಕ್ಕೆ ಫೆಬ್ರುಅರಿ ೨೦ ರ ವರೆಗೆ ಮತ್ತು ಎಪ್ರಿಲ ೪ ರಿಂದ ಮೇ ೨೦ ಮತ್ತು ಜುಲೈ ೩೧ರಿಂದ ಅಗಷ್ಟ ೨೦ ರ ನಡುವಿನ ಕಾಲ ಹೆಚ್ಚು ಅನುಕೂಲ. ದೂರದ ಪ್ರವಾಸ ಸುಖಕರ ಮತ್ತು ಉದ್ದೇಶವನ್ನು ಸಫಲಗೊಳಿಸುವಂತಹದು. ಆದರೆ ಸಮೀಪದ ಪ್ರವಾಸ ತೊಂದರೆ ಕೊಡುವಂತಹದು. ಮಿತ್ರಸುಖ ಉತ್ತಮ ದೊರೆಯುವದು. ಆದರೆ ಅವರು ಇಲ್ಲವೆ ನೀವು ಸ್ಥಳಾಂತರ ಮಾಡುವದರಿಂದ ಅಂಥ ಕೆಲ ಮಿತ್ರರ ವಿರಹವನ್ನು ನೀವು ಬಹಳ ಮಟ್ಟಿಗೆ ಮನಸ್ಸಿಗೆ ಹಚ್ಚಿಕೊಳ್ಳುವಿರಿ. ಮಕ್ಕಳಲ್ಲಿ ಒಬ್ಬನ ಆರೋಗ್ಯಕ್ಕೆ ಈ ವರ್ಷ ಸ್ವಲ್ಪ ತೊಂದರೆ ಕೊಡುವದು. ಮತ್ತೊಬ್ಬ ದೂರ ಪ್ರವಾಸ ಹೋಗುವದರಿಂದ ಅವನ ವಿರಹದ ಯೋಗವು ಇದೆ. ಧರ್ಮಶ್ರದ್ಧೆ ಸಾಮಾನ್ಯವಿದೆ.

ವ್ರತೋಪವಾಸಾದಿಗಳ ಬಗ್ಗೆ ಇರುವ ಶ್ರದ್ಧೆ ಕಡಿಮೆಯಾಗುತ್ತ ಹೋಗುವದು.

ದಾವೆ ಖಟ್ಲೆ ಮತ್ತು ಇತರ ಸ್ಪರ್ಧೆಗಳಲ್ಲಿ ಈ ವರ್ಷ ಒಳ್ಳೆ ಯಶಸ್ಸು ದೊರೆಯುವದು. ಆದರೂ ಪ್ರತಿಪಕ್ಷಿಗಳು ಆ ಯಶಸ್ಸು ನಿಮ್ಮ ಉಡಿಯಲ್ಲಿ ಬೀಳದಂತೆ ಕೈಕಟ್ಟಿಕೊಂಡು ನಿಂತು ಸದಾ ಅಡ್ಡಗಾಲು ಹೊಡೆಯುವರು. ನವ್ಹಂಬರ ೨೩ ರಿಂದ ಡಿಸೆಂಬರ ೧೦, ಡಿಸೆಂಬರ ೨೯ ರಿಂದ ಮಾರ್ಚ ೫, ಎಪ್ರಿಲ ೮ ರಿಂದ ೨೬ ಮತ್ತು ಅಗಷ್ಟ ೩೧ ರಿಂದ ಅಕ್ಟೋಬರ ೨೮ ರ ನಡುವಿನ ಕಾಲ ಅಷ್ಟೊಂದು ಚೆನ್ನಾಗಿರುವದಿಲ್ಲ.

ನವಂಬರ ೨೪ ರ ವರೆಗೆ ಇಲ್ಲವೆ ಡಿಸೆಂಬರ ೧೮ ರಿಂದ ಜನೆವರಿ ೧೧, ಫೆಬ್ರುವರಿ ೫ ರಿಂದ ಮಾರ್ಚ ೨, ಮಾರ್ಚ ೨೯ ರಿಂದ ಎಪ್ರಿಲ ೨೯, ಜುಲೈ ೧ ರಿಂದ ೨೧ ಮತ್ತು ಸಪ್ಟಂಬರ ೧ ರಿಂದ ೨೮ ರ ಅವಧಿಯಲ್ಲಿ ಹಡೆಯುವ ಹೆಣ್ಣು ಮಕ್ಕಳು ಬಹಳ ಸುಲಭವಾಗಿ ಹಡೆಯುವರು ಮತ್ತು ಅವರಲ್ಲಿ ಅನೇಕರು ಹೆಣ್ಣು ಹಡೆಯುವರು. ಆದರೂ ಹುಟ್ಟುವ ಮಕ್ಕಳು ಬಹಳ ನಿರೋಗಿ ಉಳಿಯುವರು.

ಯಾವ ವಿಧ್ಯಾರ್ಥಿಗಳ ಪರೀಕ್ಷೆ ಡಿಸೆಂಬರ ೧೮ ರಿಂದ ಮಾರ್ಚ ೨, ಮಾರ್ಚ ೨೯ ರಿಂದ ಎಪ್ರಿಲ ೨೯ ಮತ್ತು ಸಪ್ಟಂಬರ ೨೮ ರಿಂದ ಅಕ್ಟೋಬರ ೨೫ ಈ ಕಾಲದಲ್ಲಿ ಇರುವದೋ ಅವರು ಯಶಸ್ವಿ-ಆಗುವದರಲ್ಲಿ ಅಷ್ಟೊಂದು ಸಂಶಯವಿಲ್ಲದಿದ್ದರೂ ಪ್ರತಿಯೊಬ್ಬ ವಿದ್ಯಾರ್ಥಿ ಅಭ್ಯಾಸ ಮಾಡಲೇಬೇಕು.

ಇಬ್ಬರಲ್ಲಿ ವಿತಂಡವಾದ ಏಳುವದು. ತಾನು ಬಯಸಿದಂತೆಯೆ ಪ್ರಪಂಚವೆಲ್ಲ ಸಾಗಬೇಕೆಂದು ಅವಳು ಆಗ್ರಹ ತಾಳುವಳು. ನಿಮ್ಮ ಲಗ್ನವಿನ್ನೂ ಆಗಿರದಿದ್ದರೆ, ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಮಾರ್ಚ ೧೪ ರವರೆಗೆ ಇಲ್ಲವೆ ಮೇ ೧೧ ರಿಂದ ಅಕ್ಟೋಬರ ೧೬ ರ ವರೆಗೆ ಆಗಲು ಸಹಸಾ ಅಡಚಣೆ ಬೀಳುವದಿಲ್ಲ. ಒಂದು ವೇಳೆ ಆಗದಿದ್ದರೂ ನಿಶ್ಚಯವಂತೂ ಆಗೇ ತೀರುವದು. ವಧೂವರರು ಪರಸ್ಪರ ಅನುರೂಪ ಇರುವರು. ಆದರೆ ಮೊದಮೊದಲು ಸ್ವಭಾವ ಭಿನ್ನತೆ ಹೆಚ್ಚಿಗೆ ಕಂಡುಬರುವದು. ವರದಕ್ಷಿಣೆ ಮತ್ತು ವಸ್ತ್ರಾಲಂಕಾರ ಅಂದಾಜಿನಷ್ಟು ಸಿಕ್ಕುವದು.

ನಿಮ್ಮ ಮಕ್ಕಳ ಮದುವೆಯನ್ನು ಈ ವರ್ಷ ಮಾಡುವದಿದ್ದರೆ ಅದೂ ಅಷ್ಟೊಂದು ಪ್ರಯಾಸವಿಲ್ಲದೆ ಕೂಡಿ ಬರುವದು. ಆದರೆ ಸ್ಥಳ ಬಹಳ ದೂರದ್ದಿರುವದು. ಅಳಿಯ ಇಲ್ಲವೆ ಸೊಸೆ, ಮನಸ್ಸಿನಂತೆ ಇರುವರು. ಆದರೆ ಬೀಗರು ಮಾತ್ರ ಸ್ವಭಾವದಿಂದ ಸ್ವಲ್ಪ ಕಂಜೂಷರು. ಮಕ್ಕಳಲ್ಲಿ ಪ್ರತಿಯೊಬ್ಬರ ಉನ್ನತಿಯಾಗುವದು. ಅದರಲ್ಲಿಯೂ ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳ ಉನ್ನತಿ ಹೆಚ್ಚಿಗೆ ಆಗುವದು. ಈ ಬಗ್ಗೆ ನವೆಂಬರ ೨೩ ರ ವರೆಗೆ ಮತ್ತು ಅನಂತರ ಡಿಸೆಂಬರ ೧೦ ರಿಂದ ೨೯, ಮಾರ್ಚ ೫ ರಿಂದ ೨೩, ಎಪ್ರಿಲ ೮ ರಿಂದ ೨೬, ಜೂನ ೩೦ ರಿಂದ ಜುಲೈ ೧೭ ಮತ್ತು ಅಗಷ್ಟ ೨ ರಿಂದ ೨೧ ಈ ಅವಧಿ ಹೆಚ್ಚು ಅನುಕೂಲದ್ದಿದೆ. ಮಕ್ಕಳೆಲ್ಲ ತಂದೆಗಿಂತ ತಾಯಿಯ ಗೂಡ ಹೆಚ್ಚು ಆದರದಿಂದ ವರ್ತಿಸುವರು. ಮಕ್ಕಳಲ್ಲಿ ಕನಿಷ್ಠ ಒಬ್ಬಿಬ್ಬರದಾದರೂ ಅತಿ ದೂರ ಸ್ಥಳಾಂತರವಾಗಬಹುದು.

ಧಂದೆ ಕೂಲಿಯುವರಿಗೆ ಈ ವರ್ಷ ಬಹಳ ಭಾಗ್ಯೋದಯದ್ದಿರುವದು. ಪ್ರತಿಧಂದೆಯುವನು ಕಳೆದ ವರ್ಷಕ್ಕಿಂತ ಹೆಚ್ಚು ಸಂಪಾದಿಸುವನು. ಸಣ್ಣ ದೊಡ್ಡ ಕೆಲಸಗಳಲ್ಲಿ ಬುದ್ಧಿ ಚನ್ನಾಗಿ ಹರಿಯುವದು. ಒಂದೊಮ್ಮೆ ತಪ್ಪಿನಿಂದ ಏನಾದರೂ ಅನರ್ಥದ ಸಂಗತಿ ಸಂಭವಿಸಿದರೆ ಅದು ಕೂಡ ಹಾನಿಯನ್ನುಂಟುಮಾಡದೆ ಲಾಭವನ್ನೇ ಮಾಡುವದು. ಧಂದೆಯಲ್ಲಿ ಸಾಹಸವು ಒಂದು ಬಗೆಯದಾಗಿರುವದು. ಎಷ್ಟೋ ಜನರಿಗೆ ತಮ್ಮವರಲ್ಲದಿದ್ದರೂ ಹೊರಗಿನ ಸ್ತ್ರೀಯರಿಂದಲೇ ಸಹಾಯ ಹೆಚ್ಚು. ಸಂಚಾರೀ ವ್ಯಾಪಾರಿಗಳಿಗಿಂತ ಒಂದೆಡೆ ಕುಳಿತು ವ್ಯಾಪಾರ ಮಾಡುವವರಿಗೆ ಹೆಚ್ಚು ಲಾಭ. ನೀವು ಏನಾದರೂ ಯುಕ್ತಿ ಪ್ರಯುಕ್ತಿ ಮಾಡಿ ಮತ್ತು ಸುಳ್ಳು ಸತ್ಯವನ್ನು ಸಮನ್ವಯ ಮಾಡಿ ಕೆಲ ಕಾರ್ಯಗಳನ್ನು ಮಾಡಿದರೂ ಜನರು ಅವೆಲ್ಲ ಅತ್ಯಂತ ಸರಳ ಮಾರ್ಗದಿಂದ ಮಾಡಿದವೆಂದು ತಿಳಿಯುವರು. ಧಂದೆಯಲ್ಲಿ ಸರಕಾರದಿಂದ ಕೆಲವುಟ್ಟಿಗೆ ತೊಂದರೆಯಾಗುವದು ಮಾತ್ರ ನಿಶ್ಚಿತ. ಜನೆವರಿ ೭ ರಿಂದ ಫೆಬ್ರುಅರಿ ೨೦ ಮತ್ತು ಎಪ್ರಿಲ ೪ ರಿಂದ ಮೇ ೨೦ ರ ಮಧ್ಯ ಅವಧಿಯಲ್ಲಿ ಹೆಚ್ಚು ಅಂಜಿಕೆಯಿದೆ.

ಕುಂಭ

ಒಟ್ಟಾರೆ ಈ ರಾಶಿಯವರಿಗೆ ಪ್ರಾಪಂಚಿಕ ಸುಖ ಒಮ್ಮೆ ಅನುಕೂಲ ಮತ್ತೊಮ್ಮೆ ಪ್ರತಿಕೂಲ ಹೀಗೆ ಇದ್ದರೂ ಧಂದೆ ಕೂಲಿಯ ವಿಷಯುಗಳಲ್ಲಿ ಒಳ್ಳೆ ಅನುಕೂಲವಿದೆಯೆಂಬುದು ಮಾತ್ರ ನಿಶ್ಚಿತ.

ಈ ರಾಶಿಯುವರ ಆರೋಗ್ಯ ಸ್ವಲ್ಪ ಕಿರಿಕಿರಿಯದೇ ಆಗುವದು. ಅದರಲ್ಲಿಯೂ ಇಡೀ ವರ್ಷ ಇರುವ ೪ ನೇ ಕೇತು ಮತ್ತು ಹತ್ತನೇ ಶನಿಯ ಮೂಲಕ ಮಾನಸಿಕ ತೊಂದರೆಯಾಗುವದು ಹೆಚ್ಚು. ನವಂಬರ ೨೧ ರ ವರೆಗೆ ಮತ್ತು ಜನೆವರಿ ೭ ರಿಂದ ಫೆಬ್ರುವರಿ ೨೦, ಎಪ್ರಿಲ ೪ ರಿಂದ ಮೇ ೨೦ ಮತ್ತು ಜುಲೈ ೩೧ ರಿಂದ ಅಗಷ್ಟ ೨೦ ಈ ಕಾಲದಲ್ಲಿ ಎರಡನೆಯವರಿಂದಾಗದಿದ್ದರೂ ನಿಮ್ಮ ಹಠವಾದಿತನದಿಂದಲೆ ಮಾನಸಿಕ ತೊಂದರೆ. ಇತರ ವಿಷಯಗಳಲ್ಲಿ ದೇಹಸುಖ ಕೆಲವದರಲ್ಲಿ ಹೆಚ್ಚು ಅನುಕೂಲವಿದ್ದರೆ ಮತ್ತೆ ಕೆಲವದರಲ್ಲಿ ಬಹಳ ಕಡಮೆ. ಮನೆಯಲ್ಲಿಯ ಅನೇಕರು ಬಹುತಃ ವಿರೋಧ[illegible]ದಿಂದಲೆ ವರ್ತಿಸುವರು. ತಂದೆ-ತಾಯಿ ಕೂಡ ಬಹಳ ಪೀಡಿಸುವರು. ತಂದೆ ಕೆಲ ಕಠಿಣ ಸಮಸ್ಯೆಗಳನ್ನು ಉಂಟು ಮಾಡುವನು. ತಾಯಿಯ ಆರೋಗ್ಯ ಮೇಲಿಂದ ಮೇಲೆ ಕೆಡುವದು. ಅಣ್ಣತಮ್ಮಂ-ದಿರೂ ಅಲ್ಲಲ್ಲಿ ಪೇಚು ತರುವದುಂಟು. ಕಲಹವನ್ನು ತೀರಿಸಲು ನೇಮಿಸಿದ ಮಧ್ಯಸ್ಥರೂ ತಿರುಗಿಬಿದ್ದು ಪಕ್ಷಪಾತದಿಂದ ವರ್ತಿಸುವರು. ಆದರೆ ಮನೆಯಲ್ಲಿಯ ನೋಕರರು ಮಾತ್ರ ಏಕನಿಷ್ಠರಾಗಿ ಉಳಿದು ನಿಮ್ಮ ಕಲ್ಯಾಣಕ್ಕಾಗಿ ಬಹಳ ಪ್ರಯತ್ನಿಸುವರು. ಆಸ್ತಿಯಲ್ಲಿ ಕೆಲವುಟ್ಟಿಗೆ ಸುಧಾರಣೆ ಮಾಡಬೇಕೆಂದರೆ ಅದು ಸಾಧ್ಯವಾಗದೆ ಮೈಮೇಲೆ ವೆಚ್ಚ ಮಾತ್ರ ಹೆಚ್ಚಿಗೆ ಬರುವದು. ದನಕರುಗಳ ನಾಶ ಹೆಚ್ಚಿಗೆ ಆಗುವದು. ರಾತ್ರಿಯಲ್ಲಿ ನಿದ್ರೆ ಹತ್ತುವದಿಲ್ಲ. ಆದರೆ ಹಗಲು ಮಾತ್ರ ಅದರ ರುಚಿ ಬಹಳ. ನೆರೆಯವರು ಕುತ್ಸಿತ ರೀತಿಯಿಂದ ನಡೆಯುವರು. ಆದರೂ ವರ್ಷ ತುಂಬ ಇರುವ ೭ ನೇ ಗುರು ಇವೆಲ್ಲ ತೊಂದರೆಗಳನ್ನು ನಿವಾರಿಸಿಕೊಳ್ಳುವಷ್ಟು ಬೌದ್ಧಿಕ ಶಕ್ತಿಯನ್ನು ನಿಮಗೆ ಕೊಡುವನು.

[illegible]ಂಡತಿಯ ಆರೋಗ್ಯ ಒಟ್ಟಿಗೆ ಅನುಕೂಲ [illegible] ಮೇ ೩೦ ರಿಂದ ಮುಂದಿನ ಎಲ್ಲ ಅವಧಿಯವ[illegible] ಇರುವ ಮೊದಲನೇ ಅರ್ಥಾತ್ [illegible]ನ್ಮಸ್ಥ [illegible], ನಿಮ್ಮಿಬ್ಬರಲ್ಲಿ ಸದಾ ಮತಭೇದವನ್ನುಂಟು[illegible]ಸು. ಅಷ್ಟಿಷ್ಟಕ್ಕಾಗಿ

ನೋಕರರಿದ್ದವರಿಗೂ ಈ ವರ್ಷ ಬಹಳ ಲಾಭದ್ದಾಗಿದೆ. ಭಾಗ್ಯವರ್ಧಕ ಒಂದೆರಡು ಮಹತ್ವದ ಸಂಗತಿಗಳು ಸಂಭವಿಸುವವು. ಆದರೆ ಕೈಕೆಳಗಿನವರು ಸರ್ವಸಾಧಾರಣ ಅನುಕೂಲರಾಗಿ ವರ್ತಿಸಿದರೂ ವರಿಷ್ಠರು ಬಹಳ ತೊಂದರೆ ಕೊಡುವರು. ವ್ಯವಸ್ಥಿತ ಕೆಲಸ ಮಾಡಿಯೂ ಕೂಡ ಒಳ್ಳೇ ಶರ ಬರೆಯುವದನ್ನು ಬೇಕಂತಲೆ ಮುಂದೆ ಹಾಕುವರು. ಮೇಲಿನ ಗ್ರೇಡು ಕಾಯಂವಾಗಿ ಸಿಕ್ಕುವ ಹಕ್ಕು ನಿಮ್ಮದಿದ್ದರೂ ಹಾಗೆ ಗ್ರೇಡು ಕೊಡದೆ ಇನ್ನೂ 'ಟೆಂಪರರಿ'ಯೆಂದೇ ಇಡುವರು. ಪೂರ್ಣಗೊಳಿಸಲು ಅಸಾಧ್ಯವಾದ ಕೆಲಸದ ಹೊರೆಯನ್ನು ನಿಮ್ಮ ಮೇಲೆ ಹೊರಿಸುವರು. ಖಾತೆ ಬದಲಾಗುವದಿದ್ದರೆ ಮನಸ್ಸಿನಲ್ಲಿಲ್ಲದ ಸ್ಥಳಕ್ಕೆ ವರ್ಗವಾಗುವದು. ಆದುದರಿಂದ ಬದಲಿಯಾಗಬೇಕೆಂದು ಬಯಸುವವರು ಕೂಡ ಈಗ ತಾವಾಗಿಯೇ ಬದಲಿಯನ್ನು ಬೇಡಬಾರದು. ಆದರೂ ರಾಶಿಸ್ವಾಮಿಯಾದ ಶನಿ, ದಶಮದಲ್ಲಿ ತನ್ನ ಗುಣಧರ್ಮದ ಮಿತ್ರ ರಾಹುವಿನೊಡನೆ ಇದ್ದುದರಿಂದ ಈ ಎಲ್ಲ ಸಂಕಟಗಳನ್ನೆದುರಿಸುವ ಸಾಮರ್ಥ್ಯವನ್ನು ಕೊಡುವನು. ವಿಶೇಷವಾಗಿ ಇಂಥ ತೊಂದರೆ ಎಪ್ರಿಲ ೪ ರಿಂದ ಮೇ ೨೦ ಮತ್ತು ಅಗಷ್ಟ ೨ ರಿಂದ ಅಕ್ಟೋಬರ ೧೯ ಈ ಕಾಲದಲ್ಲಿ ಹೆಚ್ಚು. ಆದರೆ ಉಳಿದ ಯಾವ ಗಂಡಾಂತರವೂ ಇಲ್ಲ. ಲಾಭ ದೃಷ್ಟಿಯಿಂದ ಮಾರ್ಚ ೧೪ ರ ವರೆಗೆ ಮತ್ತು ಮೇ ೧೧ ರಿಂದ ಅಕ್ಟೋಬರ ೧೬ ರ ವರೆಗಿನ ಕಾಲ ವಿಶೇಷ ಅನುಕೂಲವಿದೆ. ಮತ್ತು ಏನೇ ಆದರೂ ವೆಚ್ಚವೆಲ್ಲ ತೇಲಿ ನಾಲ್ಕು ದುಡ್ಡು ಉಳಿಸಿಕೊಳ್ಳುವಿರೆಂಬಲ್ಲಿ ಸಂದೇಹವಿಲ್ಲ. ಮಿತ್ರಸುಖ ಅನುಕೂಲವೆ. ಅವರಲ್ಲಿ ಅನೇಕರ ಉತ್ಕರ್ಷವಾಗುವದು. ಅವರು ನಿಮ್ಮ ಕಲ್ಯಾಣದ ಸಲುವಾಗಿ ತನು ಮನ ಧನಗಳಿಂದ ಪ್ರಯತ್ನಿಸುವರು. ಈ ವರ್ಷ ದೂರದ ಪ್ರವಾಸದ ಯೋಗ ಕಡಮೆಯೆ. ಒಂದೊಮ್ಮೆ ಒದಗಿಬಂದರೂ ಅದು ಸುಖಮಯ ಮತ್ತು ಉದ್ದೇಶವನ್ನು ಸಾಧ್ಯಮಾಡಿಕೊಡುವಂತಹದು. ಸಮೀಪದ ಪ್ರವಾಸದಲ್ಲಿ ಸಣ್ಣದೊಡ್ಡ ಅಪಘಾತದ ಇಲ್ಲವೆ ಶಕ್ತಿಯನ್ನು ಕುಂದಿಸುವಂತಹ ಸಂಕಟ ಬರುವ ಸಂಭವವಿದೆ. ದೇವ ಧರ್ಮ, ಶ್ರದ್ಧೆ ಚನ್ನಾಗಿ ಉಳಿದು ತನ್ನಿಮಿತ್ತ ಏನಾದರೂ ಪ್ರತ್ಯಕ್ಷ ಕಾರ್ಯ ಮಾಡುವಿರಿ.

ದಾವೆ ಖಟಲೆ ಮತ್ತು ಸ್ಪರ್ಧೆಯ ಕೆಲಸಗಳಲ್ಲಿ ಈ ವರ್ಷ ಬಹಳ ಯಶಸ್ಸನ್ನುಕೊಡುವದು. ಇಲ್ಲವೆ ಮುಂದೆ ಅದು ದೊರೆಯುವಂತೆ ಅನುಕೂಲತೆಯುನ್ನುಂಟು ಮಾಡುವದು ಈ ವರ್ಷದ ವೈಶಿಷ್ಟ್ಯವಾಗಿದೆ. ಆದರೆ ಕಾಯದೇಶೀರ ಮತ್ತು ನ್ಯಾಯ ಮಾರ್ಗವನ್ನು ಬಿಟ್ಟು ಶತ್ರುವು ಯಾವದೊಂದು ಅತ್ಯಾಚಾರದ ಮಾರ್ಗವನ್ನು ಅವಲಂಬಿಸಿ ಬಹಳ ಪೀಡಿಸುವ ಅಂಜಿಕೆ ಮಾತ್ರ ಇದೆ. ಆದುದರಿಂದ ಜನೆವರಿ ೭ ರಿಂದ ಫೆಬ್ರುಅರಿ ೨೦ ಮತ್ತು ಎಪ್ರಿಲ ೪ ರಿಂದ ಮೇ ೩೦ ಈ ಅವಧಿಯಲ್ಲಿ ಆ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕು.

ನವಂಬರ ೨೩ರ ವರೆಗೆ ಇಲ್ಲವೆ ದಿಸೆಂಬರ ೧೧ ರಿಂದ ೨೯, ಮಾರ್ಚ ೫ ರಿಂದ ಎಪ್ರಿಲ ೨೬ ಮತ್ತು ಜೂನ ೩೦ ರಿಂದ ಜುಲೈ ೧೭ರ ಅವಧಿಯಲ್ಲಿ ಹಡೆಯುವ ಸ್ತ್ರೀಯರು ಸುಲಭವಾಗಿ ಹಡೆಯುವರು. ಮಕ್ಕಳು ಕೂಡ ಒಳ್ಳೆ ಸಶಕ್ತ ಮತ್ತು ಸುಂದರ ಇರುವರು. ಉಳಿದ ಅವಧಿಯಲ್ಲಿ ಅತಿ ಕಷ್ಟದಿಂದ ಪ್ರಸೂತಿ ಹೊಂದುವರೆಂದಲ್ಲ. ಆದರೆ ಮಕ್ಕಳು ಸ್ವಲ್ಪ ಅಶಕ್ತ ಮತ್ತು ಆಳದಕ್ಕೆ ಹುಟ್ಟುವವು. ಬಹುತರ ಎಲ್ಲವರಿಗೆ ಗಂಡು ಹುಟ್ಟುವ ಯೋಗವಿದೆ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ದಿಸೆಂಬರ ೧೦ ರಿಂದ ೨೯, ಮಾರ್ಚ ೫ರಿಂದ ೨೩, ಎಪ್ರಿಲ ೮ರಿಂದ ೨೬, ಅಗಷ್ಟ ೨ರಿಂದ ೨೧ ಮತ್ತು ಅಕ್ಟೋಬರ೨೮ರ ನಂತರ ಆಗುವದೊ ಅವರ ಯಶಸ್ಸು ಖಾತ್ರಿ

ಮೀನ

ಒಟ್ಟಾರೆ ಈ ವರ್ಷ ಪ್ರಪಂಚದಲ್ಲಿ ಸ್ವಲ್ಪ ದಗದಗಿಯೆನಿಸಿದರೂ ಧಂದೆ ಕೂಲಿ ಮುಂತಾದ ದೃಷ್ಟಿಯಿಂದ ಪೂರ್ಣ ಉತ್ಕರ್ಷದ್ದಿದೆಂಬಲ್ಲಿ ಸಂದೇಹವಿಲ್ಲ.

ಈ ರಾಶಿಯುವರ ಆರೋಗ್ಯದ ಬಗ್ಗೆ ತಕರಾರು ಇದ್ದದ್ದೇ. ಆದರೆ ಇದೇ ತಾನೆ ೮ನೇ ಶನಿ ಹೋಗಿ ೯ನೇ ಶನಿ ಬಂದಿರುವದರಿಂದ ಬಹಳ ದಿನ ಬೇನೆಯಲ್ಲಿ ತೊಳಲಾಡದೆ ಔಷಧೋಪಚಾರದ ಪರಿಣಾಮವಾಗಿ ಬೇಗ ಗುಣ ಹೊಂದುವಿರಿ. ಸಹಸಾ ಯಾರ ಜೀವಕ್ಕೂ ಗಂಡಾಂತರವಿಲ್ಲ. ನವಂಬರ ೨೧ ರಿಂದ ಜನೆವರಿ ೭ ಮತ್ತು ಅಗಷ್ಟ ೨ ರಿಂದ ಅಕ್ಟೋಬರ ೧೯ ಈ ಅವಧಿಯಲ್ಲಿ ಪ್ರಕೃತಿ ಸ್ವಲ್ಪ ಕೆಡುವ ಸಂಭವವಿದೆ.

ಉಳಿದ ವಿಷಯುಗಳಲ್ಲಿ ಈ ವರ್ಷ ಕಷ್ಟಸಾಧ್ಯವಾದ ಸುಖದ್ದಿರುವದು. ಬಹಳ ವಿಷಯುಗಳ ಅನುಕೂಲತೆ ಮತ್ತು ಸಮೃದ್ಧಿಯಿದ್ದರೂ ಅವಶ್ಯಕ ವೇಳೆಗೆ ಅವೆಲ್ಲ ಒದಗಿ ಬರುವದಿಲ್ಲ. ಸ್ವಭಾವ ಸ್ವಲ್ಪ ಮರಗುಳಿ ಮತ್ತು ಸಂಶಯುದ್ದಾಗುವದು. ಆದರೆ ಅದರ ಸೇಡು ಎರಡನೆಯುವರ ಮೇಲೆ ತೀರಿಸಿಕೊಳ್ಳಲಾಗುವದು. ಕುಟುಂಬದಲ್ಲಿಯ ಪ್ರತಿಯೊಂದು ವ್ಯಕ್ತಿಯೂ ತನ್ನದೇ ಸತ್ಯವೆಂದು ಆಗ್ರಹ ತಾಳುವದು. ಆದರೂ ಪರಸ್ಪರರಲ್ಲಿ ಆಗುವ ಮತಭೇದ ಜನತೆಗೆ ಗೊತ್ತಾಗುವಷ್ಟು ಹೆಚ್ಚುವದಿಲ್ಲ. ನಿಮ್ಮನಿಮ್ಮೊಳಗೇ ಉಳಿಯುವದು. ನಿಮ್ಮಿಂದ ಮಾಡಲು ಶಕ್ಯವಿಲ್ಲದಂಥ ಮಾತುಗಳಿಗಾಗಿ ಕೆಲ ಜನರು ಕಾಲಾಕಾಲವನ್ನು ನೋಡದೆ ಆಗ್ರಹ ತಾಳಿ ನಿಮ್ಮನ್ನು ಕಷ್ಟಕ್ಕೀಡು ಮಾಡುವರು. ಆದರೆ ಆಪ್ತ ಮಿತ್ರರು ಒಂದು ಮಹತ್ವದ ಕೆಲಸದಲ್ಲಿ ಸ್ವತಃ ನಿಮಗೂ ಬಹಳ ಸಹಾಯ ಮಾಡುವ ಯೋಗವಿದೆ. ನೆರೆಹೊರೆಯುವರು ಸ್ವಲ್ಪ ಅನಾದರದಿಂದ ವರ್ತಿಸುವರು. ಮನೆಯಲ್ಲಿ ನೋಕರರು ಪ್ರಾಮಾಣಿಕರಾಗಿ ವರ್ತಿಸುವರು. ಮತ್ತು ನಿಮ್ಮ ಬಗ್ಗೆ ಮನಃಪೂರ್ವಕ ಪ್ರಯತ್ನಿಸುವರು. ವಾಹನ ಸುಖ ಚೆನ್ನಾಗಿ ದೊರೆತರೂ ಅದರ ದುರಸ್ತಿಗಾಗಿ ಬಹಳ ವೆಚ್ಚವ[illegible] ಸಹಿಸಬೇಕಾಗುವದು. ಮೊದಲಿಗಿಂತ [illegible] ಕಡಮೆಯಾಗುವದು. ಪ್ರತಿಯೊಂದು [illegible] ಕಡೆಗೆ ಮತ್ತು ಸಂಗತಿಯುಗಳ್ಲಿ [illegible] ಮೊದ[illegible] ಬಹಳ ಸಂಶಯ [illegible]ವು ನೋಡ[illegible]

ವಿರಿ. ಭಾವೀ ಸೂಚಕ ಅನೇಕ ಸ್ವಪ್ನಗಳು ಬೀಳುವವು. ಆಸ್ತಿಯಲ್ಲಿ ಈ ಸಲ ಅನುಕೂಲ ಘಟನೆಗಳು ಅನೇಕ ಸಂಭವಿಸುವವು. ಆದರೆ ಕರಾರು ಪತ್ರವನ್ನು ಇಲ್ಲವೆ ಲೇಖೀ ಪತ್ರವ್ಯವಹಾರವನ್ನು ಮಾಡುವಾಗ ಅವಸರ ಮಾಡಕೂಡದು. ದೂರ ದೃಷ್ಟಿಯಿಂದ ಮತ್ತು ಕಾಯದೆಯನ್ನು ಚನ್ನಾಗಿ ಮನನಮಾಡಿ ಮಾಡಬೇಕು. ಹಾಗೆ ಮಾಡದಿದ್ದರೆ ಅದರಲ್ಲಿ ದೋಷವುಳಿದು ಮುಂದೆ ಅನೇಕ ಅಡಚಣೆ ಅನುಭವಿಸಬೇಕಾಗಿ ಬರುವದು.

ಸ್ತ್ರೀ ಸುಖಕ್ಕೆ ಈ ವರ್ಷ ಸಾಧಾರಣ ಅನುಕೂಲವಿದ್ದರೂ ಉಭಯತರಲ್ಲಿ ಮತ್ತೈಕ್ಯ ಮೊದಲಿನಷ್ಟು ಉಳಿಯುವದಿಲ್ಲ. ಅವಳ ಪ್ರಕೃತಿಗೆ ಮಾರ್ಚ ೫

ರಿಂದ ೨೩, ಎಪ್ರಿಲ ೮ ರಿಂದ ೨೬ ಮತ್ತು ಆಗಸ್ಟ ೨ ರಿಂದ ೨೧ ಈ ಕಾಲ ಅಷ್ಟೊಂದು ಅನುಕೂಲ ವಿಲ್ಲ. ನಿಮ್ಮ ಮದುವೆ ಇನ್ನೂ ಆಗುವದಿದ್ದರೆ ಈ ವರ್ಷ ಆಗುವ ಯೋಗ ಕಡಮೆಯೆ. ಅದ ರಲ್ಲಿಯೂ ಒದಗಿ ಬಂದರೆ ಮಾರ್ಚ ೧೪ ರಿಂದ ಮೇ ೧೧ರ ಮಧ್ಯದಲ್ಲಿ ಆಗಬಹುದು. ಅದರಂತೆ ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಅದಕ್ಕೆ ಮಾತ್ರ ಅಕ್ಟೋಬರ ೧೬ರ ವರೆಗೆ ಒಳ್ಳೆ ಬಾಸಿಂಗಬಲವಿದೆ. ಲಗ್ನ ಕೂಡಲು ಸ್ವಲ್ಪ ಶ್ರಮ ವಾಗುವದು. ಆದರೆ ಒಮ್ಮೆ ಕೂಡಿತೆಂದರೆ ಮುಂದೆ ಏನೂ ತಕರಾರಿಲ್ಲದೆ ಸಾಂಗವಾಗು ವದು. ಅಳಿಯ ಇಲ್ಲವೆ ಸೊಸೆ ಒಳ್ಳೆ ಮನಸ್ಸಿಗೆ ಬಂದವರು ದೊರೆಯುವರು. ಆದರೆ ಸಮಾರಂಭ ದಲ್ಲಿ ನಿಮ್ಮ ಜನರು ಬೀಗರನ್ನು ನಿರರ್ಥಕವಾಗಿ ನಿಂದಿಸುವರು. ಎಲ್ಲ ಮಕ್ಕಳ ಉತ್ಕರ್ಷ ಬಹ ಳಾಗುವದು. ಆದರೆ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ನಿಮ್ಮೊಡನೆ ಹೆಚ್ಚು ಸೌಜನ್ಯದಿಂದ ನಡೆದುಕೊಳ್ಳುವರು. ಆದರೆ ಅವರಲ್ಲಿ ಒಬ್ಬರಿಗೆ ನೀರಿನಲ್ಲಿ ಅಪಘಾತದ ಅಂಜಿಕೆಯಿದೆ. ಒಬ್ಬನು ಬಹಳ ದೂರ ಹೋಗುವದರಿಂದ ಮನಸ್ಸು ಚಿಂತಾ ಗ್ರಸ್ತವಾಗುವದು.

ಧಂದೆ, ಕೂಲಿಯವರಿಗೆ ಮಾತ್ರ ಈಗಿನ ೯ನೇ ರಾಹು ಮತ್ತು ಶನಿ ಬಹಳ ಉತ್ತಮ, ಪ್ರಗತಿ ದಾಯಕ. ಧಂದೆಯವರಿಗೆ ಮೇ ೨೦ರ ವರೆಗೆ ತುಂಬ ರೊಕ್ಕ ಸಿಕ್ಕುವದು. ಮತ್ತು ಕನಸು ಮನಸಿನ ಲ್ಲಿಲ್ಲದ ಅನೇಕ ಸಂಗತಿಗಳು ಆಕಸ್ಮಾತ್ತಾಗಿ ಸಂಭವಿಸುವವು. ಪತ್ತು ಮತ್ತು ಪ್ರತಿಷ್ಠೆ ಹೆಚ್ಚು ವವು. ಮಿತ್ರರು ಮತ್ತು ಆಶ್ರಯದಾತರು ನಿಮ್ಮ ಕಲ್ಯಾಣಕ್ಕಾಗಿ ಮನಸ್ಸಿನಿಂದ ಪ್ರಯತ್ನಿಸುವರು. ಧಂದೆ ಬಹಳ ದೂರ ವ್ಯಾಪಿಸುವದು. ಮತ್ತು ಅದರಲ್ಲಿಯ ಪ್ರಾವೀಣ್ಯ ಮತ್ತು ಪ್ರಾಮಾಣಿಕತೆಯ ಪ್ರಶಂಸೆ ಎಲ್ಲೆಲ್ಲಿಯೂ ಮಾಡಲಾಗುವದು. ಯಾವದೊಂದು ಸಾಹಸದ ಕಾರ್ಯವನ್ನು ಕೈಕೊ ಳ್ಳಲು ನೀವು ಸದಾ ಮುಂದೆ ನುಗ್ಗುವಿರಿ.

ಧಂದೆಯವರಿಗಿಂತ ನೌಕರರಿಗೆ ಈ ವರ್ಷ ಹೆಚ್ಚು ಉತ್ಕರ್ಷವಿದೆ. ವಿಶೇಷವಾಗಿ ಜನೆ ವರಿ ೬ ರಿಂದ ಮೇ ೨೦ ಜುಲೈ ೩೧ ರಿಂದ ಆಗಸ್ಟ ೨೦ ಈ ಅವಧಿಯಲ್ಲಿ ಉತ್ಕರ್ಷಯೋಗ ಹೆಚ್ಚಿ ಗಿದೆ. ವರಿಷ್ಠರು ಸದಾ ನಿಮ್ಮ ಮೇಲೆ ಅನುಗ್ರಹಿ ಸುವರು. ಯಾವದೊಂದು ಮಹತ್ವದ ಕೆಲಸ ಬಂದರೆ ನಿಮ್ಮ ಹೆಸರನ್ನು ತಪ್ಪದೆ ಸೂಚಿಸುವರು. ಕ್ರಮದಂತೆ ನಿಮ್ಮ ಹಕ್ಕು ಇಲ್ಲವೆ ಸರತಿ ಇಲ್ಲ ದಿದ್ದರೂ ಅನೇಕರಿಗೆ ಮೇಲಿನ ಗ್ರೇಡು ನಿಶ್ಚಿತ ವಾಗಿ ಸಿಕ್ಕುವದು. ಖಾತೆ ಬದಲಿಯಾಗುವ ದಿದ್ದರೆ ನಿಮ್ಮ ಮನಸ್ಸಿಗೆ ಒಗ್ಗುವ ಸ್ಥಳಕ್ಕೆ ಬದಲಿ ಆಗುವದು. ಕೈಕೆಳಗಿನವರು ಕಾರ್ಯಕ್ಷಮರಿದ್ದರೂ ಸದಾ ಸ್ವಲ್ಪ ಏರಿಕೆಯಲ್ಲಿಯೇ ಇರುವರು. ದೊಡ್ಡವರ ಭೆಟ್ಟಿಯೋಗ ಮೇಲಿಂದಮೇಲೆ. ಸಮಾಜದಲ್ಲಿ ಎಲ್ಲಿ ನೋಡಿದಲ್ಲಿ ನಿಮ್ಮ ಬಗ್ಗೆ ಸಹಾನುಭೂತಿ ಕಂಡುಬರುವದು. ಲಾಭ ಇಡೀ ವರ್ಷ ಅನುಕೂಲ. ಆದರೆ ಆಗಸ್ಟ ೨ ರಿಂದ ಅಕ್ಟೋಬರ ೧೯ ರ ವರೆಗೆ,೧೨ ನೇ ಮತ್ತು ವಕ್ರೀ ಮಂಗಳನ ಪರಿಣಾಮವಾಗಿ ಬಹಳ ವೆಚ್ಚ ಸಹಿಸ ಬೇಕಾಗುವದು. ಆಸ್ತಿಯ ಪ್ರಮಾಣದಂತೆ ಸಂಗ್ರಹ ಮಾತ್ರ ಬಹಳ ಕಡಮೆ. ದೂರದ ಪ್ರವಾಸ ಸ್ವಲ್ಪ ತೊಂದರೆಯದಾದರೂ ಅದರಿಂದ ಹೇತು ಸಾಧ್ಯವಾಗುವದು. ಸಮೀಪದ ಪ್ರವಾಸ ಎಲ್ಲ ಬಗೆಯಿಂದ ಸುಖದಾಯಕ.

ದಾವೆ ಖಟ್ಲೆ ಫಿರ್ಯಾದಿಗಳಲ್ಲಿ ನಿಮಗೆ ಈ ವರ್ಷ ಸ್ವಲ್ಪ ಪ್ರತಿಕೂಲವೆ. ಆದರೆ ಪ್ರತಿಪಕ್ಷಿಗಳಿಗೆ ಕೂಡ ಅಷ್ಟೊಂದು ವಿಜಯಪ್ರದವಾಗಿಲ್ಲ. ಬಹಳ ಕಾರ್ಯ ಅನಿರ್ಣೀತವೇ ಉಳಿಯುವವು. ಅದರ ಲ್ಲಿಯೂ ನವಂಬರ ೨೩ ರಿಂದ ದಿಸೆಂಬರ ೧೦, ದಿಸೆಂಬರ ೨೯ ರಿಂದ ಮಾರ್ಚ ೫, ಎಪ್ರಿಲ ೮ರಿಂದ ಜುಲೈ ೧೬ ಮತ್ತು ಅಕ್ಟೋಬರ ೨೮ರ ನಂತರದ ಕಾಲ ಬಹಳ ಅನುಕೂಲವಿದೆ.

ಮಾರ್ಚ ೧೪ ರಿಂದ ಮೇ ೧೧ ಮತ್ತು ಅಕ್ಟೋ ಬರ ೧೬ರ ನಂತರದ ಕಾಲದಲ್ಲಿ ಅತಿ ಸುಲಭ ಪ್ರಸೂತಿ ಯೋಗವಿದೆ. ಮತ್ತು ಉಳಿದ ಕಾಲದಲ್ಲಿ ಸ್ವಲ್ಪ ಕಷ್ಟವಾಗುವದು. ಆದರೂ ಜೀವಕ್ಕೇನೂ ಅಪಾಯ ಸ್ವಲ್ಪೂ ಇಲ್ಲ. ಅನೇಕರಿಗೆ ಹೆಣ್ಣು ಹುಟ್ಟುವ ಸಂಭವವಿದೆ.

ಮಾರ್ಚ ೧೪ ರಿಂದ ಮೇ ೧೧, ಜುಲೈ ೧ ರಿಂದ ೨೧ ಮತ್ತು ಸಪ್ಟಂಬರ ೧ ರಿಂದ ೨೮ ಈ ಅವಧಿ ಯಲ್ಲಿ ಯಾವ ವಿದ್ಯಾರ್ಥಿಗಳ ಪರೀಕ್ಷೆಯಾಗು ವದೋ ಅವರು ನಿಶ್ಚಯವಾಗಿ ಯಶಸ್ವಿಯಾಗು ವರು.

ಶುಭಂ ಭವತು



"ಹಾಂ, ಈಗ ಸರಿಹೋಯಿತು!"

ಫಿನ್ಲೆಂಡಿನ ಮೂರ್ಖರ ಕಥೆಗಳು

ಫಿನ್ಲೆಂಡದ ಮತ್ತು ಅಲ್ಲಿಯ ಭಾಷೆಯ ಹರಕು–ಮುರುಕಾದರೂ ಪರಿಚಯವಿರುವವರ ಕಿವಿಗೆ 'ಹೊಲಮೊಲಾಯಿಸೆಟ್'—ಅಂದರೆ ಫಿನ್ಲೆಂಡದ ಮೂರ್ಖಜನರ ಕಥೆಗಳು ಬಿದ್ದೇ ತೀರುತ್ತವೆ.

ಈ ಕಥೆಗಳು ಹುಟ್ಟಿಕೊಂಡಿದ್ದು ಹೇಗೆ ಎಂಬುದು ಯಾರಿಗೂ ನಿಶ್ಚಿತವಾಗಿ ಗೊತ್ತಿರುವದಿಲ್ಲವಾದ್ದರಿಂದ ಇವನ್ನು ಜಾನಪದ ಕಥೆಗಳ ಸಾಲಿಗೆ ಸೇರಿಸಬಹುದಾಗಿದೆ.

ಫಿನ್ಲೆಂಡದಲ್ಲಿ ಯಾವನನ್ನೇ ಕೇಳಿದರೂ ಅವನು ಈ ಮೂರ್ಖಜನರ ಕಥೆ ಹೇಳಬಲ್ಲನು. ಇವುಗಳಲ್ಲಿ ಅತ್ಯಂತ ಪ್ರಚಲಿತವಿರುವ ಕಥೆ, "ಹೊಲಮೊಲಾಯಿಸೆಟ್" ಜನರದಾಗಿದೆ. ಇವರು ತಮಗಾಗಿ ಒಂದು ಮನೆ ಕಟ್ಟಿಕೊಂಡರು. ಮನೆಯನ್ನು ಬಹು ಭದ್ರವಾಗಿ ಕಟ್ಟುವ ಹವ್ಯಾಸದಲ್ಲಿ ಅವರು ಗೋಡೆಯಲ್ಲಿ ಕಿಡಕಿಯನ್ನಿಡಲು ಮರೆತೇ ಬಿಟ್ಟರು.

ಮನೆ ಕಟ್ಟಿ ಮುಗಿದ ಬಳಿಕ ಒಳಗೆ ಕತ್ತಲಾದುದನ್ನು ಕಂಡು ಅವರು ಬೆಳಕನ್ನು ಹೇಗೆ ತರೋಣ ಎಂದು ಬಹಳ ಹೊತ್ತಿನವರೆಗೆ ತಲೆ ಕೆರೆದುಕೊಂಡರು. ಕೊನೆಗೆ ಒಂದು ಒಳ್ಳೆಯ ವಿಚಾರ ಅವರಿಗೆ ಹೊಳೆಯಿತು. ಒಂದು ಚೀಲದಲ್ಲಿ ಬೆಳಕನ್ನು ತುಂಬಿತಂದು ಮನೆಯೊಳಗೆ ಬಿಡಬೇಕು ಎಂದು ನಿರ್ಧರಿಸಿದರು.

ಬಳಿಕ ಅವರು ಹೊರಗೆ ಬಿಸಿಲಿನಲ್ಲಿ ಒಂದು ಚೀಲವನ್ನು ಬಾಯಿಬಿಚ್ಚಿ ಇಟ್ಟರು. ತುಸು ಹೊತ್ತಿನಬಳಿಕ ಅದರ ಬಾಯಿಯನ್ನು ಭದ್ರವಾಗಿ ಹೊಲಿದು ಮನೆಯೊಳಗೆ ತಂದರು. ಅಲ್ಲಿ ಚೀಲದಬಾಯಿಯನ್ನು ಮತ್ತೆ ಬಿಚ್ಚಿದರು. ಆದರೆ ಒಳಗೆ ಬೆಳಕು ಬೀರದ್ದನ್ನು ಕಂಡು ಅವರೆಲ್ಲರಿಗೆ ಆಶ್ಚರ್ಯವಾಯಿತು. ಈ ಮಹಾ ನಿರಾಸೆಯಿಂದ ಮಂಕರಾಗಿ ಅವರು ನಿಂತಿದ್ದಾಗ ಅಲ್ಲಿಗೆ ಬಂದ ಮಟ್ಟಿ ಅವರನ್ನು ವಿಚಾರಿಸಿ ಅವರ ಸಂಕಟದ ಕಾರಣವನ್ನು ಅರಿತುಕೊಂಡನು. ಆಗ ಮಟ್ಟಿ "ಒಳ್ಳೇದು, ನನಗೆ ನೂರು ಮಾರ್ಕ (ಫಿನ್ಲೆಂಡದ ನಾಣ್ಯ) ಗಳನ್ನು ಕೊಟ್ಟರೆ ಬೆಳಕನ್ನು ತಂದುಕೊಡುವೆನು" ಎಂದನು.

'ಹೊಲಮೊಲಾಯಿಸೆಟ್'ರಿಗೆ ಇಷ್ಟು ಅಗ್ಗದಲ್ಲಿ ಬೆಳಕು ಸಿಗುವದಲ್ಲ ಎಂದು ಸಂತೋಷವಾಗಿ ಅವರು ಆಗಿಂದಾಗ ನೂರು ಮಾರ್ಕಗಳನ್ನು ಮಟ್ಟಿಗೆ ಕೊಟ್ಟರು. ಮಟ್ಟಿ ಗೋಡೆಗೆ ಒಂದು ಕಿಂಡಿಯನ್ನು ಕೊರೆದನು. ಮನೆಯೊಳಗೆ ಬೆಳಕು ಬಂತು.

ಇದನ್ನು ಕಂಡು ಬಹಳ ಆನಂದಗೊಂಡ 'ಹೊಲಮೊಲಾಯಿಸೆಟ್' ರು ಇಡೀ ಗೋಡೆಯನ್ನೆ ಕಿಂಡಿಯನ್ನಾಗಿ ಮಾಡಲು ನಿರ್ಧರಿಸಿದರು. ಅವರಿಗೆ ಬೇಕಾದಷ್ಟು ಬೆಳಕು ಅದರಿಂದ ದೊರೆಯಿತಾದರೂ ಇಡೀ ಮನೆಯೆ ಕುಸಿದುಬಿತ್ತು.

*   *   *   *

ಈ ಕಥೆಗಳಲ್ಲಿ ಮಟ್ಟಿ ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತಾನೆ. ಅವನು ಫಿನ್ಲೆಂಡದ ಗೌರವ್ಯ, ಸಾರಾಸಾರ ವಿಚಾರವುಳ್ಳ ಮನುಷ್ಯನ ಪ್ರತೀಕನಾಗಿದ್ದಾನೆ. ಆದರೆ ಎಷ್ಟೋ ಸಲ ಮೂರ್ಖರು ಮಟ್ಟಿಯ ಸಹಾಯವಿಲ್ಲದೆ ಕೆಲಸ ಮಾಡಬೇಕಾಗುತ್ತದೆಂಬುದು ಈ ಮುಂದಿನ ಕಥೆಯಿಂದ ಗೊತ್ತಾಗುತ್ತದೆ.

ಒಂದು ದಿನ 'ಹೊಲಮೊಲಾಯಿಸೆಟ್' ರು ಕರಡಿಯ ಬೇಟೆಗಾಗಿ ಹೊರಟರು. ಕರಡಿಯ ಗುಹೆಯ ಹತ್ತರ ಹೋದಾಗ ಅವರು ಮೊದಲು ಮಾಡಿದ ಕೆಲಸವೆಂದರೆ ಗುಹೆಯ ಬಳಿ ಕುಳಿತು ಊಟವನ್ನು ಮಾಡಿದ್ದು. ಊಟವಾದ ನಂತರ ಅವರು ಮುಂದೇನು ಮಾಡಬೇಕೆಂದು ಚರ್ಚಿಸಿದರು. ಪಕ್ಕಾ ಎಂಬವನು ಗುಹೆಯನ್ನು ಪ್ರವೇಶಿಸಿ ಕರಡಿಯನ್ನು ಹೊರ ಹೊರಡಿಸಬೇಕು ಎಂದು ನಿರ್ಧರಿಸಿದರು. ಪಕ್ಕಾನ ಸುರಕ್ಷಿತತೆಗಾಗಿ ಎಂದು ಅವನ ಕಾಲಿಗೆ ಒಂದು ಹಗ್ಗವನ್ನು ಕಟ್ಟಿದರು.


ಗುಹೆಯೊಳಗೆ ಹೋದಾಗ ಏನಾದರೂ ಕಷ್ಟಕ್ಕೆ ಗುರಿಯಾ[illegible] ಕಾಲು ಝಾಡಿಸಬೇಕು. ಆಗ [illegible] ಹೊರಗ[illegible] ಅವನನ್ನು ಹೊರಗೆಳೆದುಕೊ[illegible] ನಿಶ್ಚಯವಾಯಿತು.

ಆದರಂತೆ ಪಕ್ಕಾ ಗುಹೆಯೊಳಗೆ ಹೋದನು. ಅವನು ಗುಹೆಯನ್ನು ಹೊಕ್ಕು ತುಸು ಮುಂದೆ ಹೋಗುವಷ್ಟರಲ್ಲಿ ಕರಡಿ ಅವನ ಕುತ್ತಿಗೆಯನ್ನು ಕಚ್ಚಿ ತುಂಡರಿಸಿ ಬಿಟ್ಟಿತು. ಪಕ್ಕಾನ ಕಾಲುಗಳು ತುಸು ಕಂಪಿಸಿದವು. ಅಲ್ಲಿಗೆ ಅವನ ಕಥೆ ಮುಗಿದುಹೋಯಿತು.

ಹೊರಗಡೆ ಅವನ ಸಂಗಡಿಗರು ಚರ್ಚೆ ಮಾಡಿದರು. "ಪಕ್ಕಾ ಈಗ ಕಾಲು ಅಲ್ಲಾಡಿಸಿದ. ಒಳಗೆ ಎಲ್ಲವೂ ಸರಾಗವಾಗಿರುವಂತೆ ಕಾಣುವದಿಲ್ಲ" ಎಂದು ಅವರು ಅವನನ್ನು ಹೊರಗೆಳೆದರು. ಪಕ್ಕಾನಿಗೆ ತಲೆಯೆ ಇರಲಿಲ್ಲ. "ಎಲಾ! ತಲೆಯಿಲ್ಲವೇ ಇಲ್ಲವಲ್ಲ!" ಎಂದು 'ಹೊಲಮೊಲಾಯಿಸೆಟ್" ರು ಅಂದರು. ಇದರರ್ಥವೇನು ಎಂದು ಮತ್ತೆ ಚರ್ಚಿಸತೊಡಗಿದರು.

ಅವರಲ್ಲೊಬ್ಬನು "ಪಕ್ಕಾ ಗುಹೆಯನ್ನು ಪ್ರವೇಶಿಸುವಾಗ ಅವನಿಗೆ ತಲೆಯಿದ್ದಿತು ಎಂಬುದಾದರೂ ನಮಗೆಲ್ಲಿ ಖಂಡಿತವಾಗಿ ಗೊತ್ತಿದೆ?" ಎಂದು ಅಭಿಪ್ರಾಯ ವ್ಯಕ್ತ ಮಾಡಿದನು.

ಎರಡನೆಯವನೊಬ್ಬ, "ಆ ಬಗ್ಗೆ ನಾನು ಒಂದು ಖಂಡಿತವಾದ ಮಾತನ್ನು ಹೇಳಬಲ್ಲೆ. ಅವನು ಊಟ ಮಾಡುತ್ತಿದ್ದಾಗ ಅವನ ಗಡ್ಡ ಅಲುಗಾಡುತ್ತಿದ್ದುದನ್ನು ನಾನು ನನ್ನ ಕಣ್ಣುಗಳಿಂದ ಸ್ಪಷ್ಟವಾಗಿ ಕಂಡಿದ್ದೇನೆ," ಎಂದ.





ಸಮಾಜದ ಸ್ಥಿತಿ ಮತ್ತು ಗತಿ

ಸ್ಥಿತಿ ಮತ್ತು ಗತಿ ಶಬ್ದಗಳ ಸರಿಯಾದ ಅರ್ಥಪ್ರತೀತಿಯಿಲ್ಲದಿರುವುದೇ ನಮ್ಮ ಅಭ್ಯುದಯಕ್ಕೆ ದೊಡ್ಡ ತೊಡಕಾಗಿದೆ. ಗತಿಶೀಲ ಪ್ರಗತಿಪರ ಎಂದು ನಾವು ಹೇಳುವಾಗ ಸ್ಥಿತಿಹೀನ ಅಸ್ಥಿರ ಎಂಬ ಅರ್ಥವಲ್ಲ. ಚಲನಶೀಲ ಪರಿಸರಕ್ಕನುಸಾರವಾಗಿ ಬದಲಾವಣೆ ಹೊಂದುವದೆಂದಿಷ್ಟೇ ಅದರ ತಾತ್ಪರ್ಯ. ಇಂಥ ಪ್ರಗತಿ, ನಿರೋಧಕ ಶಕ್ತಿಗಳೊಡನೆ ಸೆಣಸುವ ಪೌರುಷ ಇವಿಲ್ಲದೆ ನಾವು ನಿಂತ ನೀರಾಗಿ ಕೊಳೆಯುತ್ತಿದ್ದೇವೆ.

ಲೇಖಕರು : ಶ್ರೀ. ಶಂ. ಬಾ. ಜೋಶಿ

ನಮ್ಮ ವ್ಯಾವಹಾರಿಕ ಭಾಷೆಯಲ್ಲಿ 'ಸ್ಥಿತಿ' ಮತ್ತು 'ಗತಿ' ಎರಡೂ ಶಬ್ದಗಳು ವಿಶಿಷ್ಟ ಸಂಕುಚಿತವಾದ ಅರ್ಥದಲ್ಲಿ ಬಳಕೆಯಲ್ಲಿ ಇರುವುದೇ ಕಂಡುಬರುತ್ತದೆ. 'ನಮ್ಮ ಸಮಾಜದ ಸ್ಥಿತಿ ಈಗ ಸುಧಾರಿಸುತ್ತಲಿದೆ', 'ಇದರ ಗತಿ ಏನಾದೀತೋ ಹೇಳಲಾಸಲ್ಲ' ಎಂಬೀ ಬಗೆಯ ವಾಕ್ಯಗಳಲ್ಲಿ ಸ್ಥಿತಿ-ಗತಿ ಇವಕ್ಕೆ ಕೇವಲ ಒಂದು ಅವಸ್ಥಾವಿಶೇಷ-ಪರಿಸ್ಥಿತಿ ಎಂಬ ಅರ್ಥವು ಮಾತ್ರ ಅಭಿಪ್ರೇತವಿದ್ದುದು ಕಂಡುಬರುತ್ತದೆ.

ಆದರೆ ಸ್ಥಿತಿ ಮತ್ತು ಗತಿ ಇವೆರಡನ್ನೂ ಒಂದರ ಮುಂದೊಂದು ಬಳಸಿ ಸಂಚಲನ, ಸಂಕ್ರಮಣ ಎಂಬ ಅರ್ಥದಲ್ಲಿ ಪ್ರಸ್ತುತ ಉಪಯೋಗಿಸಲಾಗಿದೆ.

ಸಮಾಜವು ಸಂಚಲಿಸುತ್ತಲಿದೆ; ಗತಿಮಂತವಾಗಿದೆ ಎಂದು ಹೇಳಿದರೆ ನಮ್ಮಲ್ಲಿ ಸೋಜಿಗವಾಗದವರೇ ವಿರಳ. ಸನಾತನತ್ವದ ಅಭಿಮಾನವು ಈ ಮಾತನ್ನು ಒಪ್ಪಿಕೊಳ್ಳಲು ಅಡ್ಡಬರುತ್ತದೆ. ಯಾವ ಪರಶಿವನಿಂದಲೋ ಅಥವಾ ಪರಬ್ರಹ್ಮನಿಂದಲೋ ಇಲ್ಲವೆ ಕ್ಷೀರ-ಸಾಗರ-ಶಯನನ ನಾಭಿಕಮಲದಿಂದ ಉದ್ಭವಿಸಿದ ಚತುರ್ಮುಖ-ಬ್ರಹ್ಮನಿಂದಲೋ ತಮ್ಮ ಸಮಾಜವು ನಿರ್ಮಾಣವಾಯಿತೆಂಬ ಗ್ರಹಿಕೆಯು ನಮ್ಮಲ್ಲಿ ಬಹುಜನರ ಮನಸ್ಸನ್ನು ಆಳುತ್ತಲಿದೆ; ತಮ್ಮ ಸಮಾಜದ ಆಚಾರ ವಿಚಾರಗಳು ಯಾವ ಬದಲಾವಣೆಗಳಿಗೂ ಒಳಪಡದೆ ಅಂದಿನಿಂದ ಇಂದಿನವರೆಗೆ ಹಾಗೆಯೆ ಸಾಗಿಬಂದಿವೆ, ಎಂಬ ಆಂತರಿಕ ಶ್ರದ್ಧೆಯು ಪ್ರತಿಯೊಂದು ಸಮಾಜದಲ್ಲಿಯೂ ಬೇರೂರಿಕೊಂಡಿರುವುದು ಅನುಭವಕ್ಕೆ ಬರುತ್ತದೆ. ಈ ಬಗೆಯ ಶ್ರದ್ಧೆ ಇದ್ದುದರಿಂದಲೆ, ತಮ್ಮ ಸಮಾಜದಲ್ಲಿ ಯಾವ ಬದಲಾವಣೆಗಳೂ ಆಗಕೂಡದೆಂಬ ಭಾವನೆಗೆ ಪುಟ ದೊರೆತಿದೆ. ಸಮಾಜವು ಗತಿಮಂತವಿದ್ದು, ತನ್ನ ಸಂಚಲನದಲ್ಲಿ ಅದು ಕಾಲಕಾಲಕ್ಕೆ ಬದಲಾಗುತ್ತ ಬಂದಿದೆ; ಕಾಲಕ್ಕನುಸರಿಸಿದ ಈ ಬಗೆಯ ಬದಲಾವಣೆಗಳು ಅನಿವಾರ್ಯ ಎಂಬ ವಿಚಾರವನ್ನು ಬಾಯ್ಬಿಟ್ಟು ಹೇಳುವವರು ಜನದಲ್ಲಿ ಅವಹೇಳನಕ್ಕೆ ಗುರಿಯಾಗಬೇಕಾಗುತ್ತದೆ. ಸಮುದ್ರಯಾನ ಮಾಡಿದವರನ್ನು ಬಹಿಷ್ಕರಿಸುವುದು ಈಗ ಅಶಕ್ಯವಾಗಿದ್ದರೂ ಈ ಸ್ಮೃತಿನಿಯಮವು ಇಂದು ನಿರುಪಯುಕ್ತ-ನಿರರ್ಥಕವಾಗಿದೆಯೆಂದು ಬಹಿರಂಗವಾಗಿ ಸಾರಿಹೇಳುವುದಕ್ಕೆ ಜನ ಅಳಕುತ್ತಲೆ ಇದ್ದಾರೆ. ಇಂತಹರ ಮೇಲೆ ಬಹಿಷ್ಕಾರ ಹಾಕುವ ಮತಗಳೂ ಉಂಟು. ಸಮಾಜವು ಸಂಚಲಿಸುತ್ತದೆ ಎಂಬ ಮಾತು ಮನದಟ್ಟಾಗಿದ್ದರೆ ನಮ್ಮ ನಾಡಿನ ಸಂಪ್ರದಾಯವಾದವು ಇದಕ್ಕೂ ವಿಶಾಲದೃಷ್ಟಿಕೋನವುಳ್ಳುದಾಗದೆ ಇರುತ್ತಿದ್ದಿಲ್ಲ.

ಸಮಾಜದ ಹುಟ್ಟು ಮತ್ತು ಬೆಳಿಗೆಯ ವಿಷಯದಲ್ಲಿ ಆಧುನಿಕ ಶಾಸ್ತ್ರೀಯ ದೃಷ್ಟಿಕೋನವು ನಮ್ಮಲ್ಲಿ ಇನ್ನೂ ಶಿಷ್ಟಸಮ್ಮತಿಯನ್ನು ಪಡೆದಿಲ್ಲ! ಶಾಲೆ-ಕಾಲೇಜುಗಳಲ್ಲಿ ಓದಿದ ಡಾರ್ವಿನ್ನನ ವಿಕಾಸವಾದವು, ಧರ್ಮತತ್ವಜ್ಞಾ[illegible]ತ್ತು ಸಮಾಜ ಸಂಸ್ಥೆಗಳ ಇತಿಹಾಸವನ್ನ[illegible]ಕೊಳ್ಳುವಲ್ಲಿ ಎಲ್ಲಿಯೋ ಮರೆತುಹೋಗುತ್ತಿದೆ! ಬಿ. ಎ., ಎಂ. ಎ. ಆದ ವಿದ್ವಾಂಸರು ಕೂಡ ಈ ವಿಷಯದಲ್ಲಿ ಅಪವಾದವಲ್ಲ. ಈ ಮಾತನ್ನು ಮನಗಾಣಲು 'ಅಸ್ಸಲ್ ದ್ರಾವಿಡ ಸಂಸ್ಕೃತಿ', 'ಅಸ್ಸಲ್ ಆರ್ಯ ಸಂಸ್ಕೃತಿ' ತಮ್ಮದೆಂದು ಹೆಮ್ಮೆಬಟ್ಟುಕೊಳ್ಳುವ ಪಂಗಡಗಳ ನೇತಾರರು ಆಧುನಿಕ ವಿದ್ಯಾವಿಭೂಷಿತ ಪದವೀಧರರೇ ಇರುವುದನ್ನು ನೆನೆದುಕೊಳ್ಳಬೇಕು. ಕಾಲಪ್ರವಾಹದಲ್ಲಿ ಉರುಳುತ್ತ ಆಯಾ ಪರಿಸ್ಥಿತಿಗನುಸರಿಸಿ ಮಾರ್ಪಾಟಗೊಳ್ಳುತ್ತ ಹೋಗದ ಸಮಾಜವು ಬದುಕಿರಲು ಸಾಧ್ಯವೇ ಇಲ್ಲ. ಈ ಕಾರಣದಿಂದ ದ್ರಾವಿಡ ಮತ್ತು ಆರ್ಯತ್ವದ ಕೇವಲ ಅಭಿಮಾನವು ಇತಿಹಾಸಕ್ರಮದ ಅಜ್ಞಾನ ಅಥವಾ ಅದರಲ್ಲಿಯ ಅಶ್ರದ್ಧೆಯನ್ನೇ ಸೂಚಿಸುವುದಿಲ್ಲವೆ? ಕಾಲಕ್ಕನುಸರಿಸಿದ ಬದಲಾವಣೆಗೆ ಒಪ್ಪದ ಸಮಾಜಗಳು ತಮ್ಮ ಪೂರ್ವ 'ಸಂಸ್ಕೃತಿ'ಯನ್ನು ಅಚ್ಚಳಿಯದೆ ಉಳಿಸಿಕೊಳ್ಳಲು ಎಲ್ಲಿಯೋ ಕಾಡಿನಲ್ಲಿ ಅಡಗಿಕೊಂಡು ಉಳಿದಿರುವುದು ಕಂಡುಬರುತ್ತದೆ. ಅಡವಿ ಬಿಟ್ಟು ಊರು ಕಟ್ಟಿಕೊಂಡು ನಿಂತವರು, ಊರನ್ನು ಪೇಟೆ-ಪಟ್ಟಣವನ್ನಾಗಿ ಬೆಳಸಿಕೊಂಡವರು, ತಾವು ಶ್ರೇಷ್ಠ ಸಂಸ್ಕೃತಿಯವರು, ಸುಧಾರಿಸಿದವರು ಎಂದು ಹೇಳುವ ನಾಲಿಗೆಯೆ, ಮತ್ತೊಮ್ಮೆ ತಮ್ಮ 'ಸನಾತನತ್ವ'ವನ್ನು ಕೊಚ್ಚಿಕೊಳ್ಳುವುದನ್ನು ನೋಡಿದರೆ ನಗೆ ಬರುತ್ತದೆ. ಸಂಸ್ಕೃತಿ ಮತ್ತು ಸುಧಾರಣೆಯೆಂದರೇ ಬದಲಾವಣೆ! ಲೋಕದಲ್ಲಿ ಶ್ರೇಷ್ಠ, ಸುಂದರ, ಉದಾತ್ತವೆಂದು ಮನವರಿಕೆಯಾದುದನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದೇ ಸಂಸ್ಕೃತಿಯ ಮೂಲಧರ್ಮವಾಗಿದೆ. ಆದುದರಿಂದ ಕಾಲಪ್ರವಾಹದಲ್ಲಿ ತಮ್ಮ ಸಮಾಜದಲ್ಲಿ ಯಾವ ಬದಲಾವಣೆಗಳಾಗದೆ ಅದು ಸನಾತನವಾಗಿ ಹಾಗೆಯೆ ನಡೆದುಬಂದಿದೆ ಎಂದು ಹೇಳುವುದರಿಂದ ನಮ್ಮಲ್ಲಿ ಸಂಸ್ಕೃತಿಯಿದೆ ಎಂಬ ಮಾತನ್ನೇ ಅಲ್ಲಗಳೆದಂತಾಗುತ್ತದೆಂಬ ಎಚ್ಚರವನ್ನು ತಂದುಕೊಳ್ಳುವುದು ಅಗತ್ಯವಾಗಿದೆ.

*

ಸಮಾಜವು ಸ್ಥಿರವಲ್ಲ; ಚರ. ಅದು ಎಂದೂ ನಿಂತಿಲ್ಲ; ನಡೆದಿದೆ. ಸಮಾಜವು ನಿಂತರೆ-ಹರಿಗಡಿ

ದರೆ ಅದು, ಅದರ ಅವನತಿಯು ನಿಶ್ಚಿತ ಕುರುಹು. ನದಿಯು ಹರಿಯುವುದನ್ನು ನಿಲ್ಲಿಸಿದರೆ ನಿಂತನೀರು ಮಲಿತು ರೋಗಜಂತುಗಳ ತವರು ಆಗುತ್ತದೆ. ಸಮಾಜವೂ ಒಂದು ಪ್ರವಾಹ ; ಕಾಲದ ಹಿನ್ನೆಲೆಯಲ್ಲಿ ಅಖಂಡವಾಗಿ ಅವ್ಯಾಹತವಾಗಿ ಪ್ರವಹಿಸುತ್ತಲಿದೆ. ನದಿಯ (ಪ್ರವಾಹದ) ನೀರು ಒಂದು ಸ್ಥಳದಿಂದ ಮುಂದಿನ ಸ್ಥಳಕ್ಕೆ ಹರಿಯುತ್ತ ಹೋಗುವಾಗ ತನ್ನೊಡನೆ ಅಲ್ಲಲ್ಲಿಯ ಭೂಮಿಯ ಬಣ್ಣ-ರುಚಿಗಳ ಅಂಶಗಳನ್ನು ಪಡೆಯುತ್ತಿರುತ್ತದೆ. ಹಲವಾರು ಸಣ್ಣ ದೊಡ್ಡ ಬೇರೆ ಪ್ರವಾಹಗಳು ದಾರಿಯಲ್ಲಿ ಬಂದು ಸೇರುತ್ತಲಿರುತ್ತವೆ. ಸಮಾಜದ ಪ್ರವಾಹದ ಬಗೆಯೂ ಇದಕ್ಕಿಂತ ವಿಶೇಷ ಭಿನ್ನವಿಲ್ಲ. ಹೀಗಿದ್ದರೂ ಗಂಗೋತ್ರಿಯ ನೀರೇ ಪ್ರಯಾಗದಲ್ಲೂ ಕಾಶಿಯಲ್ಲೂ ಉಂಟೆಂದು ಶ್ರದ್ಧೆ ವಹಿಸುವುದು ಸಮಂಜಸವಾದೀತೆ ?

ಪೂರ್ವಿಕರು ಈ ಪ್ರಪಂಚಪ್ರವಾಹವನ್ನು 'ಜಗತ್ತು' ಎಂದು ಕರೆದಿರುವುದರಲ್ಲಿ ಅವರಿಗ ಈ ಪ್ರವಹಿಸುವ ಸ್ಥಿತಿಯ-ತಾವು ಸಂಚಲಿಸುತ್ತಲಿದ್ದೇವೆ ಎಂಬ ಮಾತಿನ-ಜ್ಞಾನವಿದ್ದುದು ನಿಶ್ಚಿತವಾಗಿ ಗೊತ್ತಾಗುತ್ತದೆ. ಗಮ್-ಗಚ್ಛ್ ಧಾತುವಿನಿಂದ ಸಾಧಿತವಾದ ಜಗತ್ ಶಬ್ದದಲ್ಲಿ ಅದು ಗತಿಮಂತವಾದುದು ಎಂಬ ನಿಃಸಂದಿಗ್ಧ ಅರ್ಥವಿದೆ. 'ಗಚ್ಛತಿ ಇತಿ ಜಗತ್' ಎಂದು ಇದರ ನಿರುಕ್ತ ಹೇಳುವುದುಂಟು. ಸೃ-ಸರ್, ಧಾತುವಿನಿಂದಾದ ಸಂ-ಸಾರವೆಂಬ ಪದದಲ್ಲಿಯೂ ಸಮಾಜವು ಸಂಚಲಿಸುತ್ತಿದೆ ಎಂಬ ಅರ್ಥವೇ ಅನುಸ್ಯೂತವಾಗಿದೆ.

ಬದಲಾಗದೆ ಬದುಕಲಾರವು ಪ್ರಾಣಿ ವನಸ್ಪತಿಗಳು. ಕಾಲನಿಬದ್ಧವಾದುವೆಲ್ಲವೂ ಬದಲಾವಣೆಗೆ ಒಳಪಟ್ಟವೆ. ಪರಿಸ್ಥಿತಿಯ ಒತ್ತಾಯದಲ್ಲಿ ಆಗುವ ಬದಲಾವಣೆಯು ನಡೆದೇ ಇದೆ. ಆದರೆ ಇಷ್ಟೇ ಬದಲಾವಣೆಯಲ್ಲದೆ ಕಾಲ-ಪರಿಸ್ಥಿತಿಯನ್ನರಿತು ತಾನಾಗಿಯೇ ತಿಳಿದು ಬೇರೆ ಮಾರ್ಪಾಟುಗಳನ್ನು ಮಾಡಿಕೊಳ್ಳಲು ಮಾನವನು ಕಲಿತಿದ್ದಿಲ್ಲವಾದರೆ ಅನೇಕ ಪ್ರಾಣಿ-ವನಸ್ಪತಿಗಳಂತೆ 'ಮಾನವ'ವೆಂಬ ಹುಳುವೂ ಅದೆಂದೊ ಹೇಳಹೆಸರಿಲ್ಲದಂತೆ ಆಗಿ ಹೋಗುತ್ತಿದ್ದಿತು. ಸೃಷ್ಟಿಯ ಪ್ರಾರಂಭದ ಕೆಲವು ಶತಮಾನಗಳ ತರುವಾಯ ಕಾಣಿಸಿಕೊಂಡ ಸರೀಸೃಪ ಮಹಾವಂಶವು ಮಾನವನಿಗಿಂತ ಎಷ್ಟೋ ಪಟ್ಟು ಅದ್ಭುತ ಶಕ್ತಿ, ಆಕಾರಗಳುಳ್ಳದು! ಹಿಂದಿನ ಮಾತು ಏಕೆ ? ಗೇಂಡಾ, ಸಿಂಹ, ಹುಲಿ—ಮೊದಲಾದ ಪ್ರಾಣಿಗಳ ಪೀಳಿಗೆಯು ಇನ್ನು ಬೇಗನೆ ನಷ್ಟವಾಗುವಂತೆ ತೋರುತ್ತಿಲ್ಲವೆ? ಯುರೋಪಿನಲ್ಲಿದ್ದ ಆನೆಗಳು ಎಂದೊ ಕಾಣೆಯಾದುವು; ಮಾನವನು ಉಳಿದುಕೊಂಡುದು ಹೇಗೆ? ಸುತ್ತಲಿನ ಹವಾಮಾನ ಮತ್ತು ಪರಿಸ್ಥಿತಿಯಲ್ಲಿ ಆದ ಬದಲಾವಣೆಗಳನ್ನು ಮುಂಗಂಡು ಅವುಗಳಿಂದ ಆಗಬಹುದಾದ ವಿನಾಶಕ ಪರಿಣಾಮಗಳನ್ನು ತಪ್ಪಿಸಿಕೊಳ್ಳುವ ಹಂಚಿಕೆಗಳನ್ನು ಕಂಡುಹಿಡಿದು ಅವನ್ನು ಆಚರಣೆಗೆ ತರುವ ಬುದ್ಧಿವಂತಿಕೆಯುಳ್ಳ ಮಾನವ ಸಂತತಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ತನ್ನ ಪ್ರಭಾವವನ್ನೇ ಮರಳಿ ಸುತ್ತಲಿನ ಪರಿಸ್ಥಿತಿಯ ಮೇಲೆ ಬೀರಲಿಕ್ಕೆ ಸಮರ್ಥವಾಗಿದೆ. ಇದನ್ನರಿಯದ ಜನಾಂಗಗಳು ಎಲ್ಲಿಯೋ ಕಾಡಿನಲ್ಲಿ ಎಂತೋ ಉಳಿದಿದ್ದುದು ಕಂಡುಬರುತ್ತಿದೆ. ಹಿಂದೂ ಸಮಾಜವು ಎಲ್ಲಿಯವರೆಗೆ ಕಾಲಕ್ಕೆ ತಕ್ಕಂತೆ ಮಾರ್ಪಡುವ ಸಿದ್ಧತೆಯನ್ನು ತೋರಿಸಿತೊ ಅಲ್ಲಿಯವರೆಗೆ ಅದು ಅನೇಕಾನೇಕ ಸಂಕಟಗಳನ್ನು ಎದುರಿಸಿ ಅವುಗಳೊಳಗಿಂದ ಪಾರಾಗಿದೆ; ಗೆದ್ದು ಲೋಕದಲ್ಲಿ ತನ್ನ ಮೇಲ್ಮೆಯನ್ನು ಸ್ಥಾಪಿಸಿದೆ.

ಇದೇ ಹಿಂದೂ ಸಮಾಜದಲ್ಲಿ (ಅತ್ಯಂತ ಸಂಪ್ರದಾಯವಾದಿಗಳು ಎಂದು ಹೆಮ್ಮೆ ಪಡುವ) ಕೆಲವೊಂದು ಘಟಕಗಳೂ-ಪ್ರಾಂತಗಳೂ ಇನ್ನುಳಿದ ತಮ್ಮ ಸರಿಕ ಸಂಗಡಿಗರಿಂದ ಹಿಂದೆ ಬಿದ್ದಿರುವುದೂ-ಬೀಳುತ್ತಿರುವುದೂ ಏಕೆ ? ಇದರ ಮರ್ಮವೇನು ಮತ್ತೆ ? ತಮ್ಮ ತಮ್ಮ ಮತ-ಪ್ರವರ್ತಕರು ಅವತರಿಸಿದ ಯಾವುದೊ ಒಂದು ಶತಮಾನದ ಆಚಾರ ವಿಚಾರಗಳ ಸಂಕೋಲೆಗಳನ್ನೇ ಇಂದೂ ಸಿಂಗಾರದ ಅಲಂಕಾರಗಳಂತೆ ಧರಿಸುವಲ್ಲಿ ಹಿಗ್ಗು-ಹೆಮ್ಮೆಗಳನ್ನು ತಾಳುತ್ತಿರುವುದನ್ನು ಕಂಡರೆ ಮನಸ್ಸು ಮಮ್ಮಲನೆ ಮರಗುತ್ತದೆ. ಈ ವರ್ಗಗಳ ಹಿರಿಯರು ತಮ್ಮ ತಳಿಯನ್ನೂ ಇದೇ ಹೆಮ್ಮೆಯ ಭಾವನೆಯಲ್ಲಿ ಬೆಳಸಿ ಅವರ ಏಳಿಗೆಯನ್ನೂ ಬೆಳವಣಿಗೆಯನ್ನೂ ಕುಗ್ಗಿಸುತ್ತಿರುವರು! ನಮ್ಮ ಸಮಾಜಕ್ಕೆ, ನಮ್ಮ ನಾಡಿಗೆ ಇಂದು ಒದಗಿರುವ ದೊಡ್ಡ ಕುತ್ತವಿದು!

*

'ಸ್ಥಿತಿ' ಎಂಬ ಮಾತು ಕೇವಲ ಕಾಲ್ಪನಿಕ. 'ಗತಿ'ಯ ಹಿನ್ನೆಲೆಯಲ್ಲಿ 'ಸ್ಥಿತಿ' ಎಂಬುದನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆಯೆ ಹೊರತು ಅದು ಸ್ವತಂತ್ರವಿಲ್ಲ; ಸಾಪೇಕ್ಷವಾಗಿದೆ. ಗತಿಯ ಅಪೇಕ್ಷೆಯಿಂದ ಸ್ಥಿತಿ ಎಂಬುದಕ್ಕೆ ಅರ್ಥವು ಉಂಟು. ಗತಿಯ ಅರ್ಥದ ಸ್ಪಷ್ಟೀಕರಣಕ್ಕೆ ಸ್ಥಿತಿಯೆಂಬ ಕಲ್ಪನೆಯು ಅವಶ್ಯಕವಿದೆ.

ಆಧುನಿಕ ಪದವೀಧರರೂ ಶಾಸ್ತ್ರ-ತತ್ವಜ್ಞಾನಗಳನ್ನು ಓದಿಕೊಂಡವರೂ ಆದ ಒಬ್ಬ ಗೃಹಸ್ಥರೊಡನೆ ಚರ್ಚೆ ನಡೆದಾಗ 'ಸಮಾಜವು ಎಂದೂ ಸ್ಥಿರವಿದ್ದಿಲ್ಲ; ಇಂದೂ ಇಲ್ಲ' ಎಂದೊಡನೆ ಅವರು ಗಾಬರಿಯಾಗಿ ಕಕ್ಕಾವಿಕ್ಕಿಯಾದರು. ಹಾಗಾದರೆ ಸಮಾಜವು 'ಯಾವಾಗಲೂ ಅಸ್ಥಿರ; ಚಂಚಲ, ಬುಡವಿಲ್ಲದ್ದು, ಎಂಬ ಅಭಿಪ್ರಾಯವೊ ನಿನ್ನದು?' ಎಂದು ಅವರು ಉದ್ಗರಿಸಿದರು. ಸ್ಥಿರ ಶಬ್ದಕ್ಕೆ ನಮ್ಮ ಜನ ಕಲ್ಪಿಸಿಕೊಂಡ, ಈ ಬಗೆಯ ಅರ್ಥವೇ ಮುಂದಿನ ಎಲ್ಲ ತಪ್ಪುಗ್ರಹಿಕೆಗಳ ಮೂಲವಾಗಿದೆ. 'ಸಮಾಜವು ಸ್ಥಿರವಲ್ಲ' ಎಂದರೆ ಅಸ್ಥಿರವಾದುದು ಎಂದು ಅರ್ಥವಲ್ಲ. ಗತಿಯುಕ್ತವಾದದ್ದು; ಸಂಚಲಿಸುತ್ತಿರುವುದು ಎಂದು ಮಾತ್ರ ಅದರ ಅರ್ಥವಾಗಿದೆ.

ಕುಂಬಾರನ ತಿಗುರಿಯ ಮೇಲಿನ ಮಡಿಕೆಯಂತೆ ಸಮಾಜವು ಅವ್ಯಾಹತವಾಗಿ ಏನೊಂದು ರೂಪ-ಆಕಾರಗೊಳ್ಳುತ್ತಿರುವುದನ್ನು ಇತಿಹಾಸದಿಂದ ಕಂಡುಕೊಳ್ಳಬಹುದು. ಸಮಾಜವೆಂಬುದು ಎಂದೂ ಯಾವ ಕಾಲದಲ್ಲೂ ಒಂದು (ಪರಿಪೂರ್ಣವಾಗಿ ನಿಂತ) ಸಿದ್ಧವಸ್ತುವಲ್ಲ; ಸಾಧನೆಯಲ್ಲಿರುವ 'ಸಂ-ಗತಿ', (It is not a fact, but a process), ಎಂಬೀ ಮಾತು ಇಂದು ಸಮಾಜಶಾಸ್ತ್ರಜ್ಞರೆಲ್ಲರ ಒಪ್ಪಿಗೆಯನ್ನು ಪಡೆದ ನಿಶ್ಚಿತ ಸಿದ್ಧಾಂತವಾಗಿದೆ. ಈ ದೃಷ್ಟಿಕೋನವನ್ನು ದೃಢಪಡಿಸಿಕೊಂಡರೆ ನಮ್ಮ ನಾಡಿನಲ್ಲಿ ಒಂದು ಕಾಲಕ್ಕೆ ಇದ್ದ ಚಾತುರ್ವರ್ಣ್ಯವು ಹಾಳಾಯ್ತು, ಇಂದು ಸಮಾಜವು ವಿಕೃತವಾಗುತ್ತ ನಡೆದಿದೆ, ಎಂಬೀ ಬಗೆಯ ಮಿಡುಕಾಟ, ಅಳಲು ನಮ್ಮನ್ನು ಸೋಂಕಲಾರದು.

'ಯತ್ಕಿಂ ಚ ಜಗತ್ಯಾಂ ಜಗತ್' ಪ್ರತಿಯೊಂದೂ ಗತಿಗೆ ಒಳಗಾಗಿದೆ. 'ಗತಿ' ಎಂದೊಡನೆ ಗಾಬರಿಗೊಳ್ಳುವುದು ಪುಕ್ಕ ಜೀವ. 'ಗತಿ' ಎಂಬ ಪದಕ್ಕೆ ಅಂಟಿಕೊಂಡಿರುವ ಈ ಮಲಿನ ಛಾಯೆಯು ನಮ್ಮೊಳಗಿನ 'ಗತಿ'ಯ ವಿಷಯಕ್ಕಿರುವ ಗಾಬರಿಯ ಮನೋಭಾವವನ್ನೇ ನಿದರ್ಶನಕ್ಕೆ ತಂದು ಕೊಡುತ್ತಲಿದೆ. 'ಸ್ಥಿತಿವಂತಿಕೆ'ಯೆಂದರೆ ನಮ್ಮ ಜನಕ್ಕೆ ಹಿಗ್ಗು! 'ಸ್ಥಿತಿವಂತಿಕೆ' ಎಂಬುದು ಕೇವಲ ಭ್ರಾಂತಿ ಎಂಬುದನ್ನು ಮರೆತು ಕುಳಿತವರ ಹಾಳಾದ ಮನೆತನಗಳು ಸಿದ್ಧಪಡಿಸುವ ಸಂಗತಿ ಯಾವದು? ಈ ಲೋಕದಲ್ಲಿ ಇರುವುದೆಲ್ಲವೂ ಗತಿ; ಗತಿ; ಗತಿ. ಗತಿಯಲ್ಲಿದ್ದೇವೆಂಬುದನ್ನು ಮರೆತವರಿಗೆಲ್ಲ ದುರ್ಗತಿ. ಇದುವೆ ಸನಾತನ ನಿಯಮ.

*

ಗತಿಯೆಂದರೆ ಸಂಚಲನ; ಸಮಾಜದ ನಡೆತದ ಈ ಗತಿಯು ಕೂಡ ನಿಯಮಕ್ಕೆ ಒಳಪಟ್ಟದೆ. ಸಮಾಜೇತಿಹಾಸ ಶಾಸ್ತ್ರವು ಮಾನವಶಾಸ್ತ್ರ (Anthropology), ಮಾನಸಶಾಸ್ತ್ರಾದಿ ಇನ್ನೂ ಹಲವು ಶಾಸ್ತ್ರಗಳ ನೆರವನ್ನು ಪಡೆದು ಈ ಗತಿಯ ರೀತಿಯನ್ನು ಬಹುಮಟ್ಟಿಗೆ ಕಂಡುಹಿಡಿಯಲು ಸಮರ್ಥವಾಗಿದೆ. ಆದುದರಿಂದ ಸಮಾಜವು ಸ್ಥಿರವಾಗಿಲ್ಲ ಎಂಬುದರ ಅರ್ಥವು ಅದಕ್ಕೆ ಸ್ಥೈರ್ಯವೇ ಇಲ್ಲವೆಂದು ಬಗೆಯುವುದು ಅಸಮಂಜಸವಾಗಿದೆ. ಗತಿಯ 'ಸ್ಥಿತಿ' ಎಂದರೆ ಸ್ವರೂಪವನ್ನು ಅರಿತುಕೊಂಡು ನಡೆದಲ್ಲಿ ಮಾತ್ರ ಮಾನವನು ತನ್ನ ವಿಕಾಸವನ್ನು ಮಾಡಿಕೊಳ್ಳಬಹುದೆ ಹೊರತು ಬೇರೊಂದು 'ಸ್ಥಿತಿ'ಯ ಬಯಲು ಭ್ರಾಂತಿಗೆ ಒಳಗಾದಲ್ಲಿ ಅವನ ಸರ್ವನಾಶವು ತಪ್ಪಿದ್ದಲ್ಲ. ನಿಜವಾದ ಸನಾತನ ನಿಯಮವು ಯಾವುದು ಎಂಬುದನ್ನು ಸರಿಯಾಗಿ ಅರಿತುಕೊಂಡು ಇಂದಿನ ಜಾತಿ ಮತ ಪಂಥದ ಸನಾತನತ್ವದ ಮೋಹವನ್ನು ಬೇಗನೆ ತೊರೆದಷ್ಟು ನಮ್ಮ ಸಮಾಜದ ಕಲ್ಯಾಣವಿದೆ. ಭಾರತದ ಭವ್ಯ ಭವಿಷ್ಯತ್ತಿನ ಆಸೆಯಿದೆ. ಭೂತದೊಡನೆ ಬಿಗಿದುಕೊಂಡು ಭವಿಷ್ಯದತ್ತ ಪಯಣ ಬೆಳೆಸುತ್ತಿರುವವರ ಬೆಂಬತ್ತಿ ಬರಬಹುದಾದುದು ಭೂತವೇ ಹೊರತು ಭಾಗ್ಯದ ಭವಿಷ್ಯತ್ತಲ್ಲ.

ಎರಡು ಭಿನ್ನ ಶಕ್ತಿಗಳ ಸಾನ್ನಿಧ್ಯದಿಂದ ಸಂಚಲನಕ್ಕೆ ಪ್ರಾರಂಭವಾಗುತ್ತದೆ. ಜೀವನಪ್ರವಾಹಕ್ಕಾಗಲಿ, ಸಮಾಜಕ್ಕಾಗಲಿ ಅವ್ಯಾಹತವಾಗಿ ಗತಿ ದೊರೆಯಲು ಅದರಲ್ಲಿ ಅಡಕವಾದ ಎರಡು ಭಿನ್ನ ಶಕ್ತಿಗಳ ಅಸ್ತಿತ್ವವೇ ಮೂಲ ಕಾರಣವಾಗಿದೆ. ಇರವು ಅಂದರೆ ಬಾಳುವೆ. (ಇರ್-) ಎರಡರ ಈ ರಹಸ್ಯವನ್ನು ಅರಿಯದೆ ಲೋಕ ಹಾನಿಗೆ ಒಳಗಾಗಿದ್ದುಂಟು. ಈ 'ದ್ವಂದ್ವ'ವೇ ಕಲಹಕ್ಕೆ ಕಾರಣವೆಂದು ಬಗೆದು ಇವುಗಳಲ್ಲಿ ಒಂದನ್ನು ನಾಶ ಮಾಡಿಬಿಡುವ ಎತ್ತುಗಡೆ ಹಲವರದು! ಆದರೆ ಮೂಲಭೂತವಾದ ಈ ಸಂಗತಿಯನ್ನು ನಷ್ಟಪಡಿಸುವುದು ಶಕ್ಯವಿಲ್ಲ. ನಷ್ಟಪಡಿಸಹೋದ ಶಕ್ತಿ ನಪುಂಸಕವಾಗಿ ಒಂದು ವಿಕೃತ ತೃತೀಯ ರೂಪವು ನಿರ್ಮಾಣವಾಗುತ್ತದೆ.

ಸಮಾಜದೊಳಗಿನ ಈ ದ್ವಂದ್ವವನ್ನೆ ಪೂರ್ವಪಕ್ಷ (Thesis) ವಿರುದ್ಧ ಪಕ್ಷ (Antithesis) ಎಂಬುದಾಗಿ ವಿಂಗಡಿಸಿ ಹೇಳುವುದುಂಟು. ಇವೆರಡರ ಸಂಘರ್ಷಣೆಯಲ್ಲಿ ಸಮನ್ವಯದ (ಅವಶ್ಯಕತೆಯು ಮನವರಿಕೆಯಾಗಿ) ಒಂದು ಹೊಸ ಪಕ್ಷವು ತಲೆಯೆತ್ತುವುದು. ಸಮಾಜವನ್ನು ಎಡೆಬಿಡದೆ ಸಂಚಲನದಲ್ಲಿ ಇರಿಸುವ ಮೂಲಭೂತ ಅಂತಃಶಕ್ತಿಯ ಸ್ವರೂಪವು ಇಂತಿದೆ. ಸಮಾಜಕ್ಕೆ ಗತಿಯನ್ನು ಕೊಡುವ ಈ ಶಕ್ತಿಗೆ ವಿರೋಧಿ ವಿಕಾಸ ತತ್ತ್ವವೆಂದೂ ಕರೆಯಬಹುದು.

ಹೊರಗೆ ಸಮಾಜದಲ್ಲಿರುವ ಈ ರಚನಾಕ್ರಮವೇ ಮಾನವನ ಅಂತರ್ಯದಲ್ಲೂ ಉಂಟು. 'ದ್ವಾ ಸುಪರ್ಣಾ ಸಯುಜಾ ಸಖಾಯಾ ಪರಿಷಸ್ವಜಾತೇ' ಗಿಡದ ಮೇಲೆ ಕುಳಿತ ಎರಡು ಹಕ್ಕಿಗಳ ರೂಪಕದಲ್ಲಿ ಉಪನಿಷತ್ಕಾರನು ತನಗೆ ಹೊಳೆದ ಈ ಸಂಗತಿಯನ್ನು ಸ್ಥೂಲವಾಗಿ ನಿರ್ದೇಶಿಸಿದ್ದಾನೆ. ಶ್ರದ್ಧೆಯನ್ನು ಬೆಳೆಸಿಕೊಂಬ ಆವೇಶದಲ್ಲಿ ನಮ್ಮ ಜನ ಇವೆರಡರೊಳಗಿನ ಒಂದು ಹಕ್ಕಿಯನ್ನು ಕೊಂದುಬಿಡುವರು—ಅಲ್ಲ ನಿರ್ಜೀವ ಮಾಡುವರು. ವಿರೋಧಕ್ಕೆ ಹೆದರುವವರು ವಿಕಾಸ ಮಾರ್ಗದಲ್ಲಿ ಹಿಂದುಳಿದವರಾಗುವರು. ಸಮಾಜ ವಿಕಾಸ ಕ್ರಮವೇ ಹೀಗಿದೆ.

ವಿರೋಧ: ಸಂ-ಕ್ರಮಣ ಅಥವಾ ಸಂಕ್ರಾಂತಿ, ಆಗಲೇ 'ಪ್ರ-ಗತಿ'. ಈ ಪ್ರಗತಿಯು 'ಸ್ಥಿತಿಗೆ' ವಿಕಾಸವೆಂಬ ಹೆಸರು. ಪ್ರಗತಿ ಸಾಗಿರುವವರೆಗೆ ಮಾತ್ರ ಈ ಸ್ಥಿತಿ; ಈ ಸ್ಥಿತಿಗೂ ಗತಿಯಿದೆ; ಗತಿಯೊಳಗಿನ ಸ್ಥಿತಿ ಎಂಬುದನ್ನು ಮರೆಯಲಿಕ್ಕಾಗದು. ಆದುದರಿಂದ ಗತಿ—ಪ್ರ-ಗತಿಯನ್ನು ಹಾರಯಿಸುವವರು ವಿರೋಧಕ ಶಕ್ತಿಯನ್ನು ನಮ್ಮ ಏಳ್ಗೆ-ವಿಕಾಸಕ್ಕಾಗಿ ಬಳಸಿಕೊಳ್ಳುವ ಹದವನ್ನು ಅರಿತುಕೊಳ್ಳುವುದು ಆದ್ಯ ಕರ್ತವ್ಯವಾಗಿದೆ. ಅತ್ತಿತ್ತ ನೋಡುವ ಮನಸ್ಸನ್ನು ಅಂಕೆಯಲ್ಲಿ ತರಲು ಆಗದ್ದಕ್ಕಾಗಿ ಅಂಧಕನಾಗಬೇಕೆಂದು ಹಾರಯಿಸುವುದು ಪೌರುಷದ ಲಕ್ಷಣವಲ್ಲ. ಪಾರ್ಲಿಮೆಂಟಿನಲ್ಲಿ ವಿರುದ್ಧ ಪಕ್ಷದ ಅಸ್ತಿತ್ವವನ್ನು ಕಾಯ್ದುಕೊಳ್ಳುವದಕ್ಕಾಗಿ ಎದುರಾಳಿ-ಮುಂದಾಳಿಗೆ ಮಹಾಪ್ರಧಾನನಂತೆ ಪ್ರತಿ ತಿಂಗಳಿಗೂ ಸಂಬಳವನ್ನು ಕೊಡುವ ಸಂಪ್ರದಾಯ

ವನ್ನು ನಿರ್ಮಿಸಿಕೊಂಡ ಬ್ರಿಟಿಷರ ನಡೆವಳಿ ಅಭ್ಯಸನೀಯವಾಗಿದೆ. ಇನ್ನೊಂದು ಶಕ್ತಿ—ಪಕ್ಷದ—ಅಸ್ತಿತ್ವವನ್ನು ಮಾನ್ಯಮಾಡಿ ಆ ಸಂಘರ್ಷಣವನ್ನು ಎಣಿಕೆಗೆ ಹಿಡಿಯದೆ ಅವರು ಯಾವ ಯೋಚನೆ ಅಥವಾ ಯೋಜನೆಗಳನ್ನೂ ಮಾಡುವುದಿಲ್ಲ. ನಮ್ಮ ದೇಶದಲ್ಲೂ ಯಾವ ಪ್ರಾಂತದಲ್ಲಿ ಭಿನ್ನ ಭಿನ್ನ ವಿಚಾರ ತತ್ತ್ವಗಳ ಪಕ್ಷಗಳಲ್ಲಿ ಬಹಿರಂಗವಾಗಿ ವಿಚಾರ ಸಂಘರ್ಷಣವು ನಡೆದೇ ಇಲ್ಲವೊ ಆ ಪ್ರಾಂತವು ಹಿಂದುಳಿದುದನ್ನು ಕಾಣಬಹುದು. ಬಂಗಾಳದಲ್ಲಿ ಸನಾತನಿಗಳ ಪಕ್ಷ, ಬ್ರಹ್ಮೋ ಸಮಾಜ, ಥಿಯಾಸಫಿ, ಆಂಗ್ಲಭಾಷೆಯಿಂದಲೇ ಉದ್ಧಾರವೆಂಬ ಪಕ್ಷ, ಬಂಗಾಲಿಯೆ ಬಂಗಾಲಿಗಳಿಗೆ ಗತಿ (ಏನು ಬರೆದರೂ ಮೊದಲು ಬಂಗಾಳಿಯಲ್ಲಿ ಬರೆದು ಬಳಿಕ ಬೇರೆ ಭಾಷೆ, ಎಂಬ ರವೀಂದ್ರರ ಅನುಯಾಯಿವರ್ಗ), ಇಂತಿವೇ ಮೊದಲಾದ ವಿಚಾರಗಳ ಸಂಘರ್ಷಣವು ಬಂಗಾಲದ ಪ್ರಗತಿಗೆ ಕಾರಣವಾಯಿತು. ನಮ್ಮ ಪ್ರಾಂತದಲ್ಲಿಯೂ ಸಾಮಾಜಿಕ, ರಾಜಕೀಯ ರಂಗದಲ್ಲಿ ಜಾತಿ-ಮತ-ಪಂಥ ಭೇದಗಳು ಅವಶ್ಯಕತೆಗಿಂತ ಹೆಚ್ಚೇ ಇವೆ! ಆದರೂ ಇವುಗಳಲ್ಲಿ ಯಾವುವೂ ಬಾಯ್ಬಿಟ್ಟು ತಾತ್ತ್ವಿಕ ಭೂಮಿಕೆಯ ಮೇಲಿನ ಚರ್ಚೆಗೆ ಅಣಿಯಾಗಿಲ್ಲ. ಕಾಂಗ್ರೆಸ ಪಕ್ಷದ ವಿಚಾರಗಳು ಪ್ರಚಾರದಲ್ಲಿವೆ. ಆದರೆ ಅದೂ ಸಾಬರಮತಿ, ವರ್ಧಾ ಅಥವಾ ದಿಲ್ಲಿಯಿಂದ ಬೀಸುವ ಗಾಳಿ; ಇಲ್ಲಿಯ ಕಾವಿನಿಂದಲೇ ತಲೆ ಎತ್ತಿದ ಝುಂಝಾವಾತವಲ್ಲ. ಒಳಗೊಳಗೆ ಒದ್ದಾಟ ನಡೆದಿದ್ದರೂ ಬಹಿರಂಗದಲ್ಲಿ ಸಮನ್ವಯದ ಮಾತು! ಜೀವಂತ ಶ್ರದ್ಧೆಯ ತಾತ್ತ್ವಿಕ ಚರ್ಚೆ-ಸಂಘರ್ಷಣವು ಮೊದಲು ನಡೆಯದೆ ನಿಜವಾದ ಸಮನ್ವಯವು ಎಂದೂ ಸಾಧ್ಯವಿಲ್ಲ.

ಪ್ರಗತಿಯಲ್ಲಿ ಸಮನ್ವಯದ ಘಟ್ಟವನ್ನು ಏರುವುದಕ್ಕೆ ಎದೆಗಾರಿಕೆಯು ಬೇಕಾಗುತ್ತದೆ. 'ನ ಋತೇ ಶ್ರಾಂತಸ್ಯ ಸಖ್ಯಾಯ ದೇವಾಃ' ಹೋರಾಟವಾದಿ ಯೋಗ್ಯತೆಯನ್ನು ಸಿದ್ಧಪಡಿಸುವವರೇ ಪ್ರಗತಿಯಲ್ಲಿ ಇರಬಲ್ಲರು. Line of least resistance (ಮೈಯುಳಿಸಿಕೊಂಡು ಕೆಲಸ ಸಾಧಿಸಬೇಕು) ಎಂಬುದೇ ನಿತ್ಯ ಧೋರಣವಾಗಿರುವ ಜನರಲ್ಲಿ ಪೌರುಷಕ್ಕೆ ಆಹ್ವಾನವೆಲ್ಲಿ? ಪೌರುಷಕ್ಕೆ ಸ್ಫುರಣ ದೊರೆಯದ ವಾತಾವರಣದಲ್ಲಿ ಪ್ರಗತಿಯೆಂಬುದೆ ಇಲ್ಲ. ಎಲ್ಲ ಗತ್ತುಗಾರಿಕೆ.

ವಿರೋಧದಲ್ಲಿ ದೊರೆವ ಗತಿಯನ್ನು—ಕಾವನ್ನು ಪ್ರಗತಿಗಾಗಿ ಬಳಸಿಕೊಂಬ ಸಮಾಜವೇ ಜೀವನ ಕಲಹದಲ್ಲಿ ಮೇಲ್ಮೆಯನ್ನು ಪಡೆಯಬಲ್ಲದು.

ಭಾವದಂತೆ ಬಾಳು

ಪ್ರಸಿದ್ಧ ಸರ್ಜನ್ನನೊಬ್ಬನು ತನ್ನ ಆಸ್ಪತ್ರೆಯಲ್ಲಿ ಮೃತ್ಯುಮುಖಳಾಗಿ ಮಲಗಿದ್ದ ಒಬ್ಬ ತರುಣಿ ಪತ್ರಿಕೆಯಲ್ಲಿ ಬರುತ್ತಿದ್ದ ಧಾರಾವಾಹಿ ಕಾದಂಬರಿಯನ್ನು ಬಿಡದೆ ಓದುತ್ತಿದ್ದದ್ದನ್ನು ಕಂಡನು. ಕಥೆಯ ಹುಡುಗಿಗೂ ಅದೇ ರೋಗವಾಗಿತ್ತು. ಸರ್ಜನ್ನನು ಕಥೆಗಾರನಲ್ಲಿಗೆ ಹೋಗಿ ಕಥೆ ಹೇಗೆ ಮುಕ್ತಾಯವಾಗುವದೆಂದು ವಿಚಾರಿಸಿದಾಗ ಹುಡುಗಿ ಕೊನೆಯ ಸಂಚಿಕೆಯಲ್ಲಿ ಸಾಯುತ್ತಾಳೆಂದು ತಿಳಿಯಿತು. ಸರ್ಜನ್ನನು ಲೇಖಕನಿಗೆ ನಾನಾವಿಧವಾಗಿ ಹೇಳಿಕೊಂಡು ಕಥೆಯನ್ನು ಸುಖಾಂತವಾಗಿ ಮಾಡಲು ಮನವೊಲಿಸಿದನು. ಕಾದಂಬರಿಯ ನಾಯಿಕೆ ಬದುಕಿದಳು. ಆಸ್ಪತ್ರೆಯ ರೋಗಿಯೂ ಉಳಿದುಕೊಂಡಳು.

ಗಣಿತಶಾಸ್ತ್ರ ಮತ್ತು ತತ್ತ್ವಜ್ಞಾನ

ಗಣಿತ ಮತ್ತು ತತ್ತ್ವಜ್ಞಾನ ಇವೆರಡೂ ತರ್ಕಶಾಸ್ತ್ರದ ಆಧಾರದ ಮೇಲೆ ನಿಂತಿವೆ. ಆದ್ದರಿಂದ ಅವೆರಡರ ವಿಚಾರಪ್ರಣಾಲಿಗಳಲ್ಲಿ ಸಾಮ್ಯ ಕಂಡುಬರುತ್ತದೆ. ನಾವು ೦, ೧, ೨....೯ ಇತ್ಯಾದಿ ಅಂಕಿಗಳನ್ನು ಬಹಳ ಸುಲಭವೆಂದು ಬಗೆಯುತ್ತೇವೆ. ಆದರೆ ಅವುಗಳ ಹಿಂದಿರುವ ಶಾಸ್ತ್ರೀಯ ಕಲ್ಪನೆಗಳು ಅಷ್ಟು ಸರಳವಿಲ್ಲ. ಹಾಗೆಯೇ ಪ್ರಪಂಚ, ಸೃಷ್ಟಿ, ಪರಮಾತ್ಮ, ಲೋಕ-ಲೋಕಾಂತರ ಮೊದಲಾದ ತಾತ್ವಿಕ ವಿಚಾರಗಳೂ ಹೊರನೋಟಕ್ಕೆ ಸುಲಭವೆನಿಸಿದರೂ ನಿಜವಾಗಿ ಜಟಿಲವಾಗಿವೆ. ಈ ಕಲ್ಪನೆಗಳನ್ನು ಲೇಖಕರು ವಿವರಿಸಿದ್ದಾರೆ

ಲೇಖಕರು : ಶ್ರೀ ಬಿ. ರಾಮದಾಸ ಭಟ್ಟ, ಎಂ. ಎ.

ಗಣಿತಶಾಸ್ತ್ರವು ವಿಜ್ಞಾನದ ಮೂಲವಾದರೆ, ತತ್ತ್ವಶಾಸ್ತ್ರವು ಜೀವನದ ಜೀವಾಳ. ಬಹಳ ಹಿಂದಿನ ಕಾಲದಿಂದಲೂ ಇವೆರಡು ಶಾಸ್ತ್ರಗಳೂ ಒಂದನ್ನೊಂದು ಬಳಸಿಕೊಂಡು ಪ್ರಗತಿಹೊಂದಿವೆ. ಗ್ರೀಕರಲ್ಲಿಯೂ ರೋಮನರಲ್ಲಿಯೂ ಹಿಂದೂ ದೇಶದವರಲ್ಲಿಯೂ ಪೂರ್ವಕಾಲದಲ್ಲಿ ಅನೇಕ ಮಂದಿ ತತ್ವಶಾಸ್ತ್ರಜ್ಞರಿದ್ದರೆ, ಅವರೆಲ್ಲರೂ ತರ್ಕಶಾಸ್ತ್ರಜ್ಞರೂ, ಗಣಿತಶಾಸ್ತ್ರಜ್ಞರೂ ಆಗಿದ್ದರು. ಇದಕ್ಕೆ ಪೈಥೋಗೊರಸ್, ಪ್ಲೇಟೋ ಮೊದಲಾದವರೇ ಉದಾಹರಣೆಗಳು. ಆಧುನಿಕ ಕಾಲದಲ್ಲಿಯೂ ಬರ್ಟ್ರಾಂಡ್ ರಸ್ಸೆಲ್ ಇವರು ಗಣಿತಶಾಸ್ತ್ರಜ್ಞರೂ ಅಹುದು, ತತ್ತ್ವಶಾಸ್ತ್ರಜ್ಞರೂ ಅಹುದು. ಹೀಗಾಗಿ ಈ ಎರಡು ವಿಷಯಗಳಿಗೆ ಏನಾದರೂ ಸಾಮ್ಯವಿದೆಯೇ ಎಂದು ವಿಚಾರಿಸಬೇಕಾಗಿದೆ.

ಈಗಿನ ಕಾಲದಲ್ಲಿಯೂ ಯಾವನಾದರೊಬ್ಬ ಮನುಷ್ಯನು ಒಂದು ವಿಷಯವನ್ನು ಚೆನ್ನಾಗಿ ಅಭ್ಯಾಸಮಾಡಿ, ಹೊಸ ಸಂಶೋಧನೆಗಳನ್ನು ಮಾಡಿದರೆ, ಅವನಿಗೆ ತತ್ತ್ವಶಾಸ್ತ್ರಜ್ಞ (Doctor of Philosophy, Ph. D.) ನೆಂಬ ಪದವಿಯನ್ನು ಕೊಡುವರು. ಇದಕ್ಕೆ ಮತ್ತೊಂದು ಕಾರಣವೂ ಇದ್ದಂತೆ ಕಾಣುತ್ತದೆ. ತತ್ತ್ವಶಾಸ್ತ್ರಜ್ಞನು ದೇವರೆಂಬ ಪರೋಕ್ಷ (ಸಾಮಾನ್ಯರಿಗೆ) ವ್ಯಕ್ತಿಯನ್ನು ಮನಸ್ಸಿನಲ್ಲಿ ನಿರ್ಮಿಸಿ, ಆದರ ಆಧಾರದ ಮೇಲಿಂದ ಅನುದಿನದ ಆಗುಹೋಗುಗಳ ಕಾರಣಗಳನ್ನೋ ಅಥವಾ ಇನ್ನು ಮುಂದೆ ಆಗಬಹುದಾದ ವಿಷಯಗಳನ್ನೋ ವಿವೇಚಿಸುವನು. ಇದಕ್ಕೆ ಅವನ ಮನಸ್ಸು ಸ್ಥಿರವಾಗಿದ್ದು, ಬಹಳ ಆಳವಾಗಿ ಆಲೋಚಿಸಲು ಶಕ್ತವಾಗಿರಬೇಕು. ಈ ಶಕ್ತಿಯಿದ್ದರೆ, ಆ ಮನುಷ್ಯನು ಹೊಸ ಸಂಶೋಧನೆಗಳನ್ನು ತತ್ತ್ವಶಾಸ್ತ್ರದಲ್ಲಿಮಾತ್ರವಲ್ಲ, ಬೇರೆ ಯಾವ ವಿಷಯದಲ್ಲಿಯೇ ಆದರೂ ಮಾಡಬಲ್ಲನು. ಆ ಕಾರಣದಿಂದ ಹೊಸ ಸಂಶೋಧನೆ ಮಾಡಿದವರಿಗೆ ಆ ಪದವಿಯನ್ನು ಕೊಡುವುದು ವಿಚಾರಪೂರಿತವಾಗಿದೆ. ಕೆಲವೊಂದು ಗಣಿತಶಾಸ್ತ್ರಜ್ಞರಂತೂ ತಮ್ಮ ವಿಚಾರವಾಹಿನಿಯಲ್ಲಿ ತೇಲುತ್ತಾ ಹುಚ್ಚರಂತೆ ವಿವಸ್ತ್ರರಾಗಿ ಅಲೆದಾಡಿದ್ದನ್ನು ನಾವು ಕೇಳಿದ್ದೇವೆ. ಇಂತಹ ಭಾವುಕರನ್ನು ತಪಸ್ವಿಗಳೆಂದು ಕರೆದರೆ ಅದು ಎಳ್ಳಷ್ಟೂ ತಪ್ಪೆನಿಸಲಾರದು.

ಇದು ತತ್ತ್ವಶಾಸ್ತ್ರಕ್ಕೂ ಉಳಿದ ಶಾಸ್ತ್ರಗಳಿಗೂ ಇರುವ ಸಾಮ್ಯವಾಯಿತು. ಇನ್ನು ತತ್ತ್ವಶಾಸ್ತ್ರಕ್ಕೂ ಗಣಿತಶಾಸ್ತ್ರಕ್ಕೂ ಇರುವ ಸಾಮ್ಯವನ್ನು ವಿವೇಚಿಸಬೇಕಾದರೆ, ಅವುಗಳ ಮೂಲವನ್ನೂ ಅಭಿವೃದ್ಧಿಯನ್ನೂ ನಾವು ತಿಳಿಯಬೇಕಾಗುವುದು.

ಸರ್ವಸಾಮಾನ್ಯ ಪ್ರತಿಯೊಬ್ಬ ಮನುಷ್ಯನಿಗೂ ೧, ೨, . .ಮೊದಲಾದ ಅಂಕಿಗಳ ಪರಿಜ್ಞಾನವಿದೆ. '೧' ಎಂದರೇನು? '೨' ಎಂದರೇನು? ಎಂಬಿತ್ಯಾದಿಗಳನ್ನು ಈಗ ವಿವೇಚಿಸುವ. '೧' ಅಂದರೆ ಒಂದು ಕಾಗೆಯೂ ಅಲ್ಲ, ಒಂದು ಕುರಿಯೂ ಅಲ್ಲ, ಒಂದು ಹಣ್ಣೂ ಅಲ್ಲ. ಅದು ಒಂದಾಗಿರುವ ಎಲ್ಲಾ ವಸ್ತುಗಳಲ್ಲಿಯೂ ಪ್ರಾಣಿಗಳಲ್ಲಿಯೂ ಇರುವ, ಒಂದು ಸ್ಥಿತಿ. ಇದನ್ನು ನಾವು ಮನಸ್ಸಿನಲ್ಲಿ ತಿಳಿಯಬೇಕೇ ವಿನಾ, ಇದಕ್ಕೆ ನಿಜವಾದ ಅಸ್ತಿತ್ವವಿರುವುದಿಲ್ಲ. ಹಾಲಿನಲ್ಲಿನ ಮಾಧುರ್ಯದಂತೆ, ಅಥವಾ ಹೂವಿನಲ್ಲಿನ ಪರಿಮಳದಂತೆ, ಈ ಸ್ಥಿತಿಯು ಒಂದಾಗಿರುವ ಎಲ್ಲ ವಸ್ತುಗಳಲ್ಲಿಯೂ ಸೇರಿಕೊಂಡಿದೆ. ಹಾಗೆಯೇ '೨' ಕೂಡ, ಎರಡಾಗಿರುವ ಸ್ಥಿತಿಯನ್ನು ತಿಳಿಸುವುದೇ ವಿನಾ ಯಾವುದೇ ಆದ ಎರಡು ವಸ್ತುಗಳನ್ನಲ್ಲ. ಹೀಗೆ ಅಂಕೆಗಳನ್ನೆಲ್ಲ ಸ್ಥಿತಿಸೂಚಕಗಳೆಂದು ತಿಳಿಯಬಹುದು.

*

ಹಿಮವು ನೀರಿನ ಒಂದು ಸ್ಥಿತಿ, ಆವಿ (ಹಬೆ) ಯೂ ಒಂದು ಸ್ಥಿತಿ. ಆದರೆ ಹಿಮವೂ ಆವಿಯೂ ನೀರೇ ಎಂದು ಅನ್ನಲು ನಮಗೆ ಸಾಧ್ಯವಿಲ್ಲ; ಅವು ನೀರಿನ ಪರಿಸ್ಥಿತಿಗಳು. ನಮಗೆ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ನೀರನ್ನು ಮಾರ್ಪಡಿಸಲು ಸಾಧ್ಯವಿದೆ. ಹಾಗೆಯೇ '೧', '೨'. . . ಮೊದಲಾದ ಅಂಕೆಗಳು ಸ್ಥಿತಿಯನ್ನು ಸೂಚಿಸುವುವೆಂದ ಮೇಲೆ ನಮಗೆ ಒಂದು ಸ್ಥಿತಿಯಿಂದ ಇನ್ನೊಂದಕ್ಕೆ ಹೋಗಲು ಸಾಧ್ಯವಿರಬೇಕು. ಇದಕ್ಕೆ ಒಂದು ಸ್ಥಿತಿಗೂ ಇನ್ನೊಂದು ಸ್ಥಿತಿಗೂ ಇರುವ ಸಂಬಂಧ ತಿಳಿದಿರಬೇಕು. ನೀರನ್ನು ಹೆಚ್ಚು ತಣಿಸಿದರೆ ಹಿಮವೂ, ಕುದಿಸಿದರೆ ಆವಿಯೂ ದೊರಕಲು ಸಾಧ್ಯವಿದೆ. ಹಾಗೆಯೇ ಯಾವುದೇ ಆದರೂ ಅಂಕಿಗಳ ಒಂದು ಸಂಬಂಧವನ್ನು ನಾವು ಕಲ್ಪಿಸುವುದರಿಂದ, ನಮಗೆ ಒಂದು ಸ್ಥಿತಿಯಿಂದ ಇನ್ನೊಂದಕ್ಕೆ ಹೋಗಲು ಅವಕಾಶವಿರಬೇಕು. ಇವುಗಳನ್ನು ಸಂಬಂಧವಾಚಿಗಳೆಂದು ಕರೆಯಬಹುದು. ಈ ಸಂಬಂಧವಾಡಿಗಳು 'ಕೂಡಿಸು' ಆಗಬಹುದು ಅಥವಾ 'ಗುಣಿಸು' ಆಗಬಹುದು, 'ಕಳೆ' ಆಗಬಹುದು, ಇತ್ಯಾದಿ. ಹೇಗೆ ಸಕ್ಕರೆಯ 'ಸಿಹಿ'ಯೂ ಹಾಲಿನ 'ಮಧುರತೆ'ಯೂ ಕಾಫಿ ಬೀಜದ 'ಒಗರೂ' ಸಮತೂಕದಲ್ಲಿ 'ಬೆರೆದು' ಕಾಫಿಯ 'ರುಚಿ'ಯು ಬರುವುದೋ, ಹಾಗೆಯೇ ಒಂದಾಗಿರುವ ವಸ್ತುಗಳಲ್ಲಿ ಅಡಕವಾದ 'ಒಂದೂ' ಎರಡಾಗಿರುವ ವಸ್ತುಗಳಲ್ಲಿರುವ 'ಎರಡೂ' 'ಕೂಡಿಸುವುದು' ಎಂಬ ಸಂಬಂಧದಿಂದ ಸೇರಿ 'ಮೂರು' ಎಂದು ಮೂರಾಗಿರುವ ಎಲ್ಲ ವಸ್ತುಗಳಲ್ಲಿಯೂ ಸೇರಿಕೊಂಡಿರುವ ಸ್ಥಿತಿಯಾದ ಸಂಖ್ಯೆಯು ಜನಿಸುವುದು. ಹೀಗೆಯೇ ಬೇರೆ ಎಲ್ಲ ಸಂಖ್ಯೆಗಳು ಕೂಡ. ೧, ೨, . . . ಮೊದಲಾದ ಅಂಕೆಗಳು ಸ್ಥಿತಿಯನ್ನು ಸೂಚಿಸುವವೆಂದ ಮೇಲೆ ಮತ್ತು ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಯಾವುದಾದರೊಂದು ಸಂಬಂಧದಿಂದ ಹೋಗಬಹುದೆಂದ ಮೇಲೆ, ಮೊತ್ತಮೊದಲಾಗಿರುವ ಒಂದು ಸ್ಥಿತಿ ಇರಲೇಬೇಕು. ಇದನ್ನೇ '೦' (ಪೂಜಿ) ಎಂದು ಕರೆದರು. ಈ ಸ್ಥಿತಿಯೂ ಬೇರೆಲ್ಲ ಸ್ಥಿತಿಗಳಂತೆಯೇ ಕಾಲ್ಪನಿಕ. ಆದ್ದರಿಂದ '೦' ಯೂ ಒಂದು ಅಂಕಿಯೆಂದೇ ತಿಳಿಯಬಹುದು. ಇದು ಎಲ್ಲದಕ್ಕೂ ಮೊದಲಿನ ಸ್ಥಿತಿಯಾದುದರಿಂದ ಇದಕ್ಕೆ ಬೇರೆ ಅಂಕಿಗಳಲ್ಲಿಲ್ಲದ ವಿಶೇಷ ಗುಣಗಳಿರಬಹುದು; ಆದರೆ ಬೇರೆ ಅಂಕಿಗಳಲ್ಲಿರುವ ಎಲ್ಲ ಗುಣಗಳೂ ಈ '೦' ಯಲ್ಲಿಯೂ ಇವೆ. ಈ '೦' ಗೂ 'ಕೂಡಿಸು' ಮೊದಲಾದ ಸಂಬಂಧಗಳು ಅನ್ವಯಿಸುತ್ತವೆ.

ಧನ ಅಂಕೆಗಳ ಸಹಾಯದಿಂದ ನಮಗೆ ಋಣ ಅಂಕೆಗಳ ಪರಿಜ್ಞಾನವು ಹೇಗಾಯಿತೆಂದು ವಿವೇಚಿಸುವಾ. ಧನ ಅಂಕೆಗಳು ಸ್ಥಿತಿಗಳನ್ನು ಸೂಚಿಸುವುವು. ಯಾವ ಎರಡು ಸ್ಥಿತಿಗಳನ್ನು ಕೂಡಿಸಿದರೂ ನಮಗೆ ಇನ್ನೊಂದು ಸ್ಥಿತಿಯು ಸಿಗುವದು. ಅದರ ವಿಲೋಮ ಪ್ರಶ್ನೆಯೆಂದರೆ, ಒಂದು ಸ್ಥಿತಿಯು ಸಿಗಬೇಕಾದರೆ ಯಾವ ಎರಡು ಸ್ಥಿತಿಗಳನ್ನು ಕೂಡಿಸಬೇಕು? ಅಥವಾ 'ಅ' ಸ್ಥಿತಿಗೆ ಯಾವ ಸ್ಥಿತಿಯನ್ನು ಕೂಡಿಸಿದರೆ 'ಬ' ಎಂಬ ಒಂದು ಸ್ಥಿತಿಯು ಬರುವುದು? ಎಂಬುದು. ೩ + ಕ = ೨ ಬರಬೇಕಾದರೆ 'ಕ' ಎಂಬುದು

ಯಾವ ಅಂಕೆ ಇರಬೇಕು ? ಈ ಪ್ರಶ್ನೆಗೆ ನಮ್ಮ ಅನುದಿನದ ಎಲ್ಲ ಅಂಕೆಗಳನ್ನು ಆಶ್ರಯಿಸಿದರೂ ಉತ್ತರ ಸಿಗಲಿಲ್ಲ. '೩' ಒಂದು ಅಂಕಿ, '೨' ಒಂದು ಅಂಕೆ ಕೂಡಿಸುವುದು; ಎಂಬ ಸಂಬಂಧದ ಜ್ಞಾನವೂ ನಮಗಿದೆ. ಆದರೂ ಈ ಮೇಲಿನ ಪ್ರಶ್ನೆಗೆ ಉತ್ತರವಿಲ್ಲವೆಂಬ ಕಳವಳವೇ ಋಣ ಅಂಕೆಗಳ ನಿರ್ಮಾಣಕ್ಕೆ ಕಾರಣವಾಯಿತು. ಒಂದು ಅಂಕೆಗೆ ಯಾವ ಅಂಕೆಯನ್ನು ಕೂಡಿಸಿದರೆ '೦' ಎಂಬ ಅಂಕೆಯು ಬರುವುದೋ, ಆ ಅಂಕೆಗಳಲ್ಲಿ ಒಂದನ್ನು 'ಋಣ'ವೆಂದೂ ಇನ್ನೊಂದನ್ನು 'ಧನ'ವೆಂದೂ ಕರೆದರು.

'ಗುಣಾಕಾರ'ವೆಂಬುದು ಅಂಕೆಗಳ ಇನ್ನೊಂದು ಸಂಬಂಧವನ್ನು ಸೂಚಿಸುವುದು. ಇದು 'ಕೂಡಿಸುವ' ಸಂಬಂಧದಷ್ಟು ಸುಲಭವಾಗಿ ಮನಸ್ಸಿಗೆ ಬರುವುದಿಲ್ಲ. '೨' ಎಂಬ ಸ್ಥಿತಿಯನ್ನು ಒಳಗೊಂಡ ಅನೇಕ ವಸ್ತುಗಳಿವೆ. ಈ ವಸ್ತುಗಳ ಕೆಲವೊಂದು ಪಂಗಡಗಳಿಗೆ '೨' ಎಂಬ ಸ್ಥಿತಿ ಇರಬಹುದು. ಹೀಗೆ ೨×೨ ಎಂದು ನಾವು ಅನ್ನುವಾಗ, ಮೊದಲಿನ '೨' ಎರಡಾಗಿರುವ ಒಂದು ಗುಂಪಿನ ಸ್ಥಿತಿಯನ್ನೂ ಮುಂದಿನ '೨' ಗುಂಪುಗಳ ರಾಶಿಯ ಸ್ಥಿತಿಯನ್ನೂ ವಿವರಿಸುವುದು. ಆ ಕಾರಣದಿಂದಲೇ ಒಂದು ಅಂಕೆಯನ್ನು ಇನ್ನೊಂದು ಅಂಕೆಯಿಂದ ಗುಣಿಸಿದಂತೆ ಒಂದು ರೂಪಾಯಿಯನ್ನು ಇನ್ನೊಂದು ರೂಪಾಯಿಯಿಂದ ಗುಣಿಸಲು ಬರುವುದಿಲ್ಲ. '೨' ಎಂಬ ಸ್ಥಿತಿ ಇರುವ ವಸ್ತುಗಳನ್ನೇ ನಾವು ವಿಚಾರಿಸಿದರೆ ಈ ವಸ್ತುವಿನ ಪಂಗಡವೊಂದಕ್ಕೆ '೨' ಸ್ಥಿತಿಯಿದ್ದರೆ, ಆ ಪಂಗಡದ ಸ್ಥಿತಿಯು '೪' ಇರುವುದು ಎಂದು ಮುಂತಾಗಿ ಹೇಳಬಹುದು. ಹೀಗೆ ಗುಣಾಕಾರವು ನಮ್ಮಲ್ಲಿ ಬಳಕೆಗೆ ಬಂದಿತು.

ಯಾವ ಎರಡು ಅಂಕೆಗಳನ್ನು ಗುಣಿಸಿದರೂ ನಮಗೆ ಅಂಕೆಯೇ ಉತ್ತರವಾಗಿ ಬರುವದು. ಈ ಕಾರಣದಿಂದ ಕೆಲವರು ಈ ರೀತಿಯಾಗಿ ವಿಚಾರಿಸಹತ್ತಿದರೂ '೨' ಎಂಬ ಅಂಕಿಗೆ ಯಾವ ಅಂಕಿಯಿಂದ ಗುಣಿಸಿದರೆ '೧' ಎಂಬ ಅಂಕೆಯು ಬರುವುದು ಎಂದು. ಇದಕ್ಕೆ ಉತ್ತರರೂಪವಾಗಿಯೇ ಭಿನ್ನರಾಶಿ (ಅಪೂರ್ಣಾಂಕ) ದಶಾಂಶಗಳೇ ಮೊದಲಾದ ಸಂಖ್ಯೆಗಳನ್ನೂ ಗಣಿತಶಾಸ್ತ್ರಜ್ಞರು ನಿರ್ಮಿಸಿದರು. ಯಾವ ಸಂಖ್ಯೆಯನ್ನೇ ಆಗಲಿ, ಅದೇ ಸಂಖ್ಯೆಯಿಂದ ಗುಣಿಸಿದರೆ ಇನ್ನೊಂದು ಸಂಖ್ಯೆಯೇ ಬರುವುದು. ಅಂದ ಮೇಲೆ ಯಾವ ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಗುಣಿಸಿದರೆ '—೧' ಸಂಖ್ಯೆಯು ಬರುವುದು ಎಂಬ ಪ್ರಶ್ನೆಗೂ ಉತ್ತರ ದೊರೆಯಲೇ ಬೇಕಲ್ಲವೇ ? ಇದಕ್ಕಾಗಿಯೇ ಸಂಕೀರ್ಣ (Complex) ಅಂಕೆಗಳನ್ನು ನಿರ್ಮಿಸಿ ನಮ್ಮ ಅನುದಿನ ಬಳಕೆಯಲ್ಲಿರುವ ಅಂಕೆ ಸಂಖ್ಯೆಗಳನ್ನು ಮತ್ತೂ ಬೆಳೆಯಿಸಿದರು.

*

ಆಧುನಿಕ ಜನಾಂಗದ ವೈಶಿಷ್ಟ್ಯವೆಂದರೆ, ಅವರು ಪ್ರತಿಯೊಂದನ್ನೂ ಗುಳಿಗೆಯ ರೂಪದಲ್ಲಿ ಪಡೆಯಲಿಚ್ಛಿಸುವರು. ಪೂರ್ವಕಾಲದ ಜನರು ಸೇರುಗಟ್ಟಲೆ ಔಷಧಿಗಳನ್ನು ಸೇವಿಸಿದರೆ, ಈಗಿನ ಜನರು "ಇಂಜಕ್ಶನ್" ತೆಗೆದುಕೊಳ್ಳುವರು. ಪೂರ್ವಕಾಲದ ಜನರು ನಾಲ್ಕು ವೇದಗಳನ್ನು ಕಂಠಪಾಠ ಮಾಡಿದರೆ, ಈಗಿನವರಿಗೆ "ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ" ಎಂಬ ವೇದಗಳ ಸಾರವು ಕೂಡ ಬರುವುದಿಲ್ಲ. ಶಾಲೆ, ಕಾಲೇಜುಗಳಲ್ಲಿನ ಹುಡುಗರು ಪಠ್ಯಪುಸ್ತಕಗಳ ಅಭ್ಯಾಸದ ಗೊಡವೆಗೆ ಹೋಗದೆ, ಗುಳಿಗೆಯ ರೂಪದಲ್ಲಿ ಸಿಗುವ ಗೈಡ್ (Guide) ಗಳನ್ನಷ್ಟೇ ಪಠಿಸಿ ಪರೀಕ್ಷೆಗೆ ಕೂತುಕೊಳ್ಳುವರು. ಇಡೀ ನಮ್ಮ ದೇಶದ ಆಡಳಿತವು ಬರೇ ೩೯೫ ಕಲಮುಗಳ ಮೇಲೆ ಅವಲಂಬಿಸಿ, ರಾಜ್ಯಸೂತ್ರವೂ ಗುಳಿಗೆಯ ರೂಪದಲ್ಲಿ ಬಹಳ ಸುಲಭವಾಗಿದೆ. ಹಾಗೆಯೇ ಅನಂತವಾಗಿರುವ, ನಮ್ಮ ಅನುದಿನದ ಬಳಕೆಯಲ್ಲಿರುವ ೦, ೧, ೨, . . . ಮೊದಲಾದ ಅಂಕೆಗಳನ್ನು ಕೆಲವೊಂದು ಸಿದ್ಧಾಂತಗಳ ಮೇಲಿಂದ ವಿವರಿಸಬಹುದು. ಅವಾವುವೆಂದರೆ—

(೧) ಮೊದಲಿನ ಸ್ಥಿತಿಯೇನು? (೦—ಸೊನ್ನೆ)

(೨) ಒಂದಾಗಿರುವ ಸ್ಥಿತಿಯೇನು ? (ಒಂದೋ ಒಂದು ಜೋಡಿಯೋ ಒಂದು ನೂರೋ ಇತ್ಯಾದಿ) (೧—ಏಕ)

(೩) '೦' ಗೂ, '೧' ಕ್ಕೂ ಇರುವ ಸಂಬಂಧವೇನು? ಅಥವಾ ಒಂದು ಸ್ಥಿತಿಯಿಂದ ಇನ್ನೊಂದಕ್ಕೆ ಹೇಗೆ ಹೋಗಬಹುದು ? (ಕೂಡಿಸುವುದು ಇ.)

ಈ ಮೂರು ವಿಷಯಗಳ ಜ್ಞಾನವು ನಮಗೆ ಆದರೆ, ನಮಗೆ ಎಲ್ಲ ಅಂಕೆಗಳನ್ನೂ ವಿವರಿಸಲು ಬರುವುದು. ಆದ್ದರಿಂದ ಇವನ್ನೇ ಅಂಕಿಗಳ ಮೂಲ ತತ್ತ್ವಗಳೆಂದು ಕರೆಯಬಹುದು. ಹೇಗೆ ರಾಷ್ಟ್ರದ ಕಾನೂನು ಕಲಮುಗಳು ವ್ಯತ್ಯಾಸವಾದಂತೆ, ಅದು ಪ್ರಜಾರಾಜ್ಯವೊ, ಜನತಾರಾಜ್ಯವೊ ಎಂದೆನಿಸುವುದೋ, ಹಾಗೆಯೇ ಈ ಮೇಲಿನ ಮೂರು ತತ್ತ್ವಗಳು ವ್ಯತ್ಯಾಸವಾದಂತೆ ನಮಗೆ ಬೇರೆ ಬೇರೆ ಜಾತಿಯ ಗಣಿತಗಳೂ ಕಾಣಬರುವುವು. ಉದಾಹರಣೆಗಾಗಿ, '೧' ಎಂದರೆ 'ಒಂದು ಜೋಡಿ' ಎಂದು ತಿಳಿದರೆ ನಮಗೆ ಎಲ್ಲಾ 'ಸರಿ' ಸಂಖ್ಯೆಗಳನ್ನು ವಿವರಿಸಲು ಬರುವುದು, ಏಕೆಂದರೆ ಎಲ್ಲ 'ಸರಿ' ಸಂಖ್ಯೆಗಳೂ ಜೋಡಿಗಳೇ ಆಗಿರುವುವು. ಮೊದಲಿನ ಸ್ಥಿತಿ 'ನೂರು' ಆದರೆ '೧' ಎಂಬುದು (ನೂರ ಒಂದು) ಆಗುವುದು; '೫' ಎಂದರೆ 'ನೂರ ಐದು' ಆಗುವುದು ಮತ್ತು '—೨' ಎಂದರೆ ಬರೇ 'ತೊಂಭತ್ತೆಂಟು', ಇತ್ಯಾದಿ.

*

ಇನ್ನು ತತ್ತ್ವಶಾಸ್ತ್ರದ ವಿಷಯ. ಸಾಮಾನ್ಯ ಮನುಷ್ಯನು, 'ಈ ಲೋಕವು ದೇವರಿಂದ ನಿರ್ಮಿತವಾಗಿರುವುದು, ಮತ್ತು ಅವನಿಂದಲೇ ನಡೆಸಲ್ಪಡುತ್ತಿರುವುದು' ಎಂದು ತಿಳಿದು ಸುಮ್ಮನಾಗುವನು. ಆದರೆ ವಿಚಾರವಂತನು, ಅಥವಾ ತತ್ತ್ವಶಾಸ್ತ್ರಜ್ಞನು, ದೇವರೆಂದು ನಾವು ಯಾರನ್ನು ಕರೆಯುತ್ತೇವೆ; ಅವನು ಈ ಲೋಕವನ್ನು ಹೇಗೆ ನಿರ್ಮಿಸಿದನು; ಈ ಲೋಕಕ್ಕಿಂತ ಉತ್ತಮವಾದ ಬೇರೆ ಲೋಕಗಳು ಇರಲ ಸಾಧ್ಯವೆ; ಹೀನವಾದ ಲೋಕವಿದ್ದರೆ, ಅದು ಈ ಲೋಕದಿಂದ ಯಾವ ರೀತಿಯಲ್ಲಿ ಹೀನವಾಗಿರುವುದು? ಎಂಬಿತ್ಯಾದಿ ವಿಷಯಗಳಿಗೆ ಉತ್ತರವನ್ನು ಪಡೆಯಲು ಪ್ರಯತ್ನಿಸುವನು. ಇದೇ ತತ್ತ್ವಜ್ಞಾನದ ಮೂಲ.

ಈ ಲೋಕದ ಮೂಲವು ಯಾವುದು ಎಂಬ ಪ್ರಶ್ನೆಯು 'ಗಿಡ ಮೊದಲೋ ಬೀಜ ಮೊದಲೋ' ಎಂಬ ಪ್ರಶ್ನೆಯಂತೆಯೇ ಯಾರನ್ನೂ ನಿರುತ್ತರರನ್ನಾಗಿ ಮಾಡದೆ ಇರಲಿಕ್ಕಿಲ್ಲ. ಈ ಪ್ರಶ್ನೆಗೆ ಉತ್ತರರೂಪವಾಗಿಯೇ ಭಾರತೀಯ ತತ್ತ್ವಶಾಸ್ತ್ರಜ್ಞರು ಇದಕ್ಕೆ 'ಪ್ರಕೃತಿ' ಎಂಬ ಕಾಲ್ಪನಿಕ ವ್ಯಕ್ತಿಯನ್ನು ಸೃಷ್ಟಿಸಿದರು. ಮೂಲವೊಂದೇ ಇದ್ದರೆ ತಾನಾಗಿಯೇ ಈ ಲೋಕವು ಸೃಷ್ಟಿಯಾಗಲು ಸಾಧ್ಯವಿಲ್ಲ; ಚಟುವಟಿಕೆಯೂ ಬೇಕು. ಇದನ್ನೇ 'ಪುರುಷ'ನೆಂದು ಕರೆದರು. ಹೀಗೆ 'ಪ್ರಕೃತಿ' ಮತ್ತು 'ಪುರುಷ' ಇವೆರಡೂ ಆದಿಯಲ್ಲಿರಬೇಕು. ಇವು ದೇವರ ಎರಡು ಅಂಶಗಳು ಎಂದು ಕರೆದರು. 'ಪ್ರಕೃತಿ' ಮತ್ತು 'ಪುರುಷ'ರ ನಾನಾ ಬಗೆಯ ಸಂಯೋಗದ ಮೂಲಕ ಈ ಲೋಕದ ಎಲ್ಲ ನಮೂನೆಯ ಜೀವರಾಶಿಗಳೂ ಹುಟ್ಟಿದುವು ಎಂದು ಮುಂತಾಗಿ ಕಲ್ಪಿಸಿದರು.

ಈ ಲೋಕವು ಪ್ರಕೃತಿ ಮತ್ತು ಪುರುಷರ ಚಿನ್ನಾಟವೆಂದ ಮೇಲೆ ಈ ಲೋಕವಷ್ಟೇ ಏಕೆ, ಅನೇಕ ಲೋಕಗಳೂ ಅದರಿಂದ ಜನಿಸಿರಬಹುದು. ಆ ಲೋಕಗಳು ಹೇಗಿರಬಹುದು ಎಂದು ಚಿಂತಿಸುತ್ತಾ ಕೆಲವೊಂದು ಲೋಕಗಳಲ್ಲಿ ಈ ಲೋಕಕ್ಕಿಂತ ಹೆಚ್ಚು ಸುಖವೂ ಇನ್ನು ಕೆಲವೊಂದರಲ್ಲಿ ಹೆಚ್ಚು ಕಷ್ಟವೂ ಇರಬಹುದೆಂದು ತರ್ಕಿಸಿದರು. ಇವಕ್ಕೆ ಸ್ವರ್ಗ ಮತ್ತು ನರಕಗಳೆಂದು ನಾಮಕರಣ ಮಾಡಿದರು. ಕೆಲವೊಂದು ಶಾಸ್ತ್ರಗಳಲ್ಲಿ ಈ ಲೋಕಕ್ಕಿಂತ ಉತ್ತಮವಾದ ಭುವರ್ಲೋಕವೇ ಮೊದಲಾದ ಆರು ಲೋಕಗಳಿದ್ದಂತೆ ಬರೆದಿರುವರು. ಈ ಲೋಕದಲ್ಲಿ ಸಾಯುವುದು ಎಂಬ ಕಷ್ಟವಿದೆ; ನಮಗೆ ಗಾಳಿಯಲ್ಲಿ ಹಾರಾಡಲು ಬರುವುದಿಲ್ಲ; ಅದೃಶ್ಯರಾಗಿ ತಿರುಗಾಡಲಿಕ್ಕೂ ಬರುವುದಿಲ್ಲ; ದೇಹ ಬದಲಿಸಲು ಬರುವುದಿಲ್ಲ. ಮೇಲೆ ಹೇಳಿದ ಆರು ಲೋಕಗಳಲ್ಲಿ ಒಂದೊಂದರಲ್ಲಿ ಒಂದೊಂದು ಸುಖವು ಹೆಚ್ಚುತ್ತಾ ಹೋಗಿದೆ. ಆ ಲೋಕದಲ್ಲಿದ್ದ ಯಕ್ಷ, ಕಿನ್ನರ, ಗಂಧರ್ವರೇ ಮೊದಲಾದವರೆಲ್ಲರೂ ದೇವರಿಂದಲೇ ಹುಟ್ಟಿದರು. ಅವರಲ್ಲಿ ಒಬ್ಬರಿಗಿಂತ ಒಬ್ಬರಿಗೆ ಕಷ್ಟವು ಕಡಿಮೆ ಇದೆ. ಪರಂಧಾಮದಲ್ಲಿ ಕಷ್ಟವೇ ಇರುವುದಿಲ್ಲ. ಹಾಗೆಯೇ ಅತಲ, ವಿತಲವೇ ಮೊದಲಾದ ಏಳು ಲೋಕಗಳು ನಮ್ಮ ಲೋಕಕ್ಕಿಂತ ಹೀನತರಗತಿಯವು ಇವೆ. ಅವುಗಳು ನಮ್ಮ ಲೋಕಕ್ಕಿಂತ ಅನುಕ್ರಮವಾಗಿ ನಿಕೃಷ್ಟವಾಗುತ್ತಾ ಹೋಗಿವೆ: ಪಾತಾಳವು ಅತಿ ನಿಕೃಷ್ಟವಾದ ಲೋಕ.

ಮನುಷ್ಯನು ಸತ್ತ ಮೇಲೆ ಎಲ್ಲಿಗೆ ಹೋಗುತ್ತಾನೆ? ಇದು ಬಹಳ ಗಡುಸಾದ ಪ್ರಶ್ನೆ. ಇದಕ್ಕೆ ಉತ್ತರವಾಗಿ ಎಲ್ಲರೂ ಒಪ್ಪುವ ಮಾತೆಂದರೆ 'ದೇವರನ್ನು ಸೇರುತ್ತಾನೆ' ಎಂದು. ಇನ್ನು ಕೆಲವು ಪೌರಾಣಿಕರು, ಸತ್ತವನು ತಾನು ಮಾಡಿದ ಕರ್ಮಾನುಸಾರವಾಗಿ ಮೇಲೆ ಹೇಳಿದ ಉತ್ತಮ ಲೋಕಗಳನ್ನೋ ಕೆಟ್ಟ ಲೋಕಗಳನ್ನೋ ಸೇರುತ್ತಾನೆ ಎಂದು ಹೇಳುವರು; ಅತ್ಯುತ್ತಮನಾದವನು ಸ್ವರ್ಗ, ಕೈಲಾಸ, ವೈಕುಂಠ ಇತ್ಯಾದಿಗಳನ್ನು ಸೇರುತ್ತಾನೆ. ಆ ಪೌರಾಣಿಕರು ಸ್ವರ್ಗವೇ ದೇವರ ವಾಸಸ್ಥಾನವೆಂದು ಹೇಳಿ, ಸತ್ತವನು ದೇವರನ್ನು ಸೇರುತ್ತಾನೆ ಎಂಬುದನ್ನೂ ಇದಕ್ಕೆ ಕೂಡಿಸಿಬಿಟ್ಟಿರುವರು. ಕೆಲವರು ಪರಂಧಾಮದಲ್ಲಿ ದೇವರ ವಿನಾ ಬೇರೆ ಯಾರೂ ಇರುವದಿಲ್ಲವೆಂದೂ ಇನ್ನು ಹಲವರು, ದೇವರಲ್ಲದೆ ಬೇರೆಯವರೂ ಅಲ್ಲಿರುವರು ಎಂದೂ ಪ್ರತಿಪಾದಿಸುವರು. ಆದರೆ ಮನಃಶಾಸ್ತ್ರಜ್ಞರಿಗೆ ಇವೆಲ್ಲ ವಿಚಾರವಂತರ ಊಹಾಪೋಹಗಳೆಂದು ವ್ಯಕ್ತವಾಗದಿರದು.

ಈಗ ಗಣಿತಶಾಸ್ತ್ರದ ಪ್ರಕಾರ ದೇವರು, ಸ್ವರ್ಗ, ನರಕ, ಗಂಧರ್ವ ಮೊದಲಾದವುಗಳನ್ನು ಹೇಗೆ ವಿವರಿಸಲು ಬರುವುದೆಂದು ವಿಚಾರಿಸುವ. ಸೊನ್ನೆ ಎಂಬುದು ನಮ್ಮ ಮನಸ್ಸಿನಲ್ಲಿದ್ದರೂ ಇದಕ್ಕೆ ನಿಜವಾದ ಅಸ್ತಿತ್ವವಿಲ್ಲ. ಇದು ಎಲ್ಲ ಅಂಕೆಗಳಿಗೂ ಆದಿ. ಇದನ್ನು ಲೋಕಗಳ ಆದಿಯಾದ ದೇವರಿಗೆ ಹೋಲಿಸಿದರೆ, ಅದು ತರ್ಕಶಾಸ್ತ್ರದ ಪ್ರಕಾರ ಸಹಜವೇ ಆಗಿದೆ. ೧, ೨ ಮೊದಲಾದ ಅಂಕೆಗಳು ದೊಡ್ಡವಾಗುತ್ತ ಹೋದಂತೆ, ಅಬ್ಜ, ಪರಾರ್ಧಗಳನ್ನೂ ದಾಟಿ, ಅನಂತಕ್ಕೆ (infinity) ಸಮೀಪವಾಗುವುವು. ಈ ಅನಂತಕ್ಕೂ ನಿಜವಾದ ಅಸ್ತಿತ್ವವಿರುವುದಿಲ್ಲ. ಮನುಷ್ಯನ ಭಾವನಾಕಾಶದಲ್ಲಿ ಮಾತ್ರವೇ ರಾರಾಜಿಸುತ್ತಿರುವ ಈ ಅನಂತವೇ ದೇವರ ಇನ್ನೊಂದು ಸ್ವರೂಪವೆಂದು ಹೇಳಬಹುದು.

ನಮಗೆ ಅಂಕೆಯ ಪರಿಜ್ಞಾನವು ಲೋಕಗಳ ಪರಿಜ್ಞಾನದಷ್ಟೇ ನಿಶ್ಚಿತವಾಗಿದೆ. ಅಂಕೆಯನ್ನು ಹೇಗೆ ನೀವು ಮನಸ್ಸಿನಲ್ಲಿ ತಿಳಿಯಬಹುದೇ ವಿನಾ ವಿವರಿಸಲು ಬರುವದಿಲ್ಲವೋ, ಹಾಗೆಯೇ ಲೋಕಗಳ ಜ್ಞಾನವು ಕೂಡ. ಎಲ್ಲ ಪೂರ್ಣಾಂಕಗಳೂ 'ಏಕ' ಮತ್ತು 'ಕೂಡಿಸುವುದು' ಎಂಬುವುದರಿಂದ ಹೇಗೆ ಜನಿಸಿವೆಯೋ ಹಾಗೆಯೇ ಈ ಲೋಕಗಳೂ 'ಪ್ರಕೃತಿ' ಮತ್ತು 'ಪುರುಷ'ರಿಂದ. ಬರೇ ಏಕವಿದ್ದು ಕೂಡಿಸುವುದು ತಿಳಿಯದಿದ್ದರೆ ನಮಗೇನೂ ಮಾಡಲು ಬರುವುದಿಲ್ಲ. ಹಾಗೆಯೇ ಪುರುಷನಿಲ್ಲದೆ ಪ್ರಕೃತಿಯೂ ನಿಶ್ಚೇತನ. 'ಕೂಡಿಸುವುದು' ಮತ್ತು 'ಏಕ' ವು ವ್ಯತ್ಯಾಸವಾದಂತೆ ನಮಗೆ ಅನೇಕ ಬಗೆಯ ಗಣಿತಗಳು ಸಿಗುವವು. ಹಾಗೆಯೇ ಪ್ರಕೃತಿ ಮತ್ತು ಪುರುಷರ ನಾನಾ ಬಗೆಯ ಸಂಬಂಧಗಳಿಂದ ನಮಗೆ ಅನೇಕ ತರದ ಪ್ರಾಣಿಗಳೂ ಲೋಕಗಳೂ ಕಾಣಬರುವವು. ಹದಿನಾಲ್ಕು ಲೋಕಗಳ ಕಲ್ಪನೆಯೂ ಹಾಗೆಯೇ ಇದೆ. ನಾವು ದಿನನಿತ್ಯವೂ ಉಪಯೋಗಿಸುವ

ಪೂರ್ಣಾಂಕಗಳ ಗಣಿತವು ಅತಿ ಉತ್ಕೃಷ್ಟವೂ ಅತಿ ನಿಕೃಷ್ಟವೂ ಅಲ್ಲದ ಭೂಲೋಕದ ಕಲ್ಪನೆಗೆ ಸಮಾನವಾಗಿದೆ. ಈ ಪೂರ್ಣಾಂಕಗಳಿಗೆ ಈ ಮೊದಲೇ ಹೇಳಿದಂತೆ ಋಣಪೂರ್ಣಾಂಕಗಳನ್ನೂ 'ಸಂಕೀರ್ಣ' ಸಂಖ್ಯೆಗಳನ್ನೂ ಸೇರಿಸಿ ಉತ್ತಮವಾಗಿ ಮಾಡಬಹುದು; ಹಾಗೆಯೇ ಈ ಲೋಕಕ್ಕಿಂತ ಉತ್ತಮವಾಗಿರುವ ಲೋಕಗಳ ಕಲ್ಪನೆಯು ಕೂಡ; ಮತ್ತು ಪೂರ್ಣಾಂಕಗಳನ್ನು ಕೂಡಿಸುವಾಗಲಾಗಲಿ, ಗುಣಿಸುವಾಗಲಾಗಲಿ, ಅಂಕೆಗಳನ್ನು ಅದಲುಬದಲಾಗಿಸಿದರೆ, ಮೊತ್ತವು ವ್ಯತ್ಯಾಸವಾಗುವದಿಲ್ಲ; ಅದು ವ್ಯತ್ಯಾಸವಾಗುವ ಅಂಕೆಯೊಂದಿದ್ದರೆ ಅದು ಪೂರ್ಣಾಂಕದಿಂದ ನಿಕೃಷ್ಟವೆಂದು ಹೇಳಬಹುದು; ಇದನ್ನು ನಮ್ಮ ಲೋಕಕ್ಕಿಂತಲೂ ನಿಕೃಷ್ಟವಾಗಿರುವ ಲೋಕಗಳ ಊಹೆಗೆ ಹೋಲಿಸಬಹುದು.

ಕೂಡಿಸು, ಗುಣಿಸು, ಮೊದಲಾದ ಎಲ್ಲ ಸಂಬಂಧಗಳೂ ಅನ್ವಯಿಸುವ ಗಣಿತವೊಂದಿದ್ದರೆ ಅದನ್ನು ಪರಂಧಾಮವೆಂಬ ಲೋಕದ ಕಲ್ಪನೆಗೆ ಸಮಾನವಾಗಿ ತಿಳಿಯಬಹುದು. ಈ ಲೋಕದಲ್ಲಿ ಹೇಗೆ ಯಾವ ಬಗೆಯ ಕಷ್ಟವೂ ಇರುವದಿಲ್ಲವೋ, ಹಾಗೆಯೇ, ಆ ಗಣಿತದಲ್ಲಿ ಎಲ್ಲ ಬಗೆಯ ಸಂಬಂಧಗಳೂ ತಡೆಯಿಲ್ಲದೆ ಅನ್ವಯಿಸುವವು. ಕೂಡಿಸು, ಕಳಿ, ಗುಣಿಸು, ಭಾಗಿಸು ಇವಿಷ್ಟೇ ಸಂಬಂಧಗಳು ತಡೆಯಿಲ್ಲದೆ ಅನ್ವಯಿಸುವ ಗಣಿತಗಳನ್ನು ನಾವು ಕಂಡು ಹಿಡಿದಿದ್ದೇವೆ. ಆದರೆ ಇವಿಷ್ಟೇ ಸಂಬಂಧಗಳು ಇರುವವು ಎಂದು ಮಾತ್ರ ಯಾರಿಗೂ ಹೇಳಲು ಬರುವದಿಲ್ಲ. ಹಾಗೆಯೇ ಪರಂಧಾಮದಲ್ಲಿ ನಮ್ಮ ಭೂಲೋಕದಲ್ಲಿನ ಯಾವ ತರದ ಕಷ್ಟಗಳೂ ಇಲ್ಲದೆ ಇರಬಹುದು; ಆದರೆ ಅಲ್ಲಿಯವರಿಗೆ ಮಾತ್ರವೇ ಇರಬಹುದಾದ, ನಮಗಿಲ್ಲದ ಬೇರೆ ತರದ ಕಷ್ಟಗಳು ಅಲ್ಲಿ ಇರಬಹುದು. ಅವು ಯಾವುವಿರಬಹುದೆಂದು ಮನುಷ್ಯರಾದ ನಮಗೆ ಹೇಳಲು ಬರುವದಿಲ್ಲ. ಅಂತೆಯೇ ನಾವು ಸದ್ಯದಲ್ಲಿ ಸರ್ವೋತ್ಕೃಷ್ಟವಾದ ಗಣಿತವನ್ನು ತಯಾರಿಸಿದರೂ ಅದಕ್ಕಿಂತಲೂ ಉತ್ಕೃಷ್ಟವಾದ ಬೇರೊಂದು ಗಣಿತವು ಇರಲೂಬಹುದು; ಅದು ಯಾವುದೆಂದು ನಮಗೆ ಹೇಳಲು ಬರುವದಿಲ್ಲ ಮತ್ತು ಆ ಸರ್ವೋತ್ಕೃಷ್ಟವಾದ ಗಣಿತದಲ್ಲಿ '೦' ಮತ್ತೆ '೧' ರ ಹೊರತು ಬೇರೆ ಒಂದಾದರೂ ಅಂಕೆಯು ಇದೆಯೋ ಇಲ್ಲವೋ ಎಂದು ತಿಳಿಯಲು ಸಾಧ್ಯವಿಲ್ಲ. ಬೇರೆ ಯಾವುದೂ ಇಲ್ಲದಿದ್ದರೆ ಅದನ್ನು ಅದ್ವೈತವಾದಕ್ಕೆ ಹೋಲಿಸಬಹುದು; ಏಕೆಂದರೆ ಅದ್ವೈತವಾದಿಗಳು ವಿಶ್ವದಲ್ಲಿ ದೇವರು ಒಬ್ಬನೇ ಇರುವನು ಎಂದು ಅನ್ನುವರು. ಅದು ಅಲ್ಲದೆ ಆ ಅತ್ಯುತ್ತಮವಾದ ಗಣಿತದಲ್ಲಿ '೦' ಮತ್ತು '೧' ರ ಹೊರತು ಬೇರೆ ಅಂಕೆಗಳು ಇರಲು ಸಾಧ್ಯವಿದ್ದರೆ, ಅದನ್ನು ದ್ವೈತವಾದಕ್ಕೆ ಹೋಲಿಸಬಹುದು. ಈ ಎರಡೂ ವಾದಗಳು, ಊಹಾಪೋಹಗಳ ದ್ವಂದ್ವಯುದ್ಧವಾದುದರಿಂದ ನಮಗೆ ಈ ವಿಷಯದಲ್ಲಿ ಏನೂ ನಿಶ್ಚಿತ ಉತ್ತರವನ್ನು ಹೇಳಲು ಬರುವದಿಲ್ಲ.

ಹೀಗೆ ಗಣಿತಶಾಸ್ತ್ರದ ಬೆಳವಣಿಗೆಗೂ ತತ್ತ್ವಶಾಸ್ತ್ರದ ಬೆಳವಣಿಗೆಗೂ ಬಹುತರದ ಸಾಮ್ಯವಿದೆ. ಎರಡೂ ಭಾವನಾಮಯ ಶಾಸ್ತ್ರಗಳು. ಆ ಕಾರಣದಿಂದಲೇ ಗಣಿತಶಾಸ್ತ್ರಪ್ರಧಾನವಾದ ಭಾರತದಲ್ಲಿ ತತ್ತ್ವಶಾಸ್ತ್ರವೂ ಪ್ರಧಾನವಾಗಿರುವದು. ಎರಡು ಶಾಸ್ತ್ರಗಳ ಹಿನ್ನೆಲೆಯೂ ಭಾವನಾತರಂಗಗಳೂ ಸರ್ವಸಾಮಾನ್ಯವಾಗಿ ಏಕರೀತಿಯವಾಗಿರುವವು. ಕೂಲಂಕಷವಾಗಿ ವಿಚಾರಿಸಿದರೆ, ಅಣ್ಣತಮ್ಮಂದಿರ ಸಾಮ್ಯದಂತೆ ನಮಗೆ ಸರ್ವ ಸಮಾನತೆಯನ್ನು ಹೇಳಲು ಬರುವದಿಲ್ಲವಾದರೂ ಅನೇಕ ವಿಧದ ಸಾಮ್ಯಗಳನ್ನಂತೂ ವಿವರಿಸಬಹುದು. ಈ ಸಾಮ್ಯವು, ಗಣಿತ ಶಾಸ್ತ್ರ, ತತ್ತ್ವಶಾಸ್ತ್ರಜ್ಞರಿಗೆ ಮಾತ್ರವಲ್ಲದೆ, ಮನಃಶಾಸ್ತ್ರಜ್ಞರಿಗೂ ಬಹಳ ಮನೋರಂಜಕವೂ ಉಪಯುಕ್ತವೂ ಆದೀತೆಂದು ಭಾವಿಸುತ್ತೇನೆ.

ಎರಡನೇ ಪಂಚವಾರ್ಷಿಕ ಯೋಜನೆ

(ವಿಹಂಗಮ ನೋಟ)

ಲೇಖಕರು: ಶ್ರೀ. ಎನ್. ಎ. ಮುಜುಮದಾರ, ಎಂ. ಎ.

ಎರಡನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ನಡೆದ ವಾಗ್ವಾದವನ್ನು ಬೇರೊಂದು ಲೇಖದಲ್ಲಿ ಇದೇ ಸಂಚಿಕೆಯಲ್ಲಿ ವಿವೇಚಿಸಿದೆ. ಈ ಲೇಖವು ಯೋಜನೆಯ ಸ್ಥೂಲರೂಪರೇಷೆಯನ್ನು ಕೊಡುತ್ತದೆ.

ಇಂದಿನ ಯುಗವು 'ಯೋಜನೆಯ ಯುಗ'ವೆಂದು ಗಣಿಸಲ್ಪಡುತ್ತದೆ. ದೇಶದ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವ ಕಾರ್ಯವನ್ನು ಒಂದು ನಿರ್ದಿಷ್ಟ ಹಾಗೂ ಪೂರ್ವನಿರೂಪಿತ ಯೋಜನೆಯಂತೆ ಸಾಗಿಸುವದು ಹೆಚ್ಚು ಅಪೇಕ್ಷಣೀಯವೆಂಬ ಮಾತನ್ನು ಖಾಸಗೀ ಉದ್ದಿಮೆಯ ಸ್ವರ್ಗವೆಂದೆನಿಸುತ್ತಿದ್ದ ಅಮೇರಿಕೆಯಂಥ ರಾಷ್ಟ್ರಗಳೂ ಒಪ್ಪುತ್ತಿವೆ. ಅಪೂರ್ಣ ಅಭಿವೃದ್ಧಿಹೊಂದಿದ ದೇಶಗಳಿಗಂತೂ ಯೋಜನೆಯು ಅನಿವಾರ್ಯವೇ ಆದಂತಾಗಿದೆ. ಆ ಮಾತನ್ನು ಮನದಂದು ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯ ಕೆಲಸವನ್ನು ಪ್ರಥಮ ಪಂಚವಾರ್ಷಿಕ ಯೋಜನೆಯಿಂದಲೇ ಆರಂಭಿಸಿಯಾಗಿದೆ. ಮುಂದಿನ ವರ್ಷದ ಮಾರ್ಚ ತಿಂಗಳಿಗೆ ಈ ಯೋಜನೆಯ ಅವಧಿಯು ಕೊನೆಗೊಳ್ಳುತ್ತಿದ್ದು, ಆ ನಂತರದ ಅಭಿವೃದ್ಧಿ ಕಾರ್ಯಕ್ರಮಕ್ಕೆ ನಾವೀಗ ಅಣಿಯಾಗಬೇಕಾಗಿದೆ. ಅದುದರಿಂದಲೇ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕರಡನ್ನು ಸ್ಥೂಲರೂಪದಲ್ಲಿ ಸಿದ್ಧಗೊಳಿಸಿ, ಯೋಜನಾ ಆಯೋಗದವರು, ಆ ಬಗ್ಗೆ ಸೂಚನೆ, ಸಲಹೆ ಹಾಗೂ ಅಭಿಪ್ರಾಯಗಳನ್ನು ಆಮಂತ್ರಿಸಿದ್ದಾರೆ. ಈ ವೇಳೆಯಲ್ಲಿ ಯೋಜನೆಯ ರೂಪರೇಷೆಗಳನ್ನು ಅರಿಯುವದು ಅವಶ್ಯವಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಮುಖ್ಯ ಉದ್ದೇಶಗಳು

ಯೋಜನೆಯ ಪರಿಮಾಣದ ಅಂಕಿಸಂಖ್ಯೆಗಳನ್ನು ಸಿದ್ಧಪಡಿಸುವಾಗ ಮುಖ್ಯವಾಗಿ ಎರಡು ಉದ್ದೇಶಗಳನ್ನೂ ಲಕ್ಷ್ಯದಲ್ಲಿಡಲಾಗಿದೆಯೆಂದು ಹೇಳಲಾಗಿದೆ. ಮೊದಲನೆಯದಾಗಿ, ರಾಷ್ಟ್ರೀಯ ಆದಾಯದಲ್ಲಿ ನೂರಕ್ಕೆ ವರುಷಕ್ಕೆ ೫ ರಷ್ಟು ಹೆಚ್ಚಳವಾಗುತ್ತ ಹೋಗುವದು ಹಾಗೂ ಎರಡನೆಯದಾಗಿ, ಯೋಜನೆಯ ಅವಧಿಯಲ್ಲಿ ೧೧ ದಶಲಕ್ಷ ಜನರಿಗೆ ಉದ್ಯೋಗಗಳನ್ನು ಕಲ್ಪಿಸಿ ಕೊಡುವದು.

ಜನರ ಜೀವನ ಮಟ್ಟವನ್ನು ಹೆಚ್ಚಿಸಬೇಕಾದರೆ, ರಾಷ್ಟ್ರೀಯ ಆದಾಯವು ಸಾಕಷ್ಟು ಹೆಚ್ಚಾಗುವದು ಅತ್ಯವಶ್ಯವಿದೆ. ಏಕೆಂದರೆ ಇದ್ದುದನ್ನೇ ಹಂಚಿಕೊಳ್ಳುವದಾದರೆ, ಬರಿ ಬಡತನವನ್ನೇ ಹಂಚಿಕೊಂಡಂತಾಗುವದು. ಇದನ್ನು ಲಕ್ಷ್ಯದಲ್ಲಿಟ್ಟೇ ಮೊದಲ ಯೋಜನೆಯಲ್ಲಿಯೂ ಉತ್ಪಾದನೆಯನ್ನು ಹೆಚ್ಚಿಸಿ, ಒಟ್ಟು ರಾಷ್ಟ್ರೀಯ ಆದಾಯವನ್ನು ವರ್ಧಿಸುವ ಬಗ್ಗೆ ಮಹತ್ವವನ್ನು ಕೊಡಲಾಗಿತ್ತು. ಆ ಅವಧಿಯಲ್ಲಿ ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಅಂದರೆ ಐದು ವರ್ಷಗಳಲ್ಲಿ ಸುಮಾರು ನೂರಕ್ಕೆ ೧೫ ರಷ್ಟು ಆದಾಯವು ಹೆಚ್ಚಿದೆ. ಇದರಿಂದ ಸ್ಫೂರ್ತಿಹೊಂದಿ ಎರಡನೆಯ ಯೋಜನೆಯಲ್ಲಿ ಅದಕ್ಕೂ ಹೆಚ್ಚು ಮಹತ್ವಾಕಾಂಕ್ಷಿಯಾದ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಅದರಂತೆ ಐದು ವರ್ಷಗಳಲ್ಲಿ ನೂರಕ್ಕೆ ೨೫ ರಷ್ಟು ಆದಾಯವು ಹೆಚ್ಚಬೇಕೆಂದಿದೆ.

ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮವು ಒಳ್ಳೇ ಭರದಿಂದ ಸಾಗಿದ ಕಾಲಕ್ಕೇನೇ, ನಿರುದ್ಯೋಗ ಸಮಸ್ಯೆಯು ತಲೆದೋರಿದ್ದು ಕೆಲವರಿಗೆ ಆಶ್ಚರ್ಯವನ್ನುಂಟುಮಾಡಿದೆ. ಆದರೆ ಮೊದಲ ಯೋಜನೆಯನ್ನು ಕೂಲಂಕಷವಾಗಿ ಅಭ್ಯಸಿಸಿದವರಿಗೆ ಹಾಗೇನೂ ಅಚ್ಚರಿಯಾಗಲು ಕಾರಣವಿಲ್ಲ. ಉದ್ಯೋಗಗಳು, ಅಭಿವೃದ್ಧಿಯ ಯೋಜನೆಗಳು ಕಾರ್ಯರೂಪಕ್ಕಿಳಿಯುತ್ತಹೋದಂತೆ, ತಂತಾನೇ ಹೆಚ್ಚಾಗುತ್ತ ಹೋಗುವವೆಂಬ ಆಧಾರದ ಮೇಲೆ ಮೊದಲ ಯೋಜನೆ ಸಾಗಿದಂತೆ ತೋರುತ್ತದೆ. ಸುಮಾರು ೫೦೦ ಪುಟಗಳಷ್ಟು ಯೋಜನೆಯ ಹೊತ್ತಿಗೆಯಲ್ಲಿ "ಉದ್ಯೋಗ" ಸಮಸ್ಯೆಯನ್ನು ಕೊನೆಯ ೮-೧೦ ಪುಟಗಳಲ್ಲಿಯೇ ಚರ್ಚಿಸಿ ಮುಗಿಸಿದ್ದುದು ಈ ಮಾತಿಗೆ ಸಾಕ್ಷಿಯಾಗಿದೆ. ಎರಡನೆಯ ಯೋಜನೆ ಮಾತ್ರ ಉದ್ಯೋಗಗಳನ್ನು ಹೆಚ್ಚಿಸುವದನ್ನೇ ತನ್ನ ಮೂಲ ಉದ್ದೇಶಗಳಲ್ಲೊಂದನ್ನಾಗಿ ಮಾಡಿಕೊಂಡುದು, ಇಂದು ನಿರುದ್ಯೋಗ ಸಮಸ್ಯೆಯು ತಾಳಿದ ಭೀಕರ ಸ್ವರೂಪದ ನಿದರ್ಶನವಾಗಿದೆ.

ಯೋಜನೆಯು ನಿರ್ದಿಷ್ಟವಾಗಿ ೧೧ ದಶಲಕ್ಷ ಉದ್ಯೋಗಗಳನ್ನು ಕಲ್ಪಿಸಿಕೊಡುವದಲ್ಲದೆ, ಬರುವ ೧೦ ವರ್ಷಗಳಲ್ಲಿ ನಿರುದ್ಯೋಗ ಸಮಸ್ಯೆಗೆ ಸಂಪೂರ್ಣ ಪರಿಹಾರವೊದಗಿಸುವ ಭರವಸೆಯನ್ನು ಕೊಡುತ್ತಿದೆ.

ಯೋಜನೆಯ ಗಾತ್ರ

ಯೋಜನೆಯ ಗಾತ್ರ ಎಷ್ಟಿದೆ? ಹಾಗೂ ಆರ್ಥಿಕ ವ್ಯವಸ್ಥೆಯ ವಿವಿಧಾಂಗಗಳು ಯಾವ ಪ್ರಮಾಣದಲ್ಲಿ ಬೆಳೆಯಲಿವೆ ಎಂಬದನ್ನು ತಿಳಿದುಕೊಳ್ಳಲು, ಯೋಜನೆಯ ಮೇಲೆ ಎಷ್ಟು ಹಣವು, ಹೇಗೆ ವಿನಿಯೋಗಿಸಲ್ಪಡುವದೆಂಬದನ್ನು ನೋಡಬೇಕಾಗುವದು. ಯೋಜನೆಯ ಅವಧಿಯಲ್ಲಿ ಒಟ್ಟು ೫,೬೦೦ ಕೋಟಿ ರೂಪಾಯಿಗಳನ್ನು ವಿನಿಯೋಗಿಸುವದಾಗಿ ಅಂದಾಜು ಮಾಡಲಾಗಿದೆ. ಈ ಹಣವು ವಿವಿಧ ಕ್ಷೇತ್ರಗಳಲ್ಲಿ ಈ ರೀತಿ ಹಂಚಲ್ಪಡುವದು.

ದ್ವಿತೀಯ ಯೋಜನೆಯಲ್ಲಿ ಹಣದ ವಿನಿಯೋಗ

ವಿಭಾಗ	ಹಣ (ಕೋಟಿ ರೂ. ಗಳಲ್ಲಿ)	ಒಟ್ಟು ಹಣದ ನೂರಕ್ಕೆ
೧ ಒಕ್ಕಲತನ ಹಾಗೂ ಸಮಾಜ ವಿಕಾಸ (ನೀರಾವರಿ ಹಾಗೂ ಮಹಾಪೂರ ನಿಯಂತ್ರಣವನ್ನೊಳಗೊಂಡು)	೯೫೦	೧೬.೧
೨ ಯಂತ್ರಶಕ್ತಿ (Power)	೫೦೦	೮.೯
೩ ಸಾರಿಗೆ ಮತ್ತು ಸಂಪರ್ಕ	೯೦೦	೧೬.೧
೪ ಉದ್ಯೋಗಗಳು ಮತ್ತು ಗಣಿ (ಚಿಕ್ಕ ಉದ್ದಿಮೆಗಳನ್ನೊಳಗೊಂಡು)	೧೪೦೦	೨೫.೦
೫ ಕಟ್ಟಡ ನಿರ್ಮಾಣ (ಮನೆ, ಅಂಗಡಿ, ಶಾಲೆ, ಆಸ್ಪತ್ರೆಗಳು ಇ.)	೧೩೫೦	೨೪.೦
೬ ಇನ್ನಿತರ	೫೦೦	೮.೯
ಒಟ್ಟು	೫,೬೦೦	೧೦೦.೦

ಈ ಅಂಕಿಸಂಖ್ಯೆಗಳಿಂದ ದ್ವಿತೀಯ ಯೋಜನೆಯ ಗಾತ್ರದ ಕಲ್ಪನೆ ಬಂದಿರಲು ಸಾಕು. ಮೊದಲ ಯೋಜನೆಯಲ್ಲಿ ಒಟ್ಟು ವಿನಿಯೋಗಿಸಲಾದ ಹಣವು ಸುಮಾರು ೩,೫೦೦ ರಿಂದ ೩,೬೦೦ ಕೋಟಿ ರೂಪಾಯಿ ಮಾತ್ರವಿತ್ತು. ಆದ್ದರಿಂದ ಪ್ರಸ್ತುತ ಯೋಜನೆಯಲ್ಲಿ ನೂರಕ್ಕೆ ೫೫ ರಷ್ಟು ಹೆಚ್ಚಳವಾಗಿದೆಯೆಂಬ ಮಾತು ನಿಚ್ಚಳವಿದೆ.

ಮೂಲ ಉದ್ಯೋಗಗಳಿಗೆ ಪ್ರಾಧಾನ್ಯ

ಮೇಲಿನ ಆರು ವಿಭಾಗಗಳನ್ನು ತುಲನಾತ್ಮಕವಾಗಿ ನೋಡಿದುದಾದರೆ, "ಗಣಿ ಮತ್ತು ಉದ್ಯೋಗ" —ಈ ವಿಭಾಗವೇ ಅತಿ ದೊಡ್ಡದಾಗಿದ್ದುದು ಕಂಡುಬರುವದು. ಈ ರೀತಿ ಎರಡನೆಯ ಯೋಜನೆಯಲ್ಲಿ ಉದ್ದಿಮೆಗಳಿಗೆ, ವಿಶೇಷವಾಗಿ ಮೂಲ ಉದ್ದಿಮೆಗಳಿಗೆ (Basic Industries), ಹೆಚ್ಚು ಪ್ರಾಧಾನ್ಯವೀಯಲಾಗಿದೆ. ಕಬ್ಬಿಣ ಮತ್ತು ಉಕ್ಕು ಈ ಉದ್ಯಮದ ಬೆಳವಣಿ

ಗಗೆ ೪೨೦ ಕೋಟಿ; ಆ ಸಂಬಂಧದ ಯಂತ್ರ ಸಾಮುಗ್ರಿಗಳಿಗೆ ೧೫೦ ಕೋಟಿ; ಫ್ಯಾಕ್ಟರಿಗಳಿಗೆ ಅವಶ್ಯವಿರುವ ಸರಕುಗಳನ್ನು ಉತ್ಪಾದಿಸುವ ಉದ್ಯೋಗಗಳಿಗೆ ೧೦೦ ಕೋಟಿ; ಖನಿಜಗಳ ಉದ್ಯೋಗಗಳಿಗೆ ೭೫ ಕೋಟಿ; ಕೃತ್ರಿಮ ಗೊಬ್ಬರಕ್ಕಾಗಿ ೧೦೦ ಕೋಟಿ—ಈ ರೀತಿ ದೊಡ್ಡ ಪ್ರಮಾಣದ ಹಾಗೂ ಮೂಲ ಉದ್ದಿಮೆಗಳ ಅಭಿವೃದ್ಧಿಗೆ ಹಣವನ್ನು ಹಂಚಲಾಗಿದೆ. ಇವಲ್ಲದೆ ಅಲುಮಿನಿಯುಮ್, ಇಲೆಕ್ಟ್ರಿಕ್ ಯಂತ್ರ ಸಾಮುಗ್ರಿಗಳು ಮುಂತಾದವುಗಳ ಉತ್ಪಾದನೆಗೂ ಅವಶ್ಯಕ ಅನುವು ಮಾಡಿಕೊಡಲಾಗಿದೆ.

ಗ್ರಾಮೋದ್ಯೋಗಗಳು

ದೊಡ್ಡ ಉದ್ದಿಮೆಗಳಿಗೆ ಪ್ರಾಧಾನ್ಯವಿತ್ತ ಮಾತ್ರಕ್ಕೆ ಚಿಕ್ಕ ಪ್ರಮಾಣದ ಹಾಗೂ ಗ್ರಾಮೀಣ ಉದ್ಯೋಗಗಳನ್ನು ಯೋಜನೆಯು ದುರ್ಲಕ್ಷಿಸಿದೆಯೆಂತಲ್ಲ. ನಿಜವಾಗಿ ನೋಡಿದರೆ ದ್ವಿತೀಯ ಯೋಜನೆಯಲ್ಲಿ ಗ್ರಾಮೋದ್ಯೋಗಗಳ ಪಾತ್ರವು ದ್ವಿವಿಧ ಮಹತ್ವವನ್ನು ತಾಳಿದೆ. ದೊಡ್ಡ ಉದ್ದಿಮೆಗಳ ಜೊತೆಗೇನೇ ಈ ಉದ್ದಿಮೆಗಳೂ ಏಕರೀತಿ ಬೆಳೆದುಬರಬೇಕೆಂಬ ಅಭಿಪ್ರಾಯವು ಹೊಸ ಯೋಜನೆಯ ತಳಹದಿಯಾಗಿದೆಯೆಂದರೂ ತಪ್ಪಾಗಲಿಕ್ಕಿಲ್ಲ. ಬಂಡವಾಳವು ತುಟಾಗ್ರವಿದ್ದ ನಮ್ಮಂಥ ಆರ್ಥಿಕ ವ್ಯವಸ್ಥೆಯಲ್ಲಿ ಇಂಥ ಉದ್ಯೋಗಗಳು ಒಂದು ವಿಶಿಷ್ಟರೀತಿಯಿಂದ ತುಂಬಾ ಲಾಭದಾಯಕವಿವೆ.

ಬೆಳೆಯುತ್ತಿರುವ ನಿರುದ್ಯೋಗವನ್ನು ಹೋಗಲಾಡಿಸಲು ಈ ಉದ್ಯೋಗಗಳು ಬಹಳಷ್ಟು ಸಹಾಯಕವಾಗುವವೆಂದು ಭಾವಿಸಲಾಗಿದೆ. ಆದ್ದರಿಂದಲೇ ೨೦೦ ಕೋಟಿ ರೂಪಾಯಿಗಳಷ್ಟು ಹಣವನ್ನು ಅವುಗಳ ಅಭಿವೃದ್ಧಿಗಾಗಿ ಇರಿಸಲಾಗಿದೆ. ಈ 'ಗೃಹೋದ್ಯೋಗಗಳು ಮತ್ತು ಕಟ್ಟಡ ರಚನೆ' ಇವೆರಡೂ ಕೂಡಿ ೩೦ಲಕ್ಷದಷ್ಟು ಜನರಿಗೆ ಉದ್ಯೋಗವನ್ನು ಒದಗಿಸಬಲ್ಲವೆಂದು ಅಂದಾಜು ಮಾಡಿದ್ದಾರೆ.

ಗ್ರಾಮೋದ್ಯೋಗಗಳ ಪಾತ್ರದ ಇನ್ನೊಂದು ಮುಖವೆಂದರೆ, ಅವು ಬೆಳೆಯುತ್ತಿರುವ ದಿನ ಬಳಕೆ ವಸ್ತುಗಳ (Consumer's goods) ಬೇಡಿಕೆಯನ್ನು ಪೂರೈಸಲು ಬಹಳಷ್ಟು ಮಟ್ಟಿಗೆ ಶಕ್ತವಾಗುವವು. ಜನರ ಆದಾಯ ಹೆಚ್ಚಿದಂತೆ, ಅವರ ಬಳಕೆಯ ವಸ್ತುಗಳ ಬೇಡಿಕೆಯೂ ಹೆಚ್ಚುತ್ತ ಹೋಗುವದು ಸ್ವಾಭಾವಿಕವಿದೆ. ಅಂತೆಯೇ, ಆ ಬೇಡಿಕೆಯನ್ನು ಪೂರೈಸಲು ಚಿಕ್ಕ ಪ್ರಮಾಣದ ಉದ್ದಿಮೆಗಳನ್ನು ಬೆಳೆಯಿಸಿಕೊಂಡು ಹೋಗುವ ಯೋಜನೆಯನ್ನು ಮಾಡಲಾಗಿದೆ.

ಒಕ್ಕಲತನ

ಕೃಷಿಪ್ರಧಾನವಾದ ದೇಶದ ಯಾವ ಯೋಜನೆಯಲ್ಲಿಯೂ ಒಕ್ಕಲತನವನ್ನು ಕಡೆಗಣಿಸುವದು ಶಕ್ಯವೇ ಇಲ್ಲ. ಅವಿರತವಾಗಿ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರವನ್ನೊದಗಿಸುವ ಮೂಲಭೂತ ಮೇಟವಿದ್ಯೆಗೆ, ಮೊದಲಯೋಜನೆಯಲ್ಲಿದ್ದಷ್ಟು ಹಣ ಸಲ್ಲದಿದ್ದರೂ ಸಾಕಷ್ಟು ಅನುವು ಇದೆ.

ಉತ್ಪಾದನೆಯ ಗುರಿ

ಬರಿ ಹಣದ ವಿನಿಯೋಗದ ಪಟ್ಟಿಯಿಂದ ದೇಶದ ಆರ್ಥಿಕ ಅಭಿವೃದ್ಧಿಯ ಯೋಜನೆ ಸಿದ್ಧವಾದಂತಾಗಲಿಲ್ಲ. ಯೋಜನೆಯು ವ್ಯಾವಹಾರಿಕವಾಗಬೇಕಾದರೆ ಅದು ಬರಿ ಹಣ ಯೋಜನೆಯಾಗಿರದೆ ಉತ್ಪಾದನೆಯ ಯೋಜನೆಯಾಗಿರಬೇಕು. ಅಂತೆಯೇ ಯೋಜನೆಯನ್ನು ರಚಿಸಿದವರು ವಿವಿಧ ಕ್ಷೇತ್ರಗಳಲ್ಲಿಯ ಉತ್ಪಾದನೆಯನ್ನು ಆ ಆ ವಿಭಾಗದ ಸರಕುಗಳ ಮುಖೇನ ನಮ್ಮೆದುರು ಚಿತ್ರಿಸಿದ್ದಾರೆ. ಇದರಿಂದ ಸರ್ವರಿಗೆ ಯೋಜನೆಯ ನಿಜವಾದ ಸ್ವರೂಪದ ನಿರ್ದಿಷ್ಟ ಹಾಗೂ ನಿಚ್ಚಳ ಚಿತ್ರದ ದರ್ಶನವಾಗುವದರಲ್ಲಿ ಸಂದೇಹವಿಲ್ಲ.

ಒಕ್ಕಲತನದ ಕ್ಷೇತ್ರದಲ್ಲಿ ಆಹಾರದ ಕಾಳುಕಡಿಗಳ ಉತ್ಪಾದನೆಯನ್ನು ೬೬ ರಿಂದ ೭೬ ದಶಲಕ್ಷ ಟನ್ನುಗಳಷ್ಟು ಹೆಚ್ಚಿಸಲಾಗುವದು. ಹತ್ತಿಯ ಉತ್ಪಾದನೆ ೪·೨ ದಶಲಕ್ಷ ಗಂಟುಗಳಿಂದ (Bales) ೫·೮ ದಶಲಕ್ಷ ಗಂಟುಗಳಿಗೆ ಏರುವದು. ಹಾಗೇ ಚಹ, ಕಬ್ಬು, ಎಣ್ಣೆಕಾಳುಗಳು—ಇವೆಲ್ಲವುಗಳ ಉತ್ಪಾದನೆಯ ಅಂಕಿಗಳನ್ನೂ ನಿರ್ದಿಷ್ಟಪಡಿಸಲಾಗಿದೆ.

ಒಕ್ಕಲತನದ ಉತ್ಪಾದನೆಯು ಈ ರೀತಿ ಹೆಚ್ಚುವದು ಪ್ರಾಮುಖ್ಯವಾಗಿ ನೀರಾವರಿ ಕ್ಷೇತ್ರದ ವಿಸ್ತರಣದಿಂದ ಸಾಧ್ಯವಾಗುವದು. ಈಗಿದ್ದ ಒಟ್ಟು ನೀರಾವರಿ ಕ್ಷೇತ್ರ ೭೦ ದಶಲಕ್ಷ ಎಕರೆ ಇದ್ದು ಯೋಜನೆಯ ಅವಧಿಯಲ್ಲಿ ಅದನ್ನು ೧೦೦ದಶಲಕ್ಷ ಎಕರೆಗೆ ಒಯ್ದು ಮುಟ್ಟಿಸಲಾಗುವದು.

ಗ್ರಾಮೀಣ ಭಾರತದ ಅಭಿವೃದ್ಧಿಯ ದಾರಿಯಲ್ಲಿ ಇನ್ನೊಂದು ಮಹತ್ವದ ಹೆಜ್ಜೆಯೆಂದರೆ, ಸಮಾಜ ವಿಕಾಸ ಯೋಜನೆ ಹಾಗೂ ರಾಷ್ಟ್ರೀಯ ವಿಸ್ತರಣ ಯೋಜನೆ, ಇವೆರಡೂ ಬೆಳೆಯುತ್ತ ಹೋಗಿ ಯೋಜನೆಯು ಕೊನೆಗೊಳ್ಳುವಾಗಿ ಭಾರತದ ಎಲ್ಲ ಹಳ್ಳಿಗಳನ್ನೂ ತಮ್ಮ ಕಕ್ಷೆಯಲ್ಲಿ ತರುವವು. ಈ ಯೋಜನೆಗಳು ಈಗಾಗಲೇ ಪ್ರದರ್ಶಿಸಿದ ಯಶಸ್ಸನ್ನು ನೆನೆದರೆ, ಇಡಿಯ ಗ್ರಾಮೀಣ ಭಾರತಕ್ಕೆ ಎಷ್ಟು ಲಾಭವಾಗುವದೆಂಬುದರ ಕಲ್ಪನೆ ಬರದಿರದು.

ರೈತರಿಗೆ ಸುಲಭವಾಗಿ ಹಾಗೂ ಯೋಗ್ಯ ರೀತಿಯಿಂದ ಸಾಲ ಕೊಡುವ ಯೋಜನೆಯೊಂದನ್ನು, ಆ ಸಮಸ್ಯೆಯನ್ನು ಕೂಲಂಕಷವಾಗಿ ಅಭ್ಯಸಿಸಿದ ರಿಜರ್ವ ಬ್ಯಾಂಕಿನ ಸಮಿತಿಯವರು, ಸರಕಾರಕ್ಕೆ ಇತ್ತೀಚೆಗೆ ಸಾದರಪಡಿಸಿದ್ದಾರೆ. ಆದರಲ್ಲಿ ಸಾಲದ ಸೌಲಭ್ಯಗಳಲ್ಲದೆ, ಒಕ್ಕಲತನ ಹುಟ್ಟುವಳಿಯ ಮಾರಾಟ, ಗುದಾಮುಗಳ (Warehouses) ನಿರ್ಮಾಣ—ಇವೇ ಮುಂತಾದ ವಿಷಯಗಳ ಬಗ್ಗೆ ಪ್ರತ್ಯಕ್ಷ ಕ್ರಮಗಳನ್ನು ಸೂಚಿಸಿದ್ದಾರೆ. ಅವು ಕಾರ್ಯರೂಪಕ್ಕಿಳಿದರೆ, ಹಳ್ಳಿಯ ಜನರ ಬಹಳಷ್ಟು ಸಮಸ್ಯೆಗಳು ಪರಿಹಾರವಾಗುವವು.

ಇನ್ನೂ ದೊಡ್ಡ ಉದ್ಯೋಗಗಳೆಂದರೆ, ಉಕ್ಕಿನ ಉತ್ಪಾದನೆಯು ೫ ದಶಲಕ್ಷ ಟನ್ನುಗಳಿಗೆ ಹೋಗಬೇಕಾಗಿದೆ. ಇದಕ್ಕಾಗಿ ದೇಶದಲ್ಲಿ ಮೂರು ಹೊಸ ಕಬ್ಬಿಣ ಕಾರಖಾನೆಗಳನ್ನು ಸ್ಥಾಪಿಸಲಾಗುವದು. ಅದರಂತೆಯೇ ಜನರೇಟರು, ಟರ್ಬಾಯಿನ್ ಮೊದಲಾದ ಇಲೆಕ್ಟ್ರಿಕ್ ಯಂತ್ರ ಸಾಮಗ್ರಿಗಳು, ರೇಲ್ವೆ ಎಂಜಿನ್ನು ಡಬ್ಬಿ ಹಾಗೂ ವಾಗಿನ್ನುಗಳು—ಇವೆಲ್ಲವನ್ನೂ ಎಷ್ಟು ಅಧಿಕ ಮಾನದಿಂದ ಉತ್ಪಾದಿಸಬೇಕೆಂಬದನ್ನು ಸ್ಪಷ್ಟಪಡಿಸಲಾಗಿದೆ. ಕೃತಕ ಗೊಬ್ಬರದ ಬೇಡಿಕೆ ಹೆಚ್ಚಾಗುತ್ತ ನಡೆದುದನ್ನು ಅನುಲಕ್ಷಿಸಿ ಮತ್ತೆ ಮೂರು ಸಿಂದ್ರಿಯಂಥ ಗೊಬ್ಬರ ಕಾರಖಾನೆಗಳನ್ನು ಆರಂಭಿಸುವ ಯೋಜನೆ ಮಾಡಲಾಗಿದೆ. ಬಟ್ಟೆಯ ಉತ್ಪಾದದೆ ಗಿರಣಿಗಳಿಂದ ೫,೫೦೦ ದಶ ಲಕ್ಷ ಯಾರ್ಡಿನಷ್ಟು ಆದರೆ, ಖಾದಿ ಮತ್ತು ಕೈಮಗ್ಗದ ಬಟ್ಟೆಯ ಉತ್ಪಾದನೆ ೩,೨೦೦ ದಶಲಕ್ಷ ಯಾರ್ಡು ಆಗಬೇಕಾಗಿದೆ. ಗಿರಣಿ ಬಟ್ಟೆಯನ್ನು ಆದಷ್ಟು ನಿರ್ಯಾತಮಾಡಿ, ಕೈಮಗ್ಗದ ಬಟ್ಟೆಯನ್ನು ದೇಶದಲ್ಲಿ ಉಪಯೋಗಿಸುವದನ್ನು ಪ್ರೋತ್ಸಾಹಿಸುವದರಲ್ಲಿ ಬರುವದು.

೩,೦೦೦ ಮೈಲಿನಷ್ಟು ಹೆಚ್ಚು ರೇಲ್ವೆಹಳಿಯನ್ನು ಹಾಕುವದು ಮತ್ತು ೬ ದಶಲಕ್ಷ (kwh)ದಷ್ಟು ಯಂತ್ರಶಕ್ತಿಯನ್ನು ಹೆಚ್ಚಿಸುವ ಯೋಜನೆಯಿದೆ.

ಇವಲ್ಲದೆ ಶಿಕ್ಷಣ, ಆರೋಗ್ಯ, ಸಂಪರ್ಕ ಮುಂತಾದ ಕಲ್ಯಾಣಕಾರ್ಯಗಳ ಕ್ಷೇತ್ರವೂ ವಿಸ್ತರಿಸುತ್ತ ಹೋಗುವದು.

ಯೋಜನೆಗಾಗಿ ಹಣ

ಇವೆಲ್ಲ ಸಂಗತಿಗಳನ್ನು ಅರಿತ ನಂತರ ಯೋಜನೆಯ ಗಾತ್ರವು ಬಹು ದೊಡ್ಡದಿದೆಯೆಂದು ತಿಳಿದುಬರುವದು. ಈ ಯೋಜನೆಗಾಗಿ ಹಣ ಹೇಗೆ ಬರುವದೆಂಬದು ಮುಂದಿನ ಮಹತ್ವದ ಪ್ರಶ್ನೆ.

ಒಟ್ಟು ವಿನಿಯೋಗಿಸಲಿರುವ ೫,೬೦೦ ಕೋಟಿ ರೂಪಾಯಿಗಳಲ್ಲಿ ಸರಕಾರದ ಪಾಲು ೩,೪೦೦ ಕೋಟಿ ರೂಪಾಯಿ ಇದ್ದರೆ, ಖಾಸಗೀ ವಿಭಾಗದ ಪಾಲು ೨,೨೦೦ ಕೋಟಿ ರೂಪಾಯಿ ಇದೆ

ಇದರಲ್ಲಿ ಸ್ಟರ್ಲಿಂಗದ ಶಿಲ್ಕು ಹಣದಿಂದ ೧೦೦-೧೫೦ ಕೋಟಿ ರೂಪಾಯಿ ಪಡೆಯಬಹುದು, ಸುಮಾರು ೫೦೦ ಕೋಟಿ ರೂಪಾಯಿಯಷ್ಟು ವಿದೇಶೀ ಸಹಾಯ ಸಿಕ್ಕಬಹುದು. ಉಳಿದ ೫,೦೦೦ ಕೋಟಿಯನ್ನು ನಾವೇ ನಮ್ಮಲ್ಲಿಯ ಉಳಿತಾಯದಿಂದ ಸಂಚಯಿಸಬೇಕಾಗಿದೆ.

ಕರ ವಿಚಾರಣಾ ಸಮಿತಿಯವರ ಅಂದಾಜಿನಂತೆ ನಮ್ಮ ಒಟ್ಟು ಉಳಿತಾಯವು ರಾಷ್ಟ್ರೀಯ ಆದಾಯದ ೬%ರಷ್ಟು ಮಾತ್ರವಿದೆ. ಅದನ್ನು ನಾವೀಗ ಯೋಜನೆಗೆ ಹಣ ಒದಗಿಸಬೇಕಾದರೆ ೧೧%ರಷ್ಟಕ್ಕೆ ಹೆಚ್ಚಿಸಬೇಕಾಗುವದು. ಇಷ್ಟಾದರೂ ಸುಮಾರು ೧,೦೦೦ ಕೋಟಿ ರೂಪಾಯಿಯಷ್ಟು ಕೊರತೆ ಬರುವದು ಅನಿವಾರ್ಯವೆಂದೇ ಭಾವಿಸಲಾಗಿದೆ. ಈ ಹಣಕ್ಕಾಗಿ ಕೊರತೆಯ ಹಣಕಾಸನ್ನೇ (Deficit finance) ಮೊರೆಹೊಗಬೇಕಾಗಬಹುದು. ಆದರೆ ಅಷ್ಟು "ಸುರಕ್ಷಿತ ಮಟ್ಟ"ವೆಂದು ಯೋಜನಾ ಆಯೋಗವು ಅಭಿಪ್ರಾಯಪಡುವದು.

ಇದು ಸಾಧ್ಯವೇ ?

ಯೋಜನೆಯನ್ನು ಅಭ್ಯಸಿಸಿದ ಕೆಲ ಅರ್ಥಶಾಸ್ತ್ರಜ್ಞರು ಅದು 'ಮಹಾಯೋಜನೆಯಿದೆ'ಯೆಂತಲೂ ಅದರಲ್ಲಿ ವಿನಿಯೋಗಿಸಲಿರುವ ಹಣವನ್ನು ಸದ್ಯದ ಪರಿಸ್ಥಿತಿಯಲ್ಲಿ ಸಂಚಯ ಮಾಡುವದು ಕಷ್ಟಸಾಧ್ಯವೆಂತಲೂ ಅಭಿಪ್ರಾಯಪಟ್ಟಿದ್ದಾರೆ. ಯೋಜನೆಯ ಅವಧಿಯಲ್ಲಿ ಹೆಚ್ಚಾದ ಆದಾಯದ ೧/೩ದಷ್ಟು ಹಣವನ್ನು ಪುನರಪಿ ವಿನಿಯೋಗಿಸುವದು ಶಕ್ಯವಾಗದೆ, ಅದು ಅನುಭೋಗದಲ್ಲಿ ವೆಚ್ಚವಾಗಬಹುದೆಂದೂ ಅವರ ಮತ. ಅಲ್ಲದೆ ಕಡಿಮೆ ಆದಾಯವಿದ್ದವರ ಮೇಲೆ ಕರಭಾರವು ಈಗಾಗಲೇ ಸಾಕಷ್ಟು ಇದ್ದು, ಅದನ್ನು ಹೆಚ್ಚಿಸುವದರಿಂದ—ವಿಶೇಷವಾಗಿ ಜೀವನಾವಶ್ಯಕ ವಸ್ತುಗಳ ಮೇಲೆ ಅನಿಷ್ಟ ಪರಿಣಾಮವಾಗಬಹುದೆಂಬ ಸಂಶಯವನ್ನು ಕೆಲವರು ವ್ಯಕ್ತಮಾಡಿದ್ದಾರೆ. ಹಣದ ಕೊರತೆಯನ್ನು ಹೋಗಲಾಡಿಸಲು, ನೋಟುಗಳನ್ನು ಮುದ್ರಿಸುವದು ದೇಶದ ಹಿತದ ದೃಷ್ಟಿಯಿಂದ ಒಳ್ಳೆಯದಲ್ಲ. ಸುರಕ್ಷಿತ ಮಟ್ಟವೆಂದು ಬಗೆಯಲಾದ ೧೦೦೦ ಕೋಟಿ ರೂಪಾಯಿಯಷ್ಟು ನಿರ್ಮಾಣವಾದ ಹಣದಿಂದ ಅತಿಪ್ರಸರಣವಾಗುವ ಸಂಭವ ಬಹಳವಿದೆಯೆಂದೂ ಹೇಳಲಾಗುತ್ತಿದೆ.

ಒಟ್ಟಿನ ಮೇಲೆ

ಯೋಜನೆ ಮಹದಾಕಾರದ್ದಿದೆಯೆಂಬದೇನೊ ಸರಿ. ಅದು ಹಾಸಿಗೆಗಿಂತಲೂ ಉದ್ದ ಕಾಲು ಚಾಚುವದೆಂಬ ಮಾತಿನಲ್ಲೂ ತಥ್ಯವಿದೆ. ಆದರೆ ತಾತ್ಪೂರ್ತಿಕವಾಗಿ ಕಾಲು ಹಾಸಿಗೆಯ ಹೊರಗೆ ಬಿದ್ದರೂ ಕೊನೆಯ ವಿಶ್ಲೇಷಣೆಯಲ್ಲಿ, ಹಾಸಿಗೆಯೇ ಕಾಲಿನಷ್ಟು ಉದ್ದವಾಗುತ್ತಿದ್ದರೆ, ಏಕೆ ಬೇಡ ? ಎಂಬದನ್ನೂ ವಿಚಾರಿಸಬೇಕಾಗಿದೆ. ಯೋಜನೆಯು ಭವಿಷ್ಯತ್ತಿನಲ್ಲಿ ಮೂಲ ಉದ್ಯೋಗಗಳ ಬೆಳವಣಿಗೆಯಿಂದ ಅರ್ಥವ್ಯವಸ್ಥೆಯ ಬಣ್ಣವನ್ನೇ ಬದಲಾಯಿಸಬಲ್ಲುದಾಗಿದೆ. ಮೇಲೆ ಹೇಳಿದಂತೆ ಜನರ ಜೀವನ ಮಟ್ಟವನ್ನು ಹೆಚ್ಚಿಸಬೇಕಾದರೆ ಇಂಥ ದೊಡ್ಡ ಯೋಜನೆಗಳಿಲ್ಲದೆ ಸಾಧ್ಯವೇ ಇಲ್ಲ.

"ಕಣ್ಣೀರಿಲ್ಲದ ಯೋಜನೆಯಿಲ್ಲ" ವೆಂಬ ಮಾತಿನಂತೆ, ಅಭಿವೃದ್ಧಿಯ ಮೊದಲಿನ ಕೆಲ ವರ್ಷಗಳಲ್ಲಿ ಜನರಿಗೆ ತೊಂದರೆಯಾಗುವದು. ಸ್ವಾಭಾವಿಕವೇ ಇದೆ. ಇಂದಿನ ತ್ಯಾಗದಿಂದ ನಾಳಿಗೆ ಸುಖ-ಸೌಲಭ್ಯ ಸಿಕ್ಕುತ್ತವೆಯೆಂಬದನ್ನು ಮರೆಯದೆ ಅಭಿವೃದ್ಧಿ ಯೋಜನೆಯ ನೊಗಕ್ಕೆ ಹೆಗಲು ಕೊಡುವ ಕಾಲವೀಗ ಬಂದಿದೆ.

ಯೋಜನೆ 'ಆತ್ಮಾನಂ ಆತ್ಮನೈವ ಉದ್ಧರೇತ್' ತತ್ವದ ಮೇಲೆ ನಿಂತಂತಿದೆ. ಏಕೆಂದರೆ ದೊಡ್ಡ ಪ್ರಮಾಣದ ವಿದೇಶೀಯ ಸಹಾಯದ ಮೇಲೆ ಅದು ಬಹಳಷ್ಟು ಅವಲಂಬಿಸಿಲ್ಲ. ಅಂತೆಯೇ ಅದರ ಭಾರವು ಜನಸಾಮಾನ್ಯರ ಮೇಲೆ ಬೀಳುವದೂ ಸಹಜವಾಗಿದೆ.

ಎಲ್ಲಕ್ಕೂ ಹೆಚ್ಚಾಗಿ ಎರಡನೆಯ ಯೋಜನೆಯನ್ನು ಆರಂಭಿಸುವಾಗ ನಮಗೆ ಎರಡು ವಿಧದ ಲಾಭಗಳಿವೆ. ಮೊದಲ ಯೋಜನೆಯಿಂದ "ಯೋಜನೆಯೆಂದರೇನು?" ಎಂಬುದನ್ನು ಸಾಮಾನ್ಯರೂ ಅರಿತಿದ್ದಾರೆ. ಆದ್ದರಿಂದ ಅವರ ಸಹಕಾರವು ಹೆಚ್ಚು ಪರಿಣಾಮಕಾರಿಯಾಗಿ ಎರಡನೆಯ ಯೋಜನೆಯಲ್ಲಿ ಬರುವದರಲ್ಲಿ ಸಂಶಯವಿಲ್ಲ. ಅದೇ ರೀತಿ ಮೊದಲನೆಯ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವಾಗ ಆಳವಾದ ಅನುಭವ ನಮಗೆ ದೊರಕಿದೆ. ಈ ಸಹಕಾರ, ಅನುಭವ, ಮತ್ತು ತ್ಯಾಗಕ್ಕೆ ಸಿದ್ಧ ಮನೋವೃತ್ತಿ ಇವು ಯೋಜನೆಯನ್ನು ಅಧಿಕ ರೀತಿಯಿಂದ ಆಚರಣೆಗೆ ಇಳಿಸುವದರಲ್ಲಿ ಸಹಾಯವಾಗುವವು.



ತೇಲಿ ಹೋದ ಮೋಡ

[ಚಿಕ್ಕ ಕತೆ]



ಲೇಖಿಕೆ : ಶ್ರೀಮತಿ ಗೀತಾದೇವಿ ಕುಲಕರ್ಣಿ

ಗೋಡೆಯಲ್ಲಿದ್ದ ಗಡಿಯಾರದಲ್ಲಿ ಗಂಟೆ ಹನ್ನೊಂದಾಗಿದ್ದರೂ ಹಾಸಿಗೆಯಲ್ಲಿ ಹೊರಳಾಡುತಿದ್ದ ಆನಂದನಿಗೆ ನಿದ್ದೆ ಬಂದಿರಲಿಲ್ಲ.

ರಾತ್ರೆಯ ಆ ನಿಃಸ್ತಬ್ಧ, ನೀರವತೆ ಆವನನು ಕೆಣಕುವಂತೆ ಕಾಣುತ್ತಿತ್ತು. ನಾಲ್ಕೈದು ದಿನಗಳ ಜ್ವರದ ತಾಪದಿಂದ ಜರ್ಜರಿತನಾದ ಆನಂದ ತನ್ನೆಲ್ಲ ತಾಳ್ಮೆಯನ್ನು ಕಳೆದುಕೊಂಡಿದ್ದ. ಮೂರು ತಾಸಿನ ಹಿಂದೆ ತಾನಾಗಿಯೇ ಮಡದಿಯನ್ನು ನಾಟಕಕ್ಕೆ ಕಳುಹಿದ್ದ. ಆದರೀಗ ಅವನ ಮನಸ್ಸು ಇದಕ್ಕೆ ತೀರ ವಿರುದ್ಧವಾಗಿ ಯೋಚಿಸ ತೊಡಗಿತು. ಅವನು ಆಲೋಚಿಸಿದಂತೆಲ್ಲ ಶೈಲೆಯ ಅಂದಿನ ನಡವಳಿಕೆಯೇ ಅವನಿಗೆ ವಿಚಿತ್ರವೆನಿಸತೊಡಗಿತು.

ಅವನಾಗಿಯೇ " ಹೋಗಿ ಬಾ '' ಎಂದದ್ದು ನಿಜ. ಆದರವಳು " ಕಾಯಿಲೆಯ ಪತಿ ಇಂದು ಬೇಡ '' ಎನ್ನಬಾರದಾಗಿತ್ತೇ ? ಅದರ ಬದಲು ನಗುನಗುತ್ತ ಅವರೊಡನೆ ಹೊರಟುಹೋದಳು!

ಹೀಗೆ ಆನಂದ ವಿಚಾರದ ಮಡುವಿನಲ್ಲಿ ಸಿಲುಕಿಕೊಂಡಂತೆ ಅವನ ಮೈಯ ಕಾವೂ ಏರತೊಡಗಿತು. ಅವನೆದುರಿನ ಗೋಡೆಯಲ್ಲಿ ತೂಗ ಹಾಕಿದ್ದ ಶೈಲೆಯ ಭಾವಚಿತ್ರ ಅವನನ್ನೇ ಅಣಕಿಸುವಂತೆ ಕಂಡಿತು. ಸದಾಕಾಲವೂ ಅವನಿಗದು ಸ್ಫೂರ್ತಿ ಕೊಡುವ ಚಿತ್ರ. ಆದರೆ ಇಂದು ಆನಂದನಿಗೆ ಅದು ಒಂದು ಕ್ಷಣಕ್ಕೂ ಬೇಡವಾಯಿತು. ಮುಖ ಹೊರಳಿಸಿ ಇನ್ನೊಂದು ಮಗ್ಗುಲಾದ. ಚಿತ್ರವೇನೋ ಕಣ್ಮರೆಯಾಯಿತು. ಆದರೆ ಅವನ ಮನದಲ್ಲಿ ಬಿಂಬಿಸಿದ ಅವಳ ಚಿತ್ರವನ್ನು ಮರೆಸಲಾದೀತೇ ? ಅಂತೇ ಹಿಂದಿನ ನೆನಪುಗಳೆಲ್ಲ ಒಂದೊಂದಾಗಿ ಕಣ್ಣೆದುರಿಗೆ ಕಟ್ಟಿದಂತಾಯಿತು.

ಆನಂದ ಶೈಲೆಯರ ವಿವಾಹ ! ಓ ! ಅದೆಂಥ ಉಲ್ಲಾಸ— ಉತ್ಸಾಹದ ನೆನಪು ! ಮದುವೆಯೇ ಬೇಡ ಎನ್ನುತ್ತಿದ್ದ ಅವನು ಶೈಲೆಯನ್ನು ಕಂಡ ಮೊದಲಬಾರಿಗೇ ತನ್ನ ಬೇಡ ಎನ್ನುವ ನಿರ್ಧಾರಕ್ಕೆ ಶರಣು ಹೊಡೆದಿದ್ದ. ಹಾಗೇ ಅವಳಿಗೆ ಮಾರು ಹೋಗಿದ್ದ. ಅವನಷ್ಟು ಆಕರ್ಷಿತನಾಗಿದ್ದ.

ಶೈಲಾ ! ಆ ಹೆಸರಿನಲ್ಲಿ ಎಷ್ಟು ಮಾದಕವಿತ್ತೋ ಅಷ್ಟೇ ಮೋಹವಿತ್ತು ಅವಳಲ್ಲಿ ಆನಂದನಿಗೆ. ಜನ " ಹೆಂಡತಿ ಹೇಳಿದಂತೆ ಕುಣಿಯುತ್ತಾನೆ'' ಎಂದರೂ ಅದನ್ನವನು ಲೆಕ್ಕಿಸಿದವನಲ್ಲ. ಆದರೆ ಶೈಲೆಯ ಮನನೊಂದರೆ ಮಾತ್ರ ಅವನೆದೆಯಲ್ಲಿ ಆಗುವ ನೋವಿಗೆ ಮಿತಿ ಇರಲಿಲ್ಲ.

ಒಂದು ಪಾರ್ಟಿಯೇ ಇರಲಿ, ಸಿನೇಮಾ, ಒಂದು ಮೀಟಿಂಗು, ಏನೇ ಇರಲಿ ಶೈಲೆಯನ್ನು ಜೊತೆಗೊಂಡು ಹೋಗುವುದು ಅವನಿಗಭ್ಯಾಸ.

" ಹೆಣ್ಣು ಮನೆಯ ಒಳಗೆ; ಹೊರಗಿನ ಕಾರ್ಯ ಅವಳದಲ್ಲ '' ಎನ್ನುವ ಜನರನ್ನು ಆನಂದ ಮನದಿಂದಲೂ ಮನೆಯಿಂದಲೂ ದೂರ-ಬಹು ದೂರ ವಿಡುತ್ತಿದ್ದ. ಇವನ ಅತಿಯಾದ ಸಮಾನತೆಯ ಹುಚ್ಚು ಶೈಲೆಗೆ ಕೆಲವೊಮ್ಮೆ ಹಿಂಸೆಯಾಗುತ್ತಿತ್ತು. ಆದರವಳಿಗೆ ಪತಿಯಲ್ಲಿರುವ ಅಪಾರ ಪ್ರೀತಿ ಅದನ್ನೆಲ್ಲ ಸಹಿಸುವ ಶಕ್ತಿ ಕೊಟ್ಟಿತ್ತು.

ಮನುಷ್ಯನ ಭವಿತವ್ಯವನ್ನು ಯಾರು ತಾನೇ ಬಲ್ಲರು ? ಸುಖ, ದುಃಖ ಹಿಂದುಮುಂದಾಗಿ ಬಂದಾಗಲೂ ಅದನ್ನು ಎದುರಿಸಲೇಬೇಕಲ್ಲವೇ ? ಜೀವನದಲ್ಲಿ ಈ ಏರು-ಇಳಿತ ಇದ್ದೇ ತೀರಬೇಕು. ಅದೇ ಮನುಷ್ಯನನ್ನು ಪಳಗಿಸುವ ಸಾಧನೆ. ಅದರಲ್ಲಿ ಬಿದ್ದು ಎದ್ದರೇನೇ ಬಾಳನ್ನು ಗೆದ್ದಂತೆ.

ಆನಂದನ ಈಗಿನ ಸ್ಥಿತಿ ನೆನೆದರೆ ಅದೇ ಮಾತು ನೆನಪಿಗೆ ಬರುತ್ತದೆ. ಅವನ 'ನ್ಯಾಶನಲ್ ಫಾರ್ಮಸಿ' ಎಂಥ ಊರ್ಜಿತಸ್ಥಿತಿಯಲ್ಲಿ ಇದ್ದುದು, ಈಗೆರಡು ವರುಷಗಳಿಂದ ತುಸು ಇಳಿಮುಖವಾಗಿದೆ. ಅವನಲ್ಲಿದ್ದ ಹಿಂದಿನ ಉತ್ಸಾಹ ಮರೆಯಾಗಿ, ಅಲ್ಲಿ ಬೇಸರ ತಲೆದೋರಿದೆ. ಮನೆಯಲ್ಲಿ ಮಡದಿ ಮಕ್ಕಳಲ್ಲಿ ಒಂದು ಬಗೆಯ ತಾತ್ಸಾರ. ಇದನ್ನರಿತ ಶೈಲಾ ಹದಮೀರದಂತೆ ಎಲ್ಲವನ್ನೂ ಅಣಿಯಾಗಿ, ಚೊಕ್ಕವಾಗಿ ಮಾಡಿ ತನ್ನ ಸಂಸಾರವನ್ನು ನಡೆಯಿಸುತ್ತಿದ್ದಾಳೆ.

*

ಸಂಜೆಯ ಸಮಯವನ್ನೇ ಇದಿರು ನೋಡುತ್ತಿದ್ದ ಆನಂದ ಇತ್ತೀಚೆಗೆ ಬರಿಗೈಯಿಂದ ಮನೆಗೆ ಹೋಗಲಾರದೆ ಬಾರಿಬಾರಿಗೂ ನೊಂದುಕೊಳುತ್ತಾನೆ. ಮುದ್ದು ಹೇಮಂತನ ಚಿನ್ನಾಟವೇ ಅವನ ಬಾಳಿನಲ್ಲಿ ಜೀವ ತುಂಬುವ ಬುಗ್ಗೆ. ಆದರೆ ಅವನೀಗ ಹಿಂದಿನಂತಿಲ್ಲ. ದಿನದಿನಕ್ಕೆ ಮೌನಿಯಾಗ ತೊಡಗಿದ್ದಾನೆ.

ಶೈಲೆಯೇನು ಇದನ್ನೆಲ್ಲ ತಿಳಿಯದ ಹೆಣ್ಣೆ ? ಅವಳೂ ಹಗಲಿರುಳು ಇದೇ ವಿಚಾರದಲ್ಲಿ ತನ್ನನ್ನು ಮುಳುಗಿಸಿಕೊಂಡಿದ್ದಾಳೆ. ಯಾವ ಪರಿಯಿಂದ ಅವನ ಮನಸ್ಸಿನ ನೋವನ್ನು ಕಡಿಮೆ ಮಾಡಲಿ ? ಹೇಗೆ ಹಿಂದಿನ ನಗುಮೊಗವನ್ನು ಪುನಃ ಪಡೆಯಲಿ ಎಂದು ಸದಾ ಯೋಚಿಸುವುದೇ ಅವಳ ದಿನಚರಿಯಾಗಿದೆ.

ಹಬ್ಬ ಹುಣ್ಣಿಮೆಗೆಂದು ತವರೂರಿನಿಂದ ಅಣ್ಣ ತಮ್ಮ ಕರೆಯಲು ಬಂದರೆ, ಅದಕ್ಕೆ ಏನಾದರೊಂದು ನೆವ ಒಡ್ಡಿ ತಾನು ಹೋಗದೆ ಮನೆಯಲ್ಲೇ ಇದ್ದು ಆನಂದನಿಗೆ ಜೊತೆಕೊಡುತಿದ್ದಳು.

ಆನಂದ ಎಷ್ಟೇ ದಣಿದಿರಲಿ, ರಾತ್ರಿ ಮಲಗುವ ಮುನ್ನ ಕಂದ ಹೇಮಂತನಿಗೆ ಚಿತ್ರ-ವಿಚಿತ್ರ ಕಥೆ ಹೇಳಿ ನಕ್ಕು ನಗಿಸಿ ಮಲಗಿಸುವುದು ಅವನ ಅಚ್ಚುಮೆಚ್ಚಿನ ಕಾರ್ಯಕ್ರಮವು.

ಆದರೆ ಈಗೀಗ ಆನಂದನಿಗೆ ಕಥೆ ಹೇಳುವಷ್ಟು ಮನಸ್ಸು ಪ್ರಸನ್ನವಿರುವುದಿಲ್ಲ. ಅದಕ್ಕೆಂದೇ ಮೈ ಚೆನ್ನಾಗಿಲ್ಲವೆಂದು ಹೇಳಿ ಬೇಗ ಮಲಗಿಬಿಡುವನು. ತನ್ನ ಬಗೆಗಾದ ತಂದೆಯ ಹೊಸ ರೀತಿ ಹೇಮಂತನನ್ನು ಹಟಮಾರಿಯನ್ನಾಗಿ ಮಾಡುತ್ತದೆ. ಅದಕ್ಕೆ ಹೊಣೆ ಆನಂದ-ಶೈಲೆಯರೇ. ಈ ವರೆಗೂ ಅವನನ್ನು ಅವರು ನೋಡಿಕೊಂಡ ರೀತಿಯೇ ಹಾಗಿತ್ತು. ಆನಂದನ ತಂಗಿ ಸುವರ್ಣೆ " ಬಾ ಅಣ್ಣ ನಾನು ನಿನಗೆ ತುಂಬ ಚೆಂದದ ಕತೆ ಹೇಳುವೆ'' ಎಂದು ರಮಿಸಲು ಬಂದಾಗ ಅವಳಿಗೆ ತನ್ನ ಪುಟ್ಟಪುಟ್ಟ ಕೈಗಳಿಂದ ಹೊಡೆದು ಪ್ರತಿಭಟಿಸುತಿದ್ದ. ಕೊನೆಗೆ ನಿರುಪಾಯಳಾದ ಶೈಲೆ ಉಳಿದ ಮನೆಗೆಲಸವನ್ನು ಬದಿಗಿಟ್ಟು ಹೇಮಂತನಿಗೆ ತಾನೇ ಕಥೆ ಹೇಳುವಳು.

ಹೀಗೆಲ್ಲ ಕತೆ ಹೇಳುತ್ತ ಹರಿಶ್ಚಂದ್ರ, ನಳದಮಯಂತಿಯರ ಕತೆಯನ್ನೂ ಹೇಳುವಳು. ಕೇಳುತ್ತ ಕುಳಿತಿದ್ದ ಸುವರ್ಣೆ ಹೇಮಂತರು, ನಗುವ ಸಂದರ್ಭದಲ್ಲಿ ನಕ್ಕುನಕ್ಕು ಕುಣಿದಾಡಿ ದುಃಖದ ಸನ್ನಿವೇಶ ಬಂದಾಗ, ಅಳು ತಡೆಯಲಾರದೆ ಕಂಬನಿ ಸುರಿಸುವರು. ತನ್ನ ಕೋಣೆಯಲ್ಲಿ ಮಲಗಿದ್ದ ಆನಂದನ ಕಿವಿಗೂ ಇವೆಲ್ಲ ಕತೆಗಳು ಬೀಳುತ್ತವೆ. ಅದರಲ್ಲೂ ಕೆಲಕೆಲವು ಮಾತುಗಳು ತನಗೇ ಅನ್ವಯಿಸುವುದಕ್ಕೆ ಎಂದು ತಿಳಿದು ಮಡದಿಯ

ಜಾಣ್ಮೆಗೆ ತಲೆದೂಗುವನು. ಅವಳ ಇಂತಹ ಸಹಕಾರ ಇರದಿದ್ದರೆ ಆನಂದನ ಮನಸ್ಸಿನ ತೂಕ ಎಂದೊ ತಪ್ಪಿಹೋಗುತ್ತಿತ್ತು.

ರಾತ್ರಿ ಎಲ್ಲರೂ ಮಲಗಿದ ಮೇಲೆ ಅಂದು ಹೇಮಂತನಿಗೆ ಹೇಳಿದ ನಳ-ದಮಯಂತಿಯ ಕತೆಯನ್ನು ನೆನಪಿಗೆ ತಂದು ಆನಂದ ಶೈಲೆಯನ್ನು ಪ್ರಶ್ನಿಸಿದ.

“ನಳನಂತೆ ಒಂದಿರುಳು ನಿನ್ನ ಬಿಟ್ಟು ಹೋದೇನೆನ್ನುವ ಭಯವೇ ಶೈಲೂ ನಿನಗೆ? ''

“ಹೇಗೆ ಹೇಳಲಿ? ಗಂಡು ಸಂಕಟ ಕಾಲದಲ್ಲಿ ಏನು ಮಾಡಿಯಾನು ಎನ್ನುವುದು ಕಷ್ಟ. ಇಲ್ಲವಾದರೆ ಪತಿಯನ್ನೇ ನಂಬಿದ ಸತಿಯನ್ನು ಹಾಗೆ ಬಿಟ್ಟು ಹೋಗುವುದು ಸರಿಯೇ? ನಾನು ಕತೆ ಹೇಳಿದ್ದು ಅದಕ್ಕಲ್ಲ, ಸುಮ್ಮನೆ ಮಗುವನ್ನು ಸಮಾಧಾನ ಪಡಿಸಲು'' ಎಂದು ವಿಷಯ ಮರೆಸಲು ಯತ್ನಿಸುವಳು. ಆದರೆ ಆನಂದನಿಗೆ ಆ ಮಾತನ್ನು ಅಲ್ಲಿಗೇ ಮುಗಿಸಲು ಇಚ್ಛೆ ಇಲ್ಲ. ಮಡದಿಯ ಬಾಯಿಂದ ಇನ್ನೂ ಕೇಳಬೇಕೆಂಬ ತವಕ. “ಕತೆ ಹೆಸರಿಗಷ್ಟೇ ಮಗುವಿಗೆ. ಅದು ಹೇಳಿದ್ದು ನನಗೇ. ಅಷ್ಟೂ ತಿಳಿಯದೆಂದು ಭಾವಿಸಿದೆಯಾ? ''

“ ಇರಬಹುದು ಬಿಡಿ. ಇನ್ನು ಆ ಮಾತಿಗೇಕೆ ಸುಮ್ಮನೆ ಎಳೆದಾಟ ? ಕಷ್ಟ ನಮಗಷ್ಟೇ ಅಲ್ಲ. ಹಿಂದಿನ ರಾಜ-ಮಹಾರಾಜರನ್ನೂ ಬಿಟ್ಟಿಲ್ಲವಲ್ಲಾ ಎಂದು ನಿಮಗೆ ನೆನಪಿಗಿರಲಿ— ಎಂದು ಮನಸ್ಸಿಗೆ ಧೈರ್ಯ ತಂದುಕೊಳ್ಳಲು ಹೇಳಿದೆ'' ಎನ್ನುವ ಮಡದಿಯನ್ನು ಮಮತೆಯಿಂದ ತನ್ನೆಡೆಗೆ ಎಳೆದುಕೊಳ್ಳುತ್ತಾನೆ.

ಈ ಪ್ರೀತಿ, ಮಮತೆ, ಸ್ನೇಹ ಶೈಲೆಯನ್ನು ಕೀರ ಹಸುಳೆಯನ್ನಾಗಿ ಮಾಡುತ್ತದೆ. ಇನಿಯನ ಅಪ್ಪುಗೆಯಲ್ಲಿ ಇನ್ನೂ ಮುದುಡಿಕೊಳ್ಳುತ್ತ “ ಸಮಾಜ, ಜನ, ಯಾರ ಪರವೆಯೂ ನನಗಿಲ್ಲ. ಎಲ್ಲ ನೋವು ಸಂಕಟಗಳನ್ನು, ನಗುನಗುತ್ತ ಸಹಿಸಿಕೊಂಡೇನು. ಆದರೆ ನಿಮ್ಮ ನೋವು ತುಂಬಿದ ಮುಖವನ್ನು ಎದುರಿಸಲಾರೆ. ನಿಮ್ಮ ನೊಂದ ಮೊಗವನ್ನು ಕಂಡಾಗ ನನ್ನೆದೆ ಗಾಬರಿಗೊಳ್ಳುತ್ತದೆ. ನೀವು ಯೋಚಿಸುವಷ್ಟು ನಮ್ಮ ಜೀವಕ್ಕೆ ಕಷ್ಟ ಬಂದಿಲ್ಲ. ಜೀವನದಲ್ಲಿ ಇಂಥ ಪ್ರಸಂಗ ಬಂದರೇನೇ ಮನಸ್ಸು ಕಷ್ಟಗೊಳ್ಳುತ್ತದೆ. ಈಗೀಗ ಮತ್ತೆ ಮೊದಲಿನಂತೆ ನಿಮ್ಮ ಫಾರ್ಮಸಿ ಬಲಗೊಳ್ಳತೊಡಗಿದೆ. ಸುಮ್ಮನೆ ಮನಸ್ಸನ್ನು ಗಾಸಿಗೊಳಿಸಬೇಡಿ'' ಎಂದು ಅಳುತ್ತ ತನ್ನ ಮನದಳಲನ್ನು ಪತಿಯ ಮುಂದೆ ತೋಡಿಕೊಳ್ಳುವಳು.

ಒಮ್ಮೊಮ್ಮೆ ಹಟ ಬಂದರೆ ಮಾತ್ರ ಶೈಲೆಯನ್ನು ಸರಿಪಡಿಸುವದು ಕಷ್ಟ. ಆದರೆ ಅದು ಆ ಕ್ಷಣಕ್ಕೆ ಮಾತ್ರ. ಮರುಗಳಿಗೆಯಲ್ಲಿ ಅವಳ ಮುಖ ಅರಳಲೇಬೇಕು. ಇವೆಲ್ಲವೂ ನೆನಪಿಗೆ ಬಂದು ಮನಸ್ಸು ತುಸು ಸ್ತಿಮಿತಕ್ಕೆ ಬಂದಿತ್ತು ಆನಂದನದು.

*

ಹೀಗೆ ಅವನ ವಿಚಾರ ಒಂದು ಘಟ್ಟಕ್ಕೆ ಬಂದು ಮುಟ್ಟುತ್ತಲೇ ದೃಷ್ಟಿ ಮತ್ತೊಮ್ಮೆ ಗಡಿಯಾರದತ್ತ ಹೊರಳಿತು. ಮತ್ತೂ ಅರ್ಧ ಗಂಟೆ ಸರಿದಿದೆ. ಶೈಲೆ ಇನ್ನೂ ಬರಲಿಲ್ಲ ! ಈ ವರೆಗೂ ನಂದಿದ್ದ ಬೆಂಕಿ ಮತ್ತೊಮ್ಮೆ ಪ್ರಜ್ವಲಿಸಿತು.

ಆದರೂ ಇಂದವನ ದುಗುಡಕ್ಕೆ ಕಾರಣ ? ಅನ್ಯರ ಜೊತೆಯಲ್ಲಿ ತನ್ನ ಮಡದಿ ಹೋದದ್ದು. ಈ ವರೆಗೂ ಇದಕ್ಕೊಂದು ಅರ್ಥಗೊಟ್ಟು ಯೋಚಿಸಿದವನಲ್ಲ. ಎಷ್ಟೋ ಬಾರಿ ತಾನೇ ಸ್ನೇಹಿತರ ಮಡದಿಯರಲ್ಲಿ ಎಷ್ಟೊಂದು ಸಲಿಗೆ, ಆತ್ಮೀಯತೆ ತೋರಿರಲಿಲ್ಲ ?

ಇದಕ್ಕೆಲ್ಲ ಶೈಲೆಯೂ ನೊಂದುಕೊಂಡರೆ ಹೇಗೆ ? . . . . ಛೆ, ಏನೇ ಇರಲಿ, ಇಂದವಳು ತನ್ನನ್ನೊಬ್ಬನನ್ನು ಬಿಟ್ಟು ರಮಾನಂದ-ಜಾನಕಿಯರ ಜೊತೆಯಲ್ಲಿ ನಾಟಕಕ್ಕೆ ಹೋದದ್ದು ಅವನ ಮನಸ್ಸಿಗೆ ಪೆಟ್ಟು ಬಿದ್ದಂತಾಗಿದೆ. ಯಾವ ವಿಧದಿಂದಲೂ ಈಗಿನ ಸನ್ನಿವೇಶದಲ್ಲಿ ಶೈಲೆಯನು ಸರಿಯಾಗಿ ತಿಳಿಯಲಾರದೆ ಆನಂದನ ಮೂಕ ವೇದನೆ ಅವನ ಕರುಳನ್ನೇ ಹಿಂಡುತ್ತಿದೆ.

ಪಕ್ಕದಲ್ಲಿ ಮಲಗಿದ್ದ ಮಗು ಎದ್ದು ಕುಳಿತು “ ಅಮ್ಮಾ, ನೀರು '' ಎಂದಿತು ನಿದ್ದೆಗಣ್ಣಿನಲ್ಲಿ. ನೀರು ಕುಡಿಸಿ, ಮಗುವಿನ ಬೆನ್ನು ತಟ್ಟುತ್ತಿದ್ದಂತೆ ಅವನ ಮನಸ್ಸು ಮತ್ತೂ ವ್ಯಗ್ರವಾಯಿತು.

ಇವಳಿಗೆ ಗಂಡ, ಮಗು ಯಾವುದೂ ಬೇಡವಾಯಿತು . . . . ಇದಕ್ಕೆಲ್ಲ ಕಾರಣ ? ತನ್ನ ಮೊದಲಿನ ವೈಭವ ಇಳಿಮುಖವಾದದ್ದು . . . . ಅವಳ ಮನದಲ್ಲಿ ಆಶೆ ಮೂಡಿಬರುವ ಮುನ್ನವೇ ಅದು ಅವಳೆದುರು ಇರುತ್ತಿತ್ತು. ಯಾವ ಅವಳ ಬಯಕೆಯನ್ನೂ ಹುಸಿಯಾಗಿರಿಸಲಿಲ್ಲ ನಾನು ! ಆದರೆ ಈಗ ? ಅವಳ ಚೆಲ್ಲಾಟವಿಲ್ಲ ! ನಗುವಿಲ್ಲ ! ಆದರೆ ಆದೇ ರಮಾನಂದ ಬಂದಾಗ ಎಲ್ಲಿಂದ ಬರುತ್ತದೋ ಆ ನಗೆ, ಚೆಲ್ಲಾಟ ? ತುಂಬ ಆಶ್ಚರ್ಯ. ಅವನಲ್ಲಿರುವ ಐಶ್ವರ್ಯದ ಆಡಂಬರಕ್ಕೇ ಇರಬೇಕು ; ಅಲ್ಲದೇನು ?

ಇಂದು ಅವಳುಟ್ಟ ಸೀರೆ, ನನ್ನ ಪ್ರೀತಿಯದು . . . . ನಾನು ಹೀಗೆ ಕಾಯಿಲೆಯಿಂದ ಮಲಗಿರಲು, ಅದನ್ನೇಕೆ ಉಡಬೇಕು ? ನನ್ನ ಪರವೆ ಇದ್ದರಲ್ಲವೇ ?

ಮೊನ್ನೆ ಅವಳಣ್ಣ ರಮೇಶ, ಊರಿಗೆ ಕರೆಯಲು ಬಂದಾಗ ಹೋಗಲು ನಿರಾಕರಿಸಿದಳು. “ ಹೋಗಬಹುದಿತ್ತಲ್ಲ ? '' ಎಂದು ನಾನೆಂದಾಗ “ ಯಾವ ವೈಭವ ತೋರಲು ಹೋಗಲಿ ? '' ಎಂದಳು. ಹೌದು ಅವಳೆನ್ನುವದು ನಿಜ. ಅವಳಿಗೆ ಬೇಕಾಗಿರುವದು ಬರಿಯ ಹಣ ! ಅಲ್ಲಿಯ ವರೆಗೆ ನನಗೆಲ್ಲಿಯ ಮಾನ ? ಅಸಹನೀಯ ವೇದನೆಯನ್ನು ತಡೆಯಲಾರದಾದ ಆನಂದ.

ಸುತ್ತಲೂ ಪಸರಿಸಿದ್ದ ದೀಪದ ಬೆಳಕು ಅವನಿಗೆ ಬೇಡವಾಗಿ ಕಣ್ಣುಗಳನ್ನು ಮುಚ್ಚಿಕೊಂಡ. ಮನದಲ್ಲೇ ಯೋಚಿಸುತ್ತ ಹೊರಟ ಅವನ ದೃಷ್ಟಿಗೆ ಯುವತಿಯೋರ್ವಳು ನಗುತ್ತ ನಿಂತ

ಚಿತ್ರ ಕಂಡಂತಾಯಿತು. "ಯಾರವಳು? ಅವಳೇ ಆನಂದನ ಅಕ್ಕನ ಮಗಳು ಶಕುಂತಲಾ. ಓ ! ಅದೆಷ್ಟು ಬೆಳೆದುಬಿಟ್ಟಿದ್ದಾಳೆ! ಅವನಕ್ಕ ರಮಾ, ಶಕುಂತಲೆ ತೀರ ಚಿಕ್ಕವಳಿರುವಾಗ, ಆನಂದ ತನ್ನಲ್ಲಿಗೆ ಬಂದಾಗಲೆಲ್ಲ ಶಕೂಗೆ "ನಿನ್ನ ಗಂಡ ಬಂದ" ಎಂದು ಹಾಸ್ಯಮಾಡುತ್ತಿದ್ದಳು.

ಸುಧಾರಣೆಯ ಮೋಹಕ್ಕೆ ಬಿದ್ದ ಆನಂದ ಹಳ್ಳಿಯ ಹುಡುಗಿ ಶಕುಂತಲೆಯನ್ನು ಹೇಗೆ ಕೈಹಿಡಿದಾನು ?

ಈಗಿನ ಶಕುಂತಲೆಯ ಮೊಗ ದೀನ ಭಾವನೆಯಿಂದ ಏನೋ ಯೋಚಿಸುವಂತಿತ್ತು.

ಕೆದರಿದ ಕುರುಳು.

ಕುಂಕುಮ ಕಾಣದ ಹಣೆ.

ಕಣ್ಣಿನಲ್ಲಿರುವ ಕಾತರತೆ.

ಪುರುಷಸಂಪರ್ಕವಿಲ್ಲದ ಅಂಗಾಂಗ,—ಇವೆಲ್ಲ ಅವಳಲ್ಲಿರುವ ಅತೃಪ್ತಿಯನ್ನು ಸಾರಿ ಹೇಳುತ್ತಿತ್ತು. ತಾನೇ ಅವಳನ್ನು ಮದುವೆಯಾಗಿದ್ದರೆ, ಅವಳ ಬಾಳು ಹೀಗೆ ಹಾಳುಗೂಡುತ್ತಿರಲಿಲ್ಲ. ಆದರೆ ಮಾತ್ರ ಒಮ್ಮೆಯೂ ಶಕೂ ಈ ಭಾವನೆಯನ್ನೇ ತೋರಗೊಡಲಿಲ್ಲ....... ಅವನಿಗೆ ಅವಳ ವಿಷಯವಾಗಿ ಎಷ್ಟು ಯೋಚಿಸಿದರೂ ಸಾಲದಾಯಿತು. ಮತ್ತೆ ಮತ್ತೆ ಅವಳ ವಿಷಯವಾಗಿ ಅವನ ಜೀವ ಎಳೆಯತೊಡಗಿತು.

ಆನಂದನ ಮನಸ್ಸಿಗೆ, ಕಣ್ಣಿಗೆ ಶಕುಂತಲೆ ಬಹು ಪ್ರೀತಿಯ, ಮೋಹಕ ವಸ್ತುವಾಗಿ ಕಂಡಳು.

ಅಷ್ಟೇ ಶೈಲೆಗಾಗಿ, ತಿರಸ್ಕಾರ ಕೋಪ ಹೆಚ್ಚಾಯಿತು ಅವನಲ್ಲಿ. ಅವನಲ್ಲಿಯೇ ಹುದುಗಿದ್ದ ಆದರ್ಶ ಕಣ್ಮುಚ್ಚಿ ಕುಳಿತಿರಬೇಕು.

*

ಹೊರಗಿನ ಗೇಟು ತೆರೆದ ಶಬ್ದದೊಂದಿಗೆ ಶೈಲೆ-ಜಾನಕಿಯರ ನಗುವೂ ರಮಾನಂದನ 'Good-night' ಎನ್ನುವ ಬೀಳ್ಕೊಡುವ ಕೊನೆಯ ಮಾತೂ ಒಳಗೆ ಮಲಗಿದ್ದ ಆನಂದನ ಕಿವಿಗೆ ಕಾದ ಸೀಸದಂತೆ ಸುರಿದವು. ಹೊರಗಡೆ ಮಲಗಿದ್ದ ಕೆಲಸದ ರಾಮೂ ಬಾಗಿಲು ತೆರೆಯುತ್ತಲೇ ಒಳಗೆ ಆನಂದ ನಿದ್ದೆ ಬಂದವರಂತೆ ರಗ್ಗು ಎಳೆದುಕೊಂಡು ಮಲಗಿಬಿಟ್ಟ.

ಶೈಲೆ ತುಂಬ ಗೆಲುವಿನಲ್ಲಿ ತನ್ನಿನಿಯನ ಮುಂದೆ ಅಂದಿನ ನಾಟಕದ ವಿಷಯವಾಗಿ ಹೇಳಿ ತೃಪ್ತಿಪಡಬೇಕೆಂದು ಆನಂದನ ಕೋಣೆಗೆ ಬಂದಿದ್ದಳು. ಆದರೆ ಮಲಗಿದ್ದ ಪತಿಯನ್ನು ಕಂಡಾಗ "ಇಂದಿನ ನಾಟಕದ ಸುಖದಲ್ಲಿ ತಾನೊಬ್ಬಳೇ ಪಾಲುಗಾರಳಾದೆನಲ್ಲ" ಎಂದು ತನ್ನ ಬಗ್ಗೆ ಬೇಸರವೆನಿಸಿತು. ಮೆಲ್ಲನೆ ಬಂದು ಪತಿಯ ಹಣೆಯನ್ನು ಮುಟ್ಟಿ ನೋಡಿದಳು. ಜ್ವರವಿರಲಿಲ್ಲ! ಅಷ್ಟೇ ನೆಮ್ಮದಿಯೆನಿಸಿತು. ಮತ್ತೊಮ್ಮೆ ಆನಂದ ಹೊದೆದುಕೊಂಡಿದ್ದ ರಗ್ಗು ಸರಿಪಡಿಸಿ, ತನ್ನ ಉಡುಪು ಬದಲಿಸಿದಳು. ತನ್ನ ಹಾಸಿಗೆಯಲ್ಲಿ ಮಗು ಹೇಮಂತ ಸುಖವಾಗಿ ನಿದ್ರಿಸುತಿತ್ತು. ಮಲಗಿದ್ದಲ್ಲಿಯೇ ಅದಕ್ಕೊಂದು ಮುತ್ತನ್ನಿಟ್ಟು ಈಚೆಗೆ ಬಂದಳು. ಸುವರ್ಣೆ ತನ್ನ ಓದುವ ಪುಸ್ತಕವನ್ನು ಎದೆಯ ಮೇಲಿರಿಸಿ ಹಾಗೇ ನಿದ್ದೆಹೋಗಿದ್ದಳು. "ಪಾಪ ಪರೀಕ್ಷೆಯ ಭಯ!" ಎನ್ನುತ್ತ ಶೈಲೆ ಮುದದಲ್ಲೆ ನಕ್ಕು ಸುವರ್ಣೆಯ ಕೈಗಳಿಂದ ಪುಸ್ತಕವನ್ನು ಮೆಲ್ಲನೆ ತೆಗೆದು ಬೇರೆಡೆ ಇಟ್ಟು ದೀಪವಾರಿಸಿ ತನ್ನ ಹಾಸಿಗೆಯಲ್ಲಿ ಬಂದು ಉರುಳಿಕೊಂಡಳು. ಅಂದು ನೋಡಿದ ನಾಟಕದ ಪಾತ್ರಗಳು, ದೃಶ್ಯಗಳು, ಕಣ್ಮುಂದೆ ಸುಳಿದು ಹೋಗುತ್ತಿರುವಂತೆ ನಿದ್ದೆಯಾವರಿಸಿತು ಅವಳನ್ನು.

ಇತ್ತ ಗಡಿಯಾರದಲ್ಲಿ ಆಗುವ ಪ್ರತಿ ಸೆಕೆಂಡಿನ ಶಬ್ದವೂ ಆನಂದನ ಕಿವಿಗೆ ನಿಚ್ಚಳವಾಗಿ ಕೇಳುತಿತ್ತು. ಸುತ್ತುಮುತ್ತೂ ಅಷ್ಟು ನಿಶ್ಶಬ್ದವಾಗಿತ್ತು. ಶೈಲೆಗೆ ನಿದ್ದೆ ಬಂದದ್ದು ಅರಿವಾದೊಡನೆ ಅವನಿಗೆ ಎಲ್ಲಿಲ್ಲದ ಕೋಪ, ಅಸೂಯೆ ತಲೆ ಎತ್ತಿ ನಿಂತುಬಿಟ್ಟವು. ಕೆಲ ಸಮಯದ ಹಿಂದೆ ಶೈಲೆ ಪ್ರೀತಿಯಿಂದ ಹೊದಿಸಿದ್ದ ರಗ್ಗನ್ನು ಎಳೆದು ನೆಲಕ್ಕೆ ಅಪ್ಪಳಿಸಿದ. ಹತ್ತಿರದಲ್ಲಿದ್ದ ಸ್ವಿಚ್ ಒತ್ತಿದ. ಮತ್ತೆ ಕೋಣೆಯಲ್ಲಿ ಬೆಳಕು ಬಿತ್ತು. ಮಡದಿಯ ಪಕ್ಕದಲ್ಲಿ ಬಂದು ನಿಂತು "ಶೈಲಾ" ಎಂದು ಗಟ್ಟಿಯಾಗಿ ಅರಚಿಕೊಂಡ ಆನಂದ.

ದುಃಸ್ವಪ್ನವನ್ನು ಕಂಡು ಬೆಚ್ಚಿಬಿದ್ದಂತೆ ಹೆದರಿ ಶೈಲೆ ಎದ್ದುಕುಳಿತಳು. ಸಮೀಪದಲ್ಲಿ ನಿಂತಿದ್ದ ಪತಿಯನ್ನು ಕಂಡು ಮನಸ್ಸು ತಿಳಿಯಾಯಿತು. ಅವಳ ಕಣ್ಣುಗಳಲ್ಲಿ ಮಾತ್ರ ನಿದ್ದೆ ಇನ್ನೂ ಬಿಟ್ಟಿರಲಿಲ್ಲ ಎಂದೇ ಅವನ ಭಾವ ತಿಳಿಯದೆ,

"ಏನು ಕರೆದಿರಾ? ನಾಟಕದ ವಿಷಯ ಬೆಳಿಗ್ಗೆ ಹೇಳಿದರಾಗದೆ ? ನಾ ಮಲಗಲೇ? " ಎನ್ನುತ್ತ ಅವನ ಉತ್ತರದ ದಾರಿನೋಡದೆ ಹೊದಿಕೆಯನ್ನೆಳೆದು ಮಲಗಿಬಿಟ್ಟಳು.



ಆನಂದನಿಗೆ ಮನಸ್ಸನ್ನು ಹಿಡಿತದಲ್ಲಿರಿಸುವುದು ಪ್ರಯಾಸದ ಕೆಲಸವಾಯಿತು. ಮಡದಿಯು ತೋರಿದ ಭಾವ ಅಸಡ್ಡೆ ಎಂದುಕೊಂಡ. ನಾಲ್ಕೈದು ದಿನಗಳ ಜ್ವರದಿಂದ ಶಕ್ತಿಗುಂದಿದವನಾದ ಅವನನ್ನು ಸಿಟ್ಟು ಕೆರಳಿಸಿತು. ಕೂಡಲೆ ಮಲಗಿದ್ದ ಶೈಲೆಯ ರಟ್ಟೆ ಹಿಡಿದೆಳೆದ.

ಪತಿಯ ಬಲವಾದ ಕೈಯ ಹಿಡಿತ, ಶೈಲೆಯನ್ನು ಪೂರ್ಣ ಎಚ್ಚರಗೊಳ್ಳುವಂತೆ ಮಾಡಿತು. ಅವನ ಮುಖ ನೋಡುತ್ತಲೇ ಗಾಬರಿಗೊಂಡಳು. ತನ್ನಿನಿಯ ತನ್ನ ಮೇಲೇಕೋ ಮುನಿಸುಗೊಂಡಿದ್ದಾನೆ. ಯಾವುದೊ ಒಂದು ದುಃಶಕ್ತಿ ಅವನಲ್ಲಿ ಆಟವಾಡುತ್ತಿದೆ ಎಂದುಕೊಂಡಳು.

ಈ ವರೆಗೂ ತನ್ನಲ್ಲಿಯೇ ಮಥಿಸಿಕೊಂಡ ಮಾತುಗಳನ್ನು ಆ ಕ್ಷಣಕ್ಕೆ ಶೈಲೆಯ ಮೇಲೆ ಎರಚಿಬಿಟ್ಟ ಆನಂದ. ಅವನ ಜೀವಮಾನದಲ್ಲಿಯೇ ಎಂದೂ ಇಷ್ಟು ಕುಟವಾಗಿ ವರ್ತಿಸಿದವನಲ್ಲ. ಆದರೆ ಸಿಟ್ಟು ಅವನ ಬುದ್ಧಿಯನ್ನು ಮಂಕು ಮಾಡಿತ್ತು.

ಶೈಲೆ ತಗ್ಗಿಸಿದ ತಲೆಯನ್ನು ಮೇಲಕ್ಕೆ ಎತ್ತದಾದಳು. ಅವಳ ಮನಸ್ಸು ಒಡೆದು ನುಚ್ಚುನೂರಾಗಿತ್ತು. ಇದೇ ಮೊದಲ ಬಾರಿಗೆ ಇಂಥ ಆಘಾತ ಅವಳ ಬಾಳಿಗಾಗಿದೆ.

ಯಾರನ್ನು ಅವಳು ದೇವರು, ಜಗತ್ತು, ಪ್ರಾಣ ಎಂದಿದ್ದಳೋ ಅಂಥ ಆನಂದನಿಂದ ಈ ಕೊಳಕು ಮಾತುಗಳು ! 'ಅಯ್ಯೋ' ಎನ್ನುತ್ತ ಈ ಎಲ್ಲ ಮಾತುಗಳನ್ನು ಕೇಳಿದ್ದ ಕಿವಿಗಳನ್ನು ಮುಚ್ಚಿಕೊಂಡಳು. ಇದರಲ್ಲಿ ತನ್ನ ತಪ್ಪೇನಿದೆ? ಅವರನ್ನು ಯಾವ ಮಾತಿನಿಂದ ಸಾಂತ್ವನಗೊಳಿಸಲಿ ?

ಇಂಥ ನೂರಾರು ಯೋಚನೆಯಲ್ಲಿ ಸಿಕ್ಕು ಗಾಯಗೊಂಡ ಹರಿಣಿಯಂತೆ ನೆಲದಲ್ಲಿ ಬಿದ್ದು ಹೊರಳಾಡಿದಳು.

*

ಹಿಂದಿನ ಒಂದೆರಡು ಘಟನೆಗಳು ನಡೆದದ್ದು ಶೈಲೆಯ ಸ್ಮೃತಿಪಟಲದ ಮೇಲೆ ಮತ್ತೊಮ್ಮೆ ಮೂಡಿ ಬಂತು.

ಕೆಲವೊಮ್ಮೆ ರಮಾನಂದನ ನಡೆನುಡಿಗಳಲ್ಲಿ ಏನೊ ಒಂದು ಬಗೆಯ ಕೃತ್ರಿಮತೆಯನ್ನು ಕಂಡಾಗ ಶೈಲೆ ತನ್ನಿನಿಯನಲ್ಲಿ ಒಂದೆರಡು ಬಾರಿ ಸುತ್ತು ಬಳಸಿ ಮಾತು ತಿಳಿಸಿದ್ದಳು. ಆನಂದ ಅದನ್ನು ನಗೆಯಲ್ಲಿ ತೇಲಿಸಿ ರಮಾನಂದನ ವಿಶಾಲ ಹೃದಯ, ನಿಸರ್ಗಪ್ರಿಯತೆಯನ್ನು ತನ್ನ ಮಾತಿನಿಂದ ವ್ಯಕ್ತಪಡಿಸಿದ್ದ.

ಒಮ್ಮೊಮ್ಮೆ ಅವಳಿಗೆ ಆನಂದನ ಮೇಲೆ ಎಲ್ಲಿಲ್ಲದ ಕೋಪ, ಬೇಸರವಾಗುತ್ತಿತ್ತು. ತನ್ನ ರಕ್ಷಣೆಯ ಭಾರ, ತನ್ನಾತನಲ್ಲದೆ ಬೇರಾರು ಹೊರಬೇಕು ? ಹೀಗಿದ್ದೂ ತಿಳಿದೋ ತಿಳಿಯದೆಯೋ ಈ ಬಗೆಯ ಅವನ ನಿರ್ಲಿಪ್ತತನ ಅವಳಿಗೆ ಸಮಸ್ಯೆಯಾಗಿತ್ತು. ಆದರೆ ದಿನಗಳೆದಂತೆ ಶೈಲೆಯ ಮನಸ್ಸು ಅಂಥ ಯಾವ ಸಮಸ್ಯೆಗೂ ಒಳಪಟ್ಟಿರಲಿಲ್ಲ. ತನ್ನನ್ನು ರಕ್ಷಿಸಿಕೊಳ್ಳಬಲ್ಲ ಶಕ್ತಿ ತನಗಿದೆ ಎನ್ನುವ ಅರಿವುಂಟಾಗಿದೆ ಅವಳಿಗೆ.

ಹಾಗೇ ರಮಾನಂದನ ವಿಲಾಸಮಯ ಜೀವನ ಕಣ್ಣೆದುರು ಬಂದು ನಿಂತಿತು. ಶೈಲೆ ಮೊದಲು ಭಾವಿಸಿದ್ದೇನು ? ರಮಾನಂದನಿಗೆ ಪತ್ನಿಯ ಮೇಲೆಷ್ಟು ಮೋಹ? ಅವಳ ಬಗೆಗೆ ಅವನಿಗೆಷ್ಟು ಆಸ್ಥೆ ? ಜಾನಕಿಗಾಗಿ ಅವನು ಏನು ಮಾಡಲೂ ಸಿದ್ಧ. ಅವರಿಬ್ಬರಿಗೂ ಯಾವುದಕ್ಕಿದೆ ಕೊರತೆ ?

ಶೈಲೆ ಕೆಲವೊಮ್ಮೆ "ಹೆಣ್ಣಿಗೆ ಅಂಥ ಸುಖವಿರಬೇಕು,'' ಎಂದು ಬಯಸಿದ್ದೂ ಉಂಟು. ಆದರೆ ಅದು ಕ್ಷಣ ಕಾಲಮಾತ್ರ. ನಿಜ ಸ್ಥಿತಿ ಅರಿವಾಗಲು ಬಹಳ ಕಾಲ ಹಿಡಿಯಲಿಲ್ಲ. ಹೊರಗೆಷ್ಟು ಪ್ರಕಾಶಮಾನವಾಗಿ ಬೆಳಕು ಬಿದ್ದಿದೆಯೋ ಅಷ್ಟೇ ಕತ್ತಲು ಕವಿದಿತ್ತು ಅವರಿಬ್ಬರ ಬಾಳಿನಲ್ಲಿ. ಇದನ್ನರಿತ ಶೈಲೆ ಜಾನಕಿಗಾಗಿ ಮನದಲ್ಲೆ ಮರುಗುತಿದ್ದಳು.

*

ತೆರೆದಿಟ್ಟ ಕಿಡಿಕಿಯಿಂದ ತಂಗಾಳಿ ಬಂದು ಆನಂದನ ಮೈಕೈಗಳನ್ನು ಹಗುರಾಗಿಸಿತು. ಅಲ್ಲೊಂದು ಇಲ್ಲೊಂದು ಹಕ್ಕಿಗಳ ಚಿಲಿಪಿಲಿ ಕೂಗು ಅವನ ಕಿವಿಗೆ ಕಿಚುಕುಳಿಯಾಡಿಸಿದಂತಾಯಿತು. ಕಿಟಕಿಗೆ ಹಬ್ಬಿರುವ ಜಾಜಿಮಲ್ಲಿಗೆಯ ಬಳ್ಳಿಯಿಂದ ಬರುತ್ತಿರುವ ಮೃದು ಸುಹಾಸ ಅವನನ್ನು ಸಂತೈಸುವಂತಿತ್ತು. ರಾತ್ರಿಯ ದುಗುಡ ಮರೆಯಾದಂತಾಗಿ ಅವನ ದೃಷ್ಟಿ ಪಕ್ಕದ ಮಂಚಕ್ಕೆ ತಿರುಗಿತು.

ತನ್ನ ಕಣ್ಣುಗಳನ್ನು ತಾನೇ ನಂಬದಾದ. ಶೈಲೆಯ ಆ ಮುದುಡಿದ ದೇಹ, ಕಪ್ಪಿಟ್ಟ ಮುಖ, ಪುನಃ ರಾತ್ರಿಯ ನೆನಪನ್ನು ತಂದುಕೊಟ್ಟಿತು. ಇದೇ ಶೈಲೆಯನ್ನು ನಿನ್ನಿನ ಇರುಳಲ್ಲಿ ಹೇಗೆಲ್ಲ ಚಿತ್ರಿಸಿಕೊಂಡೆ ! ಅವಳೊಡನೆ ನಡೆದುಕೊಂಡ ರೀತಿ ನೆನಪಿಗೆ ಬರುತ್ತಲೇ ಕಣ್ಣುಗಳು ತುಂಬಿ ಬಂದುವು. ಹೋಗಿ ರಮಿಸಲೇ ಎಂದು ಮೆಲ್ಲನೆ ಎದ್ದು ಶೈಲೆಯ ಹತ್ತಿರಕ್ಕೆ ಹೋದ. ಒಂದು ಕ್ಷಣ ಏನೋ ಯೋಚನೆ ಬಂದು ಅವನನ್ನು ಹಿಂದಕ್ಕೆ ಎಳೆಯಿತು.

ಸರಿ; ಬೆಳಗಾಯಿತು. ಇಷ್ಟು ಸಮಯವಾದರೂ ಇನ್ನೂ ಏಳದಿದ್ದ ಅತ್ತಿಗೆಯನ್ನು ಸುವರ್ಣೆ ಎಚ್ಚರಗೊಳಿಸಲು ಹೋದಳು. ಹಿಂದಿನ ರಾತ್ರಿ ನಾಟಕಕ್ಕೆ ಹೋದದ್ದು ನೆನಪಿಗೆ ಬರಲು, ಸುವರ್ಣೆಗೆ ಅತ್ತಿಗೆ ಏಳದಿದ್ದ ಕಾರಣ ಹೊಳೆಯಿತು. ಅದೇ ಸಮಾಧಾನದಿಂದಲೇ ಶೈಲೆ ಮಲಗಿದ್ದಲ್ಲಿಗೆ ಬಂದು—"ಅತ್ತಿಗೆ, ಅತ್ತಿಗೆ, ಏಳಿನ್ನು. ಅಣ್ಣ ಆಗಲೇ ಹೊರಗೆ ಹೋಗಿಬಿಟ್ಟ'' ಎಂದಳು.

ಯಾರಿಗೂ ಎಂದೂ ತನ್ನ ಮ್ಲಾನವದನ ತೋರಿದವಳಲ್ಲ ಶೈಲೆ. ಏನಿದ್ದರೂ ನುಂಗಿಕೊಂಡು ನಗು ನಗುತ್ತ ಮಾತಾಡುವ ರೀತಿ ಅವಳದು. ಇಂದು—ಈಗ ಮಾತ್ರ—ಏಳುವ ಮನಸ್ಸಿಲ್ಲದೆ, ಮುಖ ತೋರಿಸುವ ಇಚ್ಛೆ ಇಲ್ಲದೆ ಶೈಲೆ ಏಳದಿರಲಾರದೆ ಹಗುರಾಗಿ ಎದ್ದು ಕುಳಿತಳು.

ಮುಖವೆಲ್ಲ ಬಾತುಕೊಂಡಿತ್ತು. ಕಣ್ಣುಗಳೂ ಊದಿಕೊಂಡಿದ್ದವು. ಸುವರ್ಣೆಗೆ ಆಶ್ಚರ್ಯ! ಅತ್ತಿಗೆ ನಾಟಕ ನೋಡಿ ಬಂದಿದ್ದಾಳೆ; ನಿದ್ದೆಗೆಟ್ಟಿದ್ದಾಳೆ; ನಿಜ. ಆದರೆ ಹೀಗೇಕೆ ಬಲಗುಂದಿದವಳಂತೆ ಕಾಣುತ್ತಾಳೊ ಎಂದು ತಿಳಿಯದೆ ಬೆರಗಾಗಿ ನಿಂತುಬಿಟ್ಟಳು.

ಆನಂದನ ಅಚ್ಚುಮೆಚ್ಚಿನ ತಂಗಿ ಸುವರ್ಣೆ. ತಂದೆ-ತಾಯಿಯ ಜೊತೆಯಲ್ಲಿ ಅವಳನ್ನು ಬಿಡದೆ ತಾನೇ ನೋಡಿಕೊಳ್ಳುವ ಭಾರ ಹೊತ್ತಿದ್ದಾನೆ. ಅವಳು ತಂದೆ-ತಾಯಿಯರನ್ನು ಒಮ್ಮೊಮ್ಮೆ ಬಿಟ್ಟಿದ್ದಾಳು. ಆದರೆ ಅಣ್ಣ-ಅತ್ತಿಗೆಯರನ್ನು ಬಿಟ್ಟಿರಲಾರಳು. ಅಣ್ಣ-ತಂಗಿಯರ ಸ್ವಭಾವವೂ ಒಂದೇ ಬಗೆಯದು. ಶೈಲೆಯನ್ನು ಆ ಎರಡು ಜೀವ ತುಂಬ ಮೆಚ್ಚಿಕೊಂಡಿದ್ದವು. ಯಾವ ಮಾತೇ ಇರಲಿ, ಶೈಲೆ-ಸುವರ್ಣೆಯರಲ್ಲಿ ಮುಚ್ಚುಮರೆ ಇರಲಿಲ್ಲ. ಹಾಗೆ ಬೆಳೆದು ಬಂದಿತ್ತು ಅವರಿಬ್ಬರ ಮೈತ್ರಿ. ಎಂದೇ ಸುವರ್ಣೆಯನ್ನು ಕಂಡೊಡನೆ ಶೈಲೆ ತನ್ನೆಲ್ಲ ಮನದ ನೋವನ್ನು ಕಡಿಮೆ ಮಾಡಿಕೊಳ್ಳುವ ಸಾಧನವೆಂದುಕೊಂಡು ಅವಳ ಹೆಗಲ ಮೇಲೆ ಮುಖವಿರಿಸಿ ಮನದಣಿಯೆ ಅತ್ತುಬಿಟ್ಟಳು.

ಸುವರ್ಣೆ ತನ್ನತ್ತಿಗೆಯ ನೋವಿನ ಮೂಲ ತಿಳಿಯದೆ ಪೇಚಾಡಿದಳು. ಅವಳಿಗರಿಯದಂತೇ ಹೃದಯ ರೋದಿಸತೊಡಗಿತು. ಸಂತೈಸಲು ಬಂದ ಸುವರ್ಣೆಯೋ — ತನ್ನ ಕಣ್ಣುಗಳೇ ಕಂಬನಿಗಳಿಂದ ತುಂಬಿಕೊಂಡವು.

ತನ್ನ ದುಃಖದಲ್ಲಿ ಪಾಲುಗಾರಳಾದ ನಾದಿನಿಯನ್ನು ಕಂಡು ಶೈಲೆಗೆ ತುಸು ಸಮಾಧಾನವಾಗಿರಬೇಕು; ಎಂದೇ ಸುವರ್ಣೆಯ ನೀರು ತುಂಬಿದ ಕಣ್ಣುಗಳನ್ನು ತನ್ನ ಸೆರಗಿನ ತುದಿಯಿಂದ ಒರಸುತ್ತ,

"ನಿನ್ಯಾಕವ್ವಾ ಅಳುತ್ತಿ? ಇದು ನನ್ನ ಕರ್ಮ. ಸುಮ್ಮನೆ ನೀನೇಕೆ ನೊಂದುಕೊಳ್ಳುತ್ತೀ?'' ಎಂದುಸುರಿದಳು.

ಅತ್ತಿಗೆಯ ಮುಖವನ್ನು ಸುವರ್ಣೆ ಮೇಲಕ್ಕೆತ್ತಿ,

"ನಿನಗಾದದ್ದಾದರೂ ಏನು? ಅಣ್ಣ ಏನಾದರೂ ಬಿರುಸು ಮಾತನ್ನಾಡಿದನೇ? ನನ್ನೊಡನೆ ಹೇಳಬಾರದೇ?''

"ಏನವ್ವ, ನಿನ್ನಿನ ನಾಟಕ ಇದಕ್ಕೆ ಮೂಲ. ನೀನೂ ಬಂದಿದ್ದರೆ ಇಂದಿನ ಪ್ರಸಂಗವೇ ಬರುತ್ತಿರಲಿಲ್ಲ. ಪರೀಕ್ಷೆಯೆಂದು ನೀನೂ ಬಾರದೆ ಹೋದಿ. ಉಳಿದ ಮಾತುಗಳೇಕವ್ವಾ? ಒಟ್ಟು ನನ್ನ ಅದೃಷ್ಟ ಚೆನ್ನಾಗಿಲ್ಲ.....'' ಶೈಲೆಯ ಮಾತು ಅರ್ಧಕ್ಕೆ ನಿಂತು, ಅಳು ಮುಂದುವರಿಯಿತು.

ಅವರಿಬ್ಬರೂ ಹೀಗೆ ಎಷ್ಟು ಸಮಯ ಕಳೆಯುತ್ತಿದ್ದರೋ ಏನೋ? ಹೇಮಂತ "ಅವ್ವಾ ನಂಗೆ ಹಾಲು-ತಿಂಡಿ'' ಎಂದಾಗಲೇ ಎಚ್ಚರ. ತಾನು ಬಂದರೂ ಅಮ್ಮ ಇನ್ನೂ ಏಳದಿದ್ದನ್ನು ಕಂಡು ಹೇಮಂತನಿಗೆ ಅಚ್ಚರಿಯಂತಾಯಿತು. ಕೂಡಲೇ ಅಮ್ಮನ ತೊಡೆ ಏರಿದವನೇ ತಾಯಿಯ ಮುಖವನ್ನು ತನ್ನೆಡೆಗೆ ಎಳೆದುಕೊಂಡ. ತಾಯಿಯ ಕಂಬನಿ ತುಂಬಿದ ಕಣ್ಣುಗಳನ್ನು ನೋಡುತ್ತಲೆ ಅವನ ಪುಟ್ಟ ಹೃದಯ ಗಾಬರಿಗೊಂಡಿತು. ಒಂದು ಕ್ಷಣದಲ್ಲಿ ಎಷ್ಟೋ ಯೋಚನೆ ತುಂಬಿತು ಹೇಮಂತನ ಮನದಲ್ಲಿ. ತನ್ನಮ್ಮ ಏಕಳುತ್ತಿರಬಹುದು? ಯಾರು ಹೊಡೆದಿರಬಹುದು? ಅಮ್ಮನಿಗೆ ಹೊಡೆಯಬೇಕಾದರೆ ಬೇರೆ ಯಾರು? ಉತ್ತರ ಅವನಿಗೆ ಕ್ಷಣಮಾತ್ರದಲ್ಲಿ ಹೊಳೆಯಿತು. ತೊಡೆ ಬಿಟ್ಟು ಇಳಿದವನೇ ಸುವರ್ಣೆಯ ಕೈಯನ್ನು ಹಿಡಿದೆಳೆದು "ಸುನ್ನಕ್ಕಾ, ಅಮ್ಮನಿಗೆ ಅಪ್ಪ ಹೊಡೆದರೇನು? ಬರಲಿ ಮನೆಗೆ. ನಾನೂ ಸಮಾ ಅವರಿಗೇ ಹೊಡೆಯುತ್ತೇನೆ'' ಎಂದಿತು ಪುಟ್ಟ ಮಗು.

ಇಂಥ ಸಮಯದಲ್ಲೂ ಅತ್ತಿಗೆ-ನಾದಿನಿಯರಿಗೆ ಮಗುವಿನ ಮಾತು ನಗು ತರಿಸಿತು. ಹೆಚ್ಚು ಮಾತಿಗೆ ಅವಕಾಶ ಕೊಡದೆ ಸುವರ್ಣೆ ಹೇಮಂತನ ನೆತ್ತಿಕೊಂಡು ಮೋರೆ ತೊಳೆಯಲು ಬಚ್ಚಲಿಗೆ ಕರೆದೊಯ್ದಳು.

"ಪಾಪ, ಮಗುವಿಗೇನು ಗೊತ್ತು, ಕೈಯ ಪೆಟ್ಟಿಗಿಂತಲೂ ಮಾತಿನ ಪೆಟ್ಟು ಬಲವಾದದ್ದೆಂದು!'' ಮನದಲ್ಲೇ ಅಂದುಕೊಂಡಳು ಶೈಲೆ.

ತೊಳೆದ ಪಾತ್ರೆಗಳನ್ನು ಒಳಗೆ ತಂದಿಟ್ಟ ಕೆಲಸದವಳು ಒಡತಿಯನ್ನು ಕಾಣದೆ, ಒಳಕ್ಕೆ ಬಂದಳು. ಈ ಮನೆಗೂ ಅವಳಿಗೂ ಎಂಟು-ಹತ್ತು ವರುಷ

ಗಳ ಸಂಬಂಧ. ಮನೆಯ ಜನಕ್ಕೂ ತುಂಬ ಬೇಕಾದವಳಾಗಿದ್ದಳು ಲಚುಮಿ.

ಹೆಜ್ಜೆಯ ಸಪ್ಪಳಕ್ಕೆ ಶೈಲೆ ಸಾವರಿಸಿಕೊಂಡು ಮತ್ತೆ ಎದ್ದು ಕುಳಿತಳು. ಲಚುಮಿಯನ್ನು ಕಾಣುತ್ತಲೇ ಮುಖದಲ್ಲಿ ನಗು ತಂದುಕೊಂಡು "ನಿನ್ನೆ ರಾತ್ರಿ ನಾಟಕಕ್ಕೆ ಹೋಗಿದ್ದೆ. ನಿದ್ದೆ ಸರಿಯಾಗಿ ಆಗಿಲ್ಲ. ನೋಡು ಲಚುಮಿ" ಎಂದು ತನ್ನ ಬಿಳಿದಿದ್ದ ಕಾರಣವನ್ನು ತಿಳಿಸಿದಳು ಶೈಲೆ.

ಲಚುಮಿ ಒಳಗೆ ಬರಲು ಇನ್ನೊಂದು ಕಾರಣವಿತ್ತು: ತನ್ನ ದುಃಖವನ್ನು ಒಡತಿಯ ಮುಂದೆ ತೋಡಿಕೊಳ್ಳಬೇಕೆಂದಿದ್ದಳು. ಆದರೆ ಇಲ್ಲಿಯೂ ದಿನದಂತೆ ಇಲ್ಲ. ಏನೋ ಅವ್ಯವಸ್ಥೆ. ಏನಿರಬಹುದು ಎಂದು ತನ್ನಲ್ಲಿಯೇ ಗೊಣಗಿಕೊಂಡಳು.

ಇದಕ್ಕೆಲ್ಲ ಬರಿಯ ನಿದ್ದೆ ಕಾರಣವಾಗಿರದೆ, ಬೇರೆ ಏನೋ ಇರಬೇಕು ಎಂದು,

"ಏನಮ್ಮಾ, ಕಣ್ಣು ಬಾತುಕೊಂಡಿದೆ. ಮುಖವೆಲ್ಲ ಕೆಂಪಾಗಿದೆ. ಮತ್ತೇನಾದರೂ ವಿಶೇಷ? ನಮ್ಮ ಪುಟ್ಟಣ್ಣನಿಗೆ ತಂಗಿ ಬೇಡವಾ?" ಎಂದಳು ತುಂಬ ಗೆಲುವಿನಿಂದ ಲಚುಮಿ.

"ಎಂಥ ಹುಚ್ಚಿಯೇ ನೀನು? ಹಗಲಿರುಳೂ ನಿನಗೆ ಒಂದೇ ಯೋಚನೆ- ಮೊನ್ನೆಯಲ್ಲವೇ ನಾನು ಮಿಂದದ್ದು" ಎಂದು ನೆನಪು ಮಾಡಿಕೊಟ್ಟಳು ಶೈಲೆ. ತನ್ನ ಮೂಢತನಕ್ಕೆ ಮನದಲ್ಲಿ ನಾಚಿಕೊಂಡ ಲಚುಮಿ ಸುಮ್ಮನೆ ಕುಳಿತಿರಲಾರದೆ ತನ್ನ ಎಲೆ ಅಡಿಕೆಯ ಚೀಲ ಹೊರತೆಗೆದಳು.

ಮೌನವಾಗಿ ಕುಳಿತ ಒಡತಿಯನ್ನು ಕಂಡು ಲಚುಮಿಗೆ ಇನ್ನೂ ಆಶ್ಚರ್ಯ. ಎಂದೂ ಹೀಗಿದ್ದವಳಲ್ಲ. ಏನಾಗಿರಬಹುದು ಎನ್ನುವ ಕುತೂಹಲ ಅವಳನ್ನು ಮಾತನಾಡುವಂತೆ ಮಾಡಿತು.

"ಮುಖ ಚಿಕ್ಕದಾಗಿದೆ. ಏನು, ರಾಯರು ನೀವು. . . ."

"ಸಾಕು ಸುಮ್ಮನಿರೆ" ಎನ್ನುತ್ತ ಲಚುಮಿಯ ಮಾತು ಅಲ್ಲಿಗೇ ನಿಲ್ಲಿಸಿದಳು ಶೈಲೆ. ಲಚುಮಿ ಕೇಳಬಾರದಾಗಿತ್ತೊ ಏನೋ ಎನ್ನುವಂತೆ ನಾಲಿಗೆ ಕಚ್ಚಿಕೊಂಡಳು.

ಶೈಲೆಯೂ ಲಚುಮಿಯ ಮಾತಿನಿಂದ ಒಂದು ಕ್ಷಣ ಕಕ್ಕಾವಿಕ್ಕಿಯಾದಳು. ಆದರೆ ಮರುಕ್ಷಣಕ್ಕೆ "ನೀನಂದದ್ದು ನಿಜ ಲಚುಮಿ. ಮುಖ ಚಿಕ್ಕದಾಗಿರಬಹುದು. ನಿನ್ನೆ ಸಂಜೆಯಿಂದಲೂ ಮನಸ್ಸಿಗೆ ಸೊಗಸಿಲ್ಲ. ಊರಿನಿಂದ ಓಲೆ ಬಂದಿದೆ. ನನ್ನಜ್ಜಿಗೆ ಕಾಯಿಲೆಯಂತೆ."

ಇಷ್ಟು ಮಾತು ಆಡಲು ಶೈಲೆಗೆ ಸಾಕುಸಾಕಾಯಿತು.

"ಅಯ್ಯೋ ಪಾಪ, ಅಜ್ಜಿಗೆ ಕಾಯಿಲೆ ಎಂದ ಮೇಲೆ ನೀವು ಊರಿನ ಕಡೆ ಹೋಗಲೇಬೇಕು. ಹಿರಿಯ ಜೀವ ಒಮ್ಮೆ ಹೋಯಿತೆಂದರೆ ಪುನಃ ದೊರೆತೀತೇ? ಕೊನೆಯ ಬಾರಿಯೆಂದು ಕಣ್ಣು ತುಂಬ ನೋಡಿಕೊಂಡು ಬನ್ನಿ" ಎಂದು ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಿದಳು ಲಚುಮಿ.

ಇಷ್ಟಾದರೂ ಲಚುಮಿ ಅಲ್ಲಿಂದ ಏಳುವ ಸೂಚನೆ ಕಂಡುಬರಲಿಲ್ಲ! ಶೈಲೆಗೆ ಹೇಗಾದರೂ ಅವಳಿಂದ ಉಪಾಯವಾಗಿ ಪಾರಾಗಬೇಕಾಗಿದೆ. ಎಂದೇ "ಏನು ಲಚುಮಿ, ನಿನ್ನ ಗಂಡನಿಗೆ ಈವೊತ್ತು ಊಟ-ಅಡಿಗೆ ಇಲ್ಲವೇನು? ಇಲ್ಲಿಯೇ ಕುಳಿತುಬಿಟ್ಟೆ?" ಎಂದಳು.

ಈ ಮಾತುಗಳಿಂದ ಲಚುಮಿಯ ಮುಖಚರ್ಯೆಯೆ ಬದಲಾಯಿತು. ಹುಬ್ಬು ಗಂಟಿಕ್ಕಿತು.

"ನಿನ್ನೆ ರಾತ್ರಿಯೆಲ್ಲ ಮೈನುಗ್ಗಾಗುವಂತೆ ಹೊಡೆದಿದ್ದಾನೆ. ಅದಕ್ಕೆಂದೇ ಇಂದು ಮನೆಗೇ ಹೋಗೋದಿಲ್ಲ. ತಾನೇ ದಾರಿಗೆ ಬರುತ್ತಾನೆ. ಉಪವಾಸ ಇದ್ರೆ ಬುದ್ಧಿ ಬರುತ್ತದೆ. ನೀವು ಏನೂ ಹೇಳಿ. ನಿಮ್ಮ ಗಂಡಸರ ಹಾಗಲ್ಲ ನಮ್ಮ ಜನ. ಅವರಿಗೆ ಸಿಟ್ಟು ಬಂದರೆ ತೀರಿತು. ದನ ಹೊಡೆದಂತೆ ಹೊಡೆಯುತ್ತಾರೆ. ದಯೆ-ಮಾಯೆ ಇಲ್ಲವೇ ಇಲ್ಲ. ಅದಕ್ಕೂ ಪಡೆದು ಬಂದಿರಬೇಕು. ನಿಮ್ಮ ಯಜಮಾನರ ಹಾಗೆ ಇರಲು" ಎಂದುಕೊಳ್ಳುತ್ತ ಹೋಗಲು ಎದ್ದಳು.

ಶೈಲೆ ಕೆಲಸದವಳು ಹೋದ ನಿಟ್ಟನ್ನೇ ನೋಡುತ್ತ "ಗಂಡ-ಹೆಂಡಿರ ಜಗಳಕ್ಕೆ ಶ್ರೀಮಂತಿಕೆಯೇನು ಬಡತನವೇನು? ಆದರೆ ಜಗಳದ ರೀತಿ ಬೇರೆಬೇರೆ. ಬಡತನದಲ್ಲಿ ಹೆಣ್ಣು-ಗಂಡು ಕೂಡಿ ದುಡಿಮೆ ಮಾಡಿ ಸಂಸಾರ ನಡೆಸುವುದರಿಂದ ಇಂಥ ಜಗಳ ಸ್ವಾಭಾವಿಕ. ಆದರೆ ಲಚುಮಿಯನ್ನು ಮೋಸಗೊಳಿಸಲು ತಾನಿಂದ್ಯ ಅಜ್ಜಿಗೆ ಕಾಯಿಲೆಯೆಂದು ಸುಳ್ಳು ಹೇಳಬೇಕಾಯಿತಲ್ಲವೇ" ಎಂದು ಮರುಗಿದಳು.

ಯಾರಿಲ್ಲದಾಗಲು ಪುನಃ ಅವಳ ಮನಸ್ಸು ಹಿಂದಿನ ರಾತ್ರಿಯನ್ನು ಜ್ಞಾಪಿಸಿಕೊಂಡಿತು. ಪತಿಗೆ ಬೇಡಾದ ಈ ಜೀವ ಇದ್ದೇನು ಫಲ? ಹೇಗೆ ಕೊನೆಗಾಣಿಸಲಿ? ಅತ್ತೆ-ಮಾವಂದಿರಿಗೆ ಇದು ತಿಳಿದರೆ? ಇಂಥ ಸಮಯವನ್ನೇ ಇದಿರು ನೋಡುತ್ತಿರುವ ಜನ ಆಡಿಕೊಳ್ಳದೆ ಬಿಟ್ಟತೇ?

ತನ್ನ ಹಸುಳೆಯ ನೆನಪು ಬರುತ್ತಲೇ ಶೈಲೆ ಹುಚ್ಚಿಯಂತಾದಳು. ಮಗ-ಪತಿ ಇವರಿಬ್ಬರನ್ನಗಲಿ ನಾನು ಎಲ್ಲಿ ಹೋಗಬಲ್ಲೆ? ಸಾವನ್ನಪ್ಪುವುದಾದರೂ ಹೇಗೆ? ಯಾವ ಬಗೆಯಿಂದ ಧೈರ್ಯ ತಂದುಕೊಳ್ಳಲಿ? ನನ್ನ ಮನದ ನೋವನ್ನು ಯಾರ ಮುಂದೆ ತೋಡಿಕೊಳ್ಳಲಿ? ಒಂದು ಚಿಕ್ಕ

ಮಾತಿಗೂ ರಮಿಸಲು ಬರುವ ಆನಂದ, ಇಂದು ತೀರ ನಸುಕಿನಲ್ಲಿ ಅನಾರೋಗ್ಯದಲ್ಲಿಯೂ ಹೊರಟುಹೋದದ್ದು ಅವಳನ್ನು ಭಯವ್ವಲಳನ್ನಾಗಿ ಮಾಡಿದೆ. ದಾರಿಕಾಣದ ಪಥಿಕನಂತೆ ದಿಕ್ಕೆಟ್ಟು ಕುಳಿತುಬಿಟ್ಟಿದ್ದಾಳೆ.

ಹೇಮಂತನ ಬೆಳಗಿನ ಹಾಲು-ತಿಂಡಿಯ ಕಾರ್ಯಕ್ರಮ ಮುಗಿಸಿ ಸುವರ್ಣೆ ಅತ್ತಿಗೆಯ ಹತ್ತಿರ ಬಂದಾಗಲೂ ಶೈಲೆ ಕುಳಿತಿರದೆ ಹಾಸಿಗೆಯಲ್ಲಿ ಬೋರಲಾಗಿ ಬಿದ್ದುಕೊಂಡಿದ್ದಳು.

ಸುವರ್ಣೆ ಅತ್ತಿಗೆಗಾದ ನೋವು ಎಷ್ಟಿರಬಹುದೆಂದು ತನ್ನಲ್ಲಿಯೇ ಊಹಿಸಿಕೊಂಡಳು. ಶೈಲೆ ಇದುವರೆಗೂ ಹೀಗೆ ಮನೆಯಲ್ಲಿ ನಡೆದುಕೊಂಡಿರಲಿಲ್ಲ. ಅಣ್ಣನಾದರೂ ಮನೆಯಲ್ಲಿರುತಿದ್ದರೆ! ಏನೂ ತಿಳಿಯದಾಗಲು ಹೇಮಂತನನ್ನು ಪುನಃ ಎತ್ತಿಕೊಂಡು ಎದುರಿನ ತೋಟಕ್ಕೆ ಹೋದಳು.

ಶೈಲೆಯ ಕಣ್ಣೀರಿನಿಂದ ದಿಂಬೆಲ್ಲ ಒದ್ದೆಯಾಗಿತ್ತು. ದಿಂಬಿಗೆ ಕೈ ಸವರುವಾಗ ಒಂದು ಕಾಗದ ಅವಳ ಕೈಗೆ ತಾಕಿತು. ನೋಡುತ್ತಾಳೆ ಆನಂದನ ಕೈ ಬರಹ; ಬರೆದದ್ದು ತನ್ನನ್ನೇ ಕುರಿತು, ಓದಲು ಒಮ್ಮೆಗೇ ಧೈರ್ಯವಾಗಲೊಲ್ಲದು. ಓದದಿರಲಿಕ್ಕೂ ಮನಸ್ಸು ಕೇಳದು. ಮತ್ತೇನು ಕಾದಿದೆಯೋ ಎನ್ನುವ ಭೀತಿ. ಕಂಬನಿಯ ಮಂಜಿನಲ್ಲಿಯೇ ಓದತೊಡಗಿದಂತೆ ದೃಷ್ಟಿ ಮತ್ತೂ ಮಂಜಾಯಿತು.

ಎದೆ ಭಾರವೆಲ್ಲ ಇಳಿದಂತಾಯಿತು. ತನಗರಿಯದಂತೆ ಮನಸ್ಸು ಹಗುರಾಯಿತು.

ಇರುಳಿನ ದುಃಖದ ಬೇಗೆ ಇಷ್ಟು ಲಘುವಾಗಿ ಬಿಳಿಯ ಮೋಡವಾಗಿ ತೇಲಿಹೋದೀತೆಂದು ಶೈಲೆ ಭಾವಿಸಿರಲಿಲ್ಲ. ಪಶ್ಚಾತ್ತಾಪದ ಬೆಂಕಿಯಲ್ಲಿ ಬೇದ ಪತಿಯನ್ನು ಸಂತೈಸುವ ಹೊಣೆ ತನ್ನದೆಂದರಿತ ಅವಳು, ಲಗುಬಗೆಯಿಂದ ಅಲ್ಲಿಂದೆದ್ದು ನಿಲುವುಗನ್ನಡಿಯ ಎದುರಿಗೆ ಹೋಗಿ ನಿಂತಳು. ತನ್ನ ಕೆದರಿದ ಕೂದಲು, ನಿದ್ದೆಗೆಟ್ಟ ಕಣ್ಣುಗಳು, ಮುದುಡಿದ್ದ ಮೊಗವನ್ನು ಕಂಡು ಅವಳಿಗೇ ದಿಗಿಲು.

ತನ್ನ ನೀಳವಾದ ಜಡೆಯನ್ನು ಬಿಚ್ಚಿ ಹಣಿಗೆಯಿಂದ ಬಾಚಿಕೊಂಡು ಚೆಲುವಾಗಿ ಮುಡಿಕಟ್ಟಿಕೊಂಡಳು. ಎದುರಿನ ಕುರುಳನ್ನು ತುಸು ಕೆದರಿಕೊಂಡಳು. ಆನಂದನಿಗೆ ಹಾಗಿದ್ದರೆ ಬಹು ಪ್ರೀತಿ. ಇಷ್ಟೆಲ್ಲ ಅಲಂಕಾರ ಮುಗಿಸಿ ಪುನಃ ಕನ್ನಡಿಯಲ್ಲಿ ನೋಡಿಕೊಂಡಳು, ಅದೆಷ್ಟು ತ್ವರೆಯಾಗಿ ತನ್ನ ಮುಖದಲ್ಲಿ ಬದಲಾವಣೆ? ಅದಕ್ಕೆ ಕಾರಣವಾದ ಓಲೆಯನ್ನು ಮುದ್ದಿಟ್ಟು ಮತ್ತೆ ದಿಂಬಿನ ಕೆಳಗಿರಿಸಿ ಹೊರಬಂದಳು ಶೈಲೆ. ಅಲ್ಲಿಯೇ ನಾಯಿಯೊಂದಿಗೆ ಆಡುತ್ತ ಕುಳಿತಿದ್ದ ಮಗು ಹೇಮಂತನನ್ನು ಹಿಡಿದೆತ್ತಿ ಮುದ್ದಾಡಿದಳು. ತನಗೆದುರಾಗಿ ಬರುತ್ತಿದ್ದ ನಾದಿನಿಯ ಭುಜ ಅಲುಗಿಸಿ ನಗುತ್ತ ಹೊರಡುವ ಶೈಲೆಯನ್ನು ಸುವರ್ಣೆಯೇ ಬಿಡದೆ, "ಏನತ್ತಿಗೆ? ಈ ವರೆಗೂ ಬಾಡಿ-ಬತ್ತಿದಂತಿದ್ದ ನೀನು ಅದಾವ ಮೋಡಿಯಿಂದ ಅರಳುಮಲ್ಲಿಗೆಯಾದಿ?" ಎಂದು ಬೆರಗಾಗಿ ಕೇಳಿದಳು. ಮನದ ನೋವನ್ನು ಕಳೆದುಕೊಂಡ ಶೈಲೆ ಹೂವಿಗಿಂತಲೂ ಹಗುರಾಗಿದ್ದಳು. ಜಾಣೆ ಸುವರ್ಣೆಯ ಮಾತಿಗೆ ಅವಳು ಯಾವ ಉತ್ತರವನ್ನೂ ಕೊಡದೆ ಮಮತೆಯಿಂದ ಸುವರ್ಣೆಯ ಕೆನ್ನೆಗೆ ಮೆಲ್ಲನೆ ಚಿವುಟಿ ಅಲ್ಲಿಂದ ಪಾರಾಗಿ ಸ್ನಾನಕ್ಕಾಗಿ ಹೊರಟುಹೋದಳು.

ಉಳುವವನಿಗೆ ಭೂಮಿಯ ಒಡೆತನ

(ಹೊಸ ಹೊಲಸಾಗುವಳಿ ಕಾಯದೆಯ ಸ್ವರೂಪದರ್ಶನ)

ಮುಂಬಯಿ ಸರಕಾರವು ೧೯೫೭ ಎಪ್ರಿಲ ೧ ರಿಂದ ಭೂಮಿಯನ್ನು ಒಡೆಯರಿಂದ ತೆಗೆದುಕೊಂಡು ರೈತರಿಗೆ ಕೊಡುವ ಕಾಯದೆ ಮಾಡಿದೆ. ಆದರೆ ಈ ಕಾಯದೆಯಿಂದ ರೈತರಿಗೆ ಅವರು ಭಾವಿಸುವಷ್ಟು ಅನಿರ್ಬಂಧ ಸವಲತ್ತು ದೊರೆಯುವದಿಲ್ಲ. ಅವರು ಹಲವು ನಿಬಂಧನೆಗಳನ್ನು ಪಾಲಿಸಿದರಷ್ಟೇ—ಪಾಲಿಸುತ್ತಿರುವಷ್ಟು ಕಾಲ ಹೊಲದ ಮಾಲಕಿ ಹಕ್ಕು ಉಳಿಯುವದು. ತಪ್ಪಿದರೆ ಹೊಲವೂ ಕೈಬಿಡುವದು.

ಲೇಖಕರು : ಶ್ರೀ. ಆರ್. ಬಿ. ಕುಲಕರ್ಣಿ

ಮುಂಬಯಿ ವಿಧಾನ ಮಂಡಲವು ಹೊಲ ಸಾಗುವಳಿ ಕಾಯದೆ (೧೯೪೮) ತಿದ್ದುಪಡಿ ವಿಧೇಯಕವನ್ನು ಇದೇ ಸಪ್ಟಂಬರ ೩೦ನೇ ದಿನಾಂಕ ಪಾಸುಮಾಡಿತು. ಈ ವಿಧೇಯಕವು ಕಾಯದೆಯಾಗಿ ಜಾರಿಯಲ್ಲಿ ಬರಲು ಸಂವಿಧಾನದಲ್ಲಿ ಹೇಳಿದ ವಿಧಿಯಂತೆ ರಾಜ್ಯಪಾಲ ಹಾಗೂ ರಾಷ್ಟ್ರಪತಿಗಳ ಮನ್ನಣೆಯ ಮುದ್ರೆ ಬೀಳುವದು ಮಾತ್ರ ಉಳಿದಿದೆ.

ಇಡೀ ರಾಜ್ಯದ ಗಮನವನ್ನು ಸೆಳೆದ ಈ ವಿಧೇಯಕದಿಂದ ರೈತ ಒಡೆಯ ಈ ವರ್ಗಗಳಿಗೆ ದೊರೆತ ಹಕ್ಕು ಬಾಧ್ಯತೆಗಳೇನು ? ಇದನ್ನು ಸ್ಥೂಲವಾಗಿ ಇಲ್ಲಿ ವಿವೇಚಿಸಲಾಗುವದು.

ವಿಧೇಯಕದ ವೈಶಿಷ್ಟ್ಯ

ರೈತರಿಗೆ ಅವರು ಸಾಗುವಳಿಗೆ ಹಿಡಿದ ಭೂಮಿಯ ಸಾಗುವಳಿಯ ಹಕ್ಕಿನ ಭದ್ರತೆಯನ್ನು ಕೊಟ್ಟು ಒಡೆಯರು ರೈತನ ಆರ್ಥಿಕ ಶೋಷಣೆ ನಡೆಸದಂತೆ ಯೋಗ್ಯ ಲಾವಣಿ ಗೊತ್ತುಪಡಿಸುವ ಉದ್ದೇಶದಿಂದ ಮಾತ್ರ ಮುಂಬಯಿ ಸರಕಾರವು ಈ ಮೊದಲಿನ ಹೊಲ ಸಾಗುವಳಿ ಕಾಯದೆಗಳನ್ನು ಮಾಡಿತ್ತು. ೧೯೪೮ರಲ್ಲಿ ಮಾಡಿದ ಹೊಲಸಾಗುವಳಿ ಕಾಯದೆಯಲ್ಲಿ ಸಂರಕ್ಷಿತ ರೈತನಿಗೆ ತಾನು ಸಾಗುವಳಿ ಮಾಡುವ ಭೂಮಿಯನ್ನು ಕೊಂಡುಕೊಳ್ಳುವ ಹಕ್ಕು ಇರುವದೆಂಬ ಕಲಮು ಸೇರಿಸಿ ಉಳುವವನು ಭೂಮಿಯ ಒಡೆಯನಾಗುವ ದಾರಿಯನ್ನು ಮೊಟ್ಟಮೊದಲು ತೋರಿಸಿಕೊಟ್ಟಂತಾಯಿತು. ಸಂರಕ್ಷಿತ ರೈತನು ಭೂಮಿಯನ್ನು ಕೊಳ್ಳಲೇಬೇಕೆಂಬ ಒತ್ತಾಯವೇನೂ ಇರಲಿಲ್ಲ. ಭೂಮಿಯ ಬೆಲೆಯನ್ನು ರೈತ—ಒಡೆಯರು ಪರಸ್ಪರ ನಿರ್ದಿಷ್ಟಪಡಿಸಿಕೊಳ್ಳಲು ಅವಕಾಶ ಕೊಡಲಾಗಿತ್ತು. ಉಭಯತರು ತಮ್ಮತಮ್ಮಲ್ಲಿ ಒಮ್ಮತಕ್ಕೆ ಬಾರದಂಥ ಪರಿಸ್ಥಿತಿ ತಲೆದೋರಿದಲ್ಲಿ ಟ್ರಿಬ್ಯೂನಲ್ಲು ಗೊತ್ತುಪಡಿಸಿದ ಮಾರಾಟದ ಬೆಲೆಯನ್ನು ರೈತನು ಕೊಡತಕ್ಕದ್ದೆಂದು ವಿಧಿಸಲಾಗಿತ್ತು.

ಈಗಿನ ವಿಧೇಯಕವು ಉಳುವವನಿಗೆ ಭೂಮಿಯ ಒಡೆತನದ ಹಕ್ಕನ್ನು ಪಡೆಯಲು ಒತ್ತಾಯಪಡಿಸುವಂಥದಾಗಿದೆ. ೧೯೫೭ನೇ ಎಪ್ರಿಲ ೧ನೇ ದಿನಾಂಕವು "ಉಳುವವರ ದಿನ" ವೆಂದು ಈ ಕಾಯದೆಯಿಂದ ಸಾರಲಾಗಿದೆ. ಅಂದಿನ ದಿನ ಭೂಮಿಯನ್ನು ಸಾಗುವಳಿ ಮಾಡುವ ರೈತನು—ಅವನು ಕಾಯಂ ಕುಳನಿರಲಿ, ಸಂರಕ್ಷಿತ ರೈತನಿರಲಿ, ಸಾದಾ ರೈತನಿರಲಿ-- ಅವನ ಕಬಜೆಯಲ್ಲಿರುವ ಭೂಮಿಯನ್ನು ತಾನು ಕೊಂಡಿರುವನೆಂದು ಗ್ರಹಿಸಲಾಗುವದೆಂಬ ತತ್ವವು ಈ ವಿಧೇಯಕದ ವೈಶಿಷ್ಟ್ಯವಾಗಿದೆ.

ಈನ್ನಿತರ ರಾಜ್ಯಗಳ ಹೊಲ ಸಾಗುವಳಿ ಕಾಯದೆಗಳಲ್ಲಿ ಕಂಡುಬರದಿರುವ ಆದರೆ ಈ ವಿಧೇಯಕದ ಪ್ರಾಣದಂತಿರುವ ಇನ್ನೊಂದು ಅಂಶವೆಂದರೆ—"ಪರಮಾವಧಿ ಹಿಡುವಳಿ" ಯನ್ನು ನಿರ್ದಿಷ್ಟಪಡಿಸಿದ್ದು ಮತ್ತು ಪರಮಾವಧಿ ಹಿಡುವಳಿಗಿಂತ ಹೆಚ್ಚಿನ ಕ್ಷೇತ್ರವು ಈ ಕಾಯದೆಯು ಜಾರಿಯಲ್ಲಿ ಬಂದ ನಂತರ ಯಾರ ಒಡೆತನಕ್ಕೂ ಸೇರಲಾಗದೆಂದು ನಿರ್ಬಂಧಪಡಿಸಿದ್ದು.

ಎಲ್ಲ ರೈತರಿಗೆ ಹೊಲ ಸಿಗುವದಿಲ್ಲ

೧೯೫೭ನೇ ಎಪ್ರಿಲ ೧ ರಂದು ತಮ್ಮ ವಶವಿರುವ ಭೂಮಿಯೆಲ್ಲ ತಮ್ಮದೇ ಆಗುವದೆಂದು ಹಳ್ಳಿಗಳಲ್ಲಿರುವ ಅಜ್ಞ ರೈತಬಾಂಧವರು ಭ್ರಾಮಕ ವಿಚಾರದಿಂದ ಹರ್ಷಭರಿತರಾಗಿರುವರು. ಆದರೆ ಎಲ್ಲ ರೈತರಿಗೆ ಈ ಹಕ್ಕು ದೊರೆಯುವದಿಲ್ಲೆಂದು ಅವರು ಅರಿಯಬೇಕು.

* ಪರಮಾವಧಿ ಹಿಡುವಳಿಯ ಕ್ಷೇತ್ರದಷ್ಟು ಅಥವಾ ಅದಕ್ಕಿಂತ ಹೆಚ್ಚು ಸ್ವಂತ ಭೂಮಿ ಇರುವ ರೈತನಿಗೆ ಅವನು ಎಷ್ಟೇ ಭೂಮಿಯನ್ನು ಸಾಗುವಳಿಗೆ ಹಿಡಿದಿದ್ದರೂ ಅದನು ಕೊಳ್ಳುವ ಹಕ್ಕು ಪ್ರಾಪ್ತವಾಗುವದಿಲ್ಲ.
* ಇನ್ನು ಪರಮಾವಧಿ ಹಿಡುವಳಿಗಿಂತ ಕಡಿಮೆ ಸ್ವಂತ ಭೂಮಿ ಇರುವ ರೈತನಿಗೆ ತಾನು ಸಾಗುವಳಿಗೆ ಹಿಡಿದ ಭೂಮಿಯಲ್ಲಿ ಪರಮಾವಧಿ ಹಿಡುವಳಿಯ ಕ್ಷೇತ್ರವಾಗುವ ಮಟ್ಟಿಗೆ ಮಾತ್ರ ಭೂಮಿಯನ್ನು ಕೊಳ್ಳುವ ಅಧಿಕಾರ ಪ್ರಾಪ್ತವಾಗುವದು.
* ಸರಕಾರದ ಒಡೆತನದ, ನಗರ ಸಭೆ, ಲೋಕಲ್ ಬೋರ್ಡ ಈ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ, ಸಾರ್ವಜನಿಕ ಧರ್ಮನಿಧಿ ಸಂಸ್ಥೆಗಳ, ದೇವಸ್ಥಾನ, ಸಹಕಾರಿ ಸಂಘ ಇವುಗಳ ಒಡೆತನಕ್ಕೆ ಸೇರಿದ ಭೂಮಿಯನ್ನು ಸಾಗುವಳಿಗೆ ಹಿಡಿದ ರೈತರಿಗೆ ಆ ಭೂಮಿಗಳನ್ನು ಕೊಳ್ಳುವ ಹಕ್ಕು ಈ ಕಾಯದೆಯಿಂದ ಬರುವದಿಲ್ಲ.
* ಆರ್ಥಿಕ ಹಿಡುವಳಿಗಿಂತ ಕಡಿಮೆ ಕ್ಷೇತ್ರದ ಒಡೆತನ ಪಡೆದ ಹೊಲದೊಡೆಯನ ಭೂಮಿಯನ್ನು ಲಾವಣಿ ಹಿಡಿದ ರೈತನಿಗೆ ಭೂಮಿಯನ್ನು ಕೊಳ್ಳುವ ಹಕ್ಕು ಮರ್ಯಾದಿತವಾದುದಾಗಿರುವದು. ಇಂಥ ಒಡೆಯನ ವಾರ್ಷಿಕ ಆದಾಯವು ಭೂಮಿಯ ಲಾವಣಿ ಸಹಿತವಾಗಿ ಒಟ್ಟು ೧,೫೦೦ ರೂ. ಗಿಂತ ಕಡಿಮೆ ಇದ್ದ ಸಂದರ್ಭದಲ್ಲಿ ರೈತನಿಗೆ ಇಂಥ ಅವನ ಭೂಮಿಯ ಒಡೆತನವು ಕಾಯದೆಯನ್ವಯ ಪ್ರಾಪ್ತವಾಗಲಾರದು.
* ಅಲ್ಪವಯಿ, ವಿಧವೆ, ಅಂಗಹೀನರು, ಸೈನ್ಯದಲ್ಲಿ ದಲ್ಲಿ ಸೇರಿ ಸೈನಿಕರಾಗಿರುವವರು ಇವರ ಒಡೆತನಕ್ಕೆ ಸೇರಿದ ಭೂಮಿಯನ್ನು ಸಾಗುವಳಿ ಹಿಡಿದ ರೈತರಿಗೆ ಕೊಳ್ಳುವ ಹಕ್ಕು ಪ್ರಾಪ್ತವಾಗುವದಿಲ್ಲ.

ರೈತನ ಒಕ್ಕಲೆಬ್ಬಿಸದಂತೆ ವ್ಯವಸ್ಥೆ

ಮೇಲೆ ಕಾಣಿಸಿದ ಅಪವಾದಗಳನ್ನು ಬಿಟ್ಟು ಉಳಿದ ರೈತರಿಗೆ ಅವರು ಸಾಗುವಳಿಗೆ ಹಿಡಿದ ಭೂಮಿಯಲ್ಲಿ ಒಟ್ಟು ಪರಮಾವಧಿ ಕ್ಷೇತ್ರವಾಗುವ ಮಟ್ಟಿಗೆ ಭೂಮಿಯನ್ನು ಕೊಳ್ಳಲು ಅಧಿಕಾರ ದೊರೆಯುವದು. ಆದರೆ ಸ್ವಂತ ಸಾಗುವಳಿಗೆ ಬೇಕೆಂದು ಹೊಲದೊಡೆಯನು ೧೯೫೬ ನೇ ಡಿಸೆಂಬರ ೩೧ ರ ಒಳಗಾಗಿ ರೈತನಿಗೆ ನೋಟೀಸು ಕೊಟ್ಟು ಅದರ ಪ್ರತಿಯನ್ನು ಮಾಮಲೇದಾರರಿಗೂ ಕಳಿಸಿ ಕೊಟ್ಟದ್ದರೆ ಹೊಲದೊಡೆಯನ ಅರ್ಜಿಯು ನಿಕಾಲೆ ಆಗುವವರೆಗೆ. ರೈತನಿಗಿರುವ ಭೂಮಿಯನ್ನು ಕೊಳ್ಳುವ ಹಕ್ಕು ಸ್ಥಗಿತವಾಗುವದು. ಮಾಮಲೇದಾರರು ಹೊಲದೊಡೆಯನ ಅರ್ಜಿಯನ್ನು ಮಂಜೂರಮಾಡಿದರೆ ರೈತನು ಭೂಮಿಯನ್ನು ಬಿಟ್ಟುಕೊಡಬೇಕಾಗುವದು. ಸ್ವಂತ ಸಾಗುವಳಿಗೆಂದು ಹೊಲದೊಡೆಯನಿಗೆ ರೈತನಿಂದ ಭೂಮಿಯನ್ನು ಬಿಡಿಸಿ ಕೊಡುವಾಗಲೂ ರೈತನ ಒಕ್ಕಲೆಬ್ಬಿಸದಂತೆ ಮಾಮಲೇದಾರರು ನೋಡಿಕೊಳ್ಳಬೇಕಾಗುವದು. ರೈತನು ಸಾಗುಮಾಡುವ ಕ್ಷೇತ್ರವು ಪರಮಾವಧಿ ಹಿಡುವಳಿಗಿಂತ ಹೆಚ್ಚಿ-

ಗಿದ್ದರೆ ರೈತನಿಗೆ ಆರ್ಥಿಕ ಹಿಡುವಳಿಯಷ್ಟು ಕ್ಷೇತ್ರವನ್ನು ಬಿಟ್ಟು ಹೆಚ್ಚಿನ ಕ್ಷೇತ್ರವನ್ನಷ್ಟೇ ಬಿಡಿಸಿಕೊಡಬೇಕಾಗುವದು. ರೈತನ ವಶದಲ್ಲಿ ಆರ್ಥಿಕ ಹಿಡುವಳಿಯಷ್ಟು ಅಥವಾ ಅದಕ್ಕಿಂತ ಕಡಿಮೆ ಕ್ಷೇತ್ರವಿದ್ದರೆ ಅದರಲ್ಲಿ ಅರ್ಧದಷ್ಟು ರೈತನಿಗೆ ಉಳಿಸಿ ಮಿಕ್ಕ ಅರ್ಧ ಕ್ಷೇತ್ರವನ್ನು ಮಾತ್ರ ಹೊಲದೊಡೆಯನಿಗೆ ಬಿಡಿಸಿಕೊಡತಕ್ಕದ್ದೆಂದು ಕಾಯದೆಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಸ್ವಂತ ಸಾಗುವಳಿಯ ಮೇಲೆ ಹಾಕಿದ ನಿರ್ಬಂಧಗಳು

ಸ್ವಂತ ಸಾಗುವಳಿ ಮಾಡುತ್ತಲಿರುವ ಹೊಲದೊಡೆಯರಿಗೆ ಪರಮಾವಧಿ ಕ್ಷೇತ್ರದ ನಿರ್ಬಂಧವು ಅನ್ವಯಿಸುವದಿಲ್ಲ. ಸಾವಿರಾರು ಎಕರೆ ಭೂಮಿಯನ್ನು ಅವರು ಸ್ವಂತ ಸಾಗುವಳಿ ಮಾಡುತ್ತಲಿದ್ದರೂ ಅವುಗಳನ್ನು ಅವರು ಉಳಿಸಿಕೊಳ್ಳಬಹುದು. ಆದರೆ ಸ್ವಂತ ಸಾಗುವಳಿ ವ್ಯಾಖ್ಯೆಯನ್ನು ತಿದ್ದುಪಡಿ ಮಾಡಿ ಒಂದು ಗ್ರಾಮದ ಹದ್ದಿನಲ್ಲಿಯ ಅಥವಾ ಒಂದು ಹೊಲದಿಂದ ಇನ್ನೊಂದು ಹೊಲವು ಐದು ಮೈಲಿನೊಳಗೇ ಇರುವ, ಅಥವಾ ಎಷ್ಟೇ ಕ್ಷೇತ್ರವಿದ್ದರೂ ಒಂದೇ ಹಾಸಿಗೆಯಾಗಿರುವ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರೆ ಅದು ಮಾತ್ರ ಸ್ವಂತಸಾಗುವಳಿ ಎಂದು ತಿಳಿಯತಕ್ಕದ್ದು, ಎಂದು ವಿಧಿಸಲಾಗಿದೆ. ಇದರಿಂದ ಒಡೆಯನು ಅನೇಕ ಹಳ್ಳಿಗಳಲ್ಲಿರುವ ಭೂಮಿಯನ್ನು ಆಳು ಹೋಳುಗಳನ್ನಿಟ್ಟು ಸ್ವಂತ ಮೇಲ್ವಿಚಾರಣೆಯಲ್ಲಿ ಸಾಗುವಳಿ ಮಾಡುತ್ತಿದ್ದರೂ ಮೇಲಿನ ಸ್ವಂತ ಸಾಗುವಳಿಯ ವ್ಯಾಖ್ಯೆಯ ಚೌಕಟ್ಟಿನಲ್ಲಿ ಸೇರದ ಭೂಮಿಯನ್ನು ಸ್ವಂತ ಸಾಗುವಳಿಯಲ್ಲಿರುವ ಭೂಮಿ ಎಂದು ಗಣಿಸಲಾಗುವದಿಲ್ಲ. ಅನೇಕ ಗ್ರಾಮಗಳಲ್ಲಿ ಭೂಮಿ ಇರುವ ದೇಸಾಯಿ ದೇಶಪಾಂಡೆ, ಜಹಗೀರದಾರ ಇವರು ಸ್ವಂತ ಸಾಗುವಳಿ ವ್ಯಾಖ್ಯೆಯಲ್ಲಿ ಬರುವಷ್ಟು ಕ್ಷೇತ್ರವನ್ನು ಮಾತ್ರ ಉಳಿಸಿಕೊಳ್ಳಬಹುದು. ಆದರೆ ೪೮ ಎಕರೆ ಮೀರದಷ್ಟು ಕ್ಷೇತ್ರವನ್ನು ಸ್ವಂತ ಸಾಗುವಳಿ ಮಾಡುವವರಿಗೆ ಆ ಭೂಮಿ ಎಲ್ಲಿದ್ದರೂ ಸ್ವಂತ ಸಾಗುವಳಿ ಎಂದು ಗಣಿಸಲಾಗುವದು.

ಈಗ ರೈತರಿಗೆ ಭೂಮಿಯನ್ನು ಸಾಗುವಳಿಗೆ ಕೊಟ್ಟ ಹೊಲದೊಡೆಯರು ಸ್ವಂತ ಸಾಗುವಳಿಗೆಂದು ರೈತರಿಂದ ಭೂಮಿಯನ್ನು ಬಿಡಿಸಿಕೊಳ್ಳಲು ಅನೇಕ ನಿರ್ಬಂಧಗಳನ್ನು ಈ ಕಾಯದೆಯಿಂದ ಹೇರಲಾಗಿದೆ.

ಮೊದಲನೆಯದಾಗಿ ಸ್ವಂತ ಸಾಗುವಳಿಗೆ ಭೂಮಿಯು ಬೇಕಾಗಿದೆ ಎಂದು ಅರ್ಜಿ ಕೊಡುವ ಹೊಲದೊಡೆಯನು ೧೯೫೨ ನೇ ಜಾನೇವರಿ ೧ ನೇ ದಿನಾಂಕದ ಮೊದಲು ಆ ಭೂಮಿಯು ತನ್ನ ಅಥವಾ ತನ್ನ ಕುಟುಂಬದ ಹಿರಿಯರ ಹೆಸರಿನಿಂದ ಖಾತೆ ಇದ್ದರೆ ಮಾತ್ರ ಅರ್ಜಿ ಕೊಡಲು ಅಧಿಕಾರವಿದೆ. ೧೯೫೨ ನೇ ಜಾನೇವರಿಯಿಂದೀಚೆಗೆ ಖರೀದಿಗೆ ಕೊಂಡ ಹೊಲದೊಡೆಯನಿಗೆ ಸ್ವಂತ ಸಾಗುವಳಿಗಾಗಿ ಭೂಮಿಯನ್ನು ರೈತನಿಂದ ಬಿಡಿಸಿಕೊಳ್ಳಲು ಅಧಿಕಾರವೇ ಇಲ್ಲದಂತೆ ನಿರ್ಬಂಧಪಡಿಸಲಾಗಿದೆ.

ಸ್ವಂತ ಸಾಗುವಳಿಗಾಗಿ ಭೂಮಿ ಬಿಡಿಸಿಕೊಳ್ಳಬೇಕಾದರೆ ಒಡೆಯನು (೧) ೧೯೫೬ ಡಿಸೆಂಬರ ೩೧ ರೊಳಗೆ ರೈತನಿಗೆ ನೋಟೀಸು ಕೊಟ್ಟು ಮಾಮಲೇದಾರನಿಗೆ ತಿಳಿಸಬೇಕು. (೨) ೧೯೫೭ ಎಪ್ರಿಲ ೧ ರೊಳಗಾಗಿ ಕಬ್ಜಾ ಬಗ್ಗೆ ಮಾಮಲೇದಾರನಿಗೆ ಅರ್ಜಿ ಕೊಡಬೇಕು. (೩) ಈ ಭೂಮಿಯೇ ತನ್ನ ಕುಟುಂಬದ ಮುಖ್ಯ ಜೀವನಾಧಾರವೆಂದು ತೋರಿಸಿಕೊಡಬೇಕು. ಈ ಅನುಷ್ಠಾನಗಳನ್ನು ಪಾಲಿಸದೆ ಕಬ್ಜಾ ದೊರೆಯಲಾರದು. ಈ ಮೇಲಿನ ಅಂಶಗಳು ಸತ್ಯವೆಂದು ಮನವರಿಕೆಯಾದರಷ್ಟೇ ಮಾಮಲೇದಾರನು ಕಬ್ಜಾ ಕೊಡಿಸಬಹುದು. ಇಷ್ಟಾದರೂ ಒಡೆಯನಿಗೆ ಪರಮಾವಧಿ ಕ್ಷೇತ್ರಕ್ಕಿಂತ ಹೆಚ್ಚಿನ ಭೂಮಿ ಎಂದೂ ಕಬ್ಜೆಗೆ ಬರಲಾರದು. ಅಲ್ಲದೆ, ರೈತನಿಗೆ ಈ ಭೂಮಿ ಹೊರತು ಬೇರೆ ಸ್ವಂತ ಅಥವಾ ಈ ಕಾಯದೆಯಂತೆ ಕೊಳ್ಳುವ ಹಕ್ಕು ಬರುವ ಭೂಮಿಯೇ ಇಲ್ಲದಿದ್ದರೆ ಒಡೆಯನು ಅರ್ಧ ಭೂಮಿಯನ್ನಷ್ಟೇ ತಿರುಗಿ ಪಡೆಯುವನು. ಅಲ್ಲಿ ಕೂಡ ಹೀಗೆ ಭಾಗ ಮಾಡುವಾಗ ಆ ಭಾಗವು ತುಂಡುಭೂಮಿ ಪ್ರತಿಬಂಧಕ ಕಾಯದೆಯ ಕನಿಷ್ಠ ಮಿತಿಗಿಂತ ಕಡಿಮೆಯಾಗುವಂತಿದ್ದರೆ ಇಡೀ ಭೂಮಿ ರೈತನಿಗೇ

ದೊರೆಯುವದಲ್ಲದೆ ಒಡೆಯನಿಗೆ ಏನೂ ದೊರೆಯದು.

ಆದರೆ ಭೂಮಿಯ ಆದಾಯ ಉದರಂಭರಣೆಗೆ ಸಾಲದೆ ಊರುಬಿಟ್ಟು ಹೋಗಿ ಬೇರೆ ಉದ್ಯೋಗ ಮಾಡುವ ಕಡಿಮೆ ಉತ್ಪನ್ನದ ಚಿಕ್ಕ ಹಿಡುವಳಿದಾರರಿಗೆ ಒಂದು ಹೆಚ್ಚಿನ ಸಂರಕ್ಷಣೆ ಇದೆ. ಇಂಥವರ ವಾರ್ಷಿಕ ಉತ್ಪನ್ನವು ಹೊಲದ ಉತ್ಪನ್ನ, ಸಂಬಳ ವಗೈರೆ ಸಹಿತ ರೂ. ೧,೫೦೦ ಅಥವಾ ಅದಕ್ಕೂ ಕಡಿಮೆಯಿದ್ದರೆ ರೈತರಿಗೆ ಅವರ ಭೂಮಿ ಕೊಳ್ಳುವ ಹಕ್ಕು ಬರುವದಿಲ್ಲ. ಆದರೂ ಇಂಥವರು ಹೊಲ ಬಿಡಿಸಲಾರರು; ಮತ್ತು ಈ ಕಾಯದೆಯಿಂದ ನಿರ್ದಿಷ್ಟವಾದ ಲಾವಣಿ ಪಡೆಯಲು ಮಾತ್ರ ಅರ್ಹರಾಗುವರು.

ಪರಮಾವಧಿ ಲಾವಣಿ

ಈ ಕಾಯದೆಯಲ್ಲಿ ಲಾವಣಿ ಬಗ್ಗೆ ಹಿಂದಿನ ಕಾಯದೆಗಳಿಗಿಂತ ಬೇರೆಯೇ ವಿಧಿಗಳನ್ನು ಗೊತ್ತುಪಡಿಸಿದೆ. ೧೯೪೮ ರ ಕಾಯದೆಯಲ್ಲಿ ಒಡೆಯನು ಭೂಮಿಯ ಪೈರಿನ ಒಂದು ಅರಂಶ ಇಲ್ಲವೆ ಅದರ ಬೆಲೆಯಷ್ಟು ಲಾವಣಿ ಪಡೆಯಬಹುದಿತ್ತು. ಈ ಕಾಯದೆಯಲ್ಲಿ ಪೈರಿನ ಪಾಲನ್ನು ಒಡೆಯನು ಪಡೆಯಲಾರನು; ಹಣರೂಪದಲ್ಲಿಯೇ ಲಾವಣಿ ಪಡೆಯತಕ್ಕದ್ದು. ಈ ಲಾವಣಿಯ ನಿಶ್ಚಯಕ್ಕೆ ಭೂಮಿಯ ತರಮು (ಸರಕಾರಿ ಕಂದಾಯ) ತಳಹದಿಯಾಗುವದು. ಲಾವಣಿಯು ತರಮಿನ ೨ ಪಟ್ಟಿಗಿಂತ ಕಡಿಮೆಯಾಗದಷ್ಟು ಹಾಗು ೫ ಪಟ್ಟಿಗಿಂತ ಹೆಚ್ಚಾಗದಷ್ಟು ಇರತಕ್ಕದ್ದು. ಆದರೆ ೫ ಪಟ್ಟು ಹಣವು ಎಕರೆಗೆ ರೂ. ೨೦ ಕ್ಕಿಂತ ಹೆಚ್ಚಾದರೆ ಇಪ್ಪತ್ತು ರೂಪಾಯಿಯೇ ಪರಮಾವಧಿ ಲಾವಣಿಯೆಂದು ಗಣಿಸಬೇಕು. ಆದರೆ ತರಮಿನ ೨ ಪಟ್ಟು ಹಣ ರೂ. ೨೦ ಕ್ಕಿಂತ ಹೆಚ್ಚಾದಲ್ಲಿ ಮಾತ್ರ ಎರಡು ಪಟ್ಟೇ ಪರಮಾವಧಿ.

ಲಾವಣಿಯನ್ನು ಮಾಮಲೇದಾರನು ಗೊತ್ತುಪಡಿಸುವನು. ಅವನು ಭೂಮಿಯ ಫಲವತ್ತೆ, ಆದರ ಸ್ಥಾನ, ಹುಟ್ಟುವಳಿಯ ಪೇಟೆಯ ಬೆಲೆ ಇತ್ಯಾದಿಗಳನ್ನು ಗಣಿಸಿ ಮೇಲಿನ ನಿಯಮಗಳಿಗೊಳಪಟ್ಟು ಪ್ರತಿ ಹಿಡುವಳಿಗೆ ಲಾವಣಿಯನ್ನು ಗೊತ್ತುಪಡಿಸಬೇಕು. ಒಮ್ಮೆ ಗೊತ್ತುಪಡಿಸಿದ ಲಾವಣಿ ೫ ವರ್ಷ ಜಾರಿಯಲ್ಲಿರುವದು. ಮಾಮಲೇದಾರನು ಗೊತ್ತುಪಡಿಸುವ ವರೆಗೂ ರೈತನು ಈ ಕಾಯದೆಯಲ್ಲಿ ಹೇಳಿದ ಪರಮಾವಧಿ ಅಂದರೆ ತರಮಿನ ೫ ಪಟ್ಟು ಮಾತ್ರ ಲಾವಣಿ ಕೊಡಲು ಬಾಧ್ಯನಾಗುವನು. ಆದರೆ ಕಾಯಂ ಕುಳಗಳು ಈಗ ಕೊಡುತ್ತಿರುವ ಲಾವಣಿ ಮೇಲೆ ಹೇಳಿದ ಕನಿಷ್ಠ ಲಾವಣಿಗಿಂತ ಕಡಿಮೆ ಇದ್ದರೆ ಹಳೇ ಲಾವಣಿಯೇ ಕಾಯಂ ಮಾಡಲ್ಪಡುವದು.

ಭೂಮಿಯ ಮಾರಾಟ ಬೆಲೆ

೧೯೫೭ ಎಪ್ರಿಲ ೧ ರಂದು ಭೂಮಿಯ ಒಡೆತನ ಪಡೆಯಲು ಈ ಕಾಯದೆಯಂತೆ ಅರ್ಹತೆ ಪಡೆಯುವ ರೈತರಲ್ಲಿ ಎರಡು ವರ್ಗ ಮಾಡಲಾಗಿದೆ. (೧) ಕಾಯಂ ಕುಳ (೨) ಇತರ ಕುಳಗಳು. ಭೂಮಿಯ ಬಗ್ಗೆ ಒಡೆಯನಿಗೆ ಕೊಡಬೇಕಾದ ಬೆಲೆ ಮತ್ತು ಅದನ್ನು ಕೊಡುವ ರೀತಿ ಇವು ಈ ಎರಡು ವರ್ಗಗಳಿಗೆ ಬೇರೆ ಬೇರೆ ತೆರನಾಗಿವೆ.

ಕಾಯಂ ಕುಳನು ತಾನು ಸಲ್ಲಿಸುತ್ತ ಬಂದ ಲಾವಣಿಯ ಆರು ಪಟ್ಟು ಹಣವನ್ನು ಭೂಮಿಯ ಬೆಲೆಯೆಂದು ಮಾಲಕನಿಗೆ ಸಲ್ಲಿಸಿದೊಡನೆ ಅವನು ಭೂಮಿಯ ಮಾಲಕನಾಗುವನು. ಆದರೆ ಅವನಿಗೆ ಕಂತಿನ ಸವಲತ್ತು ಇಲ್ಲ. ಏಕಗಂಟಿನಲ್ಲಿ ಬೆಲೆ ಸಲ್ಲಿಸಬೇಕು.

ಇತರ ಕುಳಗಳು ಭೂಮಿಯ ತರಮಿನ ೩೦ ಪಟ್ಟಿನಿಂದ ೨೦೦ ಪಟ್ಟಿನ ವರೆಗೆ ಭೂಮಿಗೆ ಬೆಲೆ ತೆರಬೇಕಾಗುವದು. ಈ ಬೆಲೆಯನ್ನು ಮಾಮಲೇದಾರನು ನಿರ್ಧರಿಸುವನು. ಅವನು ಭೂಮಿಯ ಫಲವತ್ತೆ ಮೊದಲಾದ ಅಂಶಗಳನ್ನು ಗಣಿಸಿ ಮೇಲೆ ಹೇಳಿದ ೩೦ ಮತ್ತು ೨೦೦ ಪಟ್ಟುಗಳ ನಡುವೆ ತನಗೆ ನ್ಯಾಯವೆನಿಸಿದಷ್ಟು ಬೆಲೆ ನಿರ್ಧರಿಸುವನು. ಇದು ಹೊಲದ ಬೆಲೆ. ಇದಲ್ಲದೆ ಹೊಲದಲ್ಲಿ ಇರಬಹುದಾದ ಒಡ್ಡು, ಬಾವಿ, ಗಿಡಮರ ಮತ್ತು ಮನೆ ಇವುಗಳ ಬೆಲೆಯನ್ನು ಮಾಮಲೇದಾರನು ಗೊತ್ತುಪಡಿಸಿದಷ್ಟು ಕೊಡಬೇಕಾಗುವದು. ಇದನ್ನೆಲ್ಲ ೧೨ ವರ್ಷಗಳಲ್ಲಿ ಸಮಾನ ವಾರ್ಷಿಕ ಕಂತಿನಲ್ಲಾದರೂ (ಸೇಕಡಾ ೪॥ ಬಡ್ಡಿ ಸಹಿತ) ಕೊಡಬಹುದು ಇಲ್ಲವೆ ಒಂದೇ ಗಂಟಿನಲ್ಲಿ ಮುಟ್ಟಿಸಬಹುದು. ರೈತನು ಬರ ಮೊದಲಾದ ನೈಸರ್ಗಿಕ ಅನಿವಾರ್ಯದ ಕಾರಣಗಳಿಂದ ಕಂತು ಸಲ್ಲಿಸದಿದ್ದರೆ ಕಲೆಕ್ಟರನು ಕಂತು ಸಲ್ಲಿಸಲು ಮತ್ತೆ ೪ ವರ್ಷ ಅವಧಿ ವಿಸ್ತರಿಸಬಹುದು. ಇದರ ಮೇಲೂ ಸಂತತ ೪ ವರ್ಷಕ್ಕಿಂತ ಹೆಚ್ಚು ಕಾಲ ಕಂತು ತಪ್ಪಿಸಿದರೆ ಮಾಮಲೇದಾರನು ಭೂಮಿಯನ್ನು ವಶಪಡಿಸಿಕೊಂಡು ಬೇರೆ ರೈತರಿಗೆ ಮಾರುವನು. ಕಂತು ತಪ್ಪಿಸಿದ ರೈತನು ಆ ವರೆಗೆ ತುಂಬಿದ ಕಂತು ಹಣದಲ್ಲಿ ಒಡೆಯನು ತನಗೆ ಈ ಕಾಯದೆ ಮೇರೆಗೆ ಸಲ್ಲಬಹುದಾದ ಲಾವಣಿಯನ್ನು ಮುರಿದುಕೊಂಡು ಉಳಿದದ್ದನ್ನು ರೈತನಿಗೆ ಕೊಡಲು ಬದ್ಧನಾಗುವನು. ಇದನ್ನು ಮಾಮಲೇದಾರನು ರೈತನಿಗೆ ಕೊಡಿಸುವನು. ಇಂಥ ಭೂಮಿಯನ್ನು ಮಾಮಲೇದಾರನಿಂದ ಕೊಂಡವನು ಪರಮಾವಧಿ ಆರೇ ಕಂತುಗಳಲ್ಲಿ ಬೆಲೆ ಮುಟ್ಟಿಸಬೇಕಾಗುವದು.

ರೈತನಿಗೆ ಸಿಗುವ ಮಾಲ್ಕಿ ಹಕ್ಕು

ಟ್ರಿಬ್ಯೂನಲ್ ಅಥವಾ ಮಾಮಲೇದಾರನು ಗೊತ್ತುಪಡಿಸುವ ಬೆಲೆ ತುಂಬಿದ ರೈತನಿಗೆ ದೊರೆಯುವ ಮಾಲ್ಕೀ ಹಕ್ಕು ಪರಿಪೂರ್ಣವಿರದೆ ಮರ್ಯಾದಿತವಿರುವದು. ಅವನು ಭೂಮಿಯನ್ನು ಸ್ವಂತ ಸಾಗುವಳಿ ಮಾಡಲು ತಪ್ಪಿದರೆ, ಇತರರಿಗೆ ಸಾಗುವಳಿಗೆ ಕೊಟ್ಟರೆ, ಬೇರೆಯವರಿಗೆ ಖರೀದಿ ವಕ್ತಿ ಹಾಕಿ ಹಸ್ತಾಂತರ ಮಾಡಿದರೆ ಆ ಭೂಮಿಯನ್ನು ಸರಕಾರವು ವಶಪಡಿಸಿಕೊಳ್ಳುವದು. ಮತ್ತು ಅದನ್ನು ಇತರರಿಗೆ ಮಾರಿ ಬಂದ ಹಣವನ್ನು ಸರಕಾರಕ್ಕೆ ಜಮೆ ಮಾಡಿಕೊಳ್ಳುವದು. ಭೂಮಿಯನ್ನು ಕೊಳ್ಳಲು ಅವನು ಕೊಟ್ಟ ಹಣಕ್ಕೆ ಅವನು ಎರವಾಗುವನು. ಈ ದೃಷ್ಟಿಯಿಂದ ರೈತನಿಗೆ ಕೇವಲ ಸಾಗುವಳಿ ಮಾಡಿ ಜೀವನ ನಿರ್ವಾಹ ಸಾಗಿಸುವ ಮಟ್ಟಿಗೆ ಭೂಮಿಯ ಒಡೆತನದ ಹಕ್ಕು ಪ್ರಾಪ್ತವಾಗುವದು.

ಭೂಮಿ ಕೊಳ್ಳಲು ಒತ್ತಾಯ

ತಾನು ಸಾಗುವಳಿ ಮಾಡುವ ಭೂಮಿಯ ಒಡೆತನದ ಹಕ್ಕು ತನಗೆ ಬೇಡ. ಸರಕಾರವು ನಿರ್ಧರಿಸುವಷ್ಟು ಲಾವಣಿ ಒಡೆಯನಿಗೆ ಕೊಡುತ್ತ ರೈತನಾಗಿಯೇ ಉಳಿಯುವೆನೆಂಬ ಸ್ವಾತಂತ್ರ್ಯವು ಈ ವಿಧೇಯಕದಿಂದ ರೈತನಿಗೆ ಇಲ್ಲದಂತಾಗಿದೆ. ೧೯೫೭ ನೇ ಎಪ್ರಿಲ ೧ ರಂದು ಅವನು ಭೂಮಿಯನ್ನು ಕೊಂಡನೆಂದು ಗ್ರಹಿಸಲಾಗುವದು. ಅನಂತರ ಅವನ ಮೇಲೆ ಭೂಮಿಯ ತೆರಿಗೆ, ಲೋಕಲ್ ಫಂಡ ಸರಕಾರಕ್ಕೆ ಕೊಡುವ ಹೊಣೆ ಬೀಳುವದು. ಅವನು ಭೂಮಿಯನ್ನು ಕೊಳ್ಳುವ ಇಚ್ಛೆ ಇಲ್ಲವೆಂದರೆ ತೀರಿತು. ಅವನಿಂದ ಕಲೆಕ್ಟರರು ಭೂಮಿಯನ್ನು ವಶಪಡಿಸಿಕೊಂಡು ಬೇರೆಯವರಿಗೆ ಮಾರಿ ಬಿಡುವರು. ಹೀಗಾಗಿ ಭೂಮಿಯನ್ನು ತನ್ನ ಕಬಜೆಯಲ್ಲಿ ಉಳಿಸಿಕೊಳ್ಳುವದಿದ್ದರೆ ರೈತನು ಭೂಮಿಯನ್ನು ಕೊಳ್ಳುವದಾಗಿ ಮಾಮಲೇದಾರರಿಗೆ ತಿಳಿಸಲೇಬೇಕಾಗುವದು.

ಪರಮಾವಧಿ ಹಿಡುವಳಿ

ಪರಮಾವಧಿ ಹಿಡುವಳಿಯು ಈ ಕಾಯದೆಯ ಜೀವಾಳವಿರುವದರಿಂದ ಅದನ್ನು ತುಸು ವಿವರಿಸುವದಗತ್ಯ. ಭೂಮಿಯು ಜಿರಾಯತ ಇದ್ದರೆ ೪೮ ಎಕರೆ, ಅರ್ಧ ನೀರಾವರಿಯದಿದ್ದರೆ ೨೪ ಎಕರೆ, ಭತ್ತದ ಗದ್ದೆಯಿದ್ದರೆ ೧೨ ಎಕರೆ ಪರಮಾವಧಿ ಹಿಡುವಳಿಯೆಂದು ಈ ಕಾಯದೆ ವಿಧಿಸುತ್ತದೆ. ಹೀಗಾಗಿ ಮುಂದಿಯ ಹೊಲ ಮಾಡುವ ರೈತನು ಮೇಲಿನ ಪರಮಾವಧಿಗಿಂತ ಹೆಚ್ಚು ಭೂಮಿ ಸಾಗು ಮಾಡುತ್ತಿದ್ದರೆ ಅವನಿಗೆ ಆ ಹೆಚ್ಚಿನ ಭೂಮಿಯ ಒಡೆತನದ ಹಕ್ಕು ಪ್ರಾಪ್ತವಾಗುವದಿಲ್ಲ ಇಷ್ಟೇ ಅಲ್ಲ ಅವನಿಗೆ ಅದನ್ನು ಸಾಗುವಳಿ ಮಾಡುವ ಹಕ್ಕು ಸಹಿತ ಹಿಂದಿನ ಕಾಯದೆಗಳಲ್ಲಿ ಪ್ರಾಪ್ತವಾಗಿದ್ದರೂ ಅದೆಲ್ಲವನ್ನೂ ಕಳೆದುಕೊಂಡು ಹೆಚ್ಚಿನ ಭೂಮಿ ಬಿಟ್ಟುಕೊಡಬೇಕಾಗುವದು. ಹೊಲವನ್ನು ಮುಂದಿಗೆ ಸಾಗು ಮಾಡಲು ಕೊಟ್ಟ ಈಗಿನ ಒಡೆಯನಿಗೂ ಸ್ವಂತ ಸಾಗುವಳಿಗಾಗಿ ಮೇಲೆ ಹೇಳಿದ ಪರಮಾವಧಿ ಕ್ಷೇತ್ರದಷ್ಟು ಮಾತ್ರ ಬಿಡಿಸಿಕೊಳ್ಳಲು ಬರುವದು. ಆದರೆ ಈಗ ಸ್ವಂತ ಸಾಗುವಳಿ ಮಾಡುತ್ತಿರುವವರು ಮಾತ್ರ ಸಾವಿರಾರು ಎಕರೆ ಮಾಡುತ್ತಿದ್ದರೂ (ಹಿಂದೆ ಹೇಳಿದ ಕೆಲ ನಿಯಮಗಳಿಗೊಳಪಟ್ಟು) ಅವರಿಂದ ಭೂಮಿ ಬಿಡಿಸಲಾಗುವದಿಲ್ಲ. ಆದ್ದರಿಂದ ಈ ಕಾಯದೆಯು ಪರವೂರಿನಲ್ಲಿ ವಾಸಿಸಿ ಭೂಮಿ ಸಾಗುವಳಿಗೆ ಕೊಟ್ಟ ಒಡೆಯರನ್ನಷ್ಟೇ ಅಲ್ಲ, ಬಹಳ ವಿಸ್ತಾರವಾದ ಕ್ಷೇತ್ರವನ್ನು ಸಾಗುವಳಿಗೆ ಹಿಡಿದ ರೈತರನ್ನೂ ಚಿವುಟುವದು. ಹೀಗಾಗಿ ಈ ಕಾಯದೆಯ ಧ್ಯೇಯವು ಭೂಮಿಯನ್ನು ಆದಷ್ಟು ಹೆಚ್ಚು ಜನರಲ್ಲಿ ಹಾಗು ಸ್ವಂತ ಪರಿಶ್ರಮದಿಂದ ಸಾಗುವಳಿ ಮಾಡುವವರಲ್ಲಿ ಹಂಚುವದಾಗಿಯಲ್ಲದೆ ಅನಿರ್ಬಂಧವಾಗಿ ರೈತರಿಗೇ ಸವಲತ್ತು ಕೊಡುವದಾಗಿಲ್ಲ.

● ನಮ್ಮ ಗ್ರಾಹಕರೆಲ್ಲರಿಗೂ ದೀಪಾವಳಿಯ ಶುಭಾಶಯಗಳು ! ●

ಪ್ರಾಮಾಣಿಕತೆಯೇ ನಮ್ಮ ವ್ಯವಹಾರದ ಹೆಗ್ಗುರುತು !

ಯೋಗ್ಯ ಬೆಲೆ ! ★ ಉತ್ತಮ ಮಾಲು !

ಈಶ್ವರಪ್ಪ ಶಂಕ್ರಪ್ಪ ಹೆಬ್ಬಳ್ಳಿ

ಸರಾಫ, ಜವಳೀ ಸಾಲ, ಹುಬ್ಬಳ್ಳಿ

ಬೆಳ್ಳಿ-ಬಂಗಾರದ ಠೋಕ ಹಾಗೂ ಕಿರುಕಳ ವ್ಯವಹಾರಸ್ಥರು

★ ಬೆಳ್ಳಿ-ಬಂಗಾರದ ಎಲ್ಲ ತರಹದ ದಾಗೀನೆಗಳು ಹಾಗೂ ವಿವಾಹ ಮುಂತಾದ ಶುಭ ಪ್ರಸಂಗದಲ್ಲಿ ಕಾಣಿಕೆ ಕೊಡುವ ತರತರಹದ ಅತ್ಯಾಧುನಿಕ ಅಂದ-ಚಂದವಾದ ವಸ್ತುಗಳಿಗೆ ಇಂದೇ ನಮ್ಮ ಅಂಗಡಿಯನ್ನು ಸಂದರ್ಶಿಸಿ ಲಾಭ ಪಡೆಯಿರಿ.

★ ನವನಾಗರಿಕತೆಗೆ ಒಪ್ಪುವ ಉಡುಪುಗಳಿಗಾಗಿ !

★ ಅಂದವಾದ ಉಡುಪುಗಳ ಹೊಲಿಗೆಗಾಗಿ ಎಂದಿನಿಂದಲೂ ಪ್ರಸಿದ್ಧ ! !

ಎಚ್. ಜಿ. ಕೊರ್ತಿ, ಟೇಲರ ಮಾಸ್ತರ

ಬಸವೇಶ್ವರ ರೋಡ . . . . . ವಿಜಾಪೂರ

ನಮ್ಮ ಗ್ರಾಹಕವೃಂದಕ್ಕೆಲ್ಲ ದೀಪಾವಳಿಯು ಸುಖಶಾಂತಿಯನ್ನೀಯಲಿ !

ನಮ್ಮ ಎಲ್ಲ ಗ್ರಾಹಕರಿಗೆ
ದೀಪಾವಳಿಯ ಶುಭಾಶಯಗಳು



ಶ್ರೇಷ್ಠವಾದ ತಂಬಾಕದಿಂದ ತಯಾರಿಸಿದ,
ಜನಮೆಚ್ಚುಗೆ ಪಡೆದ

೨೧ನೇ ನಂಬರ

ಇಸ್ಮಾಯಿಲ್ ಸ್ಪೇಶಲ್ ಬೀಡಿಗಳನ್ನೇ

* ಸೇದಿ ಆನಂದ ಹೊಂದಿರಿ ! *

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ :

ಟಿ. ವಿ. ಯ್ಯಾನಸಾಹೇಬ & ಸನ್ಸ

ಬೀಡಿ ಫ್ಯಾಕ್ಟರಿ, ದಾವಣಗೆರೆ ಸಿಟಿ (ಮೈ. ಸ್ಟೇ.)

ಬ್ರ್ಯಾಂಚ . . . . . ಹರಿಹರ

● MAYA ENGINEERING & MACHINERY CO., DAVANGERE ●

ಮಾಯಾ ಎಂಜನಿಯರಿಂಗ್ ಆ್ಯಂಡ ಮಷಿನರಿ ಕಂ.,

ಹೆಡ್ ಆಫೀಸ್: ಬೊಂಬಾಯಿ] ಗಾಂಧಿ ಸರ್ಕಲ್, ದಾವಣಗೆರೆ ಸಿಟಿ [ಬ್ರ್ಯಾಂಚ್: ಬಳ್ಳಾರಿ

ಅತ್ಯಲ್ಪಕಾಲದಲ್ಲೇ ಜನಮನ್ನಣೆ ಪಡೆದ
ಮದ್ರಾಸ್ ಕೋಹಿನೂರ್ ಕನ್‌ಫೆಕ್ಷನರಿ ಕಂಪನಿಯ
' ಸೋವರಿನ್ ' ಗುರ್ತಿನ

ಪೆಪ್ಪರ್‌ಮೆಂಟ್ ಮತ್ತು ಚಾಕೋಲೇಟ್‌ಗಳಿಗೆ

— ಇವರು —

ಧಾರವಾಡ, ಬೆಳಗಾವ, ಬಿಜಾಪುರ, ಚಿತ್ರದುರ್ಗ ಮುಂತಾದ ಜಿಲ್ಹೆಗಳಿಗೆ ಸೋಲ್ ಏಜೆಂಟರಿದ್ದಾರೆ. ಚಿಕ್ಕವರಿಗೂ, ದೊಡ್ಡವರಿಗೂ ಆರೋಗ್ಯ ಹಾಗು ರುಚಿಕರವುಳ್ಳ ಈ ಪೆಪ್ಪರಮೆಂಟ್ ಚಾಕೋಲೆಟ್‌ಗಳನ್ನೇ ಕೊಳ್ಳಿರಿ !

ಬಣ್ಣಬಣ್ಣದ ಡಬ್ಬಿಗಳಲ್ಲಿ ಆಕರ್ಷಕ ಬೆಲೆಗಳಿಗೆ
ಎಲ್ಲ ಕಡೆಗೂ ಸಿಗುತ್ತವೆ.


ನಿಮ್ಮ ಯಾವತ್ತೂ ಎಂಜಿನುಗಳಿಗೆ ಬೇಕಾಗುವ
ಕಂಪನಿಯ

— ಬಿಡಿ ಭಾಗಗಳು —

ನೀರಿನ ಕೋಯಮುತ್ತೂರು ಪಂಪುಗಳು, ಹಲ್ಲರ್, ಚಕ್ಕಿ, ಪೈಪ ಮತ್ತು ಪೈಪ್ ಫಿಟ್ಟಿಂಗ್‌ಗಳು ಲೂಬಿಕೇಟಿಂಗ್ ಆಯಿಲ್ ಮುಂತಾದ ಸಾಮಾನುಗಳು ಅತ್ಯಂತ ಸೂಕ್ತ ದರಗಳಲ್ಲಿ ನಮ್ಮಲ್ಲಿ ಯಾವಾಗಲೂ ಸಿಗುತ್ತವೆ.

ಒಮ್ಮೆ ನಮ್ಮ ಶೋ ರೂಮಿಗೆ ಭೆಟ್ಟಿ ಕೊಡಿರಿ !

ನೂತನ ದೀಪಾವಳಿಯು ನಮ್ಮ ಎಲ್ಲಾ ಗ್ರಾಹಕರಿಗೆ ಸುಖ-ಸಂಪತ್ತುಗಳನ್ನೀಯಲಿ !



ವರ್ಷದ ಈ ಕಾಲದಲ್ಲಿ
ಉಲ್ಲಾಸೋತ್ಸವಗಳ
ಕಡೆಗೆ
ವಿಚಾರಗಳು
ಹರಿಯುತ್ತವೆ.
ನಾವೂ ಇಂಥ ಸಂತೋಷದೊಂದಿಗೆ
ಸರ್ವರಿಗೂ
ನಮ್ಮ ಶುಭ ಚಿಂತನೆಗಳನ್ನು
ಕೋರುತ್ತೇವೆ.
ಪಾಟನವಾಲಾ ಹೌಸ
ತಯಾರಕರು.
ಅಫಘಾನ
ಸ್ನೊ
ಸೌಂದರ್ಯ
ವರ್ಧಕಗಳು
KAMAL
AFGHAN GLYCERINE SOAP
AFGHAN COLD CREAM
AFGHAN SNOW
ESP
Patanwala
for PERFUMES AND COSMETICS

ಮುಂಬಯಿಯಲ್ಲಿ ಉದ್ಯಾನ ಸಂಭ್ರಮ

ಮುಂಬಯಿಯಲ್ಲಿ ಎಲ್ಲವೂ "ಮುಂಬಯಿತನ"ವೇ! ಇಲ್ಲದಿದ್ದರೆ ಗಿಡಗಂಟಿ, ಹೂ-ಬಳ್ಳಿಗಳಿಲ್ಲದ ಉದ್ಯಾನವೆಂದರೇನು? ಆದರೆ ಈ ಉದ್ಯಾನಗಳನ್ನೂ ಆಶ್ರಯಿಸುವ ಲಕ್ಷಾಂತರ ಜನ ಅಲ್ಲಿ ಇದೆ. ಅದರ ಮೋಜನ್ನು ಇಲ್ಲಿ ನೋಡಿ.

ಲೇಖಕರು: ಶ್ರೀ ಶ್ರೀನಿವಾಸ ಹಾವನೂರ

ಮುಂಬಯಿಯ ಜೀವನವೆಂದರೆ ಯಾಂತ್ರಿಕ ಜೀವನವೆಂದು ಹೊರಗಿನವರು ಅನ್ನುತ್ತಾರೆ. ಅದು ಮುಂಬಯಿಗನಿಗೂ ಗೊತ್ತಿದೆ. ಎಂತಲೇ ಈ ಯಾಂತ್ರಿಕ ನಡೆವಳಿಕೆಯಲ್ಲಿ ತುಸು ಬದಲಾವಣೆ ಇರಲೆಂದು ಮುಂಬಯಿಗನು ಮಾಡುವ ಪ್ರಯತ್ನಗಳಲ್ಲಿ ಉದ್ಯಾನ ಸಂಭ್ರಮವೂ ಒಂದು.

ಉಳಿದ ಊರುಗಳಲ್ಲಿ, ಉದ್ಯಾನವು ಅಲಂಕಾರಪ್ರಾಯವಾಗಿ ಇರುತ್ತಿದ್ದರೆ, ಮುಂಬಯಿಯ ಎಲ್ಲ ಉದ್ಯಾನಗಳೂ ಉಪಯೋಗಾರ್ಥವಾಗಿ ಇವೆ. ಇಲ್ಲಿಯ ಉದ್ಯಾನಗಳಲ್ಲಿ ಹೂಗಳ ಪರಿಮಳದ ಸೇವನೆ ಇಲ್ಲವೆ ವಾಯು ಸೇವನೆ ಇವುಗಳಲ್ಲದೆ ಇನ್ನೂ ಹತ್ತಾರು ರೀತಿಯಲ್ಲಿ ಅವುಗಳ ಪ್ರಯೋಜನವಿರುತ್ತದೆ. ಮುಂಬಯಿಯ ಯಾವದೇ ಮಾತನ್ನು ತೆಗೆದುಕೊಳ್ಳಿರಿ, ಅದಕ್ಕೆ ತನ್ನದೇ ವೈಶಿಷ್ಟ್ಯವಿರುತ್ತದೆ. ಉದ್ಯಾನವೂ ಅದಕ್ಕೆ ಹೊರತಾಗಿಲ್ಲ.

ಮುಂಬಯಿಯ ಎಲ್ಲ ಉದ್ಯಾನಗಳೂ ಪಿ. ಡಬ್ಲ್ಯೂ. ಡಿ. ಖಾತೆಯ ಸೊತ್ತಾಗಿವೆ. ಮನೆ-ಮನೆಗೆ ಉದ್ಯಾನಗಳು ಇರುವುದಂತೂ ಇಲ್ಲವೆ ಇಲ್ಲ. ಅಲ್ಲದೆ ಇಲ್ಲಿಯ ಉದ್ಯಾನಗಳಲ್ಲಿ ಮಲ್ಲಿಗೆ ಬಳ್ಳಿಗಳಾಗಲೀ, ಗುಲಾಬಿ ಕಂಟಿಗಳಾಗಲೀ, ಬಣ್ಣದ ಗಿಡಗಳ ಕರಂಡಿಕೆಗಳಾಗಲೀ ಇರುವುದಿಲ್ಲ. ಇಲ್ಲಿಯ ಉದ್ಯಾನಗಳೆಂದರೆ ಬರೀ ಹುಲ್ಲಿನ ಹಾಸುಗಳು. ಮೈದಾನುಗಳೂ ಹುಲ್ಲಿನ ಹಾಸುಗಳಾಗಿರುತ್ತವೆಯಲ್ಲ? ಅದಕ್ಕೂ ಇದಕ್ಕೂ ಅಂತರ ಇರಲೆಂಬಂತೆ ಇವುಗಳ ಸುತ್ತಲೂ ಹಸಿರು ಕಂಟಿಯ ಕಂಪೌಂಡ್ ಇರುತ್ತದೆ.

ಆದರೂ ಚಿತ್ರವಿಚಿತ್ರ ದೈನಂದಿಕ ನಡವಳಿಕೆಯಿಂದ ಬೇಸರಗೊಂಡು, ಈ ಸಾದಾ ಉದ್ಯಾನದಲ್ಲಿ ಕೆಲ ಹೊತ್ತು ಕಳೆಯದ ಮುಂಬಯಿಗನೇ ಇಲ್ಲ. ಅಲ್ಲಿಗೆ ಬಂದವನಾರೂ ಲತಾಕುಂಜ, ಹೂಗಳ ಪರಿಮಳ, ನೀರಿನ ಕಾರಂಜಿಗಳನ್ನು ಬಯಸಿದುದನ್ನು, ಅಥವಾ ಅವು ಇಲ್ಲವಲ್ಲಾ ಎಂಬ ಮಿಡುಕಿನ ಮಾತಂದುದನ್ನು ಕೇಳಿಲ್ಲ.

ಸಾಧಾರಣವಾಗಿ ರಾತ್ರಿಯೊಂದನ್ನು ಬಿಟ್ಟರೆ ಉಳಿದ ಎಲ್ಲ ವೇಳೆಗಳಲ್ಲಿಯೂ ಈ ಉದ್ಯಾನಗಳು ತುಂಬಿಕೊಂಡಿರುತ್ತವೆ. ರಾತ್ರಿಯೊಂದು ಪ್ರವೇಶ ವಿದ್ದು ಬಿಟ್ಟದ್ದರೆ, ಮುಂಬಯಿಯಲ್ಲಿ ವಸತಿಯ ಸಮಸ್ಯೆಯೇ ಉಳಿಯುತ್ತಿರಲಿಲ್ಲವೇನೊ? ರಾತ್ರಿಯ ಒಂಬತ್ತು ಗಂಟೆಯೋ, ಹನ್ನೊಂದು ಗಂಟೆಯೊ ಆದೊಡನೆ ತೋಟಿಗನು ಅನೇಕರನ್ನು ಎಬ್ಬಿಸಿ ಹೊರಗೆ ಕಳಿಸಬೇಕು. ಹಾಗೆ ಅವನು ಎಬ್ಬಿಸಿದಾಗ 'ಹೋಗುತ್ತೇವೆ' ಎಂದು ಹೇಳಿ, ಹೋದ ಹಾಗೆ ಮಾಡಿ, ಮತ್ತೆ ಮರೆಯಲ್ಲಿ ಮಲಗಿಕೊಳ್ಳುವವರೂ ಉಂಟು. ಅಂತೂ ಗಿಡಬಳ್ಳಿಗಳನ್ನಲ್ಲದಿದ್ದರೂ ಮನುಷ್ಯರನ್ನು ಸಂಬಾಳಿಸುವುದೇ ಮುಂಬಯಿ ತೋಟಿಗನ ಉದ್ಯೋಗವಾಗಿರುತ್ತದೆ.

ಉದ್ಯಾನಗಳ ವಹಿವಾಟು ಪ್ರಾರಂಭವಾಗುವುದು ಬೆಳಗಿನ ಐದು ಗಂಟೆಗೇ. ಈ ಪ್ರಾರಂಭೋತ್ಸವವನ್ನು ನೆರವೇರಿಸುವವರು ಹೆಚ್ಚಾಗಿ ಗುಜರಾತೀ ದಂಪತಿಗಳು. ಆದರೆ ಹೊರಗಿನವರು, ಉದ್ಯಾನದ ಸಂಭ್ರಮ ನೋಡಬೇಕಾದರೆ ಸಂಜೆಗೇ ಬರಬೇಕು. ಎಲ್ಲ ಬಗೆಯ ಜನರೂ ಬರುವುದು, ಆವಾಗಲೇ. ವಿಶ್ರಾಂತಿ-ವಿಹಾರಗಳಿಗೆ ಹೆಚ್ಚಾಗಿ ಬಂದಿರುತ್ತಾರಾದರೂ, ಅವರಲ್ಲಿ ಆಟಕ್ಕಾಗಿ ಎಂದು ಬಂದ ಎಳೆಮಕ್ಕಳೂ ಇರುತ್ತಾರೆ. ಬಂದಿದ್ದ ಗಂಡಸರ ವೇಷ, ನಡೆನುಡಿಗಳಲ್ಲಿ ಸಾದಾತನವು ಎದ್ದು ಕಾಣುತ್ತಿದ್ದರೆ, ಸ್ತ್ರೀಯರ ವೇಷ ಮತ್ತು ನಡೆವಳಿಕೆಯಲ್ಲಿ ಬೆಡಗು ಹೆಚ್ಚು. ಅವರ ಓಡಾಟ, ಮಂದಸ್ಮಿತ, ಮೆಲ್ಮಾತುಗಳು ಉದ್ಯಾನಕ್ಕೆ ಕಳೆತರುವಂತಹವು ಎಂದು ಬೇರೆ ಹೇಳಬೇಕಾಗಿಲ್ಲ. ಹೂವು, ಅವುಗಳ ಪರಿಮಳ ಇಲ್ಲದುದರ ಕೊರತೆಯು ಸಂಜೆಯ ಮುಂದೆ ನಿಮಗೆ ಎಳ್ಳಷ್ಟೂ ಅನಿಸುವದಿಲ್ಲ. ಹಿಂದಿನ ಕಾಲದಲ್ಲಿ ವನಿತೆಯರು ಪುಷ್ಪಗಳನ್ನು ಆಯುವುದಕ್ಕಾಗಿ ಉದ್ಯಾನಗಳಿಗೆ ಬರುತ್ತಿದ್ದರೆ, ಮುಂಬಯಿಯ ಪುಷ್ಪರಹಿತವಾದ ಉದ್ಯಾನಗಳಿಗೆ ಹೂವುಗಳನ್ನು ಮುಡಿದುಕೊಂಡೇ ಸ್ತ್ರೀವೃಂದ ಬರುತ್ತದೆ.

ಇನ್ನು ಕೆಲವರು ವಾಯುಸೇವನೆಗಾಗಿ ಬಾರದೇ ಇಂಥ ಬೆಡಗು ಬಿನ್ನಾಣಗಳನ್ನು ನೋಡಲಿಕ್ಕೆ ಬರುತ್ತಾರೆ. ಇವರೆಲ್ಲರೂ ಹೆಚ್ಚಾಗಿ ಸುಶಿಕ್ಷಿತ ವರ್ಗದವರು. ಸುಶಿಕ್ಷಿತ ರೀತಿಯಿಂದ ಅಂದರೆ ನೋಡಿಯೂ ನೋಡದಂತೆ ನಡೆದುಕೊಂಡು ನೇತ್ರಾನಂದವನ್ನು ಮಾಡಿಕೊಳ್ಳುವಂತಹರಿವರು. ಸುಶಿಕ್ಷಿತರಲ್ಲದವರು—ಆದರೆ ಇದೇ ಕೆಲಸಕ್ಕಾಗಿ ಬಂದವರು, ಒಂದೇ ಕಡೆಗೆ ಕೂಡ್ರುವದಿಲ್ಲ ಮಾತ್ರ. ಅವರು ಸುತ್ತಾಡುತ್ತಿರುತ್ತಾರೆ.

ಉದ್ಯಾನಕ್ಕೆ ಬರುವ 'ಹೊತ್ತಿಗೆ ಹುಳ'ಗಳ ರೀತಿಯೇ ಬೇರೆ. ಮನೆಯಲ್ಲಿ ಓದು ಸಾಗುವುದಿಲ್ಲವೆಂದು ಇಲ್ಲಿಗೆ ಬರುತ್ತಾರೆ. ಆದರೆ ಮನೆಗಿಂತ ಹೆಚ್ಚು ಗಲಾಟೆ-ಗದ್ದಲಗಳಾಗುವ ಈ ಜಾಗದಲ್ಲಿ ಅವರು ಅದೆಂತು ತಲ್ಲೀನರಾಗುತ್ತಾರೋ ಎಂದು ಆಶ್ಚರ್ಯವಾಗುವಂತಿದೆ. ಇನ್ನೇನು, ಯಾರಾದರೂ ಮೇನಕೆಯರು ಬಳಿಯಲ್ಲಿ ಸುಳಿದು ಹೋದರೆ, ಅವರ ಸ್ಥಿತಪ್ರಜ್ಞತೆಗೆ ಸ್ವಲ್ಪ ಭಂಗ ಬರುವುದುಂಟು.

ಉದ್ಯಾನಗಳಿಗೆ ಎಲ್ಲ ಬಗೆಯ ಜನರೂ ಬರುವರಷ್ಟೆ. ಅವರ ಆಗಮನ-ನಿರ್ಗಮನಗಳಲ್ಲಿ ಅವರ ನಿತ್ಯ ಜೀವನವನ್ನು ಬೇಕಾದ ಹಾಗೆ ಅಳೆಯಬಹುದು. ಶಿಶುವನ್ನು ಮೀರಿದ ಮಧ್ಯಮ ವಯಸ್ಸಿನವನು, ಒಂದು ಶರ್ಟು, ಧೋತರದ ಮೇಲೆ, 'ಉಶ್ಶಪ್ಪ' ಎನ್ನುತ್ತ ಬಂದು ಕುಕ್ಕರಿಸಿದನಾದರೆ, ಅವನು ಮನೆಯಲ್ಲಿ ಮಕ್ಕಳ ಇಲ್ಲವೆ ಮಡದಿಯ ಕಾಟಕ್ಕೆ ಬೇಸತ್ತು ಬಂದವನೆಂದು ತಿಳಿಯಲಡ್ಡಿಯಿಲ್ಲ. ಹೆಂಡತಿಯನ್ನು ಸಂಗಡ ಕರೆದುಕೊಂಡು ಬಂದನೆಂದರೆ, ಮಕ್ಕಳನ್ನು ಒಂದೇ ಕೋಣೆಯ ತನ್ನ ಮನೆಯಲ್ಲೇ ನಿಲ್ಲಿಸಿ ಗುಟ್ಟಿನ ಇಲ್ಲವೆ 'ಸೀರಿಯಸ್' ವಿಷಯವನ್ನು ಹೆಂಡತಿಯೊಡನೆ ಆಡಲಿಕ್ಕೆ ಆತ ಬಂದವನೆಂದು ತಿಳಿಯಬೇಕಾಗುವದು.

ಒಂದೇ ಮನೆಯಲ್ಲಿ ಎರಡೆರಡು ದಾಂಪತ್ಯಗಳಿದ್ದರೆ ಒಂದು ಜೋಡಿಯ ಉದ್ಯಾನ ಗಮನವು, ಮನೆಯಲ್ಲಿರುವ ಜೋಡಿಗೆ ಸಂಭ್ರಮದ ವಿಷಯವಾಗುತ್ತದೆ. ಧಾರಣೆ ಪಾರಣೆಯಂತೆ ಅವರಲ್ಲೊಬ್ಬರು ಉದ್ಯಾನವನ್ನು ಕೆಲವೊಂದು ಅವಧಿಯಲ್ಲಿ ಆಶ್ರಯಿಸಲೇಬೇಕು. ಮದುವೆಯಾಗದ ಮುನ್ನಿನ ಪ್ರಣಯಿಗಳೂ, ಉದ್ಯಾನ ವಿಹಾರ ಕೈಕೊಳ್ಳುವರು. ಆದರೆ ಅದರೆಂದೂ ಸ್ಥಳೀಯ ಉದ್ಯಾನಗಳನ್ನು ಪ್ರವೇಶಿಸುವದಿಲ್ಲ! ಹತ್ತಿರದ ಶ್ರೀಶೈಲವನ್ನು ಬಿಟ್ಟು ಕಾಶಿಯ ವಿಶ್ವೇಶ್ವರನನ್ನೇ ಕಾಣುವ ದಾಕ್ಷಿಣಾತ್ಯರಂತೆ ಅವರ ನಡೆವಳಿಕೆ ಇರುತ್ತದೆ.

ಮುಂಬಯಿಯ ಫೋರ್ಟಿನ ಕಡೆಗೆ ಹೋದ ಹಾಗೆಲ್ಲ ಹಗಲಿನಲ್ಲಿ ಕೂಡಾ ಉದ್ಯಾನದ ಉಪಯೋಗ ಎಂಥದೆಂಬುದು ಗೊತ್ತಾಗುತ್ತದೆ. ಹಗಲಿನಲ್ಲಿ ಇಲ್ಲಿ ದಟ್ಟಣೆ ಬಹಳ. 'ಲಂಚ'ದ ವೇಳೆಯಲ್ಲಿ ಇಲ್ಲಿ ಬಂದು ಊಟಮಾಡುವ ಕೆಳಗಿನ ನೌಕರೀವರ್ಗ ಒಂದು ಕಡೆ. ಕಚೇರಿ ಕಂಪನಿಗಳಿಗೆ ಅಲೆದಲೆದು ಸುಸ್ತಾಗಿ ಬೆವರೊರೆಸಿಕೊಳ್ಳುತ್ತ ಅಡ್ಡಾಗುವ ಬಿಳಿಯಂಗಿಯ ಗುಜರಾತೀ ಜನ ಇನ್ನೊಂದು ಕಡೆ. ಕೂಲಿ ಕೆಲಸದಿಂದಲ್ಲದಿದ್ದರೂ, ಬರೇ ತಿರುಗಿ ತಿರುಗಿ ಬಂದು ದಣಿದ

ಪಾಟೀವಾಲಾಗಳು ತಮ್ಮ ಬಿದಿರಿನ ಬುಟ್ಟಿಯನ್ನು ವಿಶಾಲ ಚಾಮರವಾಗುವಂತೆ ತೆಲಿಗಿಟ್ಟುಕೊಂಡು ಸುಖವಾಗಿ ನಿದ್ರೆಹೋಗಿರುತ್ತಾರೆ.

ಇಸ್ಪೇಟ ಪಟುಗಳೂ ಬಂದಿರುತ್ತಾರೆ. ದುಡ್ಡು ಹಚ್ಚಿಯೂ ಹಚ್ಚದಂತೆ ಆಟವಾಡುವುದರಲ್ಲಿ ಅವರು ನುರಿತವರಿರುತ್ತಾರೆ. ಈ ಜಾತಿಯ ಇನ್ನು ಕೆಲವು ತರುಣರು ತೋಟದ ಒಂದು ಮೂಲೆಗೆ ಕುಳಿತು, ಭರ್‍ರೆಂದು ಹೋಗುತ್ತಿರುವ ಕಾರುಗಳ ನಂಬರುಗಳ ಮೇಲೆ ಜೂಜಾಡುತ್ತಾರೆ. ಯಾವ ಕಾಯದೆ ಕ್ರಮಕ್ಕೂ ಬಗ್ಗಲಾರದ ಜೂಜಾಟ ವಿದು. ಎಲ್ಲವೂ ತೋಂಡೀ ವ್ಯವಹಾರವಲ್ಲವೆ?

ಮುಂಬಯಿಯ ಉದ್ಯಾನಗಳ ಮುಖ್ಯ ವೈಶಿಷ್ಟ್ಯ ಮಾಲೀಸವಾಲಾಗಳಲ್ಲಿದೆ. ಹೂಗಳ ಪರಿಮಳ ವಿಲ್ಲದಿದ್ದರೂ, ಮಾಲೀಸಿನವರ ಎಣ್ಣೆ ಬಾಟಲಿ ಗಳಲ್ಲಿ ಅದು ಹುದುಗಿಕೊಂಡಿರುತ್ತದೆ. ಹೂಗಳಿಗೆ ಮುಕುರುವ ಭ್ರಮರಗಳ ಗುಂಯ್‌ಗುಡುವಿಕೆ ಕೇಳಿ ಬರಲಿಕ್ಕಿಲ್ಲ. ಆದರೆ ಅಷ್ಟೇ ಮಧುರವಾಗಿ " ತೇಲ ಮಾಲೀಸ್ " ಎಂದು ಆಲಾಪಿಸುವುದನ್ನು ಪ್ರತಿಯೊಬ್ಬನೂ ಕೇಳುತ್ತಾನೆ.

ಮಾಲೀಸಿನ ವಿಷಯವೆಂದರೆ ಗಾಯನದಂತೆ ಅನುಭವಿಸಿಯೇ ತಿಳಿಯಬೇಕಾದ ಸುಖದ ಮಾತ ಗಿದೆ. ಮಾಲೀಸವಾಲಾನು ನಿಮ್ಮ ತಲೆಯನ್ನು ಹಿಡಿದು ತಿಕ್ಕುತ್ತಿರುವಾಗ, ನಿಮ್ಮ ಶಿರೋ ಮಣಿಯು ತನ್ಮಯಗೊಂಡು ತಾಳ ಹಾಕುವುದು. ಗಾಯಕನ ಪೂರ್ಣ ರಸಾಸ್ವಾದನೆಗೆ ಕಣ್ಣುಮುಚ್ಚಿ ತಲೆತಗ್ಗಿಸಬೇಕು, ಅಲ್ಲವೆ? ಇಲ್ಲಿಯೂ ಹಾಗೆಯೇ.

ನೀವು ಕೊಡಬೇಕಾದ ನಾಲ್ಕಾಣೆಗೆ, ನಿಮ್ಮ ತಲೆಯನ್ನು ಒತ್ತೆಯಿಟ್ಟುಕೊಂಡವರ ಹಾಗೆ ಅದನ್ನು ಬೇಕಾದ ಹಾಗೆ ಅವನು ಉಪಯೋಗ ಮಾಡುತ್ತಾನೆ. ಮತ್ತೆ ಅದೆಂತಹ ಕೈಚಳಕ ಅವ ನದು ! ಅಂಗೈಯಿಂದ ಎರಡೂ ಬದಿಗೆ ತಿಕ್ಕುವ ರಭಸದಿಂದ ಅವರೋಹಣ ಮಾಡುತ್ತ, ಒಮ್ಮೆಲೇ ಅವನ ಹತ್ತೂ ಬೆರಳುಗಳು ಬೆಕ್ಕಿನ ಮರಿಯ ಮುಂಗೈಗಳಂತೆ ಗುಳುಗುಳು ಮಾಡತೊಡಗು ತ್ತವೆ. ಅಚ್ಚಿದ ಹೆಂಡತಿ ಇದ್ದವರಿಗೆ, ಅವಳು ಅವರ ತಲೆಗೂದಲೊಂದಿಗೆ ಆಟವಾಡುವ ಸಂದ ರ್ಭಗಳು ಆಗ ಮರುಕಳಿಸಬಹುದು. ಅದು ಮುಗಿಯಿತೋ ಇಲ್ಲವೊ ಕೈ ಜೋರಾಗಿ ಕೆಲಸ ಮಾಡತೊಡಗುತ್ತದೆ. ಮತ್ತೊಮ್ಮೆಗೆ ಇನ್ನೊಂದು ಕೈಚಳಕ ತೋರಿಸುತ್ತಾನೆ. ಅವನ ಒಂದು ಕೈ ಮೆದುವಾಗಿ ನಿಮ್ಮ ನೆತ್ತಿಯನ್ನು ಗುದ್ದುತ್ತಿದ್ದರೆ, ಇನ್ನೊಂದು ಕೈ ಅದೇ ಜಾಗವನ್ನು ತಟ್ಟುತ್ತದೆ. ನೀವು ಎಲ್ಲ ಬಗೆಯ ಈ ಏರು, ಏಟುಗಳನ್ನು ಸಹಿಸಬೇಕು. ಸಹನೆಯಿಂದಲೇ ಸುಖ ತಾನಾಗಿ ಬರುವದು ಎಂದು ವೇದಾಂತಿಗಳಾದವರು ಅಂದು ಕೊಂಡಾರು. ತಲೆಗೆ ತಂಪು ಈ ರೀತಿಯಾಗಿ ಚೆನ್ನಾಗಿ ಇಳಿಯಿತೆಂದರೆ, ಸುಖದ ಒಂದೆರಡು ಹನಿ ಕಣ್ಣೀರು ತಾನಾಗಿ ಉದುರಬಹುದು.

ಮಾಲೀಸಿನ ಮುಖ್ಯ ಕಾರ್ಯವೆಂದರೆ ತಲೆ ತಿಕ್ಕು ವುದು. ಆದರೆ ಇದಕ್ಕೆ ಉಪಾಂಗಗಳೂ ಇವೆ. ತಲೆ ತಿಕ್ಕಿಯಾದ ಮೇಲೆ ನಿಮ್ಮ ಬೆನ್ನು, ರಟ್ಟೆ ಗಳನ್ನು ಆತನು ನೀವುತ್ತಾನೆ. ಆ ಕಾಲದಲ್ಲಿ ನಿಮ್ಮ ಬಟ್ಟೆ ಹೊಲಸಾಗಬಾರದೆಂದು ತನ್ನ ಅರಿವೆಯನ್ನು ಹಾಕುತ್ತಾನೆ. ಅವನ ಬಟ್ಟೆಯೆಂದರೆ ಖಮಟು ಕೊಬ್ಬರಿ ಎಣ್ಣೆಯಲ್ಲಿ ಎದ್ದಿ ತೆಗೆದಂತಿರುತ್ತದೆ! ಅಲ್ಲಿಂದ ಕುತ್ತಿಗೆಯ ನರಗಳನ್ನು ಸಮಗೊಳಿಸಲು ' ಗೋಣನ್ನು ಸಡಿಲು ಬಿಡಿರಿ ' ಎಂದು ಅವನು ಸೂಚಿಸಿದಷ್ಟೂ ನಿಮ್ಮ ಗೋಣು ಸೆಟೆದೇ ನಿಲ್ಲು- ವದು. ನರಗಳನ್ನು ನೀಯುವ ಕಾರ್ಯ ಹಾಗೇ ಮುಂದುವರಿಯುವದು. ಹಣೆಯ ಮಧ್ಯದ ಚರ್ಮವನ್ನು ಹಿಡಿದೆಳೆದು ಲಟ್ ಎನಿಸುವದು ಸ್ವಲ್ಪ ಕಷ್ಟದ ಕೆಲಸ. ಕೊನೆಯದಾಗಿ ನಿಮ್ಮ ಕಿವಿತುದಿಗಳನ್ನು ಹಿಡಿದೆಳೆದು ಜಗ್ಗುತ್ತಾನೆ. ಸಣ್ಣವರಿದ್ದಾಗ ಅಪ್ಪ ಅವ್ವನ ಕಡೆಯಿಂದ ಸಹಿತ ಕಿವಿ ಹಿಂಡಿಸಿಕೊಳ್ಳಲಿಕ್ಕೆ ಒಪ್ಪದ ನೀವು, ಅವು ಗಳನ್ನು ಬೇಕಾದ ಹಾಗೆ ಎಳೆದಾಡಲು, ಮಾಲೀಸ ವಾಲಾನ ಕೈಯಲ್ಲಿ ಕೊಡುತ್ತೀರಿ. ಅದಕ್ಕೂ ಕೊನೆಯದಾಗಿ, ತನ್ನ ಕೂದಲಿನಲ್ಲೇ ಮೊದಲು ಸಿಕ್ಕಿಸಿಕೊಂಡಿದ್ದ ಹಣಿಗೆಯನ್ನು ಹೊರತೆಗೆದು ಹಿಕ್ಕಿದನೆಂದರೆ ಅವನ ಕೆಲಸ ಮುಗಿಯಿತು.

ಮಾಲೀಸ ಇದರ ದರವು ನಾಲ್ಕಾಣೆಯಷ್ಟೆ. ನನಗೆ ಬಂದ ಅನುಭವನೆಂದರೆ ನಾಲ್ಕಾಣೆಗೆ ಸರಿ ಯಾದ ಮಾಲೀಸ ಎಂಬುದು ಆಗಿಯೇ ಇಲ್ಲ. ಮಾಲೀಸ ಎಂಬುದು ಅವರೇ ಹೇಳುವಂತೆ

'ಋತೀಕಾ ಕಾಮು'. 'ಚೆನ್ನಾಗಿ ಆಗಬೇಕು. ಕೂಡಲೇ ನಿದ್ದೆ ಬರಬೇಕು' ಎಂದು ನೀವೆಂದರೆ "ಡಬಲ್ ಮಾಲೀಸ ಮಾಡಿಸಿರಿ" ಎಂದು ಅವನನ್ನುತ್ತಾನೆ. ಇನ್ನೊಂದು ಐದು ಮಿನಿಟು ಹೆಚ್ಚಿಗೆ ತಿಕ್ಕುವುದಕ್ಕೆ, ಮತ್ತೆ ನಾಲ್ಕಾಣೆ ಕೊಡಲು ಮನಸ್ಸಾಗುವದಿಲ್ಲ. ಬೇಡವೆಂದಿರೊ, ಕಾಟು ಕಸರಿನಲ್ಲಿ ಮಾಡಿ ಮುಗಿಸಿಬಿಡುತ್ತಾನೆ.

ಮಾಲೀಸಿನ ಅಕ್ಕ ಚಂಪಿ! ಚಂಪಿಯ ದರ ಒಂದು ರೂಪಾಯಿ! ಸುಮಾರು ಮುಕ್ಕಾಲು ತಾಸಿನ ಸಮುಸ್ತ ದೇಹದ ಸೇವೆಯದು. ಮಾಲೀಸು ಮಾಡಲಿಕ್ಕೆ ಬಂದಾಗ, "ಚಂಪೀ ಮಾಡಬೇಕೇನು ಸಾಬ್" ಎಂದು ತಪ್ಪದೇ ಕೇಳುತ್ತಾರೆ. ಆದರೆ ಗುಜರಾತಿಗಳನ್ನು ಬಿಟ್ಟು ಇತರರು ಹೆಚ್ಚಾಗಿ ಮಾಡಿಸಿಕೊಳ್ಳುವದಿಲ್ಲ. ಒಂದೇ ಕಡೆಗೆ ಕೂತು ಕೂತು, ಗಂಟುಕಟ್ಟಿದಂತಾಗಿರುವ ಅವರಿಗೆ ದೇಹದಾದ್ಯಂತ ತಿಕ್ಕಿಸಿಕೊಳ್ಳುವುದು ಅನಿವಾರ್ಯ ವಾಗುತ್ತದೆ. ಅದರಲ್ಲಿಯೂ, ಅವರ ಜೊಂಡು ನೈ ಕೈ, ಡೊಳ್ಳು ಹೊಟ್ಟೆಗಳನ್ನು ನೀಯುವಾಗ ನೋಡುತ್ತಿದ್ದರೆ ಖಂಡಿತ ನಗೆ ಬರುವುದು. ಮಾಲೀಸ ಮಾಡಿಕೊಳ್ಳುವಾಗಲೂ ಹಾಗೆಯೇ. ಅವರ ಶಿರಶ್ಯೇಖರವು ಸ್ಕ್ರೂ ಇಲ್ಲದ ಗಾಲಿ ಯಂತೆ ತಿರುಗುತ್ತಿರುತ್ತದೆ.

ಮಾಲೀಸು ಮಾಡಿಕೊಳ್ಳುವಾಗಿನ ೧೫ ಮಿನಿಟು ಗಳ ಕಾಲ ಸುಮ್ಮನೆ ಇರಲಾರದೆ ನಾನು ಅವರನ್ನು ಮಾತನಾಡಿಸುವುದೂ ಉಂಟು. ಮುಂಬಯಿಯ ಜೀವನದ ಅನೇಕ ಸಂದರ್ಭಗಲ್ಲಿ ಕನ್ನಡದ ಸೊಲ್ಲು ಕೇಳಿ ಬರುವುದರಿಂದ ನಾನಾಗಿ ಮಾಲೀಸುವಾಲಾ ಗಳಿಗೆ ಕೇಳುತ್ತೇನೆ. "ನಿನಗೆ ಕನ್ನಡ ಬರು ವುದೇ?" ಎಂದು. "ಇಲ್ಲ" ಎಂದೇ ಇದುವರೆಗೆ ಉತ್ತರ ಬಂದಿದೆ. ಈ ಉದ್ಯಮವೊಂದಕ್ಕೆ ಕನ್ನ ಡಿಗರು ಕೈಹಾಕಿದಂತಿಲ್ಲ.

ತೋರಿಕೆಗೆ ಈ ಉದ್ಯಮವು ಲಾಭದಾಯಕ ವೆಂದೆನಿಸಬಹುದು. ಒಬ್ಬನಿಗೆ ೩ ತಾಸಿನ ಅವಧಿ ಯಲ್ಲಿ ೧೨ ಗಿರಾಕಿಗಳು ಸಿಕ್ಕರೆ, ೩ ರೂ. ಸಿಕ್ಕ ಹಾಗಾಯಿತು. ಆದರೆ ವಸ್ತುಸ್ಥಿತಿ ಹಾಗಿಲ್ಲ. ಸಿಂಧೀ ನಿರಾಶ್ರಿತರು ಇಲ್ಲಿಯೂ ಸೇರಿಕೊಂಡಿದ್ದಾ ರಂತೆ. ಮತ್ತೆ ಚಳಿಗಾಲ, ಮಳೆಗಾಲಗಳಲ್ಲಿ ಮಾಲೀಸು ಮಾಡಿಸಿಕೊಳ್ಳುವವರ ಸಂಖ್ಯೆಗೆ ಇಳಿಗಾಲವಿರುತ್ತದೆ.

ಅಂತೂ ಮಾಲೀಸು ಎಂಬುದು ಮುಂಬಯಿ ಗನ ಒಂದು ಚಟವಾಗಿದೆ. ಒಬ್ಬನ ಕಡೆಯಿಂದ ಮಾಲೀಸ ಮಾಡಿಕೊಂಡು, ಅವನ ಕೈಚಳಕವನ್ನು ಕಂಡಮೇಲೆ, ಮತ್ತೊಂದು ಬಾರಿಗೆ ಅವನೇ ಬೇಕು ಎನಿಸುತ್ತದೆ. ಆದ ಕಾರಣ, ಮುಂದಿನ ದಿನ ಮತ್ತು ಜಾಗ ಗೊತ್ತುಮಾಡುತ್ತೇವೆ. ಅವನು ಚೆನ್ನಾಗಿಯೆ ಸೇವೆ ಮಾಡುತ್ತಾನೆ. ನಮಗೆ ತೃಪ್ತಿಯೆನಿಸಿ, ಎರಡು ಮೆದುಮಾತುಗಳನ್ನಾಡಿ, ಎರಡು ಆಣೆ ಹೆಚ್ಚಿಗೆ ಕೊಡುತ್ತೇವೆ. ಅದಕ್ಕೆ ಅವನು "ನನಗೊಂದು ಸಿಪಾಯಿಯ ನೌಕರಿ ಕೊಡಿಸಿಬಿಡಿರಿ. ೨-೩ ಇಯತ್ತೆ ಇಂಗ್ಲಿಷ ಕೂಡಾ ಬರುತ್ತದೆ" ಎನ್ನುತ್ತಾನೆ. ದೊಡ್ಡ ಕಚೇರಿಯಲ್ಲಿ ದೊಡ್ಡ ನೌಕರಿ ಮಾಡುವ, ಇಲ್ಲವೆ ಉದ್ಯೋಗ ದಲ್ಲಿ ತೊಡಗಿರುವ ನಮಗೆ ಇದು ಅಸಾಧ್ಯವಾದು- ದೇನಲ್ಲ ಎಂದು ಅವನ ಎಣಿಕೆ. ಅವನ ವಿಶ್ವಾಸದ ಮೇಲೆ ತಣ್ಣೀರೆರಚಲು ನಮಗೆ ಮನಸ್ಸಾಗುವ ದಿಲ್ಲ 'ಹೂಂ' ಎನ್ನುತ್ತೇವೆ. ನಮಗೆ ನೌಕರಿ ಅಥವಾ ಉದ್ಯೋಗವೊಂದು ಸಿಕ್ಕಿರುವುದೇ ಒಂದು ಭಗೀರಥ ಯತ್ನವಾಗಿರುತ್ತದೆ. ಅಂದ ಮೇಲೆ...... ಅಂತೂ ಇನ್ನೊಂದು ಬಾರಿ ಮಾಲೀಸು ಮಾಡಿಕೊಳ್ಳುವಾಗ ಆ ದಿನಕ್ಕೆ ಹೋದರೂ ಆ ಜಾಗಕ್ಕೆ ಹೋಗುವುದಿಲ್ಲ. ಇದೂ ಒಂದು ಜೀವನದ ಧರ್ಮ.

ಮುಂಬಯಿಯ ಉದ್ಯಾನ ಸಂಭ್ರಮವನ್ನು ಹೇಳಹೊರಟು, ಇಲ್ಲಿಯ ಬದುಕಿನ ಬಗೆಗೆ ಬಂದು ಮುಟ್ಟಿದಂತಾಯಿತು. ಈ ಅಂತಸ್ಥ ನೋವು ನಲಿವು ಯಾಕೆ? ಸಾಮಾನ್ಯ ಮುಂಬಯಿ ಗನು ಉದ್ಯಾನಕ್ಕೆ ಬಂದು ಹಾಯಾಗಿ ಕುಳಿತು, ಸ್ವಚ್ಛ ಹವೆಯನ್ನು ಸೇವಿಸಿ, ಬೇಕೆನಿಸಿದರೆ ಅತ್ತ ಇತ್ತ ಅಷ್ಟು, ಕಣ್ಣು ಹೊರಳಿಸಿ, ಮನೆಗೆ ಹೋದ ರಾಯಿತು. ಅಲ್ಲವೆ?



"ಅಭ್ಬಾ! ಇದು ಒಂದು ಆಟಿಗೆಯೇ!"

Please Contact . . . .

FOR ALL TYPES OF
Reinforced Concrete Structures
and Asphalt Roads
Consult

K. D. KAMAT,

ENGINEERS & CONTRACTORS
Specialists In R. C. C. Works and
Asphalts Roads

**We wish a Happy & Prosperous
Dipavali to all our Friends.**

H. O. 28?, Krana Bldgs.
New Shahupuri,
KOLHAPUR

Branch Office :
Hosur – HUBLI

ರಾಧಾಕೃಷ್ಣ ಕಾಫಿ ವರ್ಕ್ಸ್

ಅಶೋಕ ರಸ್ತೆ, ದಾವಣಗೇರಿ



ಘಮಘಮಿಸುವ ಉತ್ಕೃಷ್ಟಕರವಾದ
ನಮ್ಮ "ರಾಧಾಕೃಷ್ಣ" ಕಾಫಿ ಪುಡಿಯನ್ನೇ
ಉಪಯೋಗಿಸಿರಿ.

ಪ್ರೊಪ್ರೈಟರ್ಸ :
ವೈ. ರಾಧಾಕೃಷ್ಣ ಶೆಟ್ಟಿ & ಬ್ರದರ್ಸ

ಹನ್ನಿಕೇರಿ ಬಂಧುಗಳು

ಧಾರವಾಡರೋಡ, ಹುಬ್ಬಳ್ಳಿ

ನಮ್ಮಲ್ಲಿ ಎಲ್ಲತರದ ಮೋಟಾರು
ಮತ್ತು ಡಿಝೆಲ ಎಂಜಿನಗಳ
ರಿಪೇರಿ, ವೆಲ್ಡಿಂಗ್, ಮೋಲ್ಡಿಗ್
ಕೆಲಸ ಮಾಡಿಕೊಡುತ್ತೇವೆ.



ಇಪ್ಪತ್ತು ವರುಷ ಅನುಭವವುಳ್ಳ ನಮಗೆ ಕೆಲಸಕೊಟ್ಟು ಒನ್ಮೆ ಪರೀಕ್ಷಿಸಿರಿ

ನಮ್ಮ ಗ್ರಾಹಕರಿಗೆಲ್ಲ ದೀಪಾವಳಿಯು ಸುಖಪ್ರದವಾಗಲಿ

ದೀಪಾವಳಿಯು ಹಾಗೂ ನೂತನ ವರ್ಷವು ಸರ್ವರಿಗೂ ಸುಖದಾಯಕವಾಗಲಿ

ಸಾಂಬ್ರಾಣಿ ಫುಟ್‌ವೇರಮಾರ್ಟ ಧಾರವಾಡ

ಶಾಖೆ: ಕೊಪ್ಪಿಕರರೋಡ, ಹುಬ್ಬಳ್ಳಿ.

ನಮ್ಮಲ್ಲಿ ಆಧುನಿಕ ಯಂತ್ರೋಪಕರಣಗಳಲ್ಲಿ
ನುರಿತ ಕೆಲಸಗಾರರಿಂದ ತಯಾರಿಸಿದ
ಜನಮೆಚ್ಚುಗೆ ಪಡೆದ ಚಪ್ಪಲು,
ಸ್ಯಾಂಡಲ್ಸ ಬೂಟ, ಸ್ಲೀಪರ
ಇತ್ಯಾದಿ ದೊರೆಯುತ್ತವೆ.



Sambrani
FOOT WEAR

ಟಿ.ಸಿ.ನವಲೆ

ಟೇಲರಿಂಗ ಫರ್ಮ

ನ್ಯೂ ಜವಳಿ ಬಝಾರ,
ಹುಬ್ಬಳ್ಳಿ

★

ಶರ್ಟ ಹಾಗೂ
ಕೋಟ್ಸ
ಸ್ಪೆಶಾಲಿಸ್ಟರು.

★

ಒನ್ಮೆ ಆರ್ಡರು ಕೊಟ್ಟು ಅನುಭವ
ಪಡೆಯಿರಿ

ನಮ್ಮ ಗ್ರಾಹಕರಿಗೆಲ್ಲಾ ದೀಪಾವಳಿಯು
ಸುಖಪ್ರದವಾಗಲಿ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಪ್ರೆಸ್ಸಿನಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರು ಮುದ್ರಿಸಿ ಪ್ರಕಟಿಸಿದರು.

Regd. No. B. 3148 | Licence No. 3 Licenced to Post without Prepayment | Karmaveer 15-11-5

ಬೆಲೆ ರೂ. ೧